MICROFILMED BY
NEHRU MEMORIAL MUSEUM AND LIBRARY
TEEN MURTI HOUSE
NEW DELHI

SWADESHABHIMANI
KANNADA WEEKLY
PUBLISHED FROM
MANGALORE

ROLL No. 3

CONTD
FROM 1914

PKG
17.3.80

Registered No. 498 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ 1—4—0. ಟಪ್ಪಾಲು ಹಾಸಲು ಸೇರಿ ರೂ 2—1—0.

ಪುಸ್ತಕ VIII ಮಂಗಳೂರು ತಾ॥ [illegible]ನೇ ಶುಕ್ರವಾರ ಮೇ 1911 ಸಂಚಿಕೆ [illegible]

ಆಬಾಲವೃದ್ಧರು ಓದುವುದಕ್ಕೆ ತಕ್ಕವಾಗಿಯೂ ಬಹು ಮನೋಹರಗಳಾಗಿಯೂ ಇರುವ ಕನ್ನಡ ಗ್ರಂಥಗಳು

(ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ॥ ರಾ॥ ಬಿ. ರಾಮರಾವ್ ಎಂ. ಎ. ಎಲ್. ಎಲ್. ಬಿ ಯವರಿಂದ ಕನ್ನಡಿಸಲ್ಪಟ್ಟವು)

೧. ಸತ್ಯರಾಜಾ ಪೂರ್ವದೇಶ ಯಾತ್ರೆಗಳು—ಭಾಗ ೧— ಶ್ರೀಮತಿ [illegible] ಬಹದ್ದೂರ್ ವೀರೇಶ ಲಿಂಗಂಪಂತಲುಂ ಆಂಧ್ರ ಲೇಖಕ ಶಿರೋಮಣಿಗಳಿಂದ ತೆಲುಗಿನಲ್ಲಿ ಬರೆಯಲ್ಪಟ್ಟ [illegible] ಚಮತ್ಕಾರ ಕಲ್ಪನಾ [illegible] ಉಚಿತವೂ ಆದ ಕನ್ನಡದಲ್ಲಿ ಪರಿವರ್ತಿತವಾಗಿದೆ. ಮೈಸೂರು ಗವರ್ನಮೆಂಟಿನವರಿಂದಲೂ ಕರ್ನಾಟಕ ಮಹಾಜನರುಗಳಿಂದಲೂ ವಿಶೇಷವಾದ ಪ್ರೋತ್ಸಾಹವನ್ನು ಹೊಂದಿದೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ ಬೆಲೆ ೮ ಆಣೆ

೨. ಕೃಷ್ಣಾಕುಮಾರಿ—ಈ [illegible] ನಾಟಕವು ಮೂಲ ಬಂಗಾಳಾ ಭಾಷೆಯಲ್ಲಿ ಕವಿಶ್ರೇಷ್ಠ ಮಧುಸೂದನ ದತ್ತರಿಂದ [illegible] ಯಲ್ಪಟ್ಟು ನೂತನವಾಗಿ ಕನ್ನಡಿಸಲ್ಪಟ್ಟಿದೆ ಆರ್ಯ ಕುಲಾಂಗನೆಯರಿಗೆ ಆದರ್ಶ ಸ್ವರೂಪಳಾದ ಈ ರಜಪೂತ ಕುಮಾರಿಯ ಜಾಜ್ವಲ್ಯವಾದ ಸ್ವದೇಶ ಭಕ್ತಿಯು ವಾಚಕರನ್ನು ಕ್ಷಣಮಾತ್ರದಲ್ಲಿ ತಲ್ಲೀನರನ್ನಾಗಿ ಮಾಡುತ್ತಿದೆ. ಇಂಥ ಉತ್ಕೃಷ್ಟವಾದ ನಾಟಕವು ಕನ್ನಡದಲ್ಲಿ ಬೇರೊಂದು ಇರುವುದು ಸಂದೇಹವು ಉತ್ತಮವಾದ "ಗ್ಲೇಜ್" ಕಾಗದದಲ್ಲಿ ಸ್ಪಷ್ಟಾಕ್ಷರಗಳಿಂದ ಅಚ್ಚಾಗಿದೆ ಬೆಲೆ ೧೦ ಆಣೆ.

೩. ಸದಾಚಾರ ವಿವೇಚನೆ—[illegible] ಪರಮ ಪೂಜ್ಯರೂ ಆದ ಬ್ರಹ್ಮೀಭೂತ ಶ್ರೀಮದ್ವಿವೇಕಾನಂದ ಸ್ವಾಮಿಯವರ "ಪೂರ್ವ ಮತ್ತು ಪಶ್ಚಿಮ"ವೆಂಬ ದಿವ್ಯವಾದ ಲೇಖನದಿಂದ ಆಹಾರ ವಿಷಯಕವಾದ ಭಾಗಗಳನ್ನು ಮಾತ್ರ ಸಂಗ್ರಹಿಸಿ ಕನ್ನಡಿಸಲಾದ ಈ ಚಿಕ್ಕ ಪುಸ್ತಕದೊಳಗೆ ಅಂತರ್ಗತವಾದ ದಿವ್ಯಾಭಿಪ್ರಾಯಗಳನ್ನು ಆರ್ಯಧರ್ಮಾಭಿಮಾನಿಗಳಾದ ಸಮಸ್ತರೂ ಅಗತ್ಯವಾಗಿ ತಿಳಿದುಕೊಳ್ಳಬೇಕೆಂದು ಸೂಚಿಸ[illegible] ಬೆಲೆ ೨ ಆಣೆ

ಈಗಲೇ ಅಚ್ಚಾದುದು ಕೆಲವೇ ಪ್ರತಿಗಳಿವೆ	ಕನ್ನಡ ಸಂಗೀತ ನಾಟಕ **ಚಂದ್ರಹಾಸಾಭ್ಯುದಯ.**	ಬೆಲೆ ನಾಲ್ಕಾಣೆ ಮಾತ್ರ ವಿ ಪಿ ಚಾರ್ಜು ಬೇರೆ

ಅತೀ ಮನೋಹರವಾದ ಮುದ್ರಣ! ಮನೋರಂಜಕವಾದ ಗದ್ಯಪದ್ಯ!! ಅನೇಕ ವಿದ್ವಾಂಸರಿಂದಲೂ ನಾಟಕಕಂಪೆನಿಯವರಿಂದಲೂ ಅದ್ಭುತವಾಗಿ [illegible]!! ಸರ್ವಾಂಗಸುಂದರವಾದ ಈ ಸಂಪೂರ್ಣ ನೂತನ ಕೃತಿಯ ಪ್ರಥಮ ಮುದ್ರಣವು ಈಗತಾನೆ ಪ್ರಕಟಿಸಲ್ಪಟ್ಟು, ಮೊದಲೇ ರಿಜಿಸ್ಟರಾದ ಆರ್ಡರುಗಳನ್ನು ತೀರಿಸಿದ ನಂತರ ಈಗ ಕೆಲವೇ ಪ್ರತಿಗಳು ಉಳಿದಿವೆ ಸಂಗೀತಪ್ರಿಯರಿಂದಲೂ ನಾಟಕಕಲಾವಿಶಾರದರಿಂದಲೂ ಸಂಗ್ರಹಿಸಲು ಯೋಗ್ಯವಾದುದು, ಗ್ರಾಹಕರು ತ್ವರೆಮಾಡಿ!

ನಿತ್ಯ ಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯೋಗವಾದ ಕನ್ನಡ ಲಿಪಿಯ ಪುಸ್ತಕಗಳು

ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನ 0—3—0 ದೇವಪೂಜಾ ಪದ್ಧತಿ 0—3—0, ಋಗ್ವೇದಿ ಬ್ರಹ್ಮಯಜ್ಞವೈಶ್ವದೇವ 0—3—0, ವಾಯುಸ್ತುತಿ 0—2—0, ದ್ವಾದಶಸ್ತೋತ್ರ 0—2—0, ವಿಷ್ಣುಸಹಸ್ರನಾಮಸ್ತೋತ್ರ 0—2—0, ಪ್ರಾತರಾಹ್ನಿಕ ಪದ್ಧತಿ 0—3—0, ಶ್ರೀಸೂಕ್ತ ಪುರುಷಸೂಕ್ತ 0—1—0, ಗೋಪಿಕಾಗೀತ 0—1—0, ಪುರಂದರ ದಾಸರ ಕೀರ್ತನೆಗಳು 0—6—0, ಉದಯ ರಾಗ 0—4—0, ಲಕ್ಷ್ಮೀ ಶೋಭಾನೆ ಹಾಡು 0—2—0, ಹರಿಭಕ್ತಿಸಾರ 0—1—0, ಸ್ವಪ್ನ [illegible] 0—1—0, [illegible] ಸಂಕೀರ್ತನೆಗಳು 0—2—0, [illegible] 0—8—0, ಈಗ 0—6—0, ಮಹಾರಾಣಿ ಗೃಹಶೀಲೆ 0—3—0, ವೇಶ್ಯನಾರಾಯಣದಾಸ್ 0—3—0, ಬಾಲಿಕಾನೀತಿಮಾಲಿಕೆ 0—2—0, ರಾಜಭಕ್ತಿಸಾರ 0—2—0.

ಶಿಖಿ ಕಾಲದ ರಜೆಯು ತೀರಿ ಶಾಲೆಗಳು ಇನ್ನು ಬೇಗನೆ ತೆರಿಯೋಣಾಗುತ್ತಲಿವೆ.

ವಿದ್ಯಾರ್ಥಿಗಳೆಲ್ಲವರಿಗೆ ಅನುಕೂಲವಾದ ದರದ ಫೌಂಟನ್ ಪೇನುಗಳು ಈಗಲೇ ಬಂದಿವೆ. ಕ್ರಯ-1ಕ್ಕೆ ರೂ. 1—14—0ರಿಂದ ರೂ. 7—14—0ರ ವರೆಗಿರುವುದು. ನೆಪ್ಚೂನ್, ಬ್ಲೆಕ್‌ಬರ್ಡ್, ಅಲೆಕ್ಸಾಂಡ್ರಾ, ವೊಟರ್‌ಮೇನ್, ಸ್ವಾನ್, ಈ ಎಲ್ಲಾ ಜಾತಿ ಪೇನುಗಳಿರುವವು.

ವಿಳಾಸ—

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನಿನ ಶಾರದಾ ಛಾಪಖಾನ, ಮಂಗಳೂರು.

ಪ್ರಕಟನೆ.

ಮಂಗಳೂರು ತೇರಬೀದಿಯಲ್ಲಿರುವ ಕೆ. ಯಮ್. ದಾಸಪ್ರಭುಗಳ ಬುಕ್ ಶಾಪಿನಲ್ಲಿ ಅಥವಾ ಗ್ರಂಥಕರ್ತರಿಂದ ಶೀದಾ ಕ್ರಯಕ್ಕೆ ದೊರೆಯುವ ಪುಸ್ತಕಗಳು.

ವಕೀಲ ಹಳಿಗೇರಿ ಕೃಷ್ಣರಾಯರಿಂದ ರಚಿಸಲ್ಪಟ್ಟವುಗಳು.

ಪ್ರತಿ ೧ಕ್ಕೆ ಟಪ್ಪಾಲ್ ಹಾಸಲು ವಿನಹ ಕ್ರಯ

(೧) ಅಧ್ಯಾತ್ಮವಿಚಾರ, ಪ್ರತ್ಯಗಾತ್ಮನ ಚಿತ್ರ ಸಮೇತ .. ರೂ. ೨—೪—೦

(೨) ಆ ಗ್ರಂಥ (ಅಧ್ಯಾತ್ಮವಿಚಾರ)ದ ಕುರಿತು ವಾಧ್ವರು ಹೇಳುವ ಆಕ್ಷೇಪಣೆಗಳಿಗೆ ಉತ್ತರ ಇದರಲ್ಲಿ ಪ್ರಸಂಗಶಃ ಶ್ರೀಮದ್ಭಗವದ್ಗೀತೆ ಮೊದಲಾದ ಸ್ವದೇಶೀಯ ದೇಶೀಯ ಗ್ರಂಥಗಳ ಆಧಾರದ ಮೇಲೆ ಮಧ್ವಮತವು ಸ್ವವಿರುದ್ಧವಾದದ್ದೆಂದು ವಗೈರೆ ತೋರಿಸೋಣಾಗಿರುತ್ತದೆ ಕ್ರಯ ಆಣೆ ೦—೨—೦

(೩) ಸ್ವಾಯಂಭುವ ಮನುವಂಶಾವಳಿ (ದೇವನಾಗರೀ ಅಕ್ಷರ) ಕನ್ನಡ ಉಪೋದ್ಘಾತ ಸಮೇತ ಕ್ರಯ ರೂಪಾಯಿ ೧—೦—೦

ಈ ಪೈಕಿ ೧ನೇ ೩ನೇಯವುಗಳು ವೆಲ್ಯುಪೆಯೆಬಲ್ ಪೋಸ್ಟದ್ವಾರಾ ಕಳುಹಿಸೋಣಾಗಬಹುದು.

೨ನೇದರ ಬಗ್ಗೆ, ಅದನ್ನು ಕೊಂಡುಕೊಳ್ಳುವವರು ೨|| ಆಣೆಯ ಟಪ್ಪಾಲುಚೀಟುಗಳನ್ನು ಮುಂದಾಗಿ ಕಳುಹಿಸಬೇಕಾಗುವದು

ಮಂಗಳೂರು ಟೌನ್‌ನಲ್ಲಿ ಕೊಂಡುಕೊಳ್ಳುವವರು ಹಾಸಲು ಕೊಡಬೇಕಾದದ್ದಿಲ್ಲ.

H. Krishna Rao.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್. ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್. ಎ ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟು ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0—8—0.

ವಿಳಾಸ:—

ಕೆನರಾ ಹೈಸ್ಕೂಲು ಕನ್ನಡ ಪಂಡಿತ

ಎಮ್. ತಿಮ್ಮಪ್ಪಯ್ಯ,

ಮಂಗಳೂರ.

ನರೆ ಕೂದಲನ್ನಿಟ್ಟುಕೊಂಡು

ಮುದುಕರಾಗಿ ಕಾಣುವದೇಕೆ?

☞ ದರ್ಬಾರ್ ಕೂದಲು ರಂಗು.

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯ ಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳ ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದ ಮೇಲೆ ಕೂದಲು ಕೆಂಚಾಗಿ ಅಸಂಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷ ಪಡುವಿರಿ.

ಕ್ರಯ ಬುರುಸು ಸಮೇತ ಬಾಟ್ಲಿ 1ಕ್ಕೆ ರೂ. 1.

ಅಂಚೆ ಹಾಸಲು ಆಣೆ 0—4—0.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ,

ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

V A. S. PANI,

No. 3, Erulappen Street, Madras.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!!

ಹನೂಮತ್ಪರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ; ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0. ಗ್ರಾಹಕರುತ್ತರೆವಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,

ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ ವಿದ್ಯಾರ್ಥಿಗಳಲ್ಲಿ ಮಾತಾಪಿತೃಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ. ಮಂಗಳೂರು.

ಮಾ। ಪಾವಂಜೆ ಗುರುರಾವ್, ಪಾವಂಜೆ ಗೋಪಾಲಕೃಷ್ಣ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೊಒಪರೇಟಿವ್

ಫಿ

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಅಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ ಒಂದು ಕೋಟಿ. ಪ್ರತಿಜ್ಞಾತ ಮೂಲಧನ—ರೂ. 870,000,00. ಆಗತ ಮೂಲಧನ—ರೂ. 10,00,000. ಉತ್ತರಿಸೋಣಾದ ವಿಮೆ—ರೂ 2,22,00,000. ಭಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ್.

ಸೊಸೈಟಿಯ ಏಜಂಟ್,

ತ್ರಿಮಲ್ಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,

ಮಂಗಳೂರು.



ಎಲಂಬಿಕ್ ವೆಜಿಟೆಬಲ್ ಟೊನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿಸಿ ಮಾಡಿದ್ದು ಪಿತ್ಥಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು ರಕ್ತ ಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು ಸಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು ಬಾಟ್ಲೆ 1ರ ಕ್ರಯ ರೂ. 1-2 0 ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್ ಒಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ ಬೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡಸ ಸಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ ಸೇವನೆಗೆ ಬಹಳ ಯುಕ್ತವಾಗಿರುವುದು ನೀರಕ್ತತೆಯನ್ನು ಗುಣಪಡಿಸುತ್ತದೆ ಕೂತಲ್ಲಿಯೇ ಇದ್ದು ಕೆಲಸ ವೃತ್ತಿ ನಡಿಸುವವರ್ರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲೆ ಒಂದರ ಕ್ರಯ ರೂ 1—6—0

ಅನೊಡ್ಯಾನ್. ಹೊರಗೆ ಹಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾಗಿದ್ದು ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು —ಶೀತ, ಬೇದಿ, ಹೊಟ್ಟೆನೋವು, ಕಲರಾ ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ನುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು

ಬಾಟ್ಲೆ ಒಂದರ ಕ್ರಯ 7 ಆಣೆ, ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಆಂಡ್ ಕೊ. **S. VAIDYA & Co.,**
ಪಾರ್ಕ್ ಟೌನು, ಮದ್ರಾಸು. *Park Town, Madras.*

"ಅಯೊನಿಕ್ ಫಾರ್ಮಸಿ"

ಈ ಔಷಧ ಪರೀಕ್ಷಣಾ ಗೃಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯೂಷನ್. ಎಂಬ ಜ್ವರನಿವಾರಣೆಯ ರಸಾಯನ. (2). ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂದುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ

(3) ಬ್ಲಡ್ ಪ್ಯೂರಿಫ್ಯಾಯಿಂಗ್ ಸೊಲ್ಯೂಷನ್ ಎಂಬುವ ರಕ್ತಶುದ್ಧಿಯ ರಸಾಯನವು ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುವು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ಥಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲೆ ಒಂದಕ್ಕೆ ರೂ. 1.

ಅಯೊನಿಕ್ ಫಾರ್ಮಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲ್ಲಿ ಈ ಕೆಳಗಿನ ವಿಳಾಸದವರಲ್ಲಿ ದೊರೆಯುತ್ತವೆ.

S. VAIDYA & Co., **ಎಸ್. ವೈದ್ಯಾ ಆಂಡ್ ಕೊ.**
Park Town, Madras. ಪಾರ್ಕ್ ಟೌನ್ ಮದ್ರಾಸು

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಣ್ಣೆಯ ಅಂಶವು ಶರೀರಕ್ಕೆ ಕ್ರಮವಾಗಿ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಆದ್ದ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಕೊಲಸಾಗಿಯೂ ಶಕ್ತಿಶವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾವುವು ಹೇನವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ವಾದ ಪ್ಲೋಟರ್ ಬಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿಸ್ಪ ಇದಕ್ಕೆ ಅದು [illegible] ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರ [illegible] ಶ್ವಾಸಕೋಶ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆ ಮತ್ತು ಸೇವಿಸು [illegible] ಅಂತಹ ಶ್ವಾಸಕೋಶ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯೂ [illegible] ಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾದ [illegible] ಕೊಡಲೀವರ್ ಮಿಶ್ರಣವನ್ನೆ ಕೇಳಕೊಳ್ಳಿರಿ ಈ ಮಿಶ್ರಣವು ಸುರಸವಾಗಿರುತ್ತದೆ [illegible] ಕಡೆಗಳಲಿ ದೊರಲ್ಲುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ [illegible] ತರಿಸಿಕೊಳ್ಳಬಹುದು. ಬಾಟ್ಲ 1ಕ್ಕೆ 3—4—0. ಅರ್ಧ ಬಾಟಿಗೆ 1—12—0.

ದಿ. ಊಲನ್ ಮಾರ್ಟ್ ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಪರಮಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

ಅಗ! ಅಗ!! [illegible] ಕುಟುಂಬ ಜೀವನಿ !! ಧರ್ಮ! ಧರ್ಮ!!

[illegible] ಭಾರತೀಯ ಸುಹೃನಿಯರೇ!

[illegible] ಅತಿ ಅಲ್ಪ ರೂ. 8 ಕ್ರಯದ 16 ಔಷಧಗಳ ಸಂಗ್ರಹದ "ಕ[illegible] ಪೆಟ್ಟಿ"ಯನ್ನು ತರಿಸಲು ಮರೆಯಬೇಡಿರಿ. ಪ್ರತಿ ಕುಟುಂಬ [illegible]

[illegible] ಬಂದು ಸಕ್ಕರೆಯಂ ನೆಕ್ಕಿದಂತೆ |
[illegible] ಒಕ್ಕಲಿಗ ರೊಕ್ಕವೆಲ್ಲ ಮುಕ್ಕಿ ಪೋದರ್ || ಎಂಬಂತೆ

[illegible] ಪೆಸ್ತಿಕ [illegible] ನೋಡಿದರೂ ತುಂಬ [illegible] ಅಗಿಸವರು ರಕ್ಷಿಸಿಂದಲೇ ಸುಲಿಗೆಯಾದರು.

[illegible] ಅಮೂಲ್ಯವಾದ ಮಾಣಿಕ್ಯವಾ [illegible] ನಮ್ಮನ್ನು ಆಶ್ರಯಿಸಿರಿ! ಪರೀಕ್ಷಿಸಿನೋಡಿರಿ!!

[illegible] ಎಲ್ಲಾ ರೋಗಗಳನ್ನು ಗೆಲ್ಲುವ ವಿಶೇಷ ಪಥ್ಯವಿಲ್ಲದ [illegible] ಸಿದ್ಧಕಲ್ಪ ಪ್ರಯೋಗಗಳಿಂದಲೂ [illegible] ತೈಲ ಘೃತಗಳೂ, ಆಸವಾರಿಷ್ಟಗಳೂ, [illegible] ಧರ್ಮಾರ್ಥ ಇತರರಿಗೆ ಅಲ್ಪ ಕ್ರಯದಲ್ಲಿ ಸಿಕ್ಕುವವು. [illegible] ನಮ್ಮ [illegible]ಗಳನ್ನು ತರಿಸಿಕೊಳ್ಳಿರಿ, ಕ್ರಯವಿಲ್ಲ, ಬೇಕಾದವರಿಗೆ ಕಳುಹಿಸುವೆವು [illegible] 10 [illegible] ಮೇಲೆ ಕೇಳಿದಾ ರೂ 10ಡಿಸ್ಕೌಂಟು ಸಿಕ್ಕುವದು. ತರಿಸಿಕೊಳ್ಳಿರಿ. [illegible]

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

S. U. N. & CO.,

BENARES CITY, U. P

ದೊಡ್ಡ ಕಂಪೆನಿ' ಸೊಗಸಾದ ಸರಕುಗಳು"

ಈ ನಮ್ಮ ಕಂಪೆನಿಯು [illegible] ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ನಮ್ಮ ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

ದಿ ಯುನಿವೆರ್ಸಲ್ ಎಶ್ಯೂರೆನ್ಸ ಕಂಪೆನಿ ಲಿಮಿಟೆಡ್,

ಹೆಡ್ ಆಫೀಸು—191, ಬೌ ಬಜಾರ್, ಕಲ್ಕತ್ತ.

ಸಬ್ ಏಜಂಟರಿಗೆ ಮತ್ತು ಕೆ. ಎಸ್. ರಾವ್ ಬ್ರದರ್ಸ್, ಮಂಗಳೂರು ಇವರ ಮೂಲಕ ಸೇರಿದ ಮೆಂಬರರಿಗೆ—

ನೋಟೀಸು.

ಕೆ. ಎಸ್. ರಾವ್ ಬ್ರದರ್ಸ್ ಮಂಗಳೂರು ಇವರ ಏಜನ್ಸಿಯನ್ನು ರದ್ದು ಮಾಡಿ, ಕಂಪೆನಿಯ ಚೀಫ್ ಏಜಂಟರಾಗಿರುವ ಮೆಸ್ಸರ್ಸ್ ಲಕ್ಷ್ಮಣ ರಾವ್ ಬ್ರದರ್ಸರವರಿಗೆ ಅವರ ಚಾರ್ಜನ್ನು ಕೊಟ್ಟಿರುತ್ತದೆಂಬ ವಿಷಯವನ್ನು ಮೇಲೆ ಕಾಣಿಸಿದ ಮೆಂಬರರ ಲಕ್ಷ್ಯಕ್ಕೆ ಈ ಮೂಲಕ ತರೋಣಾಗಿಯದೆ. ಮೇಲೆ ಹೇಳಿದ ಸದರಿ ಮೆಂಬರರು ತಮ್ಮ ವಂತಿಗೆಯನ್ನು ಸೀದಾ ಉಪ್ಪಿ ಆಫೀಸಿಗೆ ಯಾ ಮೆಸ್ಸರ್ಸ್ ಜೋಸೆಫ್ ಬ್ರದರ್ಸ್, ಕಪ್ಪಣಿ, ಮಂಗಳೂರು—ಇವರಿಗೆ ನಾವತಿ ಮಾಡಬೇಕೆಂಬದಾಗಿ ವಿಜ್ಞಾಪಿಸುತ್ತೇವೆ.

ಮೇಲಿನ ವಿಷಯದಿಂದ ಮೆಂಬರರು ಕಲವರಿಕೆ ಪಡಲು ಯಾ ಯಾವದೊಂದು ಅವಶ್ಯ ಕಪಸಗಲು ಎನ್ನರೆ ಬಿಗಲು ಪಡಲು ಕಾರಣವಿಲ್ಲವೆಂಬದನ್ನೂ ಈ ಮೂಲಕ ಮೆಂಬರರ ಚಿತ್ತಕ್ಕೆ ತರೋಣಾಗಿ ಅಂಥಾದಕ್ಕೆ ಗಮನ ಕೊಡಬಾರದೆಂತ ವಿಜ್ಞಾಪಿಸೋಣಾಗಿಯದೆ.

ಜೆ. ಸರ್ಕಾರ್,
ಸೆಕ್ರಿಟರಿ.

ವಿದ್ಯಾಸಾಗರ ಬುಕ್ ಡಿಪ್ಪೋ, ಬೆಂಗಳೂರು ಸಿಟಿ.

ನಮ್ಮಲ್ಲಿ ಸರ್ಕಾರ, ಸ್ಕೂಲ್ ಪುಸ್ತಕ ಸಂಸ್ಕೃತ, ಕನ್ನಡ, ತೆಲುಗು, ಭಾಷೆಗಳಲ್ಲಿ ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ ಮತ್ತು ಉತ್ತಮ ಕಾದಂಬರಿಗಳೂ ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರಿಯುತ್ತವೆ.

ಕೆಲವು ಅಪೂರ್ವ ಪುಸ್ತಕಗಳು.

ಸಹಾಯವಿಲ್ಲದೆ ಇಂಗ್ಲಿಷು ಕಲಿಯುವ ಪುಸ್ತಕ ೫ ಭಾಗವುಳ್ಳದ್ದು ದೊಡ್ಡ ಪುಸ್ತಕ. ಬೆಲೆ ೧—೮—೦

ಚಂದ್ರಕಾಂತ ಕಲಾನಾಥ ಮುಂತಾದ ಉತ್ತಮ ಕಾದಂಬರಿಗಳು ನಮ್ಮಲ್ಲಿ ದೊರಿಯುತ್ತವೆ.

ಕನಕಕಾಲುತಾ ಅಥವಾ ಕಮಲಿನೀ ಚರಿತಂ	೦—೬—೦
ದಿವಾನ್ ರಂಗಾಚಾರ್ಯರ ಜೀವನ ಚರಿತ್ರೆ	೦—೬—೦
ದಿವಾನ್ ಶೇಷಾದ್ರಿಯ್ಯರವರ ಜೀವನ ಚರಿತ್ರೆ ಇಂಗ್ಲಿಷ್	೦—೬—೦
ಜಪಸರುಸ್ಪತ ಸಿತಿಗೆ ಮೂಲಾಧಾರ	೧—೪—೦
ಆರ್ಯ ಕೀರ್ತಿ	೦—೧೦—೦
ವೈದ್ಯಸಾರ ಸಂಗ್ರಹ	೩—೦—೦

ಇದು ಇಂಡಿಯ ದೇಶದಲ್ಲೆಲ್ಲಾ ದೊಡ್ಡ ವೈದ್ಯ ಗ್ರಂಥಗಳು ಘನ ಪಂಡಿತರಿಂದ ಪರಿಶೋಧಿಸಲ್ಪಟ್ಟದ್ದು

ಹನುಮದ್ವಿಲಾಸ	೦—೮—೦
ಋಗ್ವೇದ ನಿತ್ಯಕರ್ಮ	೦—೪—೦

ಶೋಭನೆ, ನರಬಲಿ, ಯಾಮಿನಿ ಈ ಪುಸ್ತಕಗಳನ್ನು ಒಂದು ಸರ್ತಿ ಓದಿದರೆ ಯಾವಾಗಲೂ ಓದುತ್ತಿರಬೇಕೆಂದು ಇಷ್ಟವಾಗುತದೆ.

ವಿಳಾಸ:— ಬಿ. ನರಸಿಂಹ ಅಯ್ಯಂಗಾರ್,
ಮೆನೇಜರ್ ವಿದ್ಯಾಸಾಗರ ಬುಕ್ ಡಿಪೋ.
ಚಿಕ್ಕಪೇಟೆ ಬೆಂಗಳೂರು ಸಿಟಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 29ನೇ ಮೇ 1914

ಕ್ಷೇಮರಕ್ಷಣೆಯ ಸಾಧನೆಯು

ಈ ತಿಂಗಳ ತಾ ೨೩ರಲ್ಲಿ ಇಂಡಿಯಾ ಸರಕಾರದವರು ಭಾರತೀಯ ಪ್ರಜೆಗಳ ಕ್ಷೇಮರಕ್ಷಣೆಯ ಸಾದನೆಯ ಕುರಿತು ತಾವು ಈ ವರೆವಿಗೆ ನಡಿಸಿರುವ ಕಾರ್ಯವಿವರವನ್ನೂ ಇನ್ನು ಮುಂದಕ್ಕೆ ಈ ಸಾಧನೆಯು ಹೇಗೆ ನಡಿಸಲ್ಪಡಬೇಕೆಂಬದನ್ನೂ ಸೂಚಿಸಿ ಒಂದು ವಿಸ್ತಾರವಾದ ನಿರ್ಣಯವನ್ನು ಪ್ರಕಟಿಸಿರುತ್ತಾರೆ. ಸರಕಾರದವರಿಂದ ಕಳೆದ ೫೦ ವರುಷಗಳಲ್ಲಿ ನಡಿಸೋಣಾದ ಆರೋಗ್ಯ ಏರ್ಪಾಡುಗಳ ಪ್ರಸ್ತಾಪವು ಈ ನಿರ್ಣಯದಲ್ಲಿ ಸಂಕ್ಷೇಪವಾಗಿ ಮಾಡೋಣಾಗಿದೆ. ಎತ್ತು ಗಾಡಿಗಳ ಈ ದೇಶದಲ್ಲಿ ಮೋಟೊರ್ ಗಾಡಿಗಳ ವೇಗವನ್ನು ಕ್ಷೇಮವೃದ್ಧಿಯ ಸಾದನೆಯಲ್ಲಿ ನಿರೀಕ್ಷಿಸಕೂಡದೆಂಬುದಾಗಿ ಈ ನಿರ್ಣಯದಲ್ಲಿ ಹೇಳೋಣಾಗಿದೆ. ಜನರ ಮೂಢತನ, ಉದಾಸೀನ, ದೇಶದ ವಿಸ್ತಾರ ಮತ್ತು ಅಲ್ಲಲ್ಲಿ ತೋರಿಬರುವ ಜೀವನ ವ್ಯತ್ಯಾಸಗಳಿಂದ ಈ ದೇಶವು ಎತ್ತು ಗಾಡಿಗಳ ದೇಶವಾಗಿ ಕಂಡುಬಂದಿರುವದು. ಆದ್ದರಿಂದ ಆರೋಗ್ಯ ಏರ್ಪಾಡುಗಳ ಜ್ಯಾರಿ ನಡಿಸುವುದರಲ್ಲಿ ಮೋಟೊರ್ ಬಂಡಿಗಳ ವೇಗವು ಸಲ್ಲದೆಂದು ಹೇಳಿರುವರು. ಜನರ ಕ್ಷೇಮರಕ್ಷಣೆಯೆಂದರೆ ಪ್ರಾಣರಕ್ಷಣೆಯು. ಈ ಕಾರ್ಯನಿರ್ವಾಹದ ಸಾದನೆಯ ಚಲನೆಯು ವೇಗವು ಬಹಳವಾಗಿಯೇ ಇರಬೇಕು. ಆದ್ದರಿಂದ ಆರೋಗ್ಯ ವಿಷಯಗಳಲ್ಲಿ ಎತ್ತು ಗಾಡಿಗಳ ಈ ದೇಶವನ್ನು ಮೋಟೊರ್ ಬಂಡಿಗಳ ದೇಶವನ್ನಾಗಿ ಮಾಡಿ ಈ ಬಾಗದಲ್ಲಿ ನಮ್ಮ ನಿರೀಕ್ಷಣೆಯನ್ನು ತಿದ್ದುವದು ಅಗತ್ಯವಾಗಿರುವದು. ಕ್ಷೇಮಸಾದನೆಯ ಪ್ರಯತ್ನಗಳು ಎತ್ತು ಗಾಡಿಗಳ ವೇಗದಲ್ಲಿ ನಡಿಸಲ್ಪಟ್ಟವಾದರೂ ೧೯೦೫ರಿಂದ ಈ ತನಕ ಸರಕಾರದವರು ಈ ವಿಷಯ ನಡಿಸಿರುವ ಪ್ರಯತ್ನಗಳು ಪ್ರಬಲವಾಗಿರುವವು. ೧೯೦೫ನೇ ವರುಷದಿಂದ ಈ ಪ್ರಯತ್ನಗಳಲ್ಲಿ ಸರಕಾರದವರು ಪತ್ರವು ಹೆಚ್ಚಿನ ಆಸಕ್ತಿಯನ್ನು ತೋರುತ್ತಿರುವರು. ಸರಕಾರದ ವಿಶೇಷ ಲಕ್ಷ್ಯವು ಈ ವಿಷಯಕ್ಕೆ ಕೊಡೋಣಾಗುವಂತೆ ಈ ಬಗ್ಗೆ ಮತ್ತು ವಿದ್ಯಾವಿಷಯಗಳ ಬಗ್ಗೆ ವ್ಯಾಸರಾಯಿ ಪ್ರಭುಗಳ ಕಾರ್ಯನಿರ್ವಾಹಕ ಸಭೆಯಲ್ಲಿ ಒಬ್ಬ ಪ್ರತ್ಯೇಕ ಮೆಂಬರರು ನೇಮಿಸಲ್ಪಟ್ಟಿದ್ದಾರೆಂಬುದು ವಾಚಕರು ಈ ಮೊದಲೇ ತಿಳಿದಿರುಹುದು. ಅಂದಿನಿಂದ ಆರೋಗ್ಯರಕ್ಷಣೆಯ ಏರ್ಪಾಡುಗಳನ್ನು ಹೆಚ್ಚೆಚ್ಚಾಗಿ ವ್ಯವಸ್ಥೆಗೊಳಿಸುತ್ತ ಹೇರಳ ದ್ರವ್ಯಸಹಾಯವನ್ನು ಇಂಡಿಯಾ ಸರಕಾರದವರು ಸಂಸ್ಥಾನಿಕ ಸರಕಾರಗಳಿಗೆ ಕೊಡುತ್ತಿರುವರು. ಕ್ಷೇಮರಕ್ಷಣೆಯ ಈ ಸಾದನೆಯು ನಿರಂತರವಾಗಿ ನಡಿಯುವಂತೆ ಈ ದ್ರವ್ಯಸಹಾಯವು ಕ್ರಮವಾಗಿ ದೊರಕಬೇಕಾಗಿರುತ್ತದೆ.

ಕ್ಷೇಮರಕ್ಷಣೆಯ ಬಗ್ಗೆ ಇರುವ ಸಿಬ್ಬಂದಿ ಮತ್ತು ಸಂಸ್ಥೆಗಳ ಪ್ರಸ್ತಾಪವು ಈ ನಿರ್ಣಯದಲ್ಲಿರುತ್ತದೆ. ಮದ್ರಾಸು, ಮುಂಬಯಿ, ಬಂಗಾಳ ಮೊದಲಾದ ಸಂಸ್ಥಾನಗಳಲ್ಲಿ ಒಟ್ಟಿಗೆ ೧೩ ಜನ ಸೆನಿಟರಿ ಕಮಿಶನರ್‌ರವರೂ ೨೬ ಜನ ಡಿಪ್ಯೂಟಿ ಕಮಿಶನರ್‌ರವರೂ ಆಯಾ ಮುನ್ಸಿಪಾಲಿಟಿಗಳಲ್ಲಿ ಪ್ರತ್ಯೇಕವಾಗಿ ೧೬೦ ಜನ ಹೆಲ್ತ್ ಆಫೀಸರರೂ ಸೆನಿಟರಿ ಇಂಜಿನಿಯರರೂ ಮೊದಲಾದವರು ಇರುವರು. ಮುನ್ಸಿಪಾಲಿಟಿಗಳ ಸಂಖ್ಯೆಗೆ ತಕ್ಕಂತೆ ಸೆನಿಟರಿ ಇನ್ಸಪೆಕ್ಟರರ ನೇಮಕಗಳು ಆಗುತ್ತಲಿವೆ. ಸೆನಿಟರಿ ಇಲಾಖೆಯ ಈ ಸಿಬ್ಬಂದಿಯಲ್ಲದೆ ರೋಗ ಕಾರಣಗಳ ಪರಿಶೋದನೆಯನ್ನು ಮಾಡುತ್ತಿರುವ ಸಂಸ್ಥೆಗಳು ಆಯಾ ಸಂಸ್ಥಾನಗಳಲ್ಲಿರುವವು. ಇನ್ನು ಮುಂದಕ್ಕೆ ಬೇಕಾದಂತೆ ಈ ಸಿಬ್ಬಂದಿಯನ್ನು ಹೆಚ್ಚಿಸುವ ಮತ್ತು ಈ ಸಿಬ್ಬಂದಿಯ ತರಬೇತಿಗೆ ಅಗತ್ಯವಿರುವ ಸೌಕರ್ಯಗಳನ್ನು ಹಿಂದೂಸ್ಥಾನದಲ್ಲಿಯೇ ಒದಗಿಸಿಕೊಡುವ ಯೋಚನೆಯು ಸರಕಾರದವರಲ್ಲಿರುವದು. ಜನರು ತಾವಾಗಿಯೇ ಸ್ಥಾಪಿಸುವ ಆರೋಗ್ಯಪಾಲನೆಯ ಸಂಸ್ಥೆಗಳು [illegible]ವಾದವುಗಳೆಂತ ಇಂಡಿಯಾ ಸರಕಾರದವರು ಹೇಳಿರುವರು. ಮುಂಬಯಿಯಲ್ಲಿ ಒಂದೊಂದು ಸಂಸ್ಥೆಯು ಸ್ಥಾಪಿಸಲ್ಪಟ್ಟು ಇದರ ಶಾಖೆಗಳು ಆ ಸಂಸ್ಥಾನದ ಹಲವು [illegible]ಳಲ್ಲಿ ಸಹ ಕೆಲಸ ನಡಿಸುತ್ತಿರುವವೆಂತಲೂ ಈ ಸಂಸ್ಥೆಗೆ ಮುಂಬಯಿ ಸರಕಾರ ಕೊಟ್ಟ ರೂ. ೨೦,೦೦೦ದ ದ್ರವ್ಯಸಹಾಯದೊಡನೆ ಇಂಡಿಯಾ ಸರಕಾರ ೧೦,೦೦೦ ರೂಪಾಯಿಯನ್ನು ದ್ರವ್ಯಸಹಾಯವಾಗಿ ಕೊಟ್ಟಿರುವರೆಂಬುದಾಗಿಯೂ ತಿಳಿದುಬರುತ್ತದೆ. ಪ್ರಜಾಮುಂದಾಳುಗಳು ಇಂಥಾ ಸಂಸ್ಥೆಗಳನ್ನು ಪ್ರತಿ ಸಂಸ್ಥಾನದಲ್ಲಿ ಸ್ಥಾಪಿಸಲು ಪ್ರಯತ್ನಿಸುವುದು ಅಗತ್ಯವಾಗಿರುತ್ತದೆ. ೧೯೧೧ರಲ್ಲಿ ಸ್ಥಾಪಿಸೋಣಾದ ಇಂಡಿಯಾ ರಿಸರ್ಚ್ ಫಂಡ್ ಎಸೋಸಿಯೇಶನಿನವರು ಮಾಡುತ್ತಿರುವ ಆಮಾತಿಸಾರ, ವಾಂತಿಭೇದಿ ಮೊದಲಾದ ರೋಗಪರಿಶೋಧನೆಯ ಪ್ರಸ್ತಾಪವನ್ನು ಮಾಡಿ ಈ ಸಂಘಕ್ಕೆ ಪ್ರಜಾಸಂಪನ್ನರ ಸಹಾಯವು ಅಗತ್ಯವೆಂತ ಸೂಚಿಸೋಣಾಗಿರುವುದು.

ಮಲೆಜ್ವರ, ವಾಂತಿಭೇದಿ, ಮೈಲಿಗೆ, ಪ್ಲೇಗು, ಕ್ಷಯರೋಗ ಇವುಗಳ ಹಾವಳಿಗೆ ತಡೆಕಟ್ಟಲು ಈ ತನಕ ನಡಿಸಿದ ಪ್ರಯತ್ನಗಳ ಮತ್ತು ಪರಿಶೋಧನೆಗಳ ಪ್ರಸ್ತಾಪವು ಸಹ ಈ ನಿರ್ಣಯದಲ್ಲಿ ಮಾಡೋಣಾಗಿರುತ್ತದೆ. ಜನಿಸಿದ ಐದು ವರುಷಗಳಲ್ಲಿಯೇ ವಿಶೇಷವಾಗಿ ಮೃತಪಡುವ ಮಕ್ಕಳ ಸಂಖ್ಯೆಗೆ ಕಾರಣಗಳೇನೆಂಬುವ ವಿಷಯವನ್ನು ಸಹ ಸರಕಾರದವರು ಪರ್ಯಾಲೋಚಿಸಿರುತ್ತಾರೆ. ಜನನ ಮರಣಗಳ ಸಂಖ್ಯೆಯು ಸರಿಯಾಗಿ ಸಂಗ್ರಹಿಸಲ್ಪಟ್ಟು ಈ ಮೂಲಕ ಆರೋಗ್ಯರಕ್ಷಣೆಯ ಸಾದನೆಯ ಫಲವನ್ನು ನಿರ್ಧರಿಸಲು ಅನುಕೂಲವಾಗುವಂತೆ ಕೆಲವು ಸೂಚನೆಗಳನ್ನು ಸಂಸ್ಥಾನಿಕ ಸರಕಾರಗಳಿಗೆ ಕೊಟ್ಟಿರುವರು. ಪಟ್ಣ ಮತ್ತು ಗ್ರಾಮಗಳ ಕ್ಷೇಮರಕ್ಷಣೆ ಬಗ್ಗೆ ಯಾವ ವಿಷಯಗಳಿಗೆ ಲಕ್ಷ್ಯಕೊಡಬೇಕೆಂತ ಸೂಚಿಸಿರುವರು. ಆಹಾರ ಜೀನಸುಗಳು ಮತ್ತು ಹಾಲು ಇವುಗಳಲ್ಲಿ ಆಗುವ ಅನ್ಯಪದಾರ್ಥಗಳ ಮಿಶ್ರಣವು ಜನರ ಆರೋಗ್ಯಕ್ಕೆ ಹಾನಿಯನ್ನುಂಟುಮಾಡುವುದರಿಂದ ಪ್ರಜಾಸಹಕಾರದಿಂದಲೂ ಈ ಬಗ್ಗೆ ಬೇಕಾದ ಕಾನೂನುಗಳ ಜ್ಯಾರಿಯಿಂದಲೂ ಕ್ರಮೇಣ ಈ ಹಾನಿಗೆ ತಕ್ಕ ನಿವೃತ್ತಿಯನ್ನು ಕಲ್ಪಿಸುವ ಯೋಚನೆಯು ಸರಕಾರದವರದಾಗಿರುತ್ತದೆ. ಕ್ಷೇಮರಕ್ಷಣೆಯ ಸಾಧನೆಗೆ ವಿದ್ಯಾಪ್ರಸರಣೆಯೇ ಮುಖ್ಯವಾಗಿ ಬೇಕಾಗಿದೆಂದು ಹೇಳಿ ಪ್ರಜಾಪಾಲನೆಯ ಈ ಕಾರ್ಯದಲ್ಲಿ ಪ್ರಜಾಸಹಕಾರವನ್ನು ನಿರೀಕ್ಷಿಸಿ ಈ ನಿರ್ಣಯದಲ್ಲಿ ಸರ್ವರ ಮಾಹಿತಿ ಬಗ್ಗೆ ಪ್ರಕಟಿಸಿರುವರು.

ವ್ಯಾಪಾರ ವೃತ್ತಿಗಳ ಮೂಲಕ ಸ್ವಘಾತವು

ವ್ಯಾಪಾರಕ್ಕೆ ಸಮ್ಮಂದಪಟ್ಟ ಅರ್ಥಶಾಸ್ತ್ರದ ಮಾಹಿತಿಯು ನನಗಿರದು. ವ್ಯಾಪಾರಸ್ಥರು ನೂತನವಾಗಿ ಅನುಸರಿಸಿರುವ ವ್ಯಾಪಾರ ವಿದ್ಯಾಶಾಸ್ತ್ರದ ಅನುಬವವು ನನಗಿಲ್ಲ. ನನ್ನ ಹಿತ್ತಲ ಹತ್ತಿರ ಹಲವು ಕಡೆಗಳಲ್ಲಿ ನಡಿಯುತ್ತಿರುವಂಥ ವ್ಯಾಪಾರ ವೃತ್ತಿಗಳನ್ನು ನೋಡಿದ ಅನುಬವದಿಂದ ಉಂಟಾದ ಅಭಿಪ್ರಾಯವನ್ನು ಬರೆದಿರುತ್ತೇನೆ. ಅರ್ಥಶಾಸ್ತ್ರವನ್ನೂ ವ್ಯಾಪಾರ ವಿದ್ಯೆಯನ್ನೂ ತಿಳಿದವರು ಇದನ್ನು ನೋಡಿಕೊಂಡು ಇಂಗ್ಲಿಷು ತಿಳಿಯದ ಸಾಮಾನ್ಯರಿಗೆ ಈ ವಿಷಯ ಬೇಕಾದ ಸರಿಯಾದ ಅನುಬವವನ್ನು ತಮ್ಮ ಪತ್ರಮೂಲಕ ಕೊಡಬೇಕೆಂಬುವ ಅಪೇಕ್ಷೆಯೇ ಈ ಪತ್ರವನ್ನು ಬರೆದಿರುವ ಉದ್ದೇಶವಾಗಿರುತ್ತದೆ.

“ಅಗ್ಗ! ಅಗ್ಗ!” ಮತ್ತು “ಆತಮಾಡಿದ್ದೇ ನಾನು ಮಾಡಬೇಕು” ಈ ಎರಡು ಈಗಿನ ಮುಖ್ಯವಾದ ಸಾದನೋಪಾಯಗಳಿಂದ ವ್ಯಾಪಾರ ವೃತ್ತಿಗಳಲ್ಲಿ ನಾವು ಸ್ವಘಾತವನ್ನು ಮಾಡಿಕೊಳ್ಳುತ್ತಿದ್ದೇವೆಂತ ನನಗೆ ತೋರುತ್ತದೆ. ಗಿರಾಕಿಗಳನ್ನು ಬರಮಾಡಿಕೊಳ್ಳಲಿಕ್ಕೆ ಮುಖ್ಯವಾದ ನಮ್ಮ ಮಂತ್ರವು “ಅಗ್ಗ ಅಗ್ಗ”ವೆಂಬುದಾಗಿದೆ. ಹಿಂದುಮುಂದು ನೋಡದೆ ಮಾಡುವ ಈ ಮಂತ್ರೋಪಾಯದಿಂದ ಜನರ ಅಭಿರುಚಿಯು ಕೆಟ್ಟುಹೋಗಿದೆ. ದುಡಿಯುವ ತ್ರಾಣವು ಕುಂದುತ್ತಲಿದೆ. ಹೀಗೆ ಅಗ್ಗ ಪದಾರ್ಥಗಳನ್ನು ಉಪಯೋಗಿಸುತ್ತ ನಾನಾ ತರದ ಆಪತ್ತುಗಳು ವ್ಯಾಪಾರಸ್ಥರಿಗೆ ಮಾತ್ರವಲ್ಲ ಇತರರಿಗೂ ಪ್ರಾಪ್ತವಾಗಲು ಪ್ರಾರಂಬವಾಗಿದೆ. ಶಹರುಗಳ ಸ್ಥಿತಿಯು ಹೇಗಿದೆಯೋ ನಾನರಿಯೆ. ನಮ್ಮ ಗ್ರಾಮದ ಸ್ಥಿತಿಯಿಂದ ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡುವೆನು. ಒಂದೆರಡು ವರುಷಗಳ ಮುಂಚೆ ಒಬ್ಬ ಬಡ ಗೃಹಸ್ಥನು ನವೀನವಾಗಿ ಒಂದು ಸೋಡಾ ಯಂತ್ರವನ್ನು ತಂದಿಟ್ಟು ವ್ಯಾಪಾರ ಮಾಡುತ್ತಲಿದ್ದನು. ಈ ವೃತ್ತಿಯಲ್ಲಿ ಒಂದೆರಡು ವರುಷ ಕಾಲದ ಸಾಧನೆಯನ್ನು ಮಾಡಿದ ಬಳಿಕ ಪರರಿಂದ ಸಾಲ ಪಡಕೊಳ್ಳದೆ ದಿವಸಕ್ಕೆ ಎರಡಾವರ್ತಿ ಊಟ ಮಾಡುವಂಥ ವಿಶೇಷ ಸಂಪನ್ನ ಪದವಿಯು ಈತನಿಗೆ ಪ್ರಾಪ್ತವಾಯಿತು. ಸೋಡಾ ಯಂತ್ರವನ್ನು ನಡಿಸುವ ವೃತ್ತಿಯೂ ವಿಶೇಷ ಲಾಭಕರವೆಂತ ಹಲವರಿಗೆ ಕೂಡಲೇ ತೋರಿಬಂತು. ಒಂದೆರಡು ಯಂತ್ರಗಳನ್ನು ತಂದು ಸೋಡಾ ವೊಟಲನ್ನು ಮಾಡಲು ಪ್ರಾರಂಭಿಸಿದರು. ಮೇಲಾಟವು ಈ ವ್ಯಾಪಾರಸ್ಥರಲ್ಲಿ ಜನಿಸಿತು. ಆರು ಕಾಸುಗಳಿಗೆ ಮಾರುವಂಥಾದ್ದನ್ನು ಮೂರು ಕಾಸಿಗೆ ಮಾರುವ ಹಟವು ತಲೆದೋರಿತು. ಅಗ್ಗ! ಅಗ್ಗ!, ಎಂಬೀ ಶಬ್ದಗಳ ಕೋಲಾಹಲವು ಕೇಳಿಸಿತು. ಈಗಲೂ ಮೂರು ಕಾಸಿನ ವ್ಯಾಪಾರವೇ ನಡಿಯುತ್ತಲಿದೆ. ಸೋಡಾ ಯಂತ್ರಗಳ ಎರವಿನ ಮೇಲೆ ಈ ವ್ಯಾಪಾರಸ್ಥರು ಸಾಲವನ್ನು ಪಡೆದಿರುವರು. ಸಾಲ ಕೊಟ್ಟವನ್ನು

ಯಾವಾಗ ಒಂದು ಈ ವ್ಯಾಪಾರಸ್ಥರಿಗೆ ಇಹಲೋಕದಲ್ಲಿ ಸರ್ವಸ್ವವಾಗಿರುವ ಕೆಲವು ರೂಪಾಯಿಗಳ ಚರಬಿಂದಿಗೆಯನ್ನು ಈಸಿಕೊಂಡು ಹೋಗುವನೋ? ಈ ವ್ಯಾಪಾರಸ್ಥರ ಸ್ಥಿತಿ ಹೀಗೆ. ಸೋಡಾವೊಟರಿನ ನಿಜವಾದ ರುಚಿಯು ಹೇಗಿದೆಂಬುದು ನಮ್ಮ ಗ್ರಾಮದಲ್ಲಿ ತಿಳಿದವರು ಇಲ್ಲ. ಕೊಳೆಯಿಂದ ತುಂಬಿರುವ ನಾಲ್ಕಾರು ದಿವಸಗಳಿಂದ ಬಾಟ್ಲಿಯಲ್ಲಿಯೇ ಇರುವ ದುರ್ವಾಸನೆಯ ನೀರನ್ನು ಮೂರು ಕಾಸು ಕೊಟ್ಟು ಅಗ್ಗ ಅಗ್ಗವೆಂತ ಕುಡಿಯುತ್ತಲಿರುವರು. ಈ ಕೊಳೆ ನೀರಿನಿಂದ ಎಂಥಾ ಆಪತ್ತು ಉಂಟಾಗಬಹುದೆಂಬುದನ್ನು ವಾಚಕರೇ ಗ್ರಹಿಸಲಿ! ವಸ್ತ್ರ ವ್ಯಾಪಾರ [illegible] ಜೀನಸುಗಳ ವ್ಯಾಪಾರದಲ್ಲಿ, ಹಲವು ಬಗೆಯ ವ್ಯಾಪಾರ ವೃತ್ತಿಗಳಲ್ಲಿಯೂ "ಅತಿ ನಷ್ಟವಿದ್ದೇ ನಾನು ಸಹ ಮಾಡಿ" "ಅಗ್ಗ ಅಗ್ಗ"ವೆಂತ ಚೀರುತ್ತ ನಿಶ್ಚಯವಾದ ಸ್ವಘಾತ ಸಾಧನೆಯು ನಡೆಯುತ್ತಲಿದೆ. ಜನರಿಗೆ ಒಳ್ಳೇ ವಸ್ತುಗಳನ್ನು ಒದಗಿಸಿ ಕೊಟ್ಟು ವಿಪರೀತ ಬೆಲೆಗಳಿಂದ ಅವರನ್ನು ಸೂರೆಗೊಳ್ಳದೆ ತನಗೆ ಜೀವನ ಉಪಾಯವನ್ನು ಕಲ್ಪಿಸಿಕೊಳ್ಳುವಾಗ ಜನರಲ್ಲಿ ತೃಪ್ತಿಯನ್ನುಂಟುಮಾಡಿ ದೇಶದ ಸಮೃದ್ಧಿ ಸಾಧನೆಗೆ ತಾನು ಹೇಗೆ ಸಹಾಯಕನಾಗಬಹುದೆಂಬ ಉದಾರ ಶೀಲವು ನಮ್ಮ ಪ್ರಾಂತ್ಯದಲ್ಲಿ ಇಲ್ಲವೇ ಇಲ್ಲವೆನ್ನಬಹುದು. ಮತ್ತೊಬ್ಬನು ಮಾಡಿದ ವ್ಯಾಪಾರ ವೃತ್ತಿಯನ್ನು ತಾನು ಸಹ ಮಾಡಬೇಕಾದರೆ ಇಂಥಾ ವೃತ್ತಿಯಲ್ಲಿ ಅಸ್ಪದವಿರುವುದೋ, ಹೀಗೆ ಅಸ್ಪದವಿಲ್ಲದ್ದಲ್ಲಿ ಮತ್ತೊಬ್ಬನ ವೃತ್ತಿಯನ್ನು ತಾನು ಮಾಡಿದರೆ ಪರರ ಕೇಡು ತನ್ನ ಕೇಡಾಗಿ ಹೇಗೆ ಸಂಭವಿಸಬಹುದು, ಇದರಿಂದ ಪರಸ್ಪರ ಹಾನಿಯು ಹೇಗೆ ಉಂಟಾಗಬಹುದು, ಇಂಥಾ ಯೋಚನೆಯನ್ನು ಮಾಡದೆ ನಮ್ಮ ಊರುಗಳಲ್ಲಿ ವ್ಯಾಪಾರ ವೃತ್ತಿಗಳನ್ನು ಮಾಡುತ್ತಿದ್ದಾರೆ. ಇಂಥಾ ವೃತ್ತಿಯಿಂದ ಸ್ವಘಾತವೇ ಹೊರತು ಬೇರೇನು ಫಲವು ಕಂಡುಬರುವದಿಲ್ಲ. ಸ್ವಾಮಿಗಳಾ, ಚಿಕ್ಕ ಊರುಗಳಲ್ಲಿ ವ್ಯಾಪಾರಸ್ಥರ ಸ್ಥಿತಿಯು ಹೀಗಿರುತ್ತದೆ. ಇಂಥಾ ಸ್ಥಿತಿಯನ್ನು ಹೇಗೆ ಒಳ್ಳೆತಾಗಿ ಮಾಡಬಹುದೆಂಬುವ ವಿಷಯ ವ್ಯಾಪಾರದ ವಿದ್ಯೆಯನ್ನು ಶಾಸ್ತ್ರ ರೀತಿ ಕಲಿತಿರುವವರು ಅಥವಾ ಈ ಪರವಾಗಿ ವಿಶೇಷ ಅನುಭವವುಳ್ಳವರು ತಮ್ಮ ಅನುಭವವನ್ನು ತಮ್ಮ ಪತ್ರದಲ್ಲಿ ಪ್ರಕಟಗೊಳಿಸುತ್ತಿದ್ದರೆ ಉಪಕಾರವಾಗುತ್ತಿತ್ತು.

ವ್ಯಾಪಾರಿ.

ವಿಚಾರಿಗಳ ವಿಚಾರ.

ವಿಚಾರಿಗಳ ಕೃತಜ್ಞತಾಪೂರ್ವಕವಾದ ನಮಸ್ಕಾರ. ಅವರ ಲೇಖನದ [illegible] ವಿಷಯವಾಗಿ ಸಂದೇಹವು ಹುಟ್ಟುತ್ತಲೇ ಇದೆ. ನಾನು ತಪ್ಪು ವಿಚಾರವನ್ನು ಮಾಡಿರುವೆನೆಂದು ಅವರಿಗೆ ಕಂಡುಬರುತ್ತದಂತೆ, ಆದರೆ ಅವರು ಎಷ್ಟರ ಮಟ್ಟಿಗೆ [illegible] ಪ್ರಸ್ತುತ ವಿಷಯವನ್ನು ಕುರಿತು ನಡೆಸುತ್ತಿದ್ದ [illegible] ವಾಚಕ ಮಹಾಶಯರೇ ನಿರ್ಣಯಿಸತಕ್ಕದ್ದು. ವರಶುಲ್ಕವು [illegible] ರಾಕ್ಷಸ ಸ್ವಭಾವದ್ದಲ್ಲವಂತೆ. ನನಗೆ ಹಿಂದೂ ಧರ್ಮಶಾಸ್ತ್ರದಲ್ಲಾಗಲೀ, [illegible] ಪದ್ಧತಿಯು ಕಡಮೆ. "ಪ್ರಾಪ್ತ ಸ್ತ್ರೀಯರುಗಳಿಗೆ ಸ್ವಂತದ ಸೊತ್ತು [illegible] ಪೂರ್ಣ ಸ್ವತಂತ್ರವು ಇರದು" ಎಂದೂ "[illegible] ರಿಂದ ಕನ್ಯೆಗೆ ವಿವಾಹ ಕಾಲ[illegible] ಅವಶ್ಯವಾಗಿ ಕೊಡಬೇಕಾಗಿರುವಂಥಾ ಧನವು ರಾಕ್ಷಸ ಸ್ವಭಾವದ್ದಲ್ಲ" ಎಂದು [illegible] ವಾದಿಸುತ್ತಿರುವರು. ಆದರೆ ಈಗಿನ ಕಾಲದಲ್ಲಿ ವರಶುಲ್ಕವು ಪ್ರಸ್ತುತ ವಿವಾಹ ವಿಷಯದಲ್ಲಿ ಮಾತ್ರ ಪ್ರಚಾರವನ್ನು ಹೊಂದುತ್ತಿದೆಯೋ [illegible] ಸ್ತುತ್ಯಾರ್ಹವಾಗಿರುವುದಾ [illegible] ಶುಲ್ಕವು ತನ್ನ ಪೂರ್ವಕಾಲ [illegible] ಸಂಗತಿ. ಒಮ್ಮೆ ನಿರ್ದೋಷಿಯೂ ಸಹಕಾರಿಯೂ ಆಗಿದ್ದ [illegible] ಕಾಲ ದೇಶಾವಸ್ಥೆಗಳ ಬದಲಾವಣೆಗನುಸಾರವಾಗಿ ದೋಷಭರಿತವೂ ಹೇಯವೂ ಆಗುವುದಿಲ್ಲವೇ? ವರಶುಲ್ಕದ ಗತಿಯೂ ಅದೇ. ಅದರ ಈಗಿನ ದುರ್ವರ್ತನೆಯನ್ನೂ ಹಾವಳಿಯನ್ನೂ ಪರ್ಯಾಲೋಚಿಸಿದರೆ ಅದು ಇನ್ನೂ ಶ್ಲಾಘನೀಯವಾದುದೋ ಅಥವಾ ರಾಕ್ಷಸ ಸ್ವಭಾವದ್ದೋ ಎಂದು ವಾಚಕರಿಗೆ ತಾನೇ ಕಂಡುಬರುವುದು. ಸಮುದಾಯವು ಹಲವು ಕಾರಣಗಳಿಂದ ವಿಪರೀತಾವಸ್ಥೆಯಲ್ಲಿರಲು, ವರಶುಲ್ಕವನ್ನು ಮಾತ್ರ ರಾಕ್ಷಸನೆಂದು ಕರೆಯುವುದು ಸರಿಯಲ್ಲವಾದರೆ, ಪಕ್ಷಭೇದವಿಲ್ಲದೆ ಇತರ ಎಲ್ಲಾ ಕಾರಣಗಳನ್ನೂ ರಾಕ್ಷಸರಂದೇ ಕರೆದು ಬಿಡುವೆನು. ಇದೂ ತಪ್ಪೆಂದಾದರೆ ಎಲ್ಲವನ್ನೂ ದೇವಗಣವೆಂದೂ ಕರೆದು ಬಿಡಲೇ? ಅದಂತಿರಲಿ, ಅತ್ರಿಗೋತ್ರಜರು ಈ ಕಾರಣಗಳ ವರ್ಣನೆಯನ್ನು ಮಾತ್ರ ಬರೆದದ್ದಾದರೆ ವ್ಯಸನಕ್ಕೆ ಅವಕಾಶವಿರುತ್ತಿದ್ದಿಲ್ಲ. ಕನ್ಯಾಪಿತುವಿನ ಸಂಕಷ್ಟದಲ್ಲಿ ಸಹತಾಪವನ್ನು ಪಡುವುದಕ್ಕೆ ಬದಲಾಗಿ ಅವರು ವರದಕ್ಷಿಣೆಯ ಪಕ್ಷದಲ್ಲಿದ್ದು ಮಾತನ್ನಾಡಿ ವಾಚಕರಲ್ಲಿ ತಪ್ಪು ಗ್ರಹಿಕೆಯನ್ನುಂಟುಮಾಡುವಂತೆ ಬರೆದರೆಂಬುದೇ ಚಿಂತೆ. ನನ್ನಂತಹ ಹೆಡ್ಡರೂ ನನ್ನಗಿಂತ ಹೆಡ್ಡರೂ ವಾಚಕರಲ್ಲಿ ಅನೇಕರಿರಬಹುದು. ನನ್ನ 'ತಪ್ಪುವಿಚಾರ'ವೆನ್ನು ಪ್ರಕಟಿಸಿದುದರಿಂದ ಅದನ್ನು ತಿದ್ದಲು ಅನುಕೂಲವಾಯಿತು. ಆದರೆ ಇನ್ನೂ ಕೆಲವರು ವರಶುಲ್ಕವು ಯೋಗ್ಯವಾದುದೇ ಎಂದು ಧರಿಸಿ ತದನುಸಾರವಾಗಿ ಪ್ರವರ್ತಿಸಿದರೆ, ಅತ್ರಿಗೋತ್ರಜರ ಅಭಿಪ್ರಾಯವು ದೋಷರಹಿತವಾದುದೆಂದು ಹೇಳಬಹುದೇ? ಅಯ್ಯಾ ವಿಚಾರಿಗಳೇ! ನೀವೇ ವಿಚಾರಿಸಿ ನೋಡಿ!

ಪತ್ರಾಧಿಪರು ದಯವಿಟ್ಟು ಅನುಮತಿಸುವ ವರೆಗೆ ಲೇಖನ ವ್ಯವಹಾರವನ್ನು ಮುಂದುವರಿಸುತ್ತಿರಬಹುದೆಂಬುದು ಸಹಜವೆ. ಆದರೆ ನನಗೆ ಇದರ ವಿಷಯವಾಗಿ ಹೆಚ್ಚಿನ ಅಭಿಪ್ರಾಯವಿಲ್ಲ, ಅಭಿಪ್ರಾಯವಿದ್ದರೂ ಅನಾವಶ್ಯಕವೆಂದು ಕಂಡು ಒಂದರೆ ಸುಮ್ಮಗಿರುವೆನು. ಅತ್ರಿಗೋತ್ರಜರು ಹೇಳಿದ್ದು ಹಾಗಲ್ಲ, ನಾನೊಬ್ಬರ ವಿಚಾರವು ತಪ್ಪು. ವಿಚಾರಿಗಳ ವಿಚಾರವು ಸರಿಯಲ್ಲ, ಎಂಬೀ ಪ್ರಕಾರ ಒಬ್ಬರನ್ನೊಬ್ಬರು ತಿದ್ದುತ್ತಿರುವುದು ಅಗತ್ಯವೊ ಎಂದು ಆಲೋಚಿಸಿ ನೋಡುವೆನು. ಅದೆಂತಾದರೂ ವರಶುಲ್ಕವು ಈಗ ಇರುವ ಸ್ಥಿತಿಯಲ್ಲಿ ಶ್ರೇಯಸ್ಕರವಲ್ಲವೆಂಬುದು ಗುಣದೋಷ ಗ್ರಾಹಿಗಳಿಗೆ ಸ್ಪಷ್ಟವಾಗುವುದು. ಕಿಂ ಬಹುನಾ? ತಮ್ಮ ತಮ್ಮ ಅಭಿಪ್ರಾಯವನ್ನು ಮನಸ್ಸಾಕ್ಷಿಗೆ ವಿರುದ್ಧವಾಗದಂತೆ ಕಾರ್ಯರೂಪೇಣ ಪ್ರದರ್ಶಿಸೋಣ—

"ನಾನೊಬ್ಬ"

ತೆಂಗಿನ ತೋಟಗಳು.

ಮಿ. ಸಿ. ಟಿ. ಎಲ್‌ಮ್ಸ್ಲಿ (Mr. C. T Elmslie) ಎಂಬವರು ತೆಂಗನ್ನು ಬೆಳೆಯುವುದರ ಪ್ರಯೋಜನವನ್ನು ಕುರಿತು ಬರೆಯುವುದೇನಂದರೆ—"ಅತ್ಯಲ್ಪ ಕಾಲದಲ್ಲಿ ಕೊಬ್ಬರಿಯ ಖರೀದಿಯು ಟನ್ ಒಂದಕ್ಕೆ ೧೩೫ ರೂಪಾಯಿನಿಂದ ೪೩೫ ರೂಪಾಯಿವರೆಗೆ ಏರಿಹೋಗಿದೆ ಮತ್ತು ಇನ್ನೂ ಕೊಂಚ ದಿವಸಗಳಲ್ಲಿ ಖರೀದಿಯು ೫೦೦ ರೂಪಾಯಿವರೆಗೂ ಹೋಗುತ್ತದೆಂದು ಈ ವಿಚಾರದಲ್ಲಿ ಅನುಭವವುಳ್ಳವರು ಅಭಿಪ್ರಾಯಪಡುತ್ತಾರೆ. ಆದರೆ ಒಂದು ಟನ್ ಕೊಬ್ಬರಿಯಾಗುವಷ್ಟು ತೆಂಗಿನ ಕಾಯನ್ನು ಬೆಳೆಯಬೇಕಾದರೆ ೬೦ ರೂಪಾಯಿಗಿಂತ ಜಾಸ್ತಿ ಖರ್ಚು ತಗಲುವುದಿಲ್ಲ."

ಈ ರೀತಿಯಲ್ಲಿ ಒಂದೇ ಸಮನಾಗಿ ಖರೀದಿಯು ಹೆಚ್ಚಲು ಕಾರಣಗಳೇನೋ ಇಷ್ಟೇ ಇವೆ. ಕೊಬ್ಬರಿ ಎಣ್ಣೆಯಿಂದ ಸಾಬೂನುಗಳನ್ನು ತಯಾರು ಮಾಡಿ ಹಿಂಡಿಯನ್ನು ದನಗಳಿಗೆ ಮೇವಾಗಿ ಕೊಡುವುದು ಅನೇಕ ಕಾಲದಿಂದಲೂ ರೂಢಿಯಲ್ಲಿರುತ್ತದೆ. ಆದರೆ ಈಗ ಇತರ ಆಹಾರ ಪದಾರ್ಥಗಳನ್ನು ತಯಾರಿಸಲು ಸಹ ಕೊಬ್ಬರಿ ಎಣ್ಣೆಯನ್ನು ಉಪಯೋಗಿಸುವರು. ಈ ರೀತಿಯಲ್ಲಿ ಆಹಾರ ಪದಾರ್ಥಗಳ ತಯಾರಿಯು ಹೆಚ್ಚಿ ಹೋಗಿ ಅಮೇರಿಕಾ ದೇಶದವರಿಗೆ ಬೇಕಾದಷ್ಟು ಕೊಬ್ಬರಿಯು ಸರಬರಾಯಾಗುವುದೇ ದುಸ್ತರವಾಗಿದೆ. ಇಂತೂ ದಿನೇ ದಿನೇ ಕೊಬ್ಬರಿಯು ಹೆಚ್ಚು ಹೆಚ್ಚಾಗಿ ಬೇಕಾಗುತ್ತಿರುವುದರಿಂದ ಧಾರಣೆಯೇನೋ ಇಳಿಮುಖಕ್ಕೆ ಬರುವ ಸಂಭವವೇ ಇಲ್ಲ.

ಬೆಳೆಗೆ ತಕ್ಕಂತೆ ಈಗ ತೆಂಗಿನ ತೋಟಗಳು ಖರೀದಿಗೆ ಬರುವುದೇ ಕಡಿಮೆಯಾಗಿದೆ. ಬಂದ ಪಕ್ಷಕ್ಕೆ ಒಂದೂ ಎಕರೆಗೆ ೯೦೦ ರೂಪಾಯಿ ಮೊದಲ್ಗೊಂಡು ೧೫೦೦ ರೂಪಾಯಿ ವರೆವಿಗೂ ಖರೀದಿ ಕೊಡಬೇಕಾಗುವುದು. ಆದರೆ ತೆಂಗಿನ ತೋಟವನ್ನು ಎಬ್ಬಿಸಲು ಬಹಳ ಕಷ್ಟವೇನೂ ಅಲ್ಲ. ರಬ್ಬರ್ ಕಾಫಿ ಮೊದಲಾದ ಬೆಳೆಗಳಂತೆ ಇದಕ್ಕೆ ವಿಶೇಷ ಗೊಬ್ಬರ ಬೇಕಾಗಿರುವುದಿಲ್ಲ. ಕಳೆಯು ಹೆಚ್ಚಾಗದಂತೆ ನೋಡಿಕೊಂಡರೆ ಸಾಕಾಗುತ್ತದೆ. ಸೊಸಿಗಳನ್ನು ನೆಟ್ಟು ಐದು ಅಥವಾ ಆರು ವರ್ಷಗಳ ನಂತರ ಮೊದಲನೇ ಬೆಳೆಯು ಕೈಗೆ ಬರುವುದು. ಅಲ್ಲಿಂದಾಚೆಗೆ ಅನೇಕ ವರುಷಗಳ ಕಾಲ ಉತ್ಪತ್ತಿಯು ಇದ್ದೇ ಇರುವುದು.

ತೆಂಗಿನ ತೋಟಗಳಲ್ಲಿ ನೆಡಬಹುದಾದ ಇತರ ಬೆಳೆಗಳು (Secondary Crop for Cocoanut Plantations) ತೆಂಗಿನ ಸೊಸಿಗಳನ್ನು ನೆಟ್ಟ ಎಷ್ಟು ವರುಷಗಳಲ್ಲಿ ಫಲ ಬಿಡಲು ಆರಂಭವಾಗುವುದೆಂಬುವುದು ದೇಶ, ಕಾಲ, ಹವ ಮತ್ತು ಭೂಗುಣ ಇವುಗಳಿಗೆ ಅನುಸಾರವಾಗಿರುತ್ತದೆ. ನಾಲ್ಕನೇ ವರುಷವಾದ ನಂತರ ಮೊದಲ್ಗೊಂಡು ೭ ವರುಷಗಳವರಿವಿಗೂ ಮೊದಲನೇ ಆವರ್ತಿ ಫಲಬಿಡುವುದುಂಟು. ಆದರೆ ೮—೧೦ ವರುಷಗಳಾಗುವವರಿವಿಗೂ ಪೂರ್ಣ ಫಲಬಿಡುವುದಿಲ್ಲ. ಆಧು ಸೊಸಿಗಳನ್ನು ನೆಟ್ಟು ಫಲಬಿಡುವವರಿವಿಗೂ ತೋಟಗಾರನು ಏನೂ ಪ್ರತಿಫಲವಿಲ್ಲದ ಹ್ಯಾಗೆ ಕೂತಿರಲಾಗುವುದು? ಅದಕ್ಕೋಸ್ಕರ ತೆಂಗಿನ ಸೊಸಿಗಳ ಮಧ್ಯೆ ಮತ್ಯಾವುದಾದರೂ ಬೆಳೆಯನ್ನು ಇಟ್ಟು ಅದರಿಂದ ತೆಂಗಿನ ಗಿಡಗಳಲ್ಲದೆ ತೋಟಗಾರನು ಹಾ[illegible] ಪ್ರಯೋಜನವನ್ನು ಹೊಂದಬಹುದು.

ಹೆಸರು, ಹಲಸಂದೆ, ಉದ್ದು, ಹುರುಳಿ ಮೊದಲಾದ ಶಿಂಬಿ ಧಾನ್ಯಗಳ ಪೈರನ್ನು ಇಟ್ಟರೆ ಇವು ಜಮೀನನ್ನೆಲ್ಲಾ ಮುಚ್ಚಿ ತೇವವು ಹೆಚ್ಚಾಗಿ ನಿಲ್ಲುವಂತೆ ಮಾಡುವುವು. ಇದರಿಂದ ತೆಂಗಿನ ಗಿಡಗಳು ಜಾಗ್ರತೆಯಾಗಿ ಬೆಳೆಯುವುವು. ಬೇಸಿಗೆಯಲ್ಲಿ ಈ ಪೈರುಗಳು ತೆಂಗಿನ ಪೈರಿಗೆ ತೇವವನ್ನು ಒದಗಿಸಿ ಕೊಡುವುವು. ಅಲ್ಲದೆ ಮುಖ್ಯವಾದ ಸಸ್ಯಾಹಾರವಾದ ಯವಕ್ಷಾರ (Nitrogen)ವನ್ನು ಬಹಳವಾಗಿ ಒದಗಿಸುತ್ತವೆ. ಮತ್ತು ಇತರ ಕಳೆಗಳು ಮನಸ್ಸಿ ಬೆಳೆದು ತೆಂಗಿನ ಬೆಳೆಗೆ ತೊಂದರೆ ಕೊಡದಂತೆ ಮಾಡುತ್ತವೆ

ಇವುಗಳನ್ನು ಬಿತ್ತನೆ ಮಾಡುವಾಗ್ಯೆ ಕೂರಿಗೆಗಳನ್ನು ಉಪಯೋಗಿಸಬೇಕು ಇವು ಬಹಳ ಹೊರುವಾಗಿ ಬೆಳೆದು ತೆಂಗಿನ ಗಿಡಗಳ ಮೇಲೆ ಹಬ್ಬಿದರೆ ಅದಕ್ಕೆ ಅವಕಾಶ ಕೊಡದಂತೆ ಹಂಬನ್ನು ಕತ್ತರಿಸಬೇಕು. ಕತ್ತರಿಸಲ್ಪಟ್ಟ ಹಂಬು ಮತ್ತು ಸೊಪ್ಪುಗಳು ಉತ್ತಮವಾದ ಗೊಬ್ಬರವಾಗುವುವು ಕಾಳುಗಳು ಜನರಿಗೆ ಆಹಾರವಾಗುವುದು ಮತ್ತು ಒಣಗಿದ ಕಡ್ಡಿಗಳು ದನಗಳಿಗೆ ಮೇವಾಗುವುದು.

ಮುಖ್ಯವಾಗಿ ಪ್ರತಿಯೊಬ್ಬ ತೆಂಗಿನ ತೋಟಗಾರನೂ ಗಿಡಗಳು ಬೆಳೆದು ಫಲಬಿಡುವ ವರಿವಿಗೂ ನಿರೀಕ್ಷಿಸಿಕೊಂಡಿರದೆ ಮೊದಲಿಂದಲೂ ಇತರ ಬೆಳೆಗಳನ್ನು ಇಡಬೇಕಾದ್ದು ಅತ್ಯವಶ್ಯಕವಾಗಿದೆ. ಸ್ವಲ್ಪ ಬುದ್ಧಿವಂತಿಕೆಯಿಂದ ಬೆಳೆಯನ್ನು ಬದಲಾಯಿಸುತ್ತಿದ್ದರೆ ಮತ್ತೂ ಅಧಿಕವಾದ ಪ್ರಯೋಜನವನ್ನು ಹೊಂದಬಹುದು. ಜೋಳ, ಗೆಣಸು, ಅವರೆ, ನೆಲಗಡಲೆ ಇವುಗಳೆಲ್ಲವೂ ತೆಂಗಿನ ತೋಟಗಳಲ್ಲಿ ನೆಡಬಹುದಾದ ಅತ್ಯುತ್ತಮವಾದ ಬೆಳೆಗಳಾಗಿರುತ್ತವೆ.

ಅಲ್ಲದೆ ತೆಂಗಿನ ತೋಟಗಾರನು ತೆಂಗಿನ ಗಿಡಗಳ ಮಧ್ಯೆ ವಿಶೇಷವಾಗಿ ತರಕಾರಿಯನ್ನು ಬೆಳೆದು ಮಾರಿ ಆದಾಯವನ್ನು ಸಂಪಾದಿಸಬಹುದು.   ಕ. ಕ

ಪತ್ರವ್ಯವಹಾರ.

ವಾತ್ತೆದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ

ಅಯ್ಯಾ,

ನಾನು ತಳಿಪರಂಬು ಫಾರ್ಮು ಮೆನೇಜರರಿಂದ ತರಿಸಿ ಉಪ್ಪಿನಂಗಡಿ ತಾಲೂಕು ಅಮರಮೂಡ್ನೂರು ಗ್ರಾಮ ಹಾಸನಡ್ಕ ಎಂಬಲ್ಲಿ ಬೆಳಸಿದ ಹಸಿ ಗೊಬ್ಬರ ಪೈರಿನ ಗಿಡಗಳು ಬಹಳ ಚೆನ್ನಾಗಿ ಬೆಳದಿರುತ್ತವೆ. ಈ ಹಸಿ ಗೊಬ್ಬರ ಪೈರಿನಿಂದ ಕೃಷಿಕರಿಗೆ ತುಂಬಾ ಪ್ರಯೋಜನವಾದೀತೆಂಬದಕ್ಕೆ ಅನುಮಾನವೇ ಇರದು. ನಾನು ಬೆಳಸಿದ ಈ ಪೈರನ್ನು ನೋಡಲಪೇಕ್ಷಿಸುವ ಕೃಷಿಕರು ಬಂದು ಈ ನವೀನ ಕೃಷಿಯನ್ನು ನೋಡಿಕೊಂಡು ತಕ್ಕ ಸಮಾಚಿತಿಯನ್ನು ಪಡೆದು ತಮಗೆ ತಾವೇ ಪ್ರಯೋಜನವನ್ನು ಹೊಂದಿಕೊಳ್ಳಬೇಕೆಂದು ಅಪೇಕ್ಷಿಸುವ,

ಹಾಸನಡ್ಕ,
ತಾ 23—5—1914   ಕಂಜರ್ಪಣೆ ವೆಂಕಟರಮಣಯ್ಯ

ಅಯ್ಯಾ ಪತ್ರಕರ್ತರೇ,

ಪುತ್ತೂರಿನಿಂದ ಸುಬ್ರಮಣ್ಯಕ್ಕೂ ಜಾಲಸೂರಿನಿಂದ ಸುಬ್ರಮಣ್ಯಕ್ಕೂ ಹೋಗುವ ಲೋಕಲ್ ಫಂಡ್ ರಸ್ತೆಗಳ ಸ್ಥಿತಿಯನ್ನು ಹೇಳಿ ತೀರದು ಈ ರಸ್ತೆಗಳು ಆ ಪ್ರಾಂತ್ಯದ ಜನರಿಗೆ ಬಹಳ ಪ್ರಯೋಜನಕಾರಿಯಾದ ರಸ್ತೆಗಳಾಗಿದ್ದರೂ ಈ ಬೇಸಿಗೆ ಕಾಲದಲ್ಲೇ ಹುಣ್ಣು ಹುಣ್ಣಾಗಿ ಹೋಗಿರುವುದರಿಂದ ಗಾಡಿಗಳು ನಡೆಯುವರೆ ತುಂಬಾ ಅನಾನುಕೂಲತೆಯ ಸ್ಥಿತಿಯಲ್ಲಿದೆ. ಮಳೆಗಾಲವು ಸಮೀಪಿಸಿತು. ಬೇಸಿಗೆ ಕಾಲದಲ್ಲಿ ಹಾಳು ಸ್ಥಿತಿಯಲ್ಲಿರುವ ರಸ್ತೆಗಳು ಬೇಗನೇ ದುರುಸ್ತಿಯಾಗದೆ ಇದ್ದರೆ ಮಳೆಗಾಲದಲ್ಲಿ ಜನಗಳು ನಡಿಯುವುದೇ ಕಷ್ಟವಾದೀತೆಂಬದನ್ನು ಪ್ರತ್ಯೇಕ ಹೇಳಬೇಕೆಂತಿಲ್ಲ. ಆದುದರಿಂದ ಲೋಕಲ್ ಫಂಡಿನವರು ಈ ವಿಷಯಕ್ಕೆ ನಿಗಾ ಕೊಟ್ಟು ಈ ದಾರಿಗಳ ದುರುಸ್ತಿಯನ್ನು ತಕ್ಕ ಕಂಟ್ರಾಕ್ಟರರಿಗೆ ಗುತ್ತಿಗೆ ಕೊಟ್ಟು—ಕಂಟ್ರಾಕ್ಟರರಿಂದ ಬಿಟ್ಟಿ ಕೆಲಸವಾಗದಂತೆ ಮುಂಜಾಗ್ರತೆ ತಕ್ಕೊಳ್ಳುವರೆಂತ ನಂಬುವ,

ಬಡ ಗಾಡಿಗಾರ.

ಪತ್ರಿಕಾಕರ್ತರೇ,

ನಮ್ಮ ಉಪ್ಪಿನಂಗಡಿ ತಾಲೂಕಿಗೆ ಗ್ರಾಮ ರಸ್ತೆಗಳ ಬಗ್ಗೆ ಕೆಲವು ಐವಜು ಸರಕಾರದಿಂದ ಸೆಂಕ್ಷನು ಆಗಿರುವುದಂತೆ. ಈ ಹಣವನ್ನು ಬೋರ್ಡಿನವರು ಬೆಳ್ತಂಗಡಿ ಚಾರ್ಮಾಡಿಗೆ ಹೋಗುವ ರಾಜ ರಸ್ತೆಯಿಂದ ಮುಂಡಾಜೆ ಗ್ರಾಮದ ಹೊಳೆಯ ಪೂರ್ವ ಪಾರ್ಶ್ವದಲ್ಲಿ ದಕ್ಷಿಣ ದಿಕ್ಕಿಗೆ ಧರ್ಮಸ್ಥಳಕ್ಕೆ ಹೋಗುವದಕ್ಕೆ ಅನುಕೂಲವಾಗುವ ಹಾಗೆ ಒಂದು ರಾಜ ರಸ್ತೆಯನ್ನು ತೆರೆಯುತ್ತಿದ್ದರೆ ಉಪಕಾರವಿತ್ತು. ಮುಂಡಾಜೆ ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದ ವರೆಗೆ ರಾಜ ರಸ್ತೆಯಿಂದ ಸುಮಾರು ೧ ಮೈಲು ದೂರಕ್ಕೆ ಒಂದು ಖಾಸಗಿ ರಸ್ತೆ ಇದೆ. ತದ್ರೀತಿ ಧರ್ಮಸ್ಥಳದಿಂದ ಮಲ್ಲರಮಾಡಿ ವರೆಗೆ ಸುಮಾರು ೨ ಮೈಲು ದೂರ ಒಂದು ಗಾಡಿ ರಸ್ತೆ ಇದೆ. ಅನಂತರ ೩ ಮೈಲುಗಳ ದೂರ ರಸ್ತೆ ಇಲ್ಲದೆ ಗಾಡಿ, ಜನ ಜಾನುವಾರುಗಳಿಗೆ ಬಹಳ ಪೇಚಾಟಕ್ಕೆ ಕಾರಣವಾಗಿದೆ. ಚಾರ್ಮಾಡಿ, ಎಳನೀರು ಮುಂತಾದ ಸ್ಥಳಗಳಿಂದ ಧರ್ಮಸ್ಥಳಕ್ಕೆ ಬರುವ ಯಾತ್ರಸ್ಥರಿಗೆ ಈ ದಾರಿ ಕಡಿಯಲ್ಪಟ್ಟರೆ ಉಂಟಾಗುವ ಪ್ರಯೋಜನವನ್ನು ವರ್ಣಿಸಿ ತೀರದು. ಪ್ರಕೃತ ಗಾಡಿಗಳು ಉಜಿರೆಗಾಗಿ ಹೋಗಬೇಕಾಗುತ್ತದಾದ್ದರಿಂದ ೧೧ ಮೈಲಿನ ಫಾಸಲೆಯಾಗುತ್ತದೆ ಹೊಸ ರಸ್ತೆ ಕಡಿಯಲ್ಪಟ್ಟರೆ ೫-೬ ಮೈಲು ದೂರ ಮಾತ್ರವಾಗುವುದು. ಈ ವಿಷಯವನ್ನು ಬೋರ್ಡಿನವರು ಆಲೋಚಿಸಿ ಮೇಲೆ ಹೇಳಿದ ದಾರಿಯನ್ನು ಕಡಿಸಿ ಜನೋಪಕಾರಿಗಳಾಗಬೇಕೆಂದು ಹಾರೈಸುವ,

ಮುಂಡಾಜೆ,
ತಾ 20—5—1914   ಮುಂಡಾಜೆ ಗ್ರಾಮಸ್ಥ.

ಮುದಿ ಅಪ್ಪಯ್ಯನ ಅನುಭವ

ಸ್ವಾಮಿ ಪತ್ರಾಧಿಪರೇ,

"ಸಾರಸ್ವತ"ನೆಂಬ ಹೆಸರಿನಿಂದ ತಮ್ಮ ಮೇ ೨೨ನೇ ತಾರೀಕಿನ ಪತ್ರಿಕೆಯಲ್ಲಿ ಮುದ್ರಿಸಿದ್ದ ಲೇಖನವನ್ನು ಓದಿನೋಡಿ ಸಂತೋಷಿತನಾದೆನು ನನ್ನ ಮಕ್ಕಳು ಸುಖಿಯಾದರೆ ಅದನ್ನು ನೋಡಿ ನಾನು ಸುಖಿಯಾಗುತ್ತೇನೆ "ಸಾರಸ್ವತ"ನು ಅನಾವಶ್ಯಕವಾಗಿ ತನ್ನನ್ನು ತಾನೇ ದೂಷಿಸಿಕೊಂಡು ದುಃಖಿಸುವುದನ್ನು ನೋಡಿ ನನಗೆ ಸಹಿಸಲಿಕ್ಕೆ ಆಗುವುದಿಲ್ಲ

ಪೂಜ್ಯತ್ವ ಹೊಂದಲಿಕ್ಕೆ ಯಾರಲ್ಲಿ ಯೋಗ್ಯತೆ ಇದೆಯೋ ಅಂಥವರಿಗೆ ಹೇಗೂ ಪೂಜ್ಯತ್ವ ಸಿಕ್ಕುತ್ತದೆ ಅಂತಹ ಯೋಗ್ಯತೆ ಇಲ್ಲದಲ್ಲಿ ನಾವು ನಮ್ಮ ತಲೆಯನ್ನು ಬಂಡೆಕಲ್ಲಿಗೆ ಬಡಿದುಕೊಂಡರೂ ಪೂಜ್ಯತ್ವ ಸರ್ವಥಾ ಬಾರದು. ದಿನಗಳ ಹಿಂದು ಹೋಗುವಾಗ ಕಾಗೆಗಳು ಅವುಗಳ ಕೊಂಬುಗಳ ಮೇಲೂ, ಜಿಸ್ಸಿಗಳ ಮೇಲೂ ಕುಳಿತು ಸವಾರಿಮಾಡುವುದನ್ನು ಈ "ಸಾರಸ್ವತ"ನು ನೋಡಲಿಲ್ಲವೇ?

ಗುರು ಹಿರಿಯರ ಮೇಲೆ ತನಗೆ ಭಕ್ತಿ ಕಡಿಮೆ ಎಂತ "ಸಾರಸ್ವತ"ನು ದೂಷಿಸಿಕೊಳ್ಳುವುದು ನ್ಯಾಯವಲ್ಲ ಭಕ್ತಿ ಕಡಿಮೆಯಾದದ್ದು ಆತನ ತಪ್ಪಲ್ಲ. ಗುರುಗಳ ಪಟ್ಟಿಗೆ ಕಾರಣವೇನೆಂಬದು ನಾನು ಹೇಳಲಾರೆನು ನನ್ನ ಪಟ್ಟಿಗೆ ನಾನು ಕಾರಣ ವಿವರಿಸುವೆನು.

ನಮ್ಮ ಪರಮ ಪೂಜ್ಯ ಹಿರಿಯರಾದ ಋಷಿಗಳ ಶಾಸ್ತ್ರಾನುಜ್ಞೆಗಳನ್ನು ಮನ್ನಿಸದೆ, ನಾನು ವಿದ್ಯೆಯೂ, ಸಂಪತ್ತೂ ಇದ್ದವನಾದಾಗ್ಯೂ ನನ್ನ ಇಬ್ಬರು ಹೆಣ್ಣು ಮಕ್ಕಳಿಗೂ ವಿದ್ಯೆ ಕೊಡಿಸಲಿಲ್ಲ ಬಾಲ್ಯದಲ್ಲಿ ಅವರನ್ನು ವಿವಾಹಮಾಡಿಕೊಟ್ಟೆನು. ಹೆಚ್ಚು ಕಡಿಮೆ ವಿವಾಹವಾದ ಒಂದು ವರುಷದ ಒಳಗೆ ಇಬ್ಬರೂ ವಿಧವೆಯಾದರು. ಅವರ ಕಡೆಗೆ ನಾನು ಕಿಂಚಿತ್ತಾದರೂ ಕನಿಕರ ಪಡದೆ ಅವರ ಕ್ಷೇಮಚಿಂತಿಸುವ ಬದಲಿಗೆ ಅವರ ತಾಯಿಯಾದ ನನ್ನ ಹೆಂಡತಿ ಸ್ವರ್ಗಸ್ಥಳಾಗುತ್ತಲೇ ನಾನು ೫೧ ವರುಷ ವಯಸ್ಸಿನ ಮುದುಕನಾದಾಗ್ಯೂ ೧೨ ವರ್ಷದ ಹುಡುಗಿಯನ್ನು ವಿವಾಹಮಾಡಿಕೊಂಡೆನು. ನನ್ನ ಏಕ ಮಗನೆಂದಿರನ್ನು ಶಾಲೆಗೆ ಕಳುಹಿಸಬೇಕೆಂತಲೂ ಅವರಿಗೆ ಪುನರ್ವಿವಾಹಮಾಡಬೇಕೆಂತಲೂ ಪ್ರೀತಿ ಪ್ರೇರಿತನಾಗಿ ನನ್ನ ಮಗನು ನನಗೆ ಸೂಚನೆ ಕೊಡುತ್ತಲೇ ನಾನು ಸಿಟ್ಟಾಗಿ ಹುಲಿಯಂತೆ ಘರ್ಜನೆ ಮಾಡಿದೆನು. ಇಂತಹ ತಂದೆಯಾದ ನನ್ನ ಕಡೆಗೆ ನನ್ನ ಮಗನಿಗೆ ಭಕ್ತಿ ಕಡಿಮೆಯಾದದ್ದು ಸಹಜವಲ್ಲವೇ?

ಜಾತಿ ಭೇದದಿಂದ ನನ್ನ ದೇಶದ ಸ್ಥಿತಿ ಕೆಟ್ಟಿತೆಂಬದು ನಾನು ಚೆನ್ನಾಗಿ ತಿಳಿದವನಾದವನಾದಾಗ್ಯೂ ಪರ ಜಾತಿಯವರನ್ನು ನನ್ನ ಮಗನ ಮುಂದೆ ಆಗಾಗ್ಯೆ ದೂಷಿಸಿ ಆತನಲ್ಲಿ ಜಾತಿ ಮತ್ಸರ ಬೆಳಸಿದೆನು. ನಾನು ಸರಕಾರ ನೌಕರಿಯಲ್ಲಿ ಉನ್ನತ ಪದವಿ ಹೊಂದಿದಂಥವನಾಗಿಯೂ ಶ್ರೀ ಕುಲದೇವರ ಅನುಗ್ರಹದಿಂದ ಸಂಪತ್ತು ಉಳ್ಳವನಾಗಿಯೂ ಇರುತ್ತಾ, ನನ್ನ ಸ್ವಜಾತಿಯಲ್ಲಿ ಗತಿ ಹೀನರಾದ ಮಕ್ಕಳ ಮತ್ತು ವಿಧವೆಯರ ಯಾ ಅಸಹಾಯ ಸ್ಥಿತಿಯಲ್ಲಿರುವ ಅಪಂಗುಲರ ಮತ್ತು ವೃದ್ಧರ ಪ್ರಯೋಜನದ ಬಗ್ಗೆ ಯಾವ ಕಾರ್ಯವನ್ನಾದರೂ ನಾನು ಮಾಡುವುದಕ್ಕೆ ಯತ್ನಿಸಲಿಲ್ಲ. ಅಂತಹ ಯತ್ನ ಮಾಡುವವರನ್ನು ಪ್ರೋತ್ಸಾಹಿಸುವ ಬದಲಿಗೆ ಮೈದಾನಿನಲ್ಲಿ ಕೂತು ದೂಷಿಸುತ್ತಿದ್ದನು. ನನಗೆ ಅಧಿಕಾರವಿರುವಾಗ ನಿಷ್ಪಕ್ಷಪಾತಿ ಎಂಬ ನನ್ನ ಪ್ರತಿಷ್ಠೆಗೆ ಹಾನಿ ಬರುವುದೆಂಬ

ಲ್ಲವೆಂಮ್ಮೂ ರಕ್ಷಾಯಿಸುವ ಉದ್ದೇಶದಿಂದಲೇ ಈ ಕೃತ್ಯವು ನಡಿಸಲ್ಪಟ್ಟಿತೆಂದೂ ತಿಳಿದು ಬಂದುದರಿಂದ ಉಭಯತರೂ ವಿಚಾರಣೆಗೆ ಗುರಿಮಾಡಲ್ಪಟ್ಟರು. ಇಬ್ಬರಿಗೂ ಆರಾರು ತಿಂಗಳ ಕಠಿಣ ಸಜೆಯೂ ಸಾವಿರ ರೂಪಾಯಿಗಳ ಜುಲುಮಾನೆಯೂ ವಿಧಿಸಲ್ಪಟ್ಟಿತು

~~~~~

ಕಲ್ಕತ್ತೆಯ ಸಿದ್ಧಾಪುರದಲ್ಲಿ ೭ ತಿಂಗಳ ಹಿಂದೆ ಒಂದು ವಿವಾಹವಾಗಿತ್ತು. ಕಳೆದ ವಾರ ಗಂಡನು ವೈಲಿಗೆ ರೋಗದಿಂದ ಕಾಲವಾದನು. ಈ ವಿಯೋಗ ದುಃಖವನ್ನು ಸೈರಿಸಲಾರದೆ ಗಂಡನು ಸತ್ತ ೬ನೇ ದಿವಸದಲ್ಲಿ ಹೆಂಡತಿಯು ಸೀಮೆ ಎಣ್ಣೆ ಹೊಯ್ದು ಬೆಂಕಿಕೊಟ್ಟುಕೊಂಡು ಆತ್ಮಹತ್ಯ ಮಾಡಿಕೊಂಡಳು.

~~~~~

ಕರಾಚಿಯ ಇಬ್ಬರು ಪೋಲೀಸ್ ಕನಿಸ್ಟೇಬಲರು ಒಂದು ಅಂಗಡಿಗೆ ನುಗ್ಗಿ ಸುಲಿಗೆ ಮಾಡಿದರೆಂಬುದಾಗಿ ಆಪಾದಿಸಲ್ಪಟ್ಟಿದ್ದರು. ತಾ [illegible]ರಲ್ಲಿ ಇವರಲ್ಲಿ ಒಬ್ಬನಿಗೆ ೫ ವರ್ಷಗಳ ಕಠಿಣ ಸಜೆಯೂ ಮತ್ತೊಬ್ಬನಿಗೆ ೩ ವರ್ಷಗಳ ಸಜೆಯೂ ವಿಧಿಸಲ್ಪಟ್ಟಿತು. ಸುಲಿಗೆ ಮಾಡಿದ ಆಪಾದಿತರಲ್ಲಿ ಒಬ್ಬನು ಸುಲಿಗೆ ಮಾಡುವ ಕಾಲದಲ್ಲಿ ಯುನಿಫೋರ್ಮಿನಲ್ಲೇ ಇದ್ದನಂತೆ.

~~~~~

ಬರೋಡೆಯಲ್ಲಿ ಸುಮಾರು ೧೬೦ ಮೈಲು ದೂರಕ್ಕೆ ಮೋಹ[illegible] ಎಂಬಲ್ಲಿಂದ ಅಸ್ವ ಎಂಬಲ್ಲಿಗೆ ರೈಲ್ವೆ ತೆರೆಯುವರೆ ಇಂಡಿಯಾ ಸರಕಾರದವರು ಅನುಮತಿ ಕೊಟ್ಟಿರುವರು.

ಮುಂಬಾಯಿ ಗವರ್ನರರಾದ ವಿಲಿಂಗ್ಡನ್ ಪ್ರಭುಗಳವರು [illegible] ಗೋಕುಲದಾಸ ಆಸ್ಪತ್ರೆಯನ್ನು ಪ್ರತಿಷ್ಠೆ ಮಾಡಿದರು. ಮುಂಬಾಯಿಯ ವರ್ತಕರಾದ [illegible] ಈ ಆಸ್ಪತ್ರೆಯ [illegible] ೫೦೦೦ ರೂಪಾಯಿಯನ್ನು ಆಸ್ಪತ್ರೆ ಕಟ್ಟ[illegible] ಮಾಡಿದ್ದರು. [illegible] ಇವರ [illegible] ಗೋಕುಲದಾಸರ [illegible] ಪ್ರತ್ಯೇಕ [illegible] ಏರ್ಪಡಿಸುವರೆ [illegible] ರೂಪಾಯಿ ದಾನ ಮಾಡಿದರು.

~~~~~

ತಾ [illegible] ರಲ್ಲಿ [illegible] ಹೋಗು ತ್ತಿದ್ದ ರೈಲ್ವೆ ಬಂಡಿಯಲ್ಲಿ [illegible] ಹೊಸ ಮಗೂ ಸತ್ತುಹೋಯಿತು [illegible] ಇರುವರು [illegible] ಯಾಗಿ ಈ ಬೆಂಕಿ ಹುಟ್ಟಿತು. ೫ ನಿಮಿಷದೊಳಗೆ ಬೆಂಕಿ ಆರಿಸಲಾದ್ದರಿಂದ ಹೆಚ್ಚಿನ ಅನಾಹುತ ಸಂಭವಿಸಲಿಲ್ಲ. ಬೆಂಕಿಯನ್ನು ನೋಡಿ ಕಕ್ಕಾಬಿಕ್ಕಿಯಾಗಿ ಟ್ರೇನು ಓಡುತ್ತಿರುವಾಗಲೇ ೩ನೇ ತರಗತಿಯ ಕೆಲವು ಪ್ರಯಾಣಿಕರು ಗಾಡಿಯಿಂದ ಹಾರಿ ಜಖಂ ಹೊಂದಿರುವರು. ಇಬ್ಬರು ಹಿಂದುಗಳು ಸತ್ತುಹೋದರು. ೫ ಮಂದಿ ವಿರಾಜಿ ಆಸ್ಪತ್ರೆಯಲ್ಲಿ ಮೋದಂಡ ಸ್ಥಿತಿಯಲ್ಲಿರುವರು

~~~~~

ಸಂಯುಕ್ತ ಸಂಸ್ಥಾನದಲ್ಲಿ ಬರಗಾಲ ಬಂದಿದೆ. ಹೊಟ್ಟೆಗನ್ನವಿಲ್ಲದೆ ಕಷ್ಟ ಪಡುತ್ತಿರುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ಜಾನುವಾರುಗಳು ನೀರಾಹಾರವಿಲ್ಲದೆ ಸಾಯುತ್ತಿವೆ. ಒಂದು ಲಕ್ಷದ ಐವತ್ತು ಮೂರು ಮಂದಿ ಈಗಲೇ ಸಹಾಯಕ ಫಂಡಿನಿಂದ ಸಹಾಯ ಪಡೆಯುತ್ತಿದ್ದಾರೆ.

~~~~~

ಬಂಗಾಳ ಸರ್ಕಾರದವರು ಭಾಗಲ್‌ಪುರದಲ್ಲಿದ್ದ ಪೋಲಿಸ್ ಇನ್ಸ್‌ಪೆಕ್ಟರರು ತರ್ಬೀತಾಗುವ ಶಾಲೆಯನ್ನು ಕಲ್ಕತ್ತಾ ಪಟ್ಟಣಕ್ಕೆ ವರ್ಗಮಾಡಿ ಏಕಕಾಲದಲ್ಲಿ ೨೫೦ ಮಂದಿ ಇನ್ಸ್‌ಪೆಕ್ಟರುಗಳು ತರ್ಬೀತಾಗುವಂತೆ ಏರ್ಪಾಡು ಮಾಡಿದ್ದಾರೆ

~~~~~

ಷೋಲಾಪುರ ಜಿಲ್ಲೆಯಲ್ಲೂ ಸುತ್ತ ಮುತ್ತಲಿನಲ್ಲೂ ಮಳೆ ಇಲ್ಲದೆ ಗೋಕಾಯಿಗಳು ಲಯವಾಗುತ್ತಿರುವವು. ಅವುಗಳ ಸಂರಕ್ಷಣೆಗಾಗಿ ಅನೇಕ ಸ್ಥಳಗಳಲ್ಲಿ ಗೋಶಾಲೆಗಳನ್ನು ಮಾಡಿ ದನಗಳನ್ನು ತರಿಸಿಟ್ಟುಕೊಂಡು ಸಾಕುತ್ತಿದ್ದಾರೆ. ಇದಕ್ಕೆ ಚಂದಾ ಕೂಡಿಸಲು ಒಂದು ಧರ್ಮ ಫಂಡು ಏರ್ಪಾಡಾಗಿ ಕಮಿಟಿಯವರು ೫೦,೦೦೦ ರೂಪಾಯಿ ಕೂಡಿಸುವರೆ ಸಾಹಸ ಪಡುತ್ತಿದ್ದಾರೆ

~~~~~

ಬೊಂಬಾಯಿ ಪಟ್ಟಣದ ಚೆಂಚಬಂದರ್ ಎಂಬ ಬೀದಿಯಲ್ಲಿ ಒಂದು ಮದುವೆ ಮೆರವಣಿಗೆಯ ಕೂಡ ಹೋಗುತ್ತಿದ್ದ ಕಾವೇರಿಬಾಯಿ ಎಂಬ ಹಿಂದೂ ಸ್ತ್ರೀಯನ್ನು ಡ್ಯಾನಿಯೆಲ್ ಎಂಬ ಜರ್ಮನಿ ಜಾತಿಗೆಯವನು ಕೈಹಿಡಿದು ಬಲತ್ಕಾರದಿಂದ ದೂರ ಎಳೆದುಕೊಂಡು ಹೋದನು. ಆ ಸ್ತ್ರೀಯು ಗಾಬರಿ ಬಿದ್ದು ಕೂಗಿಕೊಂಡಾಗ ಜನರು ಸೇರಿ ಆಕೆಯ ಸಹಾಯಕ್ಕೆ ಬಂದರು. ಅಷ್ಟರಲ್ಲಿ ಆ ದುಷ್ಟನು ಅಲ್ಲಿಂದ ಓಡಿಹೋದನು. ಪೋಲೀಸಿನವರು ಅವನನ್ನು ಹಿಡಿದು ಮೊಕದ್ದಮೆ ಮಾಡಿದಾಗ ಮೇಜಿಸ್ಟ್ರೇಟರು ಅವನಿಗೆ ೧೦೦ ರೂಪಾಯಿ ಜುಲುಮಾನೆ ತಪ್ಪಿದರೆ ಒಂದು ತಿಂಗಳ ಸಜ್ಞಾ ವಿಧಿಸಿದರು.

~~~~~

ಮುಂಬಾಯಿಯ ಪರೆಲ್ ಲ್ಯಾಬೊರೆಟರಿಯಲ್ಲಿ ಹಾವುಗಳ ವಿಷ ತೆಗೆದು ಅದರ ಸತ್ವವನ್ನು ಹಾವು ಕಡಿತಕ್ಕೆ ಔಷಧಿಯಾಗಿ ಪ್ರಯೋಗಿಸುವ ವಿಧಾನವು ಕಂಡುಕೊಳ್ಳಲ್ಪಟ್ಟಿದೆ. [illegible] ವಿಷವು ಕೌಸೂಲಿಗೆ ಕಳುಹಿಸಲ್ಪಟ್ಟು ಕುದುರೆಗಳ ರಕ್ತದೊಳಗೆ ಸೇರಿಸಿ ಸ್ವಲ್ಪ ಸಮಯದ ನಂತರ ಅದರ ರಕ್ತವನ್ನು ತೆಗೆದು ರಕ್ತ ಅಣುಗಳನ್ನೂ ವಿಷವನ್ನೂ ವಿಂಗಡಿಸುವರು. ಈ ವಿಂಗಡಿಸಿದ ವಿಷವನ್ನೇ ಸರ್ಪ ಕಚ್ಚಿದವರಿಗೆ ಉಪಯೋಗಿಸಿದಲ್ಲಿ ದಿವ್ಯ ಔಷಧಿಯಾಗಿ ಪರಿಣಮಿಸುವುದು. ಈ ಔಷಧಿಯಿಂದ ಮುಂಬಾಯಿಯಲ್ಲಿ ಹಲವು ಜನರು ಬದುಕಿಸಲ್ಪಟ್ಟರು

~~~~~

ದಕ್ಷಿಣ ಹಿಂದೂಸ್ಥಾನ.

~~~~~

ಬೆಂಗಳೂರಿನಲ್ಲಿ ನಡೆದ ಒಂದು ವಿಶೇಷವಾದ ವಿವಾಹ.—ಈ ತಿಂಗಳು [illegible]ನೇ ಸೋಮವಾರ ದಿನ ಬೆಂಗಳೂರು [illegible] ಅನಾಥಾಲಯದಲ್ಲಿ ಪೋಷಿಸಲ್ಪಟ್ಟಿದ್ದ ೧೫ ವಯಸ್ಸಿನ ಸ್ಮಾರ್ತರ ಕನ್ಯೆಯನ್ನು ಬೆಂಗಳೂರು ಹೆಡ್‌ಕ್ವಾರ್ಟರು ಪೋಲೀಸು ಇನ್ಸ್‌ಪೆಕ್ಟರು ಮ॥ ಸಾಲಿಗ್ರಾಂ ರಾಜಾರಾಯರಿಗೆ ಕೊಟ್ಟು ವಿವಾಹವನ್ನು ಬೆಳೆಯಿಸಲಾಯಿತು. ಕನ್ಯೆಯು ಮ॥ ಗೋಪಾಲಾಚಾರ್ಯರವರು ಮತ್ತು ಇವರ ಪತ್ನಿಯವರಿಂದ ಸುಪಂಥದಲ್ಲಿ ಸಾಕಲ್ಪಟ್ಟಿತು. ಅನಾಥರಲ್ಲಿ ಇವರುಗಳಿಗಿರುವ ವಿಶ್ವಾಸವು ಸ್ತೋತ್ರಾರ್ಹವಾದುದು. ಮಂದಿರದ ಹಿತಚಿಂತಕರಾದ ದಂಪತಿಗಳಿಂದ ಕನ್ಯಾದಾನಮಾಡಲ್ಪಟ್ಟಿತು. ವರನು ಪ್ರಸಿದ್ಧರಾದ ಅಡ್ವೋಕೇಟ್ ಸಾಲಿಗ್ರಾಮ ಸುಬ್ಬರಾಯರ ಕುಮಾರರಾಗಿದ್ದು ಮರ್ಯಾ ಉಳ್ಳ ಕುಟುಂಬಕ್ಕೆ ಸೇರಿದವರು. ರೂಪವತಿಯೂ ಮತ್ತು ಬುದ್ಧಿಮತಿಯಾದ ಈ ಕನ್ಯೆಗೆ ತಕ್ಕ ವರನನ್ನು ಹುಡುಕಲು ಹಿಂದೂಗಳಲ್ಲಿ ಪದ್ಧತಿ ಇರುವಂತೆ ಶ್ರೀಮನ್ ಗೋಪಾಲಾಚಾರ್ಯರವರು ಈ ವಿಷಯದಲ್ಲಿ ಬಹಳ ಶ್ರಮಪಟ್ಟರು. ವರದಕ್ಷಿಣೆ ಎಂಬ ಬಲೆಗೆ ಬೀಳದೆ ಮ॥ ಸಾಲಿಗ್ರಾಮ ರಾಜರವರು ಇನ್ನೂ ಅನೇಕ ಕಡೆಗಳಿಂದ ತಮಗೆ ಕನ್ಯೆಯನ್ನು ಕೊಡುವದಾಗಿದ್ದರೂ, ಈ ಅನಾಥ ಕನ್ಯೆಯನ್ನು ಮದುವೆಮಾಡಿಕೊಂಡು ನಿದರ್ಶಪ್ರಾಯರಾದರು. ಮದುವೆಯಲ್ಲಿ ಉತ್ತಮ ತರದ ಕನ್ಯೆಯರನ್ನೇ ವಿವಾಹ ಮಾಡಿಕೊಳ್ಳಬೇಕೆಂದು ಇಷ್ಟಪಡುವ ವಿದ್ಯಾರ್ಥಿಗೆಲ್ಲರಿಗೂ ಇವರ ನಿದರ್ಶನ ರೀತಿಯು ಅನುಸರಣೀಯವಾದುದು. ತಾಯಿತಂದೆಗಳಂತೆ ಅನಾಥರನ್ನು ಪೋಷಿಸಿ ಅವರ ಮುಂದಿನ ಜೀವನಕ್ಕೆ ತಕ್ಕ ಏರ್ಪಾಡುಗಳನ್ನು ಕಲ್ಪಿಸಿಕೊಡುವ ಇಂತಹ ಅನಾಥಾಲಯವು ಇನ್ನು ಯಾವದೂ ಇರುವುದಿಲ್ಲ. ಈಚೆಗೆ ಮೂವರು ಅನಾಥರು ಜೀವನಕ್ಕೆ ತಕ್ಕ ಕೆಲಸದಲ್ಲಿ ಸೇರಿಸಲ್ಪಟ್ಟರು.

~~~~~

ಮೈಸೂರಿಗೆ ಸೇರಿದ ಬಾಗೆಪಲ್ಲಿಯಲ್ಲಿ ಎಂಟು ವರ್ಷಗಳ ಹಿಂದೆ ಒಂದು ಪಂಚಮರ ಶಾಲೆ ಸರಕಾರದವರಿಂದ ಸ್ಥಾಪಿಸಲ್ಪಟ್ಟಿದ್ದಿತು. ಈ ಶಾಲೆಯಲ್ಲಿ ಹೊಲೆಯರ ಮತ್ತು ಮಾದಿಗರ ಬಾಲಬಾಲಿಕೆಯರು ಕೂಡಿ ಒಟ್ಟು ೭೭ ಮಂದಿ ಓದುತ್ತಲಿರುವರು. ಇವರಲ್ಲಿ ಇಬ್ಬರು ಹುಡುಗರೂ, ಒಬ್ಬ ಹುಡುಗಿಯೂ ಈ ಸಲ ನಡೆದ ಮೈಸೂರು ಲವರ್ ಸೆಕೆಂಡರಿ ಪರೀಕ್ಷೆಗೆ ಹೋಗಿರುತ್ತಾರೆ. ಈ ಹೊಲೆಯರ ಹುಡುಗಿ ಬಹಳ ಬುದ್ಧಿವಂತಳಾಗಿದ್ದು ಲವರ್ ಸೆಕೆಂಡರಿ ಪಾಸಾಗಿ ಚಿಕ್ಕ ಬಳ್ಳಾಪುರದ ಪಂಚಮರ ಶಾಲೆಯಲ್ಲಿ ಉಪಾಧ್ಯಾಯನಾಗಿರುವ ಯುವಕನನ್ನು ವಿವಾಹಮಾಡಿಕೊಳ್ಳತಕ್ಕವಳಾಗಿರುತ್ತಾಳೆ.

ಬೀಡಿ ಮತ್ತು ಸಿಗರೇಟ್ ಸೇದುವ ಅಭ್ಯಾಸವು ವಿದ್ಯಾರ್ಥಿಗಳಲ್ಲಿ ಹೆಚ್ಚಾಗುತ್ತಿರುವುದರಿಂದ ಅದಕ್ಕೆ ವಿರೋಧವಾಗಿ ಏನಾದರೂ ಕಾನೂನು ಮಾಡಬೇಕೆಂತ ಮದರಾಸಿನ ಆಯಾ ಸಂಘಗಳವರು ಮದರಾಸು ಸರಕಾರಕ್ಕೆ ಮಾಡಿಕೊಂಡ ಮನವಿಯು ಪ್ರಸ್ತಾಪವು ಕಳೆದ ಸಾರಿ ಕೂಡಿದ ಮದ್ರಾಸು ನ್ಯಾಯ ವಿಧಾಯಕ ಸಭೆಯ ಮುಂದೆ ತರಲ್ಪಟ್ಟಿತ್ತಷ್ಟೆ. ವಿದ್ಯಾರ್ಥಿಗಳು ಶಾಲೆಯಲ್ಲಿ ಯಾ ಆಟದ ಸ್ಥಳಗಳಲ್ಲಿ ಬೀಡಿ ಸಿಗರೇಟು ಸೇದದ ಹಾಗೆ ಕಟ್ಟುಮಾಡುವರೆ ಹುಕುಂ ಕೊಡಬೇಕೆಂದು ಸರಕಾರದವರು ಈ ಮೊದಲೇ ವಿದ್ಯಾಖಾತೆಯ ಡೈರೆಕ್ಟರರನ್ನು ಕೇಳಿಕೊಂಡಿದ್ದರು. ಈ ಹುಕುಮಿನಿಂದ ಹೆಚ್ಚಿನ ಪ್ರಯೋಜನವು ಬಂದಂತೆ ತೋರದ್ದರಿಂದ ಬರೋಡೆಯಲ್ಲಿರುವ ಈ ಸಂಬಂದವಾದ ಕಾನೂನಿನಂತಿರುವ ಒಂದು ನೋನ್‌ಆಫೀಸಿಯಲ್ ಬೀಲ್ಲನ್ನು ಬರುವ ನ್ಯಾಯ ವಿಧಾಯಕ ಸಭೆಯ ಮುಂದೆ ತರವರೆ ನಿರ್ಣಯಿಸಲ್ಪಟ್ಟಿರುವುದು

~~~~~

ಬೆಂಗಳೂರಲ್ಲಿ ಆರ್ನಿ ಜಹಗೀರದಾರರು ಮೋಟರ್ ಬಂಡಿ ಓಡಿಸುವಾಗ ಒಂದು ಗಾಡಿಗೆ ತಗಲಿ ಗಾಡಿ[illegible] ಸತ್ತುಹೋದುದರಿಂದ ಜಹಗೀರದಾರರ ಮೇಲೆ ಕ[illegible]ದ್ದಮೆ ಆಗಿತ್ತಷ್ಟೆ. ಮೇಜಿಸ್ಟ್ರೇಟರು ಜಹಗೀರದಾರರಿಗೆ [illegible]ಲಿನ ೧ನೇ ತಕ್ಸೀರಿಗೆ ರೂ. ೭೫೦ ಜುರುಮಾನೆ [illegible] ತಿಂಗಳ ಸಾಧಾರಣ ಸಜೆ; (ಜುರುಮಾನೆಯಿಂದ ರೂ. ೭೫೦ ಮೃತನ ವಿಧವೆಗೆ ಕೊಡಲ್ಪಡತಕ್ಕದ್ದು.) ಬೆಂಗಳೂರು ಮುನ್ಸಿಪಲ್ ಕಾನೂನಿನ ಮೇಲೆ [illegible] ಜುರುಮಾನೆ; ಆಕಸ್ಮಿತ ಸಂಬಂಧವಾದ ರೂ[illegible] ವರ್ಷ
~~~~~

ಗಳ ಕಾಠ ಮೊಟೊರ್ ಲ್ಯಾಸನ್ನು ಅಮಾನತು ಮಾಡಿಯದೆ ಎಂಬ ತೀರ್ಮಾನವನ್ನು ಕೊಟ್ಟರು.

ಕೊಕನಾಡದ ಅಮಲಪುರದಲ್ಲಿ ಜೂನ್ಯರ್ ಇಂಟರ್ ಮಿಡಿಯೆಟ್ ತರಗತಿಯಲ್ಲಿ ಓದುತ್ತಿದ್ದ ಒಬ್ಬ ಬ್ರಾಹ್ಮಣ ಹುಡುಗನು ವಿವಾಹವಾಗಿ ೪ನೇ ದಿವಸದಲ್ಲಿ ಜ್ವರದಿಂದ ವಿಧಿವಶನಾದನೆಂಬ ದುಃಖಕರವಾದ ವಾರ್ತೆ ಒಂದಿರುವುದು. ಮದುಮಗಳಿಗೆ ೯ ವರ್ಷ ವಯಸ್ಸು ಮಾತ್ರವಾಗಿರುವುದು. ಈ ಮರಣದಿಂದ ಸರ್ವ ಜನರ ಸಹ ಸಂತಾಪವು ಬಾಲವಿಧವೆಯ ಕಡೆಗೆ ಎಳೆಯಲ್ಪಟ್ಟಿರುವುದು. ಅವಳು ಪ್ರಾಯಕ್ಕೆ ಬರುವ ವರೆಗೆ ಅವಳನ್ನು ವಿಜಯಪಟ್ಟಣದ ಹೆಂಗಸರ ಶಾಲೆಗೆ ಕಳುಹಿಸಿ ವಿದ್ಯಾಭ್ಯಾಸಮಾಡಿಸುವುದು ಒಳ್ಳೆಯದೆಂತ ಒಬ್ಬ ಬಾತ್ಮೀದಾರರು ಅವಳ ಹೆತ್ತವರಿಗೂ ಸಂಬಂಧಿಕರಿಗೂ ಸಲಹೆ ಕೊಟ್ಟಿರುವರು.

ದಕ್ಷಿಣ ಕನ್ನಡ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. ನಂಬ್ರ 40/14

ಕಲ್ಯಾಣಿಬಾಯಿ ಕೂಡ ೩ ಜನರು—ಅರ್ಜಿದಾರರು.

ಮೇಲ್ಕಂಡ ಅರ್ಜಿದಾರಳಾದ ಉಡ್ಪಿಯಲ್ಲಿರುವ ಕಲ್ಯಾಣಿ ಬಾಯಿಯು ಮೃತಪಟ್ಟ ತನ್ನ ಗಂಡನಾದ ಲಕ್ಷ್ಮಣ ಛಟರ್ಜೀಯರ ಬಾಬ್ತು ಓರಿಯಂಟಲ್ ಗವರ್ನಮೆಂಟ ಸೆಕ್ಯುರಿಟಿ ಲೈಫ್ ಎಸ್ಯೂರೆನ್ಸ ಕಂಪೆನಿಯ ಪೋಲಿಸಿ ನಂಬ್ರ ೧೮೬೩ನೇಯ ೫೬೭೬೫ ಮತ್ತು ೫೬೭೬೬ನೇಯ ಐವಜನ್ನು, ತನ್ನ ಮ್ಯಾನರ ಮಕ್ಕಳಾದ ೨ನೇ ಉಮೇಶಾ ೩ನೇ ರಮೇಶ ಎಂಬವರ ಬಗ್ಗೆ ಕೂಡಾ ಪಡಿಯುವ ಬಗ್ಗೆ ವಾರಿಸ್ ಸರ್ಟಿಫಿಕೇಟನ್ನು ಕೊಡಬೇಕಾಗಿ ಸದರಿ ಮೇಲ್ಕಂಡ ಕೋರ್ಟಿಗೆ ಅರ್ಜಿ ಕೊಟ್ಟಿರುವ್ಪದರಿಂದ ಈ ಮೂಲಕ ಎಲ್ಲಾ ಜನರಿಗೆ ತಿಳಿಸುವದೇನಂದರೆ: ಸದರಿ ಅರ್ಜಿಯು ತಾ ೯-೬-೧೪ಕ್ಕೆ ತನಕಿಗೆ ಇಟ್ಟಿರುವ್ಪದರಿಂದ ಯಾರದಾದರೂ ಆಕ್ಷೇಪಣೆಗಳು ಇದ್ದರೆ ಆ ತಾರೀಕಿನ ಒಳಗೆ ಸದರಿ ಕೋರ್ಟಿಗೆ ಹಾಜರುಪಡಿಸಬೇಕು.

Mangalore, 27th March 1914. } **G. Krishna Rao** *Vakil for Petitioner*

ನೋಟೀಸು

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಕ್ರಮ ಅರ್ಜಿ ನಂಬ್ರ 11/14.

ರೆವರೆಂಡ ಫಾದರ್ } ಅರ್ಜಿ
ಎಮ್ ಲುನಾಜಿ ಎಸ್. ಜೆ } ದಾರ

ಮಂಗಳೂರು ಶಹರಿನಲ್ಲಿ ಕಳೆದ 1913ನೆ ಇಸವಿ ನವಂಬರ ತಾ 7ಲ್ಲು ಮೃತಪಟ್ಟ, ಮೇರಿ ಜೋಸೆಪೀನ್ ಕಾಮೆಲ್ಲಿನವರ ಉಯಿಲಿನ ಪ್ರೋಬೇಟನ್ನು ತನಗೆ ಕೊಡಬೇಕಾಗಿ ಅಪೇಕ್ಷಿಸಿ ಸದರಿ ಉಯಿಲಿನ ಎಕ್ಷಿಕ್ಯೂಟರ್ ರಾದ ಮೇಲ್ಕಂಡ ಅರ್ಜಿದಾರರು ಕೊಟ್ಟ ಸದರಿ ಅರ್ಜಿ ಬರುವ ಜೂನು ತಾ. 23ಕ್ಕೆ ಪೂರ್ವಾನ್ಹ 11ಘಂಟೆಗೆ ತನ್ಕಿಗೆ ಇಟ್ಟಿರುವದರಿಂದ ಆಕ್ಷೇಪಣೆ ಇದ್ದವರು ಅವರ ಆಕ್ಷೇಪಣೆಗಳನ್ನು ಸದರಿ ಕೋರ್ಟಿನಲ್ಲಿ ಕೆವಿಯಾಟ್ ಮೂಲಕ ಆ ತಾರೀಕಿಗೆ ಹ್ಯಾಜೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು } **P. D'Souza**
ತಾ. 19-1-1914 } *Pleader for Petitioner.*

ಸುರತ್ಕಲ್:—ಕಳೆದವಾರದಲ್ಲಿ ಮಂಗಳೂರಿನ ಶ್ರೀ ಜ್ಞಾನೋದಯ ಸಮಾಜದವರು ಹೊಸಬೆಟ್ಟು, ಗುಡ್ಡೆಕೊಪ್ಲ, ದೊಡ್ಡಕೊಪ್ಲ, ಮೊದಲಾದ ಸ್ಥಳಗಳಿಗೆ ಬಂದು, ಮೊಗೇರರ ಸಭೆಯನ್ನು ಕೂಡಿಸಿ ಮದ್ಯಪಾನ ನಿಷೇಧ ಪರನಾದ ಕಥಾ ಕೀರ್ತನ ಭಾಷಣಗಳನ್ನು ಮಾಡಿ ಈ ಪ್ರಾಂತ್ಯದ ಮೊಗೇರರೊಳಗೆ ಸುರಪಾನ ನಿಷೇಧಕ ಚಳುವಳಿಯನ್ನುಂಟುಮಾಡಿದರು. ಸುಮಾರು ಅರುವತ್ತಕ್ಕಿಂತ ಹೆಚ್ಚು ಮಂದಿ ತಮ್ಮ ಆಯುಷ್ಯಾಲದಲ್ಲೆಲ್ಲಾ ಸಂಪೂರ್ಣ ಮದ್ಯಪಾನ ವರ್ಜಿತಮಾಡುವ ಕಠಿಣ ವ್ರತವನ್ನು ಕೈಕೊಳ್ಳುವ ಕುರಿತು ಸಭೆಯ ಮುಂದೆ ಒಂದು ಶಪಥವನ್ನು ಹಾಕಿ ತಮ್ಮ ಹೆಸರನ್ನು ಕೊಟ್ಟರು. ಸುರತ್ಕಲ್ ಗ್ರಾಮದಲ್ಲಿ ಆದ ಇಂಥಾ ಒಂದು ಸಭೆಯಲ್ಲಿ ಸ್ಥಳೀಯ ಹಿಂದೂ ಪರಿಣ ಸಮಾಜದ ಕಾರ್ಯದರ್ಶಿಯರಾದ ರಾ! ಎಚ್ ವೆಂಕಟ್ರಮಣಯ್ಯನವರು ಅಧ್ಯಕ್ಷರಾಗಿದ್ದು ಚಿಕ್ಕೋ ಭಾಷಣವನ್ನು ಕೊಟ್ಟು ಸಮಾಜದವರ ಉದ್ದೇಶಗಳನ್ನು ಶ್ಲಾಘಿಸಿದರಲ್ಲದೆ ಮದ್ಯದಂಗಡಿಯಲ್ಲಿ ವ್ಯರ್ಥವಾಗಿ ದುರ್ವ್ಯಯ ಮಾಡಬೇಕಾದ ಸಮಯವನ್ನು ಮದ್ಯಪಾನ ವರ್ಜಿತ ಮಾಡುವವರೆಲ್ಲರೂ ಸದುಪಯೋಗಮಾಡಲನುಕೂಲವಾಗುವಂತೆ ಉಚಿತ ರಾತ್ರಿಶಾಲೆಯೊಂದನ್ನು ತೆರೆಯಲು ತಾನು ಸಿದ್ಧನಿರುತ್ತೇನೆಂದು ಸಹಾ ವಾಗ್ದತ್ತಮಾಡಿದರು.

ಬೊಳ್ಮ:—ಇಲ್ಲಿಯ ಮಿಶ್ಯನ್ ಉಪದೇಶಕರಿಗೆ ಭೂಮಿ ಆಡಳಿತೆ ಮತ್ತು ಮತಪ್ರಸಾರಣಾ ಕೆಲಸ—ಎರಡೂ ಕೊಡೋಣಾದ್ದರಿಂದ ಮತಪ್ರಸಾರಣಾ ಕೆಲಸಕ್ಕೆ ಇವರಿಗೆ ಆದಿತ್ಯವಾರವೂ ಸಮಯ ದೊರಕುವುದು ಕಷ್ಟವಾಗಿ ಒಂದಿದೆ. ಈ ವಿಷಯವನ್ನು ಮಿಶ್ಯನ್ ಮೇಲಾಧಿಕಾರಿಗಳ ಚಿತ್ತಕ್ಕೆ ತಂದು ಇವರಿಗೆ ಸಹಾಯಕರಾಗಿ ಇನ್ನೊಬ್ಬ ಉಪದೇಶಕರನ್ನು ಕೊಡುತ್ತಿದ್ದರೆ ಹಿತವಾಗುತ್ತಿತ್ತು.

ಇಲ್ಲಿ ಬಾಸೆಲ್ ಮಿಶ್ಯನಿನವರ ದೊಡ್ಡ ಭೂಮಿ ಇದೆ. ಈ ಭೂಮಿಯು ಮಿಶ್ಯನ್ ಸಾಹುಕಾರ ದೊರೆಗಳ ಮೇಲ್ವಿಚಾರಣೆಯಲ್ಲಿದ್ದ ಕಾಲದಲ್ಲಿ ಈ ಭೂಮಿಯಲ್ಲಿ ಕ್ರೈಸ್ತರೇ ಬೇಸಾಯಮಾಡಿ ಧನಿಯ ಗೇಣಿ ಧನಿಗೆ ಕೊಟ್ಟು ಉಳಿದುದರಲ್ಲಿ ತಮ್ಮ ಕುಟುಂಬ ಪೋಷಣೆ ಮಾಡುತ್ತಿದ್ದರು. ಆದರೆ ಈಗಿನ ಹೊಸ ಮೇಲ್ವಿಚಾರಣೆಯಲ್ಲಿ ಸುಮಾರು ೩೦-೪೦ ವರ್ಷಗಳಿಂದ ಅದೇ ಭೂಮಿಯಲ್ಲಿ ಬೇಸಾಯ ಮಾಡುತ್ತಿದ್ದ ಕೆಲವು ಕ್ರೈಸ್ತರನ್ನು ಯಾವುದೋ ಕಾರಣದಿಂದ ಒಕ್ಕಲು ತೆಗೆದು ಹೋಯಿತಂತೆ. ಆದುದರಿಂದ ಕಳೆದ ವಾರ ಇಲ್ಲಿಯ ೪ ಕ್ರೈಸ್ತಕುಟುಂಬಗಳಿಗೆ ಸೇರಿದ ಸುಮಾರು ೭೦ ಮಂದಿ ಕ್ರೈಸ್ತರು ಕ್ರೈಸ್ತಮತವನ್ನು ಬಿಟ್ಟು ಮಂಗಳೂರಿನ ರೋಮನ್ ಕೆಥೋಲಿಕ ಪಾದ್ರಿಗಳ ಬಳಿಗೆ ಹೋಗಿ ತಮ್ಮ ಕಾರ್ಯವನ್ನು ಹೇಳಿಕೊಂಡು ರೋಮನ್ ಕೆಥೋಲಿಕ ಮತವನ್ನವಲಂಬಿಸಿದರು. ಈ ಮತಾವಲಂಬಿಗಳಿಗೆ ರೋಮನ್ ಕೆಥೋಲಿಕ ಪಾದ್ರಿಗಳು ಅಮ್ಮಾಡಿಯಲ್ಲಿರುವ ತಮ್ಮ ಭೂಮಿಯಲ್ಲಿ ಸ್ಥಳಗಳನ್ನು ಕೊಟ್ಟು ವ್ಯವಸಾಯಮಾಡಲು ಕಳುಹಿಸಿಕೊಟ್ಟಿರುವರೆಂಬ ವಾರ್ತೆಯು ಇಲ್ಲಿಗೆ ತಲುಪುತ್ತಲೇ ಇನ್ನೂ ಹಲವು ಕ್ರೈಸ್ತಕುಟುಂಬಗಳು ರೋಮನ್ ಕೆಥೋಲಿಕ ಮತವನ್ನೇ ಸೇರಿಕೊಳ್ಳುವರೆ ಮಂಗಳೂರಿಗೆ ಬಿಷೋಪರ ಬಳಿಗೆ ಹೋಗುವ ಆಲೋಚನೆ ಮಾಡಿರುವರೆಂಬ ಗುಜುಗುಜು ವಾರ್ತೆ ಇದೆ.

ಬಂಟ್ವಾಳ:—ಇಲ್ಲಿಗೆ ಇನ್ನೆರಡು ಲಾಟಾನು ಕಂಭಗಳನ್ನು ಇಡಿಸುವರೆ ಸೆಂಕ್ಷನು ಕಳೆದ ಬಜೇಟಿನಲ್ಲಿ ಆಗಿಯೇ ಇದ್ದರೂ, ಈ ತನಕ ಆ ದೀಪಗಳು ಇಲ್ಲಿಗೆ ಮುಟ್ಟದೇ ಇದ್ದದು ಯಾವ ದೆಶೆಯಿಂದಲೆಂಬುದು ಈ ತನಕ ತಿಳಿದಿಲ್ಲ. ಅದು ಸಾಲದೆಂಬಂತೆ,--ಅಯ್ಯನಾಯ್ಕನ ಇಕ್ಕಟ್ಟಾದ ಓಣಿಯಲ್ಲಿರುವ ಕುಂಬಾದ ಕಂಭದ ಮೇಲಿರುವ ದೀಪವನ್ನೂ,—ಕಂಭವನ್ನು ಹಿಂದೆ ಬಿಟ್ಟು,—ಎಲ್ಲಿಗೋ ವೈದಿದ್ದಾರೆ!

ರಾಯಿಯಿಂದ ಮುರ್ಜೆಗೆ ಹೋಗುವ ಮಾರ್ಗವು ಕಳೆದ ಬಜೇಟಿನಲ್ಲಿ ಸೆಂಕ್ಷನಾದಂತೆ ತಿಳಿದೆವು. ಸಂತೋಷವಾಯಿತು. ಮಾನ್ಯ ಕಲೆಕ್ಟರರು ಇದಕ್ಕೆ ಮೊದಲೊಮ್ಮೆ ಹೊಸ ಕಾಮಗಾರಿಗಳ ವಿಷಯ ಪ್ರಕಟಿಸಿದ ನೋಟೀಸಿನಲ್ಲಿ ಕಾಣಿಸಿದ ಶರ್ತಗಳೆಲ್ಲವನ್ನೂ ಈ ಹೆದ್ದಾರಿಯು ಪೂರೈಸಿಕೊಂಡೇ ಇದೆ. ಹಾದಿಯು ಹದಿಮೂರು ಹಳ್ಳಿಗಳನ್ನು ದಾಟಿ ಹೋಗುವುದು. ಪ್ರತಿಯೊಂದು ಹಳ್ಳಿಯ ಜನಗಳು ತಕ್ಕಷ್ಟು ಕಷ್ಟಪಟ್ಟು ತಮ್ಮ ತಮ್ಮ ಗ್ರಾಮದ ಪಟ್ಟಿಗೆ ಅದನ್ನು ಸುರಕ್ಷಿತಪಡಿಸಿರುವರು. ಆದುದರಿಂದ ಅದರ ಕೆಲಸವನ್ನು ಬೋರ್ಡಿನವರು ಮುಂದರಿಸುವುದಾದರೆ, ಹದಿಮೂರು ಹಳ್ಳಿಗಳ ನಿವಾಸಿಕರಿಗೆ ಉಪಕಾರವುಂಟುಮಾಡಿದ ಪುಣ್ಯವು ಅವರಿಗೆ ಬಾರದಿರದು. ಈಗ ಬೋರ್ಡಿನವರು ಅಲ್ಪ ಸ್ವಲ್ಪ ಕಾಮಗಿರಿ ನಡಿಸಿದರೆ ಮಾರ್ಗವು ತಾನಾಗಿ ಚೆನ್ನಾಗುವುದು.

ತಾ ೨೪ರಲ್ಲಿ ಇಲ್ಲಿಯ ಬಾರೂದು ಲ್ಯಾಸನ್ಸನ್ನು ಹೊಂದಿ ಪದ್ಮರಾಜ ಶೆಟ್ಟಿಯೂ ಮತ್ತೊಬ್ಬ ಹೆಂಗಸು ಬಾರೂದನ್ನು ಮಿಶ್ರಣ ಮಾಡಿ ಪುಡಿ ಮಾಡುತ್ತಲಿರುವಾಗ ಅದಕ್ಕೆ ಬೆಂಕಿ ತಗಲಿ ಇವರಿಬ್ಬರೂ ಪೈಸುಟ್ಟುಕೊಂಡರು. ಸೂಕ್ತ ಉಪಚಾರವು ಯಥೇಷ್ಟವೇ ಆಗಿದ್ದರೂ ಇಬ್ಬರೂ ರಾತ್ರಿಯಲ್ಲೇ ಮಡಿದು ಹೋದರು.

ಸಜೀಪ ಕಟ್ಟಿನ ಸಂಕದಡಿಯಿಂದ ಹೊಳೇ ನೀರನು ಕೋಳಕೆ ಬೇಸಾಗವಳಿ ಜಿಗ್ಯೆ ಒಯ್ಯುವದು ಸಂಕದ ಕುಂದಗಳಿಗೆ ಅಪಾಯಕರವಾಗಿದೆಯೆಂಬ ನೆಪದ ಮೇಲೆ ಇನ್ನು ಮುಂದೆ ನೀರನ್ನು ಒಯ್ಯಲು ಬಿಡಬಾರದೆಂದು ಡಿಪ್ಯೂಟಿ ಕಲೆಕ್ಟರರ ಹುಕುಂ ಬಂದಿದೆ. ಇದರಿಂದ ಸುತ್ತಲಿರುವ ದೇವಸ್ಥಾನದ ವ ಇತರ ಭೂಮಿಗಳಲ್ಲಿ ಮೊದಲೇ ಕಷ್ಟಸಾಧ್ಯವಾದ ಕೋಳಕೆ ಸಾಗುವಳಿಯು ಇನ್ನು ಅಸಾಧ್ಯವೇ ಆಯಿತು ಸಂಕದ ಕುಂಭಗಳು ದೂರದಲ್ಲೆ ಇದ್ದು ಕಮಾನಿನ ಮಧ್ಯೆ ಒಂದು ಹೊಂಡವನ್ನು ತೋಡಿ ಅದರಿಂದ ನೀರನ್ನು ಯಾತದಿಂದಲೇ ಅಲ್ಲಿಂದ ಪುನಹ ಯಾತದಿಂದಲೇ ಗದ್ದೆಗೆ ಸಾಗಿಸುವ ಕಷ್ಟ ಕೆಲಸವನ್ನು ಮಾಡುತ್ತಿದ್ದರಾದರೂ ಬೆಳೆಯಾಗುತ್ತಿತ್ತು. ಆದರೆ ಬೇಸಾಯಿಗಳಿಗೆ ಈಗ ನೀರೇ ದೊರಕದಂತಾಯಿತು. ಈ ವಿಷಯವನ್ನು ಚೆನ್ನಾಗಿ ಬೋರ್ಡಿನವರು ಪರಾಂಬರಿಸುವರೆಂತ ನಂಬುತ್ತೇವೆ.

ಇಲ್ಲಿಗೆ ಎರಡು ಮೈಲು ದೂರವಾಗಿರುವ ಸ್ಥಳದಲ್ಲಿ ಅಪ್ರಯೋಜಕವಾಗಿದ್ದ ಒಂದು ಸಂತೇ ಏರ್ಪಾಡನ್ನು ಬೋರ್ಡಿನವರು ರದ್ದುಮಾಡಿರುವುದು ವಿಹಿತವೇ ಆಗಿರುವುದು.

ಕುಂಬಳೆ:—ಕೋಓಪರೇಟಿವ್ ಕ್ರೆಡಿಟ್ ಸೊಸೈಟಿ ಎಂಬ ಪರಸ್ಪರ ಸಹಾಯಕ ಸಂಘವನ್ನು ಇಲ್ಲಿ ಸ್ಥಾಪಿಸುವರೆ ಪುತ್ತೂರಿನ ವಕೀಲರಾದ ಮ! ರಾ! ರಾ! ಎಚ್. ಗಣಪತಿರಾವ್; ಕಾಸರಗೋಡಿನ ವಕೀಲರಾದ ಮ! ರಾ! ರಾ!

ಎಚ್, ಶ್ರೀನಿವಾಸ ಕಾಮತ್, ಮ। ರಾ। ರಾ। ಕೆ. ನರಶಿಂಗ ನಾಯುಕ್; ಇವರುಗಳು ಇದೇ ತಾ ೨೧ರಲ್ಲು ಇಲ್ಲಿಯ ಊರ ಗ್ರಹಸ್ಥರನ್ನು ಸಭೆ ಕೂಡಿಸಿ ಈ ಸಂಘದಿಂದ ಸಿಕ್ಕುವ ಪ್ರಯೋಜನಗಳನ್ನು ವಿವರಿಸಿದ ನಂತರ ಕೂಡಿದವರಲ್ಲಿ ಸುಮಾರು ೨೫ ಮಂದಿ ಮೆಂಬರರಾಗುವರೆ ಸಮ್ಮತಿಸಿದರು. ಇನ್ನು ಅನೇಕರು ಸಹ ಇದನ್ನು ಪ್ರೋತ್ಸಾಹಿಸುವರೆ ಸಂತೋಷ ಪಟ್ಟಿರುತ್ತಾರೆ. ಈ ಸಂಘವು ರಿಜಿಸ್ಟ್ರಿಯಾಗಿ ಇಲ್ಲಿ ಸದ್ಯದಲ್ಲೇ ಪ್ರಾರಂಭಿಸಲ್ಪಡುವುದು

ಇಲ್ಲಿಯ ಪಂಚಮರಿಗೆ ವಸತಿಗೆ ಸ್ಥಳವಿಲ್ಲದಿರುವದನ್ನು ಮಾನ್ಯ ಕಲೆಕ್ಟರ್ ದೊರೆಗಳವರು ಪರಾಂಬರಿಸಿ ಸ್ಥಳಗಳನ್ನು ದಯಪಾಲಿಸಿದ್ದರು. ಈಗ ಇವರಿಗೆ ಬೋರ್ಡಿನವರು ಪ್ರತ್ಯೇಕ ಒಂದು ಭಾವಿಯನ್ನು ಸಹ ಕಟ್ಟಿಸಿ ಕೊಟ್ಟಿರುವುದು ಮಹದುಪಕಾರವಾಗಿಯದೆ

~~~~~

ಬೆಳ್ತಂಗಡಿ—ಇಲ್ಲಿಯ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾದ ಮ। ರಾ। ರಾ। ವಿ ಪದ್ಮಪ್ಪನವರು ಒಳ್ಳೇ ಚಟುವಟಿಕೆಯಿಂದ ತನ್ನ ಕೆಲಸವನ್ನು ನಡಿಸುತ್ತಾರಾದ್ದರಿಂದ ಊರಿನಲ್ಲಿರುವ ಠಾಕಪೋಕರಿಗೆ ಸ್ವಲ್ಪ ಬಯಕ್ಕೆ ಆಸ್ಪದವಾಗಿರುತ್ತದೆ ಈ ಊರು ಸಣ್ಣದಾಗಿದ್ದರೂ ಅನೇಕ ತರದ ಯುಕ್ತಿ ನಡಿಸಿ ಅನ್ಯಾಯ ಮಾಡುವವರು ಹೆಚ್ಚು ಜನರು ಇರುತ್ತಾರೆಂಬದಕ್ಕೆ ಅನುಮಾನವಿಲ್ಲ ಈ ತರದಲ್ಲಿ ಊರವರಿಗೆ ಉಪದ್ರವಾಗಿರುವ ಕೆಲವು ಜನರನ್ನು ಇಲ್ಲಿಯ ಸಬ್ ಇನ್ಸ್‌ಪೆಕ್ಟರರು ತಲಾಶಿ ಮಾಡಿ ತಕ್ಕ ಜಾಮೀನು ಪತ್ರೆ ಮಾಡರಕ್ಕೆ ಪ್ರಯತ್ನಿಸುತ್ತಿದ್ದಾರೆಂಬದನ್ನು ನೋಡುವಾಗ ತುಂಬಾ ಸಂತೋಷಪಡುತ್ತೇವೆ ಇದಲ್ಲದೆ ಕೆಲವು ಜನ ಹೊಲೆಯರು ಅಲ್ಲಲ್ಲಿ ಕುಡಿದು ಬಿದ್ದು ಲೂಟಿ ಮಾಡುವವರನ್ನು ಸಹಾ ಇವರು ತಕ್ಕ ಶಿಕ್ಷೆಗೆ ಗುರಿಪಡಿಸಿದ್ದರಿಂದ ಇವರ ತಂಟೆ ಸಹ ಕಮ್ಮಿಯಾಗುತ್ತಿದೆ ನಮ್ಮ ಇನ್ಸ್‌ಪೆಕ್ಟರರ ಈ ಎಲ್ಲಾ ಕೃತ್ಯಗಳು ಶ್ಲಾಘನೀಯವಾದದ್ದು ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ

ದಯವಿಟ್ಟು ಸರಕಾರದವರು ಈ ಮೂಡು ಪ್ರಾಂತ್ಯದಲ್ಲಿಯೂ ಕೆಲವು ಗ್ರಾಮಗಳಲ್ಲಿ ಎಲಿಮೆಂಟರಿ ಶಾಲೆಗಳನ್ನು ತೆರೆದು ಬಡ ಹುಡುಗರಿಗೆ ವಿದ್ಯಾದಾನ ಮಾಡ ಬೇಕಾಡುತ್ತಿದ್ದಾರೆಂಬದಕ್ಕೆ ನಾವೆಲ್ಲರೂ ಕೃತಜ್ಞರಾಗಿರುತ್ತೇವೆ. ಇದರಂತೆ ಕೆಲವು ಸರಕಾರಿ ನೌಕರರೂ ಇರುವ ಸ್ಥಳವಾದ ಬೆಳ್ತಂಗಡಿಯಲ್ಲಿಯೂ ಒಂದು ಒಳ್ಳೇ ಶಾಲೆಯಿರುತ್ತಿದ್ದರೆ ಬಹಳ ಉಪಕಾರವಿತ್ತು. ಈಗ ಸದ್ಯ ಇಲ್ಲಿ ಇರುವ ಶಾಲೆಯ ಸ್ಥಿತಿಯನ್ನು ನೋಡಿದರೆ ಇದರಲ್ಲಿ ಹುಡುಗರನ್ನು ತಕ್ಕ ರೀತಿ ತರಬೇತು ಮಾಡಲಿಕ್ಕೆ ತಕ್ಕ ಮೆಹನತ್ತು ತಕ್ಕೊಳ್ಳುವ ಹೆಡ್ ಮಾಸ್ತರರು ಇಲ್ಲದಿರುವದರಿಂದ ಹುಡುಗರು ಜ್ಞಾನದಲ್ಲಿ ಅಭಿವೃದ್ಧಿ ಹೊಂದುವರೆ ಉಪಾಯವಿಲ್ಲ. ಬೆಳ್ತಂಗಡಿ ಶಾಲೆಗೂ ಒಬ್ಬ ಬುದ್ಧಿವಂತ ಯೋಗ್ಯ ಹೆಡ್ ಮಾಸ್ತರನನ್ನು ಲೋಕಲ್ ಬೋರ್ಡಿನವರು ಒದಗಿಸಿ ಕೊಡುತ್ತಿದ್ದರೆ ಹುಡುಗರೂ ಊರವರೂ ಈ ಉಪಕಾರವನ್ನು ಮರೆಯಲಿಕ್ಕಿಲ್ಲ ಎಂದು ನಂಬುತ್ತೇವೆ.

~~~~~

ಮಂಗಳೂರು.

~~~~~

ಇದೇ ಮೇ ತಿಂಗಳ ತಾ ೨೦ರಿಂದ ಡ್ಯೂಪಿಟಿ ತಹಸೀಲದಾರ ರಾ। ಅನಂತನ್ ನಾಯರರವರಿಗೆ ೨ ತಿಂಗಳ ಪ್ರಿವೆಲೆಜ್ ರಜೆ ಕೊಡಲ್ಪಟ್ಟಿರುವುದು.

ಡ್ಯೂಪಿಟಿ ತಹಸೀಲದಾರ ರಾ। ಅನಂತನ್ ನಾಯರರ ಸ್ಪೆಶ್ಯಲ್ ಡ್ಯೂಟಿ ತೀರಿದ ನಂತರ ಹೊಸದುರ್ಗದ ಡ್ಯೂಪಿಟಿ ತಹಸೀಲದಾರರಾಗಿ ಕೆಲಸ ನೋಡಬೇಕಾಗುವುದು

ಜಿಲ್ಲಾ ಕಲೆಕ್ಟರ ದೊರೆಗಳವರು ಇದೇ ತಾ. ೨೬ ಬಂಟ್ವಾಳ, ತಾ ೨೭ ಮಂಗಳೂರು, ತಾ ೨೮-೩೦ ಸುರತ್ಕಲ್, ತಾ ೩೧ ಬಜ್ಪೆ, ಜೂನು ತಾ ೧ ಬಜ್ಪೆ, ತಾ ೨ ಮಂಗಳೂರು ಈ ರೀತಿ ಸರ್ಕೀಟು ಬೆಳಸುವರು.

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ಇದೇ ತಿಂಗಳ ತಾ ೨೫ರಲ್ಲು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ ಕೂಡಿಬಂತು. ಮಳೆಗಾಲದ ಮಾರ್ಗ, ಸಂಕ ಇತ್ಯಾದಿಗಳ ದುರುಸ್ತಿ ಬಗ್ಗೆ ಡಿಸ್ಟ್ರಿಕ್ಟ್ ಬೋರ್ಡ ಇಂಜಿನಿಯರರಿಂದ ಕಳುಹಿಸಲ್ಪಟ್ಟ ಅಂದಾಜು ಪಟ್ಟಿಗಳು ಈ ಸಭೆಯಲ್ಲಿ ಮಂಜೂರಾದವು ಜಾಲ್ಸೂರು ಸುಬ್ರಮಣ್ಯ ರಸ್ತೆಗಳನ್ನು ರುತ ಪಡಿಸುವರೆ ೧೦೦೦ ರೂಪಾಯಿಗಳ ಸೆಂಕ್ಷನು ಆಗಿರುವುದು ಡಿಸ್ಟ್ರಿಕ್ಟ್ ಬೋರ್ಡು ಕೆಲಸ ನೌಕರರು ತಮಗೆ ಮಂಗಾಯಿ ಬತ್ತೆ ಕೊಡಬೇಕೆಂದು ಮಾಡಿಕೊಂಡ ಮನವಿಯು ಸಭೆಯು ಮುಂದೆ ತರಲ್ಪಟ್ಟು ಮಾರ್ಚ ಎಪ್ರೀಲ್ ತಿಂಗಳಿಗೆ ಮಂಗಾಯಿ ಭತ್ತೆಯು ಕೊಡಬಹುದೆಂತ ಮಂಜೂರಾಯಿತು. ಉಡ್ಪಿ ಕಲ್ಲಸಂಕದ ಸುರಂಗ ಮಾರ್ಗದ ಸೇತುಬಂದವನ್ನು ಗಟ್ಟಿ ಡಕ್ಕಿನಿಂದ ಬಲಕಾಯಿಸಿ ಪುನರೂಪಿಸುವರೆ ರೂ ೬೪೫೦ ಸೆಂಕ್ಷನ್ ಆಗಿರುವುದು ಮೊಬಲಗಿನಲ್ಲಿ ೧೦೦೦ ರೂಪಾಯಿ ಈ ವರ್ಷದ ಬಜೆಟಿನಿಂದಲೂ ಉಳಿದ ೫೪೫೦ ರೂಪಾಯಿ ಕಮರಾಲ ಸೇತು ಕಟ್ಟುವರೆ ಸೆಂಕ್ಷನ್ ಮಾಡಿದ ಹಣದಿಂದಲೂ ಕೊಡಲ್ಪಡುವುದು

ಇಲ್ಲಿಯ ಸೈಂಟ್ ಏನ್ಸ್ ಗರ್ಲ್ಸ ಹ್ಯಾಸ್ಕೂಲಿಗೆ ಸ್ಥಳಗಳನ್ನು ಪಡಕೊಳ್ಳುವರೆ ಬೇಕಾದ ರೂ ೬,೪೪೦ರಲ್ಲಿ ಅರೆವಾಸಿಯಾದರೂ ೩,೨೨೦ಕ್ಕೆ ಹೆಚ್ಚಾಗದ ಮೊಬಲಗನ್ನು ಸರಕಾರದವರು ಕೊಡಲು ಸಮ್ಮತಿಸಿರುವರು.

ಇದೇ ತಾ ೨೦ನೇ ಬುಧವಾರ ಬೆಳಿಗ್ಯೆ ೧೦ ಗಂಟೆಗೆ ಒಬ್ಬ ಜಟ್ಕಾ ಡ್ರ್ಯಾವರನು ಬಹು ಜೋರಾಗಿ ಜಟ್ಕಾ ಓಡಿಸಿಕೊಂಡು ಹೋಗುತ್ತಿರುವಾಗ ರಥಬೀದಿಯಲ್ಲಿ ಈ ಜಟ್ಕಾ ಬಂಡಿಯ ಅಡಿಗೆ ಸುಮಾರು ೮—೧೦ ವರ್ಷ ವಯಸ್ಸಿನ ಹುಡುಗಿಯೊಂದು ಬಿದ್ದು ನಜ್ಜುಗುಜ್ಜಾಗುವ ಸಂಭವವಿತ್ತು. ಹುಡುಗಿಯು ಗಾಡಿಯ ಅಡಿಗೆ ಬಿದ್ದರೂ ದೈವವಶಾತ್ ಸ್ವಲ್ಪ ಜಖಂ ಆಯಿತಲ್ಲದೆ ಹೆಚ್ಚಿನ ಪೆಟ್ಟಾಗಲಿಲ್ಲ. ಹುಡುಗಿಯು ಗಾಡಿಯ ಅಡಿಗೆ ಬಿದ್ದಾಕ್ಷಣ ಗಾಡಿಯವನು ಏನೊಂದೂ ಲಕ್ಷ್ಯಮಾಡದೆ ಗಾಡಿಯನ್ನು ಓಡಿಸಿಯೇ ಬಿಟ್ಟನು. ಈ ಅವಗಡವನ್ನು ನೋಡಿದ ದಾರಿಗರು ಅವಗಡ ಸಂಭವಿಸಿದ ಸ್ಥಳದಿಂದ ಸುಮಾರು ಕಾಲು ಫರ್ಲಾಂಗ್ ದೂರದಲ್ಲಿ ಗಾಡಿಯನ್ನು ಹಿಡಿದು ನಿಲ್ಲಿಸಿಬಿಟ್ಟು ಪೋಲಿಸಿನವನನ್ನು ಹುಡುಕ್ಯಾಡಿ ವರದಿ ಮಾಡಿದರು ಗಾಡಿಯವನ ಬಿಲ್ಲೆ ನಂಬ್ರ ೨೬೦, ಗಾಡಿ ಲ್ಯಾಸನ್ಸ್ ನಂಬ್ರ ೩೫೧೪ ಈ ಗಾಡಿ ಹೊಡೆಯುತ್ತಿದ್ದವನು ಕೇವಲ ಚಿಕ್ಕ ವಯಸ್ಸಿನವನು. ಇಂತಹರಿಗೆ ಮುನಿಸಿಪಾಲಿಟಿಯವರು ಲ್ಯಾಸನ್ಸು ಕೊಡುವುದಾದರೆ ಅಪಘಾತಗಳು ಹೆಚ್ಚುವುದರಲ್ಲಿ ಅನುಮಾನವೇಕೆ?

ರಾ ಪಿ ಎನ್ ಕೃಷ್ಣರಾಯರು ಪ್ರಿವಿಲೆಜ್ ರಜೆಯು ತೀರಿದ ನಂತರ ಮಂಗಳೂರು ಟೌನ್ ಸಬ್ ಮೇಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟಿರುವರು.

ರಾ। ಪಿ ಎನ್ ಕೃಷ್ಣರಾಯರು ಚಾರ್ಜು ತಕ್ಕೊಂಡ ನಂತರ ರಾ। ಎಸ್. ಬಾಬುರಾಯರು ಕಾಸರಗೋಡು ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಇಲ್ಲಿಯ ಕೆನರಾ ಹ್ಯಾಸ್ಕೂಲಿನಲ್ಲಿ ಸಾಯನ್ಸ್ ಟೀಚರರಾಗಿದ್ದ ರಾ। ಅರ್ಕಳ ಶ್ರೀನಿವಾಸರಾವ್ ಬಿ. ಎ. ಎಲ್. ಟಿಯವರು ಕಳೆದ ಆದಿತ್ಯವಾರ ವಿಧಿವಶರಾದರೆಂಬದನ್ನು ತಿಳಿಸಲು ವಿಷಾದಿಸುತ್ತೇವೆ. ರಾ। ಶ್ರೀನಿವಾಸರಾಯರ ಗಂಟಲಲ್ಲಿ ಆದ ಒಂದು ಕುರುವನ್ನು ಕಳೆದ ಶನಿವಾರ ದಿವಸ ಶಸ್ತ್ರ ಚಿಕಿತ್ಸೆ ಮಾಡಲಾಯಿತು. ಇದರಿಂದುಂಟಾದ ಬಲಹೀನತೆಯೇ ಇವರ ಮರಣಕ್ಕೆ ಕಾರಣವಾಯಿತೆಂಬದಾಗಿ ತಿಳಿಯುತ್ತೇವೆ

ಇದೇ ತಿಂಗಳ ತಾ ೩೧ನೇ ಆದಿತ್ಯವಾರ ಪ್ರಾತಃಕಾಲ ೭॥ ಘಂಟೆಗೆ ಮಂಗಳೂರು ಬ್ರಹ್ಮ ಮಂದಿರದಲ್ಲಿ ರಾ। ಕುದ್ಮುಲ ರಂಗರಾಯರು ದೇವಾರಾಧನೆ ಮತ್ತು ಉಪನ್ಯಾಸ ನಡಿಸುವರು.

ಉಪನ್ಯಾಸದ ವಿಷಯ—ಶ್ರೇಷ್ಠ ಜನಾಂಗಗಳ ಉದ್ಧರಣೆಯ ಪ್ರಾಮುಖ್ಯ ಕಾರಣವು

ದಕ್ಷಿಣ ಕನ್ನಡಾ ಸೆಂಟ್ರಲ್ ಕೋಆಪರೇಟಿವ್ ಬೇಂಕಿನವರು ಮಂಗಳೂರಿನ ಮದ್ರಾಸು ಬೇಂಕಿನಲ್ಲಿ ಚಾಲ್ತಿ ಠೇವಣಾತಿಯನ್ನು ಶುರು ಮಾಡುವದೆಂತ ನಿರ್ಣೈಸಿದ್ದಾರೆ. ಇದರಿಂದ ಪುತ್ತೂರಲ್ಲಿರುವ ಸದರಿ ಕೋಆಪರೇಟಿವ್ ಬೇಂಕಿನಲ್ಲಿ ಠೇವಣಾತಿಗಳನ್ನು ನಗ್ದರೆ ಇಡಲು ಅಪೇಕ್ಷಿಸುವ ಮಂಗಳೂರು ನಿವಾಸಿಕರಿಗೆ ಅತಿ ಅನುಕೂಲವಾಗುವುದು. ಇನ್ನು ಮುಂದೆ ಅಂತಹ ಠೇವಣಾತಿಗಳು ಅನೇಕ ಒಂದಾವೆಂದು ಕೋರುತ್ತೇವೆ

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨ ಪ್ಲೇಗ ಮರಣಗಳಿದ್ದವು

ಮಂಗಳೂರು ಮುನ್ಸಿಪಲ್ ಬೋರ್ಡಿಗೆ ಒಳಪಟ್ಟ, ಬೋಳಾರ, ಅತ್ತಾವರ, ಮತ್ತು ನಿರೇಶ್ವಾಲ್ಯ ಈ ಮೂರು ಶಾಲೆಗಳಲ್ಲಿ ೧೯೧೪ನೇ ಇಸವಿ ಎಪ್ರಿಲ್ ತಿಂಗಳಿನಿಂದ ವಿದ್ಯೆಯಲ್ಲಿ ಹಿಂದುಳಿದ ಜಾತಿಯ ಮಕ್ಕಳಿಗೆ ಶಾಲಾ ದಸ್ತೂರಿ ಪೂರಾ ಮಾಫಿಯಾಗಿ ಕಲಿಸುವರೆಯೂ ವಿದ್ಯೆಯಲ್ಲಿ ಹಿಂದುಳಿದ ಜಾತಿಯ ಮತ್ತು ಇತರ ಜಾತಿಯ ಅನಾಥ ಮಕ್ಕಳಿಗೆ ಸ್ಲೇಟು ಪುಸ್ತಕ ಸಹ ಧರ್ಮಾರ್ಥವಾಗಿ ಕೊಟ್ಟು, ಕಲಿಸುವರೆಯೂ ಮುನ್ಸಿಪಾಲ್ ಚೇಯರ್‌ಮೇನರಿಂದ ಹುಕುಂ ಆಗಿರುವುದು

ಗಣಪತಿ ದೇವಸ್ಥಾನದ ಅರ್ಚಕ ಮತ್ತು ಮೊಕ್ತೇಸರರಾದ ರಾ। ಸುಬ್ಬಣ್ಣ ಶಾಸ್ತ್ರಿಗಳು ಇದೇ ತಾ ೨೬ನೇ ಮಂಗಳವಾರ ಗುಂಡಿಗೆರೋಗದಿಂದ ಅಕಸ್ಮಿತ ಮರಣಪಟ್ಟರೆಂಬದನ್ನು ತಿಳಿಸಲು ವಿಷಾದಿಸುತ್ತೇವೆ

ಕಲೆಕ್ಟರ್ ಆಪೀಸಿನ ೩ನೇ ಅಕೌಂಟಾಂಟರಾಗಿರುವ ರಾ। ವಶ್ಯಾಡಿ ವೆಂಕಟರಾಯರು ಇತರ ಡ್ಯೂಟಿಯ ಮೇಲಿರುವುದರಿಂದ ಅವರ ಬದಲಿಗೆ ಕರಸ್ಪೊಂಡೆಂಟ್ ಸೆಕ್ಷನಿನ ೪ನೇ ಕ್ಲಾರ್ಕ ರಾ। ಎನ್ ಕೃಷ್ಣಪ್ಪನವರೂ ಇವರ ಬದಲಿಗೆ ಕರಸ್ಪೊಂಡೆಂಟ ಸೆಕ್ಷನಿನ ೫ನೇ ಕ್ಲಾರ್ಕ ರಾ। ಎಚ್ ಅನಂತಯ್ಯನವರು ೪ನೇ ಕ್ಲಾರ್ಕರಾಗಿಯೂ ರಾ। ಎಮ್. ಸುಬ್ಬರಾಯರು ೫ನೇ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು. ಈ ನೇಮಕದ ಜ್ಯಾರಿಯು ರಾ। ಕೆ ಪಿ ಕಿಣಿಯವರು ರಜೆಯಿಂದ ಹಿಂದೆರಳಿದನಂತರ ಜಾರಿಗೆ ಬರುವುದು.

ಕಳೆದ ವಾರ ಪಟ್ಟಣದೊಳಗೆ ೩-೪ ಕಳವುಗಳವುವು. ಪಳನೀರ ರಸ್ತೆಯ ಸಮೀಪ, ಮಾರ್ಕೆಟ್ ವಾರ್ಡ್, ಸಬ್‌ಸಿಡರಿ ಜ್ಯೈಲಿನ ಸಮೀಪವಿರುವ ರಾ। ವಾಮನ ಮಲ್ಯರ ಮನೆ ಮೊದಲಾದ ಸ್ಥಳಗಳಲ್ಲಿ ಈ ಕಳವುಗಳಾಗಿರುವವೆಂದು ತಿಳಿಯುತ್ತೇವೆ. ಪಟ್ಟಣದಲ್ಲಿ ಆಗುವ ಈ ಕಳವುಗಳ ಪತ್ತೆ ಮಾತ್ರ ಆಗದಿರುವುದು ಶೋಚನೀಯವಾಗಿರುವುದು.

ರಾ। ಬಿದರೆ ಅಶ್ವತ ನಾರಾಯಣ ಶಾಸ್ತ್ರಿಗಳು, ಚಾಮರಾಜಪೇಟೆ, ಮೈಸೂರು—ಇವರಿಂದ ಕಳುಹಿಸಲ್ಪಟ್ಟ ಆಶ್ಚರ್ಯಕರವಾದ ಕನ್ನಡ ಗ್ರಂಥಗಳು ಎಂಬ ಸಪ್ಲಿಮೆಂಟನ್ನು ಈ ಸಂಚಿಕೆಯೊಂದಿಗೆ ಇಟ್ಟಿರುವೆವು.

~~~~~

CANNADA INDIAN PENAL CODE.
ಕನ್ನಡ ಇಂಡಿಯನ್ ಪೆನಲ್ ಕೋಡ್.

ಇದರಿಂದ ಮೈಸೂರ್, ಮದ್ರಾಸ್ ಬೊಂಬಾಯಿ ಜಿಲ್ಲಾ ಕನ್ನಡ ಭಾಷಾ ವಾಚಕಮಹಾಶಯರಿಗೆ ತಿಳಿಯಪಡಿಸುವದೇನಂದರೆ:—

ಶ್ರೀಮದಿಂಡಿಯಾ ಗವರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ ೧೮೬೦ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ ಅಮೆಂಡ್‌ಮೆಂಟ್‌ಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಬೆಂಗಳೂರು ಸಿಟಿ ಚಿಕ್ಕಪೇಟೆ ಕಳಾನಿಧಿ ಮುದ್ರಾಕ್ಷರಶಾಲೆಯೊಳ್ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್ಷನಿಗೂ ಫಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡೆಸಬೇಕಾದ ಆಚರಣೆಗಳೆಂದರೆ:—ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ? ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ? ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜೀಯಾಗಬಹುದೇ? ರಾಜೀಯಾಗತಕ್ಕದ್ದಲ್ಲವೇ? ಎಂಬ ತಪಶೀಲುಗಳನ್ನು ವಿವರಿಸಲ್ಪಟ್ಟಿರುವುದು ಈ ಪುಸ್ತಕವು ಸರಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್‌ದಾರರುಗಳಿಗೂ, ಇತರ ಸಮಸ್ತ ಕೈಕಸಬುದಾರರಿಗೂ, ಖುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು

ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು. ಅಂತಹ ಮೊಕದ್ದಮೆಗಳು ಉದಾಹರಣೆಗಳಿಗಾಗಿ ಈ ಪುಸ್ತಕದಲ್ಲಿ ಅಡಗಿರುವವು

ಶಾ॥ ಕ॥ ಈ ಪುಸ್ತಕದಲ್ಲಿ ಚೋರಿ, ಕಳವು, ಡಕಾಯಿತಿ, ಅತಿಕಮಪ್ರವೇಶ್ಯ ಸ್ತ್ರೀಗೆ ಮಾನಭಂಗಪಡಿಸುವುದು, ಸ್ತ್ರೀಯನ್ನು ದುರಾಚಾರಕ್ಕೆ ಎಳೆಯುವುದು, ಆಸಾಮಿಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಯೆ ಅಕ್ರಮ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವುದು

ಕನ್ನಡದಲ್ಲಿ ಇದುವರಿಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು ಕ್ರಯ:— ಗ್ಲೇಜ್ ೨—೮—೦. ರಫ್ ೨—೦—೦. ಟಪ್ಪಾಲು ಚಾರ್ಜು ೦—೪—೦. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು.

ಟಿ. ಕೆ. ಕೃಷ್ಣಸ್ವಾಮಿಶೆಟ್ಟಿ,
ಪ್ರೊಪ್ರೈಟರ್ ಕಳಾನಿಧಿ ಪ್ರೆಸ್, ಚಿಕ್ಕಪೇಟೆ ಬೆಂಗಳೂರುಸಿಟಿ.

150 ಪುಟಗಳ ಪುಸ್ತಕವು.
ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ತೀಕ್ಷ್ಣವಾಗಿಯೇ ಬರೆಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, ೨೨, ಬ್ರಾಡ್ವೇ, ಮದ್ರಾಸ
ನಮ್ಮ ಏಜಂಟರು:— 1. ಮೆಸ್ಸರ್ಸ್, ರಫಯೆಲ್ ಎಂಡ್ ಕೊ, ಬ್ರಿಗೇಡ್‌ರೋಡ್
2. ಜುಬಿಲಿ ಕೆಮಿಸ್ಟ್ ಬಜಾರ್, ಬೆಂಗಳೂರು ಮಂಗಳೂರು

MUSICAL MART
Kavi & Sons,
MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರ್ಮೋನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಫ್ಲೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು ಹೇಂಡ್ ಹಾರಮೋನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45. 50ರ ವರೇಗೂ, ಫೋಲ್ಡಿಂಗ್ ರೂ. 70, 75 105.

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ್, ಮಂಗಳೂರು.

ಜ್ಯೋತಿಷ್ಯ ಹೊಸ ಗ್ರಂಥಗಳು
ಸಟೀಕಾ ತಾತ್ಪರ್ಯ ಗ್ರಹಲಾಘವ.

ಇದು ಬಹು ಚಂದವಾಗಿಯೂ ಇರುತ್ತೆ. ಇದನ್ನು ಟೈಪಿಸಿಸಿನಂತೆ ಮೇಜಿನ ಮೇಲೂ ನಿಂದಿರಿಸಿಡಬಹುದು. ಜೇಬಿನಲ್ಲಿಯೂ ಉಪಯೋಗಿಸಿಕೊಳ್ಳ ಬಹುದು.

ಬಾಂಬೆ ಮೇಲ್ ವಾಚ್ ಕ್ರಯ	ರೂ.	2—7—0
ರಾಸ್ಕೋಪ್ ವಾಚು ಕ್ರಯ	,,	1—12—0
ಬೆಸ್ಟ್ ಲೀವರ್ ವಾಚು ಕ್ರಯ	,,	3—8—0
ರೈಲ್ವೆ ರೆಗ್ಯುಲೇಟರ್ ಕ್ರಯ	,,	2—12—0
ಸೆಲ್ಫ್ ಕ್ಲೊಸಿಕ್		3—15—0
ಟೈಂಪೀಸು—ಸಾದಾ	,,	1—5—0
ಅಲಾರಾಂ ಟೈಂಪೀಸು		1—13—0
ಚಿಕ್ಕ ಸೈಜು ಲೇಡಿವಾಚ್		2—15—0

ಕಾರೇಜ್ ಹಾರ್ಮೋನಿಯಂ ರೂ 20—0—0, ಮ್ಯೂಜಿಕ್ ಕ್ಲಾಕ್ ರೂ. 5—2—0, ಪಿಡಲು ರೂ. 8—0—0.

ಅಡ್ರೆಸ್:—ಮೆಡಿನಾವಾಚ್ ಕಂಪೆನಿ,

ನಂ. ೨೧ ಅನೆಕಾರಕೋರ್ಣ ಬೀದಿ, ಜಿ. ಟಿ. ಮದ್ರಾಸು.

THE BOMBAY LIFE ASSURANCE CO. LTD.

(Established 1908).

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

„There can be no doubt that the Policy Contracts are well secured".

Chairman:-The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electro Co Ltd., The Tata Mills Co. Ltd., Managing Agent of Messrs. Marsland Price & Co. Ltd., and fellow of the Bombay University.

Actuary:—George King Esq. F. F. A. F. I. A., (London.)

Medical Referee:—Dr. R. Row, M. D. D. Sc. London.)

Manager:-Mr. K. S. Aiyar, Esq. B. A., F. S. A. A. (London). Justice of the Peace, The Honorary Presidency Magistrate and fellow of the Bombay University.

Wanted Agents on very liberal commission.

Apply for full particulars to—**Kochikar Bros.**; Udipi, Chief Agents for South Canara, Malabar, Travancore and Cochin.

ಮುಂಬಯಿ ಲೈಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು)

ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಾತಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು.

"ವಿಮೆ ದಾರರ ಬಾಧ್ಯತೆಗಳು ಸರ್ವ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು: — ಘನಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೊ ಲಿಕ್ ಮಾರ್ಸ್ ಲೆಂಡ್ ಪ್ರೈಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೊಗಳವರು.

ಎಕ್ಚುಯುಯರಿ:—ಮೆ। ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ ಎ. (ಲಂಡನ್)

ಮೆಡಿಕಲ ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ ಡಿ ಎಸ್ ಸಿ. (ಲಂಡನ್).

ಮ್ಯಾನೇಜರ್: —ಮೆ। ಕೆ. ಎಸ್. ಅಯ್ಯರ್ ಬಿ. ಎ. ಎಫ್. ಎಸ್. ಎ ಎ (ಲಂಡನ್.) ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟ್ ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೊಗಳವರು.

ಏಜಂಟರು ಬೇಕಾಗಿರುವರು. ಧಾರಾಳವಾದ ಕಮಿಶನ್ ಕೊಡೋಣಾಗುವುದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್,

ಪ್ರಾಮುಖ್ಯ ಏಜಂಟರು, ಉಡುಪಿ.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವು ರಕ್ತಮಿತಿ) ಸ್ಥಿತಿವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಶ್ವಾಸ, ಮೂತ್ರ, ಯಕೃತ್, ಪ್ಲೀಹ, ಹೃದಯ ಆ ಕೆಂಟ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮುತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರರ್ಘ್ನಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ. ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮುತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ — ಯಮ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು

ಹಿಂದೂಸ್ಥಾನದ ಜೀವವಿಮೇ ಸಂಘಗಳಲ್ಲಿ

ಅತಿ ಭದ್ರವಾದ್ದನ್ನು ಸೂಚಿಸುವಂಥಾದ್ದು:—

ಯುನೈಟೆಡ್ ಎಸ್ಯುರೆನ್ಸ್ ಎಂಬುವ

ವಿಮೆ ಸಂಘವು.

ವಿಮೆ ಉತ್ತರಾಯಿಸುವ ಹಲವು ನೂತನ ವಿಧಾನಗಳಿಂದ ಕೂಡಿರುತ್ತದೆ. ವಿವಾಹ ಮತ್ತು ಜೀವವಿಮೆಗಳ ಸಂಘಗಳಲ್ಲಿ ಈ ತನಕ ಇಲ್ಲದ-ಅಗತ್ಯವಾಗಿ ಬೇಕಾಗಿರುವ ವಿಧಾನಗಳು ಇದರಲ್ಲಿರುವವು.

೭೫ ವರುಷಗಳ ಪ್ರಾಯದವರೂ ಸಹ ವಿಮೆ ಉತ್ತರಾಯಿಸುವ ವಿಶೇಷ ಕ್ರಮ. ೩ ತಿಂಗಳನಂತರ ವಿಮೆ ಪತ್ರವು ಸಂಪೂರ್ಣತ್ವವನ್ನು ಹೊಂದಬಹುದು.

ವಿವಾಹ ವಿಮೆಗಳಲ್ಲಿ ೧೨ ತಿಂಗಳುಗಳ ನಂತರ ವಿಮೆ ಕಂತುಗಳನ್ನು ತೆರಬೇಕೆಂತಿಲ್ಲ. ೩ ತಿಂಗಳ ನಂತರ ಈ ಸಂಬಂಧದ ವಿಮೆ ಪತ್ರವು ಸಹ ಸಂಪೂರ್ಣವಾಗಬಹುದು.

ಮೇಲೆ ಕಾಣಿಸಿದ ಪ್ರಯೋಜನಗಳ ಹೊರತು ವಿವಾಹ ಉಪನಯನ ಮತ್ತು ಜೀವವಿಮೆಗಳ ಸಾಮಾನ್ಯ ಮತ್ತು ಎನ್ಡೋವ್‌ಮೆಂಟ್ ಕ್ರಮಗಳಿಂದ ವಿಮೆದಾರರು ತೆತ್ತ ದುಬಾರೆ ಮೊಬಲಗು ದೊರಕುವ ಸಂಭವವಿರುವವು. ಸಂಘದ ಭದ್ರತೆಗೆ ತಕ್ಕುದಾಗಿ ಸುಲಭವಾದ ವಿಮೆ ದರಗಳು.

ಒಳ್ಳೇ ಕಮಿಶನ್-ಮತ್ತು ಸಂಬಳದ ಮೇಲೆ ಏಜಂಟರುಗಳು ಬೇಕಾಗಿರುವರು.

ಈ ಸಂಘದಿಂದ ವಿಮೆ ಹಣ ಪಡದವರ ಹೆಸರುಗಳ ಪಟ್ಟಿಗೂ ಏಜನ್ಸಿಗಳ ಶರ್ತಕ್ಕೂ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

B. S. Nayak & Co.,	ಬಿ. ಎಸ್. ನಾಯಕ್ ಎಂಡ್ ಕೊ,
Chief Agents,	ಚೀಫ್ ಏಜಂಟರು,
Udipi, S, C.	ಉಡುಪಿ ದ. ಕ.

CANNADA INDIAN PENAL CODE.

ಕನ್ನಡ ಇಂಡಿಯನ್ ಪೆನಲ್ ಕೋಡ್

ಇದರಿಂದ ಮೈಸೂರ್, ಮದ್ರಾಸ್ ಬೊಂಬಾಯಿ ಜಿಲ್ಲಾ
ಕನ್ನಡ ಭಾಷಾ ವಾಚಕಮಹಾಶಯರಿಗೆ
ತಿಳಿಯಪಡಿಸುವದೇನಂದರೆ:—

ಶ್ರೀಮದಿಂಡಿಯಾ ಗವರ್ನರ್ ಜನರಲ್‌ರವರ ಅನುಮತಿ ಪ್ರಕಾರ ಸನ್ ೧೮೬೦ನೇ ಇಸವಿಯಲ್ಲಿ ಮಂಜೂರಾದ "ಇಂಡಿಯನ್ ಪೆನಲ್ ಕೋಡ್" ಎಂಬ ಆಕ್ಟನ್ನು ಈಗ ಅನೇಕ ಜಡ್ಜಿಗಳ ಟಿಪ್ಪಣಿಗಳೊಡನೆಯೂ ಅಮೆಂಡ್‌ಮೆಂಟ್‌ಗಳೊಡನೆಯೂ ಅಂದವಾದ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಬೆಂಗಳೂರು ಸಿಟಿ ಚಿಕ್ಕಪೇಟೆ ಕಳಾನಿಧಿ ಮುದ್ರಾಕ್ಷರಶಾಲೆಯೊಳ್ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈ ಆಕ್ಟಿನಲ್ಲಿ ಪ್ರತಿ ಸೆಕ್‌ಷನಿಗೂ ಪಿರ್ಯಾದಿಗಳೂ, ಅಪರಾಧಿಗಳೂ, ಪೋಲೀಸ್ ಅಧಿಕಾರಿಗಳೂ, ಮ್ಯಾಜಿಸ್ಟ್ರೇಟರುಗಳೂ ನಡೆಸಬೇಕಾದ ಆಚರಣೆಗಳಂದರೆ.—ನಡೆಯುವ ಮೊಕದ್ದಮೆಯನ್ನು ಯಾವ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕು? ವಾರಂಟಿಲ್ಲದೆ ಹಿಡಿಯಬಹುದೇ? ಹಿಡಿಯಕೂಡದೇ? ಸಮನ್ ಕೊಡತಕ್ಕದ್ದೇ? ವಾರಂಟು ಕೊಡತಕ್ಕದ್ದೇ? ಜಾಮೀನ್ ತೆಗೆದುಕೊಂಡು ಬಿಡಬಹುದೇ? ರಾಜಿಯಾಗಬಹುದೇ? ರಾಜೀಯಾಗತಕ್ಕದ್ದಲ್ಲವೇ? ಎಂಬ ತಪಶೀಲುಗಳನ್ನು ವಿವರಿಸಲ್ಪಟ್ಟಿರುವುದು. ಈ ಪುಸ್ತಕವು ಸರಕಾರಿ ಅಧಿಕಾರಿಗಳಿಗೂ, ಪೋಲೀಸಿನವರಿಗೂ, ಪಟೇಲ್ ಶಾನುಭೋಗರುಗಳಿಗೂ, ವರ್ತಕರುಗಳಿಗೂ, ಜಮೀನ್‌ದಾರರುಗಳಿಗೂ, ಇತರ ಸಮಸ್ತ ರೈತಸಬುದಾರರಿಗೂ, ಖುಷ್‌ಬಾಷ್ ಜನಗಳಿಗೂ ಉಪಯೋಗಕರವಾದದ್ದು

ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟದಿಂದ ಬಿಡುಗಡೆಯಾಗಿರುವರು. ಅಂತಹ ಮೊಕದ್ದಮೆಗಳು ಉದಾಹರಣೆಗಳಿಗಾಗಿ ಈ ಪುಸ್ತಕದಲ್ಲಿ ಅಡಗಿರುವವು

ತಾ। ಕ। ಈ ಪುಸ್ತಕದಲ್ಲಿ ಚೋರಿ, ಕಳವು, ಡಕಾಯಿತಿ, ಅತಿಕ್ರಮಪ್ರವೇಶ್ಯ ಸ್ತ್ರೀಗೆ ಮಾನಭಂಗಪಡಿಸುವುದು, ಸ್ತ್ರೀಯರನ್ನು ದುರಾಚಾರಕ್ಕೆ ಎಳೆಯುವುದು, ಅಸಾಮಿಚೋರಿ, ಗಂಡನು ಹೆಂಡತಿ ೧೨ ವರುಷಗಳಿಗೆ ಕಡಮೆ ವಯಸ್ಸಿನವಳಾಗಿರುವಾಗ್ಯೆ ಅಕ್ರಮ ಸ್ತ್ರೀಸಂಗ ಮಾಡಬಹುದೇ? ಮುಂತಾದ ಮೊಕದ್ದಮೆಗಳಲ್ಲಿ ಜಡ್ಜಿಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಸೂಚಿಸಲ್ಪಟ್ಟಿರುವುದು.

ಕನ್ನಡದಲ್ಲಿ ಇದುವರಿಗೆ ಇಂಥಾ ಪುಸ್ತಕವು ಇನ್ನೆಲ್ಲಿಯೂ ಇಲ್ಲವು ಕ್ರಯ ಗ್ಲೇಜ್ ೨—೮—೦. ರಫ್ ೨—೦—೦ ಟಪ್ಪಾಲು ಚಾರ್ಜು ೦—೪—೦. ಬೇಕಾದವರು ಈ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು.

ಟಿ. ಕೆ. ಕೃಷ್ಣಸ್ವಾಮಿಶೆಟ್ಟಿ,
ಪ್ರೊಪ್ರೈಟರ್ ಕಳಾನಿಧಿ ಪ್ರೆಸ್, ಚಿಕ್ಕಪೇಟೆ ಬೆಂಗಳೂರುಸಿಟಿ

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ
ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ಪ್ರಿಂಟಿಂಗ್
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು ಮಂಗಳೂರು

MUSICAL MART
Kavi & Sons,
MANGALORF

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೋನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು ಹೇಂಡ್ ಹಾರಮೋನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೇಗೂ, ಫೋಲ್ಡಿಂಗ್ ರೂ. 70, 75, 105.

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ್, ಮಂಗಳೂರು ದ. ಕ.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಆತ್ಯವಶ್ಯಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವುದು ಮತ್ತಾವುದೂ ಇಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕಾ" ಎಂಬ ಸಂಸ್ಕೃತ ವ್ಯಾಖ್ಯಾನವೂ ಜಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಆಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರೆಯಿಸಿ ದಪ್ಪ ಕಾಗದದಲ್ಲಿ ಸುಂದರ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪಷ್ಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ, ಸೂರ್ಯ ಚಂದ್ರ ಗ್ರಹಣನಿರ್ಣಯ, ಉದಯಾಸ್ತಾದಿಗಳು, ಗ್ರಹಚ್ಛಾಯೆ, ನಕ್ಷತ್ರಚ್ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೧೬ ವಿಷಯಗಳು ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವದು. ಇದರ ಕ್ರಯ ೧ಕ್ಕೆ ೧—೮—೦ ಟಪಾಲು ೩ ಅಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ, ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ, ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣಗಳಲ್ಲಿ ೪೫೭ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು.

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಅಣೆ

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳುವಳಿಕೆಗೂ ಅನುಭವಕ್ಕೂ ತೆಗೆದುಕೊಳ್ಳುವದಕ್ಕೆ ತಕ್ಕ ಜ್ಯೋತಿಷ್ಯಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಪರಾಶರ, ಜೈಮಿನಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಬಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಆವಶ್ಯಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಒರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ದಪ್ಪವಾಗಿ ಮುದ್ರಿಸಿದೆ. ಈ ಪುಸ್ತಕವು ೬೭೭ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು. ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಅಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರಿಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. ನಮ್ಮ ವಿಳಾಸ:—

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ನಾಟಕ ಬುಕ್ ಡಿಪೊ ಏಜಂಟ್, ಬಳ್ಳಾರಿ.

ವಿವಾಹ ಮಂಟಪ.

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸ್ಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡದಿದೆ. ಕನ್ನಾನೂರ, ಮೈಸೂರು, ನಾಗಪುರ, ವಿಶಾಕಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಲಾರಿರಾ!

ಸ್ಟೀವನ್ಸ್ ಎಂಡ್ ಸನ್ಸ್
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ
ಹಂಪನಕಟ್ಟಾ, ಮಂಗಳೂರು.

———o———

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ತಕ್ಕೆಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಆದ್ದ ಕೊಡಲೀವರ್ ಎಣ್ಣೆಯೂ ಆದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವವರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾವುದು ದೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬಿರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದು ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಪೋಟರ್ ಬಿರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

ಅಗ್ಗ! ಅಗ್ಗ!! ॥ ಕುಟುಂಬ ಜೀವನಿ ॥ ಧರ್ಮ! ಧರ್ಮ!!

ಪ್ರಿಯ ಭಾರತೀಯ ಮಹನಿಯರೇ!

ಎಲ್ಲಾ ರೋಗಗಳನ್ನು ಗೆಲ್ಲುವ ಅತಿ ಅಲ್ಪ ರೂ. 8 ಕ್ರಯದ 16 ಔಷಧಗಳ ಸಂಗ್ರಹದ "ಕುಟುಂಬ ಜೀವನಿ" ಎಂಬ ಪೆಟ್ಟಿಗೆಯನ್ನು ತರಿಸಲು ಮರೆಯಬೇಡಿರಿ. ಪ್ರತಿ ಕುಟುಂಬಕ್ಕೂ ಅತೀ ಅಗತ್ಯ.

"ಅಕ್ಕರದಿ ಚಕ್ಕ ಬಂದು ಸಕ್ಕರೆಯಂ ನೆಕ್ಕಿದಂತೆ ।
ರಕ್ಕಸಲ್ಲಾ ಒಕ್ಕಲಿಗರ ರೊಕ್ಕವೆಲ್ಲ ಮುಕ್ಕಿ ಪೋದರ್ ॥" ಎಂಬಂತೆ

ಈಗ [illegible] ಪೇಟೆಂಟ್ ಔಷಧಗಳು ದೊಡ್ಡ ದೊಡ್ಡ ಹೆಸರಿನಿಂದ ಎಲ್ಲಿ ನೋಡಿದರೂ ತುಂಬಿ ಹೋಗಿ, ಹಲ್ಲಾಗಳಿಗೆ ಮ್ಯಾಗ್ ಕಡಿಮೆ ಆದ ಹಾಗೆ ಈಗಿನವರು ದಕ್ಕಿಸಂದಲೇ ಸುಲಿಗೆಯಾದರು.

ಪ್ರಿಯ ಬಾಂಧವರೇ! ನಮ್ಮನ್ನು ಹಾಗೆ ಗ್ರಹಿಸಬೇಡಿರಿ. ಅಮೂಲ್ಯವಾದ ಮಾಣಿಕ್ಯವಾದರೂ [illegible] ನಮ್ಮನ್ನು ಆಶ್ರಯಿಸಿರಿ! ಪರೀಕ್ಷಿಸಿನೋಡಿರಿ!!

[illegible] ಎಲ್ಲಾ ರೋಗಗಳನ್ನು ಗೆಲ್ಲುವ ವಿಶೇಷ ಪಥ್ಯವಿಲ್ಲದ [illegible] ದಲೂ, ಸಿದ್ಧಕಲ್ಪ ಭೈರವಿ ಪ್ರಯೋಗಗಳಿಂದಲೂ [illegible] ಚೂರ್ಣಗಳೂ, ತೈಲ್ಯ ಘೃತಗಳೂ, ಆಸವಾರಿಷ್ಟಗಳೂ [illegible] ಧರ್ಮಾರ್ಥ ಇತರರಿಗೆ ಅಲ್ಪ ಕ್ರಯದಲ್ಲಿ ಸಿಕ್ಕುತ್ತವೆ. [illegible] ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ, ಕ್ರಯವಿಲ್ಲ, ಬೇಕಾದವರಿಗೆ [illegible] 10 [illegible] ಮೇಲೆ ಕೇಳದಾ ರೂ 10ಡಿಸ್ಕೌಂಟು ಸಿಕ್ಕುವದು. ತರಿಸಿಕೊಳ್ಳಿರಿ. [illegible] ಅಕ್ರಯ [illegible].

ಎಮ್ ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

S. U. N. & CO.,

BENARES CITY, U P.

ದೊಡ್ಡ ಕಂಪೆನಿ ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ನಮ್ಮ ವಿಳಾಸ:— ಯಸ್. ಯು. ಯನ್, ಮತ್ತು ಕಂಪೆನಿ, ಕಾಶಿ.

ದಿ ಯುನಿವರ್ಸಲ್ ಎಶ್ಯೂರೆನ್ಸ ಕಂಪೆನಿ ಲಿಮಿಟೆಡ್,

ಹೆಡ್ ಆಫೀಸು—191, ಬೌ ಬಜಾರ್, ಕಲ್ಕತ್ತ.

ಸಬ್ ಏಜಂಟರಿಗೆ ಮತ್ತು ಕೆ. ಎಸ್. ರಾವ್ ಬ್ರದರ್ಸ್, ಮಂಗಳೂರು ಇವರ ಮೂಲಕ ಸೇರಿದ ಮೆಂಬರರಿಗೆ—

ನೋಟೀಸು.

ಕೆ. ಎಸ್. ರಾವ್ ಬ್ರದರ್ಸ್ ಮಂಗಳೂರು ಇವರ ಏಜನ್ಸಿಯನ್ನು ರದ್ದು ಮಾಡಿ, ಕಂಪೆನಿಯ ಚೀಫ್ ಏಜಂಟರಾಗಿರುವ ಮೆಸ್ಸರ್ಸ್ ಲಕ್ಷ್ಮಣ ರಾವ್ ಬ್ರದರ್ಸ್‌ರವರಿಗೆ ಅವರ ಚಾರ್ಜನ್ನು ಕೊಟ್ಟಿರುತ್ತದೆಂಬ ವಿಷಯವನ್ನು ಮೇಲೆ ಕಾಣಿಸಿದ ಮೆಂಬರರ ಲಕ್ಷ್ಯಕ್ಕೆ ಈ ಮೂಲಕ ತರಲ್ಪಟ್ಟಾಗಿಯದೆ. ಮೇಲೆ ಹೇಳಿದ ಸದರಿ ಮೆಂಬರರು ತಮ್ಮ ವಂತಿಗೆಯನ್ನು ಸೀದಾ ಉಡ್ಪಿ ಆಫೀಸಿಗೆ ಯಾ ಮೆಸ್ಸರ್ಸ್ ಜೋಸೆಫ್ ಬ್ರದರ್ಸ್, ಕಲ್ಪಣೆ, ಮಂಗಳೂರು—ಇವರಿಗೆ ಪಾವತಿ ಮಾಡಬೇಕೆಂಬದಾಗಿ ವಿಜ್ಞಾಪಿಸುತ್ತೇವೆ.

ಮೇಲಿನ ವಿಷಯದಿಂದ ಮೆಂಬರರು ಕಳವಳಿಕೆ ಪಡಲು ಯಾ ಯಾವದೊಂದು ಅಸತ್ಯ ಕಥನಗಳು ಎದ್ದರೆ ದಿಗಿಲು ಪಡಲು ಕಾರಣವಿಲ್ಲವೆಂಬದನ್ನೂ ಈ ಮೂಲಕ ಮೆಂಬರರ ಚಿತ್ತಕ್ಕೆ ತರಲ್ಪಟ್ಟಾಗಿ ಅಂಥಾದಕ್ಕೆ ಗಮನ ಕೊಡಬಾರದೆಂತ ವಿಜ್ಞಾಪಿಸಲ್ಪಟ್ಟಾಗಿಯದೆ.

ಜೆ ಸರ್ಕಾರ್
ಸೆಕ್ರೆಟರಿ.

ವಿದ್ಯಾಸಾಗರ ಬುಕ್ ಡಿಪೋ, ಬೆಂಗಳೂರು ಸಿಟಿ.

ನಮ್ಮಲ್ಲಿ ಸರ್ಕಾರಿ, ಸ್ಕೂಲ್ ಪುಸ್ತಕ ಸಂಸ್ಕೃತ, ಕನ್ನಡ, ತೆಲುಗು, ಭಾಷೆಗಳಲ್ಲಿ ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ ಮತ್ತು ಉತ್ತಮ ಕಾದಂಬರಿಗಳೂ ಸ್ಪೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರಿಯುತ್ತವೆ.

ಕೆಲವು ಅಪೂರ್ವ ಪುಸ್ತಕಗಳು.

ಸಹಾಯವಿಲ್ಲದೆ ಇಂಗ್ಲಿಷು ಕಲಿಯುವ ಪುಸ್ತಕ ೫ ಭಾಗವುಳ್ಳದ್ದು ದೊಡ್ಡ ಪುಸ್ತಕ. ಬೆಲೆ ೧—೮—೦

ಚಂದಕಲಾ ಕಲಾನಾಥ ಮುಂತಾದ ಉತ್ತಮ ಕಾದಂಬರಿಗಳು ನಮ್ಮಲ್ಲಿ ದೊರಿಯುತ್ತವೆ.

ಕನಕಲತಾ ಶ್ರೀನವಾ ಕಮಲಿನೀ ಚರಿತ್ರೆ	೦—೬—೦
ದಿವಾನ್ ರಂಗಾಚಾರ್ಯರ ಜೀವನ ಚರಿತ್ರೆ	೦—೬—೦
ದಿವಾನ್ ಶೇಷಾದ್ರಯ್ಯರವರ ಜೀವನ ಚರಿತ್ರೆ ಇಂಗ್ಲಿಷ್	೦—೬—೦
ಜಪಸರಸ್ವತಿ ಸ್ತುತಿಗೆ ಮೂಲಾಧಾರ	೧—೪—೦
ಅರ್ಜುನ ಕೀರ್ತಿ	೦—೧೦—೦
ವೈದ್ಯಸಾರ ಸಂಗ್ರಹ	೩—೦—೦

ಇವು ಇಂಡಿಯ ದೇಶದಲ್ಲೆಲ್ಲಾ ದೊಡ್ಡ ವೈದ್ಯ ಗ್ರಂಥಗಳು ಘನ ಪಂಡಿತರಿಂದ ಪರಿಶೋಧಿಸಲ್ಪಟ್ಟದ್ದು

ಹನುಮದ್ವಿಲಾಸ	೦—೮—೦
ಋಗ್ವೇದ ನಿತ್ಯ ಕರ್ಮ	೦—೪—೦

ಶೋಭನೆ, ನವಾಲಿ, ಯಾಮಿನಿ ಈ ಪುಸ್ತಕಗಳನ್ನು ಒಂದು ಸರ್ತಿ ಓದಿದರೆ ಯಾವಾಗಲೂ ಓದುತ್ತಿರಬೇಕೆಂದು ಇಷ್ಟವಾಗುತ್ತದೆ.

ವಿಳಾಸ:— ಬಿ. ನರಸಿಂಹ ಅಯ್ಯಂಗಾರ್
ಮೆನೇಜರ್ ವಿದ್ಯಾಸಾಗರ ಬುಕ್ ಡಿಪೋ.
ಚಿಕ್ಕಪೇಟೆ ಬೆಂಗಳೂರು ಸಿಟಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 5ನೇ ಮೇ 1914

ಭಾರತೀಯರಿಗೆ ದೊರಕುವ ಆತಿಥ್ಯ ಸತ್ಕಾರಗಳು

ಭರತ ಖಂಡವನ್ನು ಬಿಟ್ಟು ಆಫ್ರಿಕಾ ಅಮೇರಿಕಾ ಮೊದಲಾದ ಖಂಡಗಳಲ್ಲಿರುವ ಅನ್ಯ ದೇಶಗಳಿಗೂ ಬ್ರಿಟಿಷ್ ಸ್ವಾಸ್ಥ್ಯಗಳಿಗೂ ಭಾರತೀಯರು ಹೋದರೆ ಅವರಿಗೆ ದೊರಕುವ ಆತಿಥ್ಯ ಸತ್ಕಾರಗಳೇನೆಂಬುದನ್ನು ವಾಚಕರು ಪ್ರತಿದಿನವೆಂಬಂತೆ ಕೇಳುತ್ತಿರುವರು ಈ ಸತ್ಕಾರಗಳ ಮೂಲಕ ಆಫ್ರಿಕದಲ್ಲಿ ಪ್ರಾಪ್ತವಾಗುವ ಬಾಧೆಯಿಂದ ಬಿಡುಗಡೆ ಹೊಂದುವರೆ ಭಾರತೀಯರು ನಡಿಸಿದ ಪ್ರಯತ್ನಗಳು ಫಲಿಸುವ ವೇಳೆಯಲ್ಲಿ ಬ್ರಿಟಿಷ್ ಸ್ವಾಸ್ಥ್ಯವಾದ ಅಮೇರಿಕದ ಕೆನಡಾ ದೇಶದಲ್ಲಿಯೂ ಸ್ವತಂತ್ರ ರಾಜ್ಯಗಳಾದ ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿಯೂ ಭಾರತೀಯರಿಗೆ ನೂತನ ಸಂಕಷ್ಟಗಳು ಬಂದೊದಗಿರುವ ವರ್ತಮಾನವು ಕೇಳಿಸುತ್ತಿರುವುದು. ದಕ್ಷಿಣ ಆಫ್ರಿಕದ ಯೂನಿಯನ್ ಪಾರ್ಲಿಮೆಂಟ್ ಸಭೆಯಲ್ಲಿ ಭಾರತೀಯರಿಗೆ ಆ ದೇಶದಲ್ಲಿರುವ ಕೆಲವು ಸಂಕಷ್ಟಗಳ ಪರಿಹಾರಾರ್ಥವಾಗಿ ಬೇಕಾದ ಕಾನೂನು ಹೊಸದೆ ಮಂಜೂರಾಗುತ್ತಿರುವುದು. ಈ ವೇಳೆಯಲ್ಲಿಯೇ ಭಾರತೀಯರ ಆಗಮನವನ್ನು ಕೆನಡಾ ದೇಶದಲ್ಲಿ ನಿರ್ಬಂಧಿಸುವ ಕಾನೂನಿನ ಜ್ಯಾರಿಯು ನಡಿಯುತ್ತದಲ್ಲದೆ ಅಮೇರಿಕದ ಸಂಯುಕ್ತ ಸಂಸ್ಥಾನದ ಸರಕಾರದವರು ಭಾರತೀಯರನ್ನು ತೊಂದರೆಗೊಳಿಸುವ ಇಂಥಾ ಕಾನೂನನ್ನು ತಮ್ಮ ರಾಜ್ಯದಲ್ಲಿಯೂ ಏರ್ಪಡಿಸುವ ಪರ್ಯಾಲೋಚನೆಯಲ್ಲಿರುವರು.

ಕೆನಡಾ ದೇಶಕ್ಕೆ ೪೦೦ ಜನ ಭಾರತೀಯ ಪ್ರಯಾಣಿಕರೊಡನೆ ಹಿಂದೂಸ್ಥಾನದಿಂದ ಕೊಮಾಗಾಟಾ ಮಾರು ಎಂಬ ಜಹಜು ಸೆಟ್ಟಿಗೆ ಹೋಗಿರುವ ವೃತ್ತಾಂತವನ್ನೂ ಈ ಜಹಜಿನಿಂದ ಪ್ರಯಾಣಿಕರನ್ನು ಇಳಿಯಲು ಬಿಡದ ಅತಿ ದುಃಖಕರ ವಿವರವನ್ನೂ ಒಂದೆರಡು ವಾರಗಳಿಂದ ವಾಚಕರು ವೃತ್ತ ಪತ್ರಿಕೆಗಳಲ್ಲಿ ಓದುತ್ತಿರಬಹುದು. ಭಾರತೀಯರ ಪ್ರಯಾಣಿಕರು ಕೆನಡಾ ದೇಶಕ್ಕೆ ಬಂದು ಸೇರದಂತೆ ಏರ್ಪಡಿಸಲ್ಪಟ್ಟಿರುವ ವಿಶೇಷವಾದದೊಂದು ವಿಧಿಯು ಕೆನಡಾ ದೇಶದಲ್ಲಿ ಜ್ಯಾರಿಯಲ್ಲಿರುವುದು. ಈ ವಿಧಿಗನುಗುಣವಾಗಿ ಕೆನಡಾ ದೇಶದಲ್ಲಿ ವಾಸಿಸಲು ಬರುವವರು ಅವರವರ ಜನ್ಮ ಸ್ಥಾನದಿಂದ ನೆಟ್ಟಗೆ ಕೆನಡಾ ದೇಶಕ್ಕೆ ಬರತಕ್ಕದೆಂಬುದಾಗಿರುವುದು. ಹಿಂದೂಸ್ಥಾನದಿಂದ ಕೆನಡಾ ದೇಶಕ್ಕೆ ನೆಟ್ಟಗೆವಾಗಿ ಹೋಗುವ ಸ್ಟೀಮರುಗಳಿಲ್ಲದ್ದರಿಂದ ಭಾರತೀಯರ ಬರೋಣಕ್ಕೆ ಈ ಮೂಲಕ ತಡೆಯುಂಟಾಗಬಹುದೆಂಬ ಆಲೋಚನೆಯಿಂದ ಕೆನಡಾ ಸರಕಾರದವರು ಈ ಕಾನೂನನ್ನು ಹೀಗೆ ಏರ್ಪಡಿಸಿದ್ದರು. ಆದರೆ ಗುರುದಿತ್ತ ಸಿಂಗ ಎಂಬ ಸಂಪನ್ನ ಸಾಹುಕಾರರೊಬ್ಬರು ಇನ್ನು ಕೆಲವರ ಸಹಾಯದೊಡನೆ ಹಿಂದೂಸ್ಥಾನದಿಂದ ನೆಟ್ಟಗೆ ಕೆನಡಾ ದೇಶಕ್ಕೆ ಹೋಗುವಂತೆ ಕೊಮಾಗಾಟಾಮಾರು ಎಂಬ ಸ್ಟೀಮರನ್ನು ಗೊತ್ತು ಮಾಡಿ ಈಗ ಕೆನಡಾ ದೇಶಕ್ಕೆ ಬಂದು ತಪ್ಪಿರುತ್ತಾರೆ. ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳ ಹಕ್ಕು ಸ್ವಾತಂತ್ರ್ಯಗಳಿಗನುಸಾರವಾಗಿ ಗುರುದಿತ್ತ ಸಿಂಗರವರು ತಮ್ಮ ಜತೆ ಪ್ರಯಾಣಿಕರೊಡನೆ ಕೆನಡಾ ದೇಶವನ್ನು ನಿರ್ಬಂಧವಿಲ್ಲದೆ ಪ್ರವೇಶಿಸುವ ಹಕ್ಕನ್ನು ಪ್ರಕೃತ ಕೆನಡಾ ದೇಶದ ಸರಕಾರದವರೊಡನೆ ಕೇಳುತ್ತಿರುವರು. ಗುರುದಿತ್ತಸಿಂಗರವರ ಈ ಉಪಾಯದ ಸಾಧನೆಯನ್ನು ನೋಡಿಕೊಂಡು ಕೆನಡಾ ಸರಕಾರದವರು ಬರುವ ಸಪ್ಟಂಬರ ತಿಂಗಳ ವರೇಗೆ ಕೂಲಿ ಕೆಲಸದವರೇ ಮೊದಲಾದವರನು ಕೆನಡಾ ದೇಶವನ್ನು ಪ್ರವೇಶಿಸಲು ಬಿಡಬಾರದೆಂಬ ಆಜ್ಞೆಯನ್ನು ಈ ತನ್ಮಧ್ಯ ಕೊಟ್ಟಿರುವರು. ಇಂಥಾ ಆಜ್ಞೆಯು ಕೊಡೋಣಾಗುವದೆಂಬ ನಿರೀಕ್ಷಣೆಯು ಗುರುದಿತ್ತಸಿಂಗರವರಲ್ಲಿತ್ತೆಂತ ಕಾಣುತ್ತದೆ. ಕೊಮಗಾಟಾಮಾರು ಹಡಗದಲ್ಲಿ ಬಂದ ಪ್ರಯಾಣಿಕರಲ್ಲಿ ನೂರು ಮಂದಿ ಜನರು ತಾವು ಕೊಲಂಬಿಯಾದಲ್ಲಿರುವ ಆರು ಸಿಕ್ಖ ಮತಸ್ಥರ ದೇವಸ್ಥಾನಗಳ ಮಿಶನರಿಗಳಾಗಿ ಬಂದಿರುವೆವೆಂಬುದಾಗಿ ಹೇಳುವರು. ಇವರಿಗೆ ಕೆನಡಾ ದೇಶಕ್ಕೆ ಪ್ರವೇಶವು ನಿರಾಕರಿಸಲ್ಪಟ್ಟರೆ ಕ್ರೈಸ್ತ ಮಿಶನರಿಗಳಿಗೆ ಇದೇ ರೀತಿ ತಿರಸ್ಕಾರವು ಕೊಡೋಣಾಗಬೇಕಾಗಿ ವಾದಿಸುವರೆಂತ ಕೇಳುತ್ತೇವೆ. ಈ ತನಕ ೨೦ ಜನ ಪ್ರಯಾಣಿಕರಿಗೆ ಪ್ರವೇಶವು ದೊರಕಿರುವುದೆಂತಲೂ ಮಿಕ್ಕ ಪ್ರಯಾಣಿಕರ ವಿಷಯ ಪ್ರಯತ್ನಗಳು ನಡಿಸೋಣಾಗುತ್ತಿವೆಂಬುದಾಗಿಯೂ ಕೇಳುತ್ತೇವೆ. ಗುರುದಿತ್ತಸಿಂಗರವರ ಈ ಪ್ರಯತ್ನಗಳ ಫಲ ಯಾವ ರೀತಿ ಪರಿಣಮಿಸುವುದೆಂಬುದನ್ನು ಭಾರತೀಯರೆಲ್ಲರೂ ಎದುರು ನೋಡುತ್ತಿರುವರು. ಅಮೇರಿಕದ ಸಂಯುಕ್ತ ಸಂಸ್ಥಾನದವರು ಉದ್ದೇಶಿಸಿರುವ ಭಾರತೀಯರ ನಿರ್ಬಂಧದ ಕಾನೂನಿನ ವಿಷಯ ಇನ್ನೊಮ್ಮೆ ಪ್ರಸ್ತಾಪಿಸುವೆವು.

ಮಂಗಳೂರು ಮಹಿಳಾ ಸಭೆಯ ವಾರ್ಷಿಕೋತ್ಸವವು.

ಕುಮಾರ ಮಂಗಳದ ಜಮೀನುದಾರಿಣಿಯರಾದ ಶ್ರೀಮತಿ ರಾಧಾಬಾಯಿಯವರ ಅಧ್ಯಕ್ಷತೆಯಲ್ಲಿ ಮಂಗಳೂರು ಮಹಿಳಾ ಸಭೆಯವರ ೩ನೇ ವಾರ್ಷಿಕೋತ್ಸವವು ಕಳೆದ ತಿಂಗಳ ತಾ. ೨೮ರಲ್ಲಿ ಗಣಪತಿ ಶಾಲೆಯಲ್ಲಿ ನಡೆಯಿತು. ಹಲವು ಮಾನ್ಯ ಸ್ತ್ರೀಪುರುಷರುಗಳು ಅಂದು ಗಣಪತಿ ಶಾಲೆಯಲ್ಲಿ ಕೂಡಿದ ಸಭೆಗೆ ದಯಮಾಡಿ ಬಂದಿದ್ದರು. ಸಂಸ್ಕೃತ ಶ್ಲೋಕಗಳನ್ನು ಹಾಡಿಕೊಂಡು ದೇವರ ಪ್ರಾರ್ಥನೆಯಿಂದ ಸಭಾ ಕಾರ್ಯಗಳಿಗೆ ಪ್ರಾರಂಭವಾಯಿತು. ಕಳೆದ ಒಂದು ವರುಷ ಕಾಲದಲ್ಲಿ ಮಹಿಳಾ ಸಭೆಯವರು ನಡಿಸಿದ ಕಾರ್ಯ ವೃತ್ತಾಂತದ ವಿವರವು ಸಭೀಕರಿಗೆ ಓದಿ ಹೇಳೋಣಾಗಿಯದೆ. ಜೀವನೋದ್ದೇಶಗಳ ವಿಶೇಷತ್ವವನ್ನು ಅರಿತುಕೊಂಡು ಸ್ತ್ರೀಯರಲ್ಲಿ ಇದಕ್ಕೆ ತಕ್ಕಂತೆ ಬುದ್ಧಿ ವಿಕಾಸವೂ ಚಿತ್ತ ಔದಾರ್ಯವೂ ಉಂಟಾಗುವಂತೆ ಮಹಿಳಾ ಸಭೆಯವರು ಸಾಧಿಸುತ್ತಿರುವರೆಂತ ಈ ವೃತ್ತಾಂತದಿಂದ ತಿಳಿದು ಬರುತ್ತದೆ. ಆಗಿಂದಾಗ್ಯೆ ಮಹಿಳೆಯರನ್ನು ಒಟ್ಟು ಕೂಡಿಸಿ ಯೋಗ್ಯವಾದ ಗ್ರಂಥಗಳ ಪಠಣವನ್ನು ಮಾಡುವುದು, ಉಪಯುಕ್ತ ವಿಷಯಗಳಲ್ಲಿ ವಿದ್ವಾಂಸರ ಭಾಷಣಗಳನ್ನು ಕೇಳುವುದು, ಇಂಗ್ಲೀಷ ಭಾಷಾ ಪರಿಚಿತಿ, ಗಾಯನ ಅಭ್ಯಾಸ, ಕಸೂತಿ ಕೆಲಸ ಇತ್ಯಾದಿಗಳನ್ನು ಪ್ರತಿ ತಿಂಗಳಿನ ಕೆಲವು ದಿನಗಳಲ್ಲಿ ಕಲಿಸುವ ಏರ್ಪಾಡನ್ನು ಸಹ ಈ ಸಭೆಯವರು ಮಾಡಿರುವರೆಂತ ತಿಳಿಯುತ್ತೇವೆ. ಸ್ತ್ರೀ ಸಮಾಜಕ್ಕೆ ಪ್ರಯೋಜನವುಳ್ಳವರಾಗಲಿಕ್ಕೆ ನಾನಾ ವಿಧಾನಗಳಲ್ಲಿ ಮಹಿಳಾ ಸಭೆಯವರು ಪ್ರಯತ್ನಿಸುತ್ತಿರುವರೆಂಬುದು ಇವರ ಗತವರುಷಗಳ ವೃತ್ತಾಂತದಿಂದ ವ್ಯಕ್ತವಾಗುತ್ತಿದೆ. ಪ್ರಸಿದ್ಧ ಪಂಡಿತ ಬರ್ವೆಯವರಿಂದ ಸ್ಥಾಪಿಸೋಣಾದ ಅನಾಥ ಬಾಲಿಕಾಶ್ರಮಕ್ಕೆ ಇಲ್ಲಿಯ ಮಹಿಳಾ ಸಭೆಯವರು ಚಂದಾಹಣವನ್ನು ಕೂಡಿಸಿ ಕಳೆದ ಎರಡು ವರುಷಗಳಿಂದ ಕಳುಹಿಸುತ್ತಿದ್ದಾರೆ. ಮಹಿಳಾ ಸಭೆಯ ಹಲವು ಮೆಂಬರರೂ ಇತರರೂ ಈ ಪಟ್ಟಣದ ಕ್ರೈಸ್ತ ಮೊದಲಾದ ಬೇರೆ ಜಾತಿಯ ಸ್ತ್ರೀಯರೂ ಸಹ ದಕ್ಷಿಣ ಆಫ್ರಿಕದ ಭಾರತೀಯರ ಸಹಾಯಾರ್ಥವಾಗಿ ಚಂದಾಹಣವನ್ನು ಸಂಗ್ರಹಿಸಿದ ವೃತ್ತಾಂತವನ್ನು ವಾಚಕರು ಈ ಮೊದಲೇ ತಿಳಿದಿರುವರು. ಗಣಪತಿ ಶಾಲೆಯ ಹೊಸ ಕಟ್ಟಡಗಳಿಗೆ ದ್ರವ್ಯಸಹಾಯವಾಗಿ ಪಿಸ್ಸಿ ಸೇಲಿನ ಮುಖಾಂತರ ರೂ. ೭೦೦ನ್ನು ಕೂಡಿಸಿದ ಪ್ರಸ್ತಾಪವು ಮಹಿಳಾ ಸಭೆಯವರ ವೃತ್ತಾಂತದಲ್ಲಿದೆ. ಸಭೆಯ ವೃತ್ತಾಂತವನ್ನು ಓದಿ ಆದ ಬಳಿಕ ಮಹಿಳಾ ಸಭೆಯ ಮೆಂಬರು ಬಹಳ ಮನೋಹರವಾದ ಗಾಯನದಿಂದ ಸಭಿಕರನ್ನು ವಿನೋದಗೊಳಿಸಿದರು.

ಮುಂಬಾಯಿಯ ಸೇವಾಸದನದ ಸಿಸ್ಟರ್ ಸುಶೀಲಬಾಯಿಯವರು ಈ ಸಂದರ್ಭದಲ್ಲಿ ಸೇವಾಸದನದ ಮತ್ತು ಸಮಾಜ ಸೇವೆಯ ವಿಷಯ ಭಾಷಣವನ್ನು ಮಾಡಿ ಮಂಗಳೂರಿನಿಂದ ತರಬೇತು ಹೊಗಲು ವರುಷ ಒಂದಕ್ಕೆ ಒಬ್ಬ ಸ್ತ್ರೀಯನ್ನಾದರೂ ಮುಂಬಾಯಿಯ ಸೇವಾಸದನಕ್ಕೆ ಕಳುಹಿಕೊಡಬೇಕೆಂತ ವಿಜ್ಞಾಪಿಸಿಕೊಂಡರು. ಸೇವಾಸದನದ ಪ್ರಸ್ತಾಪಗಳು ಸ್ವದೇಶಾಭಿಮಾನಿಯಲ್ಲಿ ಆಗಿಂದಾಗ್ಯೆ ಬಂದಿವೆ. ಆದ್ದರಿಂದ ಇದರ ಪರಿಚಿತಿಯನ್ನು ಇಲ್ಲಿ ಇನ್ನೊಮ್ಮೆ ಹೇಳುವುದು ನಮಗೆ ಅಗತ್ಯ ಕಾಣುವದಿಲ್ಲ. ಸ್ತ್ರೀಯರ ಮತ್ತು ಹಿಂದೂ ಸಮಾಜದ ಅನಾಥ ಬಾಲಕರ ಉದ್ಧರಣೆಯ ಪ್ರಯತ್ನಗಳ ಆವಶ್ಯಕತೆಯು ಈ ಜಿಲ್ಲೆಯಲ್ಲಿ ಬಹಳವಾಗಿರುವುದು. ಆರೋಗ್ಯ ಪಾಲನೆಯ ಸಾಮಾನ್ಯವಾದ ಸೂತ್ರಗಳ ಮಾಹಿತಿಯು ಇಲ್ಲದೆ ಪ್ರಸೂತರಾಗುವಾಗ ಮತ್ತು ಪ್ರಸೂತರಾದ ಮೇಲೆ ಸಹ ಸ್ತ್ರೀಯರು ಎಂಥಾ ಭಯಂಕರವಾದ ಅಪಾಯಗಳಿಗೆ ತುತ್ತಾಗುತ್ತಿರುವರೆಂಬುದು ಪ್ರತಿನಿತ್ಯದಲ್ಲಿಯೂ ವ್ಯಕ್ತವಾಗುತ್ತಿರುವುದು. ಶಿಶುಗಳ ನಿರ್ಬಲತ್ವ, ಇವುಗಳ ಮರಣ ಸಂಖ್ಯೆಯನ್ನು ಪರ್ಯಾಲೋಚಿಸಿದರೆ ಸ್ತ್ರೀಯರ ದುಸ್ಥಿತಿಯು ಮತ್ತಷ್ಟು ಸ್ಪಷ್ಟವಾಗಿ ತಿಳಿಯಬಾಗುವುದು. ಸ್ತ್ರೀಯರ ವಿಶೇಷವಾಗಿರುವ ದುಸ್ಥಿತಿಯನ್ನು ಇನ್ನು ವಿಸ್ತಾರವಾಗಿ ಇಲ್ಲಿ ವರ್ಣಿಸುವುದು ಅಗತ್ಯವಿರದು. ಸಿಸ್ಟರ್ ಸುಶೀಲಬಾಯಿಯವರ ವಿಜ್ಞಾಪನೆಯನ್ನು ಕೇಳಿದ ಬಳಿಕವಾದರೂ ಈ ವಿಷಯಕ್ಕೆ ನಮ್ಮ ಲಕ್ಷ್ಯವನ್ನು ಬೇಗನೇ ಕೊಡುವುದು ಅಗತ್ಯವಲ್ಲವೇ?

ಸಭಾಧ್ಯಕ್ಷ ಸ್ಥಾನವನ್ನು ವಹಿಸಿದ ಶ್ರೀಮತಿ ರಾಧಾಬಾಯಿಯವರು ತಮ್ಮ ಭಾಷಣದಲ್ಲಿ ಸಿಸ್ಟರ್ ಸುಶೀಲಾಬಾಯಿಯವರು ಹೇಳಿದ ವಿಷಯಗಳೆಲ್ಲವು ಸಭಿಕರಿಗೆ ಚನ್ನಾಗಿ ಮನದಟ್ಟಾಗುವಂತೆ ಅವನ್ನೆ ತಿರಿಗೊಮ್ಮೆ ವಿಮರ್ಶಿಸಿ ಮಂಗಳೂರು ಮಹಿಳಾ ಸಭೆಯು ಇಲ್ಲಿಯ ಎಲ್ಲಾ ಸ್ತ್ರೀ ಸಮಾಜದವರು ಕೂಡಿ ಬರುವ ಸಭೆಯಾಗಲಿ ಎಂಬುವ ಕೋರಿಕೆಯನ್ನು ವ್ಯಕ್ತಗೊಳಿಸಿ [illegible] ಭಾಷಣವನ್ನು ಮುಗಿಸಿದರು. ಹಿಂದೂಗಳಲ್ಲಿ ನಾಲ್ಕೈದು ಜಾತಿಯ ಸ್ತ್ರೀಯರುಗಳು ಸಭೆಯ ಮೆಂಬರರಾಗಿರುತ್ತಾರೆ.

ರಾಜಗೀತವನ್ನು ಹಾಡಿದ ಬಳಿಕ ಸಭೆಯು ಮುಕ್ತಾಯವಾಯಿತು.

ಕೆನರಾ ಪಬ್ಲಿಕ್ ಕನ್‌ವೇಯನ್ಸ್ ಕಂಪೆನಿ, ಮಂಗಳೂರು.

ಮಂಗಳೂರಿನಿಂದ ಉಡುಪಿಗೂ ಮತ್ತು ಪುತ್ತೂರಿಗೂ ಮೋಟರ್ ಭಂಡಿಗಳಲ್ಲಿ ಪ್ರಯಾಣಿಕರನ್ನು ಒಯ್ಯುವ ಖರ್ಚಿನ ಅಜಮಾಯಿಷಿ ಮೊದಲಾದ್ದನ್ನು ತಯ್ಯಾರಿಸಿ ಈ ಕಂಪೆನಿಯವರು ಪ್ರಕಟಿಸಿರುವರು. ಈ ಅಜಮಾಯಿಷಿಯು ಇಲ್ಲಿಯ ರಸ್ತೆಗಳ ಸ್ಥಿತಿಗಳನ್ನು ಸ್ವತಹ ನೋಡಿ ತಿಳಕೊಳ್ಳಲು ಇಲ್ಲಿಗೆ ಬಂದ ಮದ್ರಾಸ್ ಟ್ರೇನ್ಸ್‌ಪೋರ್ಟ ಲಿಮಿಟೆಡ್ ಕಂಪೆನಿಯ ಮೆನೆಜಿಂಗ್ ಡಿರೆಕ್ಟರರಾದ ಮಿ ರೊಬಿನ್‌ಸನ್ ನಾರ್ಥ್ ಎಂಬವರಿಂದ ತಯ್ಯಾರಿಸಲ್ಪಟ್ಟದ್ದಾಗಿರುವುದು. ವಿಶೇಷ ಸರಕುಗಳನ್ನು ಒಯ್ಯಲಾಗುವ ಮೊಟಾರ್ ಬಂಡಿಗಳನ್ನು ಸಂಗ್ರಹಿಸಿ ಕೊಡುವ ಕಸಬು ಈ ಮದ್ರಾಸಿನ ಕಂಪೆನಿಯವರದ್ದಾಗಿರುತ್ತದೆ. ಇಂಥಾ ಕಂಪೆನಿಯನ್ನು ನಡಿಸುವ ಮಾಹಿತಿದಾರರಾದ ಮೆ| ರೊಬಿನ್‌ಸನ್ ನಾರ್ಥರವರ ಅಜಮಾಯಿಷಿಯ ವೃತ್ತಾಂತವು ಹೇಗಿರುವುದೆಂಬುದನ್ನು ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿಯ ಕ್ಷೇಮಾರ್ಥವಾಗಿ ಸರ್ವರೂ ತಿಳಿಯುವುದು ಅಗತ್ಯ

ಮಂಗಳೂರಿನಿಂದ ಉಡುಪಿಗೆ ಹೋಗುವ ಅಥವಾ ಉಡುಪಿಯಿಂದ ಮಂಗಳೂರಿಗೆ ಬರುವ ಪ್ರಯಾಣಿಕನೊಬ್ಬನ ಟಿಕೇಟು ದರವು ರೂ. ೧—೬—೦ ಮತ್ತು ಮೊಟರ್ ಭಂಡಿಯೊಂದರಲ್ಲಿ ಪ್ರಯಾಣಮಾಡುವ ಪ್ರಯಾಣಿಕರ ಸಂಖ್ಯೆ ೨೫, ದಿವಸ ಒಂದಕ್ಕೆ ಭಂಡಿಯು ನಾಲ್ಕು ಪಯಣಗಳನ್ನು ಮಾಡಿಸುವುದು—ಈ ರೀತಿ ಇದಕ್ಕೆಲ್ಲ ಒಟ್ಟಿನ ಖರ್ಚು ರೂ. ೧೭೫—೦—೦, ಆಮದು ರೂ. ೩೪೩—೧—೪ ಆಗುವುದೆಂತ ಅಂದಾಜು ಮಾಡಲ್ಪಟ್ಟಿದೆ. ಅಂದರೆ ಒಟ್ಟಾರೆ ಮುನಾಫೆಯು ದಿನ ಒಂದಕ್ಕೆ ರೂ. ೧೬೮—೧—೪ ಉಂಟಾಗಬಹುದೆಂಬದಾಗಿ ನಿರೀಕ್ಷಿಸಲ್ಪಟ್ಟಿರುತ್ತದೆ. ಮೊಟರ್ ಭಂಡಿಯನ್ನು ನಡಿಸಲು ಖರ್ಚು ಮೈಲು ಒಂದಕ್ಕೆ ಆಣೆ ೧೦ರಂತೆ ಹಿಡಿದಿರುವರು. ರೂಪಾಯಿ ೧೬೮—೧—೪ರಲ್ಲಿ ಮೊಟರ್ ಭಂಡಿಗಳ ವ ಉದಿಯಾವರದಿಂದ ಉಡುಪಿಗೆ ಪ್ರಯಾಣಿಕರನ್ನು ಒಯ್ಯುವ ಟ್ರಾಮ್ಸ್ನೀಟುಗಳ ಖರ್ಚು ಕಳೆಯಲಾಗಿ ನೆಟ್ ಮುನಾಫೆಯು ದಿನ ಒಂದಕ್ಕೆ ರೂ ೧೫೦ರಂತಿರಬಹುದೆಂದು ಮೆ| ನಾರ್ಥರವರ ಅಜಮಾಯಿಷಿಯಿಂದ ತೋರಿಬರುವುದು. ಮಂಗಳೂರಿನಿಂದ ಕೂಳೂರು, ಕೂಳೂರಿನಿಂದ ಪಾನಂಬೆ, ಪಾನಂಬೆಯಿಂದ ಮುಲ್ಕಿ, ಮುಲ್ಕಿಯಿಂದ ಪಾಂಗಾಳ, ಪಾಂಗಾಳದಿಂದ ಉದಿಯಾವರ ಈ ರೀತಿ ಮಂಗಳೂರು ಉಡುಪಿ ಮಾರ್ಗಕ್ಕೆ ೫ ಮೊಟರ್ ಭಂಡಿಗಳು ಬೇಕಾಗುತ್ತವೆ. ಇದೇ ರೀತಿ ಮಂಗಳೂರಿನಿಂದ ಪುತ್ತೂರು ಮಾರ್ಗದಲ್ಲಿ ಮೊಟರ್ ಭಂಡಿಗಳನ್ನು ನಡಿಸಿ ಉಂಟಾಗುವ ಆದಾಯ ಖರ್ಚುಗಳ ಅಂದಾಜು ಸಹ ಮಾಡಲ್ಪಟ್ಟಿರುವುದು ೩೦ ಮೈಲುಗಳ ಈ ಪ್ರಯಾಣಕ್ಕೆ ಟಿಕೇಟು ದರವು ರೂ. ೧ರಂತೆ ಎಣಿಸಲ್ಪಟ್ಟಿರುವುದು. ಗಾಡಿಯೊಂದಕ್ಕೆ ಪ್ರಯಾಣಿಕರ ಸಂಖ್ಯೆ ೨೫, ದಿನಕ್ಕೆ ಎರಡಾವರ್ತಿ ಗಾಡಿಗಳನ್ನು ಬಿಡುವುದು ಗಾಡಿಗಳ ಖರ್ಚು ಮೈಲು ಒಂದಕ್ಕೆ ಆಣೆ ೧೦ರ ಪ್ರಕಾರ, ಹೀಗೆ ದಿವಸ ಒಂದಕ್ಕೆ ಖರ್ಚು ಕಳದು ರೂ ೭೭ ಉಳಿಯುವುದು ವರುಷ ಒಂದಕ್ಕೆ ಈ ಮುನಾಫೆಯು ರೂ ೧೬,೫೦೦—೦—೦ ಆಗುತ್ತದೆ ಈ ಮಾರ್ಗಕ್ಕೆ ಬೇಕಾದ ಗಾಡಿಗಳ ಮೌಲ್ಯ ರೂಪಾಯಿ ೨೧,೦೦೦—೦—೦ ಆಗಿರುವುದು. ಹೀಗೆ ಒಂದು ಲಕ್ಷ ಭಂಡವಾಳದ ಮೇಲೆ ಸೇಕಡಾ ೧೭ರಂತೆ ಮುನಾಫೆಯು ಷೇರುದಾರರಿಗೆ ದೊರಕಲು ಅಸ್ಪದವಿದೆ ಎಂತ ಮೆ| ನಾರ್ಥರವರು ತಮ್ಮ ರಿಪೋರ್ಟಿನಲ್ಲಿ ಬರದಿರುವರು. ಮೊಟರ್ ಭಂಡಿಗಳ ಮೂಲಕ ಪ್ರಯಾಣದ ಸೌಕರ್ಯಗಳು ಹೆಚ್ಚುವುದರಿಂದ ಪ್ರಯಾಣಿಕರ ಸಂಖ್ಯೆಯು ಸಹ ಸೇಕಡಾ ೫೦ರಂತೆ ಏರ ಬಹುದೆಂಬ ಭರವಸೆಯು ಇರುವುದು.

ಮೊಟರ್ ಸರ್ವಿಸ್ಸನ್ನು ಇಲ್ಲಿ ಏರ್ಪಡಿಸಲು ಎಷ್ಟು ಅನುಕೂಲವಾಗಿರುವುದೆಂಬುದನ್ನು ಮಾಹಿತಿದಾರರು ಕೊಟ್ಟ ಮೇಲಣ ರಿಪೋರ್ಟಿನಿಂದ ಜನರು ಲಕ್ಷ್ಯಕ್ಕೆ ತಂದುಕೊಳ್ಳಬೇಕಾಗಿ ಈ ಮೂಲಕ ಅಪೇಕ್ಷಿಸುತ್ತೇವೆ.

ಕುಡಿಯುವ ನೀರಿನ ಕ್ಷಾಮದ ಸಂಭವವು

ಕುಡಿಯುವ ನೀರಿನ ಅಡಚಣೆಯು ಪ್ರಕೃತ ಈ ಜಿಲ್ಲೆಯ ಎಲ್ಲಾ ಪ್ರಾಂತ್ಯಗಳಿಂದಲೂ ಕೇಳಿ ಬರುತ್ತಿರುವುದು ಮೇ ತಿಂಗಳ ಅಂತ್ಯದೊಳಗೆ ಒಂದೆರಡು ಸಲವಾದರೂ ಸರಿಯಾಗಿ ಮಳೆಯಾಗುವುದೆಂಬ ಭರವಸೆಯಿಂದ ಭತ್ತವನ್ನು ಹೊಲಗಳಲ್ಲಿ ಬಿತ್ತನೆ ಹಾಕಿದ ಕೃಷಿಗಾರರೆಲ್ಲರೂ ಮಳೆಯಿಲ್ಲದೆ ಕಂಗೆಟ್ಟಿರುವರು. ಕೃಷಿಗಾರರಿಗೆ ಬೇಕಾದ ನೀರಿನ ತುಟ್ಟಿಯು ಹಾಗಿರಲಿ. ಜನರಿಗೆ ಸ್ನಾನಮಾಡಲೂ ವಸ್ತ್ರಗಳನ್ನು ಒಗೆಯಲೂ ಸಾಕಾದಷ್ಟು ನೀರು ಗ್ರಾಮುಗಳಲ್ಲಿರದು. ಸರಕಾರದವರಿಂದ ಅಥವಾ ಲೋಕಲ್ ಬೋರ್ಡುಗಳಿಂದ ಅಗಿಸಲ್ಪಟ್ಟ ಬಾವಿಯ ಪ್ರಯೋಜನಗಳನ್ನು ಜನರು ಬಹಳ ಪಡಿಯುತ್ತಿದ್ದಾರೆ. ಇಂಥಾ ಬಾವಿಗಳಿಲ್ಲದ್ದಲ್ಲಿ ಜನರಿಗುಂಟಾಗುವ ನೀರಿನ ಅಡಚಣೆಯು ಏನೆಂದು ತಿಳಿಯಲು ಇದೇ ಯುಕ್ತ ಕಾಲವಾಗಿರುವುದು. ಬಾವಿಗಳು ಇನ್ನು ಎಲ್ಲೆಲ್ಲಿ ಬೇಕಾಗಿವೆ ಎಂತ ತಿಳಿಯಲಿಕ್ಕೆ ಸಹ ಇದು ಬಹಳ ಅನುಕೂಲ ಸಮಯವಾಗಿರುತ್ತದೆ. ವಿಷಮ ಜ್ವರ, ರಕ್ತಾತಿಸಾರ ಮೊದಲಾದ ರೋಗಗಳಿಗೆ ಗ್ರಾಮುಗಳಲ್ಲಿ ಸಹ ಆಸ್ಪದವು ಜನರು ಪ್ರಕೃತ ಕುಡಿಯುತ್ತಿರುವ ಅಶುದ್ಧವಾದ ನೀರಿನಿಂದ ಹೇಗೆ ದೊರಕುವುದೆಂಬುದು ಕುಡಿಯುವ ನೀರಿನ ಅಡಚಣೆಯ ಈ ಸಂದರ್ಭದಲ್ಲಿ ಸ್ಪಷ್ಟವಾಗುವುದು. ಮುಖ್ಯ ಮುಖ್ಯವಾದ ಗ್ರಾಮುಗಳಲ್ಲಿ ಇನ್ನೂ ಒಳ್ಳೇದಾದ ಕುಡಿಯುವ ನೀರಿನ ಯೋಗ್ಯವಾದ ಬಾವಿಗಳಿಲ್ಲ. ಬಾವಿಗಳು ಲೋಕಲ್ ಬೋರ್ಡಿನವರಿಂದ ತೋಡಿಸಿದ ಕೆಲವು ಕಡೆಗಳಲ್ಲಿ ಬಾವಿ ಅಡಿತಳದಲ್ಲಿ ಶಿಲೆಯು ದೊರಕಿದೆ. ಇಂಥಾ ಬಾವಿಗಳಲ್ಲಿ ನೀರು ಈ ಬೇಸಿಗೆಯಲ್ಲಿ ಬತ್ತಿಹೋಗಿ ಜನರಿಗೆ ಬಹಳ ಅಡಚಣೆಯುಂಟಾಗಿರುವುದು. ಅದಲ್ಲದೆ ಇನ್ನು ಕೆಲವು ಗ್ರಾಮುಗಳಲ್ಲಿ ಬಾವಿಗಳನ್ನು ತೋಡಿಸುವಾಗ ಶಿಲೆಯ ತಳವು ದೊರಕಿತೆಂದರೆ ಅಂಥಾ ಬಾವಿ ಕೆಲಸಗಳನ್ನು ಮುಂದುವರಿಯದೆ ಅರ್ಧದಲ್ಲಿಯೇ ನಿಲ್ಲಿಸಿದ್ದುಂಟಾಗಿ ಕೇಳುತ್ತೇವೆ ನೀರಿನ ಸರಬರಾಯಿಯು ತಕ್ಕ ರೀತಿಯಲ್ಲಿ ಇಲ್ಲದ ಕಡೆಗಳಲ್ಲಿ ಸಾಧ್ಯವಾದ ಪ್ರಯತ್ನಗಳನ್ನು ನಡಿಸಿ ಜನರಿಗೆ ಶುದ್ಧವಾದ ನೀರಿನ ಅನುಕೂಲತೆಯನ್ನು ಒದಗಿಸಿಕೊಡುವುದು ಅಗತ್ಯವಾಗಿರುವುದು. ಈ ಬಗ್ಗೆ ಎಂತ ಸರಕಾರದವರು ಲೋಕಲ್ ಬೋರ್ಡುಗಳಿಗೆ ಆಗಿಂದಾಗ್ಗೆ ದ್ರವ್ಯ ಸಹಾಯವನ್ನು ಕೊಡುತ್ತಿರುವರು. ಬಾವಿಗಳನ್ನು ತೋಡಿಸುವಾಗ ಇಲ್ಲಿ ಶಿಲೆಯ ತಳಗಳು ಸಿಕ್ಕುವ ಸಂದರ್ಭಗಳು ಬಹಳವಾಗಿರುವುದರಿಂದ ಶಿಲೆಯನ್ನು ಕೊರೆದು ತೆಗಿಯುವ ಯಂತ್ರ ಸಾಹಿತ್ಯಗಳನ್ನು ಲೋಕಲ್ ಬೋರ್ಡಿನವರು ಸಂಗ್ರಹಿಸಿಟ್ಟುಕೊಂಡು ಅಗತ್ಯವಿದ್ದಲ್ಲಿ ಇದರ ಉಪಯೋಗದಿಂದ ನೀರಿಲ್ಲದ್ದಲ್ಲಿ ನೀರನ್ನು ಒದಗಿಸಿಕೊಡುವುದು ಅಗತ್ಯವಾಗಿದೆ.

ಅಕಬರ ಪಾಚ್ಛಾಯ.

ಅಕಬರ ಬಾದಶಹನು (ಪಾಚ್ಛಾಯ) ಸಿಂಹಾಸನವನ್ನೇರಿ ೨೪ ವರ್ಷ ರಾಜ್ಯವಾಳಿದನಂತರ ಅಂದರೆ ೧೫೮೦ನೇ ಇಸವಿಯಲ್ಲಿ ಅವನ ಧಾರ್ಮಿಕ ವಿಷಯದಲ್ಲಿ ಮತಾಂತರವಾಯಿತು. ಇದರ ಇತಿಹಾಸವನ್ನು ಅಬದುಲ ಕಾದರ ಮಲುಕಶಾ ಬಿದೋಣಿ ಎಂಬವನು ತನ್ನ "ಮುಂತ ಖಾಬುತ್ ತವಾರಿಖ" (ಸಂಕ್ಷಿಪ್ತ ಇತಿಹಾಸ) ಎಂಬ ಗ್ರಂಥದಲ್ಲಿ ಬರಸಿಟ್ಟಿರುತ್ತಾನೆ ಇವನು ಅಬು ಫಾಜಿಲ ಮತ್ತು ಫೇಜಿ ಮುಂತಾದವರ ಸ್ನೇಹಿತನಿದ್ದು ರಾಮಾಯಣ, ರಾಜತರಂಗಿಣಿ ಮುಂತಾದ ಗ್ರಂಥಗಳನ್ನು ಫಾರಸಿ ಭಾಷೆಯಲ್ಲಿ ಭಾಷಾಂತರ ಮಾಡಲಿಕ್ಕೆ ಬಹಳ ಸಹಾಯ ಮಾಡಿರುತ್ತಾನೆ. ಅಕಬರನು ಆಗ್ರಾ ಶಹರಿನ ಹತ್ತರ ಇರುವ ಫತ್ತೇಪುರ ಸಿಕ್ರಿ ಎಂಬ ಊರಲ್ಲಿ ಒಂದು ಅರಮನೆಯನ್ನು ಕಟ್ಟಿ ಅಲ್ಲಿಯೇ ವಸ್ತಿಮಾಡಿದ್ದನು ಈ ಅರಮನೆಯಲ್ಲಿ ಪ್ರತಿಯೊಂದು ದಿವಸ ದೊಡ್ಡ ದೊಡ್ಡ ವಿದ್ವಾಂಸರ ಸಭೆ ಆಗುತ್ತಿತ್ತು. ಈ ಬಾದಶಹನು ತನ್ನ ಹತ್ತರ ಮುಸಲ್ಮಾನ ಪಂಡಿತರನ್ನೂ, ಬ್ರಾಹ್ಮಣ ಪಂಡಿತರನ್ನೂ, ಕ್ರಿಸ್ತಿಯನರ ಪಾದರಿಗಳನ್ನೂ ವನವಸರಿ ಎಂಬ ಊರಿನಿಂದ ಆಮಂತ್ರಣಕೊಟ್ಟು ದಸ್ತುರಜಿ ಎಂಬ ಫಾರಸಿ ಗ್ರಹಸ್ಥನನ್ನೂ ತನ್ನ ಹತ್ತರ ಇಟ್ಟುಕೊಂಡಿದ್ದನು. ಈ ಎಲ್ಲಾ ವಿದ್ವಾಂಸರು ಆ ಸಭೆಗೆ ಒಂದು ದೊಡ್ಡ ದೊಡ್ಡ ವ್ಯಾಖ್ಯಾನವನ್ನು ಕೊಟ್ಟನಂತರ ಆಗುವ ವಾದ ವಿವಾದವನ್ನು ಅಕಬರನು ಲಕ್ಷ್ಯಪೂರ್ವಕವಾಗಿ ಕೇಳುತ್ತಿದ್ದನು. ಕೆಲವು ಸಮಯಕ್ಕೆ ಈ ವಾದ ವಿವಾದವು ಮುಂಜಾನೆ ಬೆಳಗು ಹರಿವ ವರೆಗೆ ನಡಿಯುತ್ತಿತ್ತು. ಹೀಗೆ ನಡಿಯುತ್ತಾ ನಡಿಯುತ್ತಾ ಇರುವಾಗ ಬಾದಶಹನಿಗೆ ಮುಸಲ್ಮಾನಿ ಧರ್ಮದ ಮೇಲಿನ ಶ್ರದ್ಧೆಯು ಹಾರಿಹೋಯಿತು. "ಈಶ್ವರ ಪ್ರಣೀತ ಪುಸ್ತಕಗಳು, ಸಾಧುಸಂತರು ಮತ್ತೆ ನ್ಯಾಯನೀತಿಯು ಈ ಮೂರು ವಿಷಯಗಳು ಎಲ್ಲಾ ಧರ್ಮಗಳಲ್ಲಿ ಸರಿಯಾಗಿ ಇರುತ್ತವೆ. ಮತ್ತು ಬೇರೆ ಬೇರೆ ಪಂಥಗಳು ಸಹಾ ಎಲ್ಲಾ ಧರ್ಮಗಳಲ್ಲಿ ಇರುತ್ತವೆ," ಎಂತ ಅವನಿಗೆ ಸಮಾಧಾನವಾಯಿತು. ಇಷ್ಟೇ ಅಲ್ಲದೆ ಈ ಎರಡು ಮತದವರು ಒಬ್ಬರಿಗೊಬ್ಬರು ನಾಸ್ತಿಕರೆಂತ ಕರಿಯುವದಲ್ಲದೆ ಮಾತುಮಾತಿನಿಂದ ಬಡದಾಟಕ್ಕೆ ಸಹಾ ಪ್ರಾರಂಭ ಮಾಡುತ್ತಿದ್ದರು ಇದನ್ನೆಲ್ಲಾ ನೋಡಿ ಅಕಬರನಿಗೆ ಈ ವಿದ್ವಾಂಸರ ಡಂಭವೂ ದುರಾಗ್ರಹವೂ ಮನಸ್ಸಿಗೆ ಹತ್ತಿದವು ಅಧರ್ಮ ಮತ್ತು ಪಾಪ ಈ ಎರಡು ಸಂಗತಿಗಳನ್ನು ಎಲ್ಲಾ ಮತದವರು ಮಾನ್ಯ ಮಾಡುತ್ತಿರುವಾಗ, ತನ್ನ ಧರ್ಮವೇ ಖರೆ, ಬೇರೆಯವರ ಧರ್ಮ ಸುಳ್ಳು ಎಂತ ದುರಾಗ್ರಹವನ್ನು ಮನುಷ್ಯರು ಯಾಕೆ ಹಿಡಿಯುತ್ತಾರೆಂತ ಅಕಬರನಿಗೆ ತಿಳಿಯದಾಯಿತು ಇದ್ದರಿಂದ ಅವನು ಹಳೆ ಮತವನ್ನೆಲ್ಲಾ ಬಿಟ್ಟು ಒಂದು ಹೊಸ ಮತವನ್ನು ಸ್ಥಾಪಿಸಬೇಕೆಂತ ಮನಸ್ಸಿನಲ್ಲಿ ನಿಶ್ಚಯಮಾಡಿದನು. ನಂತರ ಪುರಾಣಿಕರ ಕಡೆಯಿಂದ ಪುರಾಣವನ್ನು ಓದಿಸಿ ಕೇಳುತ್ತಿದ್ದನು. ಅವನ ಹಿಂದು ಹೆಂಡತಿಯರು ಹೋಮ ಹವನವನ್ನು ಮಾಡುತ್ತಿದ್ದರು. ಅದರಲ್ಲಿ ಅಕಬರನು ಸಹಾ ಕೂಡುತ್ತಿದ್ದನು. ಪುನರ್ಜನ್ಮದ ಮೇಲೆ ಮತ್ತು ಹಿಂದುಗಳ ದೇವತೆಗಳ ಪೈಕಿ ಸೂರ್ಯ ವ ಅಗ್ನಿ ದೇವತೆಗಳ ಮೇಲೆ ಅವನಿಗೆ ವಿಶ್ವಾಸ ಕೂತಿತು. ಆಗ ಅವನ ಪಕ್ಷದ ಜನರು ಸಹಾ ಅವನಿಗೆ

ಪುಷ್ಟೀಕರಣಕೊಟ್ಟರು. ಎಷ್ಟೋ ಮುಸಲ್ಮಾನರು ದುರಾಗ್ರಹಿಗಳಿದ್ದರು. ಅವರು [illegible] ಸಿಟ್ಟಾಗಿ ಅಕಬರನ ಈ ವರ್ತನದ ವಿಷಯದಲ್ಲಿ ಸಣ್ಣ ಸಣ್ಣ ಗ್ರಂಥಗಳನ್ನು ಬರೆದರು. ಆದರೆ ಎಷ್ಟೋ ಜನರು ಅಕಬರನ ಪುಷ್ಟೀಕರಣಾರ್ಥವಾಗಿಯೇ ಪುಸ್ತಕಗಳನ್ನು ಬರದರು. ಅವರಲ್ಲಿ ಸುಪ್ರೀ ಮಹಜಹ ತಿಳಿದಿರುವಂಥಾ ತಾಜುದ್ದಿನ ಸಾಹೇಬರು ಅಕಬರನಿಗೆ ಅನುಕೂಲವಾದರು. ರಾಜಾಬಿರಬಲ, ಅಬೂ ಫಾಜಿಲ, ಫೇಜಿ ಖಾನಖಾನಮ, ವಗೈರೆ ಮುಖ್ಯ ಸರದಾರರು "ಬಾದಶಹನ ಪಕ್ಷವೇ ಯೋಗ್ಯ"ವೆಂತ ಪ್ರತಿಪಾದಿಸಲಿಕ್ಕೆ ಹತ್ತಿದರು. "ರಾಜನೇ "ಕಿಬಲಾ" ವ "ಕಾಬಾ" ಇರುತ್ತಾನೆ ಅವನ ಹುಕುಮೇ ಈಶ್ವರನ ಹುಕುಂ" ಎಂತ ಹೇಳಲಿಕ್ಕೆ ಹತ್ತಿದರು. ಅಕಬರನ ಹತ್ತರ ರಾಜಾ ಬಿರಬಲ ಎಂಬವನು ಕಾಲೋಚಿತ ಮತ್ತು ಪ್ರಸಂಗೋಚಿತ ಮಾತುಗಳನ್ನು ಆಡುವಂಥವನು ವಿಲಕ್ಷಣ ಬುದ್ಧಿಯುವನಿದ್ದನು. ಅವನಿಗೆ ಅಕಬರನು ಮಲಿಕುಶ್ಶೋರಾ ಎಂಬ ಪದವಿಯನ್ನು ಕೊಟ್ಟಿದ್ದನು. ಅವನ ಹತ್ತರ ನಾಗರಕೋಟದ ಕೋಟೆಯೂ ಮತ್ತು ಮಹಾಲ ಜಹಾಗಿರಿಗಳೂ ಇದ್ದವು. ಅವನು ಕಾಬೂಲಿಗೆ ದಂಡೆತ್ತಿ ಹೋದಾಗ ಅವನಿಗೆ ಮೃತ್ಯುವಾಯಿತು. ಅಕಬರನು ನೌರೋಜ ಜಲಾಲಿ ಎಂಬ ಹೊಸ ಹಬ್ಬವನ್ನು ನಿರ್ಮಾಣ ಮಾಡಿದನು. ಇದಕ್ಕೆ ಏಳು ದಿವಸ ಉತ್ಸವವು ಇತ್ತು. ದಸ್ತುರಜಿ ನಾರಸಿ ಗೃಹಸ್ಥನ ಮತವೇನಂದರೆ - ಸೂರ್ಯ ಮತ್ತು ಅಗ್ನಿ ಇವರೇ ದೇವರು. ಇವರ್ದು ಇವರ ಪೈಕಿ ಸೂರ್ಯನೇ ಒಬ್ಬನೇ ನಿರುಪತ್ರವಿರುವ, [illegible] ಉಪಯೋಗಿ [illegible] ರಿಂದ ಈಶ್ವರನ ದಯೆಯ ಪ್ರತಿಮೆಯೇ ಆಗಿರುತ್ತಾನೆ. ಆದ್ದರಿಂದ ಸೂರ್ಯನ ಸೇವೆ ಅತಿಮೇಲಾಗಿರುವುದು. ಇದರಿಂದ ಅಕಬರನು ದಿಂಬೆಸೂ[illegible] ಸೂರ್ಯನ ಸ್ತುತಿಯನ್ನು ಮಾಡಲಿಕ್ಕೆ ಪ್ರಾರಂಭ ಮಾಡಿದನು. ಕಟ್ಟಕಡೆಗೆ ಮುಸಲ್ಮಾನಿ ಧರ್ಮದ ನಿಂದೆಯು ರಾಜ ದರಬಾರಿನಲ್ಲಿ ಬಹಳ ಆಗಲಿಕ್ಕೆ ಹತ್ತಿತು. ಬಾದಶಹನ [illegible] ತದವರ ಮೇಲೆ ಅವನ ಅವಕೃಪೆಯು ಉಂಟಾಗಲಿಕ್ಕೆ ಹತ್ತಿತು. ಆದರೂ ಮುಸಲ್ಮಾನಿ ಧರ್ಮವನ್ನೂ ಸಹಾ ಅಕಬರನು ಎಷ್ಟೋ ಪ್ರೇಮ ಮಾಡುತ್ತಿದ್ದನು. [illegible] ದರದಲ್ಲಿರುವ ಖಾಜಿ ಒಂದನಾವಜನ ಯಾತ್ರೆ ಮಾಡಿದನು. ಆ ಸಮಯದಲ್ಲಿ ಇ[illegible] ದಾರಿ ದಾರಿಯಲ್ಲಿ ಅವನು ಕಾಲ್ನಡೆಯಾಗಿ ಹೋದನು. [illegible] ಹತ್ತರ ಖಾಜಿ ಚಿಸ್ತಿಯವನ ಮಶೀದಿಯನ್ನು ಕಟ್ಟಿಸಿದನು. ಅದು ಅತ್ಯುತ್ತಮ [illegible]ವಾಗಿ ಈಗಲೂ ಆದೆ. ನಂತರ "ಹಿಂಸೆ ಮಾಡಬಾರದು" ಎಂತ ಹುಕುಂ ಮಾಡಿ ಗೋವಧೆಯನ್ನು ನಿಲ್ಲಿಸಿದನು. ೧೪ ವರ್ಷ ಆದ ನಂತರ ಹುಡುಗರ [illegible] ಮಾಡಬೇಕೆಂತಲೂ, ಗಂಡಸರು ಒಂದೇ ಹೆಂಡತಿಯನ್ನು ಮದುವೆಯಾಗಬೇಕೆಂತಲೂ ರಾಜಾಜ್ಞೆಯಾಯಿತು. ಆಗ ಬ್ರಾಹ್ಮಣರು ಅವನಿಗೆ ಅವತಾರಿಕ ಪುರುಷನೆಂತ ನೆನಸಿದರು. ಮತ್ತು ಗೋಬ್ರಾಹ್ಮಣ ಪ್ರತಿಪಾಲಕ ಎಂಬ ಬಿರುದನ್ನು ಕೊಟ್ಟರು. ಅಕಬರನ ಮತಕ್ಕೆ ಪುಷ್ಟಿಬರಬೇಕೆಂತ ಬ್ರಾಹ್ಮಣರು "ಅಲ್ಲೋಪನಿಷದ್" ಎಂಬ ಪುಸ್ತಕವನ್ನು ಬರೆದರು.

ಅಕಬರನು ಹೇಳಿದ್ದೇನಂದರೆ "ಮುಸಲ್ಮಾನಿ ಧರ್ಮದ ಆಯುಷ್ಯವು ಒಟ್ಟಿಗೆ ೧೦೦೦ ವರ್ಷ ಇತ್ತು. ಅದು ಮುಗಿಯಲಿಕ್ಕೆ ಬಂತು". ಆದ್ದರಿಂದ ಅವನು ಹಿಜರಿ ಶಕವನ್ನು ನಿಲ್ಲಿಸಿ "ತಾರೀಖ ಇಲಾಹಿ" ಎಂಬ ಹೊಸ ಶಕವನ್ನು ಪ್ರಾರಂಭಿಸಿದನು. ಅದರಂತೆಯೇ "ಲಾ ಇಲ್ಲಾ ಇಲ್ಲಿಲ್ಲಾ ಮಹಮ್ಮದ ರಸುಲ್ಲ ಅಲ್ಲ" ಎಂತ ಇದ್ದ ಸೂತ್ರಕ್ಕೆ ಬದಲಾಯಿಸಿ "ಒಲ್ ಅಕ್ಬರ ಖಲೀಫ ದುಲ್ಲಾ" ಎಂತ ಮಾಡಿದನು. ಅವನು ತನ್ನ ಈ ಹೊಸ ಮತಕ್ಕೆ "ದಿನ ಇಲಾಹಿ" ಎಂತ ಹೆಸರು ಕೊಟ್ಟನು. ಜನರಿಗೆ ಸಲಾಂ ಮಾಡುವ ವೇಳ್ಯಕ್ಕೆ "ಅಲ್ಲಾಹ ಅಕ್ಬರ" ಎಂತ ಹೇಳಬೇಕೆಂತಲೂ ಅದಕ್ಕೆ ಉತ್ತರವಾಗಿ "ಜಲಜಲಾಲಹು" ಎಂತ ಹೇಳಬೇಕೆಂತಲೂ ಆಜ್ಞೆ ಮಾಡಿದನು. ಮುಸಲ್ಮಾನರು ಅಪವಿತ್ರ ಎಂತ ನೆನಸುವ ಪಶುಗಳಾದ ಹಂದಿ ಮತ್ತು ನಾಯಿಗಳನ್ನು ತನ್ನ ಅರಮನೆಯಲ್ಲಿ ಇಟ್ಟುಕೊಂಡನು. ತನ್ನ ಮಗನಾದ ಸಲೀಮ (ನಂತರ ಜಹಾಂಗೀರ)ನಿಗೆ ರಾಜಾ ಭಗವಾನದಾಸನ ಮಗಳನ್ನು ಹಿಂದು ರೀತಿಯಂತೆ ಮದುವೆ ಮಾಡಿದನು. ಈ ಹುಡುಗಿಗೆ ೨ ಕೋಟಿ ರೂಪಾಯಿ ಸ್ತ್ರೀಧನ ಸಿಕ್ಕಿತು. ಈ ಲಗ್ನದ ಮೆರವಣಿಗೆಯಲ್ಲಿ ಸ್ವತಹಾ ಬಾದಶಾಹನು ಬಂದಿದ್ದನು. ಆಗ ಅವನ ಹೆಂಡರು ಹಣೆಗೆ ಕುಂಕುಮವನ್ನು ಹಚ್ಚಿದ್ದಲ್ಲದೆ ಅಕ್ಬರನೇ ಹಣೆಗೆ ತಿಲಕವನ್ನು ಮಾಡಿದ್ದನು. ಹೀಗೆ ಅಕ್ಬರನ ಧರ್ಮವು ಹಬ್ಬಲಿಕ್ಕೆ ಹತ್ತಿತು. ಬಾದಶಾಹನ ವಾಡೆಯಲ್ಲಿ ಸಂಕ್ರಾಂತಿಯ ದಿವಸ ದೊಡ್ಡ ಉತ್ಸಹವಾಗಲಿಕ್ಕೆ ಹತ್ತಿತು. ಅವನು ತನ್ನ ಚಿತ್ರವನ್ನು ತೆಗಿಸಿ ಜನರಿಗೆ ಹಂಚಿದನು. ಅವನ ವಾಡೆಯು ಹತ್ತರ ಜೋಗಿಯರ ಪಂಗಡ ಇಟ್ಟಿದ್ದನು. ಶೇಖಕಮಾಲ ಬೀಯಾಬಾನಿ ಎಂಬವನಿಗೆ ಖೇಚರೀ ವಿದ್ಯೆಯು ಅಂದರೆ ಆಕಾಶದಲ್ಲಿ ನಡೆಯುವಂಥಾ ವಿದ್ಯೆಯು ಬರುತ್ತದೆಂತ ತಿಳಿದು ಅವನನ್ನು ಕರೆಸಿ ಆ ವಿದ್ಯೆಯನ್ನು ತನಗೆ ಕಲಿಸಬೇಕೆಂತ ಅಕ್ಬರನು ಆಗ್ರಹ ಹಿಡಿಗನು. ಆದರೆ ಅವನು ಆ ವಿದ್ಯೆಯನ್ನು ಕಲಿಸುವದಿಲ್ಲ ಎಂತ ತಿಳಿದು "ಖೇಚರಿ ವಿದ್ಯೆಯು [illegible] ದ್ದರೆ ಸುಳ್ಳು. ಸುಳ್ಳು ಎಬ್ಬಿಸಿದ್ದಕ್ಕೆ ಯೋಗ್ಯ ಶಿಕ್ಷ[illegible]. ಆ ಫಕೀರನು ಆ ಸುದ್ದಿಯನ್ನು ತನ್ನ ಶಿಷ್ಯರು ಎಬ್ಬಿಸಿದ್ದಲ್ಲದೆ ತನಗೆ ಬಿನ್ನವರು ಏನೇನೂ ಗೊತ್ತಿಲ್ಲ ಎಂತ ಕಬೂಲಮಾಡಿದನು. ಮುಸಲ್ಮಾನರ ಕುರಾಣದಲ್ಲಿ "ಎಷ್ಟು ಮಕ್ಕಳು ಭೂಮಿಯ ಮೇಲೆ ಹುಟ್ಟುತ್ತಾರೋ ಅಷ್ಟೆಲ್ಲಾ ಮುಸಲ್ಮಾನ ಧರ್ಮದಲ್ಲಿಯೇ ಹುಟ್ಟುತ್ತಾರೆ. ಆದರೆ ನಂತರ ತಂದೆ ತಾಯಿಯ ಸಂಗದೋಷದಿಂದ ಭ್ರಷ್ಟರಾಗುತ್ತಾರೆ" ಎಂಬ ಮತವುಂಟು. ಇದನ್ನು ಪರೀಕ್ಷಿಸಲಿಕ್ಕೆ ಅಕ್ಬರನು ಎಷ್ಟೋ ಸಣ್ಣ ಸಣ್ಣ ಮಕ್ಕಳನ್ನು ಒಟ್ಟು ಕೂಡಿಸಿ ನಾಲ್ಕೈದು ವರ್ಷ ಅವುಗಳನ್ನೆಲ್ಲಾ ಒತ್ತಟ್ಟಿಗೆ ಇಟ್ಟು ಅವುಗಳ ಹತ್ತರ ಯಾರೂ ಮಾತಾಡಬಾರದಂತೆ ವ್ಯವಸ್ಥೆ ಇಟ್ಟನು. ನಂತರ ಆ ಮಕ್ಕಳೆಲ್ಲಾ ದೊಡ್ಡವರಾದಾಗ ಮೂಕರಾದರು. ಆದ್ದರಿಂದ ಆ ಸ್ಥಳಕ್ಕೆ "ಮುಂಗಾ ಮಹಾಲ" ಎಂತ ಹೆಸರಿಟ್ಟನು. ಮತ್ತು ಕುರಾಣದ ವಾಕ್ಯವು ಸುಳ್ಳೆಂತ ಪ್ರಸಿದ್ಧ ಮಾಡಿದನು. ತಮ್ಮ ತಮ್ಮ ಧರ್ಮದ ಹಾಗೆ ದೇವಾಲಯಗಳನ್ನು ಕಟ್ಟುವದಲ್ಲದೆ ಧರ್ಮದ ವಿಷಯದಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಪ್ರಜೆಗಳಿಗೆ ಕೊಟ್ಟಿದ್ದನು. ಹಾಗೆ [illegible] ಸುಂತಾ ಮಾಡುವದಾದರೆ ಹುಡುಗನಿಗೆ ೧೨ ವರ್ಷ ಪ್ರಾಯವಾದ ಮೇಲೆ ಅವನ ಖುಷಿಯಿಂದ ಮಾಡಬೇಕೆಂತ ಆಜ್ಞಾಪಿಸಿದನು. ಹಿಂದು ಮತ್ತು ಮುಸಲ್ಮಾನ ಎಂಬ ಜಾತಿ ಭೇದವನ್ನು ಮನ್ನಿಸದೆ ಎರಡೂ ಜಾತಿಯವರಿಗೆ ಯೋಗ್ಯತೆ ಪ್ರಕಾರ ದೊಡ್ಡ ದೊಡ್ಡ ಪದವಿಗಳನ್ನೂ, ಅಧಿಕಾರವನ್ನೂ ಕೊಟ್ಟನು. ಇದರಿಂದ ಅಕ್ಬರನ ಕೀರ್ತಿಯು ಪಸರಿಸಿತು. ಹಿಂದುಗಳಲ್ಲಿ ಕಂಟಕರಾದ ಬ್ರಾಹ್ಮಣರು ತೀರ್ಮಾನಮಾಡಬೇಕೆಂತಲೂ ಮುಸಲ್ಮಾನರಲ್ಲಿ ಕಂಟಕರಾದರೆ ಕಾಜಿಯು ನಿಕಾಲಮಾಡಬೇಕೆಂತಲೂ ಠರಾಯಿಸಿದನು. ಧರ್ಮದ ಸಂಬಂಧದಲ್ಲಿ ಇಷ್ಟೆಲ್ಲಾ ಮತಾಂತರವಾಗಿ ಪ್ರ[illegible] ದಿವಸ ವಿಚಾರ ಬದಲಾಗುತ್ತಿದ್ದರೂ ರಾಜ್ಯದ ಸಂಬಂಧ ಚಲೋ ಲಕ್ಷವಿಟ್ಟಿದ್ದ[illegible] ಅವನು ಕಾಬೂಲ ಗುಜರಾಥ ವಗೈರೆ ಪ್ರಾಂತ್ಯವನ್ನೂ ಗೆದ್ದು, ಪ್ರಜೆಗಳ ಹಿತ ಮ[illegible] ನೌಕ್ಯ ಅಭಿವೃದ್ಧಿಯಾಗಬೇಕೆಂತ ಬಹಳ ಪ್ರಯತ್ನಪಟ್ಟು ಪ್ರಜೆಗಳನ್ನು ಆನಂದ[illegible] ಇಟ್ಟಿದ್ದನು.

ಅಕಬರನು ಒಂದಾನೊಂದು ದಿವಸ ಬಿರಬಲನಿಗೆ ಹೇಳಿದ್ದೇನಂದರೆ "ವ್ಯಾಸನು ಮಹಾಭಾರತವನ್ನು ಬರೆದಿದ್ದಾನೋ ಹಾಗೆ ನಮ್ಮ ಚರಿತ್ರದ ಭಾರತವನ್ನು ಬರೆ." ಅದಕ್ಕೆ ಬಿರಬಲನು "ಹಿಂದೆ ಪಾಂಡವರಿಗ್ಗೆ ಒಬ್ಬಳು ದೊಡ್ಡ ಅಭ್ಯಂತರ ಇದ್ದ ದ್ರೌಪದಿಗೆ ೫ ಗಂಡಂದಿರು ಇದ್ದರು. ಇದರ ವಿಸ್ತಾರ ವ್ಯಾಸ ಮಾಡಬೇಕಾದರೆ [illegible] ಪ್ರಶ್ನೆಮಾಡಿದನು. ಹಾಗಾದರೆ ಅಂಥಾ ಭಾರತದ ಗರಜು ಇಲ್ಲ ಎಂತ [illegible] ಉತ್ತರ ಕೊಟ್ಟನು.

R. S. [illegible]

~~~~~~~~

ಪತ್ರವ್ಯವಹಾರ.

ಪತ್ರಿಕೆದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ

~~~~~~~~

ಅಯ್ಯಾ ಪತ್ರಿಕಾಕರ್ತರೇ,

ನಮ್ಮ ಮುಂಡಾಜೆ ಗ್ರಾಮದಲ್ಲಿ ಇರುವ ಚಾರ್ಮಾಡಿ ರಸ್ತೆಗೆ ೧೫ನೇ ಮೈಲು ಕಲ್ಲಿನ ಸಮೀಪ ೨ ಕಡೆಯಲ್ಲಿ ಜಂಗ್ಲಿ ಕಾಡು ಇದ್ದು ಅಲ್ಲ[illegible] ಮುಂಡಾಜೆ ವಾಕ್ಯಕ್ಕೆ ನೀರು ಬರುವ ಮುಂಡಾಜೆ ಹೊಳೆಗೆ ಕಟ್ಟ[illegible] ಜಂಗ್ಲಿ ಕಾಡಿನ ಕಟ್ಟೆಗೆ ತರುವರೆ ಘಟ್ಟದ ಮೇಲಿನ ಕಾಫಿ ವಗೈರೆ [illegible] ಗಾಡಿಗಾರರು ದಿನಂಪ್ರತಿ ಗಾಡಿಗಳನ್ನು ರಸ್ತೆಯಲ್ಲಿ ಬಿಟ್ಟು [illegible]ನಂತ ಕಟ್ಟದ ಮೇಲಿನಿಂದಲೇ ಕಾಲಂಪ್ರತಿ ಹೋಗುತ್ತಾ ಬರುತ್ತಾ ಇರುವ[illegible] ಪೈಕಿ ಜರಿದು ಹೋಗಿ ವರ್ಷಂಪ್ರತಿ ಆಗ್ಗಾಗ್ಗೆ ದುರುಸ್ತು ಮಾಡುವ[illegible]ರುವದಲ್ಲದೆ ಆ ಕಟ್ಟದಿಂದ ಬರುವ ನೀರಿನಲ್ಲಿ ಮಲಮೂತ್ರ [illegible] ನಮಗೆ ಸದರಿ ನೀರನ್ನು ಉಪಯೋಗಿಸುವರೆ ಅಸಹ್ಯವಾಗುತ್ತ[illegible] [illegible]ರಾಜು ಚಾರ್ಮಾಡಿ ಬೀಟಿನಲ್ಲಿ ಕೆಲಸ ನೋಡುವ ಫೋರೆಸ್ಟ್ ಗಾರ್ಡ್[illegible] [illegible]ದ ಇದ್ದವರು ಸದರಿ ಘಟ್ಟದ ಮೇಲಿನವರು ಜಂಗ್ಲಿ ಕಾಡಿಗೆ ಪ್ರ[illegible] [illegible]ರೂಪ ಕಡಿಯುವದು ನಿಲ್ಲಿಸುವ ಉದ್ದಿಶ್ಯ ಕಾಯುತ್ತಾ ಇದ್ದು [illegible]ಸವು ಪ್ರಾ[illegible] ಮೇಲಿನ ೭ ಜನರನ್ನು ಅತಿಧೈರ್ಯ ಮತ್ತು ಸಾಹಸ[illegible]ಮ ಥಾನಿ[illegible] ಹಿಡಿದು ಕೈದುಮಾಡಿ ಚಾರ್ಮಾಡಿ ಸ್ಟೇಶನ್ನಿಗೆ ಕೊಂಡ[illegible] ಅಲ್ಲಿಯ ಪಡಿಸಿದಲ್ಲಿ ತನಖಿಯಿಂದ ಅವರಿಗೆ ತಕ್ಕ ದಂಡನೆ ವಿ[illegible] ಕೆಲಸ ಮುಂದೆ ಸಹ ಘಟ್ಟದ ಗಾಡಿಯವರು ಜಂಗ್ಲಿಯಲ್ಲಿ ಸ[illegible] ತಾನೇ

[illegible] ಗಲುವ ಒಂದು [illegible] ಕೆನರಾ [illegible]ವನ್ನು ಜ್ಯಾಂಗ ತರುವಂತೆ ಇಂಡಿಯಾ ಸರಕಾರವನ್ನು ಪ್ರೇರೇಪಿಸಬೇಕೆಂದು ಕೇಳಿಕೊಂಡಿರುವರು.

~~~~~~

ಮದರಾಸು ಸಂಸ್ಥಾನವು ಸೇರಿಕೊಂಡು [illegible] ಹಿಂದೂಸ್ಥಾನದೊಳಗೆಲ್ಲಾ ಬರುವ [illegible] ವರ್ಷದಲ್ಲಿ ಹಿಂದೆ [illegible] ನೇ ಸಂವತ್ಸರದಲ್ಲಿ ಉಂಟಾಗಿದ್ದ [illegible] ವೀರಕ್ಷಾಮವು ಸಂಭವಿಸುವುದೆಂದೂ, [illegible] ವರ್ಷಗಳ ವರೆಗೆ ಕ್ಷಾಮೋಪದ್ರವವು ಸಂಭವಿಸುವುದಿಲ್ಲನೆಂದೂ [illegible] ಸೀಮೆಯಲ್ಲಿರುವ ಹ್ಯೂ ಕ್ಲೆಮೆಂಟ್ಸ್ ಎಂಬವರು ಭವಿಷ್ಯ ಹೇಳಿರುವರು. [illegible]ರಲ್ಲಿ ಕ್ಷಾಮ ಉಂಟಾಗುವುದಕ್ಕಿಂತ ಹಿಂದೆ ರೂಪಾಯಿಗೆ [illegible] ಸೇರು [illegible] ಸೇರು ದಾಗಿ ಮಾರುತ್ತಿದ್ದಿತು. ಕ್ಷಾಮಕಾಲದಲ್ಲಿ ರೂಪಾಯಿಗೆ [illegible] ಸೇರು ಅಕ್ಕಿಯಾಯಿತು. ಈಗ ಸಾಮಾನ್ಯ [illegible] ಕಲ್ಲೆ ರೂಪಾಯಿಗೆ [illegible] ಸೇರು ಅಕ್ಕಿ [illegible] ವವು ಉಂಟಾದರೆ ರೂಪಾಯಿಗೆ [illegible] ಸೇರು ಅಕ್ಕಿ [illegible] ಮಾರುವುದೋ [illegible] ಈ [illegible] ಮುಂಗಾರು ಮಳೆಯ ಸ್ಥಿತಿಯನ್ನು ನೋಡಿದರೆ [illegible] ಕ್ಷಾಮಕ್ಕೆ ಸ್ವಾಗತವನ್ನು ಮಾಡುವಂತಿದೆ. [illegible] ಗ್ರಹದಿಂದ ಅದು ತಪ್ಪಿ ಹೋಗಬೇಕು ಎಂತ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿದೆ

~~~~~~

ಮೈಸೂರು [illegible] ಪಟ್ಟಣದ ತಾಲೂಕು [illegible] ಗ್ರಾಮದಲ್ಲಿ ವಾಸವಾಗಿರುವ ವೈಷ್ಣವ [illegible] ಗೆ ಇದ್ದರು. ಹೆಂಡತಿಯರು. ಇವರ [illegible] [illegible]

[illegible]

[illegible] ಮೇಲೆ ಕಲ್ಲು [illegible] ಎಂತಲೂ, [illegible] [illegible] ಕುಡಿಯುವ ನೀರಿನ ತೂಕದಿಂದ [illegible] ಬೀಳುತ್ತಿತ್ತು [illegible] ಬೆಣಚು ಕಲ್ಲುಗಳೂ [illegible] ಸರಿಯಾಗಿ [illegible] ಬೀಳುತ್ತವೆ [illegible] ಹಾಕಿದ ಕೃತ್ಯವಾಗದೆ ಕಲ್ಲಿನ ಸ್ವಲ್ಪಭಾಗ [illegible] ನೀರಿನ [illegible]ವಾಗಿ ಇರುತ್ತವೆ ಎಂತಲೂ, ಇನ್ನೂ [illegible] ಯಲೂ [illegible] ಒಂದು [illegible] ನೆಯಲ್ಲಿ [illegible] ಲೋಕಲ್ ಬೋರ್ಡು [illegible] ಪಡಿಯುತ್ತಿದ್ದಾ [illegible]ಣೆಯು ಏನೆಂದು

[illegible] ಕಲುಕಗಳನ್ನೂ ಬಾಗಿಲನ್ನೂ ಮುಚ್ಚಿ ತಾವು ತಾವೇ ಕೆಲವು ಜನರು ಒಳಗೆ ಇದ್ದು ಆಕೆಯನ್ನು ಒಂದು ಬಟ್ಟೆ ಬುರುಕಿಯೊಳಗೆ ಮಲಗಿಸಿದ್ದಾಗ್ಯೂ ಕೋಣೆಯೊಳಗೆ [illegible]ವಾಗಿ [illegible] ಹಾ ಕಲ್ಲು [illegible] ಎಲ್ಲರೂ ನೋಡಿದ ಹಾಗೆ ಒಳಗೆ ಕಲ್ಲು ಬಿದ್ದಿತ್ತೆಂತಲೂ, [illegible] ಕಿಟಿಕಿಗಳೂ ಯಾವವೂ ತೆರೆಯಲ್ಪಡಲಿಲ್ಲವೆಂದೂ ತಿಳಿದು ಬಂದಿತಂತೆ. ಇದನ್ನೆಲ್ಲಾ ಕೇಳಿ [illegible] ಸಾಹೇಬರವರೂ, ಸಬ್ ರಿಜಿಸ್ಟ್ರಾರವರೂ ಕಲ್ಲುಗಳನ್ನೂ [illegible] ಸಹ ಫೋಟೋ ತೆಗೆದುಕೊಂಡು ಬಂದಿದ್ದಾರೆ. ಈ ಫೋಟೋ [illegible] ಒಂದೆ [illegible] ಪ್ರತ್ಯಕ್ಷವಾಗಿ ನೋಡಬೇಕೆಂದು [illegible] ಪಟ್ಟೆಕ್ಕೆ ಕರೆಯಿಸಿ [illegible] ನೋಡಿದ್ದರಲ್ಲಿ [illegible] ಸಾಹೇಬ [illegible] ತಿಳಿಯಲು.

~~~~~~

[illegible] ಕನ್ನಡ

~~~~~~

WANTED.

~~~~~~

Young men willing to undergo training for posts of Sub Assistant Overseers. For particulars apply to the District Board Engineer's Office, Mangalore

Mangalore } (Sd) M. E. Couchman.
10th May 14 } *President*
District Board.
SOUTH CANARA

~~~~~~

ನೋಟೀಸ

~~~~~~

[illegible] ಗತ್ತಿನ ಎಸ್. ಎ. ಶೀನಪ್ಪ ಹೆಗ್ಗಡೆ ಮತ್ತು ಸಹೋದರರು. ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನಂದರೆ —

[illegible] ತಿಂಗಳ ತಾ [illegible] ರಲ್ಲಿ [illegible] ಜಿಲ್ಲಾ [illegible]ರವರ ಆಫೀಸಿನ [illegible] ನೇ ಸಂಖ್ಯೆ [illegible] ಸಂಖ್ಯೆ [illegible] ೨೦೦೦ಕ್ಕೆ [illegible] (ಹಳೆದಾರ್ [illegible]) [illegible] ೨೦೦೦ [illegible] ತಮ್ಮ [illegible] ಕೈಯ್ಯ [illegible] ಸಂಗತಿಯನ್ನು ಸಕಲ ಜನ [illegible] ಪ್ರಕಟಿಸುತ್ತೇವೆ.

[illegible] ತಾ. 1—6—14 } ಎಸ್. ಎ. ಶೀನಪ್ಪ ಹೆಗ್ಗಡೆ ಮತ್ತು ಸಹೋದರರು.

~~~~~~

ಪುತ್ತೂರು.

ಇಲ್ಲಿ ನೀರಿನ ಕ್ಷಾಮವುಂಟಾಗುವ ಸಂದರ್ಭವಿದೆ ಲೋಕಲ್‌ಫಂಡ ಬಾವಿಗಳ ಮತ್ತು ಬೇರೆ ಖಾಸಗಿ ಬಾವಿಗಳು ಕೂಡಾ ಆರಿಹೋಗಿಯವೆ. ಎಲ್ಲಿ ನೋಡಿದರೂ ನೀರಿಲ್ಲವೆಂಬ ಗೋಳಾಟವು ಕೇಳುವುದು. ಇಡೀ ಊರಿನಲ್ಲಿ ಒಂದೆರಡು ಬಾವಿಗಳಲ್ಲಿ ನೀರು ಇದ್ದರೆ ಬೆಳಿಗ್ಗೆ ಆಗುವ ಮೊದಲೇ ಎರಡು ಗಳಿಗೆ ರಾತ್ರೆ ಇರುವಾಗಲೇ, ಅವುಗಳಲ್ಲಿರುವ ನೀರು ತೆಗೆಯುವರೆ ಹೆಂಗಸರ ಗುಂಪುಗಳು ಒಟ್ಟುಗೂಡುತ್ತವೆ. ಹತ್ತರ ನೀರಿಲ್ಲದೆ ಇದ್ದ ದೆಸೆಯಿಂದ ಸುಮಾರು ಅರ್ಧ ಮೈಲು ದೂರದಿಂದ ಸಹ ನೀರು ತರಲಿಕ್ಕೆ ಹೋಗುವ ಹೆಂಗಸರ ಪ್ರಲಾಪವನ್ನು ನೋಡಿದರೆ ಕಣ್ಣೀರು ಬರುತ್ತದೆ. ಬಾವಿಗಳನ್ನು ಇನ್ನೂ [illegible] ಬಹುದೆಂದರೆ ಹೆಚ್ಚು ಕಡಿಮೆ ಎಲ್ಲಾ ಬಾವಿಗಳಲ್ಲೂ ಅಡಿಗೆ ಶಿಲೆಯಿಂದ ಹಾಸಿದ ಹಾಗೆ ಕಲ್ಲು ಇದೆ. ಔಷಧ ಹಾಕಿ ಕಲ್ಲು ತೆಗೆಯುವರೆ ಎಷ್ಟು ಪ್ರಯತ್ನಮಾಡಿದರೂ ನೀರೂ ಬರುವುದಿಲ್ಲ. ಕಲ್ಲೂ ಮುಕ್ತಾಯವಾಗುವುದಿಲ್ಲ. ಇನ್ನೊಂದು ಆಶ್ಚರ್ಯವೇನಂದರೆ ಪುತ್ತೂರಿನ ಆಸ್ಪಾಸು [illegible] ಮೈಲುಗಳ ದೂರಕ್ಕೆ ಸುತ್ತಲೂ ಮಳೆ ಬಂದರೂ ಪುತ್ತೂರಿನಲ್ಲಿ ಮಳೆ ಬರುವುದಿಲ್ಲ. ಎಷ್ಟು ತಾಳ ಬಾಗವೆಗಳು ಹೊಡೆದರೂ ಸಾಲದಾಗಿರುತ್ತೆ. ಆದ್ದರಿಂದ ಲೋಕಲ್ ಬೋರ್ಡಿನವರು "ಬೋರಿಂಗ ಮೆಶಿನ್" ಎಂಬುದನ್ನು ತರಿಸಿ ಸರಕಾರಿ ಬಾವಿಗಳಲ್ಲಾದರೂ ಕಲ್ಲುಗಳ [illegible] ಇದನ್ನು ಉಪಯೋಗಿಸಲಿಕ್ಕೆ ಪ್ರಯತ್ನಿಸಿದರೆ [illegible] ಇತ್ತು. ಇಲ್ಲಿ ಮಹಾಲಿಂಗೇಶ್ವರ ದೇವಸ್ಥಾನದ [illegible] ಇರುವ ಕೆರೆಯು ದೊಡ್ಡದಾದರೂ, [illegible] ಇದನ್ನು ಲೋಕಲ್ ಬೋರ್ಡಿನವರು [illegible] [illegible] ಮಾಡಿಸಿ [illegible] ಇಟ್ಟು [illegible] ಹಾಗೆಯೇ ಅದರ ನೀರು ಕುಡಿಯುವುದಕ್ಕೆ ಉಪಯೋಗಿಸುವುದಕ್ಕೆ ಅನುಕೂಲ ಮಾಡಬಹುದು. ಈ [illegible] ಊರಿನ ಸರ್ವ ನಿವಾಸಿಕರೂ ತಾಲೂಕು ಬೋರ್ಡ [illegible] ಪ್ರೆಸಿಡೆಂಟರಿಗೊಂದು ಮನವಿಮಾಡಿಕೊಂಡಿದ್ದಾರೆ.

ಇಲ್ಲಿಯ ಪರಸ್ಪರ ಸಹಾಯಕ ಸಂಘವು ಈಗ [illegible] ವೃದ್ಧಿಯಾಗಿ ಅನೇಕ ಜನ ಮೆಂಬರರಿರುತ್ತಾರೆ. ಸಂಘದ ಆಫೀಸಿನ ಬಗ್ಗೆ ತಮ್ಮ ಸ್ವಂತ ಕಟ್ಟೋಣವನ್ನು ಕಟ್ಟಿಸುವ ಆಲೋಚನೆಯಲ್ಲಿದ್ದಾರೆ. ಪ್ರಕೃತ, ಇಲ್ಲಿಯ ಯೂನಿಯನ್ ಕ್ಲಬಿನ ಒಂದು ಕೋಣೆಯಲ್ಲಿ ಆಫೀಸು ಮಾಡುತ್ತಾರೆ. ಇದರಲ್ಲಿ ತಕ್ಕಷ್ಟು ಸ್ಥಳವಿಲ್ಲದೆ ಬಹಳ ಅಡಚಣೆಯಾಗುತ್ತೆ. ಅದಲ್ಲದೆ ಕ್ಲಬ್ಬಿನ ಹಿತ್ತಲಿನ ಒಳಗಿನಿಂದ ಮತ್ತು ಜಗಲಿಯ ಮೇಲಿಂದ ಕೂಡಾ ಸಂಘದ ಆಫೀಸಿಗೆ ಹೋಗಬೇಕಾದ್ದರಿಂದ ಸಂಘದ ಮೆಂಬರರಿಗೆ ಬಹಳ ತೊಂದರೆಯಾಗುತ್ತದೆ. ಬೇರೆಯವರಲ್ಲಿ ವಿಚಾರ ಇರುವ ಹಾಗೆ ಒಂದು ಕೋಣೆಯಲ್ಲಿರುವ ಬದಲಿಗೆ ಸಂಘಕ್ಕೆ ತಮ್ಮ ಸ್ವಂತ ಹಿತ್ತಲು ಮತ್ತು ಕಟ್ಟೋಣ ಇರುವದು ಒಳ್ಳೇದಲ್ಲವೇ?

ಇಲ್ಲಿ ಅನ್ಯ ದೇಶದ ಸರಾಯಿಗಳನ್ನು ಮಾರುವುದಕ್ಕೆ ಲೈಸನ್ಸ್ ಇರುವ ಅಂಗಡಿ ಇದ್ದರೂ ಬೇಕಾದ ಬ್ರಾಂಡಿ ಮತ್ತು ವೈನುಗಳು ಅವಶ್ಯವಿದ್ದಾಗ ಶಿಕ್ಕದೆ ಇರುವುದರಿಂದ ಜನರು ಬಹಳ ತೊಂದರೆಪಡುತ್ತಾರೆ.

ಕ್ರಿಮಿನಲ್ ವ್ಯವಹರಣೆಗಳಲ್ಲಿ ಮದ್ಯಕ್ಕೆ ಕಿಂಚಿತ್ತಾದರೂ ಬಿಸಿ [illegible] ಎಲ್ಲಾ ಸಂಗತಿಗಳಲ್ಲಿ ಮುದ್ದೈಲಗೆ ಒಂದಿಷಾನೆ ನಿವಾಸವೇ ತಕ್ಕ ಶಿಕ್ಷೆಯೆಂದು ಹೊಸ ಹುಕುಂ ಬಂದಿರುವುದಾಗಿ ವರ್ತಮಾನವಿದೆ. ಆಯಾಯ ಸಂಗತಿಗಳಲ್ಲಿ ಜಖಮಿನ ಪರಿಮಾಣವನ್ನು ಗ್ರಹಿಸಿ ತಕ್ಷೀರಿಗೆ ತಕ್ಕ ಶಿಕ್ಷೆಯನ್ನು ವಿಧಿಸಬೇಕಲ್ಲದೆ ಎಲ್ಲಾ ಸಂಗತಿಗಳಲ್ಲೂ

ಜೈಲು ಶಿಕ್ಷೆಯನ್ನು ವಿಧಿಸಬೇಕೆಂದು ರೂಲುಮಾಡುವುದು ಯೋಗ್ಯವಲ್ಲ. ಈ ಕಾರಣದಿಂದಲೇ ಪೆನಲಕೋಡಿನ ಅನೇಕ ಸೆಕ್ಷನುಗಳಲ್ಲಿ ಜೈಲು ಶಿಕ್ಷೆ ಅಥವಾ ಜುಲ್ಮಾನೆ ಅಥವಾ ಎರಡೂ ಸಹ ಎಂದು ಸ್ಪಷ್ಟವಾಗಿ ಹೇಳಿಯದೆ ಈ ವಿಷಯದಲ್ಲಿ ಬಹುಮಾನಪಟ್ಟ ಗವರ್ನರವರ ಮಹಾಸಭೆಯಲ್ಲಿ ಪ್ರಸಂಗವೆತ್ತುವ ಆಲೋಚನೆಯಲ್ಲಿದ್ದಾರೆ. ಕೆಲವು ಕಾಲದ ಹಿಂದೆ ಜಾಮೀನಿನ ಮೇಲೆ ಬಿಡತಕ್ಕದಲ್ಲದ ತಕ್ಸೀರುಗಳ ಮೊಕದ್ದಮೆಗಳಲ್ಲಿ ಜಾಮೀನ ಮೇಲೆ ಬಿಲ್ಕುಲು ಬಿಡಕೂಡದಾಗಿ ಕೊಟ್ಟ ಹುಕುಂ ಸಹಾ ಇದೇ ರೀತಿ ಗವರ್ನರವರ ಸಭೆಯಲ್ಲಿ ಚರ್ಚಿಸಿದ ನಂತರ ಹಿಂದೆ ಗೆದದ್ದು ನಮ್ಮ ನೆನಪಿನಲ್ಲಿರುವುದಷ್ಟೇ.

ನಮ್ಮ ಡಿವಿಜನ್ ಡಿಪ್ಯೂಟಿ ಕಲೆಕ್ಟರವರ ಹೆಡ್ ಕ್ವಾರ್ಟರ್ ಅನಾದಿ ಕಾಲದಿಂದ ಮಧ್ಯ ಸ್ಥಳವಾಗಿರುವ ಪುತ್ತೂರಲ್ಲಿ ಇದ್ದಾಗ್ಯೂ ಈಗ ಕಾಸರಗೋಡಿನಲ್ಲಿಡಬೇಕಾಗಿ ಕಾಸರಗೋಡಿನವರು ಮನವಿಮಾಡಿಕೊಳ್ಳುತ್ತಾರಾಗಿ ತಿಳಿದುಬರುತ್ತದೆ. ಆದರೆ ಉಪ್ಪಿನಂಗಡಿ ತಾಲೂಕು ಕಾಸರಗೋಡಿಗಿಂತಲೂ ದೊಡ್ಡದಾಗಿದ್ದು ಕೊಡಗು ಜಿಲ್ಲೆಯವರೆಗೂ ಇರುತ್ತದೆ. ಕಾಸರಗೋಡು ತಾಲೂಕಿನಲ್ಲಿ ರೈಲು ಉಂಟು. ಹೀಗಾಗಿ ಮಂಗಳೂರಿನಿಂದ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರು ಯಾ ಇತರ ಒಂದನೇ ಕ್ಲಾಸ ಮೇಜಿಸ್ಟ್ರೇಟರು ಕ್ಷಣಮಾತ್ರದಲ್ಲಿ ಯಾವ ಕೊನೆಗೂ ಬರಬಹುದು. ಆದರೆ ಉಪ್ಪಿನಂಗಡಿ ತಾಲೂಕಿನಲ್ಲಿ ರೈಲು ಇಲ್ಲ. ಹತ್ತರ ಬೇರೆ ಒಂದನೇ ಕ್ಲಾಸ ಮೇಜಿಸ್ಟ್ರೇಟರ ಠಾಣೆ ಇಲ್ಲ. ಹೀಗಾಗಿ ಪುತ್ತೂರಿನಿಂದ ಡಿಪ್ಯೂಟಿ ಕಲೆಕ್ಟರವರ ಆಫೀಸು ತೆಗೆದರೆ ಸರ್ವಸ್ವ ಜನರಿಗೂ ತೊಂದರೆ. ಅದಲ್ಲದೆ ಪುತ್ತೂರು ಎರಡು ತಾಲೂಕುಗಳಿಗೂ ಮಧ್ಯಸ್ಥಳ. ಈ ಮತ್ತು ಬೇರೆ ಕಾರಣಗಳಿಂದ ಡಿಪ್ಯೂಟಿ ಕಲೆಕ್ಟರವರ ಹೆಡ್ ಕ್ವಾರ್ಟರು ಪುತ್ತೂರಲ್ಲೇ ಇರತಕ್ಕದ್ದು.

~~~

ಗುರುವಾಯನಕೆರೆ.—ಕಾಸರಗೋಡು ತಾಲೂಕು ಕುತ್ಲು ದಶಾವತಾರದ ಆಟದವರು ಈ ವರ್ಷ ಘಟ್ಟದತ್ತ ಕಡೆ ಹೋಗಿ ಸಾಕಷ್ಟು ಹಣವನ್ನು ಸಂಪಾದಿಸಿ ತಮ್ಮ ಊರು ಮನೆಗೆ ಸೇರುವರೆ ಬರುತ್ತಾ ಉಪ್ಪಿನಂಗಡಿ ತಾಲೂಕು ಗುರುವಾಯನಕೆರೆ ಪೇಟೆಯ ಕೆಲವು ಸಾವಕಾರರು ಅವರನ್ನು ತಡೆಹಾಕಿ ಇವರಿಂದ ಆಟಗಳನ್ನು ಆಡಿಸಿದಲ್ಲದೆ ಸದರಿ ಗುರುವಾಯನಕೆರೆ ಪೇಟೆ ಮಿತ್ರಮಂಡಳಿಯವರು ರಾ। ಕುಡ್ವ ಗೋಪಾಲಪೈಗಳ ಮುಖಾಂತರ ಸದರಿ ಮೇಳದಲ್ಲಿ ಹೆಸರು ಹೋಗಿರುವ ಸ್ತ್ರೀವೇಷ ಮಾಡುವ ಮಧುರ ತಿಮ್ಮಪ್ಪಗೆ ೧ ಚಿನ್ನದ ಬಳೆಯನ್ನು ಉಡುಗೆರೆ ಮಾಡಿಸಿದರು. ಸದರಿ ಮೇಳವನ್ನು ನಡಿಸಿಕೊಂಡು ಬರುತ್ತಿದ್ದ ವೇಷಧಾರಿಗಳಿಗೆ ಪ್ರಕೃತ ಹೆಸರು ಹೋದ ಕೆ. ಗುಂಡ ಎಂಬವರಿಗೆ ಕೆಲವು ಶ್ಯಾಲುಗಳನ್ನು ಉಚಿತವಾಗಿ ಕೊಟ್ಟರು.

~~~

ಕಾಸರಗೋಡು.—ನಿನ್ನೆ ಬುಧವಾರ ದಿನ ಬೆಳಗ್ಯೆ ೧೦ ಘಂಟೆ ಸಮಯ ಇಲ್ಲಿಂದ ಪೂರ್ವ ಸುಮಾರು ೩ ಮೈಲು ದೂರವಿರುವ ಸತ್ತ ಗೇರುಮರದ ಅಡಿ ಎಂಬ ಸ್ಥಳದಲ್ಲಿ ಒಂದು ವಿಶೇಷ ಪೂಜೆಯು ನಡೆಯಿತು. ಸದರಿ ಸ್ಥಳವು ಪ್ರಯಾಣಿಕರಿಗೆ ಮಧ್ಯ ಸ್ಥಳವಾಗಿದ್ದು ಬಹಳ ಎತ್ತರ ಮೈದಾನಾಗಿರುತ್ತದೆ. ಆ ಸ್ಥಳವನ್ನು ಜಂಗಮಮಠದ ಆನೆ ಬಾಗಿಲು ಶಂಭಯ್ಯ ಎಂಬವರೊಬ್ಬರು ಈ ಮೊದಲು ದರಖಾಸ್ತಿಗೆ ತೆಗೆದುಕ್ಕೊಂಡು ಈಗ ಅಲ್ಲಿ ಒಂದು ಬಾವಿ ತೋಡಿಸಿದಾಗ ಒಳ್ಳೆ ನೀರು ದೊರಕಿತು. ಆ ಶಿಖರದಲ್ಲಿ ನೀರು ದೊರಕಿದ್ದರಿಂದ ಸಂತೋಷಚಿತ್ತರಾಗಿ ಪಟ್ಟಣಿಗರನೇಕರನ್ನು ಆಮಂತ್ರಿಸಿ ಒಂದು ದೇವ ಪೂಜೆಯನ್ನು ಬಹಳ ಸಂಭ್ರಮದಿಂದ ನಡಿಸಿದರು. ವಾದ್ಯಘೋಷದೊಡನೆ ಮೆರವಣಿಗೆಯಾಗಿ ಅಲ್ಲಿ ಹೋಗಿ ಸಂಗೀತ ದೇವಾರಾಧನೆ ರಾಜಗೀತ ಮೊದಲಾದವುಗಳನ್ನು ಹಾಡಿದ ತರುವಾಯ ಪೂಜೆಯು ನಡೆಯಿತು. ಆ ದಿನ ಪ್ರಯಾಣಸ್ಥರಿಗೆಲ್ಲ ಪಾನಾದಿಗಳನ್ನು ಕೊಡಿಸಿದ್ದು ಮಾತ್ರವಲ್ಲದೆ ಇನ್ನು ಮುಂದೆ ಕೂಡಾ ಯಾವಾಗಲೂ ದಾರಿಗರಿಗೂ ದನಕರುಗಳಿಗೂ ನೀರಿಡಿಸುವಂತೆ ಏರ್ಪಾಡು ಮಾಡುವರಾಗಿ ಕೇಳುತ್ತೇನೆ. ಅಲ್ಲದೆ ಅಲ್ಲಿ ಎರಡು ಕಟ್ಟೆಗಳನ್ನು ಕಟ್ಟಿಸಿ ಒಂದು ಭಜನ ಮಂದಿರವನ್ನು ಕೂಡಾ ಏರ್ಪಡಿಸಿ ಪ್ರಯಾಣಸ್ಥರಿಗೆ ಅನುಕೂಲಿಸುವರಂತೆ. ಹೀಗೆಂತಾದರೆ ಅತ್ತಕಡೆ ದಾರಿಗರಿಗೆ ಬಹಳ ಪ್ರಯೋಜನಕರವೇ ಸರಿ.

~~~

ವಿಟ್ಲ.—ಹುಲಿಗಳ ಕಾಟವು ಹೆಚ್ಚುತ್ತಾ ದಿನೇ ದಿನೇ ಬರುತ್ತದೆ. ಹಂದಿ ಮರಿಗಳ ಸಂಖ್ಯೆಯು ಕಡಮೆಯಾಗುತ್ತಾ ಬಂತು. ಇಂಥಾ ಪೇಟೆಯಲ್ಲಿ ಪ್ರತಿ ದಿವಸ ರಾತ್ರೆ ಹುಲಿಗಳು ತಿರುಗಾಡುತ್ತವೆ. ಈ ವಿಷಯ ಕೂಡ್ಲೆ ಲೈಸನ್ಸುದಾರರು ತಕ್ಕ ನಿಗಾ ಕೊಡಬೇಕಾಗಿ ಅಪೇಕ್ಷಿಸುತ್ತೇವೆ.

ತಾ. ೩೦ನೇ ಮಧ್ಯಾಹ್ನ ಸುಮಾರು ಎರಡು ಘಂಟೆಗೆ ಧಾರೇಶ್ವರ ರಘುನಾಥಯ್ಯನವರು ದೈವಾಧೀನರಾದರೆಂಬ ಸಂಗತಿ ತಿಳಿಸುವದೆ ವಿಷಾದಿಸುತ್ತೇವೆ.

ವಿಟ್ಲ ಕಸಬೆಯಲ್ಲಿರುವ ಜಯನರ್ಮ ಶೆಟ್ಟಿ ಇ. ಪಿ. ಕೋಡಿನ ೪೫೭-೩೮೦ ಪ್ರಕರಣದ ಪ್ರಕಾರ ಮಂಗಳೂರು ತಾಲೂಕು ಮೇಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಪಡಿಸಲ್ಪಟ್ಟು ಚಾರ್ಜುಮಾಡಲ್ಪಟ್ಟರು.

~~~

ವಿನಂತಿ.

ಮಳೆಗಾಲ ಸಮೀಪಿಸಿತು . . . . , ಕೋಟುಗಳೂ, ಅಂಗವಸ್ತ್ರ, ಧೋತ್ರ, ಸೀರೆ, ಪೋಲ್ಕ ಮೊದಲಾದ ವಸ್ತ್ರಗಳೂ, ಪುಸ್ತಕ ಪೋಶಾಕೆಯೂ, ಬಿಜೈಯಲ್ಲಿ ಮತ್ತು ಜೆಪ್ಪುಬೈಲಿನಲ್ಲಿ ಮಂಗಳೂರು ನಿರಾಶ್ರಿತ ಜನಸಹಾಯಕ ಸಂಘದವರ ಜಾಗದಲ್ಲಿ ನಿವಾಸ ಮಾಡಿಕೊಂಡಿರುವ ಅನಾಥ ಜನರಿಗೆ ಮತ್ತು ಬಡವರ ಮಕ್ಕಳಿಗೆ ಹಂಚಿಕೊಡಲು ಅಗತ್ಯವಿದೆ. ಯಾರೇ ಆದರೂ ಹಳೆ ವಸ್ತ್ರಗಳನ್ನು ಕೊಡಬೇಕೆಂದು ಅಪೇಕ್ಷಿಸುವವರು ಮಂಗಳೂರ ಸರಕಾರಿ ಕೋರ್ಟಿನ ಸಮೀಪದಲ್ಲಿರುವ ನಮ್ಮ ಶಾಲೆಗೆ ದಯಮಾಡಿ ಕಳುಹಿಸಿ ಕೊಟ್ಟರೆ, ನಮ್ಮ ಸಂಘದವರು ಕೃತಜ್ಞತೆಯಿಂದ ಸ್ವೀಕರಿಸುವರು. ಅಂಥವರ ಸಣ್ಣ ಒಂದು ಕಾರ್ಡು ಬರೆದರೆ, ನಾನು ದಾನಕೊಡಲಪೇಕ್ಷಿಸುವವರ ಮನೆಗೆನೇ ಜನ ಕಳುಹಿಸಿ ತರಿಸಿಕೊಳ್ಳುವೆನು.

ಮಂಗಳೂರು ನಿರಾಶ್ರಿತ ಜನಸಹಾಯಕ ಸಂಘ. ತಾ. I—6—14) ಕುದ್ಮುಲ ರಂಗರಾವ್. ಸೆಕ್ರಿಟರಿ.

~~~

ಜೆ. ಅಮ್ಮಣ್ಣ ಎಂಬವರು ಈ ರೀತಿ ಬರೆಯುತ್ತಾರೆ:

"ಈ ಮೊದಲು ಮುಡಿಕೇರಿಗುಡ್ಡೆಯಲ್ಲಿ ಪುಂಡಾಟಿಗರು ಮನೆಗಳಿಗೆ ರಾತ್ರಿಕಾಲ ಕಲ್ಲುಗಳನ್ನು ಬಿಸಾಡುತ್ತಿದ್ದ ವಿಷಯವು ತಮ್ಮ ಅಮೂಲ್ಯ ಪತ್ರಿಕೆಯಲ್ಲಿ ಪ್ರಕಟವಾದಂದಿನಿಂದ ಈ ಪೋಕ್ರಿ ಜನರ ಕಾಟವು ನಿಂತಿತ್ತು. ಈಗ ಪುನಃ ಕಳೆದ ವಾರದಿಂದ ಈ ಕಾಟವು ತಲೆದೋರಿರುವುದರಿಂದ ಕಲ್ಲುಗಳನ್ನು ಬಿಸಾಡಿದ ಬಗ್ಗೆ ಡ್ಯೂಪಿಟಿ ಮೇಜಿಸ್ಟ್ರೇಟರಿಗೆ ಅರ್ಜಿಕೊಟ್ಟು, ಆದಿತ್ಯವಾರ ದಿನ ಪೋಲಿಸಿನವರು ತನಕಿಗೆ ಬಂದಂದಿನಿಂದ ಸೂರ್ಯಾಸ್ತಮಾನವಾಗುತ್ತಲೇ ಎಡೆಬಿಡದೆ ಮನೆಗೆ ಕಲ್ಲು ಬೀಳಲು ಪ್ರಾರಂಭವಾಗಿಯದೆ. ಪೋಲಿಸಿನವರ ತನಖಿಯ ಫಲವಾಗಿ ಉಪಟಳವು ಹೆಚ್ಚಿತಂದರೆ ಇನ್ನು ನಮ್ಮಂಥಾ ಬಡವರು ಮನೆ ಮಾಡಿಕೊಂಡು ಇರುವುದೇ ಕಷ್ಟ. ಈ ವಿಷಯ ಮೇಲಾಫೀಸರರು ನಿಗಾ ಕೊಟ್ಟು ಪೋಲಿಸಿನವರು ಸರಿಯಾದ ತನಖಿ ನಡಿಸಿ ದುಷ್ಟ ಜನರನ್ನು ಶಿಕ್ಷಿಸುವಂತೆ ಏರ್ಪಾಡು ಮಾಡಿ, ಈ ಉಪದ್ರದಿಂದ ರಾತ್ರಿಕಾಲ ನಿದ್ದೆಗೆಟ್ಟು ಭಯಸ್ಥರಾಗಿರುವ ನಮ್ಮಂಥಾ ಬಡ ಜನರನ್ನು ಪುಂಡಾಟಿಗರ ತಂಡದಿಂದ ರಕ್ಷಿಸಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಂಡಿದ್ದೇನೆ."

~~~

ಮಂಗಳೂರು.

ಮ್ಯುನಿಸಿಪಾಲಿಟಿಯಲ್ಲಿ ರಾತ್ರಿ ದೀಪಗಳು ಸರಿಯಾಗಿ ಹಚ್ಚಲ್ಪಡುವುದಿಲ್ಲವೆಂದು ಹಿಂದಿನ ಸಂಚಿಕೆಯೊಂದರಲ್ಲಿ ತಿಳಿಸಿದಂದಿನಿಂದ ಡಬ್ಲ್ಯು. ಪಿ. ಮೋರ್ಗನ್ ದೊರೆಗಳವರ ಬಂಗ್ಲೆಯಿಂದ ಹಂಪನಕಟ್ಟೆಯ ವರೆಗೆ ಇರುವ ಮತ್ತು ಇತರ ಮುಖ್ಯ ದಾರಿಗಳಲ್ಲಿ ದೀಪಗಳು ಸರಿಯಾಗಿ ಹಚ್ಚಲ್ಪಡುತ್ತವೆಯಾದರೂ ಎಮ್ಮೆಕೆರೆ, ಮಾರಿಗುಡಿ ಮೊದಲಾದ ಒಳರಸ್ತೆಗಳ ದೀಪಗಳ ಕಡೆಗೆ ಕಂಟ್ರಾಕ್ಟರರ ಲಕ್ಷ್ಯವು ಇನ್ನೂ ಕೊಡಲ್ಪಟ್ಟಂತೆ ಕಾಣುವುದಿಲ್ಲವೆಂತ ಒಬ್ಬ ಬಾತ್ಮೀದಾರರು ತಿಳಿಸಿರುವರು.

ಗಂಧದ ಮರದ ಚೋರಿ ಮೊಕದ್ದಮೆಗಳಲ್ಲಿ ಇನ್ನೂ ಒಂದೆರಡು ಮೊಕದ್ದಮೆಗಳ ತನಖಿಯು ಈಗಲೂ ನಡಿಯುತ್ತಲಿದೆ.

ಇಲ್ಲಿಯ ಪೋಲಿಸ್ ಆಸ್ಪತ್ರೆಯ ಸಮೀಪ ಇದ್ದ ಒಂದು ಮ್ಯುನಿಸಿಪಾಲ್ ಪಾಯಿಖಾನೆಯು ಕೆಲವು ವರ್ಷಗಳ ಹಿಂದೆ ಯಾವ ಕಾರಣದಿಂದಲೋ ತೆಗೆಯಲ್ಪಟ್ಟಿದ್ದಿತು. ಅಂದಿನಿಂದ ಆ ವಠಾರದ ಜನರೂ ದಾರಿಗರೂ ಪಾಯಿಖಾನೆಗಳಿಲ್ಲದೆ ಪಡುವ ತೊಂದರೆಯಿಂದ ಆ ವಠಾರವು ದಿನೇ ದಿನೇ ಗಲೀಜು ಸ್ಥಿತಿಯನ್ನು ಹೊಂದುತ್ತಲಿದೆ ಎಂತ ಒಬ್ಬ ಬಾತ್ಮೀದಾರರು ತಿಳಿಸಿರುವರು. ಈ ವಿಷಯ ಮ್ಯುನಿಸಿಪಾಲಿಟಿಯವರು ತಕ್ಕ ನಿಗಾಕೊಡಬೇಕಾಗಿದೆ.

ಕಳೆದ ಸಾರಿಯ ಇಂಟರ್ ಮೀಡಿಯೆಟ್ ಪರೀಕ್ಷೆಗೆ ಗವರ್ನಮೆಂಟು ಕಾಲೇಜಿನಿಂದ ಪರೀಕ್ಷೆಗೆ ನಿಂತ ೩೬ ಮಂದಿಯಲ್ಲಿ ೧೫ ಮಂದಿ ಪಾಸಾಗಿರುವರು. ಈ ಪೈಕಿ ಇಬ್ಬರು ಮೊದಲನೇ ತರಗತಿಯಲ್ಲಿ ತೇರಿರುವರು. ಸೈಂಟ್ ಅಲೋಸಿಯಸ್ ಕಾಲೇಜಿನಿಂದ ಈ ಪರೀಕ್ಷೆಗೆ ನಿಂತ ೭೮ ಮಂದಿಯಲ್ಲಿ ೩೩ ಮಂದಿ ತೇರಿರುವರು. ಈ ಪೈಕಿ ೨ ಮಂದಿ ಪ್ರಥಮ ತರಗತಿಯಲ್ಲಿ ತೇರ್ಗಡೆ ಹೊಂದಿರುವರೆಂತ ತಿಳಿದುಬರುತ್ತದೆ

ಮರೋಳಿಯಿಂದ ಪಟ್ಟಣಕ್ಕೆ ನೀರು ಸರಬರಾಜು ಮಾಡಿಸಬೇಕೆಂತ ಸುಮಾರು ೭—೮ ವರುಷಗಳಿಂದ ಇದ್ದ ಆಲೋಚನೆಯು ಕಳೆದ ವಾರದಿಂದ ಕಾರ್ಯರೂಪಗೊಳ್ಳುತ್ತಿದೆ. ಕಳೆದ ವಾರದಿಂದ ಅಲ್ಲಿ ಕೆಲಸವು ಪ್ರಾರಂಭಿಸಲ್ಪಟ್ಟಿದೆ. ಪರೀಕ್ಷಾರ್ಥವಾಗಿ ಒಂದು ಬಾವಿಯನ್ನು ತೋಡಿಸಲು ಪ್ರಾರಂಭಿಸಿದ್ದಾರೆ. ಇಲ್ಲಿಯ ಮಣ್ಣು ಜೇಡಿ ಮತ್ತು ಮೃದುವಾಗಿರುವುದರಿಂದ ಕೆಲಸ ಮಾಡಲು ಜನರು ಭಯಪಡುತ್ತಾರೆ. ಮೊನ್ನೆ ತಾನೇ ಮಣ್ಣು ಜರಿದು ಬಿದ್ದು ಒಬ್ಬ ಕೆಲಸದವನಿಗೆ ಜಖಂ ಆಗಿಯದೆಂತ ತಿಳಿಯುತ್ತೇವೆ.

ಪಟ್ಟಣದಲ್ಲಿ ಹಕ್ಕಿ ಕೆರೇಜುಗಳ ಉಪಟಳವು ಹೆಚ್ಚಾದಂತಿದೆ. ಕಳೆದವಾರ ಹಂಪನಕಟ್ಟೆಯ ಜಟ್ಕಾಸ್ಟೇಂಡಿನ ಬಳಿ ೩—೪ ಜಟ್ಕಾ ಗಾಡಿಗಳನ್ನು ರಭಸದಿಂದ ಅಡ್ಡಲಾಗಿ ಓಡಿಸಿದುದರಿಂದ ಆಫೀಸುಗಳಿಗೆ ಮಧ್ಯಾಹ್ನ ಊಟ ತಕ್ಕೊಂಡು ಹೋಗುತ್ತಿದ್ದ ಒಬ್ಬ ಹೆಂಗಸು ಮಧ್ಯ ದಾರಿಯಲ್ಲಿ ಕಣ್ಣು ಕಟ್ಟಿದಂತಾಗಿ ೪—೫ ಮಂದಿಯ ಊಟವಿದ್ದ ಪೆಟ್ಟಿಗೆ ಸಹಿತ ಬಿದ್ದು ಬಿಟ್ಟಳಂತಲೂ ಇದೇ ಕಳೆದ ವಾರದಲ್ಲು ಬಲ್ಮಠ ರೋಡಿನಲ್ಲಿ [illegible] ಜೋರಿನಿಂದ [illegible]ತ್ತಿದ್ದ ಒಂದು ಗಾಡಿಯ ಅಡಿಗೆ ಒಬ್ಬ ಹುಡುಗಿಯು [illegible] ಬಿಬಂ ಹೊಂದಿರುವಳೆಂದೂ ವಾರ್ತೆ ಬಂದಿದೆ [illegible] ಚಾರವು ಹೆಚ್ಚಿರುವಂತಹ ಬೀದಿಗಳಲ್ಲಿ ಕೂಡಾ [illegible] ವಾಹ್ಯವರರು ಸ್ವಲ್ಪವೂ ವಿಚಾರವಿಲ್ಲದೆ ಗಾಡಿಗಳನ್ನು [illegible] ನಸ್ಸೊ ಇಷ್ಟ ಓಡಿಸುತ್ತಿರುವುದನ್ನು ಅಗ್ಗಾಗ್ಗೆ [illegible] ಕಂಡಿರುಹುದು. ಶಾಲೆಗಳೆಲ್ಲಾ [illegible] ಬೀದಿ ಶಾಲೆಗಳು ತೆರೆಯಲ್ಪಡುವ ಈ ಕಾಲದಲ್ಲಿಯೂ [illegible] ವಾಹ್ಯವರರ ಈ ವರ್ತನೆಗೆ ತಡೆಕಟ್ಟಿದಿದ್ದರೆ ಶಾಲೆಗಳಿಗೆ ಹೋಗುತ್ತಿರುವ ಚಿಕ್ಕಮಕ್ಕಳ [illegible] ಈಗ ಹೇಳಲಸಾಧ್ಯವಾಗಿರುವುದು.

ಲೋಕಲ್ ಫಂಡ್ ಕೆಲಸಗಳಲ್ಲಿ ತಕ್ಕ ಪಾಟಿತಿಗಳಿಲ್ಲದ ಉಮೇದ್ವಾರರಿಗೆ ಕೆಲಸಗಳು ಕೊಡಲ್ಪಡುತ್ತಿರುವುದರಿಂದ ಉಂಟಾಗುವ ಅನರ್ಥಗಳನ್ನು [illegible] ಡಿಸ್ಟ್ರಿಕ್ಟ್ ಬೋರ್ಡ ಪ್ರೆಸಿಡೆಂಟರವರು ಅರಿತು ಲೋಕಲ್ ಫಂಡ್ ಕೆಲಸಗಳಲ್ಲಿ ಪಾಟಿತಿಯನ್ನು ಕೊಡುವ [illegible] ಕೆಲವು ಯುವಕರನ್ನು ಆರಿಸಬೇಕೆಂದಿರುವರು. ಆರಿಸಲ್ಪಟ್ಟ ಉಮೇದ್ವಾರರು ಡಿಸ್ಟ್ರಿಕ್ಟ್ ಬೋರ್ಡ ಇಂಜಿನಿಯರರ ಆಫೀಸಿನಲ್ಲಿ [illegible] ಒಂದು ತಿಂಗಳ ವರೆಗೆ ತಕ್ಕ ತರ್ಬೇತಿಯನ್ನು [illegible] ವುದು. ತಿಂಗಳ [illegible] ಇವರ ಪರೀಕ್ಷೆ ನಡೆಯುವುದು. ಪರೀಕ್ಷೆಯಲ್ಲಿ [illegible] ರಿಂತಿ ಹೊಂದಲ್ಪಟ್ಟವರನ್ನು [illegible] ಪ್ರೊಬೇಶನಿನ ಮೇಲೆ [illegible] ತಾಲೂಕು [illegible] ಯುವರು. ಇವರು ಈ ತಾಲೂಕು [illegible] ವರ್ಷದ ವರೆಗೆ ಹೆಚ್ಚಿನ ಪಾಟಿತಿಯನ್ನೂ ತರ್ಬೇತಿಯನ್ನೂ ಪಡೆಯಬೇಕಾಗುವುದು. ಅನಂತರ [illegible] ಪರೀಕ್ಷೆ ಪಾಸು ಯೋಗ್ಯರೆಂದು ಕಂಡವರು ರೂ [illegible] ತಿಂಗಳ [illegible] ಸ್ಟಾಂಟ್ ಓವರ್ಸಿಯರರಾಗಿ ನೇಮಿಸಲ್ಪಡುವರು. ಇವರಿಗೆ ರಜಾ ಸಂಬಳವಾಗಲೀ ಇತರ ಭತ್ತೆಯಾಗಲೀ ಕೊಡಲ್ಪಡಮ. ಯಾ ಸರಕಾರದ ಅನುಮತಿ ಇಲ್ಲದೆ ರೂ [illegible]ಕ್ಕಿಂತ ಹೆಚ್ಚಿನ ಸಂಬಳ ಕೊಡಲ್ಪಡದು. [illegible] ದ್ದಾಗ ಇಂಥವರಲ್ಲಿ ಕೆಲವರಿಗೆ ಖಾಯಂ ಕೆಲಸವೂ ಆಗಬಹುದು. ಪ್ರಾಕ್ಟಿಕಲ್ ಪರೀಕ್ಷೆಗಳಿಗೆ ಸಿಲಬಸ ಇವರಿಗೆ ಆತಂಕವಿರದು. ಈ ಪರೀಕ್ಷೆಗಳಲ್ಲಿ ಪಾಸಾದವರಿಗೆ ಅನಂತರ ಮೇಲಿನ ಉದ್ಯೋಗವೂ ಕೊಡಲ್ಪಡುವುದು. ಹೊಸ ಏರ್ಪಾಡಿನ ತರಗತಿಯು ಇದೇ [illegible] ಜುಲಾಯಿ ತಿಂಗಳ ತಾ 1ಕ್ಕೆ ತೆರೆಯಲ್ಪಡುವುದು. ಈ ಪ್ರಥಮ ತರಗತಿಗೆ ೧೨ ಮಂದಿ ಉಮೇದ್ವಾರರು ಮಾತ್ರ ಆರಿಸಲ್ಪಡುವರು. ಇಂತಹ ಉಮೇದ್ವಾರರು ತಮ್ಮ ಸ್ವಹಸ್ತದಿಂದ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರಿಗೆ ಮನವಿ ಮಾಡಿಕೊಳ್ಳಬೇಕಾಗಿರುವುದು.

ಕಾಸರಗೋಡಿನಲ್ಲಿ ಎಪೊತಿಕೆರಿಯರಾಗಿದ್ದು ಈಚೆಗೆ ತಾನೇ ಅಸ್ವಸ್ಥ ಸಂಬಂಧ ರಜೆ ತಕ್ಕೊಂಡು ಇಲ್ಲಿಯ ತನ್ನ [illegible]ಂತ ಮನೆಗೆ ಬಂದಿದ್ದ ಡಾಕ್ಟರ್ ಎ. ಎಸ್. ಮುತಾಯಸ ರವರು ಕಳೆದವಾರ ಮೂತ್ರರೋಗದಿಂದ ವಿದಿವಶರಾದರೆಂಬದನ್ನು ತಿಳಿಸಲು ವಿಷಾದಿಸುತ್ತೇವೆ. ಇವರು ದಕ್ಷಿಣಕನ್ನಡ ಜಿಲ್ಲೆಯ ಕುಂದಾಪುರ, ಉಡುಪಿ, ಕಾಸರಗೋಡು ಮೊದಲಾದ ಸ್ಥಳಗಳ ಲೋಕಲ್ ಫಂಡ್ ಆಸ್ಪತ್ರೆಗಳಲ್ಲಿದ್ದು ಕೆಲಸ [illegible] ತಮ್ಮ [illegible] ಪ್ರೀತಿಯಿಂದ ಬಹು ಶ್ರದ್ಧೆಯಿಂದಲೂ ನಡಿಸಿ [illegible] ಜನ ಪ್ರಿಯರಾಗಿದ್ದರು.

[illegible] ತಾಲೂಕಿನ [illegible] ಪಕಲಂಗಡಿ, [illegible], ನರಿಪಿತ್ತ್ಲ, ತೋಕೂರು, [illegible], ಬೋಳಿಯಾರು, ಪಂಜ, ಕೈಕಂಬ ಗ್ರಾಮಗಳ ಬಗ್ಗೆ ಈ ಗ್ರಾಮಗಳ ಮಧ್ಯ ಸ್ಥಳವಾದ ಪಕಲಂಗಡಿಯಲ್ಲಿ ಒಂದು ಗ್ರಾಮ ಮುನ್ಸೀಫ್ ಕೋರ್ಟನ್ನು ತೆರೆಯುವರೆ ಮದ್ರಾಸ್ ಸರಕಾರದವರು ಅನುಮತಿ ಕೊಟ್ಟಿರುವರು. ಇದೇ [illegible] ಜುಲಾಯಿ ತಿಂಗಳ ತಾ [illegible] ರಿಂದ [illegible] ಜಾರಿಯು [illegible]ವುದು.

ಕಾಸರಗೋಡಿನ ಮುನ್ಸಿಫರಾಗಿರುವ ರಾ ಕೆ ಎಲ್ ವೆಂಕಟರಾಯರು [illegible] ವರ್ಗಾಯಿಸಲ್ಪಟ್ಟಿದ್ದು [illegible] ಆಕ್ಟಿಂಗ್ ಮುನ್ಸೀಫ ಕೆಲಸ ನೋಡುತ್ತಿದ್ದ ರಾ ವಿ ಕೃಂಡೀರಾಮನ್ ನಾಯರಿಗೆ ಕಾಸರಗೋಡಿಗೂ ವರ್ಗವಾಗಿರುವುದು.

ರಾವ್ ಬಹದ್ದೂರ್ ಎಸ್. [illegible] ರಾಯರು [illegible] ಡಿಸ್ಟ್ರಿಕ್ಟ್ ಬೋರ್ಡು ನ್ಯಾಸ್ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟಿರುವರು.

ಕೊಯಮುತ್ತೂರು ಪೋಲಿಸ್ ಟ್ರೈನಿಂಗ್ ಶಾಲೆಯ ಮಾಸ್ತರರಾಗಿದ್ದ ಮ. ರಾ [illegible] ರವರು ಮಂಗಳೂರು ಪೋಲಿಸ್ ಸ್ಟೇಶನಿಗೂ ಮ. ರಾ ಪಿ ನಾರಾಯಣರಾವ್ ರವರು ಮುಲ್ಕಿಯಿಂದ [illegible] ಮ. ರಾ [illegible] ಸಂಬಂಧವಾಗಿ ಕೊಯಮುತ್ತೂರು ಶಾಲಾ ಮಾಸ್ತರರಾಗಿಯೂ ಮ. ರಾ ಪಿ [illegible] ಸುಪರಿಂಟೆಂಡೆಂಟ್ [illegible] ಕೆಲಸದಲ್ಲಿದ್ದ ಮ. ರಾ [illegible] ಕೃಷ್ಣರಾಯರು ಟೌನ್ ಪೋಲಿಸ್ ಸ್ಟೇಶನಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫರಾಗಿರುವ ರಾ ಪಿ. ವೆಂಕಟರಾಯರಿಗೆ [illegible] ವರ್ಗವಾಗಿರುವುದು.

[illegible] ಕಂಪೆನಿಯು [illegible] ಸಂಕೇತ [illegible] ಇಚ್ಛಿಸುತ್ತೇವೆ. [illegible] ತಕ್ಕ ಪ್ರೋತ್ಸಾಹವನ್ನು ಕೊಡುವರೆಂದು ನಂಬಿದ್ದೇವೆ.

ಜಿಲ್ಲಾ ಕಲೆಕ್ಟರ ಆಫೀಸು ಮಂಗಳೂರು.—1ನೇ ಗ್ರೇಡ್ ರೆವಿನ್ಯೂ ಇನ್ಸ್ಪೆಕ್ಟರ ರಾ ಎಮ್ ರಾಮಪ್ಪನವರಿಗೆ ಇದೇ ರಾ [illegible] ಕಾರಣ [illegible] ತಿಂಗಳ ರಜೆ ಕೊಡಲ್ಪಟ್ಟದ್ದರಿಂದ 2ನೇ ಗ್ರೇಡ್ ರೆ ಇನ್ಸ್ಪೆಕ್ಟರ ರಾ| ಎಂ ಹರಿಕಾಮತರವರು ಆಕ್ಟಿಂಗ್ 1ನೇ ಗ್ರೇಡ್ ರೆವಿನ್ಯೂ ಇನ್ಸ್ಪೆಕ್ಟರರಾಗಿಯೂ ಆಕ್ಟಿಂಗ್ ಲೇಂಡ್ ರಿಕಾರ್ಡ್ಸ ಇನ್ಸ್ಪೆಕ್ಟರರಾದ ರಾ ಕೆ [illegible] ಯರು ಆಕ್ಟಿಂಗ್ 2ನೇ ಗ್ರೇಡ್ ರೆವಿನ್ಯೂ ಇನ್ಸ್ಪೆಕ್ಟರರಾಗಿಯೂ ರಾ| ಬಿ. ರಾಮಪ್ಪಯವರು ಆಕ್ಟಿಂಗ್ ಲೇಂಡ್ ರಿಕಾರ್ಡ್ಸ್ ಇನ್ಸ್ಪೆಕ್ಟರರಾಗಿಯೂ ನೇಮಿಸಲ್ಪಟ್ಟಿರುವರು. ರಾ| ಎಮ್. ರಾಮಪ್ಪನವರು ರಜೆ ತೀರಿದ ನಂತರ ಮಂಗಳೂರಲ್ಲಿ ಕೆಲಸಕ್ಕೆ ಹಾಜರಾಗಬೇಕಾಗುವದು.

ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿರುವ ರಾ| ಶೇಷಗಿರಿಯವರು ಒಂದು ತಿಂಗಳ ಪ್ರಿವಿಲೆಜ್ ರಜೆ ತಕ್ಕೊಂಡಿರುವುದರಿಂದ ಕರಸ್ಪೊಂಡೆಂಟ್ ಸೆಕ್ಷನಿನ ೨ನೇ ಕ್ಲಾರ್ಕ ರಾ| ಪಿ. ರಾಮಚಂದ್ರಯ್ಯನವರು ರೂ. ೭೦ರ ಆಕ್ಟಿಂಗ್ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿಯೂ ಕಲೆಕ್ಟರ ಆಫೀಸಿನ 1ನೇ ರಿಕಾರ್ಡ್ಸ ಕ್ಲಾರ್ಕ ರಾ| ಯು ವೆಂಕಪ್ಪನವರು ರೂ. ೬೦ರ 2ನೇ ಕರಸ್ಪೊಂಡೆಂಟ ಕ್ಲಾರ್ಕರಾಗಿಯೂ ಕಲೆಕ್ಟರ ಆಫೀಸಿನ ೨ನೇ ಎಕೌಂಟಾಂಟರಾದ ರಾ| ಎಸ್. ಕೃಷ್ಣಪ್ಪನವರು ರೂ. ೬೦ರ 1ನೇ ರಿಕಾರ್ಡ್ಸ ಕ್ಲಾರ್ಕರಾಗಿಯೂ 4ನೇ ಕರಸ್ಪೊಂಡೆಂಟ ಕ್ಲಾರ್ಕ ರಾ| ಎಚ್. ಅನಂತಯ್ಯ ಬಿ ಎ. ರವರು ರೂ ೫೦ರ 2ನೇ ಅಕೌಂಟಾಂಟರಾಗಿಯೂ 3ನೇ ಅಕೌಂಟಾಂಟರಾಗಿರುವ ರಾ| ಕೃಷ್ಣಪಾಂಡುರಂಗ ಶೆಣೈ ಬಿ ಎ. ಎಲ್ ಎಲ್. ಬಿ ಯವರು ರೂ. ೪೫ರ 4ನೇ ಕರಸ್ಪೊಂಡೆಂಟ ಕ್ಲಾರ್ಕರಾಗಿಯೂ ಕಲೆಕ್ಟರ ಆಫೀಸಿನ 7ನೇ ಕ್ಲಾರ್ಕ ರಾ| ಪಿ ಶೀತಾರಾಮರಾವ್‌ರವರು ರೂ ४०ರ 3ನೇ ಅಕೌಂಟಾಂಟರಾಗಿಯೂ ಕಲೆಕ್ಟರ ಆಫೀಸಿನ 6ನೇ ಅಕೌಂಟಾಂಟರಾಗಿರುವ ರಾ| ಎಮ್ ಸುಬ್ರಾಯ ಕಾಮತರು ರೂ. ೩೦ರ ಕರಸ್ಪೊಂಡೆಂಟ ಸೆಕ್ಷನಿನ 7ನೇ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು.

ಪುತ್ತೂರು ಡಿವಿಜನ ಆಫೀಸಿನ [illegible]ನೇ ಕ್ಲಾರ್ಕ ರಾ| ಪಿ [illegible]ಸ್. ಫರ್ನಾಂಡಿಸರು ೧ ತಿಂಗಳ ಪ್ರಿವಿಲೆಜ್ ರಜೆ ತಕ್ಕೊಂಡಿರುವುದರಿಂದ ಉಪ್ಪಿನಂಗಡಿ ತಾಲೂಕು ಆಫೀಸಿನ ಆಕ್ಟಿಂಗ್ ೨ನೇ ಕ್ಲಾರ್ಕ ರಾ| ಎ ಮುಕುಂದ ರಾಯರು ಪುತ್ತೂರು ಡಿವಿಜನ್ ಆಫೀಸಿನ ೨ನೇ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು.

~~~~~

ಬೆಳ್ತಂಗಡಿ.—ಬೆಳ್ತಂಗಡಿಯಲ್ಲಿಯೂ ನೆರೆಹೊರೆಯ ಗ್ರಾಮಗಳಾದ ಉಜಿರೆ ಗುರುವಾಯನಕೆರೆ [illegible] ನೀರಿನ ಕಷ್ಟವು ಹೆಚ್ಚಾಗಿ [illegible] ನಿವಾಸಿಗಳೂ ದನಕರುಗಳೂ ಬಹಳ ಸಂಕಟ ಪಡುತ್ತಿವೆ. ಗುರುವಾಯನಕೆರೆ [illegible] ಇರುವ ದೊಡ್ಡ ಕೆರೆಯು ನೀರೂ ಪೂರಾ ಆರಿ ಹೋಗಿದೆ. ಗತವರ್ಷಗಳಲ್ಲಿ [illegible]ಂದಿಗೂ ಈ ಪ್ರಕಾರ ಕೆರೆಯ ನೀರು ಬತ್ತಿ ಹೋಗಲಿಲ್ಲ ಎಂದು ಪ್ರಾಯಸ್ಥರು ಹೇಳುವರು. ಎಲ್ಲರೂ ಆತುರದಿಂದ ಪರ್ಜನ್ಯದ ಆಗಮನವನ್ನು ಕಾಯುತ್ತಿದ್ದಾರೆ.

ಬೆಳ್ತಂಗಡಿ ಸಂತೆಕಟ್ಟೆಯ ಬಳಿಯಲ್ಲಿರುವ ಸರಕಾರಿ ಬಾವಿಯು ಕಲ್ಲು ಕಟ್ಟಲ್ಪಟ್ಟು ಚಂದವಾಗಿದ್ದರೂ ಇದರ ಸಮೀಪದಲ್ಲಿರುವ ಆಲದ ಮರದ ಬೇರು ಬಾವಿಯೊಳಗೆ ಕಲ್ಲು ಕಟ್ಟಣೆಗಳ ಎಡೆಯಿಂದ ಹೊರಟಿದ್ದು ಬೆಳೆಯುತ್ತಾ ಬರುವುದರಿಂದ ತಕ್ಕ ಸಮಯದಲ್ಲಿ ಆ ಬೇರುಗಳನ್ನು ಕಡಿಸದೆ ಇದ್ದರೆ ಮುಂದಕ್ಕೆ ಬಾವಿಯ ಕಲ್ಲುಕಟ್ಟಣೆಯು ಕುಸಿದು ಬೀಳುವ ಗಂಡಾಂತರವಿದೆ. ಇದರ ವಿಷಯ ತಕ್ಕ ಕಾಲದಲ್ಲಿ ನಿಗಾಕೊಡಲಾದೀತೆಂದು ಅಪೇಕ್ಷಿಸುತ್ತೇವೆ.

NOTICE.

The undersigned begs to announce that he can train Students for Practical Examinations in Typewriting in all the three grades on all kinds of Typewriting machines. Typewriting machines of all kinds can also be repaired.

CHARGES MODERATE.

COELHO ST. Mangalore. **M. Ramachandra Pai** *Teacher, C. H. School.*
~~~~~

Estd 1888. ಸ್ಥಾಪನೆ 1888.

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮಗಳೂ,ವ ಬಾಯಿಗೆ ಮತ್ತು ಅಂಗುಳಿಗೆ ತೂತು ಬೀಳೋಣ, ಮಿನಮಿಣಿ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬಡಿಯೋಣ, ಪ್ರಮೇಹ (ಪರಮಿ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳು ಬಿಯೋಣ, ಕೈ ಮೇಲೆ ಕರಿ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿಗೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ **ಗಜಕರ್ಣವು** ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳತ. ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.



ಅಪೂರ್ವ ಸಂದರ್ಭ!

ವಿಳಾಸ — ಎಚ್ ಎಸ್ ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಾರ ಮಿಶ್ಯನ್ ಚೇಕುಗಳೂ, ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಟೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಬೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಕನ್ನಡಿಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಸೀರೆಗಳೂ, ಜೋಡುಗಳೂ, ರುಮಾಲುಗಳೂ, ದವಕೆ

ಕಣಗಳೂ ಕನಾಷ್ಟಗು ಸೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು

ಬರ್ಮೀಸ್ ಬ್ಯುಟಿ ಒಯಿಲ್

ಎಂಬ

ಬರ್ಮಾದೇಶದ ಸೌಂದರ್ಯ.



ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳುತಲೆ, ತಲೆನೋವು, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿಕೊಡುವಷ್ಟು ಚಲೋದಾಗಿರುವುದು. ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು, ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು. ಒಂದು ಕೈಗನ್ನಡಿ ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ ೧ ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ ೩ ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರ್ಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆ ಪ್ರಸಿದ್ಧಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾನವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡಿರುವದೆ. ಈ ದಿವಸವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ೦ ೮ ಕ್ರಯ ೨—೯—೦ ವಿ ಪಿ ಚಾರ್ಜು ಬೇರೆ

ಒಟ್ಟೊ ಪೆರೆಡ್ಯಾಸ್.



ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟು ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ ೧೦೦ನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ವಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೊ ಪೆರೆಡ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಂಪಲಿನದಕ್ಕೆ	0—8—0.
ನಡ ತರದ್ದಕ್ಕೆ	0-12—0.
ದೊಡ್ಡ ಸ್ಯಾಂಪಲಿಗೆ	1-14—0

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೋರಲ್ ಪರ್ಫ್ಯುಮರಿ ಕಂಪೆನಿ,
ಮುಂಬಯಿ.

Estd. 1888. ಸ್ಥಾಪನೆ 1888.

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ **ಸಾರ್ಸಾಪರಿಲ್ಲೆ**ಯಿಂದ ರಕ್ತವು ಶುದ್ಧವಾಗಿ ಆದರಿಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ. ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ **ಸಾರ್ಸಾಪರಿಲ್ಲೆ**ಯು ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ

ಗಜಕರ್ಣ.

ಸ್ಧು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ **ಗಜಕರ್ಣ**ವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ ೨೦—೨೫ ವರ್ಷಗಳ ಹಳತ. ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿನವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರ್ಪೂರ ಕಮಿಷನ್

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.



ಅಪೂರ್ವ ಸಂದರ್ಭ!

ಈ ಪ್ರಕಟಣೆಯ ಮೇಲೆ ಪ್ರಥಮತಾ ಬರುವ 24 ಆರ್ಡರುಗಳಿಗೆ ಈ ಗಡಿಯಾರವನ್ನು ಖರೀದಿ ಕ್ರಯ ರೂಪಾಯಿ 21—4—0ಕ್ಕೆ ಕಳುಹಿಸಿಕೊಡುವೆವು. ಮದ್ರಾಸು ಸಂಸ್ಥಾನದ ಯಾವ ರೈಲ್ವೇ ಸ್ಟೇಶನಿಗಾದರೂ ರೈಲ್ವೇ ಚಾರ್ಜು ಕೂಡಾ ಇಲ್ಲದೆ ಕಳುಹಿಸಿಕೊಡುವೆವು ನಮ್ಮ ಈ ಸಮರ್ಪಣೆಯಿಂದ ಅನೇಕ ಆರ್ಡರುಗಳು ಬರುವೀತಾದ್ದರಿಂದ ನಿಮ್ಮ ಆರ್ಡರನ್ನು ಟೆಲಿಗ್ರಾಫ್ ಮೂಲಕ ಕಳುಹಿಸಿರಿ.

"EXPRESS–MADRAS–RESERVE"

ಮತ್ತು ನಿಮ್ಮ ಪೂರಾ ವಿಳಾಸ ಬರೆಯಿರಿ.

ಗಡಿಯಾರದ ವರಪಣೆ.

ಎತ್ತರ 29 ಅಂಗುಲ: ಅಗಲ 10½ ಅಂಗುಲ. ಡಯಲ್ 6 ಅಂಗುಲ. **ಚಲೋ** ಪೊಲಿಷ್ ಮಾಡಿಯದೆ. ವಾಲ್‌ನಟ್ ಕೇಸ್; ಮೇಲ್ಪರಗತಿಯ ಪೊಲಿಷ್ ಮಾಡಿದ ಹಿತ್ತಾಳಿ ಯಂತ್ರಗಳಿದ್ದು 15 ದಿವಸಗಳಿಗೊಮ್ಮೆ ಕೀಲಿ ಕೊಡುವಂಥಾದ್ದು. ಒಂದು ಗಂಟೆ, ಅರ್ಧ ಗಂಟೆಗೆ ಗಂಟೆ ಹೊಡೆದು ಸುಸ್ವರದಿಂದ ಕೂಡಿದ ಗಾಯನವಾಗುವುದು. ಬಂಗ್ಲೆಗಳಲ್ಲಿ ಇಡುವಕ್ಕೆ ಯೋಗ್ಯವಾದದ್ದು.

ಓರ್ಡರಿನ ಕೂಡ ರೂ. 5 ಮುಂಗಡ ಕಳುಹಿಸಬೇಕು.

ಎಕ್ಸ್‌ಪ್ರೆಸ್ ವಾಚ್ ಕೊ

3 ರತನ್ ಬಜಾರ್ ರೋಡ್, ಮದ್ರಾಸ್.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಆದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಬಿರಿಯ ಕೊಡಲೀವರ್ ಮಿಶ್ರಣವೇ ಸರಿ ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಆರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ ಶ್ವಾಸೋಚ್ಛಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸೋಚ್ಛಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಫೋಟರ್ ಬಿರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ ಈ ಮಿಶ್ರಣವು ಸುರಸವಾಗಿರುತ್ತದೆ ಇದು ಎಲ್ಲಾ ಕಡೆಗಳಲಿ ದೊರಲ್ಪಡುವದು. ಮತ್ತು ಕನ್ನಡ ಬಲ್ಲವರೆಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು ಬಾಟ್ಲು 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

ಅಗ್ಗ! ಅಗ್ಗ!! ‖ ಕುಟುಂಬ ಜೀವನಿ ‖ ಧರ್ಮ! ಧರ್ಮ!!

ಪ್ರಿಯ ಭಾರತಿಯ ಮಹನಿಯರೇ!

ಎಲ್ಲಾ ರೋಗಗಳನ್ನು ಗೆಲ್ಲುವ ಅತಿ ಅಲ್ಪ ರೂ. 8 ಕ್ರಯದ 16 ಔಷಧಗಳ ಸಂಗ್ರಹದ "ಕುಟುಂಬ ಜೀವನಿ" ಎಂಬ ಪೆಟ್ಟಿಗೆಯನ್ನು ತರಿಸಲು ಮರೆಯಬೇಡಿರಿ. ಪ್ರತಿ ಕುಟುಂಬಕ್ಕೂ ಅತೀ ಅಗತ್ಯ.

ಅಕ್ಕರದಿ ಚಿಕ್ಕ ಬಂದು ಸಕ್ಕರೆಯಂ ನೆಕ್ಕಿದಂತೆ ।
ರಕ್ಕರೆಲ್ಲಾ ಒಕ್ಕಲಿಗರ ರೊಕ್ಕವೆಲ್ಲ ಮುಕ್ಕಿ ಪೋದರ್ ‖ ಎಂಬಂತೆ

ಈಗ ಇಮಿಟೇಶನ್ ಬಳೆ ತುಂಡುಗಳು ರತ್ನವೆಂಬ ಹೆಸರಿನಿಂದ ಎಲ್ಲಿ ನೋಡಿದರೂ ತುಂಬಿ ಹೋಗಿ, ಕಲ್ಯಾಣಿಗೆ ಖ್ಯಾಶ್ ಕಡಿಮೆ ಆದ ಹಾಗೆ ಈಗಿನವರು ಶಕ್ತಿನಿಂದಲೇ ಸುಲಿಗೆಯಾದರು

ಪ್ರಿಯ ಬಾಂಧವರೇ! ನಮ್ಮನ್ನು ಹಾಗೆ ಗ್ರಹಿಸಬೇಡಿರಿ. ಅಮೂಲ್ಯವಾದ ಮಾಣಿಕ್ಯವಾದರೂ ಹೇಮಾಶ್ರಯಬೇಕೇ ಬೇಕಾದ್ದರಿಂದ ನಮ್ಮನ್ನು ಆಶ್ರಯಿಸಿರಿ! ಪರೀಕ್ಷಿಸಿನೋಡಿರಿ!!

ನಮ್ಮ ವೈದ್ಯಾಲಯದಲ್ಲಿ ಸುಲಭವಾಗಿ ಎಲ್ಲಾ ರೋಗಗಳನ್ನು ಗೆಲ್ಲುವ ವಿಶೇಷ ಪಥ್ಯವಿಲ್ಲದ ಬಹಳ ಶೋಧನೆಯಿಂದಲೂ ವನೌಷಧಗಳಿಂದಲೂ, ಸಿದ್ಧಕಲ್ಪ ಭೈರಾಗಿ ಪ್ರಯೋಗಗಳಿಂದಲೂ ತಯ್ಯಾರಿಸಿದ ಪೌಡರು ಮಾತ್ರೆಗಳೂ, ಲೇಹ ಚೂರ್ಣಗಳೂ, ತೈಲ ಘೃತಗಳೂ, ಆಸವಾರಿಷ್ಟಗಳೂ, ಟೋನಿಕ್ ಆರಕ್‌ಗಳೂ ಬಡವರಿಗೆ ಧರ್ಮಾರ್ಥ ಇತರರಿಗೆ ಅಲ್ಪ ಕ್ರಯದಲ್ಲಿ ಸಿಕ್ಕುತ್ತವೆ. ಕ್ರಯ ನಿರ್ಣಯಕ್ಕೆ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ, ಕ್ರಯವಿಲ್ಲ, ಬೇಕಾದವರಿಗೆ ಕಳುಹಿಸುವೆವು. 10 ರೂ ವಾಯಿದೆ ಮೇಲೆ ಶೇಕಡಾ ರೂ 10ಡಿಸ್ಕೌಂಟ ಸಿಕ್ಕುವದು ತರಿಸಿಕೊಳ್ಳಿರಿ. ಸಂಘಕ್ಕೆ ಆಶ್ರಯ ಕೊಡಿರಿ

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

S. U. N. & CO.,

BENARES CITY, U P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲಿ ನಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ತಮ್ಮ ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

ದಿ ಯುನಿವರ್ಸಲ್ ಎಶ್ಯೂರೆನ್ಸ ಕಂಪೆನಿ ಲಿಮಿಟೆಡ್,

ಹೆಡ್ ಆಫೀಸು—191, ಬೌ ಬಜಾರ್, ಕಲ್ಕತ್ತ.

ಸಬ್ ಏಜಂಟರಿಗೆ ಮತ್ತು ಕೆ. ಎಸ್. ರಾವ್ ಬ್ರದರ್ಸ್, ಮಂಗಳೂರು ಇವರ ಮೂಲಕ ಸೇರಿದ ಮೆಂಬರರಿಗೆ—

ನೋಟೀಸು.

ಕೆ ಎಸ್ ರಾವ್ ಬ್ರದರ್ಸ್ ಮಂಗಳೂರು ಇವರ ಏಜನ್ಸಿಯನ್ನು ರದ್ದು ಮಾಡಿ, ಕಂಪೆನಿಯ ಚೀಫ್ ಏಜಂಟರಾಗಿರುವ ಮೆಸ್ಸರ್ಸ್ ಲಕ್ಷ್ಮಣ ರಾವ್ ಬ್ರದರ್ಸ್‌ರವರಿಗೆ ಅವರ ಚಾರ್ಜನ್ನು ಕೊಟ್ಟಿರುತ್ತದೆಂಬ ವಿಷಯವನ್ನು ಮೇಲೆ ಕಾಣಿಸಿದ ಮೆಂಬರರ ಲಕ್ಷಕ್ಕೆ ಈ ಮೂಲಕ ತರೋಣಾಗಿಯದೆ. ಮೇಲೆ ಹೇಳಿದ ಸದರಿ ಮೆಂಬರರು ತಮ್ಮ ವಂತಿಗೆಯನ್ನು ಸೀದಾ ಉಡ್ಪಿ ಆಫೀಸಿಗೆ ಯಾ ಮೆಸ್ಸರ್ ಜೋನ್ಸ್ ಬ್ರದರ್ಸ್, ಕಲ್ಪಣೆ, ಮಂಗಳೂರು—ಇವರಿಗೆ ಪಾವತಿ ಮಾಡಬೇಕೆಂಬದಾಗಿ ವಿಜ್ಞಾಪಿಸುತ್ತೇವೆ

ಮೇಲಿನ ವಿಷಯದಿಂದ ಮೆಂಬರರು ಕಲವರಿಕೆ ಪಡಲು ಯಾ ಯಾವದೊಂದು ಅಸತ್ಯ ಕವನಗಳಿದ್ದರೆ ದಿಗಿಲು ಪಡಲು ಕಾರಣವಿಲ್ಲವೆಂಬದನ್ನೂ ಈ ಮೂಲಕ ಮೆಂಬರರ ಚಿತ್ತಕ್ಕೆ ತರೋಣಾಗಿ ಅಂಥಾದಕ್ಕೆ ಗಮನ ಕೊಡಬಾರದೆಂತ ವಿಜ್ಞಾಪಿಸೋಣಾಗಿಯದೆ

ಜೆ ಸರ್ಕಾರ್,
ಸೆಕ್ರಿಟರಿ.

ವಿದ್ಯಾಸಾಗರ ಬುಕ್ ಡಿಪೋ, ಬೆಂಗಳೂರು ಸಿಟಿ.

ನಮ್ಮಲ್ಲಿ ಸರ್ಕಾರಿ, ಸ್ಕೂಲ್ ಪುಸ್ತಕ ಸಂಸ್ಕೃತ, ಕನ್ನಡ, ತೆಲುಗು, ಭಾಷೆಗಳಲ್ಲಿ ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ ಮತ್ತು ಉತ್ತಮ ಕಾದಂಬರಿಗಳೂ ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರಿಯುತ್ತವೆ.

ಕೆಲವು ಅಪೂರ್ವ ಪುಸ್ತಕಗಳು.

ಸಹಾಯವಿಲ್ಲದೆ ಇಂಗ್ಲಿಷು ಕಲಿಯುವ ಪುಸ್ತಕ ೫ ಭಾಗವುಳ್ಳದ್ದು ದೊಡ್ಡ ಪುಸ್ತಕ. ಬೆಲೆ ೧—೮—೦

ಚಂದಕಳಾ ಕಲಾನಾಥ ಮುಂತಾದ ಉತ್ತಮ ಕಾದಂಬರಿಗಳು ನಮ್ಮಲ್ಲಿ ದೊರಿಯುತ್ತವೆ

ಕನಕಾಲುತಾ ಅಥವಾ ಕಮಲಿನೀ ಚರಿತಂ	೦—೬—೦
ದಿವಾನ್ ರಂಗಾಚಾರ್ಯರ ಜೀವನ ಚರಿತ್ರೆ	೦—೬—೦
ದಿವಾನ್ ಶೇಷಾದ್ರಯ್ಯರವರ ಜೀವನ ಚರಿತ್ರೆ ಇಂಗ್ಲಿಷ್	೦—೬—೦
ಜನಸರುನ್ನತ ಸ್ಥಿತಿಗೆ ಮೂಲಾಧಾರ	೧—೪—೦
ಆರ್ಯ: ಕೀರ್ತಿ	೦—೧೦—೦
ವೈದ್ಯಸಾರ ಸಂಗ್ರಹ	೩—೦—೦

ಇದು ಇಂಡಿಯ ದೇಶದಲ್ಲೆಲ್ಲಾ ದೊಡ್ಡ ವೈದ್ಯ ಗ್ರಂಥಗಳು ಘನ ಪಂಡಿತರಿಂದ ಪರಿಶೋಧಿಸಲ್ಪಟ್ಟದ್ದು

ಹನುಮದ್ವಿಲಾಸ	೦—೮—೦
ಋಗ್ವೇದ ನಿತ್ಯ ಕರ್ಮ	೦—೪—೦

ಶೋಭನೆ, ನರಬಲಿ, ಯಾಮಿನಿ ಈ ಪುಸ್ತಕಗಳನ್ನು ಒಂದು ಸರ್ತಿ ಓದಿದರೆ ಯಾವಾಗಲೂ ಓದುತ್ತಿರಬೇಕೆಂದು ಇಷ್ಟವಾಗುತ್ತದೆ.

ವಿಳಾಸ:— ಬಿ. ನರಸಿಂಹ ಅಯ್ಯಂಗಾರ್,
ಮೆನೇಜರ್ ವಿದ್ಯಾಸಾಗರ ಬುಕ್ ಡಿಪೋ.
ಚಿಕ್ಕಪೇಟೆ ಬೆಂಗಳೂರು ಸಿಟಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 12ನೇ ಜೂನ್ 1914.

ಸಾಲಗಳ ಬಡ್ಡಿ ದರವು

ಏನೂ ತಿಳಿಯದ, ಹಣದಡಚಣೆಯಿಂದ ಯಾವ ವೃತ್ತಿಯನ್ನೂ ಮಾಡಲಾರದ ಮತ್ತು ತಕ್ಕ ಜವಾಬ್ದಾರಿಯನ್ನು ಕೊಡಲಾರದ ಸಾಮಾನ್ಯರು ಇಲ್ಲಿ ಸೇಕಡಾ ೧೮, ೨೪, ೩೬ ದರಗಳ ಬಡ್ಡಿಯಲ್ಲಿ ಹಣ ಸಾಲವನ್ನು ಹೊಂದುವರು. ನಮ್ಮ ದೇಶದ ಇತರ ಹಲವು ಪ್ರಾಂತ್ಯಗಳಲ್ಲಿ ಇಂಥಾ ಸಾಮಾನ್ಯರು ಮಾತ್ರವಲ್ಲ; ಸಾಲಕ್ಕೆ ತಕ್ಕ ಜವಾಬ್ದಾರಿಯನ್ನು ಕೊಡಲು ಶಕ್ತರಾದವರು ಸಹ ಈ ವಿಪರೀತ ಬಡ್ಡಿಯ ದರಗಳಿಂದಲೇ ಹಣ ಸಾಲ ಪಡಿಯಬೇಕಾಗುತ್ತದೆ. ಸಾಮಾನ್ಯರನ್ನೂ ಮಧ್ಯಮ ತರಗತಿಯವರನ್ನೂ ದರಿದ್ರಾವಸ್ಥೆಗೆ ತಂದುಹಾಕುವ ಈ ಬಡ್ಡಿ ದರಗಳಿಂದ ದೇಶದ ಸಂಪನ್ನತೆಗೆ ವಿಶೇಷವಾದ ಹಾನಿಯು ಪ್ರಾಪ್ತವಾಗುತ್ತದೆಂಬ ವಿಷಯವು ಸರಕಾರದವರ ಮತ್ತು ಪ್ರಜಾ ಮುಂದಾಳುಗಳ ಲಕ್ಷ್ಯಕ್ಕೆ ಬಂದಿರುವುದು. ಅತಿ ವಿಶೇಷವಾದ ಈ ಬಡ್ಡಿ ದರಗಳನ್ನು ಕಡಮೆಮಾಡಲು ಪ್ರಕೃತ ಪ್ರಯತ್ನಗಳು ನಡಿಯುತ್ತಿರುವವು. ಕುಓಪರೇಟಿವ್ ಕ್ರೆಡಿಟ್ ಸೊಸ್ಶೈಟಿಗಗಳೆಂಬ ಪರಸ್ಪರ ಸಹಾಯಕ ಸಂಘಗಳ ಸ್ಥಾಪನೆಯು ಈ ಉದ್ದೇಶದಿಂದಲೇ ಏರ್ಪಡಿಸಲ್ಪಟ್ಟಿರುವುದು. ಪ್ರಜೆಗಳೂ ಸರಕಾರದವರೂ ಈ ಸಂಘಗಳನ್ನು ದೇಶದ ಎಲ್ಲಾ ಭಾಗಗಳಲ್ಲಿಯೂ ಸ್ಥಾಪಿಸಲು ಪ್ರಯತ್ನಿಸುತ್ತಿರುವರು ವಿಪರೀತ ಬಡ್ಡಿ ದರಗಳಿಂದ ಉಂಟಾಗುವ ಹಾನಿಯನ್ನು ಆಟೋಪಿಸಲು ಇನ್ನೊಂದು ಕಾನೂನನ್ನು ಏರ್ಪಡಿಸುವ ವಿಷಯವು ಸರಕಾರದವರ ಪರ್ಯಾಲೋಚನೆಯಲ್ಲಿರುವುದೆಂಬುದಾಗಿ ಕೇಳುತ್ತೇವೆ. ಇಂಥಾ ಕಾನೂನು ಇಂಗ್ಲಾಂಡದಲ್ಲಿ ಪ್ರಕೃತ ಜ್ಯಾರಿಯಲ್ಲಿರುವುದು. ಈ ಕಾನೂನನ್ನು ಇನ್ನೂ ಚನ್ನಾಗಿ ತಿದ್ದುವ ವಿಷಯವು ಬ್ರಿಟಿಷ್ ಪಾರ್ಲಿಮೆಂಟಿನವರಿಂದ ಪರ್ಯಾಲೋಚಿಸಲ್ಪಡುತ್ತದೆ. ಈ ಕಾನೂನಿನ ಪ್ರಕಾರ ಹಣ ಸಾಲ ಕೊಡುವವನ ಹೆಸರು ಇತ್ಯಾದಿಗಳನ್ನು ರೆಜಿಸ್ಟರ್ ಮಾಡಬೇಕಾಗುವುದು. ಬಡ್ಡಿಯ ದರವು ಯಾವ ಸಂದರ್ಭದಲ್ಲಿ ಯಾದರೂ ಸೇಕಡಾ ೧೫ಕ್ಕೆ ಮಿಕ್ಕಿರಕೂಡದು. ಸಾಲ ಕೊಡುವ ವಿಧಾನಗಳಲ್ಲಿ ಸಹ ಕೆಲವು ಕ್ರಮಗಳನ್ನು ಏರ್ಪಡಿಸುವರು. ಹೀಗೆ ಏರ್ಪಟ್ಟ ವಿಧಿಯನ್ನು ಮೀರಿ ನಡೆದವರಿಗೆ ಜುರುಮಾನೆ ಮತ್ತು ಕಾರಾಗ್ರಹವಾಸದ ಶಿಕ್ಷೆಯು ಕೊಡೋಣಾಗುವುದು.

ಇಂಗ್ಲಾಂಡದಂಥಾ ಸಂಪನ್ನ ದೇಶದಲ್ಲಿ ಸಾಲಗಳ ಬಡ್ಡಿಯ ದರಗಳನ್ನು ಮಿತಿಯಲ್ಲಿಡುವ ಶಾಸನಗಳು ಇರುವವೆಂದ ಮೇಲೆ ದೀನಸ್ಥಿತಿಯಲ್ಲಿರುವ ಹಿಂದೂಸ್ಥಾನದಲ್ಲಿ ಇಂಥಾ ಶಾಸನಗಳು ಅಗತ್ಯವಾಗಿ ಬೇಕಾಗಿರುವವು. ಹಣ ಬಡ್ಡಿಗೆ ಕೊಟ್ಟು ಜೀವಿಸುವ ವೃತ್ತಿಯು ಹೀನವೃತ್ತಿಯೆಂತ ಹಿಂದೆ ಎಣಿಸಲ್ಪಟ್ಟಿತ್ತು. ನಾಲ್ಕೈದು ಶತಮಾನಗಳ ಹಿಂದೆ ಕ್ರೈಸ್ತ ರಾಜ್ಯಗಳಲ್ಲಿ ಈ ವೃತ್ತಿಯಿಂದ ಜೀವಿಸಬಾರದೆಂಬುವ ಅಭಿಪ್ರಾಯವಿತ್ತಲ್ಲದೆ ಈ ಅಭಿಪ್ರಾಯಕ್ಕೆ ಅನುಗುಣವಾದ ಕಾನೂನುಗಳೂ ಇದ್ದವು. ಪೌರ್ವಾತ್ಯ ದೇಶಗಳಲ್ಲಿ, ಸಹ ಮೊದಲು ಮೊದಲು ಈ ವೃತ್ತಿಯನ್ನು ನಡಿಸುವವರಿಗೆ ಗೌರವವಿದ್ದಿಲ್ಲ. ಪ್ರಪಂಚದ ವ್ಯಾಪಾರ ವೈವಾಟಗಳು ವಿಸ್ತಾರವಾಗಿ ಬೆಳಿಯುತ್ತಾ ಬಚ್ಚಿಟ್ಟಿರ ದ್ರವ್ಯಸಂಚಯಗಳು ಇವಕ್ಕೆ ಸಾಲದೆ ಹೋದ್ದರಿಂದಲೂ ವೈವಾಟಗಳು ಸರಾಗವಾಗಿ ನಡಿಯಬೇಕಾದ್ದರಿಂದಲೂ ಕ್ರಮೇಣ ಈ ವೃತ್ತಿಯ ಅವಶ್ಯಕತೆಯು ಉಂಟಾಯಿತು ಇದರಿಂದ ಹಣ ಸಾಲ ಕೊಡುವ ವೃತ್ತಿಯ ಪರವಾಗಿ ಇದ್ದಂಥಾ ದುರಭಿಪ್ರಾಯಗಳು ಮಾಜಿಹೋದವು. ವೃತ್ತಿಗಳನ್ನು ಸರಿಯಾಗಿ ನಡಿಸುವರೆ, ವೃತ್ತಿಗೆ ಬೇಕಾದ ಉಪಕರಣಗಳನ್ನು ಸಂಗ್ರಹಿಸಿಕೊಳ್ಳುವರೆ ಒಂದೇ ಕಾಲದಲ್ಲಿ ಹಣವು ಮೊತ್ತವಾಗಿ ಬೇಕಾದುದರಿಂದ ಜನರು ಸಾಲಗಳನ್ನು ಪಡಿಯಬೇಕಾಯಿತು. ಈ ರೀತಿ 'ಹಣ ಸಾಲ ಕೊಡುವ ವೃತ್ತಿಯು ಸಮಾಜದಿಂದ ಕ್ರಮೇಣ ಮನ್ನಿಸಲ್ಪಟ್ಟಿತು.

ಹಲವು ಕಾರಣಗಳಿಂದ ಜೀವನದ ಸರಾಸರಿಯ ಖರ್ಚು ಏರುತ್ತಲಿದೆ. ಇದೇ ರೀತಿ ಜನರ ದುಡಿಯುವ ತ್ರಾಣವು ಹೆಚ್ಚದೆ ಇರುವುದು. ಜನರಲ್ಲಿ ಹೆಚ್ಚಿನವರು ತಮ್ಮ ಖರ್ಚು ಕಳೆದು ಉಳಿಸುವಂಥಾದ್ದು ವಿಪರೀತ ಬಡ್ಡಿಯ ಸಾಲಗಳಾಗಿವೆ. ವ್ಯಾಪಾರ ವೈವಾಟಗಳಿಗೆ ಮಾತ್ರವಲ್ಲ; ಜೀವನದ ಖರ್ಚಿನ ಬಗೆಗೂ ಪ್ರಕೃತ ಸಾಲವನ್ನು ಪಡಿಯಬೇಕಾಗಿರುವುದು. ಸಾಲವನ್ನು ಪಡಿಯುವವರ ಸಂಖ್ಯೆಯು ಹೀಗೆ ಹೆಚ್ಚುತ್ತಾ ಹೋಗುತ್ತಿರುವುದರಿಂದ ಹಣದ ಬಡ್ಡಿಯ ದರವೂ ವಿಪರೀತವಾಗಿರುವುದು. ಇಂಥಾ ದರವನ್ನು ತಗ್ಗಿಸಲು ಮಾಡುವ ಪ್ರಯತ್ನಗಳು ಸ್ತುತ್ಯವಾಗಿರುವವು. ಸಾಲವನ್ನು ಹಿಂದಕ್ಕೆ ಕೊಡಲಾರದವನನ್ನು ಜೈಲಿಗೆ ಕಳುಹಿಸಿಕೊಡುವ ಈಗಿನ ಶಿಕ್ಷಾ ವಿಧಾನವನ್ನು ವಜಾಮಾಡಬೇಕೆಂದು ಹಲವರು ಈ ಸಂದರ್ಭದಲ್ಲಿ ಸೂಚಿಸಿರುತ್ತಾರೆ. ಇಂಥಾ ಸೂಚನೆಗಳೂ ಈ ಸೂಚನೆಗಳಿಗೆ 'ಯುಕ್ತವಾದ ಕಾನೂನಿನ ಏರ್ಪಾಡೂ ಬೇಕಾಗಿರುವುದೆಂಬುದರಲ್ಲಿ ವಾದವಿಲ್ಲ. ಆದರೆ ಈ ಏರ್ಪಾಡಿನೊಂದಿಗೆ "ವಿಪರೀತ ದರಗಳ ಬಡ್ಡಿಯಿಂದ ಜನರನ್ನು ರಕ್ಷಿಸುವರೆ ಪ್ರಜಾಮುಂದಾಳುಗಳೂ ಸರಕಾರದವರೂ ಇನ್ನು ಕೆಲವು ಪ್ರಯತ್ನಗಳನ್ನು ಕೈಕೊಳ್ಳಬೇಕಾಗಿದೆ. ಸಾಲಗಳನ್ನು ವಿಪರೀತ ದರದ ಬಡ್ಡಿಯಲ್ಲಿ ಸಹ ಏಕೆ ಪಡಿಯುತ್ತಿರುವರೆಂಬುದನ್ನು ಶೋಧಿಸಿ ತಿಳಕೊಳ್ಳಬೇಕು. ನಮ್ಮ ಸಹಜವಾಗಿರುವ ಜೀವನ ಕ್ರಮಗಳನ್ನು ಏನೂ ಕಾರಣವಿಲ್ಲದೆ ಬದಲಾಯಿಸಿಕೊಂಡಿದ್ದೇವೋ, ಈ ಬದಲಾಯಿಸಿದ ಕ್ರಮಗಳಿಂದ ಖರ್ಚು ಹೆಚ್ಚಿರುವುದೋ, ಮದಿವೆ ಮೊದಲಾದ ಪ್ರಸ್ತಕಾಲಗಳಲ್ಲಿ ನಾವು ನಮ್ಮ ಸ್ಥಿತಿಗೆ ಮಿಕ್ಕಿದ ಖರ್ಚನ್ನು ಮಾಡುತ್ತಿರುವೆವೋ, ಅತ್ಯಗತ್ಯವಾದ ಕಾರ್ಯಗಳಿಗೆ ಬೇಕಾಗಿ ಸಾಲವಾಗಿ ಪಡದ ಮೊಬಲಗುಗಳನ್ನು ತಕ್ಕ ರೀತಿಯಲ್ಲಿ ಖರ್ಚು ಮಾಡುವರೋ, ತಕ್ಕ ರೀತಿಯಲ್ಲಿ ಖರ್ಚು ನಡಿಸುವಂತೆ ಮಾಡುವುದು ಯಾವ ಏರ್ಪಾಡಿನಿಂದ ಸಾಧ್ಯ, ಜನರ ದುಡಿಯುವ ತ್ರಾಣವನ್ನು ಹೆಚ್ಚಿಸಲು ಎಂಥಾ ವಿಧದ ಶಿಕ್ಷಣವು ಜನರಿಗೆ ಅಗತ್ಯವಾಗಿ ಬೇಕಾದುದು, ಜನರು ಹಣವನ್ನುಳಿಸಲು ಸಾಧ್ಯವಾಗುವಂತೆ ತೆರಿಗೆಗಳಲ್ಲಿ ಯಾವುದನ್ನು ತಗ್ಗಿಸಬೇಕು—ಈ ಮೊದಲಾದ ವಿಚಾರಗಳಿಂದ ಪ್ರಜೆಗಳ ಸ್ಥಿತಿಗತಿಗಳನ್ನು ತಿಳಿದುಕೊಂಡು ಪ್ರಜಾಸಂಪನ್ನತೆಗೆ ಅನುಕೂಲವಾದ ಇತರ ಏರ್ಪಾಡುಗಳ ಜ್ಯಾರಿಯೂ ಸಹ ಬೇಕಾಗಿರುತ್ತದೆ. ಆಗ ಪರಸ್ಪರ ಸಹಾಯಕ ಸಂಘಗಳ ಸ್ಥಾಪನೆಯಿಂದಲೂ ಪ್ರಕೃತ ಪರ್ಯಾಲೋಚನೆಯಲ್ಲಿರುವ ಬಡ್ಡಿ ದರಗಳ ವಿಪರ್ಯವನ್ನು ಹೋಗಲಾಡಿಸುವ ಕಾನೂನಿನ ಜ್ಯಾರಿಯಿಂದಲೂ ಪ್ರಜಾಸಂಪನ್ನತೆಗೆ ಬಹು ಬೇಗ ಆಸ್ಪದ ದೊರಕುವುದು ಬಡ್ಡಿಯ ದರವು ಸಹ ಸಂಪನ್ನತೆಯು ಪ್ರಾಪ್ತವಾದ್ದಲ್ಲಿ ತಗ್ಗುವುದು

ಸ್ತ್ರೀ ಸಮಾಜವನ್ನು ಹೇಗೆ ಉದ್ಧರಿಸಬಹುದು?

ಈ ವಿಷಯ ಬ್ರಹ್ಮಜ್ಞಾನ ಸಂಘದ ಅಧ್ಯಕ್ಷರಾದ ಮಿಸೆಸ್ ಅನ್ನಿಬಿಸೆಂಟರವರ ಒಂದು ವಿಸ್ತಾರವಾದ ಲೇಖವು ವೃತ್ತಪತ್ರಿಕೆಯೊಂದರಲ್ಲಿ ಪ್ರಕಟಿಸಲ್ಪಟ್ಟಿರುವುದು. ತಮ್ಮ ಉದ್ಧರಣೆಯನ್ನು ತಾವೇ ಸಾಧಿಸಿಕೊಳ್ಳಲು ಸ್ತ್ರೀಯರಿಗಿರುವ ಅಭ್ಯಂತರಗಳನ್ನು ತೆಗೆದುಹಾಕುವುದರಿಂದ ಈ ಕಾರ್ಯವು ಬೇಗನೇ ಸಾಗುವುದೆಂಬುದಾಗಿ ಸೂಚಿಸಿರುತ್ತಾರೆ. ಇಂಥಾ ಅಭ್ಯಂತರಗಳು ಯಾವವೆಂಬುದನ್ನು ತಿಳಿಯುವಂತೆ ಪುರಾತನ ಕಾಲಗಳಲ್ಲಿ ಸ್ತ್ರೀಯರು ಅವಲಂಬಿಸುತ್ತಿದ್ದ ಜೀವನಧರ್ಮಗಳ ಪ್ರಸ್ತಾಪವನ್ನು ಬಿಸೆಂಟರವರು ಮಾಡಿರುವರು. ಸತಿ ಮತ್ತು ಮಾತೆಯರಾಗಿ ಗೃಹಧರ್ಮಿಣಿಗಳಾಗಿರುವುದು, ಗೃಹಧರ್ಮವನ್ನು ಬಿಟ್ಟು ವಿವಾಹಿತರಾಗದೆ ಬ್ರಹ್ಮವಾದಿನಿಯರಾಗಿರುವುದು, ಅಥವಾ ಗೃಹಧರ್ಮವನ್ನು ಮುಗಿಸಿ ಪತಿಯರೊಡನೆ ವಾನಪ್ರಸ್ಥಾಶ್ರಮವನ್ನು ಕೈಕೊಳ್ಳುವುದು—ಸ್ತ್ರೀಯರ ಜೀವನಧರ್ಮವು ಈ ರೀತಿಯಾಗಿತ್ತು. ಇಂಥಾ ಜೀವನಧರ್ಮಗಳನ್ನನುಸರಿಸಿ ರಾಜಕಾರ್ಯಗಳಲ್ಲಿಯೂ ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳಲ್ಲಿಯೂ ಖ್ಯಾತಿಹೊಂದಿದ ಗಾಂಧಾರಿ, ಪದ್ಮಿನಿ, ತಾರಾಬಾಯಿ, ಚಂದ್‌ಬಿಬಿ, ಅಹಲ್ಯಾಬಾಯಿ ಮೊದಲಾದ ಸ್ತ್ರೀಯರ ಉದಾಹರಣೆಗಳನ್ನು ಹೇಳಿರುವರು. ಪುರಾತನ ಕಾಲದ ಸ್ತ್ರೀಯರ ಜೀವನಧರ್ಮವನ್ನು ತಿಳಿದರೆ ಅಂಥಾ ಜೀವನಧರ್ಮವನ್ನು ಈಗ ಸಹ ಅನುಸರಿಸಲು ಇರುವ ತೊಡಕುಗಳು ಯಾವವೆಂಬುದು ಸ್ತ್ರೀಯರ ಈಗಿನ ಸ್ಥಿತಿಯಿಂದ ವ್ಯಕ್ತವಾಗುವುದು. ಇಂಥಾ ಧರ್ಮಾವಲಂಬನೆಯನ್ನು ಸರಿಯಾಗಿ ಮಾಡುವಂತೆ ಸ್ತ್ರೀಯರಿಗೆ ತಕ್ಕದಾದ ಶಿಕ್ಷಣವನ್ನು ಕೊಡಬೇಕೆಂತ ಸೂಚಿಸಿರುತ್ತಾರೆ. ದೇಶಭಾಷೆ, ನಮ್ಮ ಪುರಾತನ ಇತಿಹಾಸಗಳನ್ನು ತಿಳಿಯುವಂತೆ ಸಂಸ್ಕೃತ ಭಾಷೆ, ಈಗ ಲೋಕದಲ್ಲಿ ಪತಿಗಿರುವ ಸುಖದುಃಖಗಳನ್ನು ತಿಳಿಯುವಷ್ಟು ಇಂಗ್ಲೀಷು ಭಾಷೆ, ಗೃಹಕೃತ್ಯಕ್ಕೆ ಉಪಯುಕ್ತವಾದ ಆರೋಗ್ಯ ಶಾಸ್ತ್ರ ಮೊದಲಾದವುಗಳ ಮಾಹಿತಿಯು—ಇವನ್ನೆಲ್ಲಾ ಕಲಿಸುವ ಶಿಕ್ಷಣ ಏರ್ಪಾಡು ಅಗತ್ಯವಾಗಿರುವುದು. ಉಪಾಧ್ಯಾಯಿಗಳಾಗಬೇಕೆಂತಿರುವವರು ಅಥವಾ ವೈದ್ಯ ವೃತ್ತಿಯನ್ನು ಮಾಡಬೇಕೆಂತ ಇಚ್ಛೆಯುಳ್ಳವರು ಬಹಳ ಸಣ್ಣ ಪ್ರಾಯದಲ್ಲಿ ವಿಧವೆಯರಾದವರು, ಕೊಲೇಜುಗಳಲ್ಲಿ ದೊರಕುವ ಪ್ರೌಢ ವಿದ್ಯಾಭ್ಯಾಸವನ್ನು ಪಡಿಯಬೇಕೆಂತ ಬಿಸೆಂಟರವರು ಹೇಳಿರುವರು. ಈ ಬಗ್ಯೆ ಪ್ರಕೃತ ಪತಿಪುತ್ರರಾಗಿರುವವರೆಲ್ಲರೂ ಬೇಕಾದ ಶಾಲಾ ಕೊಲೇಜುಗಳನ್ನೂ ಆಶ್ರಮಗಳನ್ನೂ ಸ್ಥಾಪಿಸಲು ನಿರಂತರ ಪ್ರಯತ್ನ ನಡಿಸಬೇಕೆಂತ ವಿಜ್ಞಾಪಿಸಿಕೊಂಡಿರುವರು.

ಹಿಂದೂಗಳ ಪ್ರಖ್ಯಾತಪಟ್ಟ ಎರಡು ವಿದ್ಯಾ ಸಂಸ್ಥೆಗಳು.

ಲಾಹೋರಿನಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರ ಹೆಸರಲ್ಲಿ ಸ್ಥಾಪಿಸಲ್ಪಟ್ಟಿರುವ ಆಂಗ್ಲೋ ವೇದಿಕ್ ಕೊಲೇಜು ಮತ್ತು ಪುನೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಫರ್ಗುಸನ್ ಕೊಲೇಜು ಇವೆರಡು ಹಿಂದೂಗಳಿಂದ ಸ್ಥಾಪಿಸಲ್ಪಟ್ಟಿರುವ ಪ್ರಖ್ಯಾತ ವಿದ್ಯಾ ಸಂಸ್ಥೆಗಳಾಗಿರುವವು. ಲಾಹೋರಿನ ಆಂಗ್ಲೋ ವೇದಿಕ್ ಕೊಲೇಜಿನಲ್ಲಿ ಕೊಲೇಜು ಶಾಖೆಯಲ್ಲಿ ೭೯೮ ವಿದ್ಯಾರ್ಥಿಗಳೂ, ಶಾಲಾ ಶಾಖೆಯಲ್ಲಿ ೧೭೩೭ ವಿದ್ಯಾರ್ಥಿಗಳೂ, ವಿದ್ಯಾರ್ಥಿ ಭವನದಲ್ಲಿ ೬೯೭ ವಿದ್ಯಾರ್ಥಿಗಳೂ ಇರುವರು. ಇತರ ಉಪಾಧ್ಯಾಯರುಗಳಲ್ಲದೆ ೧೫ ಜನ ವಿದ್ಯಾ ಪಂಡಿತರು ಈ ಕೊಲೇಜಿನಲ್ಲಿ ಹನ್ನೊಂದು ಬಗೆಯ ಕೆಮಿಸ್ಟ್ರಿ ಫಿಜಿಕ್ಸ್ ಮೊದಲಾದ ವಿದ್ಯಾ ಶಾಸ್ತ್ರಗಳನ್ನು ಕಲಿಸುತ್ತಿರುವರು ಈ ಕೊಲೇಜಿಗೆ ೫ ಲಕ್ಷ ರೂಪಾಯಿಗಳ ನಗದಿ ಫಂಡೂ ೬ ಲಕ್ಷ ರೂಪಾಯಿಗಳ ಕಟ್ಟೋಣ ಇತ್ಯಾದಿ ವಿದ್ಯಾ ಸಾಹಿತ್ಯಗಳೂ ಇರುವವು.

ಪುನೆಯ ಫರ್ಗುಸನ್ ಕೊಲೇಜಿನಲ್ಲಿ ಕೊಲೇಜು ಶಾಖೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ೧೧೨೮, ಶಾಲೆಯ ವಿದ್ಯಾರ್ಥಿಗಳು ೧೩೦೦, ಕೊಲೇಜು ಶಾಲೆಯ ಪಂಡಿತರು ೨೫, ಶಾಲಾ ಶಾಖೆಗಳ ಉಪಾಧ್ಯಾಯರು ೬೦ ಈ ರೀತಿ ಇರುವುದು.

ಲಾಹೋರಿನ ಮತ್ತು ಪುನೆಯ ಹಲವು ವಿದ್ಯಾವಂತರ ತ್ಯಾಗ ಶೀಲತೆಯಿಂದ ಈ ಎರಡು ಸಂಸ್ಥೆಗಳು ಸ್ಥಾಪಿಸಲ್ಪಟ್ಟು ಪ್ರಕೃತ ಹಿಂದೂಸ್ಥಾನದಲ್ಲಿ ಬಹಳ ಖ್ಯಾತಿಯನ್ನು ಹೊಂದಿರುವವು. ಈ ಸಂಸ್ಥೆಗಳ ಸ್ಥಾಪನೆಯ ಕಾಲದಲ್ಲಿ ಮಾತ್ರ ಅಲ್ಲಿಯ ಗೃಹಸ್ಥರು ತ್ಯಾಗ ಶೀಲತೆಯನ್ನು ತೋರಿ ನಂತರ ತಮ್ಮಿಂದ ಸ್ಥಾಪಿಸಲ್ಪಟ್ಟ ಈ ಸಂಸ್ಥೆಗಳ ಗೋಜಿಗೆ ಹೋಗದೆ ಸುಮ್ಮನಿರರು. ಇಂಗ್ಲಾಂಡ್, ಅಮೇರಿಕ ಮೊದಲಾದ ದೇಶಗಳಿಗೆ ಹೋಗಿ ವಿಶೇಷವಾದ ವಿದ್ಯಾ ಸಂಪನ್ನತೆಯನ್ನು ಗಳಿಸಿಕೊಂಡು ಲಾಭಕರವಾದ ಹುದ್ದೆಗಳು ತಮಗೆ ಸುಲಭದಿಂದ ದೊರಿಯಬಹುದಾದರೂ ಅವುಗಳನ್ನು ಬಿಟ್ಟು ಜೀವನಕ್ಕೆ ಬೇಕಾಗುವ ಅಲ್ಪ ಸಂಬಳವನ್ನು ಈ ಸಂಸ್ಥೆಗಳಿಂದ ಸ್ವೀಕರಿಸಿ ತಮ್ಮ ಜೀವಿತಗಳನ್ನೇ ಈಗಲೂ ಈ ಸಂಸ್ಥೆಗಳ ಪಾಲನೆಗೆ ಅವರ್ಲಿಯ ಮಹನೀಯರು ಅರ್ಪಿಸುತ್ತಿರುವರು. ಪರೋಪಕಾರದ ಸಂಸ್ಥೆಗಳಿಗೆ ಹಣಕ್ಕಿಂತ ಮುಖ್ಯವಾಗಿ ಬೇಕಾದದ್ದು ಸ್ವಾರ್ಥ ತ್ಯಾಗವನ್ನು ಮಾಡಿ ಲೋಕ ಸೇವೆಗೋಸ್ಕರ ಜೀವಿತಗಳನ್ನರ್ಪಿಸುವವರೆಂಬುದು ಈ ಎರಡು ಸಂಸ್ಥೆಗಳ ಸ್ಥಾಪನೆ ಮತ್ತು ಪಾಲನೆಗಳಿಂದ ವ್ಯಕ್ತವಾಗುವುದು.

ಅನಾರೋಗ್ಯಕರವಾದ ಕೆಲವು ಹೊಲಸು ಪದ್ಧತಿಗಳು.

ಈ ೨೦ನೇ ಶತಮಾನವು ನವನಾಗರೀಕತೆಯ ಕಾಲವಾಗಿದ್ದು ಎಲ್ಲೆಲ್ಲಿಯೂ ಹೊಸ ಹೊಸ ಬದಲಾವಣೆಗಳು ಉಂಟಾಗುತ್ತಲಿವೆ. ಊಟ, ಉಡುಪು, ಮಾತುಕಥೆಗಳಲ್ಲಿ ಬದಲಾವಣೆಗಳು ಈ ಕಾಲದಲ್ಲಿ ಸುಧಾರಣೆಯಿಲ್ಲದ ಯಾವುದೊಂದು ವಿಷಯವು ಇಲ್ಲವೆಂದೇ ಹೇಳಬೇಕು. ವಿವಿಧ ಪದ್ಧತಿಗಳೂ ಬದಲಾವಣೆಯನ್ನು ಹೊಂದಿವೆ. ಪರಂತು, ಅವಶ್ಯವಾಗಿ ಬದಲಾವಣೆ ಹೊಂದಬೇಕಾಗಿರುವ ಕೆಲವು ಪದ್ಧತಿಗಳು ಇನ್ನೂ ನಮ್ಮಲ್ಲಿ ಬದಲಾವಣೆಯನ್ನು ಹೊಂದದೆ ವಿವಿಧ ಕೇಡುಗಳನ್ನುಂಟುಮಾಡುತ್ತಲಿವೆ. ನಾವು ಒಂದು ನಾಟಕ ರಂಗಕ್ಕೆ ಹೋದಾಗ ಯಾ ಅಂಗಡಿಗಳಲ್ಲಿ ಸಾಮಾನುಗಳನ್ನು ಕೊಂಡುಕೊಳ್ಳುವಾಗ ಚಿಲ್ಲರೆ ಬೇಕಾದರೆ ಬೇಕಾದಷ್ಟು ರೂಪಾಯಿ, ಪಾವಲಿಗಳನ್ನು ಬಾಯಿಯಲ್ಲಿಟ್ಟು ಚಿಲ್ಲರೆ ಲೆಕ್ಕ ಮಾಡುವ ಪದ್ಧತಿ ಇದೆ. ಇದು ಬಹಳವಾಗಿಯೂ ಹೊಲಸು ಪದ್ಧತಿಯಾಗಿರುವುದು. ಬೆಳ್ಳಿ ಯಾ ತಾಂಬ್ರದ ನಾಣ್ಯಗಳಿಗೆ ಇವನು ದೊಡ್ಡವನು, ಇವನು ಬಡವನು ಎಂಬ ಭೇದವೇ ಇರದು. ಐಶ್ವರ್ಯವಂತನ ಕೈಯನ್ನು ದಾಟಿಕೊಂಡು ಬಡವನ ಕೈಗೆ ಬರುತ್ತದೆ. ರೋಗಿಯ ಕೈಯಿಂದ ಆರೋಗ್ಯವಂತನ ಕೈಸೇರುತ್ತದೆ. ಕುಷ್ಟ ರೋಗಿಯು ಕೈಯಲ್ಲಿಯೂ ಕೆಟ್ಟ ಹುಣ್ಣಾದವನ ಚೀಲದಲ್ಲಿಯೂ ಇವು ಏನೊಂದು ಭೇದವಿಲ್ಲದೆ ಸುಖ ಜೀವನವನ್ನು ಮಾಡುತ್ತವೆ. ಒಟ್ಟಾರೆಯಲ್ಲಿ ಹೇಳಬೇಕಾದರೆ ನಮ್ಮ ಕೈಗೆ ಸೇರುವ ಪ್ರತಿ ಒಂದು ನಾಣ್ಯವು ಸಾವಿರಾರು ಜನರ ಕೈ ಸೇರಿ ನಮ್ಮ ಬಳಿ ಸೇರುವಂಥಾದ್ದಾಗಿದೆ. ಇಂತಹ ನಾಣ್ಯವನ್ನು ನಾವು ಮುಟ್ಟುವುದೇ ಆರೋಗ್ಯಕ್ಕೆ ಬಾಧಕವಾಗಿದೆ. ಅದರಲ್ಲಿಯೂ ಬಾಯಿಯಲ್ಲಿಡುವ ಈ ಪದ್ಧತಿಯು ಎಂತಹ ಅಸಂಹ್ಯಕರ! ಅನೇಕ ಅಂಟುರೋಗಗಳು ಈ ನಾಣ್ಯಗಳಿಂದಲೇ ಇತರರಿಗೆ ಸೋಂಕಿಕೊಳ್ಳುತ್ತವೆಂದು ಧಾರಾಳವಾಗಿ ಹೇಳಬಹುದು. ಮಕ್ಕಳನ್ನು ಈ ನಾಣ್ಯಗಳಿಂದ ಆಡಬಿಡುವುದು ನಮ್ಮೂರ ಪದ್ಧತಿಯಾಗಿದ್ದರೂ ಇದು ಎಂದೂ ಚಲೋ ಪದ್ಧತಿಯಲ್ಲ. ಇದು ಅಪಾಯಕರವಾದ ಪದ್ಧತಿ ಮಾತ್ರವೇ ಅಲ್ಲ; ವಿವಿಧ ರೋಗಗಳ ಸಾರಥಿಯಾದ ಹೊಲಸು ಪದ್ಧತಿಯಾಗಿರುವದು.

ಟಪ್ಪಾಲು ಚೀಟುಗಳನ್ನು ನಾಲಿಗೆಯಲ್ಲಿ ನೆಕ್ಕಿ ಲಕೋಟೆಗಳಿಗೆ ಹಚ್ಚುವ ಇನ್ನೊಂದು ಪದ್ಧತಿಯೂ ನಮ್ಮಲ್ಲಿ ರೂಢಿಯಲ್ಲಿದೆ. ಇದೂ ಹೊಲಸು ಪದ್ಧತಿಯಾಗಿದೆ, ಮುಖ್ಯವಾಗಿ ಶಾಖಾಹಾರಿಗಳಿಂದಲೂ ಇದು ನೆಕ್ಕಲ್ಪಡುತ್ತದೆಂಬದನ್ನು ನೋಡುವುದು ತುಂಬಾ ಶೋಚನೀಯವಾಗಿದೆ. ಇದಕ್ಕೆ ತಗಲಿಸಿರುವ "ಗ್ಲೂ" ಎಂಬ ಅಂಟು ಪ್ರಾಣಿಗಳ ಕೊಂಬು, ಗೊರಸುಗಳಿಂದ ತಯಾರಿಸಿದಂಥಾದ್ದು. ಅಂದರೆ ಕಟುಕರಿಂದ ಹೊಲಸೆಂದು ಬಿಸಾಡಲ್ಪಟ್ಟ ಕೋಡು ಮತ್ತು ಗೊರಸೆಗಳಿಂದ ತಯಾರಿಸುವಂಥಾದ್ದಾಗಿದೆ. ಇಂತಹ ಹೊಲಸು ಪದಾರ್ಥವನ್ನು ನಾಲಿಗೆಯಿಂದ ನೆಕ್ಕುವುದು ಎಂತಹ ಹೊಲಸು ಪದ್ಧತಿ! ವಿದ್ಯಾವಂತರೂ ಆಚಾರ ಪದ್ಧತಿಗಳಲ್ಲಿ ಸುಧಾರಣೆ ಹೊಂದಿದ ಜನರೂ ಕೂಡಾ ಈ ಪದ್ಧತಿಯನ್ನು ಅನುಸರಿಸುವುದು ಎಂತಹ ಆಶ್ಚರ್ಯ! ನಾಲಿಗೆಯ ಬದಲಿಗೆ ಬೆರಳನ್ನು ನೀರಿಗೆ ಅದ್ದಿ ಯಾ ಇತರ ಸಾಹಿತ್ಯಗಳಿಂದ ಚೀಟನ್ನು ತ್ಯಾವಿಸಿ ಹಚ್ಚುವುದು ಆರೋಗ್ಯಕರವಾಗಿರುವುದು. ತದ್ರೀತಿ "ಗ್ಲೂ" ಹಚ್ಚಿದ ಲಕೋಟೆಗಳನ್ನೂ ನಾಲಿಗೆಯಿಂದ ನೆಕ್ಕಿ ಹಚ್ಚುವುದು ಅನಾರೋಗ್ಯಕರ ಮತ್ತು ಹೊಲಸು ಪದ್ಧತಿಯಾಗಿದೆ

ಕಾಫಿ ಹೊಟೇಲುಗಳಿಗೆ ಹೋಗಿ ಕುಡಿಯುತ್ತಿರುವುದೂ ಒಂದು ಹೊಲಸು ಪದ್ಧತಿಯಾಗಿದೆ. ಕಾಫಿ ಹೊಟೇಲಿನಲ್ಲಿ ಸರ್ವರಿಗೂ ಕುಡಿಯಲಿಕ್ಕೆ ಒಂದೇ ಪಾತ್ರೆ ಇರುವುದು ಬ್ರಾಹ್ಮಣರಿಗೆ ಬೇರೆ, ಶೂದ್ರರಿಗೆ ಬೇರೆ ಪಾತ್ರೆಗಳು ಎಂಬ ಎರಡು ಭೇದವಲ್ಲದೆ, ರೋಗಿಗಳಿಗೆ ಬೇರೆ, ಆರೋಗ್ಯವಂತರಿಗೆ ಬೇರೆ ಪಾತ್ರೆಗಳೆಂಬ ಭೇದವೇ ಈ ಹೊಟೇಲುಗಳಲ್ಲಿರದು. ಮೇಹ ಮೊದಲಾದ ಕೆಟ್ಟ ರೋಗಗಳಿಂದ ತುಂಬಿರುವ ಉತ್ತಮ ಕುಲದವನು ಯಾ ಶೂದ್ರ ಕುಲದವನು ಕುಡಿದ 'ಕಪ್ಪ' ಪಾತ್ರೆಯಲ್ಲಿದ್ದ ಹೊಲಸು ನೀರಿಗೆ ಮುಣುಗಿಸಿದಾಕ್ಷಣ ಶುದ್ಧೀಕರಿಸಲ್ಪಡುತ್ತದೆ ಎಂದು ಎಣಿಸಲ್ಪಡುತ್ತದಾದರೂ ಅದೇ ಕಪ್ಪಿನಿಂದ ಮತ್ತೆ ಬಂದ ಉಭಯ ಕುಲದ ಆರೋಗ್ಯವಂತರೂ ಕುಡಿಯಲೇಬೇಕು. ಈ ಹೊಲಸು ಪದ್ಧತಿಯಿಂದ ವಿವಿಧ ರೋಗಗಳು ಸೋಂಕುತ್ತವೆಂದು ಡಾಕ್ಟರರು ಪರಿಶೋಧನೆ ನಡಿಸಿ ಕಂಡುಕೊಂಡಿರುವರು ಹೆಚ್ಚೇಕೆ? ನಮ್ಮ ಹಿರಿಯರು ಪಾತ್ರೆಗಳನ್ನು ಪ್ರಯೋಗಿಸದೆ ಬಾಳೆಎಲೆ ದೊನ್ನೆಗಳನ್ನು ಪ್ರಯೋಗಿಸುತ್ತಿದ್ದದ್ದು ಇದೇ ಕಾರಣದಿಂದಲ್ಲವೇ? ಪಾಶ್ಚಾತ್ಯ ದೇಶಗಳಲ್ಲಿ ಕೂಡಾ ಕಾಪಿಹೊಟೇಲುಗಳ 'ಕಪ್'ಗಳಿಂದ ಉಂಟಾಗುತ್ತಿರುವ ಅನಾಹುತಗಳನ್ನು ಅರಿತು 'ಕಪ್ಪಿ'ನ ಬದಲಿಗೆ ಒಂದೇ ಸಾರಿ ಪ್ರಯೋಗಿಸಲಿಕ್ಕಾಗುವ ನೂತನ ವಿಧಾನದ ಒಂದು ಪಾತ್ರೆಯನ್ನು ನಿರ್ಮಿಸಿ ಇದನ್ನು ಕಾಫಿ ಹೊಟೇಲುಗಳಲ್ಲಿ ಪ್ರಯೋಗಿಸುತ್ತಿರುವರು. ಕಾಪಿ ಕುಡಿಯುವ ಪದ್ಧತಿಯೇ ಹೊಲಸಾಗಿದ್ದು ಅನಾರೋಗ್ಯವನ್ನುಂಟುಮಾಡುವುದಾಗಿದೆ ಎಂದು ಸ್ವದೇಶಾಭಿಮಾನಿಯ ಹಿಂದಿನ ಸಂಚಿಕೆಗಳಲ್ಲಿ ಓದಿದ್ದ ವಾಚಕರಿಗೆ ಜ್ಞಾಪಕದಲ್ಲಿರಬಹುದು. ಅದರಲ್ಲಿಯೂ ಕಾಪಿ ಹೊಟೇಲಿಗೆ ಹೋಗಿ ಕುಡಿಯುವಷ್ಟು ಹೆಚ್ಚಿನ ಹೊಲಸು ಮತ್ತು ಅನಾರೋಗ್ಯಕರವಾದ ಪದ್ಧತಿಯು ಬೇರೆ ಇಲ್ಲವೆಂದೇ ಹೇಳಬೇಕು. ಹೀಗಿರುವುದರಿಂದ ನವ ಸುಧಾರಣೆಯ ಈ ಕಾಲದಲ್ಲಿ ನಮ್ಮಲ್ಲಿಯೂ ಮೇಲೆ ಹೇಳಿದ ಹೊಲಸು ಪದ್ಧತಿಗಳಲಿ ಸುಧಾರಣೆಯನ್ನುಂಟುಮಾಡುವುದು ವಿಹಿತವಾಗಿರುವುದು.

೧೯೧೨-೧೩ನೆ ಸಾಲಿನಲ್ಲಿ ಮದರಾಸಾಧಿಪತ್ಯದ ವ್ಯವಸಾಯ ಶಾಲೆಗಳ ರಿಪೋರ್ಟಿನ ಮುಖ್ಯವಾದ ಕೆಲವು ಅಂಶಗಳು

ಕಬ್ಬು:—ಸಾಮಲ್‌ಕೋಟೆ, ಕೊಯಮುತ್ತೂರು, ಪಾಲೂರು, ಮತ್ತು ತಲಪರಂಬಾ ವ್ಯವಸಾಯ ಶಾಲೆಗಳಲ್ಲಿ ದೇಶೀಯ ಮತ್ತು ಹೊರದೇಶಗಳ ನಾನಾ ಜಾತಿಯ ಕಬ್ಬುಗಳನ್ನು ವ್ಯವಸಾಯಮಾಡಿ ಒಂದೊಂದಕ್ಕೂ ಇರತಕ್ಕ ವ್ಯತ್ಯಾಸಗಳನ್ನು ಪರೀಕ್ಷಿಸಿದ್ದಾಯಿತು. ರೈತರುಗಳು ತಮ್ಮ ಜಮಿನುಗಳಲ್ಲಿ ಬೆಳದಿದ್ದ ಕಬ್ಬಿನ ಬೆಳೆಯನ್ನು ಸರಕಾರದವರು ಖರೀಯಿಸಿ ಗಾಣವಾಡಿಸಿದ್ದರಲ್ಲಿ ಮಾರಿಷಸ್ಸಿನ ಕೆಂಪು ಕಬ್ಬಿನಲ್ಲಿ ಎಕರೆಗೆ ಸುಮಾರು ೪೯೦ ಮಣ ಬೆಲ್ಲದಂತೆ ಉತ್ಪತ್ತಿಯಾಯಿತು. ಈ ಜಾತಿಯ ಕಬ್ಬು, ನೀರು, ಗೊಬ್ಬರ, ಅಗತೆ ಮೊದಲಾದ ವಿಷಯಗಳಲ್ಲಿ ಎಷ್ಟು ಹೆಚ್ಚು ಕಡಿಮೆಯಾದರೂ ತಡೆದುಕೊಳ್ಳುವವು. ಆದರೆ ಜಮೀನಿನಿಂದ ನೀರು ಸರಿಯಾಗಿ ಬಸಿದು ಹೋಗದಿದ್ದರೆ ಮಾತ್ರ ಈ ಜಾತಿಯ ಕಬ್ಬಿನ ಪೈರಿನಿಂದ ಒಳ್ಳೇ ಉತ್ಪತ್ತಿಯು ದೊರೆಯುವುದಿಲ್ಲ.

ಗೊಬ್ಬರಗಳ ಸಂಬಂಧವಾದ ಪರೀಕ್ಷೆಗಳು:—ಎಳ್ಳಿನ ಹಿಂಡಿ, ನೆಲಗಡಲೆಬಿತ್ತದ ಹಿಂಡಿ, ಹರಳು ಹಿಂಡಿ ಮತ್ತು ದನದ ಗೊಬ್ಬರವು ಮಿಶ್ರವಾದ ಹರಳು ಹಿಂಡಿ ಈ ಗೊಬ್ಬರಗಳನ್ನು ಹಾಕಿ ನೋಡಿದ್ದರಲ್ಲಿ ಹರಳು ಹಿಂಡಿಯೇ ಉತ್ತಮವಾದ ಗೊಬ್ಬರವೆಂದು ಕಂಡುಬಂದಿದೆ.

ಒತ್ತ:—ಸಾಮಲ್ ಕೋಟೆಯಲ್ಲಿ ಬೆಳೆಯಲ್ಪಟ್ಟವುಗಳೆಲ್ಲಾ ಉತ್ತಮ ತರಗತಿಯವುಗಳು. ಪಾಲೂರಿನ ವ್ಯವಸಾಯ ಶಾಲೆಯಲ್ಲಿ ಗರುಡನ್‌ಸಂಭಾ ಎಂಬ ಜಾತಿಯ ಬತ್ತದ ಚನ್ನಾಗಿ ಬೆಳೆದಿರತಕ್ಕ ಪೈರನ್ನೇ ಆರಿಸಿ ಅವುಗಳಲ್ಲಿ ಆದ ಒತ್ತವನ್ನೇ ಬಿತ್ತನೆಗೆ ಉಪಯೋಗಿಸಿ ಬೆಳೆದ ಪೈರಿನಲ್ಲಿ ಸಾಧಾರಣವಾದ ಬಿತ್ತವನ್ನು ಹಾಕಿ ಬೆಳೆಯಲ್ಪಟ್ಟ ಪೈರಿನ ಉತ್ಪತ್ತಿಗಿಂತಲೂ ಜಾಸ್ತಿಯಾಗಿ ಬಂದಿರುತ್ತದೆ. ಈ ಅಜಮಾಯಿಷಿಯನ್ನು ಇನ್ನು ಮುಂದೂ ನಡಿಸಿ ಆದರಿಂದ ಈಗ ಕಂಡು ಬಂದಿರುವ ಪ್ರಯೋಜನಗಳೇ ಇರುವುವೆಂದು ಧೃಡವಾದರೆ ಈ ಬತ್ತಕ್ಕೆ ಬೇರೆ ಹೆಸರನ್ನು ಕೊಟ್ಟು ಆದರ ವ್ಯವಸಾಯವನ್ನು ಹೆಚ್ಚಿಸಲು ಪ್ರಯತ್ನ ಪಡುವವರಾಗಿದ್ದಾರೆ.

ಬೀಜವರಿ:—ಒಟ್ಲು ಹುಯ್ಯಲು ಎಷ್ಟು ವಿಸ್ತೀರ್ಣದಲ್ಲಿ ಎಷ್ಟು ಬೀಜವನ್ನು ಉಪಯೋಗಿಸಬೇಕು ಮತ್ತು ಸೊಸಿಗಳನ್ನು ಎಷ್ಟು ದೂರದಲ್ಲಿ ನೆಡಬೇಕು ಎಂಬ ವಿಚಾರದಲ್ಲಿ ಅಜಮಾಯಿಷಿಗಳು ನಡೆಸಲ್ಪಟ್ಟವು ಈ ವಿಷಯದಲ್ಲಿ ಪ್ರತಿಯೊಬ್ಬನೂ ತನ್ನ ತನ್ನ ಜಮಿಾನಿನಲ್ಲಿಯೇ ಅಜಮಾಯಿಷಿಗಳನ್ನು ನಡಿಸುವುದು ಉತ್ತಮವೆಂದು ತೋರುತ್ತದೆ. ಸಾಮಾನ್ಯವಾಗಿ ೩-೪ ಅಡಿ ದೂರಕ್ಕೆ ಒಂದೊಂದು ಪೈರಿನಂತೆ ನಾಟಿಮಾಡುವುದು ಉತ್ತಮ ಸಾಮಲ್‌ಕೋಟೆಯ ಒಳಿ ಈ ಸಾಲಿನಲ್ಲಿ ಒಂದೊಂದೇ ಪೈರನ್ನು ನಾಟಿಮಾಡಿದ ತರೀ ಜಮಿಾನುಗಳಲ್ಲಿ ಎಕರೆಗೆ ಸರಾಸರಿ ೬೫೮ ಪೌಂಡಿನಂತೆ ಉತ್ಪತ್ತಿಯಾಯಿತು. ಆದರೆ ಈಗ ವಾಡಿಕೆಯಲ್ಲಿರುವ ಕ್ರಮದಂತೆ ವ್ಯವಸಾಯ ಮಾಡಿದ ರೈತರ ಜಮೀನಿನಲ್ಲಿ ಎಕರೆಗೆ ೫೯೦೦ ಪೌಂಡಿಗಿಂತ ಜಾಸ್ತಿಯಾಗಿ ಉತ್ಪತ್ತಿಯಾಗಲಿಲ್ಲ.

ಹಸರು ಗೊಬ್ಬರ.—ಹಸರು ಗೊಬ್ಬರದಿಂದ ಅನೇಕ ಜಮಿಾನುಗಳು ಹೆಚ್ಚು ಫಲವನ್ನು ಕೊಟ್ಟಿರುವುವೆಂಬುವುದರಲ್ಲಿ ಅನುಮಾನವೇ ಇಲ್ಲ. ಆದರೆ ಒತ್ತವನ್ನು ಬೆಳಿಯತಕ್ಕ ಜಮಿಾನುಗಳಿಗೆ ಯಾವ ಕ್ರಮವರಿತು ಹಸರು ಗೊಬ್ಬರವನ್ನು ಹಾಕಬೇಕೆಂಬ ವಿಚಾರದಲ್ಲಿ ತಿಳುವಳಿಕೆಯು ಅತ್ಯಲ್ಪವಾಗಿರುತ್ತದೆ. ನೀರು ಬಸಿದುಹೋಗಲು ಸರಿಯಾದ ಅವಕಾಶವಿಲ್ಲದಿರುವ ಜಮಿಾನುಗಳಿಗೆ ಹಸರು ಗೊಬ್ಬರವನ್ನು ಹಾಕುವುದರಿಂದ ಕೆಡಕಾಗುವುದೇ ಹೊರ್ತು ಪ್ರಯೋಜನವೇನೂ ಆಗುವುದಿಲ್ಲ ಆಂದರೆ ಹಸರು ಗೊಬ್ಬರವನ್ನು ಹಾಕುವ ಜಮಿಾನುಗಳಲ್ಲಿ ನೀರು ಬಸಿದು ಹೋಗಬೇಕು ಹೀಗೆ ನೀರು ನಿಲ್ಲುವ ಜಮೀನುಗಳಿಗೆ ಸಜೀವ ವಸ್ತುಗಳ ಸಂಬಂಧವಾದ ಗೊಬ್ಬರವನ್ನು ಹಾಕುತ್ತಾ ಇದ್ದರೆ ಕ್ರಮೇಣ ನೀರು ಬಸಿದು ಹೋಗುವಂತಾಗುವುದು ಮಾತ್ರವಲ್ಲದೆ ಜಮೀನಿನಲ್ಲಿ ಸಾರವು ಸಹ ಹೆಚ್ಚಾಗುವದು.

ಹತ್ತಿ.—ಕೆಲವು ವರುಷಗಳ ಕೆಳಗೆ ಒಂದು ದೊಡ್ಡಹತ್ತಿಗಿಡಗಳ ಗದ್ದೆಯಲ್ಲಿದ್ದ ಪೈರಿನಲ್ಲೆಲ್ಲಾ ಅತ್ಯುತ್ತಮವಾದ ಒಂದು ಗಿಡವನ್ನು ಆರಿಸಿ ಅದರ-ಬಿತ್ತವನ್ನು ಪುನಃ ನೆಟ್ಟು ಆ ಪೈರಿನಲ್ಲಿ ಆದ ಉತ್ತಮವಾದ ಗಿಡಗಳನ್ನೇ ಆರಿಸಿ ಅವುಗಳ ಬೀಜವನ್ನು ಬಿತ್ತನೆಗೆ ಉಪಯೋಗಿಸಿ ಹೀಗೆಯೇ ಅತ್ಯುತ್ತಮವಾದ ಬೀಜಗಳನ್ನು ಸುಮಾರು ೩೦ ಎಕರೆ ವಿಸ್ತೀರ್ಣದಲ್ಲಿ ಪೈರು ಮಾಡಿತ್ತು. ಇದರಿಂದ ಎಕರೆಗೆ ಈಗಿಗಿಂತಲೂ ಸುಮಾರು ೧೫-೨೦ ರೂಪಾಯಿಗಳು ಬೆಲೆಬಾಳುವ ಹತ್ತಿಯು ಜಾಸ್ತಿಯಾಗಿ ಉತ್ಪತ್ತಿಯಾಗುವದಾಗಿ ಕಂಡುಬಂದಿದೆ. ಹಗರಿ ವ್ಯವಸಾಯದ ಶಾಲೆಯಲ್ಲಿ ಹತ್ತಿಯ ಪೈರಿಗೆ ಬೇರೆ ಬೇರೆ ತರಹ ಗೊಬ್ಬರವನ್ನು ಹಾಕಿ ಅಜಮಾಯಿಷಿ ಮಾಡುತ್ತಾ ಇದೆ ಇದರ ನಿಜವಾದ ಫಲಿತಾಂಶಗಳು ಗೊತ್ತಾಗಬೇಕಾದರೆ ಇನ್ನೂ ಕೆಲವು ವರುಷಗಳಾಗಬಹುದೆಂದು ತೋರುತ್ತದೆ.

ನೆಲಗಡಲೆಕಾಯಿ:—ಒಂದು ಜಮಿಾನಿನಲ್ಲಿ ತಪ್ಪದೆ ಮೂರು ನಾಲ್ಕು ವರುಷಗಳು ನೆಲಗಡಲೆಯನ್ನು ಬೆಳೆದರೆ ಉತ್ಪತ್ತಿಯು ಬರಬರುತ್ತಾ ಕಡಮೆಯಾಗುವದು. ಆದರೆ ಬೆಳೆಯನ್ನು ಬದಲಾಯಿಸುತ್ತಿದ್ದರೆ ಈ ವಿಧವಾದ ಅನಾನುಕೂಲವೇನೂ ಇರುವುದಿಲ್ಲ.

ರಾಗಿ:—ಕೆಲವು ವರುಷಗಳಿಂದಲೂ ಅಜಮಾಯಿಷಿಮಾಡಿ ನೋಡಿದ್ದರಲ್ಲಿ ಎಕರೆಗೆ ೧೬,೦೦೦ ಪೈರಿನಂತೆ ನೆಟ್ಟರೆ ಉತ್ಪತ್ತಿಯು ಜಾಸ್ತಿಯಾಗುವುದಲ್ಲದೆ ಮುದರಾಸಾಧಿಪತ್ಯದಲ್ಲಿ ವಾಡಿಕೆಯಲ್ಲಿರುವಂತೆ ನೀರು ಹಾಯಿಸಿ ದಿಂಡುಕಟ್ಟಿ ಆದರ ಮೇಲೆ ಪೈರನ್ನು ನೆಟ್ಟು ವ್ಯವಸಾಯಮಾಡುವ ಸಂದರ್ಭದಲ್ಲಿ ನೀರಿನಲ್ಲಿ ಸಹಾ ಬಹಳ ಮಿಗತೆಯಾಗುವುದೆಂದು ತಿಳಿಯಬರುತ್ತದೆ.

ಗೊಬ್ಬರ ಸಂಬಂಧವಾದ ಪರೀಕ್ಷೆಗಳು:—ದನಗಳ ಗೊಬ್ಬರವನ್ನು ಕೂಡಿಡುವ ಕ್ರಮವನ್ನು ಕುರಿತು ಕೊಯಿಲಪಟ್ಟಿ ವ್ಯವಸಾಯ ಶಾಲೆಯಲ್ಲಿ, ಅನೇಕ್ ಅಜಮಾಯಿಷಿಗಳು ನಡೆಸಲ್ಪಟ್ಟವು. ಪೆಟ್ಟಿಗೆಯಲ್ಲಿ ಕೂಡಿಡುವ ಕ್ರಮಕ್ಕನುಸಾರವಾಗಿ ತಯಾರಾದ ಗೊಬ್ಬರದಲ್ಲಿ ಯವಕ್ಷಾರ, ಫಾಸ್‌ಫರಸ್ ಮತ್ತು ಪೊಟಾಷ್ ಇವು ಮೂರು ಬಹಳವಾಗಿರುವುವು. ಆದರೆ ಈ ಗೊಬ್ಬರವು ಚನ್ನಾಗಿ ಕೊಳತಿರುವುದಿಲ್ಲವಾದ್ದರಿಂದ ಜಮಿಾನಿಗೆ ಹಾಕಿದಾಗ್ಯೂ ಅಷ್ಟು ಸಮರ್ಪಕವಾಗಿ ಪ್ರತಿಫಲವನ್ನು ಕೊಡುವುದಿಲ್ಲ. ಜೋಳ, ಕಂಬು ಮೊದಲಾದ ಮೇಲೆ ಮೇಲೆ ಬೇರು ಬಿಡತಕ್ಕ ಪೈರುಗಳಿಗೆ ಗುಣ್ಣೆಹಾಕಿ ಕೂಡಿಡಲ್ಪಟ್ಟ ಗೊಬ್ಬರಗಳಿಗಿಂತಲೂ ಪೆಟ್ಟಿಗೆ ಗೊಬ್ಬರವು ಹೆಚ್ಚು ಪ್ರಯೋಜನಕಾರಿಯೆಂದು ತಿಳಿಯಬರುತ್ತದೆ. ಬಹಳ ಆಳವಾಗಿ ಬೇರು ಬಿಡತಕ್ಕ ಹತ್ತಿ ಮೊದಲಾದ ಪೈರುಗಳಿಗೆ ಗುಣ್ಣೆಹಾಕಿ ಕೂಡಿಸಲ್ಪಟ್ಟ ಗೊಬ್ಬರವು ಉತ್ತಮವಾದದ್ದಾಗಿದೆ. ಮೇಲೆ ಹೇಳಿದ ವಿಷಯಗಳಲ್ಲಿ ಸ್ವಲ್ಪವೂ ಅನುಮಾನವಿಲ್ಲದಿರುವ ಕಾರಣ ಇನ್ನು ಮುಂದೆ ಈ ಸಂಬಂಧವಾದ ಅಜಮಾಯಿಷಿಗಳು ನಡಿಸಲ್ಪಡುವುದಿಲ್ಲ.

ಕೆ. ಗ.

ಪತ್ರವ್ಯವಹಾರ.

ವಾರ್ತೆದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ

ಸ್ವಾಮಿ,

ತಮ್ಮ ಜೂನು ೫ನೇ ತಾರೀಕಿನ ಸಂಚಿಕೆಯಲ್ಲಿ ಹಿಂದೂ ವಿಧವೆಯರ ಸಂಖ್ಯೆ ಕುರಿತು ತಾವು ಮಾಡಿದ ಪ್ರಕಟಣೆಯನ್ನು ನೋಡಿ ಬೆರಗಾದೆನು ಮನೆ ಮಾಡಿನ ಮೇಲೆ ಗೂಗೆ ಕೂತು ಅತ್ತರೆ ಮನೆ ನಿವಾಸಿಕರಿಗೆ ಕೇಡು ಬರುವುದಂತೆ, ಮಧ್ಯ ರಾತ್ರೆಯಲ್ಲಿ ಮರದ ಮೇಲಿನಿಂದ ಪಕ್ಷಿಗಳು ಅತ್ತರೆ ಹಿತ್ತಲಿನ ಯಜಮಾನನಿಗೆ ಕೇಡಂತೆ, ಮನೆ ಒಳಗೆ ಗೂಡಿನಲ್ಲಿ ಹಾಕಿ ಸಾಕಿದ ಗಿಣಿಯು ರಾತ್ರೆ ಕಾಲದಲ್ಲಿ ಕೆರ್ ಮಾಡುತ್ತಲೇ ಮನೆಯವರಿಗೆ ದರಿದ್ರ ಬರುವುದಂತೆ, ಆಹ ನಮ್ಮ ದೇಶದಲ್ಲಿ ನಿರಾಪರಾಧಿಯಾದ ಇಷ್ಟು ಹೆಚ್ಚು ಬಾಲ ವಿಧವೆಯರು ಬಾಯಿಯಿಂದ ಹೇಳಕೂಡದ ಕಷ್ಟ ತಾಳುವ ಕಾರಣ ಅವರ ಅಷ್ಟು ಹೃದಯಗಳಿಂದ ಸದಾ ಕಾಲವು ಹರಡುವ ಕೂಗಿನಿಂದ ನಮ್ಮ ದೇಶಕ್ಕೆ ದೌರ್ಭಾಗ್ಯ ಬರುವುದಿಲ್ಲವೇ? ಅಹಾ ನಮ್ಮ ವಿವಾಹ ಪದ್ಧತಿಯೇ! ಒಂದು ವರುಷದ ಒಳಗಿನ ವಿಧವೆಯರು! ಎರಡು ಮೂರು ವರುಷದ ವಿಧವೆಯರು! ನಮ್ಮ ವೇದಗಳು, ನಮ್ಮ ಉಪನಿಷತ್‌ಗಳು, ನಮ್ಮ ಶಾಸ್ತ್ರ ಪುರಾಣಗಳು ಎಲ್ಲಿ ಹೋದವು? ನಮ್ಮ ಪ್ರಯೋಜನದ ಬಗ್ಗೆ ಮಹದ್ಗ್ರಂಥಗಳನ್ನು ಬರೆದಿಟ್ಟ ನಮ್ಮ ಋಷಿಗಳು ಎಲ್ಲಿದ್ದಾರೆ? ಇಂತಹ ಮೂರ್ಖರಾದ ನಮಗೆ ಅಮೇರಿಕ, ಆಸ್ಟ್ರೇಲ್ಯ, ಆಫ್ರಿಕಾ, ಮೊದಲಾದ ದೇಶಗಳಲ್ಲಿ ಪ್ರವೇಶಕ್ಕೆ ಇಂಬು ಕೊಡದೆ ಪೋಲಿಯರಂತೆ ನಮ್ಮನ್ನು ದೂರಪಡಿಸುವುದು ಏನು ಆಶ್ಚರ್ಯ! ಪರಂತು ನಮ್ಮ ದೇಶದ ಮಹಾ ಕೇಡು ವಿದ್ಯಾವಂತರೆಂಬುವವರೇ ಅಪ್ಪ ನಟ್ಟ ಆಲದ ಮರವನ್ನು ಮೆಚ್ಚಿ ಇನ್ನೂ ಕುತ್ತಿಗೆಗೆ ಹಗ್ಗ ಹಾಕಿಕೊಳ್ಳುವಂಥಾದ್ದೇ ಸರಿ. ಶ್ರೀಮತಿ ಕಮಲಾ ಸತ್ಯನಾಥನ್ ಎಮ್. ಎ ಇವರು ಹೇಳುವ ಅಭಿಪ್ರಾಯವು ಬುದ್ಧಿ ಇದ್ದ ಸರ್ವರೂ ಒಪ್ಪುವಂಥಾದ್ದೇ.

ಚಂದಾದಾರರಲ್ಲೊಬ್ಬ.

ಎಮೆಟರ್ ಡ್ರೆಮೆಟಿಕ್ ಕಂಪೆನಿ, ಮಂಗಳೂರು.

ಅಯ್ಯಾ,

ಈ ಮಂಡಲಿಯ ಮೆಂಬರರ ಸ್ವಾರ್ಥ ತ್ಯಾಗವು ಅತೀ ಶ್ಲಾಘನೀಯವಾದುದು. ಇದರಲ್ಲಿ ಸರಕಾರಿ ಉದ್ಯೋಗಸ್ಥರು, ವಿದ್ಯಾರ್ಥಿಗಳು, ಮತ್ತು ಬೇರೆ ಬಗೆ ಬಗೆಯ ವೃತ್ತಿಯವರು ಕೂಡಾ ಸೇರಿ ನಾಟಕಗಳನ್ನಾಡಿ ಅವುಗಳಲ್ಲಿ ಉತ್ಪನ್ನವಾದ ಕಿಂಚಿತ್ ಹಣವನ್ನು ಗಣಪತಿ ವಿದ್ಯಾ ಶಾಲೆಯ ಫಂಡಿಗೆ ಕೊಡುತ್ತಾರೆ. ತಂತಮ್ಮ ಕೆಲಸಗಳನ್ನು ಮುಗಿಸಿ, ರಾತ್ರೆಯೆಲ್ಲಾ ನಿದ್ದೆಗೆಟ್ಟು ದೇಹವನ್ನು ಕ್ಷೀಣಿಸಿ, ವಿದ್ಯಾಲಯಕ್ಕೆ ದ್ರವ್ಯ ಸಹಾಯವನ್ನು ಮಾಡುವದಕ್ಕೋಸ್ಕರ ಈ ರೀತಿ ಮನಃಪೂರ್ವಕವಾಗಿ ಶ್ರಮ ಪಡುವ ಈ ಗೃಹಸ್ಥರು ಆಡುವ ನಾಟಕಗಳಿಗೆ ಸರ್ವರೂ ಹೋಗಿ ವಿದ್ಯಾಭಿವೃದ್ಧಿಗೆ ಪ್ರೋತ್ಸಾಹ ಮಾಡುವುದೇ ಇವರ ಶ್ರಮಗಳಿಗೆ ತಕ್ಕ ಪ್ರತಿಫಲವು.

ಇವರು ಆಡಿದ ತುಕಾರಾಮ ನಾಟಕವು ಸರ್ವಸ್ವ ಜನರೂ ನೋಡತಕ್ಕ ಯೋಗ್ಯತೆಯುಳ್ಳದ್ದಾಗಿರುವುದು. ಅದು ನಮ್ಮನ್ನು ಈ ಧರ್ಮಾಂಧತೆಯಿಂದ ಮೇಲಕ್ಕೆತ್ತಿ, ನಮ್ಮ ಮನಸ್ಸನ್ನು ನಿಷ್ಕಲಂಕವಾಗಿ ಮಾಡುವುದು. ಭಗವದ್ಭಕ್ತನಾಗಿದ್ದ ತುಕಾರಾ

ಮನ ಜ್ಞಾನೋಪದೇಶವನ್ನು ಯಾರು ತಾನೇ ಕೇಳಲ್ಕು ಹಿಂಜರಿಯುವರು? ತನ್ನನ್ನು ಮೋಹ ಪಾಶದಲ್ಲಿ ಸಿಕ್ಕಿಸಲು ಬಂದಿದ್ದ ರಂಭೆಯನ್ನು ದುರ್ಮಾರ್ಗದಿಂದ ತಪ್ಪಿಸಿ ಸುಜ್ಞಾನವನ್ನು ಬೋಧಿಸಿದಂಥಾ, ತನ್ನ ಕೀರ್ತನೆಗಳನ್ನು ಶ್ರವಣ ಮಾಡಿದ ಮಾತ್ರದಿಂದಲೇ ರಾಜ್ಯ ಭೋಗದಲ್ಲೆ ಇಚ್ಛೆ ಇಡದೆ ವೈರಾಗ್ಯವನ್ನು ಆಶ್ರಯಿಸಿ ದೇವತಾರ್ಚನೆಯಲ್ಲೇ ಬ್ರಹ್ಮವನ್ನು ಹೊಂದುವುದಕ್ಕೆ ಸಿದ್ಧವಾಗಿದ್ದ ಶಿವಾಜಿಯನ್ನು ತನ್ನ ಭಕ್ತಿಯ ಬಲದಿಂದ ಅನಂತಾನಂತ ಶಿವಾಜೀ ರೂಪಗಳನ್ನು ನಿರ್ಮಿಸಿ ಮೊಗಲರಿಂದ ಸಲಹಿದಂಥಾ ಮತ್ತು ಮುಂಬಾಜಿ ಮೊದಲಾದ ಅನೇಕಾನೇಕ ಕೃತ್ರಿಮ ಸಂತರನ್ನು ಸುಪಂಥಕ್ಕೆ ತಂದಿದ್ದಂಥಾ ಆ ಜೀವನ್ಮುಕ್ತ ತುಕಾರಾಮನ ಅಭಂಗಗಳು ಸರ್ವರಲ್ಲಿಯೂ ದೇವ ಭಕ್ತಿಯನ್ನೂ ಪಾಪ ಭೀತಿಯನ್ನೂ ಉಂಟುಮಾಡುವವು.

ಈ ರೀತಿ ನಾಟಕವೇ ಜ್ಞಾನಮಯವಾಗಿತ್ತಲ್ಲದೆ, ನಮ್ಮ ಮಿತ್ರ ಮಂಡಲಿಯವರು ತೋರಿಸಿದ ನಾಟಕಾಭಿನಯವು ಸಹ ಅತ್ಯುತ್ತಮವಾಗಿ ಜ್ಞಾನೋದಯವನ್ನು ಪ್ರತಿಯೊಬ್ಬರ ಹೃದಯದಲ್ಲಿಯೂ ಮಾಡುತ್ತಲಿತ್ತು. ವೇಷಧಾರಿಗಳೆಲ್ಲರೂ (ಮುಖ್ಯವಾಗಿ, ತುಕಾರಾಮು) ಬಹು ಚತುರತೆಯಿಂದ ನಟಿಸಿ ಅನೇಕ ಸಂದರ್ಭಗಳಲ್ಲಿ ಯಥಾರ್ಥವಾಗಿ ರೋಮಾಂಚವನ್ನುಂಟುಮಾಡಿದರು.

ನಾನು ಈ ನಾಟಕವನ್ನು ನೋಡುವ ಉದ್ದಿಶ್ಯವೇ ೩೧ ಮೈಲು ದೂರದಿಂದ ಮಂಗಳೂರಿಗೆ ಹೋಗಿದ್ದೆ. ಮರುದಿನ ಬೆಳಿಗ್ಯೆ ಸಾರಸ್ವತರಲ್ಲದ ಕೆಲವು ಹಿಂದೂ ಭ್ರಾತೃರು ನನಗೆ ಕಾಣ ಸಿಕ್ಕಿದರು. ನಾಟಕಕ್ಕೆ ಏತಕ್ಕೆ ದಯಮಾಡಲಿಲ್ಲವೆಂದು ಕೇಳಲು, ಅವರು—"ಆ ನಾಟಕವು ಸಾರಸ್ವತ ಶಾಲೆಗೋಸ್ಕರ ಮಾತ್ರವು. ನಮಗೇನೂ ಅದರಲ್ಲಿ ಸಂಬಂಧವಿಲ್ಲ ನಮಗೆ ನಮ್ಮ ಶಾಲೆ ಇದೆ" ಎಂದು ಉತ್ತರ ಕೊಟ್ಟರು. ಅಯ್ಯಾ, ಭಗವದ್ಭಕ್ತನ ಜೀವನ ಚರಿತೆಯನ್ನು ಅಭಿನಯಿಸುವುದು ನೋಡಿ ಆತನ ಚರಿತಾಮೃತವನ್ನು ಸೇವಿಸುವ ಕಾರ್ಯದಲ್ಲಿ ಜಾತಿ ಭೇದವೇನು? ವರದಾಚಾರ್ಯರ ನಾಟಕಗಳಿಗೆ ಹೋಗಿ ನಾವು ಲೆಖ್ಖವಿಲ್ಲದ ಹಣವನ್ನು ವ್ಯಯಮಾಡಲಿಲ್ಲವೇ? ಅವರು ಅಂಶೂ ಮೈಸೂರಿನವರು. ಇವರಾದರೋ ನಮ್ಮವರೇ. ಕನ್ನಡಾ ಜಿಲ್ಲೆಯ ಮತ್ತು ಸರ್ವ ಜನರಿಗೂ ಬರಹ ಕಲಿಯಲಿಕ್ಕೆ ಆಸ್ಪದವುಳ್ಳ ವಿದ್ಯಾಲಯಕ್ಕೆ ದ್ರವ್ಯ ಸಹಾಯ ಮಾಡುವಾಗ, "ಈ ಶಾಲೆಯು ನಮ್ಮದಲ್ಲ, ನಮಗೆ ಬೇರೆ ಶಾಲೆ ಉಂಟು" ಎಂಬ ಭಾವನೆಯು ನಮ್ಮಲ್ಲಿ ಇರಬಾರದು. ತುಕಾರಾಮ ಮೊದಲಾದ ನಾಟಕದಲ್ಲಿನ ಜ್ಞಾನೋಪದೇಶವನ್ನು ಕೇಳಿದರೆ ಇಂಥಾ ಕೆಟ್ಟ ಭಾವನೆಯು ಸ್ವತಃ ಅದೃಶ್ಯವಾಗುವುದು.

ನಮ್ಮ ಜಿಲ್ಲೆಯಲ್ಲಿ ಅನೇಕ ಜಾತಿ ಭೇದಗಳು ಇದ್ದುದರಿಂದಲೇ ನಮಗೆ ಒಗ್ಗಟ್ಟಿನಿಂದ ಯಾವ ಕಾರ್ಯವೂ ಕಷ್ಟಸಾಧ್ಯವಾಗುವುದು. ಒಂದೇ ಜನಾಂಗದ ವಿಭಾಗವಾದ ಶಾಖೆಗಳ ಹಾಗೆ ಇರುವ ನಾವು, ನಮ್ಮ ನಮ್ಮೊಳಗಿನ ಅಲ್ಪ ಕಾರಣಗಳಿಂದ ಉಂಟಾದ ಮನಃ ಕ್ಲೇಶಗಳನ್ನು ತ್ಯಜಿಸಿ ಅನ್ಯೋನ್ಯ ಭಾವದಿಂದ ಇದ್ದರೆ ನಮ್ಮ ಜಿಲ್ಲೆಯಲ್ಲಿ ಕೂಡಾ ಅನೇಕ ಜನೋಪಕಾರವಾದ ಸತ್ಕಾರ್ಯಗಳನ್ನು ಸುಲಭವಾಗಿ ಮಾಡಬಹುದು.

ಮುಕ್ಕಪುರ,
ಜೇಷ್ಟ, ೬ ೧.

ಬಿ ಹರ್ಷರಾಜ.

ಅಯ್ಯಾ ಪತ್ರಕರ್ತರೇ,

ನಮ್ಮ ಬೊಕ್ಮ ಸಭಾ ಆಸ್ತಿಯ ಕ್ರೈಸ್ತರನ್ನು ಒಕ್ಕಲು ತೆಗೆಯಿಸಿದ ಸಂಬಂಧ ತಮ್ಮ ಅಮೂಲ್ಯ ಪತ್ರಿಕೆಯಲ್ಲಿ ತಲೆದೋರಿದ ಲೇಖನವನ್ನು ನೋಡಿ ವಿಸ್ಮಯಗೊಂಡು "ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು" ಎಂಬ ಲವಲವಿಕೆಯಿಂದ ಈ ವಿಷಯ ವಿಚಾರಿಸಿ ನನಗೆ ತಿಳಿದು ಬಂದ ಸಂಗತಿಗಳನ್ನು ಬರೆಯ ತೊಡಂಗೊಂಡಿರುವೆನು

ಬೊಳ್ಮದ ಆಸ್ತಿಯು ಶೀಮೆಯಲ್ಲಿರುವ ಜರ್ಮನ್ ಮಿಶ್ಯನ್ ಕಮಿಟಿಯವರಿಂದ ಮಂಗಳೂರು ಸಭಾ ಭಂಡಾರದ ಆಸ್ತಿಯಾಗಿ ಕೊಡಲ್ಪಟ್ಟಂಥಾದ್ದಾಗಿರುತ್ತದೆ. ಈ ಆಸ್ತಿಯು ಸಭಾ ಆಸ್ತಿಯಾಗಿರುವುದರಿಂದ ಇದಕ್ಕೆ ಸಭಾ ಮೊಕ್ತೇಸರರ ಮೇಲ್ತನಿಖಿ ಇದೆ. ಆ ಆಸ್ತಿಯ ಆದಾಯ ವೆಚ್ಚಗಳ ಮೇಲ್ತನಿಖಿಯು ಈ ಮೊಕ್ತೇಸರರಿಂದಲೇ ನಡಿಸಲ್ಪಡುತ್ತಿದೆ. ಬೊಳ್ಮದ ಉಪದೇಶಿಯರು ಬರೇ ಮೆನೇಜಮೆಂಟು ನೋಡುವ ಪಾರುಪತ್ಯಗಾರರಷ್ಟೆ. ಈ ಉಪದೇಶಿಯರ ಮೂಲಕ ಒಕ್ಕಲು ತೆಗೆಯಲ್ಪಟ್ಟ ೬ ಒಕ್ಕಲುಗಳಲ್ಲಿ ಅನೇಕರು ಬಲ್ಮಠದಲ್ಲಿರುವ ಕೆಲವು ಮೊಕ್ತೇಸರರ ಬಳಿಗೆ ಬಂದು ತಮ್ಮ ಕಾಲಹವಾಲಿಗಳನ್ನು ಹೇಳಿಕೊಂಡರೂ ಈ ಮೊಕ್ತೇಸರರು ಯಾವದೊಂದು ತರದ ವಿಚಾರ ನಡಿಸದೆ ದೊರೆಗಳ ಬಳಿಗೆ ಕಳುಹಿಸಿ ಕೊಟ್ಟರಂತೆ. ತಮ್ಮ ಆಡಳಿತೆಯ ಒಳಗಿದ್ದ ಭೂಮಿಯ ಪಾರುಪತ್ಯಗಾರರನ್ನು ವಿಚಾರಿಸುವಷ್ಟು ಯಾ ಪಾರುಪತ್ಯಗಾರರನ್ನೂ ಒಕ್ಕಲುಗಳನ್ನೂ ಮೊಕಾಬ್ಲಾ ಇಟ್ಟು ಉಭಯತರ ವಾಗ್ಮೂಲಗಳನ್ನು ಕೇಳಿ ಸಂಗತಿಗಳನ್ನು ಇತ್ಯರ್ಥ ಪಡಿಸುವಷ್ಟು ಅಧಿಕಾರವು ಈ ಮೊಕ್ತೇಸರರಿಗೆ ಇಲ್ಲದೆ ಹೋದ ಮರ್ಮವೇನೋ ನಾನರಿಯೆ. ಇವರನ್ನು ಬಿಟ್ಟು ನಮ್ಮ ಮಿಶ್ಯನ್ ಪ್ರೆಸಿಡೆಂಟ ವ ಜಿಲ್ಲಾ ಸೀನಿಯರ್ ದೊರೆಗಳ ಹತ್ತಿರ ಬೀಳ್ಕೊಳ್ಳುವಾ ಅಂದರೆ ಅವರು ಆ ಕಾಲ ಕುದುರೆಮುಖದಲ್ಲಿಯೂ, ಸ್ಟೇಶನ್ ಸೀನಿಯರ್ ಮಿಶ್ಯನರಿ ದೊರೆಗಳವರು ಉದಕಮಂಡಲದಲ್ಲಿಯೂ ಹೆಚ್ಚಿನ ಪರಿಚಿತಿಯವರಾದ ಪಾಸ್ತರ್ ತಿಮೋಥಿ ಅಯ್ಯನವರು ಕಾಯಿಲೇ ರಜೆಯಲ್ಲಿಯೂ, ಉಪದೇಶಿಯರ ಭಾವನೆಂಟ ಪಾಸ್ತರ್ ಯೇಶುವಯ್ಯನವರು ಬಡಗು ಪ್ರಾಂತ್ಯಕ್ಕೆ ಏನೋ ಜಂಬರದ ಮೇಲೆಯೂ ಹೋಗಿದ್ದು ಸ್ಟೇಶನಿನಲ್ಲಿ ಭಾಷೆ ಗೊತ್ತು ಅರಿಯದ ಹೊಸ ಯೌವನ ಮಿಶ್ಯನರಿಯೊಬ್ಬರು ಮಾತ್ರ ಇದ್ದರು. ಒಕ್ಕಲುತನ ತೆಗೆಯಲ್ಪಟ್ಟ ಪೇತ್ರನೆಂಬವನ ಹೆಂಡತಿಯು ತುಂಬಿದ ಗರ್ಭಿಣಿಯಾಗಿದ್ದುದರಿಂದಲೂ ಆಶ್ರಯ ದೊರಕುವ ಬಗೆ ಇಲ್ಲದ್ದರಿಂದಲೂ ಏನು ಮಾಡಬೇಕೆಂದು ತಿಳಿಯದೆ ಕುಟುಂಬ ಸಹಿತ ಜಪ್ಪು ಸೆಮಿನರಿಗೆ ಬಂದು ಸೆಮಿನರಿ ಕಂಪೌಂಡು ಸೇರುತ್ತಲೇ ಅವನ ಹೆಂಡತಿಯು ಪ್ರಸವಿಸಿದಳು ಇಂಥಾ ಆಪತ್ತು ಸ್ಥಿತಿಯಲ್ಲಿದ್ದ ಈ ಕ್ರೈಸ್ತ ಕುಟುಂಬಕ್ಕೆ ಉಪದೇಶಿಯರು ಕಸಿಕರವನ್ನು ತೋರಿಸದಷ್ಟು ಈ ಕುಟುಂಬವು ಮಾಡಿದ ಅನ್ಯಾಯವೇನು? ಕಳೆದ ಸಂಚಿಕೆಯಲ್ಲಿ ಮುದುಕ ಕ್ರೈಸ್ತನು ಹೇಳುವಂತೆ "ಹೆಚ್ಚಿಸಿದ ಗೇಣಿಯನ್ನು ಕೊಡ ಲೊಪ್ಪದೆ ಹೋದದ್ದು ಒಕ್ಕಲು ಎಬ್ಬಿಸಲು ಕಾರಣವಾಗಿರಬಹುದು" ಎಂಬ ಮುದುಕನ ವಾದವು ತಪ್ಪಾಗಿದೆ. ಏರಿಸಿದ ಗೇಣಿಯನ್ನು ಕೊಡಲು ಈ ಒಕ್ಕಲುಗಳು ಒಪ್ಪಿದರೆ ಮಾತ್ರವಲ್ಲ ೨೦—೩೦ ವರ್ಷಗಳಿಂದ ಅವರು ಮಾಡಿದ ಕೃತಗಳನ್ನು ಸೇರಿಸಿದ ಗೇಣಿಚೀಟುಗಳಿಗೆ ಕೂಡಾ ಕುರುಸು ಎಳಿಯಿರಿ ಎಂತ ಧನಿಗಳಿಗೆ ಕಬೂಲು ಕೊಟ್ಟಿದ್ದಾರಂತೆ. ಹೀಗಿರುವಾಗ ಈ ಒಕ್ಕಲುಗಳನ್ನು ಎಬ್ಬಿಸಲು ಕಾರಣವೇನೆಂಬದನ್ನೂ ಅವರನ್ನು ಕ್ರೈಸ್ತ ಸಮಾಜದೊಳಗಿಂದಲೇ ಅಟ್ಟಿ ಬಿಡುವಷ್ಟು ಅವರು ಮಾಡಿದ ಅನ್ಯಾಯವೇನೆಂಬುದನ್ನೂ ಈ ಆಸ್ತಿಯ ಮೊಕ್ತೇಸರರು ಯಾಕೆ ವಿಚಾರಿಸಲಾಗದು?

ಸ್ವಾಮಿ, ಹಿಂದೆ ಬೊಳ್ಮದ ಸಭೆ ನೋಡುತ್ತಿದ್ದು ಬೇಸಾಯ ಕೆಲಸದಲ್ಲಿ ಬಂಟರ ಜಾತಿ ದೊರೆಗಳೆಂದು ಕರೆಯಲ್ಪಡುತ್ತಿದ್ದ ರೆವರೆಂಡ್ ಒತ್ತ ದೊರೆಗಳವರು ಬಂಗ್ಲೆ ಬಜುಬಾಜು ಕ್ರೈಸ್ತರಿಗನೇ ಬೇಸಾಯಕ್ಕೆ ಕೊಡಬೇಕೆಂದು ಇರಿಸಿದ್ದಾಗಿರುತ್ತದೆ. ಆದಿತ್ಯವಾರ ಕ್ರೈಸ್ತ ದೇವಾಲಯದಲ್ಲಿ ದೇವಾರಾಧನೆಯಾಗುವ ಕಾಲ ಗದ್ದೆಯಲ್ಲಿ ಎತ್ತುಗಳ ಗಾಯನ ಕೇಳಿಸದಂತೆಯೂ ದೇವಾಲಯದ ಪೀಠದ ಮುಂದೆ ಕ್ರೈಸ್ತರಲ್ಲದವರ ಒಲಿಪೀರಗಳು ಇರುವುದು ಉಚಿತವಲ್ಲವೆಂತಲೂ ಆ ದೊರೆಗಳ ಆಲೋಚನೆಯಾಗಿದ್ದ ಕ್ರೈಸ್ತರನ್ನೇ ಬಂಗ್ಲೆಯ ಬಜುಬಾಜಿನಲ್ಲಿ ಒಕ್ಕಲು ಹಾಕಿದ್ದರು. ಕಳೆದ ಸಂಚಿಕೆಯಲ್ಲಿ "ಮುದುಕ ಕ್ರೈಸ್ತ"ರು ಸೂಚಿಸಿದ ಉಪದೇಶಿಯರೂ ಅನಂತರದ ಉಪದೇಶಕರಾದ ಪಾಸ್ಟರ್ ಪೌಲಯ್ಯ ಲೆಮುವೇಲಯ್ಯನವರೂ ಈ ಕ್ರೈಸ್ತ ಸಭೆಯನ್ನು ಊರ್ಜಿತಕ್ಕೆ ತಂದರು. ಆದರೆ ಈಗ ಅವರ್ನು ಸಾಕಿ ಬೆಳಸಿದ ಕ್ರೈಸ್ತರನ್ನು ಅಟ್ಟಿಬಿಡುವಾಗ ಕ್ರೈಸ್ತ ಸಮುದಾಯದಲ್ಲಿ ಇದರ ಕಾರಣವನ್ನು ವಿಚಾರಿಸುವ ಒಬ್ಬನಾದರೂ ಇಲ್ಲವೆಂದು ತಿಳಿಯುವುದು ಶೋಚನೀಯವಾಗಿರುವುದು.

ಹಿಂದೆ ಬೊಳ್ಮ ಸಭೆಯ ಮೇಲಾಧಿಕಾರಿಯಾಗಿದ್ದು ನ್ಯಾಯಪರರೂ ದಯಾಶೀಲರೂ ಎಂದು ಹೆಸರು ಪಡೆದ ರೆವರೆಂಡ ಡೂರ್ ದೊರೆಗಳವರು ಈಗ ಸ್ಟೇಶನ್ ಸೀನಿಯರ್ ಮಿಶ್ಯನೆರಿಗಳೂ ಸಭಾ ಭಂಡಾರದ ಪ್ರೆಸಿಡೆಂಟರೂ ಆಗಿರುತ್ತಾ ಬೊಳ್ಮ ಕ್ರೈಸ್ತರಿಗೆ ಬಂದೊದಗಿರುವ ಆಪತ್ತಿನ ವಿಚಾರವನ್ನು ಯಾಕೆ ಮಾಡುವುದಿಲ್ಲವೋ ತಿಳಿಯದು. ವಿಚಾರವಂದರೆ ಕಳೆದ ಸಂಚಿಕೆಯಲ್ಲಿ ಬೊಳ್ಮದಿಂದ ಲೇಖನವನ್ನು ಬರೆದ "ಮುದುಕ ಕ್ರೈಸ್ತ"ನು ಯಾರು, ಈ ಲೇಖನವನ್ನು ಬರದವನು ಯಾರು, ಅವನೋ ಇವನೋ ಎಂಬ ವಿಚಾರವೆಂದು ಭಾವಿಸಲಾಗದು. ಬೊಳ್ಮದ ಕ್ರೈಸ್ತರಿಗೆ ಈಗಿನ ಆಡಳಿತೆಯಲ್ಲಿ ಅನ್ಯಾಯವಾಗಿಯದೋ? ಯಾ ಈ ಕ್ರೈಸ್ತರಿಂದ ಉಪದೇಶಿಯರಿಗೆ ಅನ್ಯಾಯವಾಗಿಯದೋ? ಆದಿತ್ಯವಾರ ಉಪದೇಶಿಯರು ಗಾಣ ತರಿಸಿದ್ದು, ಗಾಣ ಹಾಕಿಸಿದ್ದು, ಮೀನುಗೊಬ್ಬರ ಹೊರಿಸಿದ್ದು, ಎರಡನೇ ಪ್ರಾರ್ಥನೆ ನಿಲ್ಲಿಸಿದ್ದು ಹೌದೋ ಎಂಬಿತ್ಯಾದಿ ವಿಚಾರವನ್ನು ಮಾಡುವುದೂ ಉಭಯತರನ್ನು ಮೊಕಾಬ್ಲಾ ಇಟ್ಟು ವಾಗ್ಮೂಲ ತಕ್ಕೊಂಡು ನೀತಿಯನ್ನು ಕಾಪಾಡುವುದೂ ಕರ್ತವ್ಯವಲ್ಲವೇ? ಇಂತಹ ನೀತಿಯು ಕ್ರೈಸ್ತ ಸಭಾಪಾಲಕರಿಂದ ಕಾಪಾಡಲ್ಪಡದಿದ್ದರೆ ಸಭಾಪಾಲಕರಿಂದ ಅನೀತಿವಂತರೆಂದು ಕರೆಯಲ್ಪಡುವ ಕ್ರೈಸ್ತರಲ್ಲದವರಿಂದ ನೀತಿಯಾಗಬಹುದೆಂದು ಹಾರೈಸಲಾದೀತೇ?

ನಾನೊಬ್ಬ ಕ್ರೈಸ್ತ.

ವಿದೇಶ ವೃತ್ತಾಂತ.

ಕ್ವ್ಯೂಬೆಕಿನ ಸಮೀಪ ಕಳೆದ ವಾರ ಒಡೆದು ಹೋದ ಎಂಪ್ರೆಸ್ ಆಫ್ ಐರ್ಲ್ಯಾಂಡ್ ಎಂಬ ಹಡಗದಲ್ಲಿ ಮುಣುಗಿ ಸತ್ತವರ ಒಟ್ಟು ಸಂಖ್ಯೆ ೧೦೨೪. ಒಂದನೇ ತರಗತಿಯ ೩೭ ಪ್ರಯಾಣಿಕರು, ೨ನೇ ತರಗತಿಯ ೪೭ ಪ್ರಯಾಣಿಕರು ೧೩೭ ಮಂದಿ ೩ನೇ ತರಗತಿಯ ಪ್ರಯಾಣಿಕರು, ೨೩೩ ಕಲಾಸಿಗಳು ರಕ್ಷಿಸಲ್ಪಟ್ಟಿರುವರೆಂದು ಗೊತ್ತಿಗೆ ಬಂದಿದೆ. ಸುಮಾರು ೨೦೦ ಶವಗಳು ದೊರಕಿರುವವು. ಕೆಲವು ಶವಗಳ ಗುರ್ತು ಸಿಕ್ಕಿರುವುದು. ಒಡೆದು ಹೋದ ಹಡಗವು ೪೦೦,೦೦೦ ಪವನುಗಳಿಗೆ ಇನ್ಶೂರು ಮಾಡಲ್ಪಟ್ಟಿದ್ದಿತು.

~~~~~

ಐರ್ಲ್ಯಾಂಡಿನ ಹೋಮ್‌ರೂಲು ಮಸೂದೆಯು ಕಾಮನ್ಸ್ ಸಭೆಯಲ್ಲಿ ೩ನೇ ಸಲ ಬಹುಮತಿಯನ್ನು ಪಡೆದರೂ ಅದರ ವಿರೋಧ ಪಕ್ಷದ ಅಲಸ್ಟರಿನವರು ಸುಮ್ಮಗಾಗಲಿಲ್ಲ. ಗುಟ್ಟಾಗಿ ಆಯುಧ ಸಾಮಾಗ್ರಿಗಳನ್ನು ತರಿಸುತ್ತಲೇ ಇದ್ದಾರೆ. ತಾ. ೫ರಲ್ಲು ೩೦೦೦ ರೈಫಲನ್ನು ತರಿಸಿಕೊಂಡು ಕಸ್ಟಮ್ ಆಫೀಸರರು ಯಾವ ತರದ ಅನುಮಾನವನ್ನೂ ಪಡದಂತೆ ವಲಂಟಿಯರರು ಅವನ್ನು ಗುಟ್ಟಾಗಿ ಸಾಗಿಸಿದರು.

~~~~~

ಇಂಗ್ಲ್ಯಾಂಡಿನಲ್ಲಿ ಸಫ್ರಜೆಟ್ಟ ಸ್ತ್ರೀಯರ ಉಪಟಳವು ದಿನೇ ದಿನೇ ಹೆಚ್ಚುತ್ತಿದೆ. ಚಕ್ರವರ್ತಿಯವರು ದರ್ಬಾರಿಗೆ ಹಾಜರಾದಾಗ ಗಂಡಸರ ದರ್ಬಾರ ಉಡುಪು ಹಾಕಿಕೊಂಡ ಒಬ್ಬ ಹೆಂಗಸು ಅರಸರ ಮುಂದೆ ನಿಂತು "ಮಹಾರಾಜರೇ ದೇವರನ್ನು ನೋಡಿ ನಮ್ಮ ಮೇಲೆ ಬಲತ್ಕಾರ ನಡಿಸಬೇಡಿರಿ" ಎಂದು ಕೂಗಿಕೊಂಡಳು. ಹೆಂಗಸನ್ನು ಕೂಡ್ಲೇ ಪೋಲಿಸಿನವರ ವಶ ಕೊಡೋಣಾಯಿತು ಡರ್ಬಿಯಲ್ಲಿರುವ ಒಂದು ಇತಿಹಾಸ ಪ್ರಸಿದ್ಧವಾದ ದೇವಾಲಯಕ್ಕೆ ಈ ಸ್ತ್ರೀಯರು ಬೆಂಕಿಕೊಟ್ಟು ಸುಟ್ಟುಹಾಕಿದರು. ಹೀಗೆ ಇವರು ದಿನೆದಿನೇ ವಿವಿಧ ಉಪಟಳವನ್ನು ಮಾಡುತ್ತಾ ಇದ್ದಾರೆ.

~~~~~

ಬ್ರಿಟಿಷ್ ಕೊಲೊಂಬಿಯಕ್ಕೆ ಕೊಮಗಾಟಮಾರು ಎಂಬ ಹಡಗದಲ್ಲಿ ಹೋದ ಭಾರತೀಯರು ೨ ದಿವಸಗಳಿಂದ ನೀರಾಹಾರವಿಲ್ಲದೆ ಇದ್ದಾರೆಂದೂ ಆಹಾರವನ್ನು ಒದಗಿಸಿಕೊಳ್ಳಲು ಕೆಳಗೆ ಇಳಿಯಲು ಅವರನ್ನು ಬಿಡುವುದಿಲ್ಲವೆಂದೂ ವಾರ್ತೆ ಬಂದದೆ. ಆದರೆ ಅಧಿಕಾರಿಗಳು ಅವರಿಗೆ ಬೇಕಾದಷ್ಟು ಆಹಾರ ಕೊಡಲ್ಪಟ್ಟಿದೆ ಎಂದು ಹೇಳುವರು. ಹಡಗದಲ್ಲಿದ್ದ ಪ್ರಯಾಣಿಕರನ್ನು ಇಳಿಯ ಬಿಡುವ ವರೆಗೆ ಹಡಗಕ್ಕೆ ಸಲ್ಲತಕ್ಕ ಹಣವನ್ನು ಕೊಡಲಾರೆನು ಎಂದು ಭಾರತೀಯ ಮುಂದಾಳಾದ ಗುರುದತ್ತ ಸಿಂಘರು ಹೇಳಿರುವರು. ತಾ. ೧೨ರ ಒಳಗೆ ಈ ಹಣವು ಕೊಡೋಣಾಗದಿದ್ದರೆ ಹಡಗದ ತಾಂಡೇಲನಿಗೆ ಹೊಂಗ್‌ಕೊಂಗಿಗೆ ಹಿಂದಿರುಗಲು ಅಪ್ಪಣೆಯಾಗುವುದು. ಹಡಗದಲ್ಲಿದ್ದ ಭಾರತೀಯರನ್ನು ಬಂಧಿಗಳಾಗಿ ಮಾಡಿದ್ದರಿಂದ ಅವರಿಗೆ ಆಹಾರವನ್ನು ಒದಗಿಸಿ ಕೊಡುವಳೆ ಗುರುದತ್ತ ಸಿಂಘರು ನಿರಾಕರಿಸಿರುವರು.

ಈ ಭಾರತೀಯರು ಆಹಾರಕ್ಕೆ ಮುಷ್ಕರ ಹಾಕಿ ಕೊಮಗಾಟಮಾರು ಹಡಗದಲ್ಲಿ ೪೮ ತಾಸುಗಳಿಂದ ನೀರಾಹಾರವಿಲ್ಲದೆ ಇದ್ದಾರೆ. ಗುರುದತ್ತ ಸಿಂಘರು ತಾನು ಮಧ್ಯ ಪ್ರವೇಶಿಸುವದಿಲ್ಲವೆಂದು ಹೇಳಿರುವರು. ಈ ಭಾರತೀಯರನ್ನು **ಕೋರ್ಟಿನ ತೀರ್ಮಾನ ಕೊಡಲ್ಪಡುವವರೆಗಾದರೂ** ಹಡಗದಿಂದ ಇಳಿಸಬೇಕು, ತನ್ಮಧ್ಯೆ ಹಡಗವು ತನ್ನ ಸಾಮಾನನ್ನು ಇಳಿಸಲಿ. ಹೀಗೆ ಮಾಡಿದರೆ ತಾನು ಬಾಕಿ ಹಣವನ್ನು ಕೊಡುವೆನು ಎಂದು ಗುರುದತ್ತಸಿಂಘರ ವಾದವಾಗಿದೆ. ಆದರೆ ಅಧಿಕಾರಿಗಳು ಇದಕ್ಕೆ ಒಪ್ಪುವದಿಲ್ಲ.

ಕೆನಡಾ ದೇಶದ ಪಾರ್ಲಿಮೆಂಟ್ ಸಭೆಯಲ್ಲಿ ಈ ಪ್ರಸ್ತಾಪ ಬಂದಾಗ ಇಂಟೀರಿಯರ್ ಮಂತ್ರಿಯವರು ಹೇಳಿದುದೇನಂದರೆ.—ಕೊಮಗಾಟಮಾರು ಹಡಗದಲ್ಲಿರುವ ಭಾರತೀಯರಿಗೆ ೨ ಟನ್ ಹಿಟ್ಟು, ೬೦ ರಾತ್ತಲು ಅಕ್ಕಿ, ಮತ್ತು ರೊಟ್ಟಿ ಮತ್ತು ಹಣ್ಣು ಕೊಡಲು ತಾನು ಅಪ್ಪಣೆ ಕೊಟ್ಟಿದ್ದೆನು ಆದರೆ ತುಪ್ಪ, ೫೪ ಕುರಿ ಮತ್ತು ಆಡು, ೧೦೦ ಕೋಳಿಗಳು, ೬೦೦ ಪೆಟ್ಟಿಗೆ ಸಿಗರೇಟ್ ಕೊಡುವ ವಿನಹಾ ತಾವು ಅದನ್ನು ಸ್ವೀಕರಿಸಲೊಲ್ಲೆವು ಎಂತ ಭಾರತೀಯರು ಹಟಹಿಡಿದರೆಂಬದಾಗಿ ಹೇಳಿರುವರು.

~~~~~

ಬುದ್ದಾಪೆಸ್ಟಿನಲ್ಲಿ ಒಬ್ಬ ಯುವಕನು ಒಬ್ಬ ಹುಡುಗಿಯನ್ನು ಗಾಯಪಡಿಸಿ ಅವಳ ಹೆತ್ತವರನ್ನು ಕೊಂದು ದೇವಾಲಯದ ಶಿಖರದಲ್ಲಿ ಮರೆ ಹೊಕ್ಕೊಂಡನು. ಅವನನ್ನು ಹಿಡಿಯಲು ಬಂದವರಿಗೆಲ್ಲಾ ಒಟ್ಟಿಗೆ ೬೦೦ ತೋಟೆಗಳನ್ನು ಹಾರಿಸಿದನು ಇದರಿಂದ ಇಬ್ಬರು ಸತ್ತರು ೧೪ ಮಂದಿ ಗಾಯವೊಡೆದರು. ಕಡೆಗೆ ಬಂದ ವಾರ್ತೆಯ ಪ್ರಕಾರ ೩ ಮಂದಿಯನ್ನು ಕೊಂದು ೧೯ ಮಂದಿಯನ್ನು ಗಾಯಪಡಿಸಿದ ನಂತರ ಈ ಯುವಕನು ಶರಣಾಗತನಾದನು ಎಂತ ತಿಳಿದು ಬರುತ್ತದೆ.

~~~~~

ತಾರೀಖು ೭ರಲ್ಲು ಲಂಡನಿನ ಬಕ್ಕಿಂಗ್ಹಾಂಮ್ ಅರಮನೆಗೆ ಒಬ್ಬ ಕಳ್ಳನು ನುಗ್ಗಿದ್ದನು ಇವನು ರಾಣಿಯ ಶೃಂಗಾರವಲಿಯು ಮಲಗುವ ಕೋಣೆಗೆ ನುಗ್ಗಿದಾಗ ಶೃಂಗಾರವಲಿಗೆ ಎಚ್ಚರವಾಗಿ ಕೂಗಿಕೊಂಡದ್ದರಿಂದ ಸಿಕ್ಕಿಬಿದ್ದನು

~~~~~

ದಕ್ಷಿಣ ಆಫ್ರೀಕದ ಯೂನ್ಯನ್ ಸರಕಾರದ ಪಾರ್ಲಿಮೆಂಟ ಸಭೆಯ ಮುಂದೆ ಅಲ್ಲಿರುವ ಭಾರತೀಯರ ಪರವಾಗಿ ವಿಚಾರಿಸುವರೆ ನೇಮಿಸಲ್ಪಟ್ಟ ಕಮಿಷನಿನವರ ವರದಿಯು ಜನರಲ್ ಸ್ಮಟ್ಟರಿಂದ ಎರಡನೇ ಸಾರಿ ಓದಲ್ಪಟ್ಟಿರುವುದು. ಭಾರತೀಯರಿಗಿರುವ ಕಷ್ಟಗಳನ್ನು ನಿವಾರಣೆ ಮಾಡುವುದು ಅವಶ್ಯವೆಂಬದಾಗಿ ಜನರಲ್ ಸ್ಮಟ್ಟರವರಿಂದ ವಾದಿಸಲ್ಪಟ್ಟಿರುವುದು. ಈ ವಿಷಯ ಪಾರ್ಲಿಮೆಂಟ್ ಸಭೆಯಲ್ಲಿ ಚರ್ಚೆ ನಡೆದು ಕರ್ನೆಲ್ ವೂಲ್ಸ್, ಮಿ| ಮೆರಿಮೇನ್ ಮೊದಲಾದ ನೇಟಲ್ ಮೆಂಬರರು ಮೂರು ಪೌಂಡು ತೆರಿಗೆಯನ್ನು ತೆಗೆದುಹಾಕುವುದುಚಿತವಲ್ಲವೆಂದೂ ದಕ್ಷಿಣ ಆಫ್ರೀಕದಲ್ಲಿ ಅವರಿಗೆ ಸ್ವತಂತ್ರ ಕೊಡುವುದು ಉಚಿತವಲ್ಲವೆಂದೂ ವಾದಿಸಿದರು. ಇನ್ನು ಕೆಲವರು ಸಭೆಯ ಮುಂದಿಟ್ಟ ಮಸೂದೆಯಲ್ಲಿ ತಿದ್ದುಪಡಿ ಮಾಡಬೇಕೆಂದು ವಾದಿಸಿದರು ಆದರೆ ಓಟಿಗೆ ಹಾಕಿದಾಗ ಎರಡನೇ ಸಾರಿಯೂ ಈ ಮಸೂದೆಯು ಬಹುಮತಿಯಿಂದ ಮಂಜೂರಾಯಿತು.

~~~~~

ಸಫ್ರಜೆಟ್ಟ ಸ್ತ್ರೀಯರು ತಾ. ೮ರಲ್ಲು ಲಂಡನಿನ ಬ್ರೊಮ್ಟನ್ ಪ್ರಾರ್ಥನಾಲಯಕ್ಕೆ ನುಗ್ಗಿದರು. ಅಲ್ಲಿ ಕೂಡಿದ್ದ ಹೆಂಗಸರು ಉರಿದು ಬಿದ್ದು ಆ ಸಫ್ರಜೆಟ್ಟ ಸ್ತ್ರೀಯರ **ಕೂಟೆ ಕಾದಾಡಿ ಕೊಡೆ, ಬಾಚಣಿಗೆ ಇತ್ಯಾದಿಗಳಿಂದಪ್ಪ ಹೊಡೆದು ಅವರನ್ನು ಘಾಯ ಪಡಿಸಿದರು.**

~~~~~

ಲಂಡನಿನ ಎಪ್ರೇನೆ ಎಂಬಲ್ಲಿ **ಬೆಲೂನು** ಎಂಬ ಆಕಾಶವಿಮಾನವು ಸಿಡಿದು ೧೦೦ ಮಂದಿ ಗಾಯ ವೊಡೆದರು.

~~~~~

ಮೆಕ್ಸಿಕಾನರಿಗೂ ಅಮೇರಿಕಾನರಿಗೂ ತೊಡಗಿದ ಯುದ್ಧವು ತಾತ್ಕಾಲಿಕ ನಿಲ್ಲಿಸಲ್ಪಟ್ಟು ಸಂಧಾನ ಸಭೆಯು ನಿಯಾಗರದಲ್ಲಿ ಕೂಡಿರುವುದಷ್ಟೆ ಪರಂತು, ಮೆಕ್ಸಿಕಾನರು ಈ ಮಧ್ಯೆ ತಮಗೆ ಆಯುಧ ಸಾಮಾಗ್ರಿಗಳನ್ನು ತರಿಸಿಕೊಳ್ಳುತ್ತಿರುವುದರಿಂದ ಸಂಧಾನ ಸಭೆಯು ಕಳಚಿ ಹೋಗುವ ಸಂಭವ ತೋರುತ್ತೆ.

~~~~~

ಉತ್ತರ ಹಿಂದೂಸ್ಥಾನ.

ಇದೇ ಕಳದ ಮೇ ತಾ ೨೦ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೩,೭೮೩ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೩,೩೩೪ ಮಂದಿ ಮೃತಪಟ್ಟರು. ಈ ಪೈಕಿ ಪಂಜಾಬು ೨೪೭, ಸಂಯುಕ್ತ ಸಂಸ್ಥಾನ ೫೫೯; ಬಿಹಾರ್ ಮತ್ತು ಒರಿಸ್ಸ ೭೮೮, ಮುಂಬಾಯಿ ೧೭೪; ಬಂಗಾಳ ೨೮, ಮದರಾಸು ೩; ಬರ್ಮ ೧೨೦ ಮರಣಗಳಾದವು.

ಕಲ್ಕತ್ತಾ ಪಟ್ಟಣದ ಆಲಿವ್ ಸ್ಟ್ರೀಟ್ ಎಂಬ ಬೀದಿಯಲ್ಲಿದ್ದ ಪ್ರಿಯನಾಥ ಮುಕರ್ಜಿ ಎಂಬ ಬಂಗಾಳಿಯವನು ಬಹಳ ವರ್ಷಗಳಿಂದ ಹಣದ ವಿಷಯದಲ್ಲಿ ಈಷ್ಟ್ ಇಂಡಿಯಾ ರೈಲ್ವೇ ಕಂಪೆನಿಯವರಿಗೆ ಮೋಸಮಾಡಿದ ತಪ್ಪಿತಕ್ಕಾಗಿ ದಸ್ತಗಿರಿ ಮಾಡಲ್ಪಟ್ಟನು ಯಾತ್ರಿಕರು ಪುಣ್ಯಸ್ಥಳಗಳಿಗೆ ಹೋಗಿ ಬರುವುದಕ್ಕಾಗಿ ಅವನು ರಿಟರ್ನ್ ಟಿಕೇಟು ಕೊಂಡುಕೊಳ್ಳುತ್ತಿದ್ದನು ಯಾತ್ರಿಕರಿಗಾಗಿ ಯಾವ ಸ್ಥಳಗಳಿಗೆ ಟಿಕೇಟುಗಳು ತೆಗೆದುಕೊಳ್ಳಲ್ಪಟ್ಟವೋ ಅಂಥಾ ಸ್ಥಳಗಳನ್ನು ಅವನು ಸೇರಿದಾಗ ಅವರ ಕೈಗೆ ಸುಳ್ಳಾದ ಟಿಕೇಟು ಕೊಟ್ಟು ರೈಲು ಚಾರ್ಜಿನ ಟಿಕೇಟುಗಳನ್ನು ಕೊಟ್ಟು ನಿಜವಾದ ಟಿಕೇಟುಗಳನ್ನು ವಾಪಾಸು ತೆಗೆದುಕೊಂಡು ಅವರಿಂದ ಹೆಚ್ಚು ಹಣವನ್ನು ವಸೂಲು ಮಾಡಿ ಯಾತ್ರಿಕರಿಗೂ ರೈಲ್ವೇ ಕಂಪೆನಿಯವರಿಗೂ ಹತ್ತು ವರ್ಷಗಳಿಂದ ಮೋಸ ಮಾಡುತ್ತಿದ್ದನು.

~~~~~

ಬಂಗಾಳದಲ್ಲಿ ಬಾಲಕಿಯರ ಆತ್ಮಹತ್ಯವು ದಿನೇ ದಿನೇ ಹೆಚ್ಚಾಗುತ್ತಾ ಬರುತ್ತಿದೆ. ೧೪ ವರ್ಷ ವಯಸ್ಸಿನ ಬಹಬಾರಿನಿ ದಾಸಿ ಎಂಬ ಹುಡುಗಿಯು ಕಳದ ವಾರ ಶೀಮೆ ಎಣ್ಣೆಯಿಂದ ತನ್ನನ್ನು ತಾನೇ ಅದ್ದಿ ಕೊಂಡು ಬೆಂಕಿ ಇಟ್ಟುಕೊಂಡು ಆತ್ಮಹತ್ಯಮಾಡಿಕೊಂಡಳು. ಅವಳಿಗೆ ಒಂದು ವರ್ಷದ ಹಿಂದೆ ವಿವಾಹವಾಗಿತ್ತು. ಗೃಹಕೃತ್ಯ ಸಂಬಂಧವಾದ ತಾಪತ್ರಯಗಳಿಂದ ಇವಳು ಆತ್ಮಹತ್ಯಮಾಡಿಕೊಳ್ಳಲು ನಿರ್ಣಯಿಸಿ ದೇಹಕ್ಕೆ ಶೀಮೆ ಎಣ್ಣೆ ಹೊಯ್ದು ಬೆಂಕಿ ಕಡ್ಡಿ ಇಟ್ಟುಕೊಂಡಳಂತ ತಿಳಿದುಬರುತ್ತದೆ.

~~~~~

ಮುಂಬಾಯಿಯ ಗಿರಣಿ ಮಾಲೀಕರು ತಮ್ಮಿಂದ **ಕೊಂ**ಡುಕೊಳ್ಳುವ ವಸ್ತ್ರ ಸಾಹುಕಾರರಿಗೆ **ತಮ್ಮ ಮ್ಹಾಲುಗಳ**ದರ ತಗ್ಗಿಸದ್ದರಿಂದ ಸಾಹುಕಾರರೆಲ್ಲಾ ಒಟ್ಟಾಗಿ **ಈ ಗಿರಣಿ**ಗಳಿಂದ ವಸ್ತ್ರಗಳನ್ನು **ಕೊಂಡುಕೊಳ್ಳುವುದನ್ನು** ನಿಲ್ಲಿಸಿ ಹಿಂಧಿ

ನಂತೆ ಜಾಪಾನ್ ಮತ್ತು ಮೆಂಚೆಸ್ಟರಿನಿಂದ ವಸ್ತ್ರ ತರಿಸ ನಿರ್ಣಯಿಸಿರುವರೆಂತೆ ವಾರ್ತೆ ಬಂದದೆ

~~~~~

ಬರೋಡೆಯ ಪರಸ್ಪರ ಸಹಾಯಕ ಸಂಘಗಳಿಂದ ಅಲ್ಲಿಯ ನೂತನ ಕೈಗಾರಿಕೆಗಳಿಗೆ ಕಮ್ಮಿ ಬಡ್ಡಿಯಿಂದ ೧೫ ಲಕ್ಷ ರೂಪಾಯಿ ಸಾಲ ಕೊಡಲ್ಪಟ್ಟಿರುವುದು.

~~~~~

ಕಲ್ಕತ್ತೆಯಲ್ಲಿ ಒಂದು ಕೌತುಕವಾದ ಖೂನಿಯು ನಡೆದಿರುವುದು. ತುಂಡು ತುಂಡಾಗಿ ಕಡಿಯಲ್ಪಟ್ಟ ಕಲ್ಕತ್ತೆಯ ಬಿಬ್ಬಿ ಮಹಮ್ಮದೀ ಸಾಹುಕಾರನ ದೇಹವು ಒಂದು ತವರದ ಪೆಟ್ಟಿಗೆಯಲ್ಲಿ ಸಿಕ್ಕಿರುವುದು. ಈ ವಿಷಯ ಪೋಲೀಸಿನವರು ಬಹು ಜಾಗರೂಕತೆಯಿಂದ ಪತ್ತೆ ನಡಿಸಿದ್ದಲ್ಲಿ ಈ ಸಾಹುಕಾರನು ಬೋ ಬಜಾರ್ ರಸ್ತೆಯಲ್ಲಿರುವ ಇನ್ಸ್ಯೂರೆನ್ಸ್ ಆಫೀಸಿನೊಳಗೆ ಕೊಲೆ ಮಾಡಲ್ಪಟ್ಟನೆಂತ ತಿಳಿದು ಬಂತು. ಪೋಲೀಸಿನವರು ಇನ್ಸ್ಯೂರು ಆಫೀಸಿನ ಮೂರು ಮಂದಿಯನ್ನು ಕೈದುಮಾಡಿ ಇನ್ಸ್ಯೂರು ಆಫೀಸು ಜಪ್ತಿ ಮಾಡಿದಾಗ ಮೃತನ ಟೊಪ್ಪಿಯು ದೊರಕಿತು ಮೇಜಿಯ ಮತ್ತು ಗೋಡೆಯ ಮೇಲೆ ತುಂಬಾ ರಕ್ತ ಕಲೆಗಳು ಇದ್ದುವು. ಕೈದುಮಾಡಲ್ಪಟ್ಟವರಲ್ಲಿ ಬನಾಯಿ ಸೊನಾರ್ ಎಂಬವನು ಸತ್ಯ ಸ್ಥಿತಿಯನ್ನು ಅರಿಕೆ ಮಾಡಿರುವನು. ಮೃತನನ್ನು ಪ್ರೇರೇಪಿಸಿ ಇನ್ಸ್ಯೂರು ಆಪೀಸಿಗೆ ಕೊಂಡು ಹೋದೆನು. ಅಲ್ಲಿ ಆಫೀಸು ಕೋಣೆಯಲ್ಲಿ ಕೂಡ್ರಿಸಿ ಸೇದಲು ಸಿಗರೇಟು ಕೊಟ್ಟು ಸಿಗರೇಟಿಗೆ ಮೃತನು ಬೆಂಕಿ ಕೊಡಲು ಬಗ್ಗಿದಾಗ ಅವನ ತಲೆಗೆ ದೊಣ್ಣೆಯಿಂದ ಹೊಡೆಯಲು ಅವನು "ಬಿಸ್ಮಲ್ಲಾ, ನೀರು ಕೊಡು" ಎಂತ ಕೂಗಿ ತೆರೆದ ಕಿಡಿಕಿಯ ಬಳಿಗೆ ಓಡಿದನು. ಕೂಡಲೇ ಅವನನ್ನು ಕಾಲಿನಿಂದ ಹಿಡಿದು ಎಳೆದು ಚ್ಯಾಕಿ ಚೂರಿ ಚೂರಾಗಿ ಕಡಿದು ತವರದ ಪೆಟ್ಟಿಗೆಯಲ್ಲಿ ಹಾಕಿ ಚಟ್ಟಸಾಲ ಓಣಿಗೆ ಬಿಸಾಡಿದೆವು. ಮೃತನ ಆಭರಣಗಳನ್ನು ನಾವು ನಂತರ ಪಾಲು ಮಾಡಿಕೊಂಡೆವು ಎಂತ ಅರಿಕೆ ಮಾಡಿರುವನು

~~~~~

ಇಂಟರ್ ನೇಶನಲ್ ಕಾಂಗ್ರೆಸ್ ಅಫ್ ಲಿಬರಲ್ ರಿಲಿಜನ್ ಎಂಬ ಮತ ಸಂಬಂಧವಾದ ಸರ್ವ ರಾಷ್ಟ್ರೀಯ ಸಭೆಯು ಬರುವ ಚಳಿಗಾಲದಲ್ಲಿ ಹಿಂದೂಸ್ಥಾನದಲ್ಲಿ ಕೂಡಿ ಬರುವುದು. ಇಂಥಾ ಸಭೆಯು ಈ ಮೊದಲು ಹಿಂದೂಸ್ಥಾನದಲ್ಲಿ ಕೂಡಿ ಬಂದದ್ದಿಲ್ಲ. ಈ ಸಭೆಗೆ ಅಮೇರಿಕ, ಯೂರೋಪು ಖಂಡಗಳಿಂದಲೂ ಚೀನ, ಜಾಪಾನ್, ಪ್ರಸ್ಯ ದೇಶಗಳಿಂದಲೂ ಪ್ರತಿನಿಧಿಗಳು ಬರುವರು ಈ ಪ್ರತಿನಿಧಿಗಳು ಕಲ್ಕತ್ತ, ಮುಂಬಾಯಿ, ಮದರಾಸು, ಲಾಹೋರ್ ಈ ಸ್ಥಳಗಳಲ್ಲಿ ಕೂಡಿ ಬರುವರು. ಬೊಸ್ಟನಿನ ರೆವರೆಂಡ್ ಚಾರ್ಲ್ಸ್ ಡಬ್ಲ್ಯು. ಡಿ. ಬಿಯವರು ಜನರಲ್ ಸೆಕ್ರೆಟರಿಯಾಗಿಯೂ ಮೆ। ಚಂದ್ರ ಸೆರ್ಕಾರ್ ಎಮ್. ಎ.ರವರು ಸೆಕ್ರೆಟರಿಯಾಗಿಯೂ ಇರುವರು. ಈ ರಾಷ್ಟ್ರೀಯ ಸಭೆಯಲ್ಲಿ ಸರ್. ಆರ್. ಸಿ. ಭಂಡಾರ್‌ಕಾರ್, ಸರ್ ಎನ್. ಜಿ. ಚಂದಾವರ್‌ಕಾರ್, ಮೆ। ವಿ. ಆರ್. ಸಿಂಧೂ, ಮೆ। ಸಿ ಎನ್ ಟಾಗೋರು, ಜಸ್ಟಿಸ್ ಹುಸೇನ್ ಇಮಾಮ್, ಜಸ್ಟಿಸ್ ಎ. ಚೌದುರಿ, ರವೀಂದ್ರನಾಥ ಟಾಗೋರು, ರೆವರೆಂಡ್ ಅಂಡ್ರೂಸರೇ ಮೊದಲಾದ ಮಹನೀಯರು ಮುಂದಾಳುಗಳಾಗಿರುವರು. ಹಿಂದೂಸ್ಥಾನದಲ್ಲಿ ಈ ಸಭೆಯು ತೀರಿವನಂತರ ಪ್ರತಿನಿಧಿಗಳು ಜಾಪಾನಿಗೆ ಹೋಗಿ ಸಂಘಾಯಿ ಟೊಕಿಯೋದಲ್ಲಿ ಪುನಃ ದೊಡ್ಡ ಸಭೆ ಕೂಡಿಸುವರು.

~~~~~

ಸಂಸ್ಕೃತ ಗಾಯನ ವಿದ್ಯೆಯಲ್ಲಿ ಮಹಾ ಕೀರ್ತಿಯನ್ನು ಪಡೆದು ಡಾಕ್ಟರ್ ಅಫ್ ಮ್ಯೂಸಿಕ್ ಎಂದು ಅಮೇರಿಕದ ಪಿಲೆದೆಲ್ಪಿಯದಿಂದ ಬಿರುದು ಹೊಂದಿದ ರಾಜಾ ಸರ್ ಸುರೇಂದ್ರ ಮೊಹನ್ ಎಂಬವರು ಇದೇ ತಾ. ೬ರಲ್ಲು ತನ್ನ ೭೪ನೇ ವಯಸ್ಸಿನಲ್ಲಿ ಕಲ್ಕತ್ತೆಯ ಟಾಗೋರ್ ಅರಮನೆಯಲ್ಲಿ ಕಾಲವಾದರು. ನೋಟುಗಳ ಮೂಲಕ ಹಿಂದೂ ಗಾಯನ ಕಲಿಸಿದವರಲ್ಲಿ ಇವರೇ ಪ್ರಥಮರು. ಗಾಯನ ಕಲೆಯ ಅಭಿವೃದ್ಧಿಯನ್ನು ಮಾಡಿದಕ್ಕಾಗಿ ಇವರು ನೈಟ್ ಬೆಚಲರ್ ಅಫ್ ದಿ ಯುನೈಟೆಡ್ ಕಿಂಗ್ ಡಮ್ ಎಂಬ ಪದವಿಯನ್ನು ಪಡಕೊಂಡರು.

~~~~~

ಮುಂಬಾಯಿಯಲ್ಲಿ ತಾ. ೫ರಲ್ಲು ಪುನಃ ಒಂದು ದೊಡ್ಡ ಹತ್ತಿ ಮೂಟೆಗೆ ಬೆಂಕಿ ಬಿದ್ದು ಸುಮಾರು ೬,೦೦,೦೦೦ ರೂಪಾಯಿ ನಷ್ಟವುಂಟಾಗಿರುವುದು ಹತ್ತಿ ಇಟ್ಟ ಕೊರಡಿಗನೇ ಬೆಂಕಿ ಬಿದ್ದು ನೀರು ಹಾರಿಸುವ ಇಂಜಿನ್ ತರಿಸಿದರೂ ಹೆಚ್ಚಿನ ಪ್ರಯೋಜನವಾಗದೆ ಸುಮಾರು ೬೫೦೦ ಮೂಟೆ ಹತ್ತಿ ಸುಟ್ಟು ಹೋಯಿತು. ಈ ಕೊರಡಿಯ ಗೋಡೆಯು ಜರಿದು ಬಿದ್ದು ಹಿಂದಿನ ಕೊರಡಿಯಲ್ಲಿ ಕೆಲಸ ಮಾಡುತ್ತಿದ್ದವರ ಮೇಲೆ ಬಿದ್ದು ಕೆಲವರಿಗೆ ಜಕಂ ಆಗಿರುವುದು

~~~~~

ಲಾಹೋರಿನಲ್ಲಿ ಮರಣಪಟ್ಟವರಲ್ಲಿ ಅರ್ಧಕ್ಕಿಂತಲೂ ಹೆಚ್ಚಿಗೆ ೧೫ ವರ್ಷ ಪ್ರಾಯದ ಒಳಗಿನವರು. ಹಿಂದೂ ಹೆಂಗಸರಿಗಿಂತಲೂ ಮಹಮ್ಮದೀಯ ಹೆಂಗಸರ ಮರಣ ಸಂಖ್ಯೆ ಹೆಚ್ಚು. ನೇಕಡಾ ೪೭ ೪೬ರಂತೆ ಸಾಯುತ್ತಾರೆ ಎಂಬದಾಗಿ ಲಾಹೋರಿನ ಹೆಲ್ತ್ ಆಫೀಸರರಾಗಿದ್ದ ಮೆ। ಡಿ. ನ್ಯೂವೆಲ್ಲರವರ ವರದಿಯಿಂದ ತೋರಿ ಬರುತ್ತದೆ.

ಕಳೆದ ತಿಂಗಳಲ್ಲಿ ಸುಧಾರಣೆ ವಿಷಯಗಳನ್ನು ಚರ್ಚಿಸಿ ಇತ್ಯರ್ಥಿಸುವಗೋಸ್ಕರ ಪೂನೆ ಶಹರಿನಲ್ಲಿ ನೆರೆದ ಸೋಶಿಯಲ್ ಕೊನಫರೆನ್ಸ ಸಭೆಗೆ ಬಂದ ವಿವಿಧ ಜಾತಿಯ ಸಭಿಕರಲ್ಲಿ ಸುಮಾರು ೬೦೦ ಜನರು ಜಾತಿಭೇದ ಮನ್ನಿಸದೆ ಸಹಪಂಕ್ತಿ ಭೋಜನ ಮಾಡಿದರು.

~~~~~

ಮಾರಿಷಸ್ ದ್ವೀಪದಿಂದ ಕಲ್ಕತ್ತೆಗೆ ಹೋಗುತ್ತಿದ್ದ ಬಂಗಾಲಾ ಎಂಬ ಜಹಜಿನಲ್ಲಿ ಒಬ್ಬ ಅಬ್ದೂಲ ರಹೀಂ ಎಂಬ ಪ್ರಯಾಣಿಕನು ಲಂಕಾದ್ವೀಪದ ಹತ್ತಿರ ಜಹಜಿನಿಂದ ಸಮುದ್ರದೊಳಗೆ ಬಿದ್ದುಹೋದನು. ಇವನು ಬಿದ್ದದ್ದನ್ನು ಮತ್ಯಾರೂ ನೋಡಲಿಲ್ಲ ಎಷ್ಟು ಕೂಗಿಕೊಂಡರೂ ಏನೂ ಪ್ರಯೋಜನವಾಗಲಿಲ್ಲ. ಜಹಜು ಹೊರಟೇ ಹೋಯಿತು ಅಬ್ದೂಲನು ೧೮ ಗಂಟೆಗಳ ಕಾಲ ತೇಲುತ್ತಲೇ ಇದ್ದನು ಕೊನೆಗೆ ಮರುದಿನ ಪ್ರಾತಃಕಾಲ ಮರಮೊರಾ, ಎಂಬ ಹಡಗು ಅದೇ ದಾರಿಯಲ್ಲಿ ಬರುತ್ತಾ ಇವನನ್ನು ನೋಡಿ ಮೇಲಕ್ಕೆ ಎತ್ತಿ ಕಾಪಾಡಿತು. ದಾಕ್ತರರು ಸ್ವಲ್ಪ ಹೊತ್ತು ಉಪಚರಿಸಿದ ಮೇಲೆ ಅಬ್ದೂಲನು ತನ್ನ ಕಥೆಯನ್ನು ಹೇಳಿದನು. ೧೮ ಗಂಟೆಗಳ ಕಾಲ ಇವನು ತೇಲುತ್ತಲೇ ಇದ್ದನೆಂದು ತಿಳಿಯಬಂದಿದೆ.

~~~~~

ಅಮೃತಸರದ ಹಿಂದೂ ಯೋಗಿಯೊಬ್ಬನು ಬರ್ಮಾ ಥಿಂಗಂಗ್ ಎಂಬ ಸ್ಥಳಕ್ಕೆ ಹೋಗಿರುತ್ತಾನೆ. ಈತನು ಕೇವಲ ಹುಲ್ಲನ್ನೇ ತಿಂದು ಜೀವಿಸುತ್ತಿರುವನೆಂದು ಹೇಳುತ್ತಿದ್ದಾರೆ. ಸ್ವಲ್ಪ ದಿವಸದಲ್ಲೇ ಅನೇಕರು ಈ ಸಾಧುವನ್ನು ಭೇಟಿ ಮಾಡಲು ಪ್ರಾರಂಭಿಸಿದರು. ರಂಗೂನ ಪಟ್ಟಣದಿಂದ ಸಾವಿರಾರು ಜನಗಳು ಇವನನ್ನು ದರ್ಶನ ಮಾಡಲು ಬಂದಿದ್ದರು. ಮೇ ತಾ. ೨೫ನೇ ಶನಿವಾರ ಮತ್ತು ೨೭ನೇ ಸೋಮವಾರ ಒಟ್ಟು ೩೦,೦೦೦ ಮಂದಿ ದರ್ಶನ ಮಾಡಿಕೊಂಡು ಹೋದರು. ರೈಲ್ವೇ ಕಂಪೆನಿಯವರು ಸ್ಪೆಶ್ಯಲ್ ಗಾಡಿಗಳನ್ನು ಬಿಟ್ಟರು.

~~~~~

ಮಿಥಿಲಾಪುರದಲ್ಲಿ ಸಂತಾನವಿಲ್ಲದವನೊಬ್ಬನು ತನಗೆ ಸಂತಾನವಾದರೆ ಒಂದು ಕುರಿಮರಿಯನ್ನು ಒಪ್ಪಿಸುವೆನೆಂದು ಗಂಗಾಭವಾನಿಗೆ ಹರಿಕೆ ಕಟ್ಟಿಕೊಂಡನು. ಅದರಂತೆ ಗಂಡು ಮಗುವು ಹುಟ್ಟಲು ತನ್ನ ಪ್ರಾರ್ಥನೆಯನ್ನು ಸಲ್ಲಿಸುವುದಕ್ಕಾಗಿ ಗಂಗಾತೀರಕ್ಕೆ ಒಂದು ಬಲ ಕಂಕುಳಲ್ಲಿದ್ದ ಕುರಿಮರಿಯನ್ನು ಗಂಗೆಗೆ ಬಿಡುವ ಸಮಾರಂಭದಲ್ಲಿ ಎಡಕಂಕುಳಲ್ಲಿದ್ದ ಗಂಡು ಮಗುವನ್ನೇ ಬೀಳಿಸಿಕೊಂಡನು. ಮಗುವಿನ ಪ್ರಾಣವೇ ಗಂಗೆಗೆ ಅರ್ಪಿತವಾಯಿತು

~~~~~

ದಿಲ್ಲಿಯ ಮಹೋಪಧ್ಯಾಯ ಪಂಡಿತ ಬಂಕೆರಾಯಿನವಲಿ ಗೋಸ್ವಾಮಿಯವರು ದಿಲ್ಲಿಪಟ್ಟಣದ ಸಮೀಪದಲ್ಲಿಯ ಯಮುನಾನದಿಯ ದಡದ ಮೇಲೆ ಬುರಾರಿ ಎಂಬ ಗ್ರಾಮದ ದಕ್ಷಿಣದಲ್ಲಿರುವ ಒಂದು ಗುಡ್ಡದ ಮೇಲೆ ಒಂದು ಹೆಜ್ಜೆಯ ಗುರುತಿರುವದನ್ನು ಕಂಡು ಹಿಡಿದಿರುವರು. ಇದು ೩೨ ಅಂಗುಲ ಉದ್ದವೂ ೧೦ ಅಂಗುಲ ಅಗಲವೂ ಇರುವದಲ್ಲದೆ ಈಗ್ಗೆ ೨೦೦೦ ವರ್ಷಗಳ ಹಿಂದಿನದಾಗಿರುವುದೆಂದೂ ಇದು ಚಿತ್ರಕೋಟೆಯಲ್ಲಿರುವ ಕೃಷ್ಣ ಪಾದದ ಮತ್ತು ಗಯೆಯಲ್ಲಿರುವ ವಿಷ್ಣು ಪಾದದ ಗುರ್ತುಗಳನ್ನು ಹೋಲಿರುತ್ತದೆಂದೂ ಗೋಸ್ವಾಮಿಯವರು ಹೇಳುವರು.

~~~~~

ಮೆಮನ್‌ಸಿಂಘಿನ ಪೋಸ್ಟುಮಾಸ್ತರರ ಹೆಂಡತಿ ಮತ್ತು ಮಕ್ಕಳು ಪೆಟ್ರೋಲಿಯಮ್ ತುಂಬಿಸಿದ ಸೋರುತ್ತಿದ್ದ ಒಂದು ಡಬ್ಬಿಗೆ ತೇಪೆ ಹಾಕುತ್ತಿದ್ದಾಗ ಅದು ಫಕ್ಕನೇ ಸಿಡಿದು ಪೋಸ್ಟುಮಾಸ್ತರರ ಹೆಂಡತಿ, ಮಗ, ಮಗಳು ಮರಣಾಂತಿಕವಾದ ಗಾಯವೊಡೆದರು ಆ ಸ್ಥಳದಲ್ಲಿದ್ದ ಒಬ್ಬ ನೆರೆಯವನು ಮೋಪಂಡ ಸ್ಥಿತಿಯಲ್ಲಿದ್ದಾನೆ. ಒಬ್ಬ ಕ್ಲಾರ್ಕನೂ ಕಠಿನ ಜಕಂ ಹೊಂದಿರುವನು.

~~~~~

ದಕ್ಷಿಣ ಹಿಂದೂಸ್ಥಾನ.

~~~~~

ಇದೇ ತಾ. ೫ರಲ್ಲು ಮೈಸೂರು ಸಂಪದಭ್ಯುದಯ ಸಭೆಯು ಮೈಸೂರು ದಿವಾನರಾದ ರಾ। ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಕೂಡಿ ಬಂದಿರುವುದು. ಈ ಸಭೆಯಲ್ಲಿ ವಿದ್ಯಾಭ್ಯಾಸವನ್ನು ಹಬ್ಬಿಸುವದಕ್ಕಾಗಿ ಪರಸ್ಪರ ಒಟ್ಟುಕೂಡುವರೆ ಮಾಡಬೇಕಾದ ಉಪಾಯವೇನು, ಕನ್ನಡ ಗ್ರಂಥಗಳನ್ನು ಅಭಿವೃದ್ಧಿಗೆ ತರುವುದು, ಪ್ರ್ಯಾಮರಿ ಮತ್ತು ಟೆಕ್ನಿಕಲ್ ಶಾಲೆಗಳ ತರಬೇತು ಪಡೆಯುವರೆ ಇಬ್ಬರು ಗ್ರೇಡ್ಯುವೇಟರನ್ನು ಜರ್ಮನ್ ಮತ್ತು ಇಂಗ್ಲಾಂಡಿಗೆ ಕಳುಹಿಸುವುದು, ಬೆಂಗಳೂರು ವ್ಯವಸಾಯಕ ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿಗಳಲ್ಲಿ ಯೋಗ್ಯರಾದ ೧೦ ಮಂದಿಗೆ ರೂಪಾಯಿ ೧೫ರ ವೇತನ ಕೊಡುವುದು, ಟ್ರೈನಿಂಗ್ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಿ ೫ ವರ್ಷಗಳ ತನಕ ವರ್ಷಕ್ಕೆ ಕನಿಷ್ಟ ಪಕ್ಷಕ್ಕೆ ೬೦೦ ಉಪಾಧ್ಯಾಯರು ತರಬೇತು ಆಗುವಂತೆ ನೋಡುವುದು ಮೊದಲಾದ ಪ್ರಶ್ನೆಗಳ ಚರ್ಚೆ ನಡೆಯಿತು. ಇನ್ನು ವ್ಯವಸಾಯ ಸಂಬಂಧವಾಗಿ
~~~~~

ಯೂ ಕೈಗಾರಿಕೆ ಸಂಬಂಧವಾಗಿಯೂ ಇವುಗಳನ್ನು ದೇಶ ದಲ್ಲಿ ವೃದ್ಧಿಗೆ ತರುವ ವಿಷಯ ವಿವಿಧ ಚರ್ಚೆಗಳು ನಡೆದಿರುವವು

~~~~~

ಉಪಾಧ್ಯಾಯರಿಗೆ ಪ್ರೊವಿಡೆಂಟ ಫಂಡನ್ನು ಸ್ಥಾಪಿಸುವ ವಿಷಯು ಮದ್ರಾಸ್ ಸರಕಾರದವರು ಇನ್ನೂ ಆಲೋಚನೆಯಲ್ಲೇ ಇರುತ್ತಿರುವಾಗ ಮಧ್ಯ ಸಂಸ್ಥಾನಗಳ ಸರ್ ಬೆಂಜಮಿಾನ್ ರೋಬರ್ಟ್ಸನರ ಸರಕಾರದವರು ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರಿಗೆ ಪ್ರೊವಿಡೆಂಟ ಫಂಡನ್ನು ಸ್ಥಾಪಿಸುವ ಏರ್ಪಾಡು ಮಾಡಿರುವರೆಂತ ತಿಳಿಯುವುದು ಸಂತೋಷಕರವಾಗಿದೆ. ಶಾಲೆಗಳ ಉಪಾಧ್ಯಾಯರಿಗೆ ಕನಿಷ್ಠ ಪಕ್ಷಕ್ಕೆ ಮಾಹೆಯಾನೆ ೧೧ ರೂಪಾಯಿ ಸಂಬಳವೂ ಪೆನ್ಶನೂ ಸಿಗಬೇಕೆಂಬದು ಸರ್ ಬೆಂಜಮಿಾನ್ ರೋಬರ್ಟ್ಸನರ ಪ್ರಯತ್ನವಾಗಿರುವುದು ಅಲ್ಲಿಯ ಮುನ್ಸಿಪಾಲಿಟಿಯವರು ತಮ್ಮ ಆಡಳಿತೆಯೊಳಗಿರುವ ಶಾಲೆಗಳ ಮಾಸ್ತರುಗಳ ಪೆನ್ಶನ್ ಫಂಡಿಗೆ ವಂತಿಗೆ ಕೊಟ್ಟಿರುವರು ಈ ಸಂಬಂಧ ಇವರು ಸರಕಾರದಿಂದ ತಕ್ಕ ಗ್ರೇಂಟನ್ನು ಪಡಕೊಂಡಿರುವರು ಪ್ರಾಥಮಿಕ ವಿದ್ಯಾಭ್ಯಾಸವು ಇತರ ವಿದ್ಯಾಭ್ಯಾಸಗಳ ಮೂಲೆಗಲ್ಲಿನಂತಿರುವುದರಿಂದ ಈ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊಡುವ ಉಪಾಧ್ಯಾಯರುಗಳಿಗೆ ತಕ್ಕ ಸಂಭಾವನೆಯನ್ನು ಕೊಡುವುದು ಅತ್ಯಗತ್ಯವೆಂಬದೂ ಈ ಬಗ್ಗೆ ಇಂಡಿಯಾ ಸರಕಾರದವರು ಈ ಮೊದಲೇ ಆಲೋಚಿಸಿರುವುದರಿಂದ ಬಡ ಉಪಾಧ್ಯಾಯರನ್ನು ಏಳಿಗೆಗೆ ತರುವರೆ ವಿಳಂಬ ಮಾಡಕೂಡದೆಂಬದೂ ಸರ್ ಬೆಂಜಮಿಾನ್ ರೋಬರ್ಟ್ಸನರ ವಾದವಾಗಿರುವುದು.

~~~~~

ಇದೇ ತಾ ೪ರಲ್ಲು ಗುಂಟೂರು ಡಿಸ್ಟ್ರಿಕ್ಟ್ ಕನ್ಪರೆನ್ಸ್ ಎಂಬ ಸಭೆಯು ರಾ| ಬವಾನಾಚಾರ್ಯರವರ ಅಧ್ಯಕ್ಷತೆಯಲ್ಲಿ ಕೂಡಿ ಒಂದಿರುವುದು ಈ ಸಭೆಯಲ್ಲಿ ಆ ಜಿಲ್ಲೆಗೆ ಅಗತ್ಯವಾಗಿ ಬೇಕಾದವುಗಳ ಕುರಿತು ಚರ್ಚೆಗಳು ನಡೆದು ಬಾಷಣಗಳು ಕೊಡಲ್ಪಟ್ಟವು

~~~~~

ಮೈಸೂರು ಕೋಲಾರ ಚಿನ್ನದ ಗಣಿಯಲ್ಲಿ ತಾ ೫ರಲ್ಲು ಒಂದು ಅವಗಡವು ಸಂಬವಿಸಿತು ಈ ಅವಗಡದಲ್ಲಿ ಇಬ್ಬರು ಮೃತಪಟ್ಟರು ೧೨ ಮಂದಿ ಪಾಯ ಪೊಡೆದು ಆಸ್ಪತ್ರಿಗೆ ವೈಯಲ್ಪಟ್ಟರು

~~~~~

ಮೈಸೂರು ಸಂಸ್ಥಾನದ ಚೀಪ್ ಜಡ್ಜರಾಗಿದ್ದು ಈಚೆಗೆ ತಾನೇ ಕೆಲಸ ನಿವೃತ್ತರಾದ ಸರ್. ಎಸ್ ಇಸ್ಮೆಯುವರು ಉದಕ ಮಂಡಲದಲ್ಲಿ ತಾ. ೮ರಲ್ಲು ವಿಧಿವಶರಾದರು. ಕೆಲವು ತಿಂಗಳುಗಳಿಂದ ಇವರ ದೇಹಸ್ಥಿತಿಯು ನೆಟ್ಟಗಿಲ್ಲದಿದ್ದರೂ ಇಷ್ಟು ಬೇಗನೇ ಕಾಲವಾಗುವರೆಂದು ಯಾರೂ ಬಾವಿಸಿರಲಿಲ್ಲ ಈಚೆಗೆ ಇವರು ಒನರರಿ ಬೆಂಚಿನ ಚೇಯರ್ಮೇನರಾಗಿ ನೇಮಿಸಲ್ಪಟ್ಟಿದ್ದರು ನೀಲಗಿರಿ ಪುಸ್ತಕ ಬಂಡಾರದ ಪ್ರೆಸಿಡೆಂಟರಾಗಿಯೂ ಸ್ಥಳಿಕ ಫ್ರೆಂಡ್ ಇನ್ ನೀಡ್ ಸೊಸ್ಯಾಟಿಯ ಚೇಯರ್ಮೇನರಾಗಿಯೂ ಸೈಂಟ್ ಬಾರ್ತಲೋಮಿಯ ಆಸ್ಪತ್ರಿ ಕಮಿಟಿಯ ಮೆಂಬರರಾಗಿಯೂ ಇದ್ದು ಉದಕ ಮಂಡಲದಲ್ಲಿ ಜನಪ್ರೀತರಾಗಿದ್ದರು.

~~~~~

ದಕ್ಷಿಣ ಕನ್ನಡ.

~~~~~

ನೋಟೀಸು.

ದೇವಪ್ಪ ಕರ್ಣಿಕ ರಸ್ತೆ ಬಿ. ಜಿ. ಎಂ ಬ್ರಾಹ್ಮಣ ಗರ್ಲಸ್ಕೂಲಿನ ಎದುರಿನ ಮನೆಯಲ್ಲಿದ್ದ ನಮ್ಮ ಆಫೀಸನ್ನು ಬ್ರಿಮೊ ಬಿಲ್ಡಿಂಗ್ಸ್‌ನ ಮಾಳಿಗೆಯಲ್ಲಿ ವರ್ಗಾಯಿಸಲಾಗಿರುತ್ತದೆ ಗ್ರಹಕರು ದಯವಿಟ್ಟು ಅಲ್ಲಿಗೆ ದಯಮಾಡಿ ನಮ್ಮನ್ನು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ

Y Rama Rao & Co,
Opticians Mangalore

~~~~~

ವಿಟ್ಲ —ವಿಟ್ಲ ಕಸಬೆಯಲ್ಲಿರುವ ಫಲಮಾರ ನರಸಿಂಹ ಪೈ ಎಂಡ್ ಬ್ರದರ್ಸರವರ ಮನೆಗೆ ತಾ ೬ನೇ ರಾತ್ರಿ ಸುಮಾರು ೩ ಘಂಟೆಗೆ ಬೆಂಕಿತಾಗಿ ಸುಮಾರು ಗೇರುಬೀಜ ವಗೈರೆ ೭೫೦ ರೂಪಾಯಿಯ ಸಾಮಾನುಗಳು ಬೆಂಕಿಯ ಪಾಲಾದವು ಅದರ ಲಗ್ತು ಇರುವ ಇನ್ನೊಂದು ಮನೆಗೆ ಸಹ ಬೆಂಕಿ ತಾಗಿಯದೆ ಎಷ್ಟು ಪ್ರಯತ್ನ ಪಟ್ಟಾಗ್ಯೂ ಬೆಂಕಿ ಆರಿಸುವರೆ ಆಗಲಿಲ್ಲ

ಇಲ್ಲಿ ಸುಮಾರು ವರ್ಷಗಳಿಂದ ಪಟೇಲರ ಕೆಲಸವನ್ನು ನೋಡುತ್ತಿದ್ದ ಕಲಂಜಿ ರಾಮಪ್ಪಯ್ಯನವರು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟದ್ದರಿಂದ ತುಂಬಾ ವ್ಯಸನ ಪಡುತ್ತೇವೆ ಅವರ ಬದಲಿಗೆ ಸುಂದರ ಬಟ್ಟಯವರು ಮೊಕರೂರು ಆಗಿದ್ದಾರಾಗಿ ಕೇಳುತ್ತೇವೆ ಇವರು ಸಹ ಹಿಂದಿನವರಂತೆಯೇ ತಮ್ಮ ಕೆಲಸದಲ್ಲಿ ನ್ಯಾಯಪರರಾಗಿ ಇರುವರೆಂತ ನಂಬುತ್ತೇವೆ

~~~~~

ಬೊಳ್ಮ —ಮಳೆ ಗರೆಯಲು ಪ್ರಾರಂಬಿಸಿತು ಒಕ್ಕಲಿಗರೆಲ್ಲಾ ತಂತಮ್ಮ ವೃತ್ತಿಯಲ್ಲಿ ನಿರತರಾಗಿರುವರು. ಪರಂತು, ಇಲ್ಲಿಯ ಬೇಸಾಯ ವೃತ್ತಿಯಲ್ಲಿಲ್ಲದ ಕೆಲವರು ಸ್ವಲಾಬ ಚಿಂತನೆಯಿಂದ ಆಡುಗಳ ಹಿಂಡನ್ನು ಬೆಳೆಸಿರುವುದರಿಂದ ಬಿತ್ತದ ಬೀಜವು ಅಂಕುರಿಸುವಾಗಲೇ ಅವು ಈ ಆಡುಗಳ ಪಾಲಾಗುತ್ತಿವೆ ಹಿಂದಿನ ಕಾಲದಲ್ಲಿ ಅಗೆಗೆ ಹುಳ ಬಿದ್ದು ನಾಶವಾಗುವ ಸಂಬವವಿತ್ತು ಪರಮಾತ್ಮನು ಈ ರೋಗವನ್ನು ಈ ಕಾಲ ದೂರಮಾಡಿದರೂ ಆಡುಗಳ ಉಪಟಳವನ್ನು ನಿಲ್ಲಿಸುವ ಬಗೆಯೇ ತೋರದು ಮಿಶ್ಯನ್ ಬೂಮಿಯಲ್ಲಿ ಆಡುಗಳನ್ನು ಸಾಕಿದವರನ್ನು ಒಕ್ಕಲು ತೆಗೆಯಿಸಲೇ ಬೇಕೆಂಬ ನಿಯಮವಿರುತ್ತಾ ಈಗ ಆಡುಗಳನ್ನು ಸಾಕುತ್ತಿರುವವರನ್ನು ಯಾಕೆ ಒಕ್ಕಲು ತೆಗೆಯಿಸಿ ನಮ್ಮಂತಹ ಬಡ ರೈತರನ್ನು ಈ ಹಾವಳಿಯಿಂದ ಕಾಪಾಡಬಾರದು?

~~~~~

ಮಂಗಳೂರು

~~~~~

ಇಲ್ಲಿಯ ಹಂಪನಕಟ್ಟೆಯ ಬ್ರೇಂಚ್ ಪೋಸ್ಟಾಫೀಸಿನಲ್ಲಿ ಟೆಲಿಗ್ರಾಫ ಶಾಖೆಯು ತೆರೆಯಲ್ಪಟ್ಟಂದಿನಿಂದ ಎರಡು ಕೆಲಸಗಳನ್ನೂ ಒಬ್ಬ ಸಬ್ ಪೋಸ್ಟಮಾಸ್ಟರರೇ ಮಾಡುತ್ತಿದ್ದುದರಿಂದ ಅನೇಕಾವೃತ್ತಿ ಚೀಟು ವಗೈರೆ ಕೊಂಡುಕೊಳ್ಳುವ ಯಾ ರಿಜಿಸ್ಟ್ರಿ ಮನಿಆರ್ಡರು ಮಾಡುವಂಥವರು ಒಂದೆರಡು ಗಂಟೆಗಳ ಕಾಲ ಪೋಸ್ಟಾಫೀಸಿನಲ್ಲೇ ಕಾಯುವಂತಹ ಸಂಧರ್ಭ ಬಂದೊದಗುತ್ತಿತ್ತು. ಈ ವಿಚಾರವನ್ನು ಇಲಾಖೆಯವರು ಮನಸ್ಸಿಗೆ ತಂದುಕೊಂಡು ಕಳೆದವಾರದಿಂದ ಪೋಸ್ಟು ಮಾಸ್ಟರರಿಗೆ ಸಹಾಯವಾಗಿ ಒಬ್ಬ ಲೇಡಿ ಕ್ಲಾರ್ಕಳನ್ನು ನೇಮಿಸಿದುದ್ದರಿಂದ ಪೋಸ್ಟು ಮಾಸ್ತರರು ಟೆಲಗ್ರಾಫ್ ಬಿಡುವ ಕೆಲಸದಲ್ಲಿರುವ ವೇಳೆ ರಿಜಿಸ್ಟ್ರಿ ಮೊದಲಾದುದ್ದನ್ನು ಮಾಡಲು ಹೋಗುತ್ತಿರುವ ಜನರಿಗಿದ್ದ ಅಡಚಣೆಯನ್ನು ಹೋಗಲಾಡಿಸಿದಂತಾಯಿತು. ಪರಂತು, ಪೋಸ್ಟು ಆಫೀಸಿಗೆ ಹತ್ತುವ ಮೆಟ್ಲಿನ ಅರ್ಧ ಭಾಗವನ್ನು ಕಡಿದು ಬಿಟ್ಟದ್ದರಿಂದ ಆಫೀಸಿನ ಮೇಲಕ್ಕೆ ಹತ್ತುವುದು ಬಹಳ ಕಷ್ಟಸಾಧ್ಯವಾಗಿರುವುದು.

ಹಂಪನಕಟ್ಟೆಯಲ್ಲಿ ನೂತನವಾಗಿ ಕಟ್ಟಿಸಿದ ಸ್ಮಾಲ್ ಕಾಸ್ ಕೋರ್ಟು ಒಂದೆರಡು ವಾರಗಳ ಹಿಂದೆ ತೆರೆಯಲ್ಪಟ್ಟಿರುವುದು ಪರಂತು, ಈ ಕೋರ್ಟು ತುಂಬಾ ವೈಲಿಗೆ ತುಂಬಿಕೊಂಡಿದ್ದು ಕಕ್ಷಿಗಾರರು ಒಂದು ನಿಲ್ಲಲಿಕ್ಕಾಗಿ ಕಟ್ಟಿಸಿದ ಹೊರ ಪಡಸಾಲೆಯು ಹೊಲಸಾಗಿರುವುದರಿಂದ ತ್ವರ್ಯದಲ್ಲಿ ಇದನ್ನು ಶುದ್ಧ ಮಾಡಿಸುವುದು ವಿಹಿತವಾಗಿರುವುದು

ಜಪ್ಪಿನ ಪಿ| ಜೆ. ಎಮ್ ಫ್ರೀತರ ಮಗ ಜೊನ್ ಪ್ರೀತರು ತನ್ನಲ್ಲಿ ಕೆಲಸ ಮಾಡುತ್ತಿದ್ದ ಕಣ್ಣಮೇಸ್ತ್ರಿಯು ತನ್ನನ್ನು ಬೆದರಿಸಿದನೆಂಬದಾಗಿ ಇ ಪಿ ಕೋಡಿನ ೫೦೬ನೇ ಪ್ರಕರಣದ ಮೇಲೆ ಮಂಗಳೂರು ಡಿವಿಜನಲ್ ಆಫೀಸರರಲ್ಲಿ ಮಾಡಿದ ಫಿರ್ಯಾದಿಯ ತನಕಿ ನಡೆಯಿತು ಮುದ್ದೈಯು ಸುಳ್ಳು ಫಿರ್ಯಾದಿ ಮಾಡಿದ್ದಾಗಿ ಡಿವಿಜನಲ್ ಆಫೀಸರರು ಅಭಿಪ್ರಾಯ ಪಟ್ಟು ಮುದ್ದೈಗೆ ಕ್ರಿ ಪ್ರೊ ಕೋಡಿನ ೨೫೦ನೇ ಕಲಂ ಪ್ರಕಾರ ರೂ ೧೦ ಜುರುಮಾನೆ ವಿದಿಸಿ ಮುದ್ದೈಯಾಲೆಯನ್ನು ಖುಲಾಸು ಪಡಿಸಿದರು.

ಗಾಬ್ರಿ ಪರೇರ ಎಂಬವನು ದಾವಿದ್ ಸೋಜನಿಗೆ ಚೂರಿ ಹಾಕಿದ್ದಾಗಿ ಮಂಗಳೂರು ಟೌನ್ ಮೆಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಮಾಡಲ್ಪಟ್ಟು ೩ ತಿಂಗಳ ಸಜಾ ಹೊಂದಿದ್ದನು ಈ ತೀರ್ಮಾನದ ಮೇಲೆ ಆಪಾದಿತನು ಡಿವಿಜನಲ್ ಆಫೀಸರರಲ್ಲಿ ಅಪೀಲು ಮಾಡಿಕೊಂಡಲ್ಲಿ ಡಿವಿಜನಲ್ ಆಫೀಸರರು ತಾ ೪ರಲ್ಲು ಅಪೀಲು ತನಕಿ ನಡಿಸಿ ಹಿಂದಿನ ಶಿಕ್ಷೆಯನ್ನೇ ಕಾಯಂ ಮಾಡಿದರು.

ಕಂಕನಾಡಿಯಲ್ಲಿ ಇರುವ ಬೆರ್ನಾಡ ಲೋಬ ಮತ್ತು ಮರಿಯಾನ ಲೋಬ ಎಂಬವರು ವಿಜಿತ್ತೊರು ಸೋಜಗೆ ಚೂರಿ ಹಾಕಿದ್ದರೆಂಬದಾಗಿ ಆಪಾದಿಸಲ್ಪಟ್ಟು ಮಂಗಳೂರು ಟೌನ್ ಮೇಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿ ಮಾಡಲ್ಪಟ್ಟಿದ್ದರು ಟೌನ್ ಮೇಜಿಸ್ಟ್ರೇಟರು ೧ನೇ ಆಪಾದಿತನಿಗೆ ೬ ತಿಂಗಳ ಸಜಾ ೨ನೇ ಆಪಾದಿತನಿಗೆ ೩ ತಿಂಗಳ ಸಜಾ ವಿದಿಸಿದ್ದರು ಆಪಾದಿತರು ಡಿವಿಜನಲ್ ಆಫೀಸರರಲ್ಲಿ ಮಾಡಿಕೊಂಡ ಅಪೀಲು ಇದೇ ತಾ ೮ರಲ್ಲು ತನಕಿಯಾಗಿ ಹಿಂದಿನ ಶಿಕ್ಷೆಯೇ ಕಾಯಂ ಆಯಿತು

ಇಲ್ಲಿಯ ಸೆಶ್ಯನ್ಸ್ ಕೋರ್ಟಿನ ಶೆಕೆಕಾಲದ ರಜೆಯು ತೀರಿ ಇದೇ ತಾ. ೮ರಿಂದ ಸೆಶ್ಯನ್ಸ್ ಕೋರ್ಟು ತೆರೆಯಲ್ಪಟ್ಟಿರುವುದು.

ಹ್ಯಾಕೋರ್ಟ ವಕೀಲ ರಾ| ಗೊಲ್ಲರಕೇರಿ ಕೃಷ್ಣರಾಯರ ಮಗಳು ರಾ|| ಬೆನಗಲ ಸಂಜೀವರಾಯರ ಪತ್ನಿ ಶ್ರೀಮತಿ ಪದ್ಮಾಬಾಯಿಯವರು ಅಲ್ಹಾಹಬಾದ ಯುನಿವರ್ಸಿಟಿಯ ಮೆಟ್ರಿಕ್ಯುಲೇಶನ್ ಪರೀಕ್ಷೆ ಪಾಸಾದರು.

ಕುಮಾರಮಂಗಲದ ಜಮೀನ್ದಾರಿಣೀ ಶ್ರೀಮತಿ ರಾಧಾಬಾಯಿಯಮ್ಮನವರು ಬಿ. ಎ. ಪರೀಕ್ಷೆಯಲ್ಲಿ ಪೂರ್ಣವಾಗಿ ತೇರ್ಗಡೆ ಹೊಂದಿದರು.

ಇಲ್ಲಿಯ ಗವರ್ನರ್ಮೆಂಟ ಕಾಲೇಜಿಯ ಮುಂದುಗಡೆ ಇರುವ ಆರ್ಯನ್ ವೀವಿಂಗ್ ಕಂಪೆನಿಯ ವರಾರವನ್ನು ಮುನಿಸಿಪಾಲಿಟಿಯವರು ಕ್ರಯಕ್ಕೆ ಪಡಕೊಂಡು ಈ ವರಾರದಲ್ಲಿ ಹೆಂಗಸರ ಮತ್ತು ಮಕ್ಕಳ ಆಸ್ಪತ್ರಿಯನ್ನು ಕಟ್ಟಿಸಲಿಕ್ಕಿದ್ಧಾರೆಂದು ತಿಳಿಯುತ್ತೇವೆ.

ಇಲ್ಲಿ ಹಿಂದೆ ಡಿಸ್ಟ್ರಿಕ್ಟ್ ಮುನ್ಸೀಫರಾಗಿದ್ದ ರಾ. ಪಿ. ಕೃಷ್ಣರಾಯರು ಇಲ್ಲಿಯ ಸಬ್ ಜಡ್ಜರಾಗಿ ನೇಮಿಸಲ್ಪಟ್ಟಿರುವರು.

ಡಿಸ್ಟ್ರಿಕ್ಟ್ ಬೋರ್ಡಿನವರಿಂದ ಬೆಳ್ಮಣ್ ರಸ್ತೆ ರಿಪೇರಿ ಬಗ್ಯೆ ರೂ ೪೦೦; ಸುಬ್ರಮಣ್ಯ ರಸ್ತೆಗೆ ರೂ ೧೧೭೦, ಮಂಗಳೂರು ಕುಡ್ಲಮೊಗರು ರಸ್ತೆಗೆ ರೂ ೩೫೦, ಗುಂಡ್ಯ ಸುಬ್ರಮಣ್ಯ ರಸ್ತೆಗೆ ರೂ ೭೫೦, ಜಾಲ್ಸೂರು ಸುಬ್ರಮಣ್ಯ ರಸ್ತೆ ವೃದ್ಧಿಗೆ ತರುವರೆ ರೂ ೧೦೦೦; ಪಣಂತಾಡಿ ರಸ್ತೆಗೆ ರೂ ೫೭೫, ಮೂಡಬಿದ್ರೆ ನಾರಾವಿ ರಸ್ತೆಗೆ ರೂ ೭೦೦; ಕಾರ್ಕಳ ಪಡುಬಿದ್ರೆ ರಸ್ತೆಗೆ ರೂ ೪೫೦ ಸೆಂಕ್ಷನ್ ಆಗಿರುವುದು

ಕೆನರಾ ಹ್ಯಾಸ್ಕೂಲಿನ ಆಡಳಿತೆ ಬೋರ್ಡ್ ಮೆಂಬರರಾಗಿ ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನ ಮೊಕ್ತೇಸರರಾದ ಮ. ರಾ. ರಾ ಸಾಹುಕಾರ ರಂಗಪ್ಪೈಗಳವರು ನೇಮಿಸಲ್ಪಟ್ಟಿರುವದಾಗಿ ತಿಳಿಯುತ್ತೇವೆ

ಇಲ್ಲಿಯ ಮುನಿಸಿಪಾಲಿಟಿಯು ಪ್ಲೇಗ್ ಸಿಬಂದಿಯನ್ನು ತಗ್ಗಿಸುವ ಏರ್ಪಾಡು ನಡೆದಿರುವುದು. ಕೂಲಿಯವರಲ್ಲಿ ೧೦ ಮಂದಿಯನ್ನೂ, ಇಬ್ಬರು ಸರ್ಕಲ್ ಇನ್ಸ್‌ಪೆಕ್ಟರರನ್ನೂ ಒಬ್ಬ ಪಾಸ್‌ಪೋರ್ಟ್ ಕ್ಲಾರ್ಕನನ್ನೂ, ತೆಗೆಯುವರೆಂದು ತಿಳಿಯುತ್ತೇವೆ.

ಇದೇ ತಾ ೭ನೇ ಆದಿತ್ಯವಾರ ಚುಡ್ಪೆಗಲ್ಲಿ ಜೈನ ಬಸ್ತಿ ಬಳಿ ಇರುವ ಶಾಲೆಯಲ್ಲಿ ಕೊಲ್ಹಾಪುರ ಉಸ್ತಾದ ಜಿನದೇವ ಇವರ ಶಿಷ್ಯ ಜಿನದಾಸ ಪೈಲವಾನರಿಗೂ ಶಾಹೂರದ ಉಸ್ತಾದ ಸಿಲೇಮಾನ್ ಇವರ ಶಿಷ್ಯ ಕಲ್ಲೂರಾಮ ಪೈಲವಾನರಿಗೂ ಪಂದ್ಯವು ಜರಗಿತು. ಈ ಪಂದ್ಯದಲ್ಲಿ ಕೊಲ್ಹಾಪುರ ಪೈಲವಾನ ಜಿನದಾಸರವರು ಗೆದ್ದು ರಾ. ಕಲ್ಲಮುಂಡ್ಕೂರು ನೇಮಿರಾಜ ಪಟಿವಾಳರಿಂದ ರೂ. ೫೦ ಬಹುಮಾನ ಪಡೆದರು

ಕಲೆಕ್ಟರ ಆಪೀಸಿನ ಆಕ್ಟಿಂಗ್ ಹೆಡ್ ಅಡಿಟರಾಗಿರುವ ರಾ| ಪಿ. ಮಹಾಬಲೇಶ್ವರಯ್ಯ ಬಿ ಎ. ರವರು ಇದೇ ತಿಂಗಳ ತಾ. ೨ರಿಂದ ೨೩ ದಿವಸಗಳ ಪ್ರಿವಿಲೆಜ್ ರಜೆ ಮತ್ತು ೫ ತಿಂಗಳು ೭ ದಿವಸಗಳ ಖಾಸಗಿ ರಜೆಪಡಕೊಂಡಿರುವುದರಿಂದ ರಾ| ಎಸ್ ರಾಮಕೃಷ್ಣ ಕಾಮತರು ಇವರ ಬದಲಿಗೆ ನೇಮಿಸಲ್ಪಟ್ಟಿರುವರು

ಹೊಸಬೆಟ್ಟು ಗ್ರಾಮದ ಹಸನೆ ಬ್ಯಾರಿ ಮಗ ಪಕೀರ ಬ್ಯಾರಿ ಮತ್ತು ಹೊನ್ನೆಕಟ್ಟೆ ಮೊಯ್ದಿನೆಬ್ಯಾರಿ ಮಗ ಮಾಹದಿ ಬ್ಯಾರಿ ಮೊದಲಾದ ೫ ಜನರನ್ನು ದುರ್ನಡತೆಯ ಬಗ್ಗೆ ಪೋಲೀಸಿನವರು ಚಾರ್ಜುಮಾಡಿ ವಿಚಾರಣೆಗೆ ಗುರಿಮಾಡಿದ್ದರು.. ಮೇಜಿಸ್ಟ್ರೇಟರು ೧-೨ನೇ ಆಪಾದಿತರಿಂದ ೨ ವರ್ಷಗಳ ಜಾಮಿನು ಪಿತ್ತೆ ತಕ್ಕೊಂಡು ಉಳಿದವರನ್ನು ಖುಲಾಸುಪಡಿಸಿದರು.

ಸುಬ್ರಾಯಾಚಾರಿ ಮತ್ತು ಲಕ್ಷ್ಮಣಾಚಾರಿ ಕೂಡಾ ಎರಡು ಜನರು ಚಕ್ರಸರ ಮಾಡಿಕೊಡುವುದಾಗಿ ಗಸ್ಪಾರ್ ಆಲ್ವರೀಸರಿಂದ ಲ ಪವನು ಮತ್ತು ಮಜೂರಿ ಬಗ್ಯೆ ರೂ. ೫ ತಕ್ಕೊಂಡು ನಂತರ ದಗೆ ಮಾಡಿದ್ದರೆಂದು ಇ. ಪಿ ಕೋಡಿನ ೪೦೭ನೇ ಪ್ರಕರಣದ ಮೇಲೆ ಸ್ಪೇಶನರಿ ಮೇಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರು. ಆದರೆ ರುಜುವಾತಾಗದ್ದರಿಂದ ಮೇಜಿಸ್ಟ್ರೇಟರು ಮುದ್ದೈಯಾಲೆಯರನ್ನು ನಿನ್ನೆಯ ದಿನ ಖುಲಾಸುಪಡಿಸಿದರು.

ರಜೆಯಮೇಲಿದ್ದ ಇಲ್ಲಿಯ ಡಿವಿಜನಲ್ ಆಫೀಸರರಾದ ರಾವ್‌ಬಹದ್ದೂರ್ ಸಿ ಗೋಪಾಲನ್ನಾಯರರ ರಜೆ ತೀರಿದ್ದರಿಂದ ಕಳದ ಮಂಗಳವಾರ ಮೆ| ಪ್ರಿಸ್ಟ್ಲೀ ದೊರೆಗಳವರಿಂದ ಚಾರ್ಜು ತಕ್ಕೊಂಡರು.

ಪಿ. ಪಿ ಮಿಶ್ಯನ್ ಹ್ಯಾಸ್ಕೂಲು ಮತ್ತು ಕೆನರಾ ಹ್ಯಾಸ್ಕೂಲಿನ ಶಿಖಕಾಲದ ರಜೆಯು ತೀರಿ ಇದೇ ಕಳದ ಸೋಮವಾರದಿಂದ ಶಾಲೆಯ ಕೆಲಸವು ಪುನಃ ತೊಡಗಿರುವುದು.

ಕಲೆಕ್ಟರ ಆಫೀಸಿನ IV ಅಕೌಂಟೆಂಟರಾಗಿದ್ದು ಈಗ ಮಂಗಳೂರು ಡಿವಿಜನಲ್ ಆಪೀಸಿನ ಆಕ್ಟಿಂಗ್ II ಕ್ಲಾರ್ಕರಾಗಿರುವ ರಾ| ಎ. ತಿಮ್ಮಪ್ಪಪೂಂಜರು ೨೭ ದಿವಸಗಳ ಪ್ರಿವಿಲೆಜ್ ರಜೆ ತಕ್ಕೊಂಡಿರುವುದರಿಂದ ಮಂಗಳೂರು ತಾಲೂಕು ಆಫೀಸಿನ ೭ನೇ ಕ್ಲಾರ್ಕ ರಾ| ಎಸ್. ಯು ಕೃಷ್ಣರವರು ಡಿವಿಜನಲ್ ಆಪೀಸಿನ ಆಕ್ಟಿಂಗ್ ೨ನೇ ಕ್ಲಾರ್ಕರಾಗಿಯೂ ಬಂಟ್ವಾಳ ಡ್ಯುಪಿಟಿ ತಹಸೀಲದಾರರ ಆಫೀಸಿನ ಆಕ್ಟಿಂಗ್ ಹೆಡ್‌ಕ್ಲಾರ್ಕರಾಗಿರುವ ರಾ| ಎ ತಿಮ್ಮಪ್ಪನವರು ತಾಲೂಕ್ ಆಪೀಸಿನ ೭ನೇ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು.

ಕಳದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೧ ಪ್ಲೇಗು ಮರಣವಿತ್ತು

ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿ.

ಮೊಟೋರ್ ಗಾಡಿಗಳ ಮಾಹಿತಿದಾರರಾದ ಮೆ| ರೋಬಿನ್ಸನ್ ವಾರ್ಡರವರಿಂದ ಮಾಡೋಣಾಗಿ ಕಂಪೆನಿಯ ಮೆನೇಜಿಂಗ್ ಏಜಂಟರಿಂದ ಪ್ರಕಟಿಸಲ್ಪಟ್ಟ ಈ ಕಂಪೆನಿಯ ಆದಾಯ ವೆಚ್ಚಗಳ ಅಂದಾಜಿನ ಸಂಕ್ಷೇಪ ವೃತ್ತಾಂತವನ್ನು ಕಳದ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಮೆನೇಜಿಂಗ್ ಏಜಂಟರುಗಳ ಈ ಪ್ರಕಟಣೆಗೆ ವಿರೋಧವಾಗಿ ಇದೇ ಕಂಪೆನಿಯ ಪಾಲುಮಾಲಿಕರೊಬ್ಬರು ಕೆಲವು ಆಕ್ಷೇಪಗಳನ್ನು ನಮಗೆ ತೋರಿಸಿಕೊಟ್ಟಿರುವುದರಿಂದ ಇವುಗಳೇ ನೆಂಬುದನ್ನು ಈ ಪಾಲುಮಾಲಿಕರ ಅಪೇಕ್ಷೆಯ ಪ್ರಕಾರ ಇನ್ನೊಂದು ಸಂಚಿಕೆಯಲ್ಲಿ ಪ್ರಕಟಿಸುವೆವು

~~~~~

ಇಂಡಿಯಾ ದೇಶದಲ್ಲಿ ನಡೆದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮುದಾಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯಾವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ. ತೂಕದ ಸೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0—4—0, ಇವಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,

ಸುಗಂಧಕಾರಿ, ಮೈಸೂರು.

500 ರೂಪಾಯಿಗಳ ಬಹುಮಾನ!!

ಲೋಕ ಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬು ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಪ್ರಿಯ ಸಹೋದರರೇ, ನಿಮ್ಮ ರಕ್ತವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರಾಗಿರುವ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳ [illegible] ದುಃಖಿಸುವರು. ಈ "ಪಂಜಾಬು ಸಾಲಾಮಿಸ್ರೀ ಮುರಬ್ಬಾ" [illegible] ಕೈ, ಕಾಲು, ಮತ್ತು [illegible]ದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, [illegible] ಆಗಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೈಕಾಲು [illegible], ತಲೆಯ ನೋವೂ ಇವುಗಳೆಲ್ಲವೂ ಪಂಜಾಬು ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವು, [illegible] ಧಾತುವನ್ನು ಶೇಖರಿಸುವುದು, [illegible] ನೋವು ಸ್ವಲ್ಪ ಮಾತ್ರವೂ ಇರಲಾರದು. ಕೆಲಸಮಾಡುವುದರಲ್ಲಿ ಉತ್ಸಾಹವೂ, ಧೈರ್ಯವೂ, ಬುದ್ಧಿ ಕುಶಲತೆಯೂ, ಶರೀರ ಕಾಂತಿಯೂ ಉಂಟಾಗುತ್ತದೆ. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ [illegible] ಮತ್ತು [illegible] ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ [illegible]ಯನ್ನು ನಾಶಪಡಿಸುವುದು. ಶ್ವಾಸಕೆಮ್ಮುಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರಿ [illegible] ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು [illegible] ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ [illegible] ಬಹಳವಾಗಿ ತಿನ್ನುವರು. [illegible] ಕಾಬೂಲ್ ಕಾಂದಹಾರ್ ದೇಶದ [illegible] ಮನುಷ್ಯರಿಗೆ ನಮ್ಮ ದೇಶದ ನಾಲ್ಕು ಜನಗಳು [illegible] ಸಮಾನವಾಗಲಾರರು. ಅನೇಕರು [illegible], [illegible] ಇವುಗಳನ್ನು ಪಕ್ಕ ಮಾಡಿಟ್ಟುಕೊಂಡು ಸಾಲಾಮಿಸ್ರೀ [illegible] ಮಾರಾಟ ಮಾಡುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ [illegible] ಬರುತ್ತೆ.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರೀಯಲ್ಲ ವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವದು. [illegible] ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ [illegible] ಪಡೆಯಬಹುದು. 1 [illegible] ಮುರಬ್ಬಾದ ಡಬ್ಬಿ 1ಕ್ಕೆ ರೂ. 1 8-0. [illegible] ಅನುಪಾನ ಪತ್ರಿಕ [illegible] ಇರುತ್ತೆ.

1 ಧಾತುಪುಷ್ಟಿ ಚೂರ್ಣ:—[illegible] ಡಬ್ಬಿ 1ಕ್ಕೆ 0—[illegible]—0.
2 ಹೋಪನಾಶಕ [illegible] ವೃದ್ಧಿಕರ [illegible] ತೈಲವು:—ಸೀಸಾಯಿ 1ಕ್ಕೆ 0-2-0.
3. ವಾತ ನಿವಾರಣ ತೈಲವು:—ಕ್ರಯ ಸೀಸಾಯಿ 1ಕ್ಕೆ 0—4—0.
4. ಹೊಟ್ಟೆ ನೋವಿಗೆ ಔಷಧ:—ಸೀಸಾಯಿ 1ಕ್ಕೆ 0—4—0.
5. ಕೆಮ್ಮಿನ ರೋಗಕ್ಕೆ ಔಷಧ:—ಕ್ರಯ ಸೀಸಾಯಿ 1ಕ್ಕೆ 0—4—0.
6. ವ್ರಣಕ್ಕೆ ಔಷದ:—ಕ್ರಯ ಡಬ್ಬಿ 1ಕ್ಕೆ 0 4 0
7. ಆಶ್ಚರ್ಯಕರವಾದ ಭೇದಿ ಮಾತ್ರೆಗಳು:—ಕ್ರಯ 0—4—0.
8 ತಲೆನೋವಿಗೆ ತೈಲವು.—ಕ್ರಯ ಸೀಸಾಯಿ 1ಕ್ಕೆ 0—2—6
9 ಉಷ್ಣಕಾರಕಕ್ಕೆ ಮಾತ್ರೆಗಳು:—ಉಷ್ಣ ಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, [illegible] ಗುಣವಾಗುವದು. ಕ್ರಯ ಸೀಸಾಯಿ 1ಕ್ಕೆ 1—0—0.
10. ಮೂಲವ್ಯಾಧಿಗೆ ಔಷಧ:—ಮಲದ್ವಾರದಲ್ಲಿ ರಕ್ತ ಸ್ರಾವವೂ, ಮತ್ತು ಮೊಳಕೆಯು [illegible] ಪೂರ್ಣವಾಗಿ ಗುಣಮಾಡುವದು. ಕ್ರಯ ಸೀಸಾಯಿ 1ಕ್ಕೆ 0—8—0
ಕಣ್ಣಿಗೆ ಸುರ್ಮಾ.—ಕ್ರಯ ಸೀಸಾಯಿ 1ಕ್ಕೆ 0—4—0.
12. ದಂತ ಚೂರ್ಣವು:—ಕ್ರಯ ಡಬ್ಬಿಗೆ 0—1—3.
13 ಕೂದಲು ಬೆಳೆಯುವ ಎಣ್ಣೆ —ಕ್ರಯ ಸೀಸಾಯಿ 1ಕ್ಕೆ 0—4—0.
14. ಆಶ್ಚರ್ಯಕರವಾದ ದ್ರಾವಕ:—ಇದನ್ನು ಸ್ವಲ್ಪ ಮೂಸಿನೋಡುವುದರಿಂದ 1 ನಿಮಿಷದಲ್ಲಿ ತಲೆನೋವು [illegible]. ಕ್ರಯ ಸೀಸಾಯಿ 1ಕ್ಕೆ 0—4—0.
15. ಕಜ್ಜಿ ಮತ್ತು ಹುಳುಕಡ್ಡಿ ಔಷದ:—ಕ್ರಯ ಸೀಸಾಯಿ 1ಕ್ಕೆ 0—4—0.
16 ಆಶ್ಚರ್ಯಕರವಾದ ಪೆನ್ಸಿಲ್:—ಈ ಪೆನ್ಸಿಲಿನಿಂದ ಕಾಗದದ ಮೇಲೆ ಬರೆಯುವಾಗ ಏನೂ ಕಾಣುವದಿಲ್ಲ. ನಂತರ ನೀರನ್ನು ಬರೆದ ಕಾಗದದ ಮೇಲೆ ಸವರಿದರೆ ಎಲ್ಲಾ ಅಕ್ಷರಗಳೂ ಚನ್ನಾಗಿ ಕಾಣುವವು. ನೋಡುವವರಿಗೆ ಬಹಳ ಆಶ್ಚರ್ಯಕರವಾಗಿ ಕಾಣುತ್ತೆ. ಕ್ರಯ 0-4-0.
17. ಬಿಳೀ ಕೂದಲನ್ನು ಕರೇ ಕೂದಲನ್ನಾಗಿ ಮಾಡುವ ದ್ರಾವಕ:—ಈ ಔಷಧವನ್ನು ಒಂದಾವರ್ತಿ ಕೂದಲಿಗೆ ಸವರುವದರಿಂದ ಬಹಳ ದಿವಸಗಳವರೆಗೂ ಕರಿಯ ಕೂದಲುಗಳು ಇರುತ್ತೆ. ಕ್ರಯ 1—0—0.

1—0—0 ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ.

ಡಿ. ಮುನ್ನಾಲಾಲ್, ಡಿಲ್ಲೀ ವೈದ್ಯರು,
13 ಹಳೇ ಸಿದ್ದೀಕಟ್ಟೇ, ಬೆಂಗಳೂರು

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು.

ಡಬ್ಬಿ 1ಕ್ಕೆ 0—6—0.
3 ಡಬ್ಬಿಗಳಿಗೆ 1—0—0.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ.

ಪೆಕೆಟ್ 1ಕ್ಕೆ 0—2—0.
ಡಜನ್ 1ಕ್ಕೆ 1—2—0.

ಮೋಹಿನೀ ತೈಲ.

ಕೂದಲುಗಳು ಕಪ್ಪಾಗಿಯೂ, ನಯವಾಗಿಯೂ, ಉದ್ದವಾಗಿಯೂ ಬೆಳೆಯುವವು. ಇದರಲ್ಲಿ ಸ್ಪಿರಿಟು ವಗೈರೆ ಇಲ್ಲಾ.

ಬಾಟ್ಲಿ 1ಕ್ಕೆ 0—12—0.
ಮೂರು ಬಾಟ್ಲಿಗಳಿಗೆ 2—2—0.

ಅಮೃತಾಂಜನ

ತಲೆನೋವು, ವಾತ, ಸಂಧಿವಾತ, ಶಿರೋಭಾರ, ಅರ್ಧಾಂಗವಾಯು, ಶೀತ, ಕೆಮ್ಮು

ಎದೆ ನೋವು, ಸೊಂಟದ ನೋವು, ಕಫ, ಹಲ್ಲು ನೋವು, ಘಾಯ, ಉರಿ, ಮೊದಲಾದ

ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧಿ

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಟ್ಟವು.

ಹಿಂದುಸ್ಥಾನದ ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವುದು.

ಬಾಟ್ಲಿ ಒಂದರ ಕಿಮ್ಮತ್ತು **0-8-0** ಡಜನ್ ಒಂದಕ್ಕೆ **5-4-0** ವಿ. ಪಿ. ಪ್ರತ್ಯೇಕ

ಮಂಗಳೂರಲ್ಲಿ

ಮರ್ಕಂಟಾಯಿಲ್ ಮಿಶನ್ ಬ್ರೆಂಚ್.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ಪರ್ಲ್ಲ ಎಂಡ್ ಸನ್ಸ್.

ಉಡುಪಿ ಮತ್ತು ಕುಂದಾಪುರದಲ್ಲಿ.

ಕೊಟ್ಟಿಕಾರ್ ಬ್ರದರ್ಸ್.
ಕುಮಟೆ ಆರ್. ಪಿ. ಪೈ ಎಂಡ್ ಕಂಪನಿ.

ಅಮೃತಾಂಜನದ ಸೆಂಪಲ್ ಕರಡಿಗೆ ಒಂದಾಣೆಗೆ ಊಲನ್ ಮಾರ್ಟಿನಲ್ಲಿ ದೊರೆಯುವದು.

ಅಮೃತಾಂಜನ ಡಿಪ್ಪೊ,

109 ಫ್ರೇಝರ್ ರೋಡ,

ಮುಂಬಯಿ.

Printed & Published by V. S Kamath at the Mangalore Trading Association's Sharada Press, Mangalore.

Registered No 498 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ 1—4—0. ಟಪ್ಪಾಲು ಹಾಸಲು ಸೇರಿ ರೂ 2—1—0

ಪುಸ್ತಕ VIII | ಮಂಗಳೂರು ತಾ 19ನೇ ಜೂನ್, ಶುಕ್ರವಾರ 1914 | ಸಂಚಿಕೆ 25

ಆಬಾಲವೃದ್ಧರು ಓದುವುದಕ್ಕೆ ತಕ್ಕವಾಗಿಯೂ ಬಹು ಮನೋಹರಗಳಾಗಿಯೂ ಇರುವ ಕನ್ನಡ ಗ್ರಂಥಗಳು.

(ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ. ರಾ। ಬಿ. ರಾಮರಾವ್ ಎಂ. ಎ. ಎಲ್ ಎಲ್ ಬಿ. ಯವರಿಂದ ಕನ್ನಡಿಸಲ್ಪಟ್ಟವು)

೧. ಸತ್ಯರಾಜಾ ಪೂರ್ವದೇಶ ಯಾತ್ರೆಗಳು—ಭಾಗ ೧— ಶ್ರೀಮಾನ್ ಪಾಣೆಮ್ ಸಂಪೂರ್ಣ ಕಥೆ ರಾವ್ ಬಹದ್ದೂರ್ ವಿರೇಶ ಲಿಂಗಂಪಂತಲೆಂಬ ಆಂಧ್ರ ಲೇಖಕ ಶಿರೋಮಣಿಗಳಿಂದ ತೆಲುಗಿನಲ್ಲಿ ಬರೆಯಲ್ಪಟ್ಟ ಬಹು ರಸಭರಿತವಾದ ಕಲ್ಪನಾಕಥೆ ಶುದ್ಧವೂ ಲಲಿತವೂ ಆದ ಕನ್ನಡದಲ್ಲಿ ಪರಿವರ್ತಿತವಾಗಿದೆ ಮೈಸೂರು ಗವರ್ನಮೆಂಟಿನವರಿಂದಲೂ ಕರ್ನಾಟಕ ವಿದ್ವಜ್ಜನರುಗಳಿಂದಲೂ ವಿಶೇಷವಾದ ಪ್ರೋತ್ಸಾಹವನ್ನು ಹೊಂದಿದೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ **ಬೆಲೆ ೮ ಆಣೆ**

೨. ಕೃಷ್ಣಾಕುಮಾರಿ—ಈ ಅದ್ಭುತವಾದ ವಚನ ನಾಟಕವು ಮೂಲ ಬಂಗಾಳಿ ಭಾಷೆಯಲ್ಲಿ ಕವಿಶ್ರೇಷ್ಠ ಮಧುಸೂದನ ದತ್ತರಿಂದ ಬರೆಯಲ್ಪಟ್ಟು ನೂತನವಾಗಿ ಕನ್ನಡಿಸಲ್ಪಟ್ಟದೆ ಆರ್ಯ ಕುಲಾಂಗನೆಯರಿಗೆ ಆದರ್ಶ ಸ್ವರೂಪಳಾದ ಈ ರಜಪೂತ ಕುಮಾರಿಯ ಜಾಜ್ವಲ್ಯವಾದ ಸ್ವದೇಶ ಭಕ್ತಿಯು ವಾಚಕರನ್ನು ಕ್ಷಣಮಾತ್ರದಲ್ಲಿ ತಲ್ಲೀನರನ್ನಾಗಿ ಮಾಡುತ್ತಿದೆ. ಇಂಥ ಉತ್ಕೃಷ್ಟವಾದ ನಾಟಕವು ಕನ್ನಡದಲ್ಲಿ ಬೇರೊಂದು ಇರುವುದು ಸಂದೇಹವು ಉತ್ತಮವಾದ "ಗ್ಲೇಜ್" ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಅಚ್ಚಾಗಿದೆ **ಬೆಲೆ ೧೦ ಆಣೆ.**

೩. ಸದಾಹಾರ ವಿವೇಚನೆ—ಚಿರಸ್ಮರಣೀಯರೂ ಪರಮ ಪೂಜ್ಯರೂ ಆದ ಬ್ರಹ್ಮೀಭೂತ ಶ್ರೀಮದ್ವಿವೇಕಾನಂದ ಸ್ವಾಮಿಯವರ "ಪೂರ್ವ ಮತ್ತು ಪಶ್ಚಿಮ"ವೆಂಬ ದಿವ್ಯವಾದ ಲೇಖನದಿಂದ ಆಹಾರ ವಿಷಯಕವಾದ ಭಾಗಗಳನ್ನು ಮಾತ್ರ ಸಂಗ್ರಹಿಸಿ ಕನ್ನಡಿಸಲಾದ ಈ ಚಿಕ್ಕ ಪುಸ್ತಕದೊಳಗೆ ಅಂತರ್ಗತವಾದ ದಿವ್ಯಾಭಿಪ್ರಾಯಗಳನ್ನು ಆರ್ಯಧರ್ಮಾಭಿಮಾನಿಗಳಾದ ಸಮಸ್ತರೂ ಅಗತ್ಯವಾಗಿ ತಿಳಿದುಕೊಳ್ಳಬೇಕೆಂದು ಸೂಚಿಸುವೆವು **ಬೆಲೆ ೨ ಆಣೆ.**

ನಿತ್ಯ ಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯೋಗವಾದ ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನಂ 0—3—0, ದೇವಪೂಜಾ ಪದ್ಧತಿ 0—3—0, ಋಗ್ವೇದಿ ಬ್ರಹ್ಮಯಜ್ಞವೈಶ್ವದೇವ 0—3—0, ವಾಯುಸ್ತುತಿ 0—2—0, ದ್ವಾದಶಸ್ತೋತ್ರ 0—2—0, ವಿಷ್ಣುಸಹಸ್ರನಾಮಸ್ತೋತ್ರ 0—2—0, ಪ್ರಾತರಾಹ್ನಿಕ ಪದ್ಧತಿ 0—3—0, ಶ್ರೀಸೂಕ್ತ ಪುರುಷಸೂಕ್ತ 0—1—0, ಗೋಪಿಕಾಗೀತೆ 0—1—0, ಪುರಂದರ ದಾಸರ ಕೀರ್ತನೆಗಳು 0—6—0, ಉದಯ ರಾಗ 0—4—0, ಲಕ್ಷ್ಮೀ ಶೋಭಾನೆ ಹಾಡು 0—2—0, ಹರಿಭಕ್ತಿಸಾರ 0—1—0, ಸ್ವಪ್ನ ಪದ ಮಧ್ವನಾಮ 0—1—6, ತುಲಸೀ ಸಂಕೀರ್ತನೆಗಳು 0—2—0, ಕುಮುದಾ 0—8—0, ಈಗ 0—6—0, ಮಹಾರಾಣಿ ಗೃಹಶೀಲೆ 0—3—0, ಪೇಶ್ವೆನಾರಾಯಣರಾವ್ 0—3—0, ಬಾಲಿಕಾನೀತಿಮಾಲಿಕೆ 0—2—0, ರಾಜಭಕ್ತಿಸಾರ 0—2—0 ಹನುಮದ್ರಾಮಾಯಣ ರೂ 2—1—0, ಚಂದ್ರಾವಲೀ ವಿಲಾಸ 8 ಆಣೆ, ಆಚಾರ ದರ್ಪಣ 4 ಆಣೆ. ಚಂದ್ರಹಾಸಾಭ್ಯುದಯ 4 ಆಣೆ.

ಈಗಲೇ ಬಂದಿವೆ!

ಗೃಹಕೃತ್ಯದ ಉಪಯೋಗಕ್ಕೂ ವೈದ್ಯರಿಗೂ ಅಗತ್ಯವಾಗಿರುವಂಥಾ ಮತ್ತು ಜ್ವರವನ್ನು ನಿಧಾನಿಸಿಕೊಳ್ಳಲು ಅತ್ಯುಪಯುಕ್ತಗಳಾದಂಥಾ

ಥರ್ಮೋಮಿಟರ್‌ಗಳು.

ಅರ್ಧ ಮಿನಿಟಿನಲ್ಲಿ ಜ್ವರ ಎಷ್ಟೆಂಬುದು ತಿಳಿಸುವವುಗಳಿಗೆ ಒಂದಕ್ಕೆ ಕ್ರಯ ರೂಪಾಯಿ 2-12-0. ಯೋಗ್ಯವಾದವುಗಳೆಂತ ಪರೀಕ್ಷಿಸಲ್ಪಟ್ಟು ಸರ್ಟಿಫಿಕೇಟು ಉಳ್ಳವುಗಳಿಗೆ ರೂ 3, ಗಡಿಯಾರಿನ ಸರಪಣಿಯಂತೆ ಸರಪಣಿ ಇದ್ದು ಅಂಗಿ ಕಿಸೆಯಲ್ಲಿ ಭದ್ರವಾಗಿಡಲಿಕ್ಕೆ ಆಗುವಂಥವುಗಳಿಗೆ ರೂ. 3—4—0.

ಸೆಂಟರೋಡ್ಸ್‌ಗಳು: ಕ್ರಯ 3 ಆಣೆ.

ಪರಿಮಳ ದ್ರವಗಳಂತೆ ದ್ರವಿಸಿ ಹೋಗುವಂಥವುಗಳಲ್ಲ ಮತ್ತು ಸೆಂಟೆಡ್ ಕಾರ್ಡುಗಳಂತೆ ಬೇಗನೆ ಚಿಂದಿಯಾಗಿ ಹೋಗುವಂಥವುಗಳಲ್ಲ. ಪರಿಮಳ ಸಾರವನ್ನು ಘನಪದಾರ್ಥರೂಪದಲ್ಲಿ ಸಂಗ್ರಹಿಸಿರುವ ಕಡ್ಡಿಗಳು.

ಡೊಬಾನ್!

ಮಳೆಗಾಲದಲ್ಲಿ ಸ್ಪಾಕಲುಗಳಿಗೆ ನೀರು ತಾಗಿ ಮುಣ್ಣು ಹಿಡಿಯುವುದರಿಂದ ಸ್ಪಾಕಲುಗಳನ್ನು ಉಪಯೋಗಿಸುವುದು ಸಾಧ್ಯವಲ್ಲ. ಆದರೆ ಸ್ಪಾಕಲುಗಳಿಗೆ 'ಡೊಬಾನ್'ನ್ನು ಹಚ್ಚಿದಿಟ್ಟರೆ ಇವುಗಳನ್ನು ನೀರಿನಲ್ಲಿ ಅದ್ದಿದರೂ ಮುಣ್ಣು ಹಿಡಿಯದು. ಇದರ ಬಾಟ್ಲಿ ಒಂದಕ್ಕೆ ರೂ. 1—12—0.

ಶಿಖಿ ಕಾಲದ ರಜೆಯು ತೀರಿ ಶಾಲೆಗಳು ತೆರಿಯೋಣಾಗಿವೆ.

ವಿದ್ಯಾರ್ಥಿಗಳೆಲ್ಲವರಿಗೆ ಅನುಕೂಲವಾದ ದರದ ಫೌಂಟನ್ ಪೇನುಗಳು ಈಗಲೇ ಬಂದಿವೆ. ಕ್ರಯ-1ಕ್ಕೆ ರೂ. 1—14—0ರಿಂದ ರೂ. 7—14—0ರ ವರೆಗಿರುವುದು. ನೆಪ್ಚುನ್, ಬ್ಲೆಕ್‌ಬರ್ಡ್, ಅಲೆಕ್ಸಾಂದ್ರಾ, ವೊಟರ್‌ಮೇನ್, ಸ್ವಾನ್, ಸೀತಾ, ಶಾಂತಾ, ಆನಂದ ಈ ಎಲ್ಲಾ ಜಾತಿ ಪೇನುಗಳಿರುವವು.

ವಿಳಾಸ:—

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ರಥಬೀದಿ ಮಂಗಳೂರು.

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮಗ್ರಿಗಳು ಬೇಕಾದರೂ, **ಪಿ. ಡಿ. ನೀಲಕಾಂತ ಎಂಡ್ ಕೊ. ಬೆನಾರಿಸ್ ಸಿಟಿ** ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು. ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ-ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು. ಇಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ಬಿಕರಿಯಾಗುವ ಬೆನಾರಿಸಿನ ಉಡುಪು ತೊಡುಪುಗಳನ್ನು ತರಿಸುತ್ತಿರುವರು. ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒಡವೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು ಸೀದಾ ನಮಗೆ ಬರೆದು ಒಡವೆಗಳನ್ನು ತರಿಸಿಕೊಳ್ಳುವುದರಿಂದ ನಿಮಗೆ ಸೇಕಡಾ 25ರಂತೆಯಾದರೂ ಮುನಾಫೆಯು ಉಳಿಯುವುದು. ಎಲ್ಲಾ ಒರ್ಡರುಗಳನ್ನು ವಿ. ಪಿ. ಮೂಲಕ ಕಳುಹಿಸಿಕೊಡುವೆವು. ಸಂದೇಹಪಡಬೇಡಿರಿ. (1) ಜರಿತಾರಿನ ರೇಶ್ಮೆ, ನಾನಾ ತರದ ಅರಿವೆಗಳು, ಶೀರೆಗಳು, ರವಕೆ ಕಣಗಳು, ಅಂಗ ವಸ್ತ್ರ ಇತ್ಯಾದಿ. (2) ಕಂಚಿನ ಅಥವಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ. (3) ಕಾಶ್ಮೀರ ಮತ್ತು ಅಮೃತಸ್ವರ ಈ ಪಟ್ಟಣಗಳಲ್ಲಿರುವ ನಮ್ಮ ಕಾರ್ಖಾನೆಗಳಿಂದ ತಯ್ಯಾರಿಸಲ್ಪಡುವ ಮರದ ಸಾಮಗ್ರಿಗಳು. (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ ಒಡವೆಗಳು—ಇವುಗಳೆಲ್ಲವುಗಳಿಗೂ ಬರೆಯಬಹುದು.

ನಮ್ಮ ಕೆಟಲಾಗು ಅಪೇಕ್ಷಿಸಿದವರಿಗೆ ಉಚಿತವಾಗಿ ಕಳುಹಿಸೋಣಾಗುವುದು.

ನಮ್ಮ ವಿಳಾಸ:— ಪಿ. ಡಿ. ನೀಲಕಾಂತ ಎಂಡ್ ಕೊ,

ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್ ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್. ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟು ಪುಸ್ತಕವಾಗಿ ಇಡುವುದಕ್ಕೂ ತಕ್ಕುದಾಗಿದೆ. ಕ್ರಯ 0—8—0.

ವಿಳಾಸ:—

ಕೆನರಾ ಹೈಸ್ಕೂಲು ಕನ್ನಡ ಪಂಡಿತ

ಎಮ್. ತಿಮ್ಮಪ್ಪಯ್ಯ,

ಮಂಗಳೂರು.

ಸರಿ ಕೂದಲನ್ನಿಟ್ಟುಕೊಂಡು

ಮುದುಕರಾಗಿ ಕಾಣುವದೇಕೆ?

☞ ದರ್ಬಾರ್ ಕೂದಲು ರಂಗು.

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯ ಸಮರ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳ ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದ ಮೇಲೆ ಕೂದಲು ಕೆಂಪಾಗಿ ಅಸಂಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷ ಪಡುವಿರಿ.

ಕ್ರಯ ಬುರುಸು ಸಮೇತ ಬಾಟ್ಲಿ 1ಕ್ಕೆ ರೂ. 1.

ಅಂಚೆ ಹಾಸಲು ಆಣೆ 0—4—0.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ,

ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

V. A. S. PANI,

No. 3, Erulappen Street, Madras.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!!

ಹನೂಮತ್ಪರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ, ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0. ಗ್ರಾಹಕರುತ್ವರೆಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,

ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತೃಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ.	ಮಂಗಳೂರು.
ಮ॥ ಪಾವಂಜೆ ಗುರುರಾವ್,	ಪಾವಂಜೆ ಗೋಪಾಲಕೃಷ್ಣ
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.	ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೋಒಪರೇಟಿವ್

ಇನ್ಸೂರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸೂರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ. ಒಂದು ಕೋಟಿ. ಪ್ರತಿಜ್ಞಾತ ಮೂಲಧನ—ರೂ. 870,000,00. ಆಗತ ಮೂಲಧನ—ರೂ. 10,00,000. ಉತ್ತರಿಸೋಣಾದ ವಿಮೆ—ರೂ 2,22,00,000. ಭಂಡ—ರೂ 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹಾಕ್ಕಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ್,

ಸೊಸೈಟಿಯ ಏಜಂಟ್.

ತ್ರಿಶುಲೇಶ್ವರ ದೇವಸ್ಥಾನ ರಸ್ತೆಯಲ್ಲಿಯ ಗೌರಿ ಮಠದ ಬಳಿ,

ಮಂಗಳೂರು.



ಎಲಂಬಿಕ್ ವೆಜಿಟೆಬಲ್ ಟೋನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷದಿಯು. **ಆಯುರ್ವೇದ ಗ್ರಂಥಗಳಲ್ಲಿ** ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ತಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು. ರಕ್ತ ಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು ಬಾಟ್ಲಿ 1ರ ಕ್ರಯ ರೂ. 1-2 0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡಸೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0.

ಅನೊಡ್ಯಾನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಭೇದಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಗಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ನುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟ್ಲಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಅಂಡ್ ಕೊ.
ಪಾರ್ಕ್ ಟೌನು, ಮದ್ರಾಸು.

S. VAIDYA & Co.,
Park Town, Madras.

"ಅಯೊನಿಕ್ ಫಾರ್ಮಸಿ"

ಎಂಬ ಔಷಧ ಪರಿಶೋಧನಾ ಗೃಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ **ಶಾಸ್ತ್ರೋಕ್ತ** ಔಷಧಗಳು ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) **ಫೀವರ್ ಸೊಲ್ಯೂಷನ್.** ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂದುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) **ಬ್ಲಡ್ ಪ್ಯೂರಿಫ್ಯಾಯಿಂಗ್ ಸೊಲ್ಯೂಷನ್** ಎಂಬುವ ರಕ್ತಶುದ್ಧಿಯ ರಸಾಯನವು. ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು ಅದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ತಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಅಯೊನಿಕ್ ಫಾರ್ಮಸಿಯಲ್ಲಿ ತಯ್ಯಾರಾದ ಈ ಔಷಧಗಳು ಮದ್ರಾಸಿನಲ್ಲಿ ಈ ಕೆಳಗಿನ ವಿಳಾಸದವರಲ್ಲಿ ದೊರೆಯುತ್ತವೆ.

S. VAIDYA & Co.,
Park Town, Madras.

ಎಸ್. ವೈದ್ಯಾ ಅಂಡ್ ಕೊ.
ಪಾರ್ಕ್ ಟೌನ್ ಮದ್ರಾಸು.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಕಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸಂಚಯಾಗಿ ದೀರ್ಘವಾಗವಾಮುವ ರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಇಂತಹ ಅಪಾಯಗಳಾವದು ಕ್ಷೀಣವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವಾಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿಸಲ್ಪಟ್ಟಿದೆ. ... ಕಹಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉಪಕಾರ ಹಲವು ಆಶ್ಚರ್ಯಕರ ವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆವಶ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವಾಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುಲಭವಾಗಿರುತ್ತದೆ. ಇದು ಎಲ್ಲ ಅಂಗಡಿಗಳಲ್ಲಿ ದೊರಕುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3 — 0. ಅರ್ಧ ಬಾಟಲಿಗೆ 1—12—0.

ದಿ ಊಲನ್ ಮಾರ್ಟ್ ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಫಾರ್ಮಸಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

ಅಗ್ಗ! ಅಗ್ಗ!! ॥ ಕುಟುಂಬ ಜೀವನಿ ॥ ಧರ್ಮ! ಧರ್ಮ!!

ಸ್ವಜಾತಿಯ ಮಹನೀಯರೇ!

ಎಲ್ಲಾ ರೋಗಗಳನ್ನು ಗೆಲ್ಲುವ ಅತಿ ಅಲ್ಪ ರೂ. 8 ಕ್ರಯದ 16 ಔಷಧಗಳ ಸಂಗ್ರಹದ "ಕುಟುಂಬ ಜೀವನಿ" ಎಂಬ ಪೆಟ್ಟಿಗೆಯನ್ನು ತರಿಸಲು ಮರೆಯಬೇಡಿರಿ. ಪ್ರತಿ ಕುಟುಂಬಕ್ಕೂ ಅತೀ ಅಗತ್ಯ

ಅಕ್ಕಾದಿ ಪಕ್ವ ಬಂದು ಸಕ್ಕರೆಯಂ ನೆಕ್ಕಿದಂತೆ ।
ರಕ್ಕಸ ... ಮುಕ್ಕಿ ಪೋದರ್ ॥ ಎಂಬಂತೆ

ಈಗ ... ದಕ್ಷವೇಟ ಪಸರಿಸಿದ ಎಲ್ಲಿ ನೋಡಿದರೂ ತುಂಬಿ ಹೋಗಿ, ಕಲ್ಯಾಣ ... ರಕ್ಷಿಸಿಂದಲೇ ಸುಲಿಗೆಯಾದರು.

ಪ್ರಿಯ ಬಾಂಧವರೇ! ... ಅಮೂಲ್ಯವಾದ ಮಾಣಿಕ್ಯವಾದರದಿ ... ನಮ್ಮನ್ನು ಆಶ್ರಯಿಸಿರಿ! ಪರೀಕ್ಷಿಸಿನೋಡಿರಿ!!

ನಮ್ಮ ವೈದ್ಯಶಾಲೆಯಲ್ಲಿ ... ಎಲ್ಲಾ ರೋಗಗಳನ್ನು ಗೆಲ್ಲುವ ವಿಶೇಷ ಪಥ್ಯವಿಲ್ಲದ ಬಹಳ ಶೋಧನೆಯಿಂದಲೂ ... ಸಿದ್ಧಕಲ್ಪ ... ಪ್ರಯೋಗಗಳಿಂದಲೂ ತಯ್ಯಾರಿಸಿದ ... ಚೂರ್ಣಗಳೂ, ತೈಲ ಘೃತಗಳೂ, ಆಸವಾರಿಷ್ಟಗಳೂ, ಟೊನಿಕ್ ... ಧರ್ಮಾರ್ಥ ಇತರರಿಗೆ ಅಲ್ಪ ಕ್ರಯದಲ್ಲಿ ಸಿಕ್ಕುತ್ತವೆ. ಕ್ರಯ ... ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ; ಕ್ರಯವಿಲ್ಲ, ಬೇಕಾದವರಿಗೆ ಕಳುಹಿಸುವೆವು. 10 ರೂಪಾಯಿಗಳ ಮೇಲೆ ಕೇಳಿದಾ ರೂ 10ಡಿಸ್ಕೌಂಟ ಸಿಕ್ಕುವದು. ತರಿಸಿಕೊಳ್ಳಿರಿ. ಸಂಘಕ್ಕೆ ಆಶ್ರಯ ಕೊಡಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

S. U. N. & CO.,
BENARES CITY, U. P.

ದೊಡ್ಡ ಕಂಪೆನಿ! ಸೋಗಸಾದ ಸರಕುಗಳು!

ಈ ನಮ್ಮ ಕಂಪೆನಿಯಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ಪಮ. ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

ಮಳೆಗಾಲ ಬಂತು!

ಹವೆಯ ಬದಲಾವಣೆಯಿಂದ ಉಂಟಾಗುವ ವ ಇತರ ತಲೆಪಿಡಿತ. ಕಣ್ಣುಬೇನೆ, ತಲೆಭಾರ, ನೆಗಡಿ, ಕಫ, ಖಾಸ, ಜ್ವರ, ಛಳಿಜ್ವರ, ಚಳಿವಾತ, ವಾಂತಿಭೇದಿ, ಉಷ್ಣಭೇದಿ, ಮೇಹ ಇತ್ಯಾದಿ ನೂರಾರು ಬಾಧ್ಯಗಳೂ ಮನೆಮನೆಯಲ್ಲೂ ಪ್ರತ್ಯಕ್ಷವಾಗಿ ತೋರುತ್ತಿರುವ ಈ ಕಾಲದಲ್ಲಿ

ದಿವ್ಯ ಸಂಜೀವಿನೀ
ಯುಕೆಲಿಪ್ಟಸ್ ತೈಲ

ಎಂಬ ... ಈ ಎಣ್ಣೆಯ ಸೀಸೆಯೊಂದನ್ನು ಗೃಹಸ್ಥರು ಸಂಗ್ರಹಿಸಿಕೊಳ್ಳಿ! ಈ ಎಣ್ಣೆ ಇದ್ದಲ್ಲಿ ... ಸುಳಿವೂ ತೋರದು; ಎಂತಹ ರೋಗವನ್ನೂ ಇದು ತಡೆಗಟ್ಟಿ, ನಿರ್ಮೂಲಿಸಿ ಬಿಡುವುದು" ... ಅನುಭವಕ್ಕಿಂತಲೂ ಹೆಚ್ಚಿನ ವಿಸ್ತಾರವಾದ ವಿಜ್ಞಾಪನೆಯು ನಮ್ಮೊಡನೆ ಇಲ್ಲ.

ಪ್ರಾಣದಾನ ಮಾಡಿಯದೆ.

... ಸಾಹೇಬರು ಈ ರೀತಿ ಬರೆಯುವರು:— "ಪ್ರಿಯರೇ ... ಸ್ವಲ್ಪ ದಿವಸದ ಕೆಳಗೆ ಒಂದು ಡಜನ್ ನೀಲಗಿರಿ ಯುಕಲಿಪ್ಟಸ್ ತೈಲ ತರಿಸಿಕೊಂಡಿದ್ದೆ ... ಕೆಲವರಿಗೆ ಕೊಟ್ಟದ್ದರಿಂದ ಪ್ರಾಣದಾನ ಕೊಟ್ಟ ಹಾಗಿದೆ. ಇದನ್ನು ಕೇಳಿ ... ಗಳನ್ನು ಕೇಳುಹೋಗುವದಲ್ಲದೆ ಈಗ ಅನೇಕರು ಪ್ರತಿ ದಿವಸ ಬರುತ್ತಾ ಇದ್ದಾರೆ. ... ಒಂದು ಬಾಟ್ಲಿ ಉಳಿಯಲಿಲ್ಲ. ಆದ್ದರಿಂದ ಈ ಕಾಗದ ಕಂಡ ಕೂಡಲೇ ಒಂದು ಡಜನ್ ಬಾಟ್ಲಿಗಳನ್ನು ವಿ. ಪಿ. ಮಾಡಿ ಕಳ್ಳುಹಿಸಿರಿ." ಔನ್ಸ್ ಸೀಸೆ 1ಕ್ಕೆ 0—5—0. ವಿ. ಪಿ. ಬೇರೆ ಡಜನ್ ಬಾಟ್ಲಿಗಳನ್ನು ಒಮ್ಮೆಲೇ ತರಿಸಿಕೊಂಡರೆ ರೂ. 3. ವಿ. ಪಿ. ಬೇರೆ.

1914ನೇ ಇಸವಿ ಕೆಲೆಂಡರು ಸಹಿತವಾದ ಪರಿಮಳದ ಕಾರ್ಡುಗಳು. ಡಜನ್ ಕಾರ್ಡುಗಳಿಗೆ 0—12—0. ಗ್ರೋಸ್ ಕಾರ್ಡುಗಳಿಗೆ ರೂ. 6. ವಿ. ಪಿ. ಬೇರೆ

ಸ್ನೇಹಲತಾ ಮಸ್ತಕ ತಾಪಹಾರಿಣಿ ತೈಲ:—ಮೆದುಳು ರೋಗಗಳಿಗೆ ಅತ್ಯುಪಯೋಗವಾದ ತೈಲ ಸೀಸೆ 1ಕ್ಕೆ 0—12—0. ಡಜನ್ ಸೀಸೆಗಳಿಗೆ ರೂ 8. ವಿ ಪಿ ಬೇರೆ

ಫೋಟೊ ಎನ್‌ಲಾರ್ಜಮೆಂಟುಗಳು, ರಬ್ಬರ್ ಮೊಹರಗಳು ಅಗ್ಗ ದರದಲ್ಲಿ ತಯಾರಿಸಿ ಕೊಡೋಣಾದೀತು.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಕಂಕನಾಡಿ ಪೋಸ್ಟು, ದ ಕ.

ವಿದ್ಯಾಸಾಗರ ಬುಕ್ ಡಿಪೋ, ಬೆಂಗಳೂರು ಸಿಟಿ.

ನಮ್ಮಲ್ಲಿ ಸರ್ಕಾರಿ, ಸ್ಕೂಲ್ ಪುಸ್ತಕ ಸಂಸ್ಕೃತ, ಕನ್ನಡ, ತೆಲುಗು, ಭಾಷೆಗಳಲ್ಲಿ ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ ಮತ್ತು ಉತ್ತಮ ಕಾದಂಬರಿಗಳೂ ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರಿಯುತ್ತವೆ.

ಕೆಲವು ಅಪೂರ್ವ ಪುಸ್ತಕಗಳು.

ಸಹಾಯವಿಲ್ಲದೆ ಇಂಗ್ಲಿಷು ಕಲಿಯುವ ಪುಸ್ತಕ ೫ ಭಾಗವುಳ್ಳದ್ದು ದೊಡ್ಡ ಪುಸ್ತಕ. ಬೆಲೆ ೧—೮—೦

ಚಂದ್ರಕಲಾ ಕಲಾನಾಥ ಮುಂತಾದ ಉತ್ತಮ ಕಾದಂಬರಿಗಳು ನಮ್ಮಲ್ಲಿ ದೊರಿಯುತ್ತವೆ.

[ಕನಕಾಲುತಾ ಅಥವಾ ಕಮಲಿನೀ ಚರಿತಂ	೦—೬—೦
ದಿವಾನ್ ರಂಗಾಚಾರ್ಯರ ಜೀವನ್ನ ಚರಿತ್ರೆ	೦—೬—೦
ದಿವಾನ್ ಶೇಷಾದ್ರಯ್ಯರವರ ಜೀವನ ಚರಿತ್ರೆ ಇಂಗ್ಲಿಷ್	೦—೬—೦
ಜಪನರಸ್ವತ ಸ್ಥಿತಿಗೆ ಮೂಲಾಧಾರ	೧—೪—೦
ಆರ್ಯ ಕೀರ್ತಿ	೦—೧೦—೦
ವೈದ್ಯಸಾರ ಸಂಗ್ರಹ	೩—೦—೦

ಇದು ಇಂಡಿಯ ದೇಶದಲ್ಲೆಲ್ಲಾ ದೊಡ್ಡ ವೈದ್ಯ ಗ್ರಂಥಗಳು ಘನ ಪಂಡಿತರಿಂದ ಪರಿಶೋಧಿಸಲ್ಪಟ್ಟದ್ದು.

ಹನುಮದ್ವಿಲಾಸ	೦—೮—೦
ಋಗ್ವೇದ ನಿತ್ಯ ಕರ್ಮ	೦—೪—೦

ಶೋಭನೆ, ನರಬಲಿ, ಯಾಮಿನಿ ಈ ಪುಸ್ತಕಗಳನ್ನು ಒಂದು ಸರ್ತಿ ಓದಿದಗೆ ಯಾವಾಗಲೂ ಓದುತ್ತಿರಬೇಕೆಂದು ಇಷ್ಟವಾಗುತ್ತದೆ.

ವಿಳಾಸ:— ಬಿ. ನರಸಿಂಹ ಅಯ್ಯಂಗಾರ್.
ಮೆನೇಜರ್ ವಿದ್ಯಾಸಾಗರ ಬುಕ್ ಡಿಪೋ.
ಚಿಕ್ಕಪೇಟೆ ಬೆಂಗಳೂರು ಸಿಟಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 19ನೇ ಜೂನ್ 1914.

ಮೆ॥ ಚಾಟರ್ಟನ್‌ರವರೂ, ಕನ್ನಡ ಭಾಷೆಯ ವರ್ತಮಾನ ಪತ್ರಗಳೂ

ಕಳೆದ ಮೈಸೂರ ಸಂಪದಾಭಿವೃದ್ಧಿ ಸಭೆಯು ಕಾಲಕ್ಕೆ ನಡೆದ ಚರ್ಚೆಯಲ್ಲಿ ಕನ್ನಡ ಭಾಷೆಯ ವರ್ತಮಾನ ಪತ್ರಗಳಿಗೆ ಪ್ರೋತ್ಸಾಹ ಕೊಡುವ ವಿಷಯವಾದ ಒಂದು ಪ್ರಶ್ನೆಯು ಮುಂದೆ ಬಂದಿತು. ಆದರೆ ಇದನ್ನು ವಿರೋಧಿಸುವ ಉದ್ದೇಶದಿಂದ ಮೈಸೂರ ಸಂಸ್ಥಾನದ ವ್ಯಾಪಾರ ವ್ಯವಸಾಯ ಇಲಾಖೆಯ ಡಿರೆಕ್ಟರಾದ ಮೆ॥ ಚಾಟರ್ಟನ್ ದೊರೆಗಳು ದೇಶಭಾಷೆಯ ಪತ್ರಗಳ ಮೇಲೆ ಮನಸೋಕ್ತವಾಗಿ ಗರಲ್ಲ ವನ್ನು ಕಾರಿದ್ದಾರೆ ಕನ್ನಡ ಪತ್ರಿಕೆಗಳು ಕೀಳ್ತರದವೆಂದೂ, ಕೀಳುಜನರ ಮನೋರಂಜನದ ಹೊರತು ಬೇರೆ ಉಪಯೋಗವು ಇವುಗಳಿಂದಾಗುವಂತಿಲ್ಲವೆಂದೂ, ಶಿಕ್ಷಣಾಭಿವೃದ್ಧಿಯ ಕಾರ್ಯದಲ್ಲಿ ಇವುಗಳ ಉಪಯೋಗವೇನೂ ಇಲ್ಲವೆಂದೂ ಮೆ॥ ಚಾಟರ್ಟನ್‌ರವರು ಬಾಯಿಗೆ ಬಂದ ಹಾಗೆ ಹೇಳಿರುವರು. ತನಗೆ ಕನ್ನಡ ಭಾಷೆಯ ಗಂಧವೂ ಇಲ್ಲದೆ ಕನ್ನಡ ಪತ್ರಿಕೆಗಳನ್ನು ಓದುವದು ಅಥವಾ ಅವುಗಳ ವಿಷಯ ಪ್ರತಿಪಾದನೆ, ಲೋಕಶಿಕ್ಷಣಕಾರ್ಯ, ಭಾಷಾಶೈಲಿ ಮುಂತಾದವುಗಳ ವಿಷಯವಾಗಿ ಏನಾದರೂ ಮನಸ್ಸಿಗೆ ಬಂದ ಅಭಿಪ್ರಾಯವನ್ನು ಕೊಡುವದಕ್ಕೆ ಪ್ರವೃತ್ತರಾದ ಮೆ॥ ಚಾಟರ್ಟನ್ ದೊರೆಗಳ ಈ ವರ್ತನೆಯು ಜನರೊಳಗೆ ಉಪಹಾಸಾಸ್ಪದವಾಗಿ ಮಾಡುವದೆಂಬದಕ್ಕೆ ಸಂದೇಹವಿಲ್ಲ ಮೈಸೂರ ಸಂಸ್ಥಾನದಲ್ಲಿಯೂ ಮದ್ರಾಸು ಮತ್ತು ಮುಂಬಯಿ ಕರ್ನಾಟಕದಲ್ಲಿಯೂ ಇಂದಿಗೆ ಅನೇಕ ಕನ್ನಡ ಪತ್ರಗಳು ಲೋಕಶಿಕ್ಷಣಕಾರ್ಯವನ್ನು ಬಹು ದಕ್ಷತೆಯಿಂದಲೂ, ಅಂತಃಕರಣಪೂರ್ವಕವಾಗಿಯೂ ಮಾಡುತ್ತಿರುವವಲ್ಲದೆ ಪ್ರಕೃತ ಕನ್ನಡ ಭಾಷೆಯ ಹೀನಾವಸ್ಥೆಯಲ್ಲಿ ಅವುಗಳಿಗೆ ತಕ್ಕ ಪ್ರೋತ್ಸಾಹವು ಇಲ್ಲದ ಮೂಲಕ ಅನೇಕ ಬಗೆಯ ತಾಪತ್ರಯವನ್ನು ಸಹಿಸಿಯೂ ಸ್ವಾರ್ಥತ್ಯಾಗಮಾಡಿ ಇಂದಿಗೂ ದೇಶಸೇವೆ, ಭಾಷಾಸೇವೆಗಳನ್ನು ಯಥಾಕ್ರಮವಾಗಿ ಸಾಗಿಸಿರುವವು. ಎರಡೆರಡು ತಪಗಳವರೆಗ ಅಚ್ಛಿನ್ನವಾಗಿ ನಡೆದ ವರ್ತಮಾನ ಪತ್ರಿಕೆಗಳು ಪ್ರತ್ಯಕ್ಷ ನಮ್ಮ ಕಣ್ಣೆದುರಿಗಿರಲು ಅವುಗಳಿಂದ ಲೋಕಕಾರ್ಯವೂ ಜನತೆಯ ಶಿಕ್ಷಣವೂ ಏನೂ ಆಗಿಲ್ಲವೆಂದು ಸಾರ್ವಜನಿಕದವರಲ್ಲಿ ಹೇಳುವ ಮೆ॥ ಚಾಟರ್ಟನ್‌ರವರ ಅಮೋಘ ಅಜ್ಞಾನವು ಅನುಕಂಪನೀಯವಾಗಿದೆ ಮೆ॥ರವರು ಈ ರೀತಿಯಾಗಿ ಕಂಡಕಂಡದ್ದಕ್ಕೆ ಕೈಹಾಕಿ ತಮ್ಮದಲ್ಲದ ವಿಷಯದಲ್ಲಿಯೂ ಅಧಿಕತನವನ್ನು ಮಾಡುವದಕ್ಕೆ ಮೈಸೂರ ಸರಕಾರದವರು ಯೋಗ್ಯವಾಗಿ ಪ್ರತಿಬಂದವನ್ನು ಮಾಡದಿದ್ದರೆ ಮೈಸೂರ 'ಕನ್ನಡ ಪತ್ರಕರ್ತರಾದರೂ ಮೆ॥ ಚಾಟರ್ಟನ್‌ರವರ ಈ ಅಜ್ಞಾನವನ್ನು ಯುಕ್ತವಾದ ರೀತಿಯಲ್ಲಿ ಹೋಗಲಾಡಿಸಬೇಕೆಂದು ಸೂಚಿಸುತ್ತೇವೆ

ಸ್ತ್ರೀಸಮಾಜದಲ್ಲಿ ಶಿಕ್ಷಣೆ ಪ್ರಸರಣೆ ಬಗ್ಗೆ ಒಂದು ಹೊಸ ಏರ್ಪಾಡು

ಮ॥ ರಾ॥ ಪಿ. ವಿ. ಕೃಷ್ಣಸ್ವಾಮಿ ಚೆಟ್ಟಿಯವರು ಸ್ತ್ರೀಸಮಾಜದಲ್ಲಿ ಶಿಕ್ಷಣ ಪ್ರಸರಣೆಯ ಈ ಹೊಸ ಏರ್ಪಾಡಿನ ಒಂದು ಫಂಡನ್ನು ಏರ್ಪಡಿಸುವ ಬಗ್ಗೆ ಕೊಟ್ಟಂಥಾ ಹಣವನ್ನು ಸರಕಾರದವರು ಸ್ವೀಕರಿಸಿರುತ್ತಾರೆ ಶಾಲೆಗೆ ಹೋಗದಿರುವ ಅಥವಾ ತಮ್ಮ ಹೆಮ್ಮಕ್ಕಳನ್ನು ಶಾಲೆಗೆ ಕಳುಹಿಸದಿರುವ ಸ್ತ್ರೀಯರು ಹಿಂದೂ ಸಮಾಜದಲ್ಲಿ ಯಾವಾಗಲೂ ಇರುವರು ಇಂಥವರ ಶಿಕ್ಷಣೆ ಬಗ್ಗೆ ಆಯಾ ಕಡೆಗಳ ಬಾಲಿಕಾ ಪಾಠಶಾಲೆಗಳಲ್ಲಿ ರಜಾ ದಿನಗಳಲ್ಲಿ ಸ್ತ್ರೀಯರು ಸಭೆಕೂಡುವಂತೆ ಮಾಡಿ ಸಭೆಯಲ್ಲಿ ಆರೋಗ್ಯ ಶಾಸ್ತ್ರ, ಭೂಗೋಳ ಶಾಸ್ತ್ರ, ಪ್ರಾಣಿಗುಣವಿಜ್ಞಾನ ಶಾಸ್ತ್ರ ಮೊದಲಾದವುಗಳ ಕುರಿತು ವಿದ್ಯಾವಂತರುಗಳಿಂದ ಯುಕ್ತವಾದ ರೀತಿಯಲ್ಲಿ ಭಾಷಣಗಳನ್ನು ಕೊಡಿಸುವುದು, ಮತ್ತು ಭಾಷಣಗಳಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಗಳು ಸ್ತ್ರೀಯರಿಗೆ ಮಂದಟ್ಟಾಗುವಂತೆ ಮ್ಯಾಜಿಕ್ ಲೆಂಟರ್ನ್ ಮೊದಲಾದವುಗಳ ಮೂಲಕ ಭಾಷಣ ಮಾಡಿದ ವಿಷಯಗಳನ್ನು ಉದಹರಿಸುವುದು. ಕೃಷ್ಣಸ್ವಾಮಿ ಚೆಟ್ಟಿಯವರು ಸರಕಾರದವರಿಗೆ ಸೂಚಿಸಿದ ಏರ್ಪಾಡು ಇದಾಗಿರುತ್ತದೆ. ಇಂಥಾ ಏರ್ಪಾಡಿನಿಂದ ಸ್ತ್ರೀಯರ ಮನಸ್ಸು ಶಿಕ್ಷಣದತ್ತ ಕಡೆ ಬಹಳವಾಗಿ ಆಕರ್ಷಿಸಲ್ಪಡುವದಲ್ಲದೆ ಶಿಕ್ಷಣ ಪ್ರಸರಣೆಯು ಚನ್ನಾಗಿ ಸಾಗುವುದು. ಈ ಹೊಸ ಏರ್ಪಾಡಿನ ಸೂಚನೆಯನ್ನು ಹಿಂದೂ ಸ್ತ್ರೀಯರ ಶಿಕ್ಷಣವನ್ನು ಕೈಕೊಂಡಿರುವ ಮಂಗಳೂರು ಮಹಿಳಾ ಸಭೆಯವರು ಮತ್ತು ಕೆನರಾ ಬಾಲಿಕಾ ಪಾಠಶಾಲೆಯವರು ಇಲ್ಲಿಯೂ ಸಹ ಕಾರ್ಯರೂಪುಗೊಳಿಸಲು ಅನುಕೂಲವಿರುವುದೋ ಎಂತ ಪರ್ಯಾಲೋಚಿಸುವುದು ಯುಕ್ತವಾಗಿರುವುದು

ಬಾಲ ಗಂಗಾಧರ ತಿಲಕರವರ ಬಿಡುಗಡೆಯು.

ಆರು ವರುಷಗಳಿಂದ ಮಂಡಲೆಯಲ್ಲಿ ಕಾರಾಗ್ರಹವಾಸದ ಶಿಕ್ಷೆಯನ್ನು ಅನುಭವಿಸುತ್ತಿದ್ದ ಪೂನೆಯ ಪ್ರಸಿದ್ಧ 'ಕೇಸರಿ'ಯ ಸಂಪಾದಕರಾದ ಬಾಲ ಗಂಗಾಧರ ತಿಲಕರವರ ಶಿಕ್ಷಾವದಿಯು ತೀರಿದ್ದರಿಂದ ಕಳೆದ ಮಂಗಳವಾರ ಮಧ್ಯ ರಾತ್ರಿ ಇವರು ಸೆರೆಮನೆಯಿಂದ ಬಿಡುಗಡೆ ಹೊಂದಿರುವರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ ೧೯೦೮ನೇ ಇಸವಿಯ ಮೇ ಮತ್ತು ಜೂನು ತಿಂಗಳ ಕೇಸರಿ ಪತ್ರದ ಕೆಲವು ಸಂಚಿಕೆಗಳಲ್ಲಿ ಆಕ್ಷೇಪಕರವಾದ ಲೇಖಗಳನ್ನು ಬರೆದು ಪ್ರಕಟಿಸಿದರೆಂಬ ತಕ್ಷೀರಿನ ಮೇಲೆ ಮುಂಬಯಿ ಹ್ಯಾಕೋರ್ಟಿನಲ್ಲಿ ಜಸ್ಟಿಸ್ ದಾವಾರವರು ಆರು ವರುಷಗಳ ದ್ವೀಪಾಂತರವಾಸ ಮತ್ತು ೧,೦೦೦ ರೂಪಾಯಿ ಜುರುಮಾನೆಯ ಶಿಕ್ಷೆಗ ತಿಲಕರವರನ್ನು ಗುರಿಮಾಡಿದ್ದರು ಆದರೆ ಈ ಶಿಕ್ಷೆಯ ಕಾಠಿಣ್ಯವನ್ನು ಸರಕಾರದವರೇ ತಿಳಕೊಂಡು ದ್ವೀಪಾಂತರವಾಸದ ಶಿಕ್ಷೆಯನ್ನು ಸಾಧಾರಣ ಸಜೆಯನ್ನಾಗಿ ಬದಲಾಯಿಸಿ ಬರ್ಮಾದೇಶದ ಮಂಡಲೆಯ ಕಾರಾಗ್ರಹದಲ್ಲಿ ಇವರನ್ನಿಟ್ಟ ವಿವರವು ವಾಚಕರ ನೆನಪಿನಲ್ಲಿರಬಹುದು ತಿಲಕರವರು ಹೀಗೆ ವಿಧಿಸಲ್ಪಟ್ಟ ಶಿಕ್ಷೆಯನ್ನು ಪೂರ್ಣವಾಗಿ ಅನುಭವಿಸಿದರು. ಈ ಆರು ವರುಷಗಳ ಕಾಲದಲ್ಲಿ ಸರಕಾರದವರು ಪ್ರಜಾ ಜನರಿಗೆ ಕೌನ್ಸಿಲ್ ರಿಫೋರ್ಮ್ ಮೊದಲಾದ ವರಪ್ರದಾನಗಳನ್ನು ದಯಪಾಲಿಸಿ ಸೆರೆಮನೆಗಳಿಂದ ಹಲವು ಕೈದಿಗಳನ್ನು ಅವರ ಶಿಕ್ಷಾ ಕಾಲವು ಮುಗಿಯುವ ಮೊದಲೇ ಬಿಡುಗಡೆ ಮಾಡಿದಾಗ ತಿಲಕರವರು ಸಹ ತಮ್ಮ ಬಂದನೆಯಿಂದ ಬಿಡುಗಡೆ ಹೊಂದುವರೆಂಬ ಕೋರಿಕೆಯು ಆ ಸಂದರ್ಭದಲ್ಲಿ ಪ್ರಜಾ ಜನರೆಲ್ಲರಲ್ಲಿಯೂ ಇತ್ತು ಆದರೆ ದೇಶ ಕಾಲ ಸ್ಥಿತಿ ಮಾರ್ಪಾಟಗಳನ್ನು ಪ್ರಜಾ ಜನರು ತಿಳಿದ ರೀತಿಯಲ್ಲಿಯೇ ಸರಕಾರದವರು ತಿಳಿಯದೆ ಹೋದ್ದರಿಂದ ತಿಲಕರವರಿಗೆ ತಮ್ಮ ಶಿಕ್ಷೆಯಿಂದ ಯಾವ ರಿಯಾಯಿತಿಯೂ ದೊರಕಲಿಲ್ಲ. ಹ್ಯಾಗೂ ವೃದ್ಧಾಪ್ಯದಲ್ಲಿ ಪ್ರಾಪ್ತವಾದ ಸಂಕಷ್ಟದಿಂದ ಪಾರುಗಾಣಿಸಲ್ಪಟ್ಟು ಲೋಕಸೇವೆಯನ್ನು ತಮ್ಮ ದೀರ್ಘಕಾಲದ ಅನುಭವದಿಂದಲೂ ಲೋಕ ಮಾನ್ಯವಾದ ತಮ್ಮ ವಿದ್ವತ್ತಿಕೆಯಿಂದಲೂ ಇನ್ನೊಮ್ಮೆ ಕೈಕೊಳ್ಳುವ ಸಂದರ್ಭವು ತಿಲಕರವರಿಗೆ ಪ್ರಾಪ್ತವಾಯಿತೆಂಬುದನ್ನು ತಿಳಿದು ಸರ್ವರೂ ಆನಂದ ಪಡದೆ ಇರಲಾರರು

ಕಲಾವತಿ

ಕಲಾವತಿಯ ನಿಜವಾದ ಹೆಸರು ಅದಾವುದೋ ಅವಳೇ ಹೇಳಲೊಲ್ಲಳು- ಆದರೂ ಈ ಚರಿತೆಯು ಯಥಾರ್ಥವಾದುದೇ ಇದೆ

ಪಾಪ! ಕಲಾವತಿಯು ಈಗ ಇಪ್ಪತ್ತೊಂದು ವರ್ಷ ಪ್ರಾಯದ ಸುಂದರಿ. ಮಾಡುವುದೇನು? ಆಕೆಯ ಯೌವನವೂ ಸೌಂದರ್ಯವೂ ಅವಳ ದುರ್ಗತಿಗೆ ಕಾರಣವಾದುವು!!

ಕಲಾವತಿಯು ಇನ್ನೂ ಚಿಕ್ಕವಳಾಗಿದ್ದಾಗ, ತನ್ನ ತಂದೆಗೆ ಏಕ ಮಾತ್ರ ಕನ್ಯೆಯಾಗಿದ್ದುದರಿಂದ ಅವಳು ಚಿರ ಕಾಲವೂ ಆದರ್ಶ ರಮಣಿಯಾಗಿರಬೇಕೆಂದುದೊಂದೇ ಚಿಂತೆಯಿಂದ ಅವಳನ್ನು ಯಥಾ ರೀತಿಯಲ್ಲಿ ವಿದ್ಯಾಭ್ಯಾಸಕ್ಕಾಗಿ ಶಾಲೆಗೆ ಕಳುಹಿಸಿಕೊಟ್ಟರು. ಸ್ತ್ರೀಯರ ಮೆದುಳು ಗಂಡಸರ ಮೆದುಳಿಗಿಂತಲೂ ತೀಕ್ಷ್ಣತೆಯನ್ನುಳ್ಳದೆಂಬುದಕ್ಕೆ ಅವಳ ವಿದ್ಯಾಭ್ಯಾಸಂಗವೇ ಉದಾಹರಣೆ. ಹೆಮ್ಮಕ್ಕಳಿಗೆ ಅವಾಗಲೂ ಸಾಧಾರಣ ರೀತಿಯಲ್ಲಿ ಪ್ರೈಮೆರಿಶಾಲೆಯಿಂದ ಮುಂದಕ್ಕೆ ಕಲಿಯಗೊಡುವುದೇ ಇಲ್ಲ. ಅವಳಾದರೊ ತನ್ನ ಎಂಟನೆಯ ವರ್ಷ ಪ್ರಾಯದಲ್ಲೆ ನಾಲ್ಕನೆಯ ದರ್ಜೆಯಲ್ಲಿ ಪ್ರಥಮಳಾಗಿ ತೇರಿದನಂತರ, ಪ್ರಾಯಕ್ಕೆ ಬಂದ ಕನ್ಯೆಯೆಂದು ಅವಳ ಪಿತನು ಅವಳನ್ನು ಶಾಲೆಯಿಂದ ಮನೆಗೇ ಕರಿಸಿಕೊಂಡನು. ಅಲ್ಲಿ ಅವಳು ತಾನೇ ತಾನಾಗಿ ಅನ್ಯ ಸ್ತ್ರೀಯರಿಂದ ಗೃಹಕೃತ್ಯದ ಸಮ್ಮಂಧವಾದ ಎಲ್ಲ ವಿಷಯಗಳನ್ನು ಕಲಿತುಕೊಂಡು. ಸುಶಿಕ್ಷಿತೆಯಾದ ಗೃಹಿಣಿಯೇ ಆದಳು

[illegible] ಬಿಟ್ಟ ದಿನದಿಂದಲೇ ಅವಳಿಗೆ ವಿವಾಹಮಾಡಬೇಕೆಂದು ರೂಢಿಯಂತೆ ಸನ್ನಾಹಗಳುಂಟಾಗಲಾರಂಭವಾಯಿತು. ಮೂಲ ನಕ್ಷತ್ರದ ಅರಿಷ್ಟಾಂಶದಲ್ಲಿ ಈ ಸುಕುಮಾರಿಯ ಜನನ! ಅದೊಂದೇ ಕಾರಣದಿಂದ ಯೋಗ್ಯವಾದ ಸ್ಥಳಗಳಲ್ಲಿಯ ಸುಶಿಕ್ಷಿತರೇ ಒಪ್ಪಲಾರರಾದರು ಮಾವನಿರಲಾಗದ ಸಂಬಂಧಗಳನ್ನು ಅತ್ತಿತ್ತ ಹುಡುಕಿ ೩-೪ ವರ್ಷಗಳೂ ಕಳೆದವು. ಅವಳ ತಂದೆಯ ತಾಪತ್ರಯಗಳು ಹೆಚ್ಚಿದಂತೆ, ಅವಳ ಪ್ರಾಯವು ಹೆಚ್ಚುತ್ತ ಬಂದಿತು, ಪ್ರಾಯವೇರಿದಂತೆ ವರದಕ್ಷಿಣೆಯ ಅಂಕೆಗಳು ಸ್ಥಾನಾಂತರವನ್ನು ಸೇರ ತೊಡಗಿದುವು ಆ ಮೇಲೆ ಹದಿನಾಲ್ಕನೆಯ ವಯಸ್ಸಿನಲ್ಲಿ ಅವಳ ತಂದೆಯು ತಾನೇ ವೇತನವನ್ನಿತ್ತು ಕಲಿಸಿದ ವಿದ್ಯಾರ್ಥಿಗಳಲ್ಲಿಯಾದರೂ ಯಾರನ್ನೂ ಸಾವಿರಕ್ಕೆ ಕಡಮೆಗೆ ಒಪ್ಪುವಂತೆ ಕಾಣಲಿಲ್ಲ ಮಾಡುವುದೇನು? ಕೂಡಿಸಿಟ್ಟಿದ್ದ ಕೆಲವು ಹಣ ಈ ಸಂಬಂಧ ಹುಡುಕುವುದರಲ್ಲೇ ವ್ಯಯವಾಗಿ ಹೋಯಿತು. ಆ ಮೇಲೆ,—

ಹತ್ತೆಂಟು ಕೋರ್ಟಿ ಆಸ್ತಿಯುಳ್ಳ ಧನಿಕನೊಬ್ಬನು ದ್ವಿತೀಯ ಸಂಬಂಧಕ್ಕೆ ಸಾವಿರಾರು ರೂಪಾಯಿಗಳನ್ನು (ಎರಡೂ ಖರ್ಚುಗಳು ವ ಆಭರಣಾದಿ ಇತರ ಲಾಗವಾತುಗಳನ್ನೂ ಕನ್ಯಾಪಕ್ಷದ ಮೇಲೆ ಹೊರಿಸಿ) ವರದಕ್ಷಿಣೆಗಾಗಿ ಪಡೆದು ಇವಳನ್ನು ಲಗ್ನಮಾಡಿಕೊಳ್ಳಲು ಒಪ್ಪಿದನು ವರನ ಪ್ರಾಯ ೫೧, ಗಂಡು ಹೆಣ್ಣು ಮಕ್ಕಳು ೫ ಮತ್ತು ೩. ಇದೇ ಸೌಕರ್ಯವೆಂದು ಬಲು ಬೇಸರಗೊಂಡ ಕಲಾವತಿಯ ಪಿತನು ಇಷ್ಟಕ್ಕೂ ಮೆಚ್ಚಿದನು. ಮಗಳನ್ನು,—ರೂಢಿಗೆ ವಿರೋಧವಾಗಿ, ವರನಲ್ಲಿಗೆ ವೈದಿಕ [illegible] ರಿಗೂ ತಿಳಿಯದಂತೆ ಒಂದು ಪ್ರಾತಃಕಾಲದಲ್ಲೇ ಮದುವೇ ಮಾಡಿಸಿ ಮುಗಿಸಿ ತನ್ನ ಋಣಾನುಸಂಬಂಧವು ತೀರಿತೆಂದು ಒಂದಕ್ಕೆ ಊರಿಗೆ ತೆರಳಿದನು ಮರಳಿ ಬಂದರೆ, ಮನೆಮಾರೆಲ್ಲವೂ ಮೊದಲೇ ವರದಕ್ಷಿಣೆಗಾಗಿ ಒತ್ತೆವಾಗಿ ಇರಗೊಡಿಸಿದ್ದುದರಿಂದ ಕಾಫಿ ಹೊಟೇಲನ್ನು ತೆರೆದು ಕಾಲಕ್ಷೇಪಕ್ಕೆ ಕೈಹಚ್ಚಿದನು.

ಕಲಾವತಿಯ ತಾಯಿಯು, ತನ್ನ [illegible] ಮಗಳ [illegible] ಹೀನ ವೈವಾಹದ ಮದುವೆಯಾದುವಂದಿನಿಂದಲೂ, ರೋಗ ಪ್ರಹಸ್ತಳಾಗಿ ಬಿದ್ದಳು ಮಗಳನ್ನೂ, ಅಳಿಯನನ್ನೂ ಪುನಹ ಮನೆಗೆ ಕರೆತರುವೆನೆಂದರೂ ಅವಳ [illegible] ತೋರಿತು ಮಗಳಿಗೆ ಪ್ರಸ್ತಮಾಡಿಸುವುದಕ್ಕೆ ಮೊದಲಾಗಿಯೇ ಅವಳು ಸ್ವರ್ಗಸ್ಥಳಾದಳು!

ಪಾಪದ ಕನ್ಯಾಪಿತನೊಬ್ಬನೇ ಹುಚ್ಚು ಹಿಡಿದವನಂತೆ ಗೋಳಾಡುತ್ತ ದಿನಹರಣ ಮಾಡುತ್ತಲಿದ್ದನು.

ಇಷ್ಟರಲ್ಲಿ—ಅಮ್ಮನವರಿಗೆ ಪ್ರಾಯ ಬಂತೆಂತು, ಎರಡು ಹೆಮ್ಮಕ್ಕಳೂ ಹುಟ್ಟಿದುವು. ಆದರೆ. ಕೊಂಚ ಕಾಲದಲ್ಲೇ ಅಯ್ಯನವರಿಗೆ ಕೈಲಾಸವೇ ಆಯ್ತು! ಕಲಾವತಿಗೆ ಆ ಧನಾಢ್ಯ ಪತಿಯ ಮನೆಯ ಬಾಗಿಲಿಗೆ ಕಾಲಿಕ್ಕಿ ನಿಲ್ಲುವುದಕ್ಕೂ ಅದರ ಬೀಗವನ್ನು ತೆಗೆವೆನೆಂಬುವ ಅಧಿಕಾರ ಮಾತ್ರ ಉಂಟಾಗಲಿಲ್ಲ!

ಅದೇಕೆ? ಮೃತಪತಿಯ ಉಯಿಲೊಂದಿದ್ದಿತು ಅದು ಈಕೆಗೆ ವಿವಾಹವಾಗುವ ದಿನದ ಹಿಂದೆಯ ದಿನವೇ ಬರೆಯಲ್ಪಟ್ಟಿದ್ದು ಅದರ ಪ್ರಕಾರ ಆಸ್ತಿಯೆಲ್ಲವೂ, ತನ್ನ ಮಕ್ಕಳಿಗೇ ಎಂದೂ, ಹೆಂಡತಿಗೆ ಅವಳಿಗೆ ಧನವಾಗಿ ಬಂದಿದ್ದ ೧೦೦೦ನ್ನು ಪುನಹಾ ಕೊಡುವುದಲ್ಲದೆ, ಅವಳು ತನ್ನಲ್ಲಿ ಹುಟ್ಟಿದ ಹೆಣ್ಣು ಮಕ್ಕಳೊಡನೆ ತನ್ನ ತಂದೆಯ ಮನೆಗೆ ಹೊರಟು ಹೋಗುವದೆಂದೂ ಬರೆದಿದ್ದಿತು. ಅವಳು ಮಕ್ಕಳಿಬ್ಬರನ್ನೂ ಕಟ್ಟಿಕೊಂಡು ಅಲ್ಲಿಂದ ಪುನಹಾ ತನ್ನ ಮುದಿ ತಂದೆ ಇದ್ದಲ್ಲಿಗೆ ಬಂದಳು ವಿವರವಾಗಿ ಬರೆಯಲಾರೆ, ಆ ಮುದುಕನು ಈಕೆಯ ದುರವಸ್ಥೆಯನ್ನು ಕೇಳಿದೊಡನೆಯೆ ಎದೆಯೊಡೆದು, ತನ್ನ ಮಗಳ ಕಡೆಗೆ ಕಣ್ಣಿಟ್ಟು ಮಡಿದೇ ಹೋದನು

ಅನಂತರ,—ಕಲಾವತಿಯು ಕೆಲಕಾಲ ಅಡುಗೆಗೂ, ಬಾಣಂತಿಯರ ಶುಶ್ರೂಷೆಗೂ, ಮದುವೇ ಕಾಲಗಳಲ್ಲಿ ಭೋಜನಗಳಿಗೂ, ಕ್ರಮೇಣ [illegible] ನಿತ್ಯ ಅತಿಥಿಯಾಗಿ ಕಡೆಗೆ ಹೆಸರುಗೆಟ್ಟು ಹೋಗುತ್ತಾ,—ಮಕ್ಕಳಿರಡನ್ನೂ ಸ್ವಜಾತಿಯವರೇ ಆದರಿಸದ ದೆಸೆಯಿಂದ ಅನಾಥಾಶ್ರಮಕ್ಕೆ ಕಳುಹಿಸಿಕೊಟ್ಟು, ತಾನು, ಈಗ ಪತಿತೆಯರಾದ ಸ್ತ್ರೀಯರ ಜತೆ ಸೇರಿರುವಳು. ಇದೊಂದು ಎಚ್ಚರಿಕೆಯೋ,—ದುಸ್ಥಿತಿಯೋ?—

K.

ಹುಚ್ಚುನಾಯಿ ಕಡಿಯುವುದು.

ಹುಚ್ಚು ನಾಯಿಯಿಂದ ಕಡಿಯಲ್ಪಟ್ಟ ಜನರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ಇದರಿಂದ ಅನೇಕ ಜನರು ಮತ್ತು ಪ್ರಾಣಿಗಳು ಪ್ರಾಣವನ್ನು ಕಳೆದುಕೊಳ್ಳುತ್ತಿರುವರು. ಅದುಕಾರಣ ಇದರ ವಿಚಾರವಾಗಿ ಸ್ವಲ್ಪಮಟ್ಟಿಗಾದರೂ ಸಾಧಾರಣ ಜನರಿಗೂ ತಿಳಿಯುವಂತೆ ಕೆಲವು ಸಂಗತಿಗಳನ್ನು ಇಲ್ಲಿ ವ್ಯಕ್ತಪಡಿಸಬೇಕೆಂಬುದೇ ನನ್ನ ಅಭಿಲಾಷೆ. ಈ ವಿಷಯವು ಸೂಕ್ಷ್ಮವಾದುದಾದರೂ ಪ್ರಾಣಾಪಾಯವನ್ನು ಬಹುಮಟ್ಟಿಗೆ ಹೋಗಲಾಡಿಸತಕ್ಕದಾದ ಪ್ರಯುಕ್ತ ಎಲ್ಲರೂ ಲಕ್ಷ್ಯದಲ್ಲಿಡಬೇಕೆಂದು ಬೇಡುತ್ತೇನೆ.

ಕೆಲವು ಮಂದಿಗಳು ಸಾಧಾರಣ ನಾಯಿಯಿಂದ ಕಡಿಯಲ್ಪಟ್ಟರೂ ಹುಚ್ಚು ನಾಯಿಯಿಂದ ಕಡಿಯಲ್ಪಟ್ಟಿರಬಹುದೆಂಬ ಶಂಕೆಯಿಂದ ಬಹಳ ತತ್ತರಿಸುವರು, ಮತ್ತು ಇದಕ್ಕಾಗಿ ಎಲ್ಲ ವಿಧದ ಚಿಕಿತ್ಸೆಗಳನ್ನೂ ಪಡೆಯುವರು ಆದರೆ ಇನ್ನು ಅನೇಕ ಜನರು ಹುಚ್ಚು ನಾಯಿಯಿಂದ ಕಡಿಯಲ್ಪಟ್ಟರೂ ಕೂಡ ಸಾಧಾರಣವಾದ ನಾಯಿಯಿಂದ ಕಡಿಯಲ್ಪಟ್ಟಿರಬಹುದೆಂದು ಅಲಕ್ಷಿಸಿ, ಕಡಿದ ಜಾಗಕ್ಕೆ ಕೊಂಚ ಹಸುರಿನ ರಸ ಅಥವಾ ಕಾದ ಕಬ್ಬಿಣದ [illegible] ಇತ್ಯಾದಿ ಚಿಕಿತ್ಸೆಗಳನ್ನು ಮಾಡಿ ತತ್ಕಾಲದಲ್ಲಿ ವ್ಯಾಧಿಯು ತೊಲಗಿತೆಂದು ನಿರ್ಭಯದಿಂದ ಸುಮ್ಮನಿರುವರು ಕೆಲವು ತಿಂಗಳ ತರುವಾಯ ಪ್ರಾಣಾಪಾಯಸ್ಥಿತಿಯು ಬಂದಾಗ್ಗೆ ಕಾರಣವನ್ನು ತಿಳಿಯದೆ ಮುಗ್ಧರಾಗಿ ಪ್ರಾಣವನ್ನೀಗುವರು ಈ ತೊಂದರೆಗಳನ್ನು ನಿವಾರಿಸಿಕೊಳ್ಳುವುದಕ್ಕಾಗಿ ಹಾಗೆ ಕಚ್ಚಿದ ನಾಯಿಯು ಹುಚ್ಚು ಹಿಡಿದುದೆ? ಅಲ್ಲವೆ? ಎಂಬುದನ್ನು ತಿಳಿಯಬೇಕಾದುದು ಮುಖ್ಯ ವಿಷಯವು. ಹೇಗೆಂದರೆ —

ಒಂದು ಹುಚ್ಚುನಾಯಿಯು ಮತ್ತೊಂದು ನಾಯಿಯನ್ನು ಈ ದಿನ ಕಡಿದಿತ್ತೆಂದು ಭಾವಿಸೋಣ, ಹೀಗೆ ಕಡಿಯಲ್ಪಟ್ಟ ನಾಯಿಯಲ್ಲಿ ರೋಗದ ಚಿನ್ಹೆಯು ತೋರಬೇಕಾದರೆ ೯ರಿಂದ ೭ ವಾರಗಳ ವರಗೆ ಹಿಡಿಯುವುದು ರೋಗದ ಮೊದಲನೆ ಚಿನ್ಹೆಯೇನೆಂದರೆ—ಇತರ ನಾಯಿಗಳನ್ನಾಗಲಿ, ಪ್ರಾಣಿಗಳನ್ನಾಗಲಿ, ಜನರನ್ನಾಗಲಿ ಕಡಿಯಲಾರಂಭಿಸುವುದು, ಹೀಗೆ ಕಡಿದ ನಂತರ ೪—೫ ದಿನಗಳಲ್ಲಿ ಕಂಡಕಂಡ ಜನಗಳ ಮೇಲೂ ಪ್ರಾಣಿಗಳ ಮೇಲೂ ಬೀಳುವುದು ಬಹು ಗಟ್ಟಿಯಾಗಿ ಅರಚಿಕೊಳ್ಳುವುದು, ನೀರನ್ನು ಕಂಡರೆ ಬೆದರುವುದು, ವಿಪರೀತವಾಗಿ ಬಾಯಿಯಿಂದ ಜೊಲ್ಲನ್ನು ಸುರಿಸುವುದು, [illegible]ಯನ್ನು ಮೋತುಬಿಡುವುದು ಇತ್ಯಾದಿ ಚೇಷ್ಟೆಗಳು ಕೆಲವು ನಾಯಿಗಳಲ್ಲಿ ಕಂಡುಬರುವುವು ಕೆಲವು ನಾಯಿಗಳಲ್ಲಿ ಮಂಕಾಗಿ ಒಂದು ಕಡೆ ಬಿದ್ದಿರುವುದು ವಾಯುವಿನ ಚಿನ್ಹೆ, ಅಂಗಗಳ ಸೆಳೆತ, ಜ್ಞಾನಶೂನ್ಯತೆ, ಮತ್ತು ನೀರಿಗೆ ಭೀತಿಯನ್ನು ತೋರಿಸುವುದು—ಇವುಗಳು ಗೋಚರಿಸುವುವು ಇವೆರಡು ತೆರದವೂ ಕೂಡ ಕೊನೆಕೊನೆಗೆ ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳುವುದಕ್ಕೂ ಕೂಡ ಶಕ್ತಿಯಿಲ್ಲದಂತಾಗುವುವು

ಮತ್ತು ೧—೨ನೆ ದಿನ ಅಥವಾ ೫ ೬-೭ನೆ ದಿನಗಳಲ್ಲಿ ಸಾಯುವುವು ಅಥವಾ ೧೦ ದಿನಗಳೊಳಗೆ ಯಾವ ದಿನವಾದರೂ ಸಾಯುವುವು. ಅಂತೂ ೧೦ ದಿನಗಳ ವರಗೆ ಬದುಕಿರುವುದು ಬಹು ಅಪರೂಪ ಹಾಗೆ ಮನುಷ್ಯರನ್ನಾಗಲೀ ಅಥವಾ ಪ್ರಾಣಿಗಳನ್ನಾಗಲಿ ಕಡಿದ ನಂತರ ೧೦ ದಿನಗಳಿಗಿಂತಲೂ ಹೆಚ್ಚಾಗಿ ಯಾವ ನಾಯಿಯು ಬದುಕಿರುವುದೋ ಅದನ್ನು ಖಂಡಿತವಾಗಿಯೂ ಹುಚ್ಚು ನಾಯಿಯಲ್ಲವೆಂದು ತಿಳಿಯಬೇಕು ಈ ವಿಷಯವು ಬಹು ವರ್ಷಗಳಿಂದ ಶಾಸ್ತ್ರಜ್ಞರಿಂದ ಪರೀಕ್ಷಿಸಲ್ಪಟ್ಟುದಾಗಿದೆ.

ಮನುಷ್ಯರಲ್ಲೂ ಕೂಡ ಹುಚ್ಚು ನಾಯಿಯಿಂದ ಕಡಿಯಲ್ಪಟ್ಟು ೧೫ ದಿನಗಳಾದ ಮೇಲೆ ೨—೬ ತಿಂಗಳ ವರೆಗೆ (ವಿಶೇಷವಾಗಿ ಸುಮಾರು ೪೦ ದಿನಗಳಲ್ಲಿ) ರೋಗದ ಚಿನ್ಹೆಗಳು ತಲೆದೋರುವುವು. ಈ ರೋಗದ ಹೆಸರನ್ನು ಇಂಗ್ಲಿಷ್‌ನಲ್ಲಿ ಹೈಡ್ರೊಫ್ಹೋಬಿಯಾ (Hydrophobia) ನೀರನ್ನು ದೃಷ್ಟಿಸಲಾಗದಿರುವುದು ಎಂದು ಕರೆಯುವರು ರೋಗವು ಒಂದುಸಾರಿ ತಲೆದೋರಿದರೆ ಮರಣವೇ ಕೊನೆಯು ಮತ್ತೆ ಬೇರೆ ಉಪಾಯವಿಲ್ಲ. ಮನುಷ್ಯರಲ್ಲೂ ಕೂಡ ಮೇಲೆ ಹೇಳಲ್ಪಟ್ಟ ಚಿನ್ಹೆಗಳೇ ಕಾಣಿಸಿಕೊಳ್ಳುವುವು. ಆದಕಾರಣ, ಯಾರಾದರೂ ನಾಯಿಯಿಂದ ಕಡಿಯಲ್ಪಟ್ಟರೆ, ಆ ನಾಯಿಯನ್ನು (ಸಾಕಿದ ನಾಯಿ, ಪೇಟೆನಾಯಿ ಎಂಬ ವ್ಯತ್ಯಾಸವಿಲ್ಲದೆ) ಹಿಡಿದು, ಪ್ರತ್ಯೇಕವಾಗಿ ೧೦ ದಿನಗಳ ವರೆಗೆ ಕಟ್ಟಿರಬೇಕು ಎಂದಿನಂತೆ ಅದಕ್ಕೆ ಆಹಾರೋಪಚಾರವನ್ನು ಬಹಳ ಎಚ್ಚರಿಕೆಯಿಂದ ಮಾಡಬೇಕು ಜನಗಳಾಗಲಿ, ಮಕ್ಕಳಾಗಲಿ, ಇತರ ಪ್ರಾಣಿಗಳಾವುವೇ ಆಗಲಿ ಅದರ ಹತ್ತಿರಕ್ಕೆ ಖಂಡಿತವಾಗಿ ಹೋಗಕೂಡದು ೧೦ ದಿನಗಳೊಳಗೆ ಆ ನಾಯಿಯು ರೋಗದ ಚಿನ್ಹೆಗಳನ್ನು ತೋರಿಸಿದರಾಗಲಿ ಮೃತಿಯನ್ನೊಂದಿದರಾಗಲೀ ಒಡನೆಯೇ ಆ ನಾಯಿಯಿಂದ ಕಡಿಯಲ್ಪಟ್ಟ ಮನುಷ್ಯನನ್ನು ಕಸೌಲಿಗೆ ಅಥವಾ ಕುನ್ನೂರಿನಲ್ಲಿರುವ ವೈದ್ಯಾಲಯಕ್ಕೆ ಚಿಕಿತ್ಸೆಗಾಗಿ ತಾತ್ಸಾರ ಮಾಡದೆ ಕಳುಹಿಸಬೇಕು. ಮತ್ತು ಇದಕ್ಕಾಗಿ ಸರಕಾರದವರೂ ಕೂಡ ತಕ್ಕ ಸಹಾಯವನ್ನು ಒದಗಿಸಿ ಕೊಡುವರು. ನಾಯಿಯಿಂದ ಕಡಿಯಲ್ಪಟ್ಟ ಒಡನೆಯೇ ಆ ಘಾಯವನ್ನು ಕಾಸಿದ ಕಬ್ಬಿಣದಿಂದ ಸುಡಬೇಕು. ಅಥವಾ /ಕಾರ್ಬಾಲಿಕ್ ದ್ರಾವಕವನ್ನು ಹಚ್ಚಬೇಕು. ಹಾಗೆ ಒಂದುವೇಳೆ ನಾಯಿಯನ್ನು ಪ್ರತ್ಯೇಕವಾದ ಜಾಗದಲ್ಲಿಡಲು ಅನುಕೂಲವಿಲ್ಲದಿದ್ದರೆ

ಈ ನಾಯಿಯನ್ನು ದನಗಳ ವೈದ್ಯಶಾಲೆಯಲ್ಲಿಡುವುದುತ್ತಮ. ಈ ವಿಷಯವನ್ನು ಪೋಲೀಸಿನ ಇಲಾಖೆಯವರು, ಮತ್ತು ಗ್ರಾಮಾಧಿಕಾರಿಗಳಾದ ಪಟೇಲರೇ ಮೊದಲಾದವರೂ ನೆನಪಿನಲ್ಲಿಡಬೇಕಾದುದು ಅತ್ಯಂತಾವಶ್ಯಕವು.

ಬೊಂಬಾಯಿ
ತಾ. 6-6-14.

ವೈ. ವಿಶ್ವನಾಥಯ್ಯ.
ಎಲ್. ಎಮ್. ಎಂಡ್ ಎಸ್.

ವ್ಯಾಸರಾಯ ಪ್ರಭುಗಳವರ ಜನ್ಮ ದಿನೋತ್ಸವವು.

ನಮ್ಮ ಮನಃಪೂರ್ವಕವಾದ ಪ್ರೀತಿ ಪಾತ್ರರಾದ ಪ್ರಥಮದ ವ್ಯಾಸರಾಯ ಪ್ರಭುಗಳವರ ಮೇಲೆ ತಮಗಿರುವ ವಿಶ್ವಾಸ ಭಕ್ತಿ ರಸಗಳನ್ನು ವ್ಯಕ್ತಗೊಳಿಸುವರೆ ಹಿಂದೂಸ್ಥಾನದ ಈ ಪ್ರಥಮ ಪುರುಷರ ಈ ವರುಷದ ಜನ್ಮ ದಿನಾಚರಣೆಯನ್ನು ಶಾಲಾ ಬಾಲಕರನ್ನು ಆನಂದಗೊಳಿಸುವಂತೆ ನಡಿಸಲಿಕ್ಕೆ ಕೈಕೊಂಡ ಕೇಕು, ಬಿಸ್ಕಿಟ್ ಮೊದಲಾದ ಭಕ್ಷ್ಯಾದಿಗಳ ಮಾರ್ವಾಟದಲ್ಲಿ ಪ್ರಸಿದ್ಧರಾದ ಮಂಗಳೂರಿನ ಸ್ಟೀವನ್ ಎಂಡ್ ಸನ್ಸರ ಕೆಲಸವು ಬಲು ಶ್ಲಾಘನೀಯವಾದದ್ದು. ಈ ಉತ್ಸವದ ದಿವಸ ಉದಾರ ಮನಸ್ಸಿನ ಈ ಫರ್ಮಿನವರು ಮಂಗಳೂರು ಎಲಿಮೆಂಟರಿ ಶಾಲೆಗಳ ಸುಮಾರು ೪೦೦೦ ವಿದ್ಯಾರ್ಥಿಗಳಿಗೆ ತಮ್ಮ ಫರ್ಮಿನ ಲೆಕ್ಕದಲ್ಲಿ ಬಿಸ್ಕಿಟ್, ಮಾಕ್ರೊನ್ ಮೊದಲಾದ ತಿಂಡಿಗಳನ್ನು ಉಚಿತವಾಗಿ ಕೊಡುವರು. ಈ ತಮ್ಮ ವಿಲಿವಾರಿಯನ್ನು ತಂತೀ ಮೂಲಕ ವ್ಯಾಸರಾಯ ಪ್ರಭುಗಳವರ ಗಣನೆಗೆ ತಂದು ಸದರಿ ಪ್ರಭುಗಳವರ ಮಂಜೂರಾತಿ ಪತ್ರವನ್ನು ಸೀದಾ ತರಿಸಿರುತ್ತಾರೆ. ಈ ಪ್ರಭುಗಳವರ ಮಂಜೂರಾತಿ ಪತ್ರದ ನಕಲನ್ನು ನಮಗೆ ಕಳುಹಿಸಿ ಇದೇ ಶನಿವಾರ ಜೂನ್ ತಾ. ೨೦ಕ್ಕೆ ತಾವು ಕೈಕೊಂಡ ಉತ್ಸವವನ್ನು ಪೂರ್ಣ ಜಯದಿಂದ ನಡಿಸುವರೆ ಸಹಾಯಮಾಡಬೇಕಾಗಿ ಸದರಿ ಸ್ಟೀವನ್ ಎಂಡ್ ಸನ್ಸರು ನಮ್ಮ ಎಲಿಮೆಂಟರಿ ಎಸೋಸಿಯೇಶನನ್ನು ಕೇಳಿಕೊಂಡರು.

ಹೀಗಾಗಿ ಮಂಗಳೂರು ಎಲಿಮೆಂಟರಿ ಅಧ್ಯಾಪಕ ಸಂಘದ ಸಭೆಯು ಮೊನ್ನೆ ಮಂಗಳವಾರ ಜೂನ್ ತಾ. ೧೬ರಲ್ಲು ಸಾಯಂಕಾಲ ೫-೩೦ ಗಂಟೆಗೆ ಈಗಿನ ಸುಪರ್ ವೈಸರಾದ ಮೆ| ಪಿ. ಕೊರೆಯರವರು ಅಧ್ಯಕ್ಷರಾಗಿದ್ದು ಕದ್ರಿ ಸೈಂಟ್ ಕ್ಸೆವಿಯರ್ಸ್ ಪಾಯೊನಿಯರ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಸೆಕ್ರೆಟರಿಯವರು ಸ್ಟೀವನ್ ಸನ್ಸರ ಪತ್ರವನ್ನೂ ವ್ಯಾಸರಾಯ ಪ್ರಭುಗಳವರ ಅಂಗೀಕಾರ ಪತ್ರವನ್ನೂ ಸಭೆಗೆ ಓದಿ ಹೇಳಿದ ನಂತರ, ಕಂಕನಾಡಿ ಶಾಲೆಯ ಮೆನೇಜರರಾಗಿರುವ ಮೆ| ಸಿ. ಎಮ್. ಡೇಸರು ನಮ್ಮ ಶಾಲೆಗಳ ಮಕ್ಕಳಿಗೆ ಮಾಡುವ ಧರ್ಮಕ್ಕಾಗಿ ಸ್ಟೀವನ್ ಸನ್ಸರಿಗೆ ಎಸೋಸಿಯೇಶನ್ ಸಂಘದ ವಂದನೆಗಳು ಕಳುಹಿಸಬೇಕೆಂಬ ಠರಾವನ್ನು ಸಭಾ ಮುಂದಿಟ್ಟರು ಇದು ಬೊಕ್ಕಪಟ್ಣ ಮಿಶ್ಯನ್ ಶಾಲೆಯ ಮೆ| ಎಸ್. ಗಂಗೇರರಿಂದ ಅನುಮೋದಿಸಲ್ಪಟ್ಟು ಸಭೆಯಿಂದ ಕಾಯಂ ಮಾಡಲಾಯಿತು. ವ್ಯಾಸರಾಯ ಪ್ರಭುಗಳವರಿಗೆ ನಮ್ಮ ಎಸೋಸಿಯೇಶನಿನ "ಬರ್ತ್‌ಡೇಯ ಗ್ರೀಟಿಂಗ್ಸ್" ಕಳುಹಿಸಲ್ಪಟ್ಟು ಅದರೊಟ್ಟಿಗೆ ಮೆಸ್ಸರ್ಸ್ ಸ್ಟೀವನ್ ಎಂಡ್ ಸನ್ಸರ ಔದಾರ್ಯ ಭಾವವನ್ನು ಸಹ ತಂತೀ ಮೂಲಕ ತಿಳಿಸಬೇಕಾಗಿ ಬುಚ್ಚರ್ಸ್ ಲೇನ್ ಹಿಂದೂಸ್ಥಾನಿ ಶಾಲೆಯ ಮಾಸ್ತರರಾದ ಮೆ| ಶೇಕ್ ಫರೀದರಿಂದ ಸಭೆಯ ಮುಂದಿಟ್ಟ ಆಲೋಚನೆಯನ್ನು ಜೆಪ್ಪು ಸೈಂಟ್ ಜೋನ್ಸ್ ಹಾಯರ್ ಎಲಿಮೆಂಟರಿ ಶಾಲೆಯ ಮ| ರಾ| ಎಮ್. ಬಾಬುರಿಂದ ಅನುಮೋದಿಸಲ್ಪಟ್ಟು ಸಭೆಯಿಂದ ಅಂಗೀಕರಿಸೋಣಾಯಿತು

ಮೆ| ಸ್ಟೀವನ್ ಸನ್ಸರು ಒದಗಿಸಿ ಕೊಡಲು ತಿಂಡಿಯನ್ನು ಬಾಲಕರಿಗೆ ಶನಿವಾರ ದಿವಸ ಬೆಳಿಗ್ಯೆ ಆಯಾ ಶಾಲೆಗಳಲ್ಲಿಯೇ ಹಂಚಿಸೋಣಾಗಬೇಕೆಂಬ ಸಂಗತಿಯು ಮಿಟಿಂಗಿನಲ್ಲಿ ನಿರ್ಣಯವಾದ ಬಳಿಕ, ಈ ಸೂಚನೆಯನ್ನು ತಂದ ಜೆಪ್ಪು ಮಿಶ್ಯನ್ ಶಾಲೆಯ ಮೆ| ಜಿ. ಬಿ. ಕೊಟೊಟರು, ಕೂಡಿದರೆ ಮಧ್ಯಾಹ್ನದ ನಂತರ ಎಲ್ಲಾ ಶಾಲೆಗಳ ಮಕ್ಕಳನ್ನು ಮೈದಾನಿನ ಮೇಲೆ ಬರಮಾಡಿ ಕದ್ರಿಯ ಮೆ| ಮಾರ್ಸೆಲರ ಸೋಜರು ಕೊಟ್ಟ ಸಿಲ್ವರ್ ಕಪ್ಪಿಗಾಗಿ ಪಂದ್ಯಾಟವಾಡಿಸಿದರೆ ಬಹಳ ಚಂದವಿತ್ತೆಂಬ ಆಲೋಚನೆಯು ಸಭೆಯವರಿಂದ ಚರ್ಚಿಸಲ್ಪಟ್ಟು ಈಗ ಮಳೆಗಾಲವು ಪ್ರಾರಂಭವಾಗಿ ಮಳೆ ಸುರಿಯುವ ಸಮಯದ ನಿಶ್ಚಯವಿಲ್ಲವಾದ್ದರಿಂದ ಇದು ಸಾಧ್ಯವಲ್ಲವೆಂದು ತೀರ್ಮಾನಿಸಿ, ಕಣ್ಣೂರು ಶಾಲೆಯ ಮೆನೇಜರರಾದ ಮೆ| ಡಿ. ಅಂತೊರವರು ಮಕ್ಕಳಿಗೆ ಭಕ್ಷ್ಯಗಳನ್ನು ಶಾಲೆಯಲ್ಲಿ ಹಂಚಿಸುವಾಗಲೇ ಸಂದರ್ಭಕ್ಕೆ ಯೋಗ್ಯವಾದ ಗೀತಗಳನ್ನೂ ಆಟಗಳನ್ನೂ ಆಡಿಸಬಹುದು ಎಂಬ ಸೂಚನೆಯು ಕಂಡತ್ ಪಳ್ಳಿ ಶಾಲೆಯ ಹೆಡ್ ಮಾಸ್ತರರಾದ ಮೆ| ಅಹಮ್ಮದ ಸಾಹೇಬರಿಂದ ಅನುಮೋದಿಸಲ್ಪಟ್ಟು ಸಭೆಯವರಿಂದ ಕೈಕೊಳ್ಳಲಾಯಿತು. ನಂತರ ಅಧ್ಯಕ್ಷರು ಮಂಗಳೂರು ಎಲಿಮೆಂಟರಿ ಎಸೋಸಿಯೇಶನಿಗೆ ಸೇರಿದ ಎಲ್ಲಾ ಶಾಲೆಗಳ ಮಕ್ಕಳ ಸಂಖ್ಯೆಯ ಪಟ್ಟಿ ಮಾಡಿದನಂತರ, ಸೆಕ್ರೆಟರಿಯವರಿಂದ ವಂದಿಸಲ್ಪಟ್ಟು ಸಭೆಯು ಅಂತ್ಯವಾಯಿತು.

M. A. M. D'Souza,
Secretary,
Elementary Teachers' Association, Mangalore.

ಪತ್ರವ್ಯವಹಾರ.

ಅಯ್ಯಾ,

ನಿಮ್ಮ ಅಮೂಲ್ಯವಾದ ವಾರ ಪತ್ರಿಕೆಯಲ್ಲಿ ಈ ಕೆಳಗಿನ ಸಂಗತಿಯನ್ನು ಪ್ರಕಟಿಸಲು ಸ್ವಲ್ಪ ಸ್ಥಳ ಕೊಡಬೇಕೆಂದು ವಿನಂತಿ.

ದಯಾಳು ಸರಕಾರದವರು ಜನರ ಉಪಕಾರಾರ್ಥವಾಗಿ ಅಲ್ಲಲ್ಲಿ "ಪೊರಂಬೋಕ" ಸ್ಥಳಗಳನ್ನು ಬಿಟ್ಟಿರುವರು. ಇಂಥಾ ಸ್ಥಳಗಳಲ್ಲಿ ಅಶ್ವತ್ಥ ಕಟ್ಟೆಗಳು, ಜನರಿಗೆ ವಿಹರಿಸಲುಪಯುಕ್ತವಾದ ಮೈದಾನುಗಳು ಇರುವವು. ಪರಂತು, ಇಂಥಾ ಸ್ಥಳಗಳಲ್ಲಿ ಗಾಡಿಗಳನ್ನು ತಂಗಿಸುವೆದು, ಎತ್ತುಗಳನ್ನು ಕಟ್ಟಿ, ಗಲೀಜು ಮಾಡುವದು, ಮುಂತಾದ ಕೃತ್ಯಗಳಿಂದ ಸುತ್ತುಮುತ್ತಲಿನ ನಿವಾಸಿಕರಿಗೆ ವಾಸಿಸಲು ಅಸಾಧ್ಯವಾಗಿ ಮಾಡುವದು ಎಂಥಾ ನ್ಯಾಯ? ನಮ್ಮ ಪೂರ್ವಜರಾದರೋ ಪರೋಪಕಾರಕ ಸಂಸ್ಥೆಗಳಿಂದ ಶಾಶ್ವತ ಕೀರ್ತಿಯನ್ನೂ ಪುಣ್ಯವನ್ನೂ ಸಂಪಾದಿಸಿದರು. ನಾವಾದರೋ ಸ್ವಾರ್ಥಪರರಾಗಿ ಪರೋಪದ್ರವ್ಯಕಾರಕ ಕೃತ್ಯಗಳನ್ನು ನಡಿಸಿ ನಮಗೂ ನಮ್ಮ ಪರಂಪರೆಗೂ ಪಾಪವನ್ನು ಸಂಪಾದಿಸಲು ಯತ್ನಿಸುವೆವು.

ಡೊಂಗರಕೇರಿಯಲ್ಲಿ ಕೆನರಾ ಹ್ಯಾಸ್ಕೂಲಿನ ಸಮೀಪ ಜೋಡು ಅಶ್ವತ್ಥ ಕಟ್ಟೆಗಳ ಬಳಿ ಸ್ವಲ್ಪ ಖಾಲಿ ಸ್ಥಳವಿದೆ. ಇದು ಪೊರಂಬೋಕ ಸ್ಥಳವಂತೆ. ಮುನಿಸಿಪಾಲಿಟಿಯವರು ಈ ಸ್ಥಳದಲ್ಲಿ ಒಂದು ಒಳ್ಳೇ ಬಾವಿ ಅಗೆದು ಈ ಸ್ಥಳವು ಮತ್ತಷ್ಟು ಪ್ರಯೋಜನಕರವಾಗಿದೆ. ಈ ಕೇರಿಯ ಜನರು ನೀರು ಸೇದಲು ಈ ಸ್ಥಳಕ್ಕೆ ಗುಂಪು ಗುಂಪಾಗಿ ರಾತ್ರಿ ಹಗಲು ಬರುವರು. ಇಂಥಾ ಸ್ಥಳದಲ್ಲಿ ಯಾರೋ ಕೆಲವು ಪುಣ್ಯಾತ್ಮರು ಹಲವು ತಿಂಗಳುಗಳಿಂದ ಮರವನ್ನು ಸಿಗಿಸುತ್ತಿರುವರು ಮಾತ್ರವಲ್ಲ; ಗಾಡಿಗಳನ್ನು ತಂಗಿಸಿ ಎತ್ತುಗಳನ್ನು ಕಟ್ಟಿ ಈ ಇಡೀ ಸ್ಥಳವನ್ನು ಗಲೀಜು ಮಾಡಿರುವರು. ಒಂದು ಕಡೆಯಿಂದ ಮರದ ಕೊರಡಿನ ಏಟು ತಲೆಗೆ ತಾಗಿತೋ ಎಂಬ ಭಯ, ಮತ್ತೊಂದು ಕಡೆಯಿಂದ ಎತ್ತು ಹಾಯುವದೋ ಎಂಬ ಹೆದರಿಕೆ. ಎತ್ತಿನ ಗಂಜಳ ಸೆಗಣಿಯಿಂದ ಕಾಲು ಜಾರಿತೆಂದರೆ ಭೂಶಯ್ಯಾಲಿಂಗನ ಮಾಡಬೇಕು. ಇಡೀ ದಿವಸ "ಗಸಗಸ" ಎಂಬ ಕರ್ಕಶ ಸ್ವರದಿಂದ ಮನಸ್ಸಿಗೆ ಸಮಾಧಾನವೇ ಇಲ್ಲ. ಹೆಚ್ಚೇಕೆ? ಬೇಸಿಕಾಲದ ರಜೆ ತೀರಿ ಎಲ್ಲಾ ಶಾಲೆಗಳು ಆರಂಭವಾಗಿವೆ. ಫಕ್ಕನೇ ಒಂದು ಎತ್ತು ಮಗುವಿಗೆ ಹಾಯಿತೆಂದರೆ ಮಕ್ಕಳನ್ನು ಶಾಲೆಗೆ ಕಳುಹಿಸುವದೇ ಕಷ್ಟ.

ಸ್ಥಳೀಕಾದಿಕಾರಿಗಳು ಈ ಸಂಗತಿಯನ್ನು ಲಕ್ಷ್ಯಕ್ಕೆ ತಂದು ಇಷ್ಟು ಅಪಾಯಕರವಾದ ಕೃತ್ಯಗಳನ್ನು ಈ ಸ್ಥಳದಲ್ಲಿ ನಡಿಸದಂತೆ ನೋಡುವದು ಉತ್ತಮವೆಂತ ನಾನು ಬೇರೆ ಹೇಳಬೇಕೆಂತಿಲ್ಲ.

ಗುಡ್ಡೆ ಕೇರಿ,
ತಾ. 15-6-1914.

ಪುರವಾಸಿ

"ಮುಕ್ತಪುರದ ಹರ್ಷರಾಜರು"

ಪತ್ರಾಧಿಪರೇ,

ನಿಮ್ಮ ಪತ್ರದ ಕಳೆದ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟ "ಮುಕ್ತಪುರದ ಹರ್ಷರಾಜ" ರ ಲೇಖದಲ್ಲಿ ಕೆಲವು ವಿಷಾದಕರ ಅಭಿಪ್ರಾಯಗಳಿರುವವು. ನಮ್ಮ ಪ್ರಾಂತ್ಯದಲ್ಲಿ ಮಂಗಳೂರಿನಿಂದ ೩೧ ಮೈಲು ದೂರಕ್ಕೆ ಮುಕ್ತಪುರವೆಂಬ ಊರು ಇರುವುದೆಂಬದು ನನಗೆ ಈ ತನಕ ಗೊತ್ತಿರುವದಿಲ್ಲ. ಹರ್ಷರಾಜರೆಂಬ ಹೆಸರು ಸಹ ರೂಢಿಯಲ್ಲಿಲ್ಲದ್ದು. ಇದೇ ರೀತಿ ಈ ಮಹನೀಯರು ತಮ್ಮ ಅಭಿಪ್ರಾಯಗಳಲ್ಲಿ ವ್ಯಕ್ತಗೊಳಿಸಿದ ಕೆಲವು ಭಾವನೆಗಳು ಮಂಗಳೂರಲ್ಲಿ ಇಲ್ಲದವುಗಳು. ಅಥವಾ ಒಂದು ವೇಳೆ ಇರುವಂಥವುಗಳೆಂತ ಹೇಳಿದರೂ ಈ ಭಾವನೆಗಳು ಹರ್ಷರಾಜರು ವರ್ಣಿಸಿರುವಂತೆ ವಿಪರೀತ ಸ್ವಭಾವದವುಗಳಲ್ಲ. ಮಂಗಳೂರು ಎಮೆಟರ್ ಡ್ರಮೆಟಿಕ್ ಕಂಪೆನಿಯವರು ಆಡಿದ 'ತುಕಾರಾಮ' ನಾಟಕವನ್ನು ನೋಡಿ ಅದರ ರಸಸ್ವಾದನೆಯನ್ನು ಮಾಡಿದ ನಂತರವೂ ಹರ್ಷರಾಜರು ಕೆಲವು ಹಿಂದೂ "ಭ್ರಾತೃರು" ತಮಗೆ ಕೊಟ್ಟ ಉತ್ತರವೆಂತ ಬರೆದಿರುವುದನ್ನು ನೋಡಿ

ತುಂಬಾ ದುಃಖಪಡಬೇಕು. ಸಾರಸ್ವತ ಶಾಲೆಯ ಮೇಲೆ ಮತ್ತು ಮಂಗಳೂರು ಎಮೆಟರ್ ಡ್ರೆಮೆಟಿಕ್ ಕಂಪೆನಿಯ ಮೇಲೆ ಹರ್ಷರಾಜರಿಗಿರುವ ಅತಿಶಯವಾದ ಪ್ರೇಮವು ಮಿತಿಮೀರಿ 'ತುಕಾರಾಮ' ನಾಟಕ ನೋಡಿದ ಭ್ರಮೆಯಿಂದ 'ಕೆಲವು ಹಿಂದೂ ಭ್ರಾತೃರ' ಸಂಭಾಷಣೆಯನ್ನು ಹರ್ಷರಾಜರು ಬರೆದಿರಬೇಕೆಂತ ನಾನು ಭಾವಿಸುತ್ತೇನೆ. ಹರ್ಷರಾಜರು ಹೀಗೆ ಬರದಿರುವುದನ್ನು ನೋಡಿ ಎಮೆಟರ್ ಡ್ರೆಮೆಟಿಕ್ ಕಂಪೆನಿಯವರಾಗಲಿ, ಅಥವಾ ಸಾರಸ್ವತ ಶಾಲೆಯ ಆಡಳಿತೆ ಕೆಲಸವನ್ನು ಕೈಕೊಂಡಿರುವ ಮಹನೀಯರುಗಳಾಗಲಿ ಎಂದೂ ಸಂತೋಷ ಪಡಲು ಕಾರಣವಿಲ್ಲ. ಅಯ್ಯಾ ಹರ್ಷರಾಜರೇ, ತಾವು ಕೆಲವು ಹಿಂದೂ ಭ್ರಾತೃಗಳ ಸಂಭಾಷಣೆಯನ್ನು ಪತ್ರಕರ್ತರಿಗೆ ಬರೆದು ಕಳುಹಿಸುವ ಮೊದಲು ಸ್ವಲ್ಪ ವಿಚಾರವನ್ನಾದರೂ ಮಾಡಿ ನೋಡಬೇಕಿತ್ತಲ್ಲ? ಹರ್ಷರಾಜರೇ, ತಾವು ಎಮೆಟರ್ ಡ್ರೆಮೆಟಿಕ್ ಕಂಪೆನಿಯವರು ಆಡಿದ ನಾಟಕಗಳಲ್ಲಿ ಎಷ್ಟನ್ನು ನೋಡಿದಿರಿ? ಕೆಲವು ಹಿಂದೂ ಭ್ರಾತೃರುಗಳಲ್ಲ, ಹಲವು ಹಿಂದೂ ಭ್ರಾತೃರುಗಳು ಈ ಕಂಪೆನಿಯವರ ನಾಟಕಗಳನ್ನೂ, ಸಾರಸ್ವತ ಶಾಲೆಯ ಬಗ್ಗೆ ಏರ್ಪಡಿಸಿದ ಫೆನ್ಸಿ ಸೇಲ್ ಮೊದಲಾದವುಗಳನ್ನೂ ಪ್ರೋತ್ಸಾಹಿಸಿ ಸಾರಸ್ವತರ ಶಾಲೆಗೆ ಎಂಥಾ ಸಹಾಯವನ್ನು ಮಾಡಿರುವರೆಂಬುದು ಹರ್ಷರಾಜರು ತಿಳಿದಿರುವರೋ? "ಆ ನಾಟಕವು ಸಾರಸ್ವತರ ಶಾಲೆಗೋಸ್ಕರ ಮಾಡುವುದು, ನಮಗೇನೂ ಅದರಲ್ಲಿ ಸಂಬಂಧವಿಲ್ಲ. ನಮಗೆ ನಮ್ಮ ಶಾಲೆ ಇದೆ"—ಕೆಲವು ಹಿಂದೂ ಭ್ರಾತೃಗಳು ಕೊಟ್ಟ ಉತ್ತರವು ಇದಾಗಿದೆಂದು ಬರೆದಿರುವ ಹರ್ಷರಾಜರಿಗೆ ಒಂದು ವೇಳೆ ಈ ಸಮಾಚಾರವು ಗೊತ್ತಿಲ್ಲವಾದರೆ ಡ್ರೆಮೆಟಿಕ್ ಕಂಪೆನಿಯವರಿಗೆ ಮತ್ತು ಶಾಲಾ ಆಡಳಿತೆ ಕಮಿಟಿಯವರಿಗೆ ಈ ಬಗ್ಗೆ ಬರೆದು ಉತ್ತರ ತರಿಸಿಕೊಳ್ಳಲಿ, ಅನಂತರ ಹರ್ಷರಾಜರು ವ್ಯಕ್ತಗೊಳಿಸಿರುವ ಕೆಟ್ಟ ಭಾವನೆಯು ಎಲ್ಲಿರುವದೆಂಬದನ್ನು ನಿರ್ಣಯಿಸಿಕೊಳ್ಳಲಿ. ಹಲವು ಜನರಿಗೆ ಒಡಿಸಬೇಕೆಂದು ತಯ್ಯಾರಿಸಿರುವ ಹಾಲು ಸಕ್ಕರೆಯ ಪಾಯಸದಲ್ಲಿ ಕಿಲುಬು ಹಿಡಿದ ನಮ್ಮಟನ್ನು ಹಾಕಿ ಅನರ್ಥವನ್ನುಂಟುಮಾಡುವ ಸಾಧನೆಯು ಯಾರಿಗೂ ಸಲ್ಲದು. ಮುಕ್ತಪುರದಲ್ಲಿರುವ ಹರ್ಷರಾಜರೇ, 'ನಮ್ಮ ನಮ್ಮೊಳಗಿನ ಅಲ್ಪ ಕಾರಣಗಳಿಂದ ಉಂಟಾದ ಮನಃಕ್ಲೇಶಗಳನ್ನು ತ್ಯಜಿಸಿ ಅನ್ಯೋನ್ಯ ಭಾವವನ್ನುಂಟುಮಾಡುವ ಸಾಧನೆಯನ್ನು ಸರಿಯಾಗಿ ತಿಳಿಯಿರಿ. ಜನಾಂಗವಿಕ್ಯದ ವಿಶೇಷತ್ವವನ್ನು ಮಂಗಳೂರಿನವರು ಸಹ ಅರಿತಿರುವರು. ಹಿಂದೆ, ಹತ್ತಿಪ್ಪತ್ತು ವರುಷಗಳ ಹಿಂದೆ, ಹಿಂದೂ ಬ್ರಾತೃಗಳು ವಿದ್ಯಾಸಂಸ್ಥೆಯನ್ನು ಸ್ಥಾಪಿಸುತ್ತಿದ್ದಾಗ ಕೆಲವು ವಿದ್ಯಾವಂತ ಹಿಂದೂ ಬ್ರಾತೃಗಳು ನಡಿಸಿದ ವಿರೋಧಸಾಧನೆಯನ್ನು ಈಗ ಹಿಂದೂಗಳಲ್ಲಿ ಎಂಥವರೇ ಆಗಲಿ ಕೈಕೊಳ್ಳಲು ಹೇಸುವರು. ವಿದ್ಯಾಸಂಸ್ಥೆಗಳ ಪ್ರಯೋಜನವನ್ನು ಸರ್ವರೂ ತಿಳಿದಿರುವರು. ಕಾಲಮಾರ್ಗಟವನ್ನು, ಹರ್ಷರಾಜರೇ, ಪೂರ್ವಾಪರವಿಚಾರದಿಂದ ತಿಳಕೊಳ್ಳಿರಿ. ನಂತರ ಸಾರಸ್ವತರಲ್ಲದ ಕೆಲವು ಹಿಂದೂ ಭ್ರಾತೃಗಳನ್ನು ಲೋಕವೆಲ್ಲವು ತಿಳಿಯುವ ರೀತಿಯಲ್ಲಿ ಪತ್ರಮೂಲಕ ದೂರುವ ದೋಷಾರ್ಹವಾದ ಸಾಧನೆಗೆ ಕೈಹಾಕುವುದು ಉಚಿತವೋ ಎಂತ ಗ್ರಹಿಸಿರಿ.

ಅತ್ರಿಗೋತ್ರಜ.

~~~~~~

ಒರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲ್ಯಾಫ್ ಎಶ್ಯುರೆನ್ಸ್ ಕಂಪನಿ ಲಿಮಿಟೆಡ್, ಮದ್ರಾಸು ಬ್ರೇಂಚು, ಮದ್ರಾಸು. ತಾ ೨೦ನೇ ಮೇ ೧೯೧೪.

ಮಂಗಳೂರು "ಸ್ವದೇಶಾಭಿಮಾನಿ" ಪತ್ರಿಕೆಯ ಸಂಪಾದಕರವರ ಸನ್ನಿಧಾನಕ್ಕೆ.

ಸ್ವಾಮೀ,

ತಮ್ಮ ಪತ್ರಿಕೆಯ ಇದೇ ಮಾಹೆ (ಮೇ ಮಾಹೆ) ೧ನೇ ತಾರೀಕಿನ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವ ಒಂದು ಬಾತ್ಮಿಯ ಲೇಖನವು ನಮ್ಮ ಗಮನಕ್ಕೆ ತರಲ್ಪಟ್ಟಿರುತ್ತೆಯಾಗಿ ಆ ಬಾತ್ಮಿಯ ಲೇಖತದಲ್ಲಿ ನೆಲೆಗೊಂಡಿರಬಹುದಾದ ತಪ್ಪು ಅಭಿಪ್ರಾಯಗಳನ್ನು ನಿವಾರಣೆಮಾಡಲಪೇಕ್ಷಿಸುತ್ತೇವೆ.

ಕಂಪೆನಿಯ ಪಾಲುದಾರರಿಗೆ ಶೇಕಡ ೨೦ರಂತೆ ಲಾಭವು ದೊರಕುತ್ತಿದ್ದರೂ ವಿಮೇದಾರರಿಗೆ ಏನೂ ದೊರಕುವದಿಲ್ಲವೆಂದು ಹೇಳುವದು ಶುದ್ಧ ಅಸಂಗತವಾಗಿದೆ. ಏಕೆಂದರೆ ಸನ್ ೧೯೧೩ನೇ ಇಸವಿ ಡಿಸೆಂಬರ್ ೩೧ನೆಯ ತಾರೀಕಿಗೆ ಮುಗಿದ ಮೂರು ವರುಷಗಳಲ್ಲಿ ಪಾಲುದಾರರಿಗೆ ೧,೩೫,೦೦೦ ರೂಪಾಯಿಗಳೂ ವಿಮೇದಾರರಿಗೆ ೧೯,೫೦,೦೦೦ ರೂಪಾಯಿಗಳಿಗಿಂತಲೂ ಅಧಿಕವಾಗಿ ವಿಂಗಡಿಸಲ್ಪಟ್ಟಿರುವವು. ಮೇಲು ಕಂಪನಿಯ ಸಂಘ ಸಂಸ್ಥಾಪನೆಯ ನಿಬಂಧನೆ ಕಾಲದಲ್ಲಿ ಹುಟ್ಟಿದ ಪತ್ರಕ್ಕನುಸಾರವಾಗಿ ಕಾನೂನಿನ ಪ್ರಕಾರ ಸಲ್ಲತಕ್ಕ ಬರೇ ಲಾಭವನ್ನು ಮಾತ್ರ ಪಡೆದು ಪಾಲುದಾರರು ತೃಪ್ತರಾಗಿರಬೇಕಾಗಿರುವಲ್ಲಿ ವಿಮೇದಾರರ ಲಾಭದ ಭಾಗವು ಮಾತ್ರ ೭,೩೯,೦೦೦ ರೂಪಾಯಿಗಳಿಗೆ ಕಡಿಮೆಯಿಲ್ಲದೆ ಹೆಚ್ಚಿಸಲ್ಪಟ್ಟಿತು. ಅದೂ ಅಲ್ಲದೆ ತಾವು ಹೊಂದುವ ಲಾಭಕ್ಕೆ ಪ್ರತಿಯಾಗಿ ಪಾಲುದಾರರು ಕಂಪೆನಿಯ ಮೂಲಧನದಲ್ಲಿ ಇನ್ನೂ ಪಾವತಿಯಾಗದೆ ಉಳಿದಿರುವ ೪,೫೦,೦೦೦ ರೂಪಾಯಿಗಳನ್ನು ಎಂದಿದ್ದರೂ ಕಂಪೆನಿಗೆ ತೆರಲು ಬದ್ಧರಾಗಿಯೇ ಇರುತ್ತಾರೆ.

ಕಂಪೆನಿಯ ಹಣವು ಇತೋಪ್ಯಧಿಕವಾಗಿ ವಿಮೇ ಸಾಲಗಳಲ್ಲಿ ಹಾಕಲ್ಪಡಲಿಲ್ಲವೆಂದು ನಿಮ್ಮ ಬಾತ್ಮಿದಾರರಿಗೆ ಕಂಪೆನಿಯ ಮೇಲೆ ಆಕ್ರೋಧವಿರಬಹುದು. ಆದರೆ ಈ ವಿಷಯದಲ್ಲಿ ವಿಮೇದಾರರ ಅವಶ್ಯಕತೆ ಎಷ್ಟಿರುವದೋ ವಿಮೇ ಸಾಲಗಳ ಮೊಬಲಗು ವಸ್ತುತಃ ಅಷ್ಟಕ್ಕೇ ನಿಲ್ಲುವದು. ಅದಕ್ಕೆ ಮೇಲೆ ಹೋಗಲಾರದು. ವಿಮೇ ಮೊಬಲಗುಗಳನ್ನೆಲ್ಲಾ ಕಂಪೆನಿಯ ನಿಯಮಿತಕಾಲಕ್ಕೆ ಮುಂದೆಯೆ ಸಾಲರೂಪವಾಗಿ ತೆಗದುಕೊಂಡು ನಾಶಮಾಡಿಬಿಡಬೇಕೆಂದು ಅಪೇಕ್ಷೆಮಾಡುವವರ ಸ್ಥಿತಿಯಲ್ಲಿಯೇ ನಮ್ಮ ವಿಮೇದಾರರು ಇರುವದಿಲ್ಲವೆಂಬ ವಿಷಯವು ವಿಮೇದಾರರುಗಳಿಗೆಲ್ಲಾ ಸಂತೋಷದಾಯಕವಾಗಿಯೇ ಇರುತ್ತದೆ.

ಜೀವ ವಿಮೆಯು ಮುಖ್ಯವಾಗಿ ವೃದ್ಧಾಪ್ಯದ ಮತ್ತು ಅಕಾಲಮರಣ ಸಂಭವಿಸುವ ಸಂದರ್ಭದಲ್ಲಿ ಸಹಾಯವಾಗಿರುವದರಿಂದ ಯಾವದಾದರೂ ಕಷ್ಟಕಾಲಗಳಲಿ ವಿಮೆಯ ಆಧಾರದ ಮೇಲೆ ಸಾಲತೆಗದುಕೊಳ್ಳುವದು ನಿರಾಕ್ಷೇಪವೂ ನ್ಯಾಯಬದ್ಧವೂ ಆಗಿದ್ದರೂ ವಿಮೆಯ ಮುಖ್ಯೋದ್ದೇಶಕ್ಕೆ ಹಾನಿಬಾರದಂತೆ ಅದನ್ನು ಸಂಪೂರ್ಣವಾಗಿ ಕಾಪಾಡಿಟ್ಟುಕೊಳ್ಳುವದು ವಿಮೇದಾರನಿಗೆ ಅಧಿಕ ತರ ಪ್ರಯೋಜನಕರವಾಗಿರುವದು. ಸಾಲಹೊಂದುವದರಿಂದ ವಿಮೇದಾರನಿಗೆ ತತ್ಕಾಲದಲ್ಲಿ ಏನು ಪ್ರಯೋಜನವಿದ್ದರೂ ಅವನ ಅಧೀನವಾಗಿ ಅವನ ಪೋಷಣೆಯಲ್ಲಿಯೇ ಇರುವವರಿಗೆ ಅವನ ಮರಣಾನಂತರ ಸಲುವ ಪ್ರಯೋಜನವು ಅದರಿಂದ ಬಹಳಮಟ್ಟಿಗೆ ಕಡಿಮೆಯಾಗುವದೆಂದು ಸರ್ವಥಾ ಮರೆಯಲಾಗದು.

ಕಂಪೆನಿಯ ವಿಮೇ ಸಾಲಗಳ ಮೇಲಣ ಬಡ್ಡಿಯ ದರದ ವಿಷಯವಾಗಿ ಒಂದು ಮಾತು ಹೇಳಬೇಕಾಗಿದೆ. ಸಾಲಪತ್ರಗಳನ್ನು ತಯಾರಿಸಿ ಆಧಾರಗಳನ್ನು ಭದ್ರವಾಗಿ ಕಾಪಾಡಿ ಇಟ್ಟುಕೊಂಡು ಕಾಲಕಾಲಕ್ಕೆ ಬಡ್ಡಿಯನ್ನು ವಸೂಲುಮಾಡಬೇಕಾದುದರಿಂದ ಉಂಟಾಗುವ ಹೆಚ್ಚು ಕೆಲಸವನ್ನೂ ಆ ಕೆಲಸವನ್ನು ನಿರ್ವಾಹಮಾಡುವದಕ್ಕೆ ಬೇಕಾಗುವ ಹೆಚ್ಚು ಸಿಬ್ಬಂದಿ ಖರ್ಚನ್ನೂ ಡ್ಯಾರೆಕ್ಟರರು (ಅಂದರೆ ಕಂಪನಿಯ ಕಾರ್ಯನಿರ್ವಾಹಕರು) ತಮ್ಮ ಪರ್ಯಾಲೋಚನೆಗೆ ತೆಗದುಕೊಂಡು ವಿಮೇದಾರ ಮಂಡಲಿಯ ಸಾಮಾನ್ಯ ಕ್ಷೇಮಕ್ಕೆ ಹಾನಿಬಾರದಂತೆ ವಿಚಾರಮಾಡಲು ಈಗಿನ ಬಡ್ಡಿಯ ದರಗಳು ಬಹಳಮಟ್ಟಿಗೆ ಲೇಸಾಗಿಯೇ ಇರುವವೆಂದು ಅಭಿಪ್ರಾಯಪಡುತ್ತಾರೆ.

ಅಲ್ಲದೆ ಕಂಪೆನಿಗೆ ಉತ್ಪತ್ತಿಯಾಗುವ ಲಾಭದ ಮೊಬಲಗನ್ನು ಮಾತ್ರವೆ ಡ್ಯಾರೆಕ್ಟರುಗಳು ವಿಮೇದಾರರಿಗೆ ಲಾಭವಾಗಿ ಹಂಚಬಹುದೆ ವಿನಹಾ ಅನಾಯಾಸಹಿತವಾಗಿ ಕಾರ್ಯವನ್ನು ನಡೆಯಿಸುವ ಯಾವ ಕಂಪೆನಿಯೇ ಆಗಲಿ ಇದಕ್ಕಿಂತಲೂ ಹೆಚ್ಚು ಪ್ರಯೋಜನ ತೋರಿಸಲು ಅಸಾಧ್ಯ. ವಿಮೇದಾರರಿಗೆ ಲಾಭಹಂಚಿದ ಹಿಂದಣ ಎಲ್ಲಾ ಸಂವತ್ಸರಗಳಿಗಿಂತಲೂ ಕಳೆದ ಲಾಭ ವಿಭಾಗ ಕಾಲದಲ್ಲಿ ಹಂಚಿದ ಲಾಭ ಮೊಬಲಗು ಹೆಚ್ಚಾಗಿರುತ್ತದೆಂದು ಓರಿಯಂಟಲ್ ಕಂಪನಿಯವರು ಸಂತೋಷಯುಕ್ತರಾಗಿದ್ದಾರೆ. ಅಷ್ಟೇ ಅಲ್ಲದೆ ಮುಂದಿನ ಲಾಭ ವಿಭಾಗಕಾಲದಲ್ಲಿ ವಿಮೇದಾರರಿಗೆ ಲಾಭವಾಗಿ ಕಳೆದಾವರ್ತಿ ಕೊಟ್ಟದ್ದಕ್ಕಿಂತಲೂ ಇನ್ನೂ ಹೆಚ್ಚು ಮೊಬಲಗು ಕೊಡಲಾಗದೆ ಇರಲು ಕಾರಣವು ಯಾವದೂ ಕಾಣುವದಿಲ್ಲ. ಆದರೆ ಹಕ್ಕು ಸ್ಥಿರಪಟ್ಟ (admitted claims) ವಿಮೇ ಪತ್ರಗಳ ಮೇಲೆ ಸಕಾಲಕ್ಕೆ ಕೊಡಲು ಸಾಕಾಗುವಷ್ಟು ಮೊಬಲಗನ್ನು ಇಡಬೇಕಾದ್ದು ಕಂಪನಿಯ ಕಾರ್ಯನಿರ್ವಾಹಕರ (ಡ್ಯಾರೆಕ್ಟರ್‌ಗಳ) ಪ್ರಥಮ ಕರ್ತವ್ಯವಾಗಿರುತ್ತೆಯಾಗಿರುವದರಿಂದ ಕಂಪೆನಿಯ ರಿಪೋರ್ಟಿನಲ್ಲಿ ತೋರಿಸಿರುವ ಹೇರಳವಾದ ದ್ರವ್ಯವು ಅತ್ಯಾವಶ್ಯಕವಾಗಿರುತ್ತೆ. "ಓರಿಯಂಟಲ್" ಕಂಪನಿಯವರು ತಮ್ಮ ದ್ರವ್ಯವನ್ನು ಸರಕಾರದ ಪ್ರೋಮಿಸರಿ ಪತ್ರಗಳಲ್ಲಿಯೂ ಇತರ ನಿರ್ವಿವಾದ ಆಧಾರಪತ್ರಗಳಲ್ಲಿಯೂ ಭದ್ರವಾಗಿ ಇಟ್ಟಿರುವದೇ ವಿಮೇಮಾಡಲುದ್ಯುಕ್ತನಾಗಿರುವವನಿಗೆ ಸಾಕಾದಷ್ಟು ಭರವಸೆಯನ್ನೂ ನಂಬಿಕೆಯನ್ನೂ ಕೊಡುವದಲ್ಲದೆ ಇತರ ಎಲ್ಲಾ ಕಂಪನಿಗಳಿಗೂ ಈ "ಓರಿಯಂಟಲ್" ಕಂಪನಿಯನ್ನು ಶಿರೋಮಣಿಯನ್ನಾಗಿ ಮಾಡಿರುತ್ತದೆ.

ಇಂತೀ ತಮ್ಮ ವಿಶ್ವಾಸರ್ಹ,

ಜೆ. ಆರ್. ಮೆಕ್‌ಫರ್ಸನ್,

ಆಕ್ಟಿಂಗ್ ಬ್ರೇಂಚ್ ಸೆಕ್ರೆಟರಿ.

~~~~~~

ವಿದೇಶ ವೃತ್ತಾಂತ.

ಕೊಮುಗಾಟಮಾರು ಹಡಗದಲ್ಲಿ ಬ್ರಿಟಿಷ್ ಕೊಲೊಂಸಿಯುಕ್ಕೆ ಹೋದ ಭಾರತೀಯರಲ್ಲಿ ೧೧ ಮಂದಿ ಹಿಂದೆ ಕೆನಡಾದಲ್ಲಿದ್ದವರೆಂಬ ವಾದದ ಮೇಲೆ ಹಡಗದಿಂದ ಕೆಳಗೆ ಇಳಿಸಲ್ಪಟ್ಟರು ಉಳಿದ ೩೫೪ ಮಂದಿಯಲ್ಲಿ ಒಬ್ಬರನ್ನಾದರೂ ಇಳಿಯ ಬಿಡುವ ಹಾಗಿಲ್ಲವೆಂದು ತಿಳಿದು ಬಂದದೆ.

ಲಾಹೋರಿನಲ್ಲಿ ರಾ| ನಾನಕ್‌ಚಂದರ ಅಧ್ಯಕ್ಷತೆಯಲ್ಲಿ ಒಂದು ಸಭೆ ಕೂಡಿ ಕೆನಡಾ ಸರಕಾರದವರು ಭಾರತೀಯರನ್ನು ನಡಿಸುತ್ತಿರುವ ವಿಧಾನದಲ್ಲಿ ತಮಗಿರುವ ಅಸಂತೃಪ್ತಿಯನ್ನು ತೋರ್ಪಡಿಸಿ ಭಾರತೀಯರು ಬ್ರಿಟಿಷರ ಪ್ರಜೆಗಳಾಗಿರುವುದರಿಂದ ಬ್ರಿಟಿಷ್ ಸಾಮ್ರಾಜ್ಯದಲ್ಲೆಲ್ಲಾ ಅವರಿಗೆ ಸರಿಸಮನಾದ ಹಕ್ಕು ಸ್ವಾತಂತ್ರ ಕೊಡುವಂತೆ ಹೋಮ್ ಸರಕಾರದವರೂ ಇಂಡಿಯಾ ಸರಕಾರದವರೂ ನಿಗಾ ಕೊಡುವಂತೆ ಅವರನ್ನು ಕೇಳಿಕೊಳ್ಳಬೇಕೆಂಬ ನಿರ್ಣಯವನ್ನು ಮಾಡಿಕೊಂಡರು.

ಕೊಮುಗಾಟಮಾರು ಹಡಗಕ್ಕೆ ಕೊಡಬೇಕಾಗಿದ್ದ ಬಾಕಿ ಹಣವು ವಾನ್‌ಕವರಿನ ಇಬ್ಬರು ಭಾರತೀಯರಿಂದ ಠೇವಣಾತಿ ಇಡಲ್ಪಟ್ಟಿತು. ಆದಕಾರಣ ಹಡಗವು ಇನ್ನು ೬ ತಿಂಗಳ ವರೆಗೆ ಅಲ್ಲೇ ನಿಲ್ಲಬಹುದು. ತಾ. ೧೨ರಲ್ಲು ಹಡಗದಲ್ಲಿದ್ದ ೧೨ ಮಂದಿಯನ್ನು ಪರೀಕ್ಷಿಸಿದರು; ಆದರೆ ಅಯೋಗ್ಯರೆಂಬ ವಾದದ ಮೇಲೆ ಅವರನ್ನು ಇಳಿಯ ಬಿಡಲಿಲ್ಲ.

ಇಂಗ್ಲಾಂಡಿನ ಬ್ಲೇಕ್‌ಬರ್ನ್ ಎಂಬಲ್ಲಿಯ ಹತ್ತೀ ಕಾರ್ಖಾನೆಯ ಮಾಲೀಕರಾದ ಮೆ| ಹೆನ್ರಿ ಹೆರಿಸನ್ ಎಂಬವರು ೩೪೪,೮೭೧ ಪವನುಗಳ ಆಸ್ತಿಯುಳ್ಳವರಾಗಿ ವಿಧಿವಶರಾದರು. ತನ್ನ ಆಸ್ತಿಯಲ್ಲಿ ಒಂದು ಲಕ್ಷ್ಯ ಪವನಿಗೆ ಮಿಕ್ಕಿದ ಹಣವನ್ನು ಧರ್ಮಕಾರ್ಯಗಳಿಗೆ ಪ್ರಯೋಗಿಸಬೇಕೆಂದು ಇವರು ವಿಲ್‌ನಾಮೆಯಲ್ಲಿ ಬರೆದಿದ್ದರು

ಬ್ರಿಟಿಷ್ ಪಾರ್ಲಿಮೆಂಟ ಹಕ್ಕು ಸ್ವಾತಂತ್ರ್ಯಕ್ಕಾಗಿ ಪೇಚಾಡುವ ಸಫ್ರಜೆಟ್ಟ ಸ್ತ್ರೀಯರು ತಾ. ೧೧ರಲ್ಲು ಸಲ್ವಿಯ ಪಂಕ್ಹರ್ಸ್ಟಳ ಮುಂದಾಳುತನದಲ್ಲಿ ಮೆರವಣಿಗೆ ಹೊರಟು ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಮಂದಿರಕ್ಕೆ ನುಗ್ಗಬೇಕೆಂದಿದ್ದರು. ಮಿಸೆಸ್ ಪಂಕ್ಹರ್ಸ್ಟಳನ್ನು ಡೋಲಿಯಲ್ಲಿ ಕೂಂಡ್ರಿಸಿ ಹೊತ್ತುಕೊಂಡು ಹೋದರು. ಇವರ ಮೆರವಣಿಗೆಯು ಒಂದು ಮೈಲು ದೂರ ಹೋದನಂತರ ಪೋಲಿಸಿನವರು ಸುತ್ತುಹಾಕಿ ಡೋಲಿಯಲ್ಲಿದ್ದ ಪಂಕ್ಹರ್ಸ್ಟಳನ್ನು ಕೈದು ಮಾಡಿದರು

ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಈ ಸ್ತ್ರೀಯರ ಪ್ರಸ್ತಾಪ ಬಂದಾಗ ರೋಬರ್ಟ್ ಸಿಸಿಲ್ ಪ್ರಭುಗಳು ಸಫ್ರಜೆಟ್ಟ ಸ್ತ್ರೀಯರನ್ನು ಏಕಾಂತವಾದ ಯಾವದಾದರೊಂದು ದ್ವೀಪಕ್ಕೆ ಗಡಿಪಾರು ಮಾಡುವುದು ಉಚಿತವೆಂದು ಸೂಚಿಸಿದರು. ಇನ್ನು ವಿಶೇಷ ಪ್ರಸ್ತಾಪಗಳು ನಡೆದು ಮೆ| ಮೆಕೆನ್ನ ಎಂಬವರು ಮಾತಾಡಿ ತೀರಿದಾಕ್ಷಣ ವೆಸ್ಟ್ ಮಿನಿಸ್ಟರ್ ಅಬ್ಬೆಯಲ್ಲಿದ್ದ ಕಿರೀಟಧಾರಣೋತ್ಸವ ಕುರ್ಶಿಯ ಅಡಿಯಲ್ಲಿ ಒಂದು ಸಿಡಿಮದ್ದು ಸಿಡಿಯಿತು. ಕಾಮನ್ಸ್ ಸಭೆಯಲ್ಲಿದ್ದ ಮೆಂಬರರು ಕೂಡ್ಲೇ ಅಬ್ಬೆಗೆ ಹೋಗಿ ನೋಡಿದ್ದಲ್ಲಿ ಕಿರೀಟಧಾರಣೋತ್ಸವದ ಕುರ್ಶಿಯು ಹಾಳಾಗಿತ್ತು. ಪೋಲಿಸಿನವರು ಅಲ್ಲಿದ್ದ ಇಬ್ಬರು ಹೆಂಗಸರನ್ನು ಕೈದು ಮಾಡಿದರು. ಅನಂತರ ಇವರ ಮೇಲೆ ತಕ್ಕ ರುಜುವಾತಿಲ್ಲದ್ದರಿಂದ ಬಿಟ್ಟುಬಿಟ್ಟರು.

ಉತ್ತರ ಹಿಂದೂಸ್ಥಾನ.

ಇದೇ ಜೂನು ತಾ ೬ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೩೫೭೬ ಮಂದಿಗೆ ಪ್ಲೇಗ ಬೇನೆಯು ಸೊಂಕಿ ೩೨೮೧ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಿ ೧೨೫; ಮದ್ರಾಸ್ ೨; ಬಂಗಾಳ ೧೫, ಬಿಹಾರ್ ೨೧೭, ಸಂಯುಕ್ತ ಸಂಸ್ಥಾನ ೪೪೮, ಪಂಜಾಬು ೨೬೫೮; ಬರ್ಮ ೮೬, ಮೈಸೂರು ೭; ವಾಯುವ್ಯ ಸರಹದ್ದು ೧೧; ಜಮ್ಮು ೨, ಮರಣಗಳಾದವು.

ಭೋರ್ ಸ್ಟೇಟಿನ ಪಿರೋಜ ಅಲಿಶಾಹ ಎಂಬ ಒಬ್ಬ ವಸ್ತ್ರ ಮಾರುವವನು ರಂಗೂನು ಗಂಗಾರಾಮ ಎಂಬವನ ಕೂಡ ಅದೇ ಸಂಸ್ಥಾನದ ಒಂದು ಗ್ರಾಮ ದೇವಸ್ಥಾನದ ಉತ್ಸವಕ್ಕೆ ವಸ್ತ್ರ ವ್ಯಾಪಾರಕ್ಕೆ ಹೋಗಿದ್ದನು ವಸ್ತ್ರ ಮಾರಿ ಬಂದ ೨೫೯ ರೂಪಾಯಿಂದ ೧೮೦ ರೂಪಾಯಿಯನ್ನು ತನ್ನ ಯಜಮಾನನಿಗೆ ಕಳುಹಿಸಿ ಉಳಿದ ೧೮೭ ರೂಪಾಯಿಯನ್ನು ಇಟ್ಟುಕೊಂಡಿದ್ದನು. ಇದನ್ನು ತಿಳಿದ ಸಂಗಾತಿ ಗಂಗಾರಾಮನು ಸಿಲುಕು ರೂಪಾಯಿಗಳನ್ನು ಕಸಕೊಳ್ಳುವ ಒಸ್ಕ ಪಿರೋಜ ಅಲಿಶಾಹನನ್ನು ಕೊಂದನು ಈ ಕೊಲೆಯು ರಾತ್ರಿಕಾಲದಲ್ಲಿ ನಡೆಯಿತು ಈ ಕೃತ್ಯವನ್ನು ಇಬ್ಬರು ಹೆಂಗಸರು ನೋಡಿದ್ದರು. ಘಾತುಕನು ಕೊಡಲಿಯಿಂದ ಕಡಿದು ಕೊಂದನು ಎಂಬದಾಗಿ ಹೆಂಗಸರು ವಾಗ್ಮೂಲ ಕೊಟ್ಟರು. ಭೋರ್ ಸ್ಟೇಟಿನ ಪೊಲಿಟಿಕಲ್ ಏಜಂಟರು ಈ ಮೊಕದಮೆಯನ್ನು ತನಿಕೆ ನಡಿಸಿ ಅಪಾದಿತನಿಗೆ ತಾ ೧೧ ರಲ್ಲು ಫಾಶಿ ಶಿಕ್ಷೆ ವಿಧಿಸಿದರು.

ಮೊರಿಸಿಯಸ್ ದ್ವೀಪದಲ್ಲಿ ಪ್ರಕಟಿಸಲ್ಪಡುವ 'ಹಿಂದೂಸ್ಥಾನಿ' ಎಂಬ ಹಿಂದೀ ವರ್ತಮಾನ ಪತ್ರಿಕೆಗೆ ಇಂಡಿಯಾ ಸರಕಾರದವರು ಮುಟ್ಟುಗೋಲುಹಾಕಿರುವರು.

ಬಂಗಾಳಿ ಕನ್ಯೆಯರ ಸ್ವಘಾತ ಕೃತ್ಯವು ಸ್ನೇಹಲತೆಯ ಮೇಲ್ಪಂಕ್ತಿಯನಂತರ ದಿನೇದಿನೇ ಎಂಬಂತೆ ಕೇಳಿಸುತ್ತಲಿದೆ. ಕಳದ ಬುಧವಾರ ಹೌರ ಡಿಸ್ಟ್ರಿಕ್ಟಿನಲ್ಲಿರುವ ೧೫ ವರ್ಷದ ಒಬ್ಬ ಬಂಗಾಳಿ ಯುವತಿಯು ತನ್ನ ಗಂಡನ ಮನೆಗೆ ಬಂದು ೪ ದಿವಸದ ನಂತರ ಸೀಮೆ ಎಣ್ಣೆಯಿಂದ ಸುಟ್ಟುಕೊಂಡು ಸ್ವಘಾತಮಾಡಿಕೊಂಡಳು. ಈ ಬಾಲಕಿಯು ರಮೇಶ ಚಂದ್ರನ್ ಬೆನರ್ಜಿ ಎಂಬ ಒಬ್ಬ ವಿದ್ಯಾರ್ಥಿಯ ಹೆಂಡತಿ. ಅವಳ ಅತ್ತೆಯು ಮನೆಯ ಕೆಲಸದಲ್ಲಿ ನಿರತಳಾಗಿರುವಾಗ ಇವಳು ಬೆಂಕಿ ಇಟ್ಟುಕೊಂಡಳು ಕಡೆಗೆ ಬೆಂಕಿಯ ನೋವು ತಾಳಲಾರದೆ ಅರಚಿ ಕೊಳ್ಳುವ ಶಬ್ದವು ಅತ್ತೆಗೆ ಕೇಳಿ ಓಡಿ ಬಂದು ಬೆಂಕಿ ನೊಂದಿಸಿದರೂ ಹೆಚ್ಚಿನ ಪ್ರಯೋಜನವಾಗದೆ ಹುಡುಗಿಯು ಮೃತಪಟ್ಟಳು.

ಕಲ್ಕತ್ತೆಯಲ್ಲಿ ವರದಕ್ಷಿಣೆಯ ಸಲುವಾಗಿ ಪುನಃ ಮತ್ತೊಂದು ಸ್ವಘಾತವು ನಡೆದಿರುವುದೆಂತ ಕೇಳಬರುತ್ತದೆ. ಬಾಬುಹರಿದಾಸಘೋಷ್ ಎಂಬ ಒಬ್ಬ ಮುದೀ ವಕೀಲನು ತನ್ನ ೧೪ ವರ್ಷದ ಮಗಳಿಗೆ ವರದಕ್ಷಿಣೆ ಕೊಡುವ ಸಂದರ್ಭದಲ್ಲಿ ತುಸ ಸಂಕಷ್ಟದಲ್ಲಿ ಬಿದ್ದನು. ಯುನಿವರ್ಸಿಟಿ ಲಾ ಕಾಲೇಜಿಯಲ್ಲಿ ಓದುತ್ತಿದ್ದ ವರನು ತನಗೆ ವರದಕ್ಷಿಣೆಯು ಬೇಡವೆಂದು ಹೇಳಿದ್ದರೂ ವರನ ಹೆತ್ತವರು ಒಪ್ಪದೆ ೬೦೦೦ ರೂಪಾಯಿಗಳ ದಕ್ಷಿಣೆ ಕೇಳಿದರು. ಕನ್ಯಾಪಿತನು ೪೦೦೦ ರೂಪಾಯಿ ಮಾತ್ರ ಕೊಡಲೊಪ್ಪಿದನು. ಆದರೆ ವರಪಿತನು ನಿರಾಕರಿಸಿದ್ದರಿಂದ ಈ ಬಾಲಕಿಯು ತಂದೆಯನ್ನು ಈ ರಗಳೆಯಿಂದ ತಪ್ಪಿಸುವುದಕ್ಕಾಗಿ ತನ್ನನ್ನು ತಾನೇ ಸುಟ್ಟುಕೊಂಡು ಸ್ವಘಾತಮಾಡಿಕೊಂಡಳು.

ಮುಂಬಾಯಿಯಲ್ಲಿ ತಾ. ೧೩ ರಲ್ಲು ಪುನಃ ಹತ್ತಿ ಮೂಟೆಗೆ ಬೆಂಕಿ ಬಿದ್ದು ೧೬೦೦ ಬೇಲ್ ಹತ್ತಿ ಸುಟ್ಟುಹೋಗಿ ಸುಮಾರು ೨ ಲಕ್ಷ ರೂಪಾಯಿಗಳ ನಷ್ಟ ಉಂಟಾಗಿರುವುದು ಅಂದೇ ಸಣಬು ಕೋಟಡಿಗೂ ಬೆಂಕಿ ಬಿದ್ದು ಸುಮಾರು ೬೦೦೦ ರೂಪಾಯಿಗಳ ನಷ್ಟಉಂಟಾಗಿರುವುದು.

ಸತಾರೆಯ ಶಿರಾಬಾಬಾಜಿ ಎಂಬವನು ಒಬ್ಬ ಹೆಂಗಸಿಗೆ ಹೊಡೆದ ತಕ್ಸೀರಿಗಾಗಿ ಸತಾರೆಯ ಅಸಿಸ್ಟಾಂಟ ಜಡ್ಜರ ಮುಂದೆ ವಿಚಾರಣೆಗೆ ಗುರಿಮಾಡಲ್ಪಟ್ಟು ೩ ತಿಂಗಳ ಸಜಾಹೊಂದಿದನು. ಈ ಶಿಕ್ಷೆಯು ಕಮ್ಮಿಯಾಯಿತು ಎಂಬ ಸಬಬಿನಮೇಲೆ ಸ್ಥಳೀಕ ಸರಕಾರದವರು ಮುಂಬ್ಯಾ ಹ್ಯಾಕೋರ್ಟಿಗೆ ಅಪೀಲುಮಾಡಿಕೊಂಡರು. ಜಸ್ಟಿಸ್ ಹೀಟನ್ ಮತ್ತು ಶಾಹರವರು ಈ ಅಪೀಲು ತನಿಕೆ ನಡಿಸಿ ಹೆಂಗಸಿನ ಮೇಲೆ ಅತಿಕ್ರಮವಾಗಿ ಹೊಡೆದ ಈ ತಪ್ಪಿಗೆ ಸತಾರೆಯ ಜಡ್ಜರು ಅಷ್ಟು ಕಮ್ಮಿ ಶಿಕ್ಷೆ ಕೊಟ್ಟದ್ದು ತಪ್ಪಾಗಿದೆ ಎಂದು ಹೇಳಿ ಅಪಾದಿತನಿಗೆ ಹೆಚ್ಚಿಗೆ ೯ ತಿಂಗಳ ಸಜಾ ವಿಧಿಸಿದರು.

ಬೆಳ್ಗಾಂ ಮುನ್ಸಿಪಾಲಿಟಿಯ ವ್ಹಾಯಿಸ್ ಪ್ರೆಸಿಡೆಂಟ ಮತ್ತು ಸ್ಥಳೀಕ ವಕೀಲರಾಗಿರುವ ದೇಶಪಾಂಡೆಯವರೂ ಸಾಹುಕಾರರಾಗಿರುವ ಕಲ್ಯಾಂಡ್ರೆಯವರೂ ಕಲ್ಯಾಂಡ್ರೆಯವರಲ್ಲಿ ಕ್ಲಾರ್ಕಕೆಲಸದಲ್ಲಿದ್ದ ಶಂಕರದೇಶಪಾಂಡೆಯನ್ನು ಕೊಲ್ಲಲಿಕ್ಕೆ ಚಿತಾವಣೆ ನಡಿಸಿದ್ದಾರೆಂಬದಾಗಿ ಆಪಾದಿಸಲ್ಪಟ್ಟಿರುವರು. ಅಪಾದಿತರ ಪರವಾಗಿ ವ್ಯವಹರಿಸಲು ಮೆ| ಇ. ನೊರ್ಟನರು ಬಂದಿರುವರು.

ಸೋಲಾಪುರ ತಾಲೂಕಿನಲ್ಲಿ ಒಂದು ಘೋರವಾದ ಕೊಲೆಯು ನಡೆದಿರುವುದು. ಆ ತಾಲೂಕಿನ ಮಾದಪ್ಪ ಸಿಧ್ದಿಯಪ್ಪ ಎಂಬವನು ಅನುಭವಿಸಿಕೊಂಡು ಬಂದಿದ್ದ ಭೂಮಿಯ ಪರವಾಗಿ ಅವನ ಕುಟುಂಬದ ಇಬ್ಬರು ಹೆಂಗಸರು ದಾವೆದಾಖಲು ಮಾಡಿದ್ದರು. ಈ ದಾವೆಯಲ್ಲಿ ಗ್ರಾಮ ಪಟೇಲ ಮತ್ತು ಕುಲಕರ್ಣಿಯವರು ಹೆಂಗಸರ ಕಡೆಯಲ್ಲಿ ಸಾಕ್ಷಿ ಹೇಳಿದ್ದರಿಂದ ಹೆಂಗಸರಿಗೆ ದಾವೆಯು ಗುಣವಾಗಿ ತೀರಿ ಮಾದಪ್ಪನು ಭೂಮಿಯನ್ನು ಅವರಿಗೆ ಬಿಟ್ಟುಕೊಡಬೇಕಾಗಿ ಬಂದು ಮಾದಪ್ಪನು ನಿರ್ಗತಿಕನಾದನು. ಇದರಿಂದ ಮಾದಪ್ಪನು ಪಟೇಲ ಮತ್ತು ಕುಲಕರ್ಣಿಯ ಮೇಲೆ ಸಿಟ್ಟುಗೊಂಡು ಪಟೇಲರ ಗದ್ದೆಯ ಬಳಿಗೆ ಹೋಗಿ ಅಲ್ಲಿದ್ದ ಪಟೇಲರ ೧೭, ೧೧, ೯ ವರ್ಷ ವಯಸ್ಸಿನ ಮೂರು ಮಕ್ಕಳನ್ನು ಕೊಡಲಿಯಿಂದ ಕೊಂದು ಅಲ್ಲಿಂದ ಕುಲಕರ್ಣಿಯ ಮನೆಗೆ ಹೋಗಿ ಪಡಶಾಲೆಯಲ್ಲಿ ಆಡುತ್ತಿದ್ದ ೫ ವರ್ಷ ವಯಸ್ಸಿನ ಅವರ ಒಬ್ಬನೇ ಮಗನನ್ನು ಕೊಂದನು. ಈ ಹುಡುಗನ ತಾಯಿಯು ಇದನ್ನು ಕಂಡು ಬೊಬ್ಬಿಟ್ಟದ್ದರಿಂದ ನೆರೆಹೊರೆಯವರು ಘಾತುಕನನ್ನು ಹಿಡಿದು ಪೋಲಿಸಿನವರ ವಶಕೊಟ್ಟರು. ನಾಲ್ಕು ಮಕ್ಕಳನ್ನು ತಾನು ಖೂನಿಮಾಡಿದ್ದು ಹೌದೆಂದೂ ಆ ಮಕ್ಕಳ ತಂದೆಯಂದಿರು ತನ್ನ ಭೂಮಿಯನ್ನು ಕಳೆದುಕೊಳ್ಳುವ ಹಾಗೆ ಮಾಡಿದ್ದರಿಂದ ತಾನು ಹೀಗೆ ಮಾಡಿದ್ದೆನೆಂದೂ ಅರಿಕೆ ಮಾಡಿರುವನು.

ಸಕ್ಸದ ಬಂಕಿಮ್ ಚಂದರ್ ಬೆನರ್ಜಿ ಎಂಬ ಒಬ್ಬ ವಿದ್ಯಾರ್ಥಿಯು ತಾ. ೧೫ರಲ್ಲು ಸ್ವಘಾತಮಾಡಿಕೊಂಡನು. ಕಲ್ಕತ್ತಾ ಯುನಿವರ್ಸಿಟಿಯ ಸಾಯನ್ಸ್ ಪರೀಕ್ಷೆಯಲ್ಲಿ ತಾನು ೩ ಸಲ ಸೋತು ಹೋದುದ್ದರಿಂದ ವಿಷ ತಿಂದು ಸ್ವಘಾತ ಮಾಡಿಕೊಳ್ಳುತ್ತೇನೆಂದು ಒಂದು ಪತ್ರವನ್ನು ಪೋಲಿಸಿನವರಿಗೆ ಬರೆದಿಟ್ಟಿದ್ದನು.

~~~~~~

ತಾ. ೧೫ರಲ್ಲು ಮುಂಬಾಯಿಯ ಕೊಲೋಬದಲ್ಲಿ ಹತ್ತೀ ಮೂಟೆಗಳಿಗೆ ಬೆಂಕಿ ಕೊಡುತ್ತಿರುವ ನಾಲ್ಕು ಹುಡುಗರು ಬೆಂಕಿ ಕೊಡುತ್ತಿರುವಾಗಲೇ ಕೈದುಮಾಡಲ್ಪಟ್ಟರು. ಹುಡುಗರ ಕೈಯಲ್ಲಿ ಶೀಮೆಎಣ್ಣೆ, ಹತ್ತಿ ಮತ್ತು ಬೆಂಕಿಪೆಟ್ಟಿಗೆಗಳು ದೊರಕಿದುವು. ಹುಡುಗರನ್ನು ಪೋಲಿಸ್ ಸ್ಟೇಶನಿಗೆ ಹೋಗಿ ವಿಚಾರಿಸಲು ಅವರಲ್ಲಿ ಒಬ್ಬನು ಯುರೋಶಿಯಾನನು, ಇತರರಿಬ್ಬರು ಹಿಂದೂಗಳೆಂದು ಗೊತ್ತಾಯಿತು. ಇವರು ೧೧, ೧೦, ೬ ಮತ್ತು ೧೧ ವರ್ಷ ವಯಸ್ಸಿನವರಾಗಿದ್ದರು. ಗ್ರೇವ್ಸ್ ಹತ್ತಿ ಕಂಪೆನಿಯ ಹತ್ತಿ ಮೂಟೆಗಳಿಗೆ ಪ್ರಥಮತಾ ಬೆಂಕಿ ಹತ್ತಿಕೊಂಡಿತು. ಕೂಡ್ಲೇ ಒಬ್ಬ ಹುಡುಗನನ್ನು ಕೈದುಮಾಡಿ ಬೆಂಕಿಯನ್ನು ನೊಂದಿಸಿದರು. ಇತರ ಹುಡುಗರು ಓಡಿ ಹೋದರು. ಪೋಲಿಸಿನವರು ನಂತರ ಅವರನ್ನು ಕೈದುಮಾಡಿದರು. ಈ ಹುಡುಗರು ಕೊಲೋಬ ಹತ್ತೀ ಕಾರ್ಖಾನೆಗಳ ಸಮೀಪದ ಮನೆಗಳಲ್ಲಿ ವಾಸಿಸುವಂಥವರು. ಒರೇ ಹುಡುಗಾಟಿಕೆಯಿಂದ ತಮಾಶ ನೋಡುವರೆ ಈ ಕೃತ್ಯವು ನಡಿಸಲ್ಪಟ್ಟಿತ್ತೆಂದೂ ನ್ಯಾಯಸ್ಥರ ಕೈ ಇದರಲ್ಲಿ ಇಲ್ಲವೆಂದೂ ವಿಚಾರಣೆಯಿಂದ ತಿಳಿದುಬಂತು.

~~~~~~

ಖಗೋಲ ಶಾಸ್ತ್ರಜ್ಞರಾದ ಡಾಕ್ಟರ್ ಗಿಲ್ಬರ್ಟರವರು ಈ ವರ್ಷದ ಕಾಲಮಾನವನ್ನು ಕುರಿತು ಹೇಳುವುದೇನೆಂದರೆ —ಈ ಸಲ ಭರತಖಂಡದಲ್ಲಿ ಮಳೆಯು ಕಡಿಮೆಯೇ ಆಗುವದು. ದೊಡ್ಡ ದೊಡ್ಡ ಮಳೆಗಳೂ ಸಹ ಸಣ್ಣವಾಗಿ ಸುರಿಯುವವು. ಮಲಬಾರಿನಲ್ಲಿ ಉತ್ತಮವಾದ ಮಳೆಯಾಗುವ ಲಕ್ಷಣವು ಚೆನ್ನಾಗಿದೆ. ಪಂಜಾಬು ಸಂಯುಕ್ತರಾಷ್ಟ್ರ, ರಾಜಪುತಾನ, ಮಧ್ಯ ಹಿಂದೂಸ್ಥಾನ ಈ ಕಡೆಗಳಲ್ಲಿ ಮಳೆಯ ಸ್ಥಿತಿಗತಿಗಳು ಅನುಕೂಲವಾಗಿಲ್ಲ.

~~~~~~

ಸೆರೆಯಿಂದ ಬಿಡುಗಡೆ ಹೊಂದಿದ ಬಂದಿವಾನರನ್ನು ಸದ್ವರ್ತನೆಯಲ್ಲಿ ನಡಿಸುವ ಬಗ್ಗೆ ಮುಂಬಾಯಿಯಲ್ಲಿ ಒಂದು ಸೊಸ್ಯಾಟಿಯು ಮುಂಬಾಯಿ ಗವರ್ನರ ಪ್ರಭುಗಳವರ ಅಧ್ಯಕ್ಷತೆಯಲ್ಲಿ ಏರ್ಪಟ್ಟಿತೆಂದು ಹಿಂದಿನ ಸಂಚಿಕೆಯಲ್ಲಿ ತಿಳಿಸಿತ್ತಷ್ಟೆ. ಈ ಸೊಸ್ಯಾಟಿಯ ಕಾರ್ಯನಿರ್ವಾಹಕ ಮೆಂಬರರ ಸಭೆಯು ಇದೇ ತಿಂಗಳ ತಾ. ೧೫ರಲ್ಲು ಜಸ್ಟಿಸ್ ಹೀಟನರ ಅಧ್ಯಕ್ಷತೆಯಲ್ಲಿ ಕೂಡಿ ಬಂದು, ಸೊಸ್ಯಾಟಿಯ ಉದ್ದೇಶಗಳೇನೆಂಬ ಚರ್ಚೆ ನಡೆದು, ಜಾತಿಭೇದ ನೋಡದೆ ಬಂದಿಖಾನೆಯಿಂದ ಬಿಡುಗಡೆ ಹೊಂದಿದ ಕೈದಿಗಳಿಗೆ ಸಹಾಯ ಮಾಡಬೇಕು, ಸ್ವಭಾವದಲ್ಲಿಯೇ ಅಪರಾಧಿಗಳಾಗಿ ಹೋದ ಬಂದಿವಾನರು ಬಿಡುಗಡೆ ಹೊಂದಿದ ನಂತರ ಯಥಾರ್ಥ ಮತ್ತು ಮಾನ್ಯ ಜೀವನ ಮಾಡುವಂತೆ ಪ್ರಯತ್ನ ಮಾಡುವುದು, ಇತರ ಉಪಾಯ ಕಾಣದಲ್ಲಿ ಮಾತ್ರ ಬಂದಿಖಾನೆ ಶಿಕ್ಷೆಯನ್ನು ವಿಧಿಸುವ ಪ್ರಯತ್ನ ನಡಿಸುವುದು, ಮೇಲಿನ ಉದ್ದೇಶಗಳನ್ನು ನೆರವೇರಿಸುವರೆ ಹಣ ಕೂಡಿಸುವುದು ಮೊದಲಾದ ನಿರ್ಣಯಗಳು ಈ ಸಭೆಯಲ್ಲಿ ನಿರ್ಣಯಿಸಲಾದವು.

~~~~~~

ನವಸಾರಿ ಎಂಬ ಊರಲ್ಲಿರುವ ಪಾರ್ಶಿ ಜನರಲ್ ಆಸ್ಪತ್ರಿಯಲ್ಲಿ ಇದ್ದ ರೋಗಿಗಳಲ್ಲೊಬ್ಬನು ಅಲ್ಲಿ ಕೊಡಬೇಕಾಗಿದ್ದ ಚಾರ್ಜನ್ನು ಕೊಡಲು ಏನೂ ಇಲ್ಲದ ಅತ್ಯಂತ ಬಡವನೆಂಬದಾಗಿ ಊಹಿಸಲ್ಪಟ್ಟಿದ್ದನು. ಅವನು ಗುಣಹೊಂದಿದ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದಾಗ ತನ್ನ ಜೀವಮಾನದಲ್ಲಿ ಸಂಪಾದಿಸಿದ ೧೫,೦೦೦ ರೂಪಾಯಿಗಳನ್ನು ಡಾಕ್ಟರರ ಕೈಯಲ್ಲಿ ಕೊಟ್ಟು ತಾನು ಬದುಕಿರುವವರೆಗೆ ಅದರ ಬಡ್ಡಿಯನ್ನು ತನ್ನ ಜೀವನೋಪಾಯಕ್ಕಾಗಿ ನಡುವಾಲಿಸುತ್ತಿರಬೇಕೆಂದೂ ಮರಣಾನಂತರ ಆ ಹಣವನ್ನು ಆಸ್ಪತ್ರಿಯನ್ನು ಅಭಿವೃದ್ಧಿ ಪಡಿಸಲು ಖರ್ಚು ಮಾಡಬೇಕೆಂತಲೂ ವಿಜ್ಞಾಪಿಸಿಕೊಂಡನು.

~~~~~~

ದಕ್ಷಿಣ ಹಿಂದೂಸ್ಥಾನ.

ಮಹಮ್ಮದೀ ಮತ್ತು ಕ್ರೈಸ್ತಮತಕ್ಕೆ ಸೇರಿಹೋಗಿದ್ದ ಹಿಂದೂಗಳನ್ನು ಪ್ರಾಯಶ್ಚಿತ್ತದಿಂದ ಹಿಂದೂ ಮತಕ್ಕೆ ಮರಳಿ ಸೇರಿಸಿಕೊಳ್ಳುವ ಏರ್ಪಾಡನ್ನು ಉತ್ತರ ಹಿಂದೂಸ್ಥಾನದಲ್ಲಿ ಆರ್ಯ ಸಮಾಜದವರು ವಿಶೇಷವಾಗಿ ನಡೆಯಿಸುತ್ತಿದ್ದರು. ಈಗ ದಕ್ಷಿಣ ಹಿಂದೂಸ್ಥಾನದಲ್ಲಿಯೂ ಈ ಪದ್ಧತಿಯು ಕಾಲಿಕ್ಕಿದೆ. ಕ್ರೈಸ್ತಮತಕ್ಕೆ ಸೇರಿಹೋಗಿದ್ದ ಕೀಳು ಜಾತಿಯ ಜನರನ್ನು ಮರಳಿ ಹಿಂದೂ ಮತಕ್ಕೆ ಸೇರಿಸಿಕೊಳ್ಳುವುದು ಕೃಷ್ಣಾ ಜಿಲ್ಲೆಯಲ್ಲಿ ಪ್ರಬಲಿಸುತ್ತಿದೆ. ಉತ್ತಮ ವರ್ಣೀಯರೇ ನಿಂತು ಕಟಿಕರದಿಂದ ಈ ಕೆಲಸವನ್ನು ಮಾಡುತ್ತಿದ್ದಾರೆ. ಇಂಥಾ ಪ್ರಾಯಶ್ಚಿತ್ತವು ನಡೆಯುವ ಸಮಯದಲ್ಲಿ ಆ ಕೀಳ್ಜಾತಿಯ ಕೆಲವರು ತಾವು ಅನ್ಯಮತಕ್ಕೆ ಸೇರಿಕೊಂಡದ್ದರ ಕಾರಣವನ್ನು ಹೀಗೆ ಹೇಳಿದರಂತೆ "ನಮಗೆ ಹಿಂದೂ ಮತದಲ್ಲಿ ಅಪನಂಬಿಕೆಯೂ ಕ್ರೈಸ್ತ ಮತದಲ್ಲಿ ನಂಬಿಕೆಯೂ ತೋರಿ ಮತಭ್ರಷ್ಟರಾಗಲಿಲ್ಲ. ನಮ್ಮೂರಿಗೆ ಮಾರ್ಗವನ್ನು ಹಾಕಿಸಿ ಕೊಡುವ ಭರವಸೆಯನ್ನು ಪಾದ್ರಿಸಾಹೇಬರು ಕೊಟ್ಟದ್ದರಿಂದಲೇ ನಾವು ಹಾಗಾದೆವು" ಅಂದರಂತೆ.

~~~~~~

ಮುಂಬಾಯಿ ಗವರ್ನರರಾದ ವಿಲ್ಲಿಂಗ್ಡನ್ ಪ್ರಭುಗಳವರೂ ಅವರ ಪತ್ನಿಯವರೂ ತಾ. ೧೦ರಲ್ಲು ಉದಕಮಂಡಲವನ್ನು ಬಿಟ್ಟು ಮೈಸೂರಿಗೆ ಪ್ರಯಾಣ ಬೆಳಸಿ ಸಾಯಂಕಾಲ ಮೈಸೂರಿಗೆ ತಲಪಿದರು. ತಾ. ೧೧ರಲ್ಲು ಪಟ್ಟಣವನ್ನು ಸಂದರ್ಶಿಸಿ ಮಧ್ಯಾಹ್ನ ಶ್ರೀರಂಗ ಪಟ್ಟಣಕ್ಕೂ ಶಿವಸಮುದ್ರಕ್ಕೂ ಹೋಗಿ ಬಂದರು. ತಾ. ೧೨ರಲ್ಲು ಬೆಂಗಳೂರಿಗೆ ಚಿತ್ತೈಸಿದರು.

~~~~~~

ಮಡಿಕೇರಿ:—ಇಲ್ಲಿಯ ಪೇಟೆಯ ಒಂದು ಮನೆಯವರು ಮದುವೆಗೆ ಹೋಗುವ ಉದ್ದೇಶದಿಂದ ತಮ್ಮ ೪-೫ ವರ್ಷದ ಒಂದು ಮಗುವಿಗೆ ಚಿನ್ನಾಭರಣಗಳನ್ನು ತೊಡಿಸಿ ಏನೋ ಜಂಬರದ ಮೇಲೆ ಒಳಗೆ ಇದ್ದರು. ಅಷ್ಟರಲ್ಲಿ ಮಗುವು ಹೊರ ಚಾವಡಿಗೆ ಹೋಯಿತು. ಯಾರೋ ಕಳ್ಳರು ಈ ಮಗುವನ್ನು ಹೊತ್ತುಕೊಂಡು ಹೋಗಿಯೇ ಬಿಟ್ಟರು. ತುಸ ಹೊತ್ತಿನ ನಂತರ ಹೆತ್ತವರು ಮಗುವನ್ನು ಮನೆಯಲ್ಲಿ ಹುಡುಕ್ಯಾಡಲು ಅದು ಕಾಣೆಯಾದದನ್ನು ಕಂಡು ಪೋಲಿಸಿನವರಿಗೆ ವರದಿಮಾಡಿದರು. ಪೋಲಿಸಿನವರೂ ಆ ಮಗುವಿನ ಹೆತ್ತವರೂ ಸ್ನೇಹಿತರೂ ಬಹಳ ಪ್ರಯತ್ನದಿಂದ ಹುಡಿಕಿದಲ್ಲಿ ಸುಮಾರು ½ ಮೈಲು ದೂರದ ಒಂದು ಭಾವಿಯಲ್ಲಿ ಆಭರಣ ರಹಿತವಾದ ಮಗುವಿನ ಹೆಣವು ದೊರಕಿತು. ಘಾತುಕನು ಪತ್ತೆಯಾಗಲಿಲ್ಲ. ಘಾತುಕನನ್ನು ಪತ್ತೆಮಾಡಿಕೊಟ್ಟವನಿಗೆ ೫೦ ರೂಪಾಯಿ ಬಹುಮಾನ ಕೊಡುವೆವೆಂದು ಸರಕಾರದವರು ಡಂಗುರ ಹೊಡೆಯಿಸಿರುತ್ತಾರೆ.

ದಕ್ಷಿಣ ಕನ್ನಡ.

~~~~~~

NOTICE.

In the Court of the District Munsif of Kundapoor.

O. P. No. 5/1914.

Minor Ramesha and 2 others by next friend and mother Girija Bai. — **Petitioners.**

Vs

Sreepad Rao—**Counter Petitioner.**

Take notice that the above said petitioners have applied for a succession certificate to collect Rs. 807-5-4 due to their deceased father, Bellare Krishna Rao and that intending objectors may file their objections if any, on or before 23—6—14 to which date the Petition stands posted.

Kundapoor 13—6—14 — **G. Manjunathaya**, *Pleader for Petitioner.*

~~~~~~

ನೋಟೀಸು.

~~~~~~

ಗವರ್ನಮೆಂಟ ಕೊಲೇಜಿನ ಎದುರು ಇದ್ದ ಪಿ. ಬಾಬುರಾವ ಎಂಡ್ ಸನ್ಸ್ ಮತ್ತು ಊಲನ್ ಮಾರ್ಟ ಇವೆರಡು ಆಪೀಸುಗಳು ಇದೇ ತಿಂಗಳ ಮೊದಲ್ಗೊಂಡು ಹಂಪನಕಟ್ಟೆ ಪೋಸ್ಟು ಆಫೀಸಿನ ಬಳಿಯಲ್ಲಿ ಹೊಸತಾಗಿ ತಯಾರಿಸಿದ ಮಾಧವ ಬಿಲ್ಡಿಂಗಿನಲ್ಲಿ ವಯ್ಯಲ್ಪಟ್ಟಿದೆ.

ಬಿ ಬಾಬುರಾವ್ ಎಂಡ್ ಸನ್ಸ್.

~~~~~~

ಬಾತ್ಮೀದಾರರಿಗೆ ನೋಟೀಸು:—ಅಮರ ಮಾಗಣೆ ಪ್ರಯಾಣಸ್ಥ; ಮುಡ್ನೂರು ಗ್ರಾಮದ ಪುರವಾಸಿ;—ಹೆಸರು ವಿಳಾಸವಿಲ್ಲದ ಅನಾಮಿಕ ಪತ್ರಗಳನ್ನು ಪ್ರಕಟಿಸಲಾರೆವು.

~~~~~~

ಸುಳ್ಯ—ಇಲ್ಲಿಯ ಪೋಲಿಸ್ ಸಬ್ ಇನ್ಸ್‌ಪೆಕ್ಟರ ರಾ। ಕೋಟೆಕಾರ ಸುಂದರರಾಯರು ಮಂಗಳೂರಿಗೆ ವರ್ಗಾಯಿಸಲ್ಪಟ್ಟಿರುವುದರಿಂದ ಇಲ್ಲಿಗೆ ರಾ। ಪಿ. ಕಣ್ಣಾನಾಯರ ಎಂಬವರು ವರ್ಗಾಯಿಸಲ್ಪಟ್ಟಿರುವರು.

ಇಲ್ಲಿಯ ನೆರೆಗ್ರಾಮದ ಅರಂತೋಡಲ್ಲಿ ಮುರಿದು ಬಿದ್ದ ಸಂಕವನ್ನು ಅಸಿಸ್ಟಾಂಟು ಇಂಜಿನಿಯರವರೇ ಸ್ವತಹಾ ಇದ್ದು ಕೆಲಸ ಮಾಡಿಸಿ ಈ ವರ್ಷವೇ ಕೆಲಸ ತೀರಿಸಬೇಕೆಂದಿರುವುದರಿಂದ ಮಳೆಗಾಲದಲ್ಲಿ ಪ್ರಯಾಣಕ್ಕೆ ಕಷ್ಟಸಾಧ್ಯವಾಗದೆಂದು ಭಾವಿಸುವೆವು.

ಹೊಸತಾಗಿ ಕಟ್ಟಿಸಿದ ಸರ್ಕಾರಿ ಶಾಲೆಯು ಈ ವರೆಗೆ ಪ್ರತಿಷ್ಠಿಸಲ್ಪಡದಿರುವುದರಿಂದ ಪ್ರಕೃತ ಇರುವ ಹಳೆ ಶಾಲೆಯಲ್ಲಿ ಸ್ಥಳ ಸಂಕೋಚವಾಗಿ ಬಾಲಕರು ಪಡುತ್ತಿರುವ ತೊಂದರೆಯನ್ನು ಹೇಳಿ ತೀರದು. ಆದುದರಿಂದ ಸರಕಾರದವರು ಹೊಸ ಶಾಲೆಯನ್ನು ತ್ವರ್ಯದಲ್ಲಿ ಪ್ರತಿಷ್ಠೆ ಮಾಡಿಸಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ.

~~~~~

ಬೆಳ್ತಂಗಡಿ:—ಇಲ್ಲಿಯ ಬೋರ್ಡು ಶಾಲಾ ಅಸಿಸ್ಟಾಂಟ್ ಮಾಸ್ತರರಾಗಿದ್ದ ರಾ ಅನಂತ ಕಮ್ತಿಯರಿಗೆ ಗುರುವಾಯನಕೆರೆ ಬೋರ್ಡು ಶಾಲೆಗೆ ವರ್ಗವಾಗಿದೆ. ಸದರಿ ಮಾಸ್ತರರು ಮಕ್ಕಳನ್ನು ಪ್ರೀತಿಪೂರ್ವಕವಾಗಿ ನಡಿಸಿ ಶಿಕ್ಷಿಸುತ್ತಿದ್ದದರಿಂದ ಎಲ್ಲರಿಗೂ ಅವರ ವಿಷಯ ಸಂತೋಷವಿತ್ತು ಈಗ ಅವರು ವರ್ಗಪಟ್ಟಿದ್ದಾರೆ ಎಂದು ಕೇಳುವಾಗ ಬಹಳ ವ್ಯಸನವಾಗುತ್ತಿದೆ ಇವರ ಬದಲಿಗೆ ಇಲ್ಲಿಗೆ ಪುತ್ತೂರಿನಿಂದ ರಾ. ಬಿ. ವೆಂಕಟ್ರಾಯರು ಬರುವರು. ಇಲ್ಲಿಂದ ವರ್ಗಾಯಿಸಲ್ಪಟ್ಟ ಮಾಸ್ತರರಾದ ಅನಂತಕಮ್ತಿಯರು ಮಕ್ಕಳಿಗೆ ಉತ್ತಮ ಮಾದರಿ ಕೊಡುವವರಾಗಿದ್ದು ಮಕ್ಕಳನ್ನು ಸುಶಿಕ್ಷಣೆಯಲ್ಲೇ ಬೆಳಸ ಬಹು ಭಾವತಿಪಡುತ್ತಿದ್ದರು. ಇವರ ಬದಲಿಗೆ ಬರಲಿಕ್ಕಿರುವ ಹೊಸ ಮಾಸ್ತರರೂ ಇವರಂತೆಯೇ ನಡಿಯುವರೆಂದು ಹಾರೈಸುತ್ತೇವೆ

ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ಓವರ್‌ಸೀಯರರಾಗಿದ್ದ ಮಿಸ್ತರ್ ವಿ ಡೇವಿಡ್ ಎಂಬವರಿಗೆ ಕೊಚ್ಚಿಗೆ ವರ್ಗವಾಗಿದೆ.

~~~~~

ಕಾಸರಗೋಡು—ಈ ವರುಷ ಸೆಕೆಕಾಲದ ರಜೆ ಮುಗಿದು ಸೆಕಂಡರಿ ಶಾಲೆಯು ತೆರೆಯಲ್ಪಟ್ಟ ದಿನದಿಂದ ತೊಡಗಿ ನಾಲ್ಕೈದು ದಿವಸಗಳ ವರೆಗೆ ಶಾಲೆಯು ಹೊಸದಾಗಿ ಸೇರಲಿಕ್ಕೆ ಬಂದಿರುವ ವಿದ್ಯಾರ್ಥಿಗಳು ಮತ್ತು ಅವರ ಹೆತ್ತವರಿಂದ ತುಂಬಿ ಹೋಗಿದ್ದದ್ದು ನೋಡಿ ಹೆಚ್ಚಿನ ಸಂತೋಷ ಪಡಲು ಕಾರಣವಿದೆ. ಈಗ ವಿದ್ಯಾರ್ಥಿಗಳ ಸಂಖ್ಯೆಯು ೨೫೦ಕ್ಕೆ ಮಿಕ್ಕಿರುವುದು. ೧೯೦೫ನೆ ಇಸವಿಯಲ್ಲಿ ಇಲ್ಲಿ ಮಿಶ್ಯನರಿಗಳಿಗೆ ಸೆಕೆಂಡರಿ ಶಾಲೆಯು ಇಲ್ಲದಿರುವಾಗಲೇ ಅವರು ಒಂದು ಹೈಸ್ಕೂಲನ್ನು ಸ್ಥಾಪಿಸಲು ಉದ್ದೇಶಿಸಿ ಳನೆ ಫೋರ್ಮನ್ನು ಇಟ್ಟಿರು. ನಮ್ಮ ದುರಾದೃಷ್ಟದಿಂದ ಇದು ಸ್ಥಿರವಾಗದೆ ಹೋಯಿತು. ಈಗಲಾದರೋ ಹೈಸ್ಕೂಲನ್ನು ಸ್ಥಾಪಿಸುವುದಕ್ಕೆ ಬೇಕಾಗಿರುವ ಅನುಕೂಲತೆಗಳೆಲ್ಲವೂ ಒದಗಿರುವುದರಿಂದ ಯಾವ ತೊಡಕು ಉಂಟಾಗಲಾರದೆಂದು ನಂಬುತ್ತೇವೆ. ಹೆತ್ತವರೆಲ್ಲರೂ ಆ ಸಮಯವು ಯಾವಾಗ ಬರುವುದೋ ಎಂದು ಹಾರೈಸುತ್ತಲಿರುವರು ಆದುದರಿಂದ ದಯಾಳು ಮಿಶ್ಯನರಿಗಳು ಈ ವಿಷಯ ಪ್ರಯತ್ನಪಡುವರಾಗಿ ಕೋರುತ್ತೇವೆ. ಪಟ್ಟಣದ ಮಾನ್ಯ ಗೃಹಸ್ಥರು ಮಾತ್ರವಲ್ಲದೆ ತಾಲೂಕಿನ ಜಮೀನುದಾರರೆಲ್ಲರೂ ಇದಕ್ಕೆ ಉತ್ತೇಜನ ಕೊಡುವುದು ಆವಶ್ಯವಲ್ಲವೇ?

ಇಲ್ಲಿಯ ಪರಸ್ಪರ ಸಹಾಯಕ ಸಂಘವು ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿದೆ. ಒಂದು ಕಟ್ಟೋಣವನ್ನು ಕಟ್ಟಿಸುವ ಬಗ್ಗೆ ಸ್ಥಳವನ್ನು ಕೊಡಿಸಬೇಕಾಗಿ ರೆವಿನ್ಯು ಆಫೀಸರರಿಗೆ ಮನವಿಮಾಡಿಕೊಂಡ ಪ್ರಕಾರ ಪಂಚಮರ ಶಾಲೆ ವಠಾರವು ದೊರಕಿರುವುದು. ಕಟ್ಟೋಣದ ಬಗ್ಗೆ ಸಂಘದಿಂದ ಹಣವು ಮಹಾಜನ ಸಭೆಯಲ್ಲಿ ಸಂಕ್ಷನ್ ಆಗಿರುವುದು.

ಆಸ್ಪತ್ರೆ ಹತ್ತಲಿನ ಸುತ್ತು ಹಾಕಿರುವ ಗೋಡೆಯು ಮಳೆ ಪ್ರಾರಂಭವಾಗುತ್ತಲೇ ಕುಸಿದು ಬಿದ್ದಿರುವುದು. ಶಾಲೆಗೆ ಗೋಡೆ ಇಲ್ಲದಿರುವಾಗ ಒದಗುತ್ತಿದ್ದ ಕಷ್ಟಗಳು ಇನ್ನು ಮುಂದೆ ಕೂಡಾ ಇದ್ದೇ ಇರುವುವು. ಈ ವಿಷಯಕ್ಕೆ ಮೇಲಾಧಿಕಾರಿಗಳು ಗಮನ ಕೊಟ್ಟು ಗೋಡೆಯು ಸ್ಥಿರವಾಗಿ ನಿಲ್ಲುವಂತೆ ಕಲ್ಲಿನಿಂದ ಹಾಕಿಸುವವರಾಗಿ ಕೋರುತ್ತೇವೆ.

~~~~~

ಬಂಟವಾಳ:—ಭಂಡಾರಬೆಟ್ಟಿಗೆ ಹೋಗುವ ದಾರಿಯಲ್ಲಿರುವ ತೂಗು ಸಂಕದ ಕುರಿತು ಇದೆಷ್ಟೋ ಬಾರಿ ನಾನು ತಮ್ಮ ಪತ್ರದಲ್ಲಿ ಬರೆದುಕೊಳ್ಳುತಲೇ ಇದ್ದೆ, ಇನ್ನು ನಾನು ಆ ಕುರಿತು ಬರೆಯದಂತೆಯೇ ಆಯಿತು. ಪ್ರಜಾಹಿತಕಾಂಕ್ಷಿಗಳಾದ ಬೋರ್ಡಿನವರಿಗೆ ವಿನಯಪೂರ್ವಕವಾಗಿ ಹೇಳಿಕೊಂಡ ವಿಜ್ಞಾಪನೆಗಳು ನಿರರ್ಥಕವಾಗುವಂತಿಲ್ಲ. ಅದರ ಹಿಂದಣ ಹಾಳು ಸ್ಥಿತಿಯಿಂದುಂಟಾಗುವ ಸಂಕಟಗಳನ್ನರಿತಿದ್ದು ಈಗ ಕೊಂಕ್ರಿಟ್ ಎಂಬ ವಜ್ರಕಠಿನವಾದ ಕಂದ ಕಟ್ಟುವಿಕೆಯಿಂದ ಆ ಸಂಕವನ್ನು ಮತ್ತಷ್ಟು ಎತ್ತರಿಸಿ ವಿಶಾಲಗೊಳಿಸಿ, ಮುಖ್ಯಭೂತವಾಗಿ ಶಾಶ್ವತವಿರಿಸುವಂತಹ ಏರ್ಪಾಡು ಮಾಡಿದ್ದುದು ಆ ಪಾರ್ಶ್ವಕ್ಕೆ ಓದ ಹೋಗುವ ಎರಡು ಮೂರು ನೂರು ಬಾಲಕರ ಹಿತಕ್ಕೇ ಆದಂತಾಯಿತು. ಸಂಕದ ಅಭದ್ರತೆಯಿಂದ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ ಇರುತ್ತ ಹೆತ್ತವರು ಇನ್ನು ಬದೊಂದು ನೆವ ಹೇಳದಂತಾಯಿತು. ಕೆಲಸವು ಬಲು ಚೆನ್ನಾಗಿ ಮುಂದುವರಿಯುತ್ತಲಿದೆ ಸಂಕದ ಆಚೇ ಹೊಸ ಕಟ್ಟಡದಲ್ಲಿ ತೆರೆಯಲ್ಪಡುವ ದೊಡ್ಡ ಶಾಲೆಗೆ ಮೇಲ್ಮೆಯುಂಟಾಗುವಂತಹ ಈ ವ್ಯವಸ್ಥೆಯು ಸಮಯೋಚಿತವಾದುದೆಂದು ಇಲ್ಲಿ ಬೇರೇ ಬರೆಯಬೇಕಾಗಿಲ್ಲ

~~~~~

ಕಾಪು:—ಇದೇ ತಾ ೭ರಲ್ಲು ಯರ್ಮಾಳ ಬೋರ್ಡು ಶಾಲೆಯಲ್ಲಿ ಕಾರ್ಕಳ ಸಬ್ ರೇಂಜಿನ ಯರ್ಮಾಳ ಸೆಕ್ಷನಿನ ಉಪಾಧ್ಯಾಯ ಮಂಡಲಿಯವರ ಸಭೆಯು ಜರಗಿತು. ೫೦ ಜನ ಉಪಾಧ್ಯಾಯರು ನೆರೆದಿದ್ದರು. ಸಭಾಧ್ಯಕ್ಷರಾಗಿ ಉಡುಪಿ ರೇಂಜುಸ್ಕೂಲುಗಳ ಸಬ್ ಅಸಿಸ್ಟಾಂಟು ಇನ್ಸ್‌ಪೆಕ್ಟರರಾದ ರಾ। ಉಳ್ಳಾಲ ಮಂಗೇಶರಾವ್ ಬಿ. ಎ. ಎಲ್ ಟಿಯವರು ಕುಳಿತ್ತಿದ್ದರು. ಸಭೆಯ ಪ್ರಾರಂಭ ಸದರಿ ಶಾಲೆಯ IIIನೇ ಮಾಸ್ತರರಾದ ಯು. ಬಿ ಪುಟ್ಟಣ್ಣಯ್ಯ ಎಂಬವರು ಶುಂಠಿಯ ವಿಷಯವಾಗಿ ಒಂದನೇ ತರಗತಿಗೆ ವಸ್ತುಪಾಠವನ್ನು ಕೊಟ್ಟರು. ನಂತರ ಇನ್ನು ಮುಂದಿನ ಸಭೆಗಳಿಗೆ ಸದರಿ ಶಾಲೆಯ ಹೆಡ್ ಮಾಸ್ತರರನ್ನು ಸೆಕ್ರೆಟರಿಗಳಾಗಿ ಚುನಾಯಿಸುವದಾಯಿತು ಬರುವ ಸಭೆಯು ಒಕ್ಟೋಬರ ಪ್ರಥಮ ವಾರದಲ್ಲಿ ಉಚ್ಚಿಲ ಮಿಶನ್ ಶಾಲೆಯಲ್ಲಿ ನಡಿಯುವರೆ ಒಪ್ಪಿಕೊಳ್ಳೊಣಾಯಿತು. ಅಧ್ಯಕ್ಷರು ಮುಖ್ಯವಾಗಿ ಇಂಥಾ ಸಭೆಗಳನ್ನು ಉಪಾಧ್ಯಾಯರು ಮಾಡಿದಲ್ಲಿ, ಉಪಾಧ್ಯಾಯರಿಗೆ ಪರಸ್ಪರ ಜ್ಞಾನ, ಪರಸ್ಪರ ಸಹಾಯ, ಸ್ಪರ್ಧೆ, ಇವು ಮೂರು ಲಭಿಸಿದಂತಾಗುವುದು ಎಂಬದಾಗಿ ಹೇಳಿದರು. ನಂತರ ಅಧ್ಯಕ್ಷರು ಪ್ರತಿಒಂದು ಸಭೆಗೂ ತನ್ನಿಂದ ಕೂಡುವಷ್ಟರ ಮಟ್ಟಿಗೆ ಹಾಜರಿರುವಂತೆ ನೋಡುವೆನು ಎಂದು ಹೇಳಿ ಭೂಗೋಳ ಕಲಿಸುವದರ ಕುರಿತು ತಯಾರಿಸಿದ ಸರ್ಕ್ಯುಲಾರನ್ನು ಎಲ್ಲರಿಗೂ ಹಂಚಿ ಅದರ ವಿಷಯಗಳನ್ನು ಎಲ್ಲರಿಗೂ ವಿಷದವಾಗಿ ವಿವರಿಸುವವರಾದರು. ಕಡೇಗೆ ತನ್ನ ರೇಂಜಿನ ಎಲ್ಲಾ ಉಪಾಧ್ಯಾಯರು "ಪರೋಪಕಾರಾಯ ಇದಂ ಶರೀರಂ" ಎಂಬದನ್ನೇ ಜ್ಞಾಪಕಕ್ಕೆ ತಂದುಕೊಂಡು ಸುಳ್ಳು, ಹಾಜರಿ, ಠಕ್ಕು ಥಕ್ಕ ಮುಂತಾದ್ದನ್ನು ಬಿಟ್ಟು ನಮ್ಮ ಮುಂದಿನ ಜನಾಂಗವನ್ನು ಉನ್ನತ ಸ್ಥಿತಿಗೆ ತರುವಂತೆ ಮನಃ ಪೂರ್ವಕವಾಗಿ ಪ್ರಯತ್ನಿಸತಕ್ಕದ್ದು ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಸದರಿ ಶಾಲೆಯ ಹೆಡ್ ಮಾಸ್ತರರಿಂದ ತಯಾರಿಸಿದ ಕಾಫಿ ಫಲಾಹಾರಗಳನ್ನು ಸರ್ವರು ಸ್ವೀಕರಿಸಿಕೊಂಡು ಆ ದಿನದ ಸಭೆಯನ್ನು ಮುಕ್ತಾಯ ಗೊಳಿಸುವವರಾದರು.

~~~~~

ಉಡುಪಿ—ನಮ್ಮ ಉಡುಪಿ ಶ್ರೀ ಮಧ್ವಸಿದ್ಧಾಂತ ಸಂವರ್ದಿನೀ ಸಭೆಯು ಕಳೆದ ಪ್ರಮಾದೀಚ ಸಂ|ರದ ಮಾಘ ಶುದ್ಧ ಸಪ್ತಮಿಯಿಂದ ಪ್ರಾರಂಭವಾಗಿ ಅದೇ ಶುದ್ಧ ೧೦ ದಿನ ಮಂಗಳವಾಗುವ ವರ್ಷಾವಧಿ ಸಭೆಯು ಈ ವರುಷದಲ್ಲಿ ಪೈಕಿಗೆ ಗಲಾಪೆಯಿಂದ ಮುಂದರಿಸಿದೆ. ಅಂಥಾ ವರುಷಾವದಿ ಸಭೆಯು ನಾಡದು ಬರುವ ಆನಂದ ಸಂ ರದ ಆಷಾಢ ಬಹುಳ ಬಿದಿಗೆಯು ಗುರುವಾರ ತಾರೀಕು –೭–೧೪ನೇ ದಿನ ಪ್ರಾತಃಕಾಲ ಘಂಟೆ ೮ಕ್ಕೆ ಉಡುಪಿ ಶ್ರೀ ಅನಂತಾಸನ ದೇವಾಲಯದಲ್ಲಿ ಪ್ರಾರಂಭವಾಗಿ ತದಿಗೆ, ಚೌತಿ ಎರಡು ದಿನ ಪರೀಕ್ಷೆ ನಡದು ಪಂಚಮಿ ದಿನ ಸಾಯಾಹ್ನ ಘಂಟೆ ೫ಕ್ಕೆ ಮಂಗಳವಾಗುವದು ಪರೀಕ್ಷೆಗೆ ಅಪೇಕ್ಷೆಯುಳ್ಳ ವಿದ್ಯಾರ್ಥಿಗಳೂ ಧರ್ಮಾದಿಕಾರಿಗಳೂ ಸಮ್ಬಂಧಪಟ್ಟವರು ಮೇಲೆ ಬರೆದ ದಿವಸಗಳಲ್ಲಿ ಬಂದು ಹಾಜರು ಇದ್ದು ಸದರಿ ಸಭೆಯ ಮಂಗಳವನ್ನು ಪೂರ್ಣ ಮಾಡಿಸಬೇಕಾಗಿ ಅಪೇಕ್ಷಿಸುವ, ಉಡುಪಿ ಅದಮಾರು ಮಠದ ವಿಭುಧಪ್ರಿಯತೀರ್ಥ ಶ್ರೀಪಾದಂಗಳವರ ಕಡೆ ಅಗ್ರಹಾರ ರಾಮಕೃಷ್ಣ ಉಪಾಧ್ಯಾಯ.

~~~~~

ಕುಂದಾಪುರ:—ಕುಂದಾಪುರದಿಂದ ಸುಮಾರು ೧೦ ಮೈಲು ಈಚೆಗೆ ಇರುವ ಕುಂಭಕಾಶಿ ಎಂಬ ಸ್ಥಳದಲ್ಲಿ ತಾ. ೧೩ರಲ್ಲು ಟ್ರಾನ್ಸ್‌ಪೋರ್ಟು ಬಂಡಿ ಓಡಿ ಬರುತ್ತಿರುವಾಗ ಅದರ ಅಡಿಗೆ ಒಂದು ಗೌಡ ಸಾರಸ್ವತ ಜಾತಿಯ ಮಗು ಬಿದ್ದು ಗಾಯವೊಡದಿರುವುದು. ದಾರಿಯಲ್ಲಿ ಬರುತ್ತಿದ್ದ ಮಗುವನ್ನು ಡ್ರೈವರನು ಕಂಡು ಕುದುರೆಯನ್ನು ನಿಲ್ಲಿಸಲು ಬಹು ಪ್ರಯತ್ನ ಪಟ್ಟರೂ ಬಂಡಿಯನ್ನು ಬಹಳ ಜೋರಿನಿಂದ ಬಿಟ್ಟಿದ್ದುದರಿಂದ ಕುದುರೆಗಳನ್ನು ಹತ್ತೋಟಿಯಲ್ಲಿಡಲು ಡ್ರೈವರನಿಗೆ ಕಷ್ಟಸಾಧ್ಯವಾಗಿ ಬಂಡಿಯು ಮಗುವಿನ ಮೇಲೆ ಹಾದು ಹೋಯಿತು. ದೈವವಶಾತ್ ಮಗುವಿನ ಪ್ರಾಣವು ಉಳಿಸಲ್ಪಟ್ಟರೂ ಬಹಳ ಜಕಂ ಹೊಂದಿರುವುದು.

~~~~~

ಮಂಗಳೂರು.

~~~~~

ಇಲ್ಲಿಯ ಗಣಪತಿ ಸೆಕಂಡರಿ ಶಾಲೆಯ ಬಗ್ಗೆ ಕಟ್ಟಿಸಲ್ಪಡುತ್ತಿರುವ ಕಟ್ಟೋಣಕ್ಕೆ ತಗಲುವ ಖರ್ಚಿನಲ್ಲಿ ಅರ್ಧಾಂಶ ಅಂದರೆ ೨೩೨೫ ರೂಪಾಯಿಗೆ ಮಿಕ್ಕದ ಮೊಬಲಗನ್ನು ಸರಕಾರದವರು ಕೊಡಲು ಸಮ್ಮತಿಸಿರುವರು.

ಕಾಸರಗೋಡ್ ರೇಂಜಿನ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ರಾ| ಪಿ. ಮಂಗೇಶರಾಯರು ಪುನಃ ೨೨ದಿವಸಗಳ ರಜೆಯನ್ನು ಪಡಕೊಂಡಿರುವರು.

ಮದ್ರಾಸ್ ಗವರ್ನರರಾದ ಪೆಂಟ್‌ಲೇಂಡ ಪ್ರಭುಗಳವರು ಇದೇ ಬರುವ ನವಂಬರ ತಿಂಗಳ ಮಧ್ಯಕಾಲದಲ್ಲಿ

ಉತ್ತರ ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಸಂದರ್ಶಿಸುವರೆಂಬದಾಗಿ ತಿಳಿಯಬರುತ್ತದೆ.

ಇದೇ ಕಳೆದ ತಾ ೧೦ರಲ್ಲು ಇಲ್ಲಿಯ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ ಮೆ। ಅಬ್ದುಲಖಾದರರ ಮಕ್ಕಳು ಲ್ಯಾಟ್‌ಹೌಸ್ ಗುಡ್ಡೆಯಿಂದ ಹಂಪನ ಕಟ್ಟೆಗೆ ಗಾಡಿಯಲ್ಲಿ ಕುಳಿತು ಬರುವಾಗ ಡಿಸ್ಟ್ರಿಕ್ಟ್ ರಿಜಿಸ್ತ್ರಾ ಆಫೀಸಿನ ಮೇಲೆ ಇರುವ ಇಳಿಜಾರಿನಲ್ಲಿ ಗಾಡಿಯು ಕವಚಿ ಬಿದ್ದು ಗಾಡಿಯಲ್ಲಿದ್ದ ಮಕ್ಕಳು ಗಾಯ ಹೊಂದಿರುವರು.

ಕನ್ನಡಾ ಜಿಲ್ಲೆಗಳ ಮತ್ತು ಕೊಡಗು ಪ್ರಾಂತ್ಯದ ಬಾಸೆಲ್ ಮಿಶ್ಯನ್ ಶಾಲೆಗಳ ಇನ್ಸ್‌ಪೆಕ್ಟರರೂ ಉಡ್ಪಿ ಕ್ರಿಶ್ಚಿಯನ್ ಹ್ಯಾಸ್ಕೂಲು ಮೆನೇಜರರೂ ಆಗಿರುವ ರೆವರೆಂಡ್ ಐ. ಪ್ರೈದರರ್ ದೊರೆಗಳವರು ದೇಹಾಲಸ್ಯ ಸಂಬಂಧ ಬೇಗನೇ ಸೀಮೆಗೆ ತೆರಳುವರೆಂದೂ ಇವರ ಬದಲಿಗೆ ಈಗ ಮಿಶ್ಯನ್ ಸೆಕ್ಯೂಲರ್ ಏಜಂಟರಾಗಿರುವ ರೆವರೆಂಡ್ ಬ್ರಾಸ್ಟ್ ದೊರೆಗಳವರು ಯಾ ಇಲ್ಲಿಯ ಮಿಶ್ಯನ್ ಹೈಸ್ಕೂಲ ಮೆನೇಜರರಾಗಿರುವ ರೆವರೆಂಡ ಬ್ಲೂಮ ದೊರೆಗಳವರು ಮಿಶ್ಯನ್ ಶಾಲೆಗಳ ಇನ್ಸ್‌ಪೆಕ್ಟರಾಗಿ ನೇಮಿಸಲ್ಪಡುವರೆಂಬದಾಗಿಯೂ ವಾರ್ತೆ ಇದೆ.

ಮೆ। ಸಿ. ಎಚ್ ಮೋರ್ಗನ್ ದೊರೆಗಳವರು ದಕ್ಷಿಣ ಕನ್ನಡಾ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾಗಿ ನೇಮಿಸಲ್ಪಟ್ಟಿರುವರು.

ರಾ। ಯು. ಪಿ. ಅನಂತರಾಯರು ಫಸ್ಟ ಉಡುಪಿ ಜೋನಿನ ಸ್ಪೆಶ್ಯಲ್ ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು.

ಇಲ್ಲಿಯ ಮೆಸ್ಸರ್ಸ್ ಸ್ಟೀವನ್ ಎಂಡ್ ಸನ್ಸರವರು ವೈಸರಾಯ ಹಾರ್ಡಿಂಜ ಪ್ರಭುಗಳವರ ಹುಟ್ಟಿದ ದಿವಸವಾದ ಇದೇ ತಾ. ೨೦ರಲ್ಲು ಆ ದಿವಸದ ಜ್ಞಾಪಕಾರ್ಥವಾಗಿ ಮಂಗಳೂರು ಮುನ್ಸಿಪಾಲಿಟಿಯೊಳಗಣ ಎಲ್ಲಾ ಎಲಿಮೆಂಟರಿ ಶಾಲೆಯ ಮಕ್ಕಳಿಗೆ ತಿಂಡಿ ಹಂಚಿ ಕೊಡುವರು. ಈ ವಿಷಯವನ್ನು ವೈಸರಾಯ ಪ್ರಭುಗಳವರಿಗೆ ಮೆಸ್ಸರ್ಸ್ ಸ್ಟೀವನ್ಸ್ ಎಂಡ್ ಸನ್ಸರವರು ತಂತೀ ಮೂಲಕ ತಿಳಿಸಿದ್ದಲ್ಲಿ ವೈಸರಾಯ ಪ್ರಭುಗಳವರು ಸ್ಟೀವನ್ ಎಂಡ್ ಸನ್ಸರ ಈ ಉದಾರ ಕಾರ್ಯವನ್ನು ಮನ್ನಿಸಿ ಆ ದಿನವು ಮಕ್ಕಳಿಗೆ ಸಂತೋಷಕರವಾಗಿ ಪರಿಣಮಿಸಲೆಂತ ಬಯಸಿರುವರೆಂಬ ಉತ್ತರವು ವೈಸರಾಯ ಪ್ರಭುಗಳವರ ಅಸಿಸ್ಟಂಟ ಪ್ರೈವೆಟ್ ಸೆಕ್ರೆಟರಿಗಳವರಿಂದ ಬಂದಿರುವುದು.

ಕಂಕನಾಡಿ ಬೆನ್ನಾರ್ಡ ಲೋಬೊ ಮತ್ತು ಮರಿಯಾನ ಲೋಬೊ ಇವರಿಗೆ ಕೆಳಗಿನ ಕೋರ್ಟಿನಲ್ಲಿ ವಿಧಿಸೋಣಾದ ತೀರ್ಪು ಡಿವಿಜನಲ್ ಕೋರ್ಟಿನಲ್ಲಿ ಕಾಯಂ ಮಾಡಲ್ಪಡಲಿಲ್ಲ. ೧ನೇ ಮುದ್ದೆಯಾಳಿ ಬೆನ್ನಾರ್ಡ ಲೋಬೊನ ೬ ತಿಂಗಳ ಸಜೆಯು ೩ ತಿಂಗಳಿಗೆ ತಗ್ಗಿಸಲ್ಪಟ್ಟಿದೆ ೨ನೇ ಯಾಳಿ ಮರಿಯಾನ್ ಲೋಬಗೆ ಖುಲಾಸೆ ಪಡಿಸೋಣಾಗಿಯದೆ.

ನಿನ್ನೆ ದಿವಸ ಪುತ್ತೂರಿಂದ ಮಂಗಳೂರಿಗೆ ಬರುತ್ತಿದ್ದ ಕೊರೊನೇಶನ್ ಟ್ರಾನ್ಸಿಟು ಕಂಪೆನಿಯ ಜಟ್ಕವು ಪೋಲಿಸ್ ಸುಪರಿಂಟೆಂಡೆಂಟ ದೊರೆಗಳವರ ಬಂಗಲೆ ಸಮೀಪ ಕವಚಿ ಬಿದ್ದು ಪ್ರಯಾಣಸ್ಥರಲ್ಲಿ ಒಬ್ಬರಿಗೆ ಕಣ್ಣಿನ ಹತ್ತರವೇ ದೊಡ್ಡದಾದ ಘಾಯವಾಗಿರುತ್ತದೆ. ಕಣ್ಣು ಸಾಭೀತಿಯಿಂದ ಉಳಿದದ್ದು ಪೂರ್ವಪುಣ್ಯವೆಂದೇ ಭಾವಿಸಬೇಕಾಗಿದೆ. ಈ ಅವಘಡಕ್ಕೆ ಕಾರಣವು ಡ್ರ್ಯಾವರನು ಅತಿರೇಕ ಕುಡಿದದ್ದು ಮತ್ತು ಲಾಂದರುಗಳಿಲ್ಲದೆ ಜಟ್ಕಾವನ್ನು ಕತ್ತಲೆಗೆ ಓಡಿಸಿದ್ದಾಗಿರುತ್ತದೆಂಬದಾಗಿ ಗಾಡಿಯಲ್ಲಿದ್ದ ಪ್ರಯಾಣಿಕರ ಹೇಳಿಕೆಯಾಗಿದೆ. ಜಟ್ಕಾ ಡ್ರ್ಯಾವರನು ಕೂಡ್ಲೇ ಚಾರ್ಜು ಮಾಡಲ್ಪಟ್ಟಿರುವನು.

ಇದೇ ತಾ. ೫ರಲ್ಲು ಪಡುಪಣಂಬೂರಲ್ಲಿ ಪಂಚಮರ ಇಸರು ವಗೈರೆ ಕೂಡಾ ೬ ಜನರು ಅದೇ ಜಾತಿಯ ದೋಗು ಎಂಬವನನ್ನು ದೊಣ್ಣೆಯಿಂದ ಬಡಿದು ಕೊಂದಿದ್ದಾರೆಂಬ ಅನುಮಾನದ ಮೇಲೆ ಕೈದುಮಾಡಲ್ಪಟ್ಟು ಸ್ಟೇಶನರಿಮೇಜಿಸ್ಟ್ರೇಟರ ಮುಂದೆ ಹಾಜರು ಮಾಡಲ್ಪಟ್ಟಿರುವರು ಈ ಖೂನಿಮಾಡಲಿಕ್ಕೆ ಸೇರಿದ ಒಬ್ಬ ಪಂಚಮನು ತಲೆ ತಪ್ಪಿಸಿಕೊಂಡಿರುವನಂತೆ.

ಇದೇ ತಿಂಗಳ ತಾ. ೨೧ನೆ ಆದಿತ್ಯವಾರ ಪ್ರಾತಃಕಾಲ ೭ ಘಂಟೆಗೆ ಮಂಗಳೂರ ಬ್ರಹ್ಮಮಂದಿರದಲ್ಲಿ ಮ. ರಾ ರಾ ಉಳ್ಳಾಲ ರಘುನಾಥಯ್ಯನವರು ದೇವಾರಾಧನೆ ಮತ್ತು ಉಪನ್ಯಾಸ ನಡಿಸುವರು ಉಪನ್ಯಾಸದ ವಿಷಯ—"ವಿಶ್ವಕರ್ಮನು".

ಇದೇ ಕಳೆದ ತಾ ೧೨ನೇ ಶುಕ್ರವಾರ ಸಾಯಂಕಾಲ ೭ ಘಂಟೆಗೆ ಬಲ್ಮಠ ಕ್ರೈಸ್ತ ಯುವಜನ ಸಮಾಜದಲ್ಲಿ ಒಂದು ಅಪೂರ್ವ ಸತ್ಕಾರವು ನಡೆಯಿತು. ಈ ವರ್ಷದ ಇಂಟರ್ ಮಿಡಿಯೆಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಸಮಾಜದ ಇಬ್ಬರು ಮೆಂಬರರಿಗೆ ಧನ್ಯವಾದವನ್ನು ಕೊಡುವದೂ ಅವರು ಮುಂದಿನ ವಿದ್ಯಾಭ್ಯಾಸಕ್ಕಾಗಿ ಮದ್ರಾಸಿಗೆ ಹೋಗುವದರಿಂದ ಮಂಗಲವಾಚಕವನ್ನು ಮಾಡುವದೂ ಈ ಸತ್ಕಾರದ ಉದ್ದೇಶವಾಗಿತ್ತು. ಆ ದಿನದ ಸಭೆಯಲ್ಲಿ ರೆವರೆಂಡ್ ಬ್ಲೂಮ ದೊರೆಗಳು ಅಧ್ಯಕ್ಷರಾಗಿದ್ದಲ್ಲದೆ ಸಮಾಜದ ಮುಂದಾಳುಗಳಲ್ಲಿ ಹಲವರು ಕೂಡಿ ಬಂದಿದ್ದರು. ಮೆ। ಶವಾಕ್ ಸಿಮನ್ ಬಿ ಎ, ಪಿ। ಕ್ರಿಶ್ಚಿಯನ್ ತಿಯದೊರ್ ಬಿ ಎ ಎಲ್ ಟಿ ಬಿ. ಎಲ್. ಮೆ। ಜೋರ್ಜ ಹರ್ಬರ್ಟ ಮೊದಲಾದವರು ಭಾಷಣಗಳನ್ನು ಕೊಟ್ಟು, ಪ್ರೌಢ ವಿದ್ಯಾಭ್ಯಾಸವನ್ನು ಮಾಡುವದಕ್ಕೆ ಮದ್ರಾಸಿಗೆ ಹೋಗಲಿಕ್ಕಿರುವ ಇಬ್ಬರು ವಿದ್ಯಾರ್ಥಿಗಳಿಗೆ ಕಾಲೋಚಿತ ಬುದ್ಧಿವಾದವನ್ನು ಹೇಳಿ, ಮಿಶ್ಯನ್ ಅಧಿಕಾರಿಗಳು ಈ ವಿದ್ಯಾರ್ಥಿಗಳಿಗೆ ಪ್ರೌಢ ವಿದ್ಯಾಭ್ಯಾಸವನ್ನು ಮಾಡುವದಕ್ಕಾಗಿ ಹಣ ಸಹಾಯಮಾಡಿದುದಕ್ಕೆ ಸಮಾಜದ ಮತ್ತು ತಮ್ಮ ಪರವಾಗಿ ಕೃತಜ್ಞತೆಯನ್ನು ಅರ್ಪಿಸಿ, ಇನ್ನು ಮುಂದಕ್ಕೂ ಕ್ರೈಸ್ತ ಸಮಾಜದ ಮಕ್ಕಳಿಗೆ ಪ್ರೌಢ ವಿದ್ಯಾಭ್ಯಾಸ ಮಾಡಿಸುವರೆ ಮಿಶ್ಯನಿನವರು ತಮ್ಮಿಂದಾದಷ್ಟು ಸಹಾಯಮಾಡಬೇಕೆಂದು ಅಲ್ಲಿ ಕೂಡಿ ಬಂದಿದ್ದ ಮಿಶ್ಯನ್ ಮೇಲಾಧಿಕಾರಿಗಳನ್ನು ವಿಜ್ಞಾಪಿಸಿಕೊಂಡರು. ಸ್ಟೇಶನ್ ಸೀನಿಯರ್ ಮಿಶ್ಯನೆರಿಯಾದ ರೆವೆರೆಂಡ್ ಮೂರ್ ದೊರೆಗಳವರು ಇವರ ವಿಜ್ಞಾಪನೆಗಳಿಗೆ ತಕ್ಕ ಉತ್ತರವನ್ನು ಕೊಟ್ಟು;—ಹಿಂದೆ ಮಿಶ್ಯನಿನ ಸಹಾಯದಿಂದ ಪ್ರೌಢ ವಿದ್ಯಾಭ್ಯಾಸವನ್ನು ಪಡೆದ ಕ್ರೈಸ್ತರು ತಾವು ಪಡೆದ ಸಹಾಯ ಹಣವನ್ನು ಹಿಂದೆ ಕೊಟ್ಟಿದುದ್ದೇ ಆದರೆ ಈ ಸಹಾಯ ಫಂಡು ಹೆಚ್ಚು ದೊಡ್ಡದಾಗುತ್ತಾ ಬಂದು ಈಗ ಇನ್ನೂ ಹೆಚ್ಚಿನ ಸಹಾಯವನ್ನು ಮಾಡಲು ಉಪಯೋಗಕ್ಕೆ ಬೀಳುತ್ತಿತ್ತು ಎಂಬಿತ್ಯಾದಿ ಮಾತುಗಳಿಂದ ಇತರರ ಸಹಾಯವನ್ನು ಹುಡುಕುವುದಕ್ಕಿಂತ ತಮಗೆ ತಾವೇ ಸಹಾಯಮಾಡಿಕೊಳ್ಳಲು ನೋಡುವುದು ಹಿತವೆಂದು ಕೂಡಿದ್ದವರನ್ನು ಎಚ್ಚರಿಸಿದರು. ಕ್ರೈಸ್ತ ಸಮಾಜದವರು ಇಂದಿನ ತನಕ ಮಿಶ್ಯನಿನವರ ಸಹಾಯವನ್ನೇ ಆಶಿಸುತ್ತಾ ಇದ್ದು ತಮ್ಮ ಚಿಂತೆಯನ್ನು ಮಿಶ್ಯನಿನವರೇ ಮಾಡಬೇಕೆಂದು ಭಾವಿಸುತ್ತಿರುವರೋ ಇಂದಿನ ತನಕ ಈ ಕ್ರೈಸ್ತ ಸಮಾಜವು ಮೇಲ್ಮೆಯನ್ನು ಹೊಂದದೆಂಬ ವಿಷಯ ಸಭಾ ಮುಂದಾಳುಗಳೂ ಪ್ರೌಢ ವಿದ್ಯಾಭ್ಯಾಸವನ್ನು ಪಡೆದ ಸಭೆಯ ಗೃಹಸ್ಥರೂ ಆಲೋಚಿಸಿ ತಮ್ಮ ಸಮಾಜದ ಬುದ್ಧಿವಂತರಾದ ಬಡ ಮಕ್ಕಳಿಗೆ ಪ್ರೌಢ ವಿದ್ಯಾಭ್ಯಾಸವನ್ನು ಕೊಡಿಸುವರೆ ತಾವೇ ಒಂದು ವಿದ್ಯಾರ್ಥಿ ವೇತನ ಫಂಡನ್ನು ಸ್ಥಾಪಿಸಿ ತಮ್ಮಿಂದ ಕೈಲಾದಷ್ಟು ಸಹಾಯಮಾಡಬೇಕೆಂತ ಈ ವಾರ್ತೆಯನ್ನು ಬರೆದ ಬಾತ್ಮಿದಾರರು ವಿಜ್ಞಾಪಿಸಿಕೊಂಡಿರುವರು.

ಕಳೆದ ೧೯೧೩ನೇ ಇಸವಿ ದೀಪಾವಳಿ ಸಮಯದಲ್ಲಿ ಗೌಡ ಸಾರಸ್ವತ, ಕೊಲೇಜ್ ವಿದ್ಯಾರ್ಥಿಗಳು ಸ್ಥಾಪಿಸಿದ ಬಡ ವಿದ್ಯಾರ್ಥಿಗಳ ಸಹಾಯಕ ಫಂಡಿಗೆ ವಸೂಲಾದ ವಂತಿಗೆಯ ವಿವರ:—ಅಮ್ಮೆಂಬಳ ವಾಸುದೇವ ಪೈ ಮತ್ತು ಕುಟುಂಬದವರು ರೂ ೩೦, ಉ. ವಾಸುದೇವಮಲ್ಯ ಮತ್ತು ನಗರ್ ದಾಮೋದರ ಶ್ಯಾನುಭಾಗರು ಪ್ರತಿ ಒಬ್ಬರು ರೂ. ೧೦, ಮ. ಗೋಪಾಲಪೈ ಮತ್ತು ಮಗಂದಿರು ರೂ. ೬, ಕ. ಸುಬ್ರಾಯಪೈ ಸು. ರಾಮಚಂದ್ರನ್ಯಾಕ್ ಎಂಡ್ ಕೊ. ಸು. ನಾಗಪ್ಪನ್ಯಾಕ್ ಮತ್ತು ರಂಗಪೈ, ಅಳ್ಕೆ ಕೃಷ್ಣಪೈ ಮತ್ತು ನರಸಿಂಹ ಮರ್ತು ಬಂಡಾರಿ, ಮ. ಕೃಷ್ಣನ್ಯಾಕ್ ಮತ್ತು ಮಕ್ಕಳು, ಬ. ದೇವಪ್ಪ ಶ್ಯಾನುಭಾಗ; ಉ. ನಾರಾಯಣ ಕಿಣಿ ಮತ್ತು ಕಂಪೆನಿ, ಉ ಲಕ್ಷ್ಮಣಸಾಂತಯ್ಯಾಕಿಣಿ, ಕು. ರಘುನಾಥ ವಿರಳನ್ಯಾಕ್ ಮತ್ತು ಕಂಪೆನಿ, ಬೊ. ಸರ್ವೋತ್ತಮ ಪ್ರಭು ಮತ್ತು ಕಂಪೆನಿ, ಪ. ವಿಟ್ಟಪ್ಪಬಾಲಪ್ರಭು, ಪಿ ಯಮ್. ಕಾಮತ್, ಕು. ರಘುನಾಥ ಶ್ಯಾನುಭಾಗ, ಬ. ನಾರಾಯಣಪೈ, ವಾಸುದೇವಪೈ ಪ್ರತಿ ಒಬ್ಬರು ರೂ. ೫, ಉ ರಂಗಪ್ಪ ಪಡಿಯಾರ್ ರೂ. ೪, ಮ. ಅನಂತಶಾನಭೋಗ ಮತ್ತು ಮಕ್ಕಳು, ಮ ಶ್ರೀನಿವಾಸ ರಂಗಪೈ, ನಾರಾಯಣಶಣೈ ಮತ್ತು ಕಂಪೆನಿ, ಪ್ರತಿ ಒಬ್ಬರು ರೂ. ೩; ಜೆ ಎ ರಾವ್ ಕವಿ, ಕು. ಕೃಷ್ಣಪ್ರಭು, ಉ. ಕೊಗ್ಗನ್ಯಾಕ್, ಉ. ರಾಮಚಂದ್ರಪೈ, ರಂಗಪೈ (ಪ್ರತ್ಯೇಕ) ಪ್ರತಿ ಒಬ್ಬರು ರೂ. ೨. ಮ ರಾಮಕೃಷ್ಣಕಮ್ತಿ ಎ ಸುಬ್ರಾಯನ್ಯಾಕ್ ಮತ್ತು ಕಂಪೆನಿ, ವಾಗ್ ಸರ್ವೋತ್ತಮ ಶ್ಯಾನುಭಾಗ, ಜಾ. ಸುಬ್ರಾಯಕಮ್ತಿ ಇ ವೆಂಕಟೇಶಪೈ. ಹೊ. ಅನಂತಕಮ್ತಿ, ಬೈ ನರಸಿಂಹ ಕಿಣಿ, ವಾ. ಪರಮೇಶ್ವರನ್ಯಾಕ್ ಪ್ರತಿ ಒಬ್ಬರು ರೂ ೧. ಜಮ್ಲಾ ರೂ ೧೫೯

ಮುಂದರಿಯುವುದು

M. Madhava Rao
President.

ಜೀನಸುಗಳ ಧಾರಣೆ, ಮಂಗಳೂರು (ರಖಂ)

ಅವಲ್ ಮುಸ್ಸಿಕಿ ಅಕ್ಕಿ ...	5—4—0	5—9—0
ದುಫುಬ ,, ,, ...	5—0—0	5—2—0
ಸುಗ್ಗಿ .	4-15—0	5—2—0
ಮುಯುಂ ರಾಶಿ	4-13—0	4-14—0
ಗುಡ್ಡ	4-13—0	5—0—0
ಅವಲ್ ಬೆಳ್ತಿಗೆ... ..	5—12—0	5-15—0
ಗುಡ್ಡ ಬೆಳ್ತಿಗೆ	5—2—0	5—4—0
ರಂಗೂನ್ ಬೆಳ್ತಿಗೆ ಗೋಣಿ ೧ರ	9—4—0	9—6—0
ಗೋಧಿ ಗೋಣಿ ೧ರ		11-12—0
ಹುರುಳಿ ಗೋಣಿ, ೧ರ		6-14—0
ಕಡಲೆ ಗೋಣಿ ೧ರ		10—0—0
ತೊಗರಿ ಗೋಣಿ ೧ರ	10-8—0	11-8—0
ತೊಗರಿಬೇಳೆ ಗೋಣಿ ೧ರ	12-0—0	14—8—0
ಉದ್ದು ಗೋಣಿ ೧ರ ..	9—8—0	10—0—0
ಉಪ್ಪು ಗೋಣಿ ೧ರ ...	3-10—0	3-12—0
ಊರು ಬೆಲ್ಲ ಖಂಡಿ ೧ರ	50—0—0	52-8—0
ಕೊಬ್ರಿ ಖಂಡಿ ೧ರ ...	90-0-0	95—0—0
ಕೊಬ್ರಿ ಹಿಂಡಿ ಖಂಡಿ೧ರ	28—0—0	30—0—0
ಎಳ್ಳಿಂಡಿ ಖಂಡಿ ೧ರ	34—8—0	36—4—0
ಕೊಬ್ರಿ ಎಣ್ಣೆ ಮಣ ೧ರ	6—12—0	7—0—0
ಎಳ್ಳೆಣ್ಣೆ ಮಣ ೧ರ ...	7—2—0	7—6—0
ಬಿಳಿಗ್ಲೋಟು ಖಂಡಿ ೧ರ	95—0—0	102—0—0
ಯಾಲಕ್ಕಿ ಮಣ ೧ಕ್ಕೆ	50—0—0	56—0—0
ಕಾಫಿ ಖಂಡಿ ೧ರ ...	215—0—0	225—0—0
ತಾಂಬ್ರ ತಗಡು ಮಣ ೧ರ		16—7—0
,, ಪಾತ್ರಗಳು ಮಣ ೧ರ	20-8-0	21—0—0
ಚಿಮ್ನಿ ಎಣ್ಣೆ ಪೆಟ್ಟಿಗೆ ೧ಕ್ಕೆ	4—9—0	5—0—0
ಚೀನಿ ಬೆಳ್ಳಿ ಸೇರು ೧ಕ್ಕೆ		19—8—0

ಮುಳಿಯಿಲ್‌ರವರ ದಿವ್ಯೌಷಧಗಳು.

ಮಸ್ತಕಾಮೃತ ತೈಲ—ಕುಪ್ಪಿ 1ಕ್ಕೆ ಕ್ರಯ 10 ಆಣೆ. ಇದು ಎಲ್ಲಾ ತರದ ಶಿರೋರೋಗ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಬಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ.

. . . .ಮಸ್ತಕಾಮೃತ ತೈಲವನ್ನು ಕಳೆದ ಐದು ವರುಷಗಳಿಂದ ಉಪಯೋಗಿಸಿಕೊಳ್ಳುತ್ತಿರುವದರಿಂದ ನನ್ನ ಮುದಿ ಮುಖಳು ಯೌವ್ವನ ಪ್ರಾಯದಲ್ಲಿರುವದು. ಈ ದಿವ್ಯ ತೈಲಕ್ಕಿಂಗನೆ ವಿನಹಾ ನಾನು ಕೆಲಸಮಾಡಲಾರೆನು, ನನ್ನ ನೇತ್ರೇಂದ್ರಿಯಗಳು ಛಿದ್ರವಾಗಲು

ರೆವರೆಂಡ್ ಇ ಸೋನ್ಸ್,
ಮುಲ್ಕಿ.

ತಾ 15—4—13

ಮುಳಿಯಿಲ್ಸ್ ಹೇರ್ ಓಯಿಲ್—ಕ್ರಯ 12 ಆಣೆ ಕೂದಲಿಗೆ ಅಮೃತದಂತಿರುವ ನಿಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಇನ್ನೊಂದು ಕುಪ್ಪಿ ವಿ ಪಿ. ಮೂಲಕ ರವಾನಿಸಿರಿ.

ಮಿಸಿಸ್. ವೈ ಕುರಿಯಾನ್,
ಗ್ರೀನ್‌ವಿಲ್ಲಾ, ಕಲ್ಲಿಕೋಟೆ.

ತಾ. 23—5—13

. . . . .ಮುಳಿಯಿಲ್ಸ್ ಹೇರ್ ಓಯ್ಲ್ ಉಪಯೋಗಿಸಿದಂದಿನಿಂದ ನನ್ನ ತಲೆನೋವು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ನಿಬಿಡವಾಗಿ ಬೆಳೆದಿರುವವು ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ. ಇನ್ನೂಂದು ಡಜನ್ ಕುಪ್ಪಿಗಳನ್ನು ಆದಷ್ಟು ತ್ವರ್ಯದಲ್ಲಿ ರವಾನಿಸಿರಿ.

ಮಿಸ್. ಎಸ್. ಸೋನ್ಸ್,
ಸ್ಕೂಲು ಮಿಸ್ಟ್ರೆಸ್, ಮಂಗಳೂರು

21ನೇ ಒಕ್ಟೋಬರ 1913

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ. ಎಲ್ಲಾ ತರದ ಛಳಿ ಜ್ವರಕ್ಕೆ ರಾಮಬಾಣದಂತಿದೆ

ಚತುರ್ಥಿ ಮಾತ್ರೆಯನ್ನು ತಕ್ಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ ಇದು ಒಳ್ಳೇ ಗುಣಕರವೆಂಬದಾಗಿ ಹೇಳುವರೆ ಅನುಮಾನವಿಲ್ಲ

ಎ ಪೊಕ್ರು ಹೆಗ್ಗಡೆ,
ಕುಕ್ಕುಛೆ, ಕಾರ್ಕಳ

ತಾ. 13—6—13.

ವಯೊಲೆಟ್ ಹೇರ್ ಓಯ್ಲ್—ಸುವಾಸನೆಯುಳ್ಳ ಈ ತೈಲದ ಪ್ರಯೋಗದಿಂದ ತಲೆವೇದನೆಯು ಗುಣಪಡುವದು ಕಾಯಂ ವ ಕಠಿಣ ತರದ ತಲೆನೋವಿನಿಂದ ಪೀಡಿತರಾಗಿರುವವರಿಗೆ ನಿಮ್ಮ ವಯೊಲೆಟ್ ಹೇರ್ ಓಯ್ಲಿಗಿಂತ ಅತ್ಯುತ್ತಮ ತೈಲವು ಬೇರೆಯಿಲ್ಲ ಎಂದೆಣಿಸುತ್ತೇನೆ ಅತಿ ಘೋರವಾದ ತಲೆನೋವಿನಿಂದ ಶ್ರಮೆಪಡುತ್ತಿದ್ದ ನನ್ನ ಮೊಮ್ಮಗಳಿಗೆ ತಮ್ಮಿಂದ ತಕ್ಕೊಂಡ 2 ಕುಪ್ಪಿ ಎಣ್ಣೆಯು ಅತಿರೇಕ ಸೌಖ್ಯವನ್ನುಂಟುಮಾಡಿರುತ್ತದೆ. ಅದಲ್ಲದೆ ಅವಳು ಇರಲಾರಳು ಹೆಚ್ಚಿನ ರೋಗಿಗಳ ಪ್ರಯೋಜನಕ್ಕಾಗಿ ದೇವರು ತಮ್ಮ ಈ ಲೋಕೋಪಕಾರಿಯಾದ ಕೆಲಸವನ್ನು ಆಶೀರ್ವದಿಸಲೆಂಬದು ನನ್ನ ಪ್ರಾರ್ಥನೆಯಾಗಿದೆ

M. JACOBI,
Hd. Clerk, CALICUT

4—7—13

ವಿಳಾಸ:— ಮುಳಿಯಿಲ್ ಎಂಡ್ ಸನ್ಸ್, ಕಾಸರಗೋಡು, ದ. ಕ.

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ್

ತಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ದ್ವಿಟೊಬಿಲ್ಡಿಂಗ್
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರು

MUSICAL MART
Kavi & Sons,

MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರ್ಮೊನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು **ಹೇಂಡ್ ಹಾರಮೊನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೆಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೇಗೂ, ಫ್ಲೋಲ್ಡಿಂಗ್ ರೂ. 70, 75, 105.**

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ್, ಮಂಗಳೂರು ದ ಕ.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವುದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವುದು ಮತ್ತಾವದೂ ಅಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕೆ" ಎಂಬ ಸಂಸ್ಕೃತ ವ್ಯಾಖ್ಯಾನವೂ ಬಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಆಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರೆಯಿಸಿ ದಪ್ಪ ಕಾಗದದಲ್ಲಿ ಸುರೇಖ ಅಕ್ಷರಗಳಿಂದ ಮುದ್ರಿಸಿರುತ್ತದೆ ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪುಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ, ಸೂರ್ಯ ಚಂದ್ರ ಗ್ರಹಣನಿರ್ಣಯ, ಅಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರ ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೨೬ಗಿ ವಿಷಯಗಳು ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು ಇದರ ಕ್ರಯ ೧ಕ್ಕೆ ೧—೮—೦ ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾ ಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳುವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೭೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಆಣೆ

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರಿಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು,

ನಮ್ಮ ವಿಳಾಸ:—

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ಣಾಟಕ ಬುಕ್ ಡಿಪೊ ಏಜಂಟ್, **ಬಳ್ಳಾರಿ**

ವಿವಾಹ ಮಂಟಪ

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡದಿದೆ. ಕನ್ನಾನೂರು, ಮೈಸೂರು, ನಾಗಪುರ, ವಿಶಾಕಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಲಾರಿರಾ !

ಸ್ಟೀವನ್ಸ್ ಎಂಡ್ ಸನ್ಸ್
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ,
ಹಂಪನಕಟ್ಟಾ, ಮಂಗಳೂರು.

Madeena Watch Co., Madras

ಬಿ. ನ್ಯೂ ಪೆಂಡುಲಂ ವಾಚ್. Rs. 3—15—0

ಇದು ಒಂದು ಆಶ್ಚರ್ಯಕರವಾದ ಘಡಿಯಾರ.



Rs. 3-15-0

ಇದು ಬಹು ಚಂದವಾಗಿಯೂ ಇರುತ್ತೆ. ಇದನ್ನು ಟೈಪಿಸಿ ಸಿನಂತೆ ಮೇಜಿನ ಮೇಲೂ ನಿಲ್ಲಿಸಿಡಬಹುದು. ಜೇಬಿನಲ್ಲಿಯೂ ಉಪಯೋಗಿಸಿಕೊಳ್ಳ ಬಹುದು

ಬಾಂಬೆ ಮೇಲ್ ವಾಚ್ ಕ್ರಯ	ರೂ.	2—7—0
ರಾಸ್ಕೋಪ್ ವಾಚು ಕ್ರಯ	,,	1--12—0
ಬೆಸ್ಟ್ ಲೀವರ್ ವಾಚು ಕ್ರಯ	,,	3—8—0
ರೈಲ್ವೆ ರೆಗ್ಯುಲೇಟರ್ ಕ್ರಯ	,,	2--12—0
ಸಿಲ್ವರ್ ಕ್ಲೋಸಿಕ್		3--15—0
ಟೈಂಪೀಸು—ಸಾದಾ	,,	1—5—0
ಅಲಾರಾಂ ಟೈಂಪೀಸು		1-13—0
ಚಿಕ್ಕ ಸೈಜು ಲೇಡಿವಾಚ್		2-15—0

ಕಾರೇಜ್ ಹಾರ್ಮೋನಿಯಂ ರೂ 20=0—0, ಮ್ಯೂಜಿಕ್ ಕ್ಲಾಕ್ ರೂ. 6—2—0, ಪಿದಲು ರೂ 8—0—0.

ಅಡ್ರೆಸ್:—ಮೆಡಿನಾವಾಚ್ ಕಂಪೆನಿ,

ನಂ. ೨೧ ಆನೆಕಾರಕೋರ್ನ ಬೀದಿ, ಜಿ ಟಿ ಮದ್ರಾಸು.

THE BOMBAY LIFE ASSURANCE CO. LTD.

(Established 1908)

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA

Extract from the Actuary's Report:—

„There can be no doubt that the Policy Contracts are well secured"

Chairman—The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electric Co Ltd, The Tata Mills Co Ltd, Managing Agent of Messrs Mosland Price & Co. Ltd, and fellow of the Bombay University.

Actuary—George King Esq F F A. F I A, (London)

Medical Referee—Dr R Row, M D D. Sc London)

Managing Director—Framrose R Joshi, Justice of the Peace, The Honorary Presidency Magistrate & etc

Wanted Agents on very liberal commission

Apply for full particulars to—**Kochikar Bros**; Udipi, Chief Agents for South Canara, Malabar, Travancore and Cochin

ಮುಂಬಯಿ ಲ್ಯಾಫ್ ಇನ್ಶುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು)

ಪ್ರಧಾನ ಆಫೀಸು. ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು

"ವಿಮೆ ದಾರರ ಬಾಧ್ಯತೆಗಳ ಒಪ್ಪ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು

ಅಧ್ಯಕ್ಷರು:— ಘನವಾನಪಟ್ಟ ಲಲ್ಲೂಭಾಯಿ ಸಾಮಲದಾಸ್, ಜಸ್‌ಟೀಸ್ ಆಪ್ ದಿ ಪೀಸ್ ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೋಲಿಕ್ ವಾರ್ಸ್ ಲೆಂಡ್ ಪ್ರ್ಯಾಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೋಗಳವರು

ಎಕ್ಚುಯುಯರಿ:—ಮೆ| ಜೋರ್ಜಕಿಂಗ್ ಎಫ್ ಎಫ್. ಎ. ಎಫ್ ಐ ಎ. (ಲಂಡನ್)

ಮೆಡಿಕಲ್ ರಿಫರಿ:—ಡಾಕ್ಟರ್ ಆರ್. ರಾವ್ ಎಂ ಡಿ ಡಿ ಎಸ್. ಸಿ. (ಲಂಡನ್).

ಮೆನೇಜಿಂಗ್ ಡೈರೆಕ್ಟರ್:—ರಾ| ಫ್ರೆಮ್‌ರೋಜ್ ಆರ್ ಜೋಶಿ ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು.

ಏಜಂಟರು ಬೇಕಾಗಿರುವರು. ಧಾರಾಳವಾದ ಕಮಿಶನ್ ಕೊಡೋಣಾಗುವುದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್,
ಪ್ರಾಮುಖ್ಯ ಏಜಂಟರು, ಉಡ್ಪಿ.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಫುಪ್ಫುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಎಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಆವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಆತನಲ್ಲಿಯೇ ಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರು ಕಂಡು ಹಿಡಿದಿರುತ್ತಾರೆ ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವವು ರಕ್ತವನ್ನುವೃದ್ಧಿಪಡಿಸಿ ಚತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0 ವಿ. ಪಿ ಚಾರ್ಜು ಪ್ರತ್ಯೇಕ ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು

ವಿಳಾಸ — ಯಮ್. ವಿ ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಪಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0 0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0-4-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,

ಸುಗಂಧಕಾರಿ, ಮೈಸೂರು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪೇರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೩ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ-ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯೂ ಇಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸಪ್ತವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*

Vepery Post, MADRAS

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡತ (ಬಾರು), ಮೈ ನಡುಕ, ಶೀತ ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹುಟ್ಟು ಶೂಲೆ, ಮಕ್ಕಳ ಎಲವು, ಜ್ವರ, ನಿದ್ರುಜ್ವರ, ಕೈಶೆತ್ತಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1೦ರ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿದಂದು ಕೊಂಡಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಕೂಡಲೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿದರೆ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—"ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು.

ಡೋಂಗರೆ ಇವರ ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ. ಎಲ್. ಎಲ್. ಬಿ. ಹೆಡ್ ಮಾಸ್ತರ ಹ್ಯಾಸ್ಕೂಲು ಜುನಾಗಡ ಇವರು ಬರೆದದ್ದು:

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

ಬಾಟ್ಲಿ ಒಂದರ ಕಿಮ್ಮತು 0—12—0. ಟಪ್ಪಾಲ ಖರ್ಚು 0-4-0

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ

Girgaon Bombay. ಗಿರಗಾಂವ ಮುಂಬಯಿ.

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಪರಿಹಾರವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಳಿದು ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬುಟ್ಟಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮಿರಾಜ ಡಾಕ್ತರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್ ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

Estd. 1888. ಸ್ಥಾಪನೆ 1888.

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟವಾದಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳತ, ಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟಿಗಳೂ, ಜಖುಗಳೂ, ವಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪನಿ, ಗಿರಗಾಂವ ನಂ. ೪ ಮುಂಬಯಿ.

ಆಂಗ್ಲಭಾಷಾ ಪ್ರವೇಶದಾಯಿನಿ.

೧ನೇ ಪುಸ್ತಕ.

ಮೊದಲು ಕ್ರಯ ೧-೮-೦. ಈಗಣ ಕ್ರಯ ೧-೩-೦.

ಇಂಗ್ಲೀಷ್ ಅಕ್ಷರಗಳ ಗುರುತು ಕೂಡ ತಿಳಿಯುವ ಪ್ರಥಮಾಭ್ಯಾಸಿಗಳಾದ ಕನ್ನಡಿಗರು ಬೋಧಕರ ಸಹಾಯವಿಲ್ಲದೆ ಕೆಲವು ದಿನಗಳಲ್ಲಿ ಕೇವಲ ಸ್ವಪ್ರಯಾಸದಿಂದ ಸುಲಭ ತಮವಾಗಿ ಇಂಗ್ಲಿಷ್ ಭಾಷೆಯನ್ನು ಕಲಿಯುವ ಹನ್ನೊಂದು ಭಾಗಗಳುಳ್ಳ ಅತ್ಯುತ್ತಮವಾದ ಪುಸ್ತಕವು

ಮೊದಲನೆಯ ಭಾಗ ಇಂಗ್ಲಿಷ್ ವರ್ಣಮಾಲೆಯ ಅನುಸಾರವಾಗಿ A. ಎ. a ಎ B. ಬಿ b ಬಿ Z. ಜಡ್. z ಜಡ್. ವರೆಗಿನ ಅಚ್ಚು ಮತ್ತು ಕೈ ಬರವಣಿಗೆಗಳಲ್ಲಿ ಉಪಯೋಗಿಯುವ ಸಣ್ಣ ಮತ್ತು ದೊಡ್ಡ ಅಕ್ಷರಗಳನ್ನು ಸೇರಿಸಿ ಬರೆದಿದೆ. ಎರಡನೆಯ ಭಾಗ ಕನ್ನಡ ದಡ್ಡಕ್ಷರ (ಒತ್ತಕ್ಷರ)ಗಳಿಗೆ ಬದುಲು ಇಂಗ್ಲೀಷಿನಲ್ಲಿ ಬರೆಯುವ ವಿಧಾನ ಮುಂತಾದುವು. ಮೂರನೆಯ ಭಾಗ. ಇಂಗ್ಲೀಷ್ ಭಾಷೆಯ ಸಂಪ್ರದಾಯವನ್ನನುಸರಿಸಿ ಅಕ್ಷರ ಸಂಯೋಜನ ಕ್ರಮ ಪಾಠಗಳು ಇಪ್ಪತ್ತೆರಡು. ನಾಲ್ಕನೆಯ ಭಾಗ. ಪ್ರಥಮಾಭ್ಯಾಸಯೋಗ್ಯವಾದ ಸಣ್ಣ ಸಣ್ಣ ಪಾಠಗಳು ಅರವತ್ತೈದು. ಉಚ್ಚಾರಣೆಯು ಕುದುರುವುದಕ್ಕೆ ತಕ್ಕ ವಿವಿಧ ಶಬ್ದ ಸಮುದಾಯ ಐದನೆಯ ಭಾಗ. ಹೆಚ್ಚು ತರಗತಿಯ ಬಗೆ ಬಗೆಯ ಪಾಠಗಳು ಇಪ್ಪತ್ತೆರಡರ ವರೆಗೆ ಸಂಸ್ಕರದ ಪಾಠಶಾಲೆಗಳಲ್ಲಿ ಉಪಯೋಗಿಸುವ ಪುಸ್ತಕದಿಂದೆತ್ತಿ ಬರೆದಿದೆ. ಆರನೆಯ ಭಾಗ. ವ್ಯವಹಾರ ಸಮ್ಮತವಾದ ಪ್ರಶ್ನೋತ್ತರ ರೂಪವಾಗಿರುವ ಸಣ್ಣವುಟ್ಟ ವಾಕ್ಯಗಳು. ಏಳನೆಯ ಭಾಗ ಒಬ್ಬರಿಗೊಬ್ಬರು ಬರೆಯುವ ಕಾಗದಗಳಲ್ಲಿ ಇಂಗ್ಲಿಷ್ ಪದ್ಧತಿಯಂತೆ ತಿಳಿಯಬೇಕಾದ ವಿಧಿ ವಿಧಾನಗಳು. ಎಂಟನೆಯ ಭಾಗ ಸಣ್ಣ ತರಗತಿಗಳವರು ಒಬ್ಬರಿಗೊಬ್ಬರು ಸಮಯೋಚಿತವಾಗಿ ಬರೆಯುವ ಕೆಲವು ಕಾಗದಗಳ ಮಾದರಿಗಳು ಒಂಭತ್ತನೆಯ ಭಾಗ ತಂತಿಯ ಸಮಾಚಾರದ ಕೆಲ ಮಾದರಿಗಳು ಹತ್ತನೆಯ ಭಾಗ. ಕನ್ನಡ ಇಂಗ್ಲಿಷ್ ಗಾದೆಗಳು. ಹನ್ನೊಂದನೆಯ ಭಾಗ. ಇಂಗ್ಲಿಷ್ ಭಾಷೆಯಲ್ಲಿ ಬರೆಯುವಾಗ ಉಪಯೋಗಿಸುವ ಸಾಂಕೇತಿಕ ಚಿಹ್ನೆಗಳು

ಇಂಗ್ಲಿಷ್ ಭಾಷೆಯನ್ನರಿತು ಬಗೆ ಬಗೆಯ ಲಾಭವನ್ನು ಹೊಂದಬೇಕೆಂಬ ಬಯಕೆಯುಳ್ಳ ಎಲ್ಲಾ ಬಗೆಯ ಜನರಿಗೂ ಅತ್ಯುಪಯೋಗಿಯಾದ ಪುಸ್ತಕವಿದು.

ಆಂಗ್ಲಭಾಷಾ ಪ್ರವೇಶದಾಯಿನಿ. ೨ನೆ ಪುಸ್ತಕ.

ಮೊದಲು ಕ್ರಯ ೧-೮-೦. ಈಗಣ ಕ್ರಯ ೧-೩-೦

ಮೊದಲನೆಯ ಪುಸ್ತಕವನ್ನೋದಿ ಇಂಗ್ಲಿಷ್ ಭಾಷೆಯಲ್ಲಿ ಅಕ್ಷರ ಜ್ಞಾನ ಸ್ವಲ್ಪ ಶಬ್ದ ಜ್ಞಾನವನ್ನು ಸಂಪಾದಿಸಿದ ಗ್ರಾಹಕರೆಲ್ಲರಿಗೂ ಬೋಧಕರ ಸಹಾಯವಿಲ್ಲದೆ ಕೆಲವು ದಿನಗಳಲ್ಲಿ ಕೇವಲ ಸ್ವಪ್ರಯಾಸದಿಂದ ಸುಲಭತಮವಾಗಿ ಇಂಗ್ಲಿಷ್ ಭಾಷೆಯ ವ್ಯಾಕರಣ ಶಾಸ್ತ್ರ ಜ್ಞಾನವನ್ನುಂಟು ಮಾಡಿಕೊಳ್ಳಲು ಬರೆಯಲ್ಪಟ್ಟ ಆರು ಭಾಗಗಳುಳ್ಳ ಅತ್ಯುತ್ತಮವಾದ ಪುಸ್ತಕವು. ಮೊದಲನೆಯ ಪುಸ್ತಕದಲ್ಲಿಲ್ಲದ ಅನೇಕ ಹೊಸ ಸಂಗತಿಗಳು ಇದರಲ್ಲಿದೆ.

ಮೊದಲನೆಯ ಭಾಗದಲ್ಲಿ ೧. ಶರೀರದ ಅಂಗಾಂಗಗಳನ್ನು ಕುರಿತು ವಿವಿಧ ಶಬ್ದ ಸಮುದಾಯ, ೨ ಶಾಲೆಯಲ್ಲಿ ಬಳಸುವ ಶಬ್ದಗಳು, ೩. ಕಾಲವಾಚಕ ಶಬ್ದಗಳು. ೪ ಉಡುಗೆತೊಡುಗೆಗಳ ಕುರಿತು, ೫ ನಾಮಾನ್ಯೋಪಯೋಗಿ, ೬ ರಕ್ತ ಸಂಬಂಧಿಗಳನ್ನು ಕುರಿತು, ೭. ಜಾತಿ ವಾಚಕ ಶಬ್ದಗಳು, ೮ ವ್ಯಾಪಾರದಲ್ಲಿ ಹೇರಳವಾಗಿ ಬಳಸುವ ಶಬ್ದಗಳು, ೯. ಮಾತನಾಡುವಾಗ ಬಳಸುವ ಶಬ್ದಗಳು, ೧೦. ಬೇಸಾಯ ಕಾಯಿಪಲ್ಯ, ಧಾನ್ಯ ಪಲಸರಕುಗಳ ಕುರಿತು, ೧೧. ಕಟ್ಟಡಗಳು, ಅಲಂಕಾರ ವಸ್ತುಗಳ ಕುರಿತು, ೧೨. ವೈದ್ಯೋಪಯೋಗಿ, ೧೩. ದಿಗ್ವಾಚಕ ಶಬ್ದಗಳು, ೧೫. ಕಚೇರಿ, ಉದ್ಯೋಗ ಮುಂತಾದವುಗಳಲ್ಲಿ ದೊಡ್ಡ ದೊಡ್ಡ ಡಿಕ್ಷನರಿಗಳಲ್ಲಿ ಇಲ್ಲದ ಅಪರೂಪವಾದ ಪಾರಿಭಾಷಿಕ (Technical) ಶಬ್ದಗಳನ್ನು ಆರಿಸಿದ ದೊಡ್ಡ ಪಂಕ್ತಿಯನ್ನು ಸೇರಿಸಿದೆ. ಎರಡನೆಯ ಭಾಗದಲ್ಲಿ ಬಾಲಬೋಧೋಪಯುಕ್ತವಾದ ವ್ಯಾಕರಣ ಶಾಸ್ತ್ರನಿಯಮಗಳು, ಸಂಪ್ರದಾಯಗಳ ವಿಧಿ ವಿಧಾನಗಳು ಸೇರಿವೆ. ಮೂರನೆಯ ಭಾಗದಲ್ಲಿ ಕನ್ನಡದಿಂದ ಇಂಗ್ಲಿಷಿಗೂ, ಇಂಗ್ಲಿಷಿನಿಂದ ಕನ್ನಡಕ್ಕೂ ತರ್ಜುಮೆ ಮಾಡುವಾಗ ತಿಳಿಯಬೇಕಾದ ವಿಧಿ ವಿಧಾನಗಳು, ಮಾದರಿಗಳು, ಉದಾಹರಣೆಗಳು ಅಭ್ಯಾಸಗಳು

ನಾಲ್ಕನೆಯ ಭಾಗದಲ್ಲಿ ಭಾಷಾ ಸಂಪ್ರದಾಯಗಳು, ಉದಾಹರಣೆಯ ಪಾಠಗಳು, ಅಭ್ಯಾಸಗಳು ಮುಂತಾದುವೂ ಐದನೆಯ ಭಾಗದಲ್ಲಿ ವರ್ತಕರಿಗೆ ಹೇರಳವಾಗಿ ಬಳಕೆಯಲ್ಲಿರುವ ಮುಖ್ಯ ಮುಖ್ಯ ಸಂಗತಿಗಳಲ್ಲಿ ಲೇಖನ ಪ್ರತಿ ಲೇಖನಗಳು, ಮಾದರಿಗಳು, ಅರ್ಜಿಯ ನಮೂನೆಗಳು ಅಡಗಿವೆ ಆರನೆಯ ಭಾಗದಲ್ಲಿ ಪ್ರೌಢಾಭ್ಯಾಸ ಯೋಗ್ಯವಾದ ಸಣ್ಣ ಸಣ್ಣ ನೀತಿ ವಾಕ್ಯಗಳೂ, ಕಟ್ಟು ಕಥೆಗಳೂ, ಮುಂತಾದವು ಸೇರಿವೆ

ಒಟ್ಟಿನಲ್ಲಿ ಈ ಪುಸ್ತಕವು ವ್ಯಾಪಾರಸ್ಥರಿಗೆ ತುಂಬಾ ಉಪಯೋಗವಾಗಿರುವುದರಿಂದ ಪ್ರತಿಯೊಬ್ಬರೂ ಒಂದೊಂದು ಪ್ರತಿಯನ್ನು ಜೇಬಿನಲ್ಲಿಡತಕ್ಕದು. ಮೊದಲನೆಯ ಪುಸ್ತಕವನ್ನೋದಿದವರಿದನ್ನು ಅಗತ್ಯವಾಗಿ ಸಂಗ್ರಹಿಸಿಡಬೇಕು

ಆಂಗ್ಲಭಾಷಾ ಪ್ರವೇಶದಾಯಿನಿ. ೩ನೇ ಪುಸ್ತಕ.

ಮೊದಲು ಕ್ರಯ ೧-೮-೦ ಈಗಣ ಕ್ರಯ ೧-೩-೦

ಮೊದಲನೆಯ ಪುಸ್ತಕವನ್ನೂ, ಎರಡನೆಯ ಪುಸ್ತಕವನ್ನೂ ಓದಿ, ಅಕ್ಷರಜ್ಞಾನ, ಶಬ್ದ ಜ್ಞಾನ, ಸ್ವಲ್ಪ ಮಟ್ಟಿಗೆ ವ್ಯಾಕರಣ ಶಾಸ್ತ್ರಜ್ಞಾನವನ್ನು ಸಂಪಾದಿಸಿರುವ ಗ್ರಾಹಕರೆಲ್ಲರಿಗೂ ಬೋಧಕರ ಸಹಾಯವಿಲ್ಲದೆ ಕೆಲವು ದಿನಗಳಲ್ಲಿ ಕೇವಲ ಸ್ವಪರಿಶ್ರಮದಿಂದ ಸುಲಭ ತಮವಾಗಿ ಇಂಗ್ಲಿಷ್ ಭಾಷೆಯಲ್ಲಿ ಮಾತಾಡುವುದು ಬರೆಯುವುದು, ಓದುವುದು, ಮುಂತಾದವುಗಳಲ್ಲಿ ಜ್ಞಾನಾರ್ಜನೆ ಮಾಡಿ ಸಾಧಾರಣ ವ್ಯವಹಾರಗಳಲ್ಲಿ ಸ್ವತಂತ್ರಿಸಿ ಮುಂದು ನುಗ್ಗುವುದಕ್ಕೆ ತಕ್ಕಷ್ಟು ಧೈರ್ಯವನ್ನುಂಟುಮಾಡಿಕೊಳ್ಳಲು ಅನುಕೂಲವಾದ ಅನೇಕ ಸಂಗತಿಗಳನ್ನು ಸೇರಿಸಿರುವ ಮೂವ್ವತ್ತು ಭಾಗಗಳುಳ್ಳ ದೊಡ್ಡ ಪುಸ್ತಕವಿದು.

೧. ಕಾಫಿಯ ಕ್ಲಬ್ಬಿನಲ್ಲಿ ಮಾತನಾಡುವುದು, ೨. ಸಂತೆಯ ಸಂಭಾಷಣೆ, ೩. ಚಿಣವಾರರ ಪ್ರಸ್ತಾಪ, ೪. ಬರವಣಿಗೆಯ ವಾಗ್ವಾದ, ೫ ಲೇವಾದೇವಿಯನ್ನು ಕುರಿತು, ೬. ಬಗೆ ಬಗೆಯ ಸಂಗತಿಗಳನ್ನು ಕುರಿತು, ೭ ನೆಂಟಸ್ತಿಕೆಯನ್ನು ಕುರಿತು, ೮. ಗಂಡ ಹೆಂಡಿರ ಸಂಭಾಷಣೆ, ೯. ಉಡಿಗೆತೊಡಿಗೆಗಳನ್ನು ಕುರಿತು, ೧೦. ವಿದ್ಯಾಭ್ಯಾಸಂಗವನ್ನು ಕುರಿತು, ೧೧ ಪೈದಾಡುವಿಕೆಯನ್ನು ಕುರಿತು, ೧೨ ಗಾಳಿಯ ಸವಾರಿಯನ್ನು ಕುರಿತು, ೧೩ ನೀತಿಬೋಧಕ ಪ್ರಶ್ನೋತ್ತರ, ೧೪ ವಾಸದ ಮನೆಯನ್ನು ಕುರಿತು, ೧೫ ಕಾಲಸ್ಥಿತಿಯನ್ನು ಕುರಿತು, ೧೬ ಗೃಹಾಲಂಕಾರ ವಸ್ತುಗಳನ್ನು ಕುರಿತು, ೧೭ ವೈದ್ಯರು ಮತ್ತು ಔಷಧಗಳನ್ನು ಕುರಿತು ೧೮ ಭೋಜನ ಕ್ರಮವನ್ನು ಕುರಿತು, ೧೯ ಹೊಗೆ ಬಂಡಿಯ ಪ್ರಯಾಣ, ೨೦ ದೇಹಸ್ಥಿತಿಯನ್ನು ಕುರಿತು, ೨೧ ಸೇವಕನನ್ನು ಕುರಿತು, ೨೨ ನಾಟಕಶಾಲೆಯನ್ನು ಕುರಿತು, ೨೩ ಸಂದರ್ಶನವನ್ನು ಕುರಿತು, ೨೪ ಹಡಗಿನ ಪ್ರಯಾಣ, ೨೫ ಜಂತವ ಗುಂಡಿನಾಟ, ೨೫ ಸೀಮೆಯ ಪ್ರಯಾಣ, ೨೬ ವಿದ್ಯಾರ್ಥಿಗಳನ್ನು ಕುರಿತು, ೨೮ ಮನೋಹರವಾದ ಕಥೆಗಳು, ೨೯ ಕನ್ನಡದಿಂದ ಇಂಗ್ಲಿಷಿಗೂ, ಇಂಗ್ಲಿಷಿನಿಂದ ಕನ್ನಡಕ್ಕೂ (ತರ್ಜುಮೆ) ಪರಿವರ್ತನ ಮಾಡುವ ಚಮತ್ಕಾರವು ಬಹು ಸ್ವಾರಸ್ಯವಾಗಿ ಬೋಧಜನಕವಾಗಿದೆ, ೩೦ ಪ್ರೌಢವಾದ ಅನೇಕ ವಿಷಯಗಳಲ್ಲಿ ವ್ಯವಹಾರಿಕ ಲೇಖನ ಪ್ರತಿ ಲೇಖನಗಳು, ಕಟ್ಟುಕಥೆಗಳು ಮುಂತಾದುವು.

೧-೨-೩ ಈ ಮೂರು ಪುಸ್ತಕಗಳೂ ಅಭ್ಯಾಸದ ಅನುಕೂಲತೆಗೂ ಕೊಳ್ಳುವವರ ಸೌಕರ್ಯಕ್ಕೂ ಬೇರೆ ಬೈಂಡಾಗಿದೆ. ಮೂರು ಪುಸ್ತಕಗಳನ್ನೂ ಒಂದೇ ಸಾರಿ ತರಿಸಿಕೊಳ್ಳುವವರಿಗೆ ಅಂಚೆಯ ವೆಚ್ಚ ಸಂಪೂರ್ಣವಾಗಿ ಮಾಫಿ! ಯಾವುದಾದರೊಂದು ಅಥವ ಎಲ್ಲವನ್ನು ಸೇರಿಸಿ ಒಟ್ಟಾಗಿ ಒಂದೇ ಸಲ ಹತ್ತು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಒಂದು ಪ್ರತಿ ಉಚಿತ!! ಪ್ರತಿ ಮುದ್ರಣದಲ್ಲಿಯೂ ಹಿಂದಣ ಮುದ್ರಣ ಪುಸ್ತಕಗಳು ಮುಗಿದು ಹೋಗಿ ಮುಂದೆ ಅಚ್ಚಾಗುವ ವರೆಗೆ ಅಪೇಕ್ಷಿತರು ಕಾಯಬೇಕಾಗುತ್ತಿದೆಯೆಂಬುವುದು ಗ್ರಾಹಕರನೇಕರಿಗೆ ಅನುಭವವೇದ್ಯವಾದುದಷ್ಟೆ? ಕೆಲವು ಪ್ರತಿಗಳೇ ಉಳಿದಿವೆ. ಕೈಮೀರುವುದಕ್ಕೆ ಮುಂಚಿತವಾಗಿ ಬೇಗ ಬೇಗ ಬರೆಯಿರಿ!!!

ಸಂಪಾದಕ. "ಸವಿನುಡಿ" ಮತ್ತು "ಭಾಷಾನಿಧಿ"

ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಒಂದು ತಿಂಗಳು ಮಾತ್ರ! ಬಹುಮಾನ! ತ್ವರೆಮಾಡಿರಿ!

ವಿವೇಕಚೂಡಾಮಣಿ

ಶ್ರೀಶಂಕರಾಚಾರ್ಯರವರು ಅದ್ವೈತ ಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ ತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ಅನೇಕ ಪ್ರಕರಣಗಳನ್ನು ಒಳಗೊಂಡಿದೆ. ಇದನ್ನು ವ್ಯಾಸಂಗಮಾಡಿದವರಿಗೆ ವೇದಾಂತ ವಿಷಯವೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟ ಸಂಖ್ಯೆಗಳು ೪೪೮. (ಜೇಬಿನ್ನ ಅಷ್ಟಪತ್ರ) ಒಂದು ಉತ್ತಮವಾದ ಕೆಲಿಕೋ, ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ.

ಬೆಲೆ ರೂ. ೨—೮—೦, ಹಾಸಲು ೪ ಆಣೆ.

ಈ ಪುಸ್ತಕವನ್ನು ತರಿಸಿಕೊಳ್ಳುವವರಿಗೆ ಸಟೀಕಾ ಮುಕುಂದಮಾಲಾ ಸ್ತೋತ್ರ ಒಂದು, ಮಹಿಮ್ನಾ ಸ್ತೋತ್ರ ಒಂದು ಈ ಎರಡು ಪುಸ್ತಕಗಳನ್ನು ಬಹುಮಾನವಾಗಿ ಕೊಡುತ್ತೇವೆ

ಕಥಾಕಲ್ಪವೃಕ್ಷ.

ಪೂರ್ವಕಾಲದ ಕವೀಶ್ವರರ ವೃತ್ತಾಂತಗಳಿಂದಲೂ, ಮನೋಹರವಾದ ನೀತಿಕಥೆಗಳಿಂದಲೂ ಕೂಡಿ ಮನುಷ್ಯ, ಪಶು, ಪಕ್ಷಿ, ಕ್ರಿಮಿಕೀಟಗಳ ಸ್ವಭಾವಧರ್ಮಗಳನ್ನು ತಿಳಿಸುವ, ಆ ತಾವರಣ, ವಿದ್ಯುಲ್ಲತೆ ಮುಂತಾದ ತತ್ವಗಳ ವರ್ಣನೆಯುಳ್ಳ ನುತ್ತು ಯಂತ್ರಶಾಸ್ತ್ರ, ಪದಾರ್ಥವಿಜ್ಞಾನ ಶಾಸ್ತ್ರಗಳನ್ನು ವರ್ಣಿಸುವ ಗ್ರಂಥ ಅತ್ಯಂತ ಉಪಯೋಗವಾದದ್ದು. ಕ್ರಯ ರೂ ೦—೧೦—೦. ಹಾಸಲು ೦—೩—೦

ರಘುಕುಲಚರಿತ್ರೆ.

ಕಾಳಿದಾಸ ಮಹಾಕವಿಯ ರಘುವಂಶ ಮಹಾಕಾವ್ಯವೇ "ರಘುಕುಲಚರಿತಂ" ಎಂಬ ಈ ಕಥೆ. ಮೊದಲನೇ ಭಾಗ ದಿಲೀಪನ ವಶಿಷ್ಠಾಶ್ರಮ ಪ್ರಯಾಣ, ನಂದಿನೀಸೇವನದ ವರಪ್ರಸಾದ, ರಘುರಾಜಾಭಿಷೇಕ, ರಘುದಿಗ್ವಿಜಯ, ಅಜನ್ಯಯಂವರಾಭಿಗಮನ, ಸ್ವಯಂವರವರ್ಣನ, ಅಜಪಾಣಿಗ್ರಹಣ ಅಜ ವಿಲಾಪ ಇಂತು ಎಂಟು ಬಗೆಯ ವಿಚಿತ್ರ ಚರಿತ್ರೆಯನ್ನೊಳಗೊಂಡಿದೆ

ಕ್ರಯ ರೂ. ೦—೮—೦ ಹಾಸಲು ೦—೨—೦.

ಸಟೀಕಾಬೃಹಜ್ಜಾತಕ

ಕ್ರಯ ರೂ ೫—೦—೦ ಹಾಸಲು ರೂ. ೦—೬—೦

ವಿಳಾಸ.— ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಳ್ಳಾರಿ ಮಿತ್ತನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿತ್ತನ್ ಸೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಕೆಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಇಳಿ ಸೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಸೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

The Original BABA BUDAN-GHIRY COFFEE POWDER PROPRIETORS J. S. SOUZA & Co. MANGALORE

ಸ್ವತಃ ಒಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರ

ಬರ್ಮೀಸ್ ಬ್ಯುಟಿ ಒಯಿಲ್

ಎಂಬ

ಬರ್ಮಾದೇಶದ ಸೌಂದರ್ಯ.



ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟಿದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳು ತಲೆ, ತಲೆನೋವು, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿ ಕೊಡುವಷ್ಟು ಚಲೋದಾಗಿರುವುದು. ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು. ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ. ೧ ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ. ೩. ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರುಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾಯುವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾಗ ಔಷಧಿ ಎಂತ ಕಂಡುಬಂದದೆ. ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ. ಚಾರ್ಜು ಬೇರೆ

ಒಟ್ಟೊ ಪೆರೆಡ್ಯಾಸ್.

ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟು ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ಬಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೊ ಪೆರೆಡ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಜಿನದಕ್ಕೆ	0—8—0.
ನಡುತರದ್ದಕ್ಕೆ.	0-12—0.
ದೊಡ್ಡ ಸ್ಯಾಜಿಗೆ	1-14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೋರಲ್ ಪರ್ಫ್ಯುಮರಿ ಕಂಪೆನಿ,
ಮುಂಬಯಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	A ಅರಗಜ ತೊಲೆ 1ಕ್ಕೆ	2-0-0
ಅಂಬರ್ ಬತ್ತಿ	,, ,,	6 0-0	B ಅರಗಜ ,, ,,	1-0-0
ಕಸ್ತೂರಿ ಬತ್ತಿ	,, ,,	3-0-0	ಕಸ್ತೂರಿ ಬಿಲ್ಲೆ ,, ,,	2-0 0
ಜವಾಜಿ ಬತ್ತಿ	,, ,,	2-0-0	ಜವಾಜಿ ಬಿಲ್ಲೆ ,, ,,	1-0-0
ಪುಣಗಿನ ಬತ್ತಿ	,, ,,	1-8-0	ಕೇಸರಿ ಬಿಲ್ಲೆ ,, ,,	0-8 0
A ಪನ್ನೀರ್ ಬತ್ತಿ	,, ,,	0-12 0	ತಾಂಬೂಲ ರಕ್ತ ಸೀಸೆ 1ಕ್ಕೆ	0-4-0
ಮುಸಾಲಾ ಬತ್ತಿ	,, ,,	0-6-0	ದಕಾಂಗ ಡಬ್ಬಿ 1ಕ್ಕೆ	0-4-0

ಮೇನೇಜರ್, "ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

ಅಚ್ಚಾಗುತ್ತಲಿದೆ! ಅಚ್ಚಾಗುತ್ತಲಿದೆ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ಪಂಚಾಂಕೀ ಮರಾಠಿ ನಾಟಕವು ಈಗ ಅಚ್ಚಿನಲ್ಲಿದ್ದು, ಬರುವ ಜುಲೈ ತಿಂಗಳ ಅಖೈರ ಒಳಗೆ ಪ್ರಕಾಶಿತವಾಗುವದು. ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕ ಜನರು ಈ ಸಂದರ್ಭವನ್ನು ಬಿಡಲಾಗದು. ಬೆಲೆ 10 ಆಣೆ ಟ ಹಾ. ಬೇರೆ.

ಜುಲೈ ಅಖೈರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡು, ಓರ್ಡರುಗಳನ್ನು ರಿಜಿಸ್ಟರ್ ಮಾಡುವ ಗ್ರಾಹಕರಿಗೆ 9 ಆಣೆ ಟ. ಹಾ. ಬೇರೆ ಹಣವನ್ನು ಮುಂಗಡವಾಗಿ ಪೋಸ್ಟೇಜು ಸ್ಟಾಂಪುಗಳ ದ್ವಾರಾ ಅಥವಾ ಮನಿಆರ್ಡರು ದ್ವಾರಾ ಕಳುಹಿಸಬೇಕು.

ತ್ವರೆಮಾಡಿರಿ!!!

ಕಲ್ಯಾಣಪುರ ಮಂಗೇಶರಾವ್,

ಕಲ್ಯಾಣಪುರ, ದ. ಕನ್ನಡ.

ಕೃಷ್ಣವಿಲಾಸ ಟ್ರೇಡಿಂಗ್ ಎಸೋಸಿಯೇಶನ್

ಗಿರಗಾಂ, ಮುಂಬಯಿ.

ಮಾನ್ಯ ಗೃಹಸ್ಥರೇ,

ತಮ್ಮ ಕಡೆಯ ಹಲವು ಮಂದಿ ಗೃಹಸ್ಥರು ವರ್ತಮಾನ ಪತ್ರಗಳಲ್ಲಿ ಕೊಟ್ಟಿರುವ "ಪ್ರಸಿದ್ಧ ಪತ್ರಿಕೆ"ಗಳು ಹೊಗಳಿ ವಿವರಿಸುವ ಸಾಮಾನುಗಳನ್ನು ಇಲ್ಲಿಗೆ ಬರೆದು ತರಿಸಿಕೊಳ್ಳುತ್ತಿರುವಲ್ಲಿ ಆ ವಸ್ತುಗಳು ಪ್ರಸಿದ್ಧ ಪತ್ರಿಕೆಗಳಲ್ಲಿ ಬರೆದಿರುವಂತೆ ಚನ್ನಾಗಿರುವುದರ ಬದಲಿಗೆ ಬಹಳ ಹಲಕೇ ಸಾಮಾನುಗಳಿದ್ದು ಅವುಗಳಿಗೆ ಕೊಟ್ಟ ಹಣ ದುರ್ವ್ಯಯ ಮಾಡಿದಂತೆ ಆಯಿತಲ್ಲಾ ಎಂದು ವ್ಯಸನಪಡುತ್ತಿರುವದು ನಮ್ಮ ತಿಳುವಳಿಕೆಗೆ ಬಂದದೆ. ನಾವು ಹಲವು ವರ್ಷಗಳಿಂದ ಪರವೂರ ಗೃಹಸ್ಥರಿಗೆ ಇಲ್ಲಿಂದ ಅತ್ಯುತ್ಕೃಷ್ಟವಾದ ವಸ್ತುಗಳನ್ನು ಪೇಟೆಯಿಂದ ಬಹಳ ಚೌಕಶೀಯಿಂದ ಕಡಿಮೆ ಖರೀದಿಗೆ ಕೊಂಡುಕೊಂಡು ರವಾನಿಸುತ್ತಿರುವುದು ಸಮಸ್ತರಿಗೂ ಗೊತ್ತೇ ಇದ್ದ ವಿಷಯವಾಗಿದೆ. ಆದುದರಿಂದ ಎಲ್ಲಾ ಗೃಹಸ್ಥರು ತಮಗೆ ಮುಂಬಯಿಯಿಂದ ಏನೇ ವಸ್ತುಗಳು ಬೇಕಿದ್ದರೂ ನಮಗೆ ಬರೆದಲ್ಲಿ ನಾವು ಅವುಗಳನ್ನು ಪೇಟೆಯಿಂದ ಕಡಿಮೆ ಕಿಮ್ಮತಿಗೆ ತಕ್ಕೊಂಡು ವಿ. ಪಿ. ಟಪ್ಪಾಲು ಮೂಲಕ ಕಳುಹುವೆವು. ಈ ಸಂಗತಿಯನ್ನು ತಮ್ಮ ಮಿತ್ರಬಾಂಧವರೊಡನೆ ಪ್ರಚಾರಪಡಿಸಬೇಕಾಗಿ ನಾವು ನಮ್ಮ ಎಲ್ಲಾ ಗೃಹಸ್ಥರನ್ನು ಬೇಡುವೆವು.

ರೂಪಾಯಿ ಹತ್ತು ಯಾ ಹೆಚ್ಚಿನ ಬೆಲೆಯ ಸಾಮಾನುಗಳಿಗೆ ಬರೆಯುವವರು ರೂಪಾಯಿ ಒಂದನ್ನು ಮುಂಗಡವಾಗಿ ಕಳುಹಿಸಬೇಕು. ಇದನ್ನು ಜುಮಲಾ ಹಣದಿಂದ ಕಳೆಯುವೆವು.

Krishnavilasa Trading Association,

Girgaum, Bombay.

500 ರೂಪಾಯಿಗಳ ಬಹುಮಾನ!!

ಲೋಕ ಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬು ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಪ್ರಿಯ ಸಹೋದರರೇ, ನಿಮ್ಮ ರಕ್ತವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರಾಗಿರುವ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ! ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರ್ಯಂತರವೂ ದುಃಖಪಡುವರು ಈ "ಪಂಜಾಬು ಸಾಲಾಮಿಸ್ರೀ ಮುರಬ್ಬಾ"ನ ಸೇವನೆಯಿಂದ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ, ತಲೆಯ ನೋವೂ

ಇವುಗಳೆಲ್ಲವೂ ಪಂಜಾಬು ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ನಿರ್ಮೂಲಿಸುವುದು, ಧಾತುವನ್ನು ಶೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಕೆಲಸಮಾಡುವುದರಲ್ಲಿ ಉತ್ಸಾಹವೂ, ಧೈರ್ಯವೂ, ಬುದ್ಧಿಕುಶಲತೆಯೂ, ಶರೀರ ಕಾಂತಿಯೂ ಉಂಟಾಗುತ್ತದೆ. ಈ ಪಂಜಾಬ್ ಸಾಲಾಮಿಸ್ರಿಯು ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು ಶ್ವಾಸಕೆಮ್ಮುಸವನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಗಡ್ಡೆಯಾಗಿರುತ್ತದೆ ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು, ಅನೇಕರು ಊರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾಬ್ ಸಾಲಾಮಿಸ್ರೀಯೋ ಅಥವಾ ಬೇರೆ ತರಹದ್ದೋ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರೀಯಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ಕೋರ್ಟಿನಿಂದ ಪಡೆಯಬಹುದು. 15 ತೊಲ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 1-8 0, ಟಪ್ಪಾಲ್ ಖರ್ಚು ಅಲಾಯಿದ ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

1 ಧಾತುಪುಷ್ಟಿ ಚೂರ್ಣ:—ಬೆಲೆಯು ಡಬ್ಬಿ 1ಕ್ಕೆ 0—5—0
2. ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು:—ಸೀಸಾಯಿ 1ಕ್ಕೆ 0-2-0.
3. ವಾತ ನಿವಾರಣೆ ತೈಲವು:—ಕ್ರಯ ಸೀಸಾಯಿ 1ಕ್ಕೆ 0—4—0.
4. ಹೊಟ್ಟೆ ನೋವಿಗೆ ಔಷಧ:—ಸೀಸಾಯಿ 1ಕ್ಕೆ 0—4—0.
5. ಕೆಮ್ಮಲು ರೋಗಕ್ಕೆ ಔಷಧ:—ಕ್ರಯ ಸೀಸಾಯಿ 1ಕ್ಕೆ 0—4—0.
6. ವ್ರಣಕ್ಕೆ ಔಷಧ:—ಕ್ರಯ ಡಬ್ಬಿ 1ಕ್ಕೆ 0—4—0
7. ಆಶ್ಚರ್ಯಕರವಾದ ಭೇದಿ ಮಾತ್ರೆಗಳು:—ಕ್ರಯ 0—4—0.
8. ತಲೆನೋವಿಗೆ ತೈಲವು.—ಕ್ರಯ ಸೀಸಾಯಿ 1ಕ್ಕೆ 0—2—0.
9. ಉಷ್ಣಕಾರಕಕ್ಕೆ ಮಾತ್ರೆಗಳು:—ಉಷ್ಣ ಕಾರಕದಿಂದ ಶರೀರದಲ್ಲಿ ಪಡಿಗಳಿದ್ದರೂ, ಗಾಯಗಳಿದ್ದರೂ ಗುಣವಾಗುವದು. ಕ್ರಯ ಸೀಸಾಯಿ 1ಕ್ಕೆ 1—0—0.
10. ಮೂಲವ್ಯಾಧಿಗೆ ಔಷಧ:—ಮಲದ್ವಾರದಲ್ಲಿ ರಕ್ತ ಸ್ರಾವವೂ, ಮತ್ತು ಮೊಳಕೆಯ ಬಾಧೆಯೂ ಹಾ ಸಂಪೂರ್ಣವಾಗಿ ಗುಣಮಾಡುವದು, ಕ್ರಯ ಸೀಸಾಯಿ 1ಕ್ಕೆ 0—8—0

ಕಣ್ಣಿಗೆ ಸುರ್ಮಾ:—ಕ್ರಯ ಸೀಸಾಯಿ 1ಕ್ಕೆ 0—4—0.

12 ದಂತ ಚೂರ್ಣವು:—ಕ್ರಯ ಡಬ್ಬಿಗೆ 0—1—3.
13. ಕೂದಲು ಬೆಳೆಯುವ ಎಣ್ಣೆ —ಕ್ರಯ ಸೀಸಾಯಿ 1ಕ್ಕೆ0 —4—0.
14. ಆಶ್ಚರ್ಯಕರವಾದ ದ್ರಾವಕ:—ಇದನ್ನು ಸ್ವಲ್ಪ ಮೂಸಿನೋಡುವುದರಿಂದ 1 ನಿಮಿಷದಲ್ಲಿ ತಲೆನೋವು ನಿಲುತ್ತೆ. ಕ್ರಯ ಸೀಸಾಯಿ 1ಕ್ಕೆ 0—4—0.
15. ಕಜ್ಜಿ ಮತ್ತು ಹುಳಕಡ್ಡಿ ಔಷಧ:—ಕ್ರಯ ಸೀಸಾಯಿ 1ಕ್ಕೆ 0—4—0.
16. ಆಶ್ಚರ್ಯಕರವಾದ ಪೆನ್‌ಸಲ್:—ಈ ಪೆನ್ಸಲಿನಿಂದ ಕಾಗದದ ಮೇಲೆ ಬರೆಯುವಾಗ ಏನೂ ಕಾಣುವದಿಲ್ಲ. ನಂತರ ನೀರನ್ನು ಬರೆದ ಕಾಗದದ ಮೇಲೆ ಸವರಿದರೆ ಎಲ್ಲಾ ಅಕ್ಷರಗಳೂ ಚನ್ನಾಗಿ ಕಾಣುವವು. ನೋಡುವವರಿಗೆ ಬಹಳ ಆಶ್ಚರ್ಯಕರವಾಗಿ ಕಾಣುತ್ತೆ. ಕ್ರಯ 0-4-0.
17. ಬಿಳೇ ಕೂದಲನ್ನು ಕರೇ ಕೂದಲನ್ನಾಗಿ ಮಾಡುವ ದ್ರಾವಕ:—ಈ ಔಷಧವನ್ನು ಒಂದಾವರ್ತಿ ಕೂದಲಿಗೆ ಸವರುವದರಿಂದ ಬಹಳ ದಿವಸಗಳವರಿವಿಗೂ ಕಪ್ಪಿಯ ಕೂದಲುಗಳು ಇರುತ್ತೆ. ಕ್ರಯ 1—0—0.

1—0—0 ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ.

ನಮ್ಮ ಏಜಂಟರು:— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ.
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,

5 ಹಾಜಿಸಾಹೇಬ್ ಮಕಾನ್ ಅವೆನ್ಯು ರೋಡ್, ಬೆಂಗಳೂರು ಸಿಟಿ.

ಕರ್ಣಾಟಕ ವನೌಷಧಾಲಯ ಶಿರಸಿ.

ಔಷಧಗಳ ಗುಣದ ಬಗ್ಗೆ ಡಾಕ್ತಾರ ಮುಂತಾದವರ ಕಡೆಯಿಂದ
ಸರ್ಟಿಫಿಕೇಟುಗಳು ಶಿಕ್ಕಿರುತ್ತವೆ.

೧. ರೋಗನಾಶಕ. ರಕ್ತ, ಧಾತು ಶುದ್ಧಿ ವ ವೃದ್ಧಿಕರ ಲೋಹ ಮಿಶ್ರಿತ ಗುಳಿಗೆ ೪೨ ಟ ಪ ಸಹ ಕ್ರಯ ರೂ ... ೨—೪—೦
೨. ಪ್ರವಾಳ ಕೇ ರ ಅಮರಸತ್ವ ಶಿಲಾಜಿತು ವ ವನಸ್ಪತಿ ಮಿಶ್ರಿತ ಧಾತುಪೌಷ್ಟಿಕ ಶಕ್ತಿವರ್ಧಕ ಗುಳಿಗೆ ೪೨ ಕ್ರಯ ರೂ ೨—೪—೦
೩. ಗರ್ಮಿ ರೋಗನಾಶಕ ಗುಳಿಗೆ ... ೪೨ ಗುಳಿಗೆ ಡಬ್ಬಿ ೧ಕ್ಕೆ ಕ್ರಯ ರೂ ... ... ೩—೪—೦
೪. ಟಾಕೆಚಷ್ಟಿನಾಶಕ ಮಲಮು. ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೫. ವಾತನಾಶಕ ತೈಲ ಯಾವದೇ ತರದ ವಾತವಿದ್ದರೂ ಗುಣ ಕುಪ್ಪಿ ೧ಕ್ಕೆ ಕ್ರಯ ರೂ ೧—೪—೦
೬. ಭೃಂಗಾಮಲಕ್ಯಾದಿ ತೈಲ ಶಿರೋರೋಗ ನೇತ್ರರೋಗ ನಿವಾರಣ ಅಕಾಲದಲ್ಲಿ ಆದ ಹಣ್ಣುಕೂದಲು ಕಪ್ಪಾಗುತ್ತವೆ ಕುಪ್ಪಿ ೧ಕ್ಕೆ ಕ್ರಯ ರೂ ... ... ೧—೪—೦
೭. ಜಂಬೀರ ತೈಲ ಮೇಲಿನಂತೆ ಗುಣ. ಕುಪ್ಪಿ ೧ಕ್ಕೆ ಕ್ರ ರೂ ೧—೨—೦
೮. ಮೂಲವ್ಯಾಧಿ ಹರಚೂರ್ಣ ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೯. ಕಫವಮ್ಯಹರ ಚೂರ್ಣ ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೧೦. ಇಸಬುರುತ್ತಿ ಮಲಮು ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೧೧ ಅಸಾಧ್ಯಕೆಟ್ಟ ಹುಣ್ಣುಗಳಿಗೆ ಮಲಮು ... ೧—೪—೦
೧೨. ಮದನೋತ್ಸವ ಚೂರ್ಣ ಡಬ್ಬಿ ೧ಕ್ಕೆ ರೂ ೧—೦—೦
೧೩. ಅಮೃತಪಾಕ (ವೃದ್ಧನಾದರೂ ತರುಣನಾಗುತ್ತಾನೆ) ಅತ್ಯಂತ ಪೌಷ್ಟಿಕ ಶಕ್ತಿವರ್ಧಕ ೪೦ ತೊಲೆ ಡಬ್ಬಿ ೧ಕ್ಕೆ ... ೩—೮—೦
೧೪. ಅಮೃತಗುಟಿ ಅಗ್ನಿವೃದ್ಧಿಕರ, ಪಿತ್ತಕಫನಾಶಕ ಜ್ವರಗಳಿಗೆ ಒಳ್ಳೆ ... ಗತಜ್ವರ ನಾಶವಾಗಿ ... ಜ್ವರ ತಿರುಗಿ ಬರುತ್ತದೆ ನಮ್ಮ ಕೆಮ್ಮು ಗುಣವಾಗುತ್ತದೆ ಗುಳಿಗೆ ೪೨ರ ಕ್ರಯ ರೂ ೨—೦—೦

ಈ ಶಿವಾಯ ಇನ್ನೂ ಅನೇಕ ಔಷಧಗಳು ಶಿಕ್ಕುತ್ತವೆ. ರೋಗದ ಲಕ್ಷಣ ಪೂರ್ಣವಾಗಿ ತಿಳಿಸಿದರೆ ಯೋಗ್ಯ ಶಿಫಾರಸಿನ ಉತ್ತಮ ಔಷಧಗಳು ಕಳುಹಿಸಲಾಗುವದು.

ಪತ್ತೆ:—ಆರ್. ಯಸ್. ವಷ್ಟೋ ಕಸಬೆ, ಶ್ರೀಪದ್ಭೂಷಣ,
ಪೋಸ್ಟು ಶಿರಸಿ, ಜಿಲ್ಲಾ ಉತ್ತರ ಕಾನಡಾ

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಿಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ ಎಸ್ ಎ ಸಿಂಗರ್ ಕೆಂಡಲ್, ರಬಿಟ್ ಕವರ್ಟ ಅಲ್ಲದೆ ಸುಲಭ ದರದ ಬಿನ್ನಸ್, ರೋಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ ಎಸ್ ಎ ಬ್ರೆಂಪ್ಟನ್, ಬ್ರೂಕ್ಸ್, ಲೂಕಸ್, ಪೆರ್ರಿ ಮುಂತಾದ ಉಪಕರಣಗಳೂ, ಡನ್‌ಲೂಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, *Proprietor*
THE CANARA CYCLE MART,
Udipi. S. Canara.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು
ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

ಧಾತುಪೌಷ್ಟಿಕ ವಜ್ರಾಂಗಪಾಕ.

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು ರಕ್ತದೂಷಿತರೋಗ, ಮೆಂದುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ, ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ. ೪೦ ತೊಲೆಗೆ ಕ್ರಯ ರೂ ೩—೮—೦, ಒಮ್ಮೇಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ. ೬—೦—೦. ಟಪಾಲು ಖರ್ಚು ಬೇರೆ

(೧) ಗಜಕರ್ಣದ ಮುಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗ ನಾಶಕ ಗುಳಿಗೆ ೪೨ಕ್ಕೆ ಉತ್ತಮ ಗುಣ ಕ್ರಯ ರೂ. ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೨೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೇಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ. ೧. ಟಪಾಲು ಖರ್ಚು ಬೇರೆ.

ಇನ್ನು ಅನೇಕ ಔಷಧಗಳು ನಮ್ಮ ಕಂಪನಿಯಲ್ಲಿ ಶಿಗುತ್ತವೆ. ಅನುಪಾನ ಪತ್ರಿಕೆ ಒಂಗಿಯ ಸಂಗಡ ಕಳುಹಿಸುವೆವು.

ನಮ್ಮ ವಿಳಾಸ:—　ವಿ. ಎಸ್. ಮೋಡಕ,
ಕರ್ಣಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ್ ಶಿರ್ಶಿ, ಜಿಲ್ಲಾ ಕಾನಡಾ.

ಯುನಿವರ್ಸಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸಹಾಯ!　　ಉಪಶಾಂತಿ!!　　ಸಹಿತಾಪ!!!

ಒಂದು ಇನ್ಶೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥೆಗಳು ಬೇಕೆಂಬದನ್ನು ನೀವು ಅರಿತಿರುವಿರೋ?

ಇನ್ಶೂರೆನ್ಸ್ ವೈಜ್ಞಾನಿಕರು ಹೇಳುವುದೇನೆಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ. ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

			ಮೊದಲನೇ ವರ್ಷ.	2ನೇ ವರ್ಷ.
ಹೊಸಕೇಸ್ (ಜೀವ)	...	ರೂ.	13,329—0—0	22,549—0—0
,, (ವಿವಾಹ)	..	,,	25,670—0—0	38,933—0—0
ಜುವಾಬ್ದಾರಿ ಕೇಸುಗಳು	..	,,	38,999—0—0	61,482—0—0
ವಸೂಲಾದ ಪ್ರೀಮಿಯಮ್	..	,,	1,36,685—0—0	5,34,683—0—0
ಬಾಧ್ಯತ ಹಕ್ಕುಗಳು	..	,,	32,074—0—0	2,49,460—0—0
(ಸ್ಪೆಶಲ್) ರಕ್ಷಿತ ಧನ	..	,,	10,000—0—0	50,000—0—0
(ಜನರಲ್) ರಕ್ಷಿತ ಧನ	..	,,	37,220—0—0	23,778—3—2

ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ.　　ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕೆಂದರೆ—

1. ಅದು 1912ನೇ ಲ್ಯಾಪ್ ಎಸ್ಯೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ರೇವಣಾ ಶಿಯುಲ್ಪಟ್ಟಿರುವದು. 2. ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವದು. 3. ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4. ರೂ. 3,00,000ಗಿಂತಲೂ ಹೆಚ್ಚಿಗೆ ಭಾದ್ಯತೆಗಳನ್ನು ಕೊಟ್ಟಿದೆ 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ. 9. ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ.

"ಬಂಗಾಳೀ"—14ನೇ ಜನವರಿ 1914—ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡೆ ಇದೆ. ನಾವು ಅದನ್ನು ಓದಿನೋಡಿ ಅದು 61,482 ಪ್ರೊವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು. ಸುಮಾರು 3 ಲಕ್ಷ ಭಾದ್ಯತೆ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ಕುರುವಾಯಿ ಹುಳಗಳಿಗೆ ತಮ್ಮ ಮೊಟ್ಟೆಗಳನ್ನು ಮೃದುವಾದ ಕೊಳೆತ ಮರಗಳ ಗುಪ್ಪೆಗಳಲ್ಲಿ ಇಡುವುದಕ್ಕೆ ಬಹಳ ಇಷ್ಟ. ಮುಖ್ಯವಾಗಿ ಹೆಚ್ಚಿಗೆ ತೇವವಿಲ್ಲದ ಇಂತಹ ಕೊಳೆತ ಬಿಸಾಡಿದ ಗುಪ್ಪೆಗಳಲ್ಲಿ ಅವುಗಳು ತಮ್ಮ ಮೊಟ್ಟೆಗಳನ್ನು ಇಡುವವು. ಆದುದರಿಂದ ಈ ಹುಳಗಳ ಹುಟ್ಟಡಗಿಸಬೇಕೆಂದಿರುವವರು ಒಂದು ಅಡಿ ಆಳವಾದ ಗುಣಿ ತೋಡಿ ಅದರ ಬದಿಯಲ್ಲಿ ಮೃದುವಾದ ಹ್ಯೊಗೆಯನ್ನು ಗುಪ್ಪೆ ಹಾಕಿ ನಂತರ ಗುಣಿಯಲ್ಲಿ ಕೆಲವು ಜೀಲ ಮರದ ಕೆತ್ತೆಗಳನ್ನೂ ಮರಗಳ ಹಾಳು ತುಂಡುಗಳನ್ನೂ ತುಂಬ ಬೇಕು. ಕಡೆಗೆ ಗುಣಿಯ ಬದಿಯಲ್ಲಿ ಹಾಕಿರುವ ಹ್ಯೊಗೆಯಿಂದ ೨ ಅಡಿ ಎತ್ತರದ ಕೋಣಾಕೃತಿಯ ಗುಪ್ಪೆಗಳನ್ನು ಮಾಡಬೇಕು. ಹೀಗೆ ಮಾಡಿಟ್ಟರೆ ನೂರಾರು ಹೆಣ್ಣು ಬೀಟ್ಲ್ ಹುಳಗಳು ಆ ಸ್ಥಳಕ್ಕೆ ಒಡನೆ ಬಂದು ತಮ್ಮ ಮೊಟ್ಟೆಗಳನ್ನು ಇಡುವವು. ಗುಣಿಯಲ್ಲಿ ಹಾಕಿರುವ ಮರದ ಕೆತ್ತೆ ಇತ್ಯಾದಿಗಳು ಕೊಳೆಯುತ್ತಿರುವುದರಿಂದ ಅದರಿಂದ ಹುಟ್ಟುವ ವಾಸನೆಗೆ ಈ ಹುಳಗಳು ತಡಮಾಡದೆ ಬಂದು ಈ ಗುಣಿಗಳಲ್ಲಿ ವಾಸಮಾಡುವವು. ಹೀಗೆ ತೆಂಗಿನ ತೋಟಗಳನ್ನು ಕೆಡಿಸುವ ಹುಳಗಳು ಈ ಗುಣಿಗಳನ್ನು ವಾಸಸ್ಥಾನವಾಗಿ ಮಾಡಿಕೊಳ್ಳುವವು ಅಲ್ಲದೆ ಎಲ್ಲಾ ಮೊಟ್ಟೆಗಳು ಈ ಗುಣಿಗಳಲ್ಲೇ ತುಂಬುವವು. ಹತ್ತು ವಾರಗಳಲ್ಲಿ ಈ ಗುಣಿಯಲ್ಲಿ ೬ ಅಡಿ ಉದ್ದ ೬ ಅಡಿ ಅಗಲದಷ್ಟು ವಿಸ್ತೀರ್ಣಕ್ಕೆ ಹುಳಗಳ ಮೊಟ್ಟೆಗಳೂ ಸಣ್ಣ ಮರಿಗಳೂ ತುಂಬಿಕೊಳ್ಳುವವು. ಕೂಡಲೇ ಇವುಗಳೆಲ್ಲವನ್ನು ಗುಣಿಯಿಂದ ತೆಗೆದು ಸುಟ್ಟು ಹಾಕಬೇಕು. ಈ ಏರ್ಪಾಡು ಸೀಲೋನ್ ದ್ವೀಪದ ತೆಂಗಿನ ಗಿಡಗಳ ತೋಟಗಳಲ್ಲಿ ಜಾರಿಯಲ್ಲಿದೆ.

ವ್ಯಾಸರಾಯ ಪ್ರಭುಗಳವರ ಜನನ ದಿನೋತ್ಸವವು

ಅಯ್ಯಾ ಪತ್ರಿಕಾಕರ್ತರೇ,

ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಕಳೆದ ಸಾರಿ ಪ್ರಕಟಿಸಿದ ಪ್ರಕಾರ ಈ ಮೇಲೆ ಹೇಳಿದ ಉತ್ಸವದ ಸೌಕರ್ಯಗಳೆಲ್ಲಾ ಹೋದ ಶನಿವಾರ ದಿವಸ ತೃಪ್ತಿಕರವಾಗಿ ನಡೆದವು. ಮೆ| ಸ್ಟೀವನ್ ಎಂಡ್ ಸನ್ನರು ಈ ದಿನ ೩೦ ಮೂಲ ಪಾಠಶಾಲೆಗಳ ಸುಮಾರು ೪೦೦೦ ಮಕ್ಕಳಿಗೆ ಬಿಸ್ಕುಟುಗಳನ್ನೂ ಮಾಕರೂನ್ ಎಂಬ ನವೀನವಾದ ಭಕ್ಷ್ಯಗಳನ್ನೂ ಅವರವರ ಶಾಲೆಗಳಲ್ಲಿ ೧೦-೩೦ ಘಂಟೆಗೆ ಬಡಿಸುವ ವಿಲೆವಾರಿ ಮಾಡಿದರು. ಮಕ್ಕಳು ಈ ಭಕ್ಷ್ಯಗಳನ್ನು ತಿನ್ನುವಾಗ ವ್ಯಾಸರಾಯ ಪ್ರಭುಗಳನ್ನು ಸ್ತುತಿಸುವ ಗೀತಗಳನ್ನೂ ಸಂದರ್ಭಕ್ಕೆ ಯೋಗ್ಯವಾದ ಬೇರೆ ಗೀತಗಳನ್ನೂ ಹಾಡಿದರು. ಮುನಿಸಿಪಾಲಿಟಿಯವರು ಪ್ರತೀ ಶಾಲೆಗೆ ದಯಪಾಲಿಸಿದ ವ್ಯಾಸರಾಯ ಹಾರ್ಡಿಂಗ ಪ್ರಭುಗಳವರ ಮತ್ತು ಅವರುಗಳ ಪತ್ನಿಯವರುಗಳ ಬಲು ಅಂದವಾದ ದೊಡ್ಡದೊಂದು ಭಾವಚಿತ್ರವು ಈ ಸಂದರ್ಭವನ್ನು ಮತ್ತಷ್ಟು ಅಲಂಕರಿಸಿತು.

ಕದ್ರಿ ಸೈಂಟ್ ಕ್ಸೆವಿಯರ್ಸ್ ಶಾಲೆಯಲ್ಲಿ ಈ ಉತ್ಸವಕ್ಕೆ "ಮಂಗಳೂರ ಎಡ್ವರ್ಟಾಯಿಸರ್"ವೆಂಬ ಇಂಗ್ಲಿಷ್ ಪತ್ರಿಕೆಯ ಸಂಪಾದಕರಾದ ಡಾಕ್ಟರ್ ಎ. ಎ. ಪೆರೇರರವರು ಅಗ್ರಕ್ಷರಾಗಿದ್ದರು. ಮೆ| ಸ್ಟೀವನ್ ಸನ್ನರು ಇಲ್ಲಿ ಸ್ವತಹಾ ಹಾಜರಿದ್ದರು. ಅಧ್ಯಕ್ಷರು ವ್ಯಾಸರಾಯ ಪ್ರಭುಗಳವರ ದೀರ್ಘಾಯುಷ್ಯವನ್ನು ಬಯಸಿದನಂತರ ಅತಿ ಘಗಳೊಳಗೆ ಕೇಕು ಹಂಚಲಾಯಿತು. ಮಕ್ಕಳು ಕನ್ನಡದಲ್ಲೂ ಇಂಗ್ಲಿಷಿನಲ್ಲಿಯೂ ವ್ಯಾಸರಾಯ ಪ್ರಭುಗಳವರಿಗೆ ಧನ್ಯವಾದವನ್ನಿತ್ತರು. "ರಾಜನಂ ರಕ್ಷಿಸು" ಗೀತವನ್ನು ಇಂಗ್ಲಿಷಿನಲ್ಲಿ ಹಾಡಿ ಸಭೆಯು ಅಂತ್ಯ ಮಾಡಲಾಯಿತು. ಟೀಚರ್ಸ್ ಎಸೋಶಿಯೇಶನಿನ ಖರ್ಚಿನಿಂದ ವ್ಯಾಸರಾಯ ಪ್ರಭುಗಳವರಿಗೆ "ಬರ್ತ್‌ಡೇ ಗ್ರೀಟಿಂಗ್ಸ್" ತಂತೀ ಮೂಲಕ ಕಳುಹಿಸಲ್ಪಟ್ಟಿದೆ. ಅದರೊಟ್ಟಿಗೆ ಸ್ಟೀವನ್ ಸನ್ನರ ಉದಾರ ಕೆಲಸವನ್ನು ತಿಳಿಸಿಯದಲ್ಲದೆ, ಈ ಉತ್ಸವದ ದಿವಸ ಈ ಫರ್ಮಿನವರ ಖರ್ಚಿನಿಂದ ಆನಂದಪಟ್ಟ ೪೦೦೦ ವಿದ್ಯಾರ್ಥಿಗಳ ವಂದನೆಗಳೂ ಈ ವಿದ್ಯಾರ್ಥಿಗಳನ್ನು ಕಲಿಸುವ ಉಪಾಧ್ಯಾಯರೆಲ್ಲರೂ ಕೂಡಿರುವ ಮಂಗಳೂರು ಮೂಲ ಪಾಠಶಾಲೆಗಳ ಅಧ್ಯಾಪಕರ ಸಂಘದ ವಂದನೆಗಳೂ ಈ ಫರ್ಮಿಗೆ ಕಳುಹಿಸಿಕೊಡಲಪೇಕ್ಷಿಸುತ್ತೇವೆ.

M. A. M. D'Souza

ಮಂಗಳೂರು, ತಾ. 21—೬—14

Secretary,

Teachers Association, Mangalore.

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೇ,

ನಮ್ಮ ಮುಂಡಾಜೆ ಗ್ರಾಮಕ್ಕೆ ಬೆಳ್ತಂಗಡಿ ಪೋಸ್ಟಾಫೀಸಿನಿಂದ ಈ ಮುಂಚೆ ವಾರಕ್ಕೆ ಎರಡಾವೃತ್ತಿ ಕಾಗದ ಬಟ್ವಾಡೆ ಇತ್ತು. ಈಚೆಗೆ ಹಪ್ತೆಗೆ ಒಂದೇ ಸರ್ತಿ ಬಟ್ವಾಡೆ ಆಗುವುದರಿಂದ ಗ್ರಾಮಸ್ಥರಿಗೆ ಅಗತ್ಯ ಇರುವ ಕಾಗದಗಳೂ ತಕ್ಕ ಸಮಯಕ್ಕೆ ದೊರೆಯದೆ ಇದ್ದು ಹೆಚ್ಚಿನ ನಷ್ಟಕಷ್ಟಗಳಿಗೆ ಕಾರಣವಾಗಿಯದೆ. ಬೆಳ್ತಂಗಡಿ ಪಿರ್ಕಿಗೆ ಸೇರಿದ ಬಾಕಿ ಎಲ್ಲಾ ಗ್ರಾಮಗಳಿಂದ ನಮ್ಮ ಮುಂಡಾಜೆ ಗ್ರಾಮಕ್ಕೆ ಕಾಗದ, ಭಾಂಗಿ, ವೃತ್ತಪತ್ರಿಕೆ ಮುಂತಾದ್ದು ಜಾಸ್ತಿ ಎಂಬ ಸಂಗತಿಯು ಪೋಸ್ಟಾಫೀಸಿನ ಲೆಖ್ಖದಿಂದಲೆ ತಿಳಿಯಬಹುದು. ಆದ್ದರಿಂದ ಈ ಗ್ರಾಮದಲ್ಲಿ ಒಂದು ಬ್ರೇಂಚಾಫೀಸು ತೆರೆಯುತ್ತಿದ್ದರೆ ಆಗುವ ಉಪಕಾರ ವರ್ಣಿಸ ತೀರದು. ಮತ್ತು ಇಲ್ಲಿ ಬ್ರೇಂಚಾಫೀಸು ತೆರೆದರೆ ಪ್ರತ್ಯೇಕ ರನ್ನರು ವಗೈರೆ ಇಡುವ ಅವಶ್ಯ ಇಲ್ಲ. ಚಾರ್ಮಾಡಿಗೆ ಹೋಗುವ ಟಪ್ಪಾಲ್ ಸಂಗಡಲೇ ರವಾನಿಸಬಹುದು. ಈಗ ಕಾಗದ ಬಟ್ವಾಡೆಗೆ ಸದರಿ ಬೆಳ್ತಂಗಡಿಯಿಂದ ವಿಲೇಜ್ ಪೋಸ್ಟ್‌ಮೇನ್ ಇದ್ದರೂ ಆತನಿಗೆ ಹೆಚ್ಚು ಗ್ರಾಮಗಳು ಇರುವುದರಿಂದ ಕಾಗದಗಳು ವ ವೃತ್ತಪತ್ರಿಕೆಗಳು ವಿಳಾಸದಾರರ ಕೈಸೇರಬೇಕಾದರೆ ಹೆಚ್ಚು ವಿಳಂಬವಾಗುತ್ತದೆ. ಆದ್ದರಿಂದ ಈ ವಿಷಯಕ್ಕೆ ಟಪ್ಪಾಲ್ ಇಲಾಖೆಯವರು ನಿಗಾ ಕೊಟ್ಟು ಇಲ್ಲಿ ಬ್ರೇಂಚಾಫೀಸು ತೆರದು ಜನೋಪಕಾರಿಗಳಾಗಲೆಂದು ಹಾರೈಸುವ,

ಮುಂಡಾಜೆ,
ತಾ. 14—6—14

ಮುಂಡಾಜೆ ಗ್ರಾಮಸ್ಥ.

"ಅತ್ರಿಗೋತ್ರಜರು."

ಸಂಪಾದಕರೇ,

ನನ್ನ ಲೇಖದಲ್ಲಿದ್ದ ಕೆಲವು ಅಭಿಪ್ರಾಯಗಳು "ವಿಷಾದಕರ"ವೆಂದು ಹೇಳಿ 'ಅತ್ರಿಗೋತ್ರಜರು ಬರೆದ ಉತ್ತರವನ್ನು ಕಂಡು ಯಾರಾದರೂ ಆಶ್ಚರ್ಯಪಡದಿರಲಾರರು. ಏಕೆಂದರೆ ನನ್ನ ಲೇಖದಲ್ಲಿ "ವಿಷಾದಕರ"ವಾದ ಅಭಿಪ್ರಾಯಗಳು ಯಾವುದೂ ಇರಲಿಲ್ಲ. ತುಕಾರಾಮ ನಾಟಕವನ್ನು ಕುರಿತು ನಾನು ಮಂಗಳೂರಲ್ಲಿ ಪ್ರಸ್ತಾಪಿಸಿದಾಗ ನನಗೆ ಒಬ್ಬಿಬ್ಬರಿಂದ ಸಿಕ್ಕಿದ ಉತ್ತರವು ಪರಸ್ಪರಾನುರಾಗಕ್ಕೆ ಪ್ರತಿಕೂಲವಾಗಬಹುದೆಂದು ನಾನು ಹೇಳಿದೆನೇ ಹೊರತು ನಾನಾಗಿ ನನ್ನದೆಂದು ವಿವರಿಸಿದ ಅಭಿಪ್ರಾಯಗಳ ಪೈಕಿ ವಿಷಾದವನ್ನು ಹುಟ್ಟಿಸುವವುಗಳು ಯಾವುದೂ ಇರಲಿಲ್ಲ. ನನ್ನ ಮುಂದೆ ಒಬ್ಬಿಬ್ಬರು ಹಾಗೆ ಬಯಲುಪಡಿಸಿದ ಅಭಿಪ್ರಾಯಗಳು ವಿಷಾದಕರವೇ ಆಗಿ

ದ್ದವು. ಆದರೆ ಅವರು ಸೂಚಿಸಿದ ಅಭಿಪ್ರಾಯಗಳಿಗಾಗಿ ನನ್ನ ಅಭಿಪ್ರಾಯಗಳು ವಿಷಾದಕರವೆಂದು ದೂಷಿಸುವುದು ಯಾರಿಗೂ ಸಲ್ಲದು

ಇದಲ್ಲದೆ 'ಅತ್ರಿಗೋತ್ರಜ'ರು ನನಗೆ ಇನ್ನೊಂದು ಅನ್ಯಾಯವನ್ನು ಮಾಡಿರುವರು. ಕೆಲವು "ಹಿಂದೂ ಭ್ರಾತೃರು" ಸೂಚಿಸಿದ ಅಭಿಪ್ರಾಯಗಳೆಂದು ಸ್ಪಷ್ಟವಾಗಿ ನಾನು ಬರೆದಿದ್ದರೂ ಅದನ್ನು ಮರೆತು ಮಂಗಳೂರಿನ "ಹಿಂದೂ ಭ್ರಾತೃರು" ಎಲ್ಲವರೂ ಸೂಚಿಸಿದ ಅಭಿಪ್ರಾಯವೆಂದು ನಾನು ಬರೆದೆನೆಂಬ ಊಹೆಯನ್ನು ತನ್ನಷ್ಟಕ್ಕೆ ತಾನೇ ಕಲ್ಪಿಸಿಕೊಂಡು ನಾನು ಹೇಳಿದುದು ನಿಜವಲ್ಲ ಮತ್ತು ಸರಿಯಲ್ಲವೆಂಬದಾಗಿ ಅತ್ರಿಗೋತ್ರಜರು ಬರೆದುದು ಶುದ್ಧ ತಪ್ಪಾಗಿರುತ್ತದೆ ಕೆಲವು "ಹಿಂದೂ ಭ್ರಾತೃ"ರು ನನಗೆ ಕೊಟ್ಟ ಉತ್ತರವೆಂದು ನಾನು ಬರೆದಿರುವುದಕ್ಕೆ ಸಹ ನನ್ನ ದ್ವೇಷವೇ ಕಾರಣವೆಂದು ಅತ್ರಿಗೋತ್ರಜರು ಅಭಿಪ್ರಾಯಪಡುವುದರಿಂದ ನಾನು ಹಾಗೆ ಬರೆದುದು ಬರೇ ಹುಸಿಯೆಂದು ಅತ್ರಿಗೋತ್ರಜರ ಸೂಚನೆಯಾಗಿ ನಾನು ತಿಳಿದುಕೊಳ್ಳಬೇಕಾಗಿದೆ ಅತ್ರಿಗೋತ್ರಜರು ಹೀಗೆ ಬರೆದುದು ಕೇವಲ ಅನ್ಯಾಯವಾಗಿರುತ್ತದೆ ಲೋಕದಲ್ಲಿ ಯಾರನ್ನಾದರೂ ಅವನ ಹೇಳಿಕೆಯನ್ನು ಕೇಳದೇನೇ ಅಪರಾಧಿಯೆಂದು ನಿರ್ಣಯಿಸುವುದು ಅಯೋಗ್ಯವಷ್ಟೇ? ಆದುದರಿಂದ ನಾನು ಬರೆದುದು ಸುಳ್ಳೆಂದು ಹೇಳುವ ಮೊದಲು ನಾನು ಹೇಳಿದುದು ಸುಳ್ಳೋ ಏನೆಂಬುದನ್ನು ಕಂಡು ಹಿಡಿಯಲು 'ಅತ್ರಿಗೋತ್ರಜ'ರು ಯತ್ನಿಸಬೇಕಿತ್ತು ಹಾಗೆ ಮಾಡದೇನೇ ನನ್ನ ಮಾತುಗಳು ಸುಳ್ಳೆಂದು ಬರೆದುದು ಬಹಳ ತಪ್ಪು.

ಕೆಲವು ಹಿಂದೂ ಭ್ರಾತೃರು ಅಮೇಟರ್ ನಾಟಕ ಮಂಡಳಿಯವರ ನಾಟಕಗಳನ್ನೂ ಸಾರಸ್ವತ ಶಾಲೆಯ ಬಗ್ಗೆ ಏರ್ಪಡಿಸಿದ ಪನ್ನಿ ಸೇಲ್ ಮೊದಲಾದವುಗಳನ್ನು ಪ್ರೋತ್ಸಾಹಿಸಿ ಸಾರಸ್ವತ ಶಾಲೆಗೆ ಬಹಳ ಸಹಾಯವನ್ನು ಮಾಡಿರುವರೆಂದು 'ಅತ್ರಿಗೋತ್ರಜ'ರು ಬರೆದಿರುತ್ತಾರೆ. ಅದನ್ನು ನಾನು ಮೊದಲೇ ಕೇಳಿದ್ದೇನೆ. ಮತ್ತು ಹಾಗೆಲ್ಲಾ ಭೇದಾಭೇದವಿರಹಿತರಾಗಿ ಸತ್ಕಾರ್ಯಗಳನ್ನು ಪ್ರೋತ್ಸಾಹಿಸುವುದಕ್ಕೆ ಎಲ್ಲರೂ ತುಂಬಾ ಸಂತೋಷಪಡಲೇ ಬೇಕು ಆದರೆ ಅಂತಹ ಸ್ವಾರ್ಥತ್ಯಾಗ ಪೂರಿತವಾದ ಪರೋಪಕಾರ ಬುದ್ಧಿ ಬಾವದ ನಡುವೆ ನನಗೆ ಸಿಕ್ಕಿರುವದೆಂದು ನಾನು ಹೇಳಿದ ಕೆಲವು "ಹಿಂದೂ ಭ್ರಾತೃರ" ಉತ್ತರವು 'ಅತ್ರಿಗೋತ್ರಜ'ರು ಹೇಳಿರುವಂತೆ "ಕೆಲವು ಜನರಿಗೆ ಓದಿಸಬೇಕೆಂದು ತಯಾರಿಸಿದ ಹಾಲು ಸಕ್ಕರೆಯ ಪಾಯಸದಲ್ಲಿ ಕೆಲವು ಹಿಡಿದ ಸಪ್ಪಟನ್ನು ಹಾಕಿದ ಹಾಗೆ"ಯೋ ನನಗೆ ಕಂಡು ಬಂದುದರಿಂದ ಅದರ ಕುರಿತು ನಾನು ಬರೆದೆನು ಹೊರತು ನನಗೆ ಯಾರ ಮೇಲೆಯೂ ಯಾವ ತರದ ವೈಮನಸ್ಸು ಇರಲಿ ಇಲ್ಲ.

ನಾವು ಸದಾ ಏಕಮತ್ಯದಲ್ಲೇ ಅಣ್ಣ ತಮ್ಮಂದಿರಂತೆ ಪ್ರೇಮದಿಂದ ಒಟ್ಟುಗೂಡಿ ಅನ್ಯೋನ್ಯಭಾವದಿಂದಿದ್ದು ನಮ್ಮೊಳಗೆ "ರೋಟಿ ಬೇಟಿ" ವ್ಯವಹಾರವನ್ನು ಕೂಡಾ ಕ್ರಮೇಣ ಚಾಲ್ತಿಗೆ ತರುವುದು ಯೋಗ್ಯವೆಂದು ಮೊದಲಿನಿಂದಲೇ ಅಭಿಪ್ರಾಯಪಟ್ಟಿರುವ ಮತ್ತು ಈ ಕುರಿತು ಪತ್ರಿಕೆಗಳಲ್ಲಿ (ತಾ ೯—೬—೧೯೧೪ನೇ ಸ್ವದೇಶಾಭಿಮಾನಿಯಲ್ಲಿ) ಸಹ ಲೇಖವನ್ನು ಬರೆದಿದ್ದ ನಾನು ಈಗ ಎಂದಿಗೂ ವಿಷಾದಕರವಾದ ಅಭಿಪ್ರಾಯಗಳನ್ನು ಸೂಚಿಸಲಾರೆನು.

"ಅತ್ರಿಗೋತ್ರಜರ ಉತ್ತರವನ್ನು ನೋಡಿ ಕೆಲವು 'ಹಿಂದೂ ಭ್ರಾತೃರ' ಅಭಿಪ್ರಾಯವುಳ್ಳವರು ಅಲ್ಪ ಪಕ್ಷದವರೆಂದೂ, ಮತ್ತು ಉದಾರ ಮನಸ್ಕರೂ ಧರ್ಮಿಷ್ಟರೂ ನವನಾಗರೀಕತೆಯಲ್ಲಿ ಸುಧಾರಣೆ ಹೊಂದಿದವರೂ ಆದ ಅತ್ರಿಗೋತ್ರಜರಂತಹ ಸದ್ ಗೃಹಸ್ಥರು ಬಹುಪಕ್ಷದವರೆಂದೂ ಸ್ಪಷ್ಟವಾಯಿತು. ಆದುದರಿಂದ ಅತ್ರಿಗೋತ್ರಜರು ಮೊದಲಾದವರ ಬಹು ಪಕ್ಷದವರ ನಿಷ್ಕಳಂಕವಾದ ಮನಸ್ಸನ್ನು ನೋಯಿಸಿದುದಕ್ಕೆ ನಾನು ಬಹಳ ಬೇಸರಪಡುತ್ತೇನೆ.

ಮುಕ್ತೇಶ್ವರ,
ಜ್ಯೇಷ್ಠ, ಬ ೧೪

ಹರ್ಷರಾಜ.

ಆದಾಯ ತೆರಿಗೆ.

ಅಯ್ಯಾ,

ಹಲವು ವರುಷಗಳ ಹಿಂದೆ ರೂಪಾಯಿ ೫೦೦ ಆದಾಯ ಉಳ್ಳವರಿಗೆ ರೂಪಾಯಿ ೧೦ ಆದಾಯ ತೆರಿಗೆ ಹೊರಿಸುವ ನಿಯಮವಿತ್ತಷ್ಟೆ. ಆದರೆ ರೂಪಾಯಿ ೫೦೦ಕ್ಕಿಂತ ಕಮ್ಮಿ ಆದಾಯ ಇರುವವರನ್ನು ಆದಾಯ ತೆರಿಗೆಯಿಂದ ವಿನಾಯತಿ ಪಡಿಸಬೇಕಾಗಿ ಸರಕಾರದವರ ಹುಕುಂ ಆದುದರಿಂದ ಅಂಥವರು ಒಂದೆರಡು ವರ್ಷ ವಿಶ್ರಾಂತಿಯಲ್ಲಿದ್ದರು. ಆದರೆ ರೆವಿನ್ಯು ಇಲಾಖೆಯವರು ಅಂಥವರನ್ನು ಹ್ಯಾಗಾದರೂ ತೆರಿಗೆಗೆ ಗುರಿಪಡಿಸಬೇಕೆಂಬದರಿಂದ ಇವರಿಗೂ ಸಾವಿರ ರೂಪಾಯಿ ಆದಾಯ ಎಣಿಸಿ ತಾಲೂಕು ಖಾವಂದರ ಪಟ್ಟಿಗೆ ಸೇರಿಸಿ ತೆರಿಗೆಗೆ ಗುರಿಪಡಿಸಿದರು. ಈಗಿನ ರೆವಿನ್ಯು ಇಲಾಖೆಯ ಪ್ರಖ್ಯಾತ ಆಫೀಸರ್ಗಳವರು ಹೀಗೆ ಹಲವು ವರ್ಷಗಳಿಂದ ಒಂದೇ ಕ್ಲಾಸಿನಲ್ಲಿ ಹೊರಳಾಡುತ್ತಿದ್ದವರ ಅಂಗಡಿ ಅಂಗಡಿ ಹೋಗಿ ಮೇಲ್ತನಿಖೆ ನಡಿಸಿ ತಾಲೂಕು ಖಾವಂದರ ಕ್ಲಾಸಿನಿಂದ ಡಿವಿಜನಲ್ ಆಫೀಸರರ ಕ್ಲಾಸಿಗೆ ಬಡ್ತಿ ಮಾಡಿ ತೆರಿಗೆ ಹೊರಿಸಿರುವರು. ತೆರಿಗೆ ಹೆಚ್ಚಿಗೆ ಹೊರಿಸಲ್ಪಟ್ಟವರಿಗೆ ಈಗ ತಾನೇ ಡಿವಿಜನಲ್ ಆಫೀಸರರಿಂದ ನೋಟೀಸು ಬಂದಿರುವುದರಿಂದ ಪೇಟೆಯಲ್ಲೆಲ್ಲಾ ಗಲಿಬಿಲಿ ಉಂಟಾಗಿರುವುದು. ಈ ವರುಷ ಆದಾಯ ತೆರಿಗೆಗೆ ಬಂದ ನೋಟೀಸು ಕಳೆದ ವರ್ಷದ ಆದಾಯದ ಮೇಲೆ ಆಗಿರುತ್ತಾ ಇಂತಹ ಆದಾಯವನ್ನು ಕಳೆದ ವರುಷದಲ್ಲೇ ಒಂದೆರಡು ಸಾರಿಯಾದರೂ ತನಿಖೆ ನಡಿಸದೆ ಈ ನೋಟೀಸು ಹೊರಡುವ ಕೆಲವು ದಿವಸಗಳ ಮೊದಲು ಮಾತ್ರ ತನಿಖೆ ನಡಿಸಿ ಹೆಚ್ಚಿನ ಆದಾಯ ತೆರಿಗೆಗೆ ಗುರಿಪಡಿಸಲು ಕಾರಣವೇನು? ತಾಲೂಕು ಖಾವಂದರ ಪಟ್ಟಿಯಿಂದ ಈ ವರ್ಷ ಡಿವಿಜನಲ್ ಆಫೀಸರರ ಖಚೇರಿಗೆ ಬಡ್ತಿ ಹೊಂದಿದವರ ಸಂಖ್ಯೆ ಎಷ್ಟು? ಹೀಗೆ ಒಂದೇ ದಫೆ ಡಿವಿಜನಲ್ ಆಫೀಸರರ ಕಚೇರಿಗೆ ಬಡ್ತಿ ಹೊಂದಲು ಕಾರಣವೇನು? ಎಂಬ ವಿಚಾರವನ್ನು ಮಾಡಿ ನಮ್ಮಲ್ಲುಂಟಾದ ಚಳವಲವನ್ನು ನಿವೃತ್ತಿಪಡಿಸಬೇಕಾಗಿ ವಿನಂತಿಸುವ,

ಪುತ್ತೂರು,
20—6—1914

ಪಟ್ಟಣಿಗ.

ಅಯ್ಯಾ ಪತ್ರಾಧಿಪರೇ,

ಲೋಕಲ್ ಫಂಡಿನವರು ಉಳ್ಳಾಲ ರೈಲ್ವೆ ಸ್ಟೇಶನಿನಿಂದ ಪಾತೂರ ವರೇಗೆ ಒಂದು ಮಾರ್ಗವನ್ನು ಮಾಡಿಸಬೇಕಾಗಿ ಆಲೋಚನೆ ಮಾಡಿರುವರಾಗಿ ಕೇಳಿ ಸಂತೋಷವಾಯಿತು. ಈ ಮಾರ್ಗವು ಕೋಟೆಕಾರ ಗ್ರಾಮದಿಂದ ಹಾದುಹೋಗುವದೆಂಬದು ನಿಶ್ಚಯ ನಾವು ೧೯೧೩ನೇ ಇಸವಿಯಲ್ಲಿ ಒಂದು ಗ್ರಾಮ ರಸ್ತೆಯ ಬಗ್ಗೆ ಅರ್ಜಿ ಬರೆದುಕೊಂಡಿದ್ದೆವು ಆ ಬಗ್ಗೆ ನಮಗೇನೂ ಹುಕುಂ ದೊರೆಯಲಿಲ್ಲ. ಈ ಮೇಲೆ ಕಾಣಿಸಿದ ಮಾರ್ಗವಾದರೂ ಕೋಟೆಕಾರ ಗ್ರಾಮದಿಂದ ಸರಿಯಾಗಿ ಹಾದು ಹೋದರೆ ಹೆಚ್ಚಿನ ಪ್ರಯೋಜನವು ಗ್ರಾಮಕ್ಕೆ ಇರುವದು. ಗ್ರಾಮ ರಸ್ತೆಗೆ ನಾವು ಮಾಡಿದ ಅರ್ಜಿ ತನಿಖೆಗೆ ಲೋಕಲ್ ಫಂಡು ಇಂಜಿನಿಯರುಗಳು ಸ್ಥಳ ತನಿಖೆಗೆ ಬಂದಾಗ್ಯೆ ಕೋಟೆಕಾರ ಗ್ರಾಮದ ಸರ್ವೇ ನಂಬ್ರ ೨೧೪ರಲ್ಲಿ ಇರುವ ಸರಕಾರಿ ಖಾಲಿ ಸ್ಥಳದಿಂದ ಮಾರ್ಗ ಬಂದು ಪ್ರಾರಂಭಿಸಿ ೬೨-೫೩ನೇ ಸರ್ವೇ ನಂಬ್ರಗಳಿಂದ ೬೯ನೇ ಸರಕಾರಿ ಗುಡ್ಡೆ ಸ್ಥಳಕ್ಕೆ ಕೊಂಡು ಹೋಗಿ ಅಲ್ಲಿಂದ ಮಾರ್ಗ ಹಿಂದು ಮುಂದರಿಸಬೇಕಾಗಿ ಯೋಚಿಸಿದರು ಈಗ ಮೇಲೆ ಕಾಣಿಸಿದ ಉಳ್ಳಾಲ ಪಾತೂರು ರಸ್ತೆಯನ್ನು ಅದೇ ರೀತಿಯಲ್ಲಿ ಮಾಡಲಿಕ್ಕೆ ಲೋಕಲ್ ಫಂಡಿನವರು ಆಲೋಚಿಸಿದರೆ ಕೋಟೆಕಾರ ಗ್ರಾಮದವರಿಗೆ ಬಂದು ಯೋಗ್ಯವಾದ ಗ್ರಾಮ ರಸ್ತೆ ಆಗುವದು ಹಾಗೆ ಮಾಡದೆ ಈಗ ಲೋಕಲ್ ಫಂಡಿನವರು ಸ್ಥಳದಲ್ಲಿ ಹಾಕಿದ ಗುರ್ತು ಪ್ರಕಾರ ಆ ಮಾರ್ಗವು ಸರ್ವೇ ನಂಬ್ರ ೧೭-೧೧-೧೦-೭-೬-೫೯ ಈ ೬ ಸರ್ವೇ ನಂಬ್ರಗಳಿಂದ ಹಾದುಹೋಗುವದಾದರೆ ಈ ಮಾರ್ಗದಿಂದ ಕೋಟೆಕಾರ ಗ್ರಾಮದವರಿಗೆ ಏನೂ ಪ್ರಯೋಜನವಿಲ್ಲ ಎಂಬ ನನ್ನ ಬಡ ಅರಿಕೆಯನ್ನು ತಮ್ಮ ಪತ್ರ ಮೂಲಕ ತಿಳಿಸಲಪೇಕ್ಷಿಸಿದ್ದೇನೆ.

ಕೋಟೆಕಾರ ನಿವಾಸಿ.

ಅಯ್ಯಾ,

ನಮ್ಮಲ್ಲಿರುವ ರಿಜಲ್ಟು ಶಾಲೆಯು ಸರ್ವೆ ಹೊಳೆಯ ಪಡುದಿಕ್ಕಿನಲ್ಲಿದ್ದು ಶಾಲೆಗೆ ಹೋಗುವ ಮಕ್ಕಳು ಹೆಚ್ಚಾಗಿ ದೋಣಿ ಪಾರಾಗಿಯೇ ಹೋಗಬೇಕು. ಈಗ ಮಳೆಗಾಲ. ಹೊಳೆಯು ನೀರಿನಿಂದ ತುಂಬಿರುವುದು. ಪರಂತು, ಸರ್ವೆ ಹಳ್ಳದಲ್ಲಿ ಸರಕಾರಿ ದೋಣಿಯು ಇರುವದಿಲ್ಲ. ಖಾಸಗಿ ದೋಣಿ ಮಾತ್ರ ಇದೆ. ಈ ಖಾಸಗಿ ದೋಣಿಗಾರನು ಒಬ್ಬ ಹುಡುಗನನ್ನು ಒಂದು ಸಾರಿ ದಾಟಿಸಬೇಕಾದರೆ 3 ಪೈ ಕೊಡಬೇಕೆನ್ನುವನು. ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಆರೆಮನಸ್ಸಿನಲ್ಲಿರುವ ಹೆತ್ತವರು ದಿನ ಒಂದಕ್ಕೆ ದೋಣಿ ಬಗ್ಗೆ 6 ಪೈ ಕೊಡುವುದಕ್ಕೆ ನಿರಾಕರಿಸಿ ಮಕ್ಕಳನ್ನು ಮನೆಯಲ್ಲೇ ಕೂಡ್ರಿಸುತ್ತಿರುವರು. ಹೀಗೆ ಈ ಮಳೆಗಾಲದಲ್ಲಿ 2-3 ತಿಂಗಳ ವರೆಗೆ ಶಾಲೆಯನ್ನು ಮುಚ್ಚಿ ಬಿಡಬೇಕಾದುದರಿಂದ ಮಕ್ಕಳ ವಿದ್ಯಾಭ್ಯಾಸವು ಕೆಟ್ಟುಹೋಗುವುದು. ಈ ವಿಷಯ ತಾಲೂಕು ಬೋರ್ಡಿನವರು ತ್ವರ್ಯದಲ್ಲಿ ನಿಗಾಕೊಟ್ಟು ಶಾಲಾ ಮಕ್ಕಳು ದೋಣಿ ಪಾರಾಗುವ ಬಗ್ಗೆ ಇಲ್ಲಿ ಒಂದು ದೋಣಿಯನ್ನು ಇರಿಸುವ ಏರ್ಪಾಡು ಮಾಡಬೇಕಾಗಿ ವಿನಂತಿಸುವ,

ಸರ್ವೆ, 23—6—14.

ಸರ್ವೆ ಗ್ರಾಮಸ್ಥ.

ವಿದೇಶ ವೃತ್ತಾಂತ.

ದಕ್ಷಿಣ ಆಫ್ರೀಕದಲ್ಲಿರುವ ಭಾರತೀಯರ ಸಂಕಷ್ಟ ನಿವಾರಣಾರ್ಥವಾದ ಮಸೂದೆಯು ೩ನೇ ಸಲವೂ ದಕ್ಷಿಣ ಆಫ್ರಿಕದ ಯೂನ್ಯನ್ ಸರಕಾರದ ಪಾರ್ಲಿಮೆಂಟ್ ಸಭೆಯಲ್ಲಿ ಮಂಜೂರಾತಿಯನ್ನು ಹೊಂದಿತು.

ವಾನ್‌ಕವರಿನ ಕ್ರೆಸ್ಟ್ ಹಿಲ್ ಎಂಬಲ್ಲಿ ಒಂದು ಗಣಿಯಲ್ಲಿ ಸಿಡಿತವುಂಟಾಗಿ ೨೨೫ ಮಂದಿ ಮೃತಪಟ್ಟರು

ಬಾಲ್ಕನ್ ಯುದ್ಧದ ಫಲಿತಾಂಶವಾಗಿ ಅಲ್ಬಾನಿಯವು ಸ್ವತಂತ್ರ ರಾಜ್ಯವಾಗಿ ಏರ್ಪಟ್ಟರೂ ಅಲ್ಲಿ ಸಮಾಧಾನವು ನೆಲೆಗೊಳ್ಳಲಿಲ್ಲ ಅಲ್ಲಿಯ ಆದಿ ನಿವಾಸಿಕರು ಈಗಿನ ಸರಕಾರಕ್ಕೆ ವಿರೋಧವಾಗಿ ಕಾದಾಡಲು ಪ್ರಾರಂಭಿಸಿದ್ದಾರೆ. ಕಳೆದ ವಾರ ಕಠಿಣ ಯುದ್ಧ ನಡೆದು ಉಭಯ ಕಡೆಗಳಲ್ಲಿಯೂ ನೂರಾರು ಸೈನಿಕರು ಮಡಿದು ಹೋದರು. ಅಲ್ಬಾನಿಯದ ಅರಸರು ತಾನೇ ಯುದ್ಧ ರಂಗದಲ್ಲಿ ಕಾಲಿಕ್ಕಿದ್ದಾರೆ. ಅರಸರಿಗೆ ಯಾ ಸರಕಾರಕ್ಕೆ ಈ ದಂಗೇಗಾರರಿಂದ ಹೆಚ್ಚಿನ ಕೇಡಾಗುವುದಾದರೆ ಕೂಡ್ಲೆ ತಮ್ಮ ಯುದ್ಧ ಹಡಗದಿಂದ ದಂಗೆಗಾರರ ಪಿರಂಗಿಗಳನ್ನು ಹಾರಿಸಬೇಕೆಂದು ಆಸ್ಟ್ರೀಯ ಮತ್ತು ಇಟಲಿ ರಾಜ್ಯಗಳ ಸರಕಾರದವರು ತಮ್ಮ ಯುದ್ಧನಾವೆಗಳಿಗೆ ಆಜ್ಞಾಪಿಸಿದ್ದಾರೆ. ಇವರಿಂದ ದಂಗೆಗಾರರು ಹೆದರಿಕೊಂಡು ಎರಡು ದಿವಸಗಳ ತನಕ ಯುದ್ಧ ನಿಲ್ಲಿಸಬೇಕೆಂದು ಅಲ್ಬಾನಿಯ ಸರಕಾರದವರನ್ನು ಕೇಳಿಕೊಂಡಿರುವರಲ್ಲದೆ ಹೊಸ ಅರಸರನ್ನು ಮನ್ನಿಸುವೆವೆಂದು ಹೇಳಿರುವರು

ಬ್ರಿಟಿಷ್ ಕೊಲೊಂಬಿಯಕ್ಕೆ ಭಾರತೀಯರನ್ನು ತಕ್ಕೊಂಡು ಹೋದ ಕೊಮಗಾಟಮಾರು ಎಂಬ ಹಡಗದ ಮಾಲೀಕರು ಅದಕ್ಕೆ ಹಿಂದೆ ಬರಬೇಕೆಂದು ಹುಕುಂ ಕಳುಹಿಸಿರುವರು.

೬೦೦ ಭಾರತೀಯರನ್ನು ಬ್ರಿಟಿಷ್ ಕೊಲೊಂಬಿಯಕ್ಕೆ ಬರಲು ತಡೆಯುವುದು ನ್ಯಾಯವಲ್ಲವೆಂತ ಪಂಜಾಬು ಹಿಂದೂ ಸಭೆಯವರು ಕೆನಡಾ ಮಂತ್ರಿಯವರಿಗೆ ತಂತೀ ಬಿಟ್ಟಿರುವರು.

ಈ ಹಡಗಕ್ಕೆ ಹಿಂದೆ ಬರಲು ಅಪ್ಪಣೆಯಾದರೂ ಹಡಗದಲ್ಲಿದ್ದ ಭಾರತೀಯರು ಹಡಗ ತಾಂಡೇಲನನ್ನು ಹಿಂದೆ ಪ್ರಯಾಣ ಮಾಡಲು ಬಿಡುವುದಿಲ್ಲವಾದ್ದರಿಂದ ಹಡಗವು ಸದ್ಯಾ ಹಿಂದೆರಳುವ ಹಾಗೆ ಇಲ್ಲ

ತುರ್ಕಿಯವರು ಆಸ್ಯಾ ಮೈನರಿನಲ್ಲಿರುವ ಗ್ರೀಕ ಪ್ರಜೆಗಳಿಗೆ ಪ್ರಾಣಹಾನಿ ಮಾನಹಾನಿಗಳನ್ನು ಮಾಡುತ್ತಿರುವುದರಿಂದ ಅಲ್ಲಿರುವ ಸಾವಿರಾರು ಮಂದಿ ಗ್ರೀಕರು ಗುಳೆ ತೆಗೆದುಕೊಂಡು ಹೋದರು. ತುರ್ಕರ ಈ ಕ್ರೂರ ಕೃತ್ಯದಿಂದ ಉಭಯ ರಾಜ್ಯಗಳೊಳಗೆ ಪುನಃ ಯುದ್ಧವಾಗಬಹುದೆಂಬ ಅನುಮಾನಕ್ಕೆ ಕಾರಣವಿದ್ದರೂ ತುರ್ಕ ಸರಕಾರದವರು ಇದಕ್ಕಾಗಿ ತಮ್ಮ ಕಡೆಯ ಕೆಲವು ಗವರ್ನರರನ್ನು ತೆಗೆದು ಹಾಕಿ ದೇಶದಲ್ಲಿ ನೆಮ್ಮದಿಯನ್ನು ಕಾಯುವೆವೆಂದು ಅಭಯವಿತ್ತದ್ದರಿಂದ ಗ್ರೀಕರು ಸದ್ಯಾ ಸಮಾಧಾನಪಟ್ಟಿರುವರು.

ಉತ್ತರ ಹಿಂದೂಸ್ಥಾನ.

ಹಿಂದೂಸ್ಥಾನ ಮತ್ತು ಅಫ್‌ಘಾನಸ್ಥಾನದಿಂದ ೧೯೧೨-೧೩ನೇ ಇಸವಿಯಲ್ಲಿ ಮಕ್ಕಾ ಜಾತ್ರೆ ಮಾಡಿದ ಮಹಮ್ಮದೀಯ ಯಾತ್ರಿಕರ ಸಂಖ್ಯೆ ೧೩,೪೦೧ ಎಂಬದಾಗಿ ಜಿದ್ದದಲ್ಲಿಯ ವ್ಯಾಸ್ ಕೌನ್ಸೆಲ್ಲರಾದ ಡಾಕ್ಟರ್ ಅಬ್ದುರ್‌ರಹಿಮಾನರವರು ಪ್ರಕಟಿಸಿದ ವರದಿಯಿಂದ ತಿಳಿದು ಬರುತ್ತದೆ. ಈ ಯಾತ್ರಿಕರಲ್ಲಿ ಬಹಳ ಮಂದಿ ಸತ್ತು ಹೋದರು ಮದೀನ ಮತ್ತು ಮಕ್ಕದಲ್ಲಿಯ ನೀರಿನ ಕೊರತೆಯೂ ಅನಾರೋಗ್ಯ ಸ್ಥಿತಿಯೂ ಈ ಮರಣಕ್ಕೆ ಹೇತುವಾಯಿತೆಂದೂ ಅಲ್ಲಿ ಸಬಕಿವಂತ ಮಹಮ್ಮದೀಯರು ಹಣ ಸಹಾಯ ಮಾಡುತ್ತಿದ್ದರೆ ಇದಕ್ಕೆ ತಡೆಕಟ್ಟಬಹುದಿತ್ತೆಂದೂ ಡಾಕ್ಟರ್ ರಹಿಮಾನರ ವಾದವಾಗಿದೆ.

೬ ವರ್ಷಗಳ ಹಿಂದೆ ಬ್ರಿಟಿಷ್ ವಸಾಹತಿಗಳಲ್ಲೊಂದಾದ ಟ್ರಿನಿದಾದ ಎಂಬಲ್ಲಿಗೆ ಕೆಲಸಮಾಡಿಕೊಳ್ಳಲು ಹೋದ ಹೀರ ಚಾಮರ್ ಎಂಬ ಭಾರತೀಯನು ತನ್ನ ಹೆಂಡತಿ ಮತ್ತು ರೂ ೪೦೦೦ ಸಹಿತ ಈಚೆಗೆ ತಾನೇ ಅಲ್ಲಹಾಬಾದಿನ ಬಿಟಾವ ಎಂಬಲ್ಲಿರುವ ತನ್ನ ಸ್ವಂತ ಮನೆಗೆ ಹಿಂತಿರುಗಿದನು. ಹೀರನು ಅಲ್ಲಿಗೆ ತಲಪುತ್ತಲೇ ಪೋಲೀಸ್ ಸಬ್ ಇನ್ಸ್‌ಪೆಕ್ಟರ ಮಹಮ್ಮದ ಜಾಫರಖಾನ್ ಎಂಬವನು ಕನಸ್ಟೇಬಲ್ ಮತ್ತು ಇನ್ನೊಬ್ಬನ ಸಹಾಯದಿಂದ ಹೀರನ ಹಣವನ್ನು ಕಸಕೊಂಡನು. ಹೀರನ ಕೈಯಲ್ಲಿದ್ದ ಹಣವು ಮೋಸದ ಹಣವಾಗಿದೆ ಯಾ ಕಳವಿನ ಹಣವಾಗಿದೆ ಎಂದು ಸಬ್ ಇನ್ಸ್‌ಪೆಕ್ಟರನು ಹೇಳಿ ಅವನ ಕೈಗೆ ಬೇಡಿ ಹಾಕಿ ಒದೆದು ಅವನ ಕೂಡೆ ಇದ್ದ ಹೆಂಗಸರನ್ನೂ ಕೋಣೆಯೊಳಗೆ ಮುಚ್ಚಿಟ್ಟು ಎಲ್ಲಾ ಹಣವನ್ನು ಕಸಕೊಂಡನಂತರ ಅವರನ್ನು ಹೋಗ ಬಿಟ್ಟನು. ಹೀರನು ೧೮ ರೂಪಾಯಿ ಸಾಲ ತೆಗೆದುಕೊಂಡು ಕಲ್ಕತ್ತೆಗೆ ಹೋಗಿ ಇಮಿಗ್ರೇಂಟ್ ಆಫೀಸರರ ಕೂಡೆ ತನ್ನ ಹಾಲಹವಾಲಗಳನ್ನು ಹೇಳಿಕೊಂಡನು. ಆಫೀಸರರು ಕೂಡ್ಲೇ ಸಬ್ ಇನ್ಸ್‌ಪೆಕ್ಟರನ ಮೇಲೆ ಎಟಾವ ಮೆಜಿಸ್ಟ್ರೇಟ ಕೋರ್ಟಿನಲ್ಲಿ ವ್ಯಾಜ್ಯ ದಾಕಲು ಮಾಡಿದರು. ಮೆಜಿಸ್ಟ್ರೇಟರು ತನಖಿ ನಡಿಸಿ ತಕ್ಕ ರುಜುವಾತು ಸಿಕ್ಕಿದ್ದರಿಂದ ಸೆಶ್ಶನ್ಸಿಗೆ ಕಮಿಟ್‌ಮಾಡಿದರು. ಸೆಶ್ಶನ್ಸ್ ಜಡ್ಜರು ಇದೇ ತಾ. ೧೮ರಲ್ಲು ಸಬ್ ಇನ್ಸ್‌ಪೆಕ್ಟರ್ ಜಾಫರಖಾನನಿಗೆ ೫ ವರ್ಷಗಳ ಸಜೆ ಮತ್ತು ೨೦೦ ರೂಪಾಯಿ ಜುಲುಮಾನೆ ಇತರ ಮೂವರು ಅಪಾದಿತರಲ್ಲಿ ಒಬ್ಬೊಬ್ಬನಿಗೆ ಐದೈದು ವರ್ಷಗಳ ಸಜೆ ಮತ್ತು ಐವತ್ತೈವತ್ತು ರೂಪಾಯಿ ಜುಲುಮಾನೆ ವಿದಿಸಿ ಜುಲುಮಾನೆಯ ಹಣದಿಂದ ರೂ. ೬೦೦ನ್ನು ಹೀರನಿಗೆ ಕೊಡಿಸಿದರು.

ಸ್ಯಾಲಕೋಟಿನ ಖಾಜಿ ಮುಹಿದ್ದಿನ್‌ಮುಲ್ಲನು ಸ್ಥಳೀಕ ಮೆಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಮಾಡಲ್ಪಟ್ಟಿರುವನು. ಈ ಮುಲ್ಲನು ಯಾವಾಗಲೂ ಈ ರೀತಿ ಜನರಿಗೆ ಬೋಧಿಸುತ್ತಿದ್ದನು. ಎಲ್ಲಾ ಹಿಂದೂಗಳನ್ನು ಮಹಮ್ಮದೀ ಮತಕ್ಕೆ ಸೇರಿಸಬೇಕು, ಸರಕಾರಕ್ಕೆ ಕಂದಾಯ ಕೊಡಬಾರದು, ಫರೆಂಗಿಗಳಿಗೆ ಸಲಾಂ ಮಾಡಬಾರದು, ಸರಕಾರಕ್ಕೆ ವಿರೋಧವಾಗಿ ಕಾದಾಡಿರಿ ಎಂಬದಾಗಿ ಬೋಧಿಸುತ್ತಿದ್ದುದರಿಂದ ವಿಚಾರಣೆಗೆ ಗುರಿಮಾಡಲ್ಪಟ್ಟಿರುವನು.

ರಾ| ಬಾಲಗಂಗಾಧರ ತಿಲಕರವರು ಸೆರಮನೆಯಿಂದ ಬಿಡಿಸಲ್ಪಟ್ಟರೆಂದು ಕಳೆದ ಸಂಚಿಕೆಯಲ್ಲಿ ತಿಳಿಸಿತ್ತಷ್ಟೆ. ಇವರು ತಾ. ೧೮ರಲ್ಲು ಪೂನೆಗೆ ತಲಪುತ್ತಲೇ ತಿಲಕರವರ ಗ್ರಾಮದ ಜನರೆಲ್ಲ ರೂಢಿಬೆಳಗ್ಗಿನಿಂದ ಸಾಯಂಕಾಲದ ವರೆಗೆ ತಿಲಕರವರ ಆಗಮನವನ್ನು ಕಾಯುತ್ತಾ ಇದ್ದರು. ಏನಾದರೂ ಗಲಿಬಿಲಿ ಆದೀತೆಂಬ ಭಯದಿಂದ ಪೋಲಿಸ್ ಆಫೀಸರರು ಪಟ್ಟಣವೆಲ್ಲಾ ತಿರುಗಾಡುತ್ತಿದ್ದರು. ತಿಲಕರವರ ಬಿಡುಗಡೆಯು ಬಹಳ ಗುಪ್ತವಾಗಿ ಮಾಡಲ್ಪಟ್ಟಿತು. ತಿಲಕರವರು ತಾ ೮ರಲ್ಲು ಮಂಡಲೆಯನ್ನು ಬಿಟ್ಟು ಮರುದಿನ ಬೆಳಗ್ಗೆ ರಂಗೂನಿಗೆ ತಲಪಿದರು. ಕೂಡ್ಲೇ ರಂಗೂನಿನಿಂದ ಮದ್ರಾಸಿಗೆ ಬರುತ್ತಿದ್ದ ಆರ್ ಐ. ಎಮ್. ಹಡಗಕ್ಕೆ ಅವರನ್ನು ಹತ್ತಿಸಿದರು ತಾ ೧೫ರಲ್ಲು ಹಡಗವು ಮದ್ರಾಸಿಗೆ ತಲಪಿತು. ತಾ ೧೫ರಲ್ಲು ಅವರನ್ನು ಪೋಲಿಸ್ ಪಹರೆ ಸಹಿತ ಪೂನೆಗೆ ಹೋಗುವ ಮೈಲ್ ಟ್ರೈನಿನಲ್ಲಿ ಹಾಕಿದರು. ಟ್ರೈನು ಪೂನೆಗೆ ಕೆಲವು ಮೈಲು ದೂರದಲ್ಲಿರುವ ಹರಿದಾಸಪುರ ಎಂಬಲ್ಲಿಗೆ ಬರುತ್ತಲೇ ತಿಲಕರವನ್ನು ಆಗ್ಗಾಡಿಯಿಂದ ಇಳಿಸಿದರು ಅಲ್ಲಿ ಅಸಿಸ್ಟಾಂಟ್ ಇನ್ಸ್‌ಪೆಕ್ಟರ್ ಜನರಲರವರೂ, ಸಿ ಐ ಡಿ ಇಲಾಖೆಯ ಮುಖ್ಯ ಆಫೀಸರರೂ ತಿಲಕರವರನ್ನು ಎದುರುಗೊಂಡು ಮೋಟೋರಿನಲ್ಲಿ ಕುಂಡ್ರಿಸಿ ತಾ ೧೬ನೇ ಬೆಳಿಗ್ಗೆ ೧ ಗಂಟೆಗೆ ಅವರ ಮನೆಗೆ ತಲಪಿಸಿದರು. ೨ನೇ ತಿಲಕರು ಬಿಡುಗಡೆಯಾದ ವಾರ್ತೆಯು ತಿಲಕರವರು ಪಟ್ಟಣಕ್ಕೆ ತಲಪಿನಂತರದ ಮಾತ್ರ ತಿಳಿದುಬಂತು ಪತ್ರ ಪ್ರತಿನಿಧಿಗಳಿಗೆ ಭೇಟಿಕೊಡಲು ತಿಲಕರವರು ಸದ್ಯಾ ನಿರಾಕರಿಸಿರುವರು.

ಪ್ರಿವಿಕೌನ್ಸಿಲಿನ ಮುಂದೆ ವಿಚಾರಣೆಗೆ ಬಾಕಿಯಲ್ಲಿರುವ ಮೊಕದ್ದಮೆಯ ಸಂಬಂಧ ವಕೀಲರಿಗೆ ತಕ್ಕ ಸಲಹೆ ಕೊಡುವರೆ ತಿಲಕರವರು ಬೇಗನೇ ಇಂಗ್ಲಾಂಡಿಗೆ ಹೋಗುವರೆಂದೂ ಅಲ್ಲಿಂದ ಜರ್ಮನಿಗೆ ಹೋಗಿ ಕೆಲವು ವರ್ಷ ಅಲ್ಲಿಯೇ ಇದ್ದು ಉಳಿದ ಜೀವಕಾಲದಲ್ಲಿ ಗ್ರಂಥಗಳನ್ನು ಬರೆಯಲು ನಿರ್ಣಯಿಸಿರುವರೆಂದೂ "ಎಡ್ವೊಕೇಟ್ ಅಫ್ ಇಂಡಿಯಾ" ಎಂಬ ಪತ್ರದಲ್ಲಿ ಪ್ರಕಟವಾಗಿದೆ ಮಂಡಿಲಾನೆಯಲ್ಲಿರುವಾಗ ತಿಲಕರವರು ಬರೆದ ಮೂರು ಪುಸ್ತಕಗಳು ಪೂನೆಯಲ್ಲಿ ಪ್ರಕಟಿಸಲ್ಪಡುವುವಂತೆ.

ಕಲ್ಕತ್ತೆಗೆ ಸೇರಿದ ಜೋರಬಾಗನ್ ಪೋಲಿಸ್ ಸ್ಟೇಶನಿನಲ್ಲಿ ಲಾಕಪ್ಪಿನಲ್ಲಿದ್ದ ಧರೇಂದ್ರನಾದ ದತ್ತನೆಂಬ ಬಂಗಾಳಿ ಯುವಕನು ಉಟ್ಟುಕೊಂಡಿದ್ದ ಧೋತ್ರವನ್ನು ಕಿಡಿಕಿಯ ಸರಳಿಗೆ ಕಟ್ಟಿ ಕುತ್ತಿಗೆಗೆ ನೇಣು ಹಾಕಿ ಸ್ವಗಾತಮಾಡಿಕೊಂಡಿರುವನು ಅವನ ಕಾಲು ನೆಲದಿಂದ ೧೮ ಅಂಗುಲ ಎತ್ತರಕ್ಕೆ ಇತ್ತು

ಇದೇ ತಾ ೬ರಲ್ಲು ವ್ಯಾಸರಾಯ ಪ್ರಭುಗಳ ಜನನ ದಿನಾಚರಣೆಯ ಜ್ಞಾಪಕಾರ್ಥವಾಗಿ ಅವರಿಗೆ ಮಂಗಲವನ್ನು ಬಯಸುವರೆಯೂ ಅವರು ಹಿಂದೂಸ್ಥಾನದಲ್ಲಿ ಕಾರ್ಯಭಾರಮಾಡಲಿಕ್ಕಿರುವ ಐದು ವರ್ಷದ ಅವಧಿಯನ್ನು ಇನ್ನೆರಡು ವರ್ಷಗಳಿಗೆ ಹೆಚ್ಚಿಸುವರೆ ಸ್ಟೇಟ್ ಸೆಕ್ರಟರಿಗಳವರನ್ನು ಕೇಳಿಕೊಳ್ಳುವರೆಯೂ ಸಿಮ್ಲದಲ್ಲಿ ರಾಜ ಹರ್ಮಾನ್ ಸಿಂಘರ ಅಧ್ಯಕ್ಷತೆಯಲ್ಲಿ ಒಂದು ಸಭೆ ಕೂಡಿತು. ಇಂತಹ ಸಭೆಗಳು ಬಂಕಿಪುರ, ಲಾಹೋರು ಮೊದಲಾದ ಸ್ಥಳಗಳಲ್ಲಿಯೂ ಕೂಡಿ ಬಂದು ಪ್ರಭುಗಳವರ ಅವಧಿಯನ್ನು ೨ ವರ್ಷಗಳಿಗೆ ಹೆಚ್ಚಿಸಬೇಕೆಂದು ಸ್ಟೇಟ್ ಸೆಕ್ರಟರಿಯವರನ್ನು ಕೇಳಿಕೊಳ್ಳಬೇಕೆಂಬ ನಿರ್ಣಯವನ್ನು ಮಾಡಿಕೊಂಡರು.

ಮಕ್ಕಕ್ಕೆ ಪ್ರಯಾಣಮಾಡುವ ಮುಸಲ್ಮಾನ ಯಾತ್ರಿಕರ ಕಾಲವು ಪುನಃ ಪ್ರಾರಂಭವಾಗಿರುವುದು. ಮುಂಬಾಯಿಯಲ್ಲಿ ತಾ. ೧೯ರಲ್ಲು ೧೫೨೮ ಯಾತ್ರಿಕರು ಹಡಗ ಹತ್ತಿದರು.

ಮುಂಬ್ಬಾಯಲ್ಲಿ ಹತ್ತೀ ಮೂಟೆಗಳಿಗೆ ಬೆಂಕಿ ಬಿದ್ದು ಸುಟ್ಟುಹೋದ ಕಾರಣ ಹತ್ತಿಯ ಕ್ರಯವು ಈಗ ಬಹಳವಾಗಿ ಏರಿರುವುದು. ಮಣಕ್ಕೆ ೯ ರೂಪಾಯಿಗೆ ಮಾರುತ್ತಿದ್ದ ಹತ್ತಿಗೆ ರೂ. ೨೧ ಕ್ರಯವಾಗಿದೆ.

ರಾಜದ್ರೊಹ ಪಿತೂರಿ ಮೊಕದಮೆಯಲ್ಲಿ ಮಾಫಿಸಾಕ್ಷಿಯಾಗಿ ಮಾಡಲ್ಪಟ್ಟಿದ್ದ ನರೇಂದ್ರನಾಥ ಸೆನ್ ಎಂಬವನು ಇದೇ ತಾ. ೩೦ರಲ್ಲು ಚಿತಗೊಂಗಿನ ಸದರಘಾಟ್ ಬೀದಿಯಲ್ಲಿ ಕಸ್ಟಮ್ ಆಫೀಸಿನ ಸತ್ಯೇಂದ್ರನಾದ ಸೆನ್ ಎಂಬವನೊಡನೆ ಹೋಗುತ್ತಿರುವಾಗ ಪೋಸ್ಟು ಆಫೀಸಿನ ಸಮೀಪ ಯಾರೋ ಹಿಂದಿನಿಂದ ಬಂದಂತೆ ಸಪ್ಪಳಾಯಿತು. ನರೇಂದ್ರನು ತಿರುಗಿಕೊಂಡು ನೋಡಲು ಒಬ್ಬ ಮನುಷ್ಯನು ಅವನಿಗೆ ಗುರಿ ಇಟ್ಟಿದ್ದನು. ನರೇಂದ್ರನು ಕೂಡಲೆ ಹಾರಿ ಬಿದ್ದನು. ಆದುದರಿಂದ ಆ ಗುಂಡಿನ ಏಟು ನರೇಂದ್ರನಿಗೆ ತಪ್ಪಿ ಸತ್ಯೇಂದ್ರನಿಗೆ ಬಿದ್ದ ಕೂಡ್ಲೆ ಮೃತಪಟ್ಟನು. ನರೇಂದ್ರನು ಒಂದು ಇಟಲಿ ಮಿಠಾಯಿ ಅಂಗಡಿ ನುಗ್ಗಿದನು. ನುಗ್ಗುವಾಗ ಪುನಃ ಒಂದು ಗುಂಡು ಹಾರಿಸಲ್ಪಟ್ಟಿತು. ಆ ಗುಂಡೂ ನರೇಂದ್ರನಿಗೆ ತಪ್ಪಿ ಅಂಗಡಿಗೆ ಬಿತ್ತು. ದಾರಿಯಲ್ಲಿ ಅಡ್ಡಾಡುತ್ತಿದ್ದ ಜನರು ಘಾತುಕನಿಗೆ ಹೆದರಿ ಅವನನ್ನು ಹಿಡಿಯಲು ಭಯಪಟ್ಟರು. ಘಾತುಕರು ಓಡಿಹೋದರು. ನರೇಂದ್ರನು ಕೆಲವು ದಿವಸಗಳ ಹಿಂದೆ ಮಾತ್ರ ಚಿತಗೊಂಗಿಗೆ ಬಂದಿದ್ದನು. ಅವನನ್ನು ಕೊಲ್ಲಲೆತ್ನಿಸಿದ್ದು ಇದು ಎರಡನೇ ಸಾರಿ.

ದಕ್ಷಿಣ ಹಿಂದೂಸ್ಥಾನ

ಮದ್ರಾಸ್ ಸಂಸ್ಥಾನದ ಕೆಲವು ಜಿಲ್ಲೆಗಳಲ್ಲಿ ಕಳ್ಳ ನಾಣ್ಯಗಳ ಚಲಾವಣೆಯು ನಡಿಯುತ್ತಿದೆಂದು ತಿಳಿದು ಬಂದಿದೆ. ಕಳ್ಳ ನಾಣ್ಯಗಳನ್ನು ಮಾಡುವವರೇ ಇಷ್ಟು ಇಂತಹ ಹೇರಳ ನಾಣ್ಯಗಳನ್ನು ಬೆಳ್ಳಿಯಂತಿರುವ ಒಂದು ಲೋಹದಿಂದ ಮಾಡುತ್ತಿರುವರು. ಬೆಳ್ಳಿಯ ನಾಣ್ಯ ಮತ್ತು ಈ ಕಳ್ಳ ನಾಣ್ಯಕ್ಕೆ ಇರುವ ಭೇದವನ್ನು ಸಾಧಾರಣ ಜನರಿಂದ ಕಂಡುಕೊಳ್ಳುವುದಕ್ಕೆ ಅಸಾಧ್ಯವಾಗುವಷ್ಟು ಚಮತ್ಕಾರದಿಂದ ಇಂತಹ ನಾಣ್ಯಗಳು ನಿರ್ಮಿಸಲ್ಪಟ್ಟಿರುವವು. ತಿರುಚಿನಾಪಳ್ಳಿಯಲ್ಲಿ ಒಬ್ಬನ ಕೂಡೆ ಎರಕ ಹೊಯ್ದ ಇಂತಹ ೭೫೦ ನಾಣ್ಯಗಳೂ, ರೂಪಾಯಿಗಳನ್ನು ಮಾಡುವ ಇಪ್ಪತ್ತು ಅಚ್ಚುಗಳೂ ದೊರಕಿರುವವು. ಸ್ಥಳೀಕ ಪೋಲೀಸಿನವರು ಅವನನ್ನು ಕೈದು ಮಾಡಿರುವರು. ಮದ್ರಾಸಿನ ಒಬ್ಬ ಮಹಮ್ಮದೀಯನ ಕೈ ಈ ಕೆಲಸದಲ್ಲಿ ದೆಂಬ ಅನುಮಾನವಿದೆ

ಮದ್ರಾಸ್ ಸಂಸ್ಥಾನದಲ್ಲಿ ಬಹುಮೂತ್ರ ರೋಗದಿಂದ ಸಾಯುವವರ ಸಂಖ್ಯೆಯು ಅಧಿಕವಾಗುತ್ತಿರುವುದರಿಂದ ಮದ್ರಾಸ್ ಸರ್ಕಾರದವರು ಈ ಬಗ್ಗೆ ವಿಚಾರಿಸುವದೆ ಒಂದು ಕಮಿಟಿಯನ್ನು ಏರ್ಪಡಿಸುವರೆಂದು ತಿಳಿಸಿತ್ತಷ್ಟೆ. ಈ ಕಮಿಟಿಯ ಖರ್ಚಿಯ ಬಗ್ಗೆ ಒಬ್ಬ ಭಾರತೀಯ ಗೃಹಸ್ಥರು ೫೦,೦೦೦ ರೂಪಾಯಿಗಳನ್ನು ಮದ್ರಾಸ್ ಸರಕಾರಕ್ಕೆ ಕೊಟ್ಟಿರುವರು. ವಿಚಾರ ನಡಿಸುವರೆ ಡಾಕ್ಟರ್ ಎಸ್. ಡಬ್ಲ್ಯು. ಪೆಟರ್‌ಸನ್ ಎಂಬ ಪ್ರಖ್ಯಾತ ಡಾಕ್ಟರರು ನೇಮಿಸಲ್ಪಟ್ಟಿರುವರು. ಇವರಿಗೆ ವರ್ಷಕ್ಕೆ ೮೦೦ ಪವನು ಸಂಬಳವು ಕೊಡಲ್ಪಡುವುದು

ಮೈಸೂರು ಸಂಸ್ಥಾನದ ಎಂಟು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿಯೂ, ದೊಡ್ಡ ಬಳ್ಳಾಪುರ, ನಂಜನಗೂಡು, ಶ್ರೀರಂಗ ಪಟ್ಟಣ, ಹೊಳೆನರಸೀಪುರ, ದಾವಣಗೆರೆ ಮೊದಲಾದ ಸ್ಥಳಗಳಲ್ಲಿಯೂ ಇದೇ ಜುಲಾಯಿ ತಾ ೧ರಿಂದ ಬಲತ್ಕಾರ ಬಾಲವಿದ್ಯಾಭ್ಯಾಸ ವಿಷಯ ಜಾರಿಗೆ ತರಲ್ಪಡುವದು.

ಚಕ್ರವರ್ತಿಯವರ ಜನ್ಮ ದಿನದ ಬಿರುದಾವಳಿಗಳ ಪಟ್ಟಿಯು ಪ್ರಕಟಿಸಲ್ಪಟ್ಟಿರುವದು. ಮದ್ರಾಸ್ ಹ್ಯಾಕೋರ್ಟಿನ ಜಡ್ಜರುಗಳಲ್ಲೊಬ್ಬರಾದ ಮೈಸೂರು ಸಂಸ್ಥಾನದ ಚೀಫ್ ಜಡ್ಜರಾಗಿ ನೇಮಿಸಲ್ಪಟ್ಟ ಬೆನ್ಸನ್ ಮಿಲ್ಲರವರಿಗೆ ನೈಟ್ಸ್ ಬ್ಯಾಚಲರ್ ಎಂಬ ಬಿರುದು ದೊರಕಿರುವುದು. ಮದ್ರಾಸ್ ಕೌನ್ಸಿಲಿನ ಮೆಂಬರರಾಗಿರುವ ಸರ್ ಹರೊಲ್ಡ್ ಸ್ಟುವಾರ್ಟರವರಿಗೆ ಕೆ. ಸಿ. ಎಸ್. ಐ, ಮದ್ರಾಸ್ ಲಾ ಕಾಲೇಜಿಯ ಪ್ರಿನ್ಸಿಪಾಲರಾಗಿರುವ ಮಿ| ಆರ್ಡರ್ ಚೇಂಬರಿನ್ ಕೈಸರ್ ಹಿಂದ್ ಚಿನ್ನದ ಪದಕ, ಮದ್ರಾಸ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಾಗಿರುವ ಮಿ| ಬಜುಲ್ಲ ಸಾಹೇಬರವರಿಗೆ ಖಾನ್ ಸಾಹೇಬ್, ಮೆಡಿಕಲ್ ಕಾಲೇಜಿನ ಅಸಿಸ್ಟಾಂಟ್ ಪ್ರೊಫೆಸರರಾಗಿರುವ ಡಾ| ಜಿ ರಾಮರಾಯರಿಗೆ ರಾಯಸಾಹೇಬ ಎಂಬ ಬಿರುದುಗಳು ದೊರಕಿರುವವು

ದಕ್ಷಿಣ ಕನ್ನಡ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಕ್ರಮ ಅರ್ಜಿ ನಂಬ್ರ 1|14

ಕಾತರೀನಾ ಆಂಬ್ರು—ಪ್ರಭು [illegible]
೧ನೇ—ಜವಾ [illegible] ಅರ್ಜಿದಾರಳು.
ಜೆಸ್ಸಿಬಾ [illegible]—ಮಂಗ್ಳೂರು
[illegible]

ನನಿ ಬಿಕ್ಕರದಲ್ಲಿ ಕಳೆದ ೧೯೧೧ನೇ ಇಸವಿ ಮೇ ತಾರೀಕು ೧೯ರಲ್ಲು ಮೃತಪಟ್ಟ ಶಾಂತಾ ಬೆಂಜಮಿನ್ ಆಸಂಗ ಎಂಬವರ ಸಾಲಗಳನ್ನು ವಸೂಲು ಮಾಡುವರೆ ಸರ್ಟಿಫಿಕೇಟು ಅಪೇಕ್ಷಿಸಿ ಮೃತನ ಮಗಳಾದ ಮೇಲ್ಕಂಡ ಅರ್ಜಿದಾರಳು [illegible] ಜುಲಾಯಿ ತಾರೀಕಿಗೆ ಇಟ್ಟಿರುತ್ತದೆ. ಆ ಕುರಿತು ಯಾರೊಬ್ಬರ ಆಕ್ಷೇಪವಿದ್ದರೆ ಅವನ್ನು ನಮೂದು ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು

ಮಂಗಳೂರು
20-6-1914.

P D'Souza
Pleader for Petitioner

ನಾರಾವಿ:—ಮೂಡಬಿದ್ರೆಯಿಂದ ನಾರಾವಿಗೆ ಬರುವ ರಾಜರಸ್ತೆಯನ್ನು ೧೯೧೧ನೇ ಇಸವಿಯ ವರೇಗೆ ಕಂಟ್ರಾಕ್ಟಿಗೆ ವಹಿಸಿಕೊಂಡವರು ಇಲ್ಲಿಯ ಪೇಟೆಯ ಅಂತ್ಯದಲ್ಲಿರುವ ಬೋರ್ಡು ಶಾಲೆಯ ವರೆಗೆ ಸರಿ ಮಾಡಿದ್ದರು. ಗತಿಸಿದ ೧೯೧೨—೧೩ನೇ ಇಸವಿಗಳಲ್ಲಿ ರಸ್ತೆಯು ಪೇಟೆಯನ್ನು ಪ್ರವೇಶಿಸುವಲ್ಲಿಯು ಅಂಗಡಿಯು ಎದುರಿನ ೧೪ನೇ ಮೈಲುಕಲ್ಲಿನ ವರೇಗೆ ಮಾತ್ರ ಸರಿಮಾಡಿ ಹಿಂತಿರುಗಿರುವರು. ಹೀಗಾದ್ದರಿಂದ ಇಲ್ಲಿಯ ಶೆಟ್ಟಿಗಳ ಪೇಟೆಗೂ ಗೌಡಸಾರಸ್ವತರ ಪೇಟೆಗೂ ಮಧ್ಯ ಗುಂಡುಕಲ್ಲುಗಳಿಂದ ನಿಬಿಡವಾದ ಸುಮಾರು ೧೦ ಅಡಿ ಅಗಲದ ತೋಡು ಪ್ರಯಾಣಿಕರನ್ನೂ ನಿವಾಸಿಕರನ್ನೂ ಬಹಳ ಕಷ್ಟನಷ್ಟಗಳಿಗೆ ಗುರಿ ಮಾಡುತ್ತದೆ. ಆದ್ದರಿಂದ ಈ ವರ್ಷವಾದರೂ ಸರಕಾರದವರು ಮುಂಚಿನಂತೆ ಮೈಲಿಕಲ್ಲಿನಿಂದ ಒಸ್ಥಾರೆ ೩ ಯಾ ೩ ಫರ್ಲಂಗ್ ದೂರವಿರುವ ಬೋರ್ಡು ಶಾಲೆಯ ವರೇಗೆ ರಸ್ತೆಯನ್ನೂ ಸರಿಪಡಿಸಿ ನಿವಾಸಿಕರಿಗಿವರಿಂದುಂಟಾಗುವ ಕಷ್ಟನಷ್ಟಗಳನ್ನು ಪರಿಹರಿಸಬೇಕಾಗಿ ಹಾರೈಸುತ್ತೇವೆ.

ಪುತ್ತೂರು—ಇದೇ ತಿಂಗಳ ತಾ. ೨೨ನೇ ಸೋಮವಾರ ಶ್ಯಾ. ೪ ಗಂಟೆ ಸಮಯ ಇಲ್ಲಿಯ ಗವರ್ನಮೆಂಟ ಹುಡುಗಿಯರ ಶಾಲೆಯಲ್ಲಿ ಮಹಾರಾಜರ ಜನ್ಮದಿನಾಚರಣೆಯು ಬಹಳ ವಿಜೃಂಭಣೆಯಿಂದ ಜರಗಿತು. ಶಾಲಾ ಬಾಲಕ ಬಾಲಕಿಯರು ಆಟಗಳನ್ನೂ, ಹಾಡುಗಳನ್ನೂ ಹಾಡಿ ತೋರಿಸಿದ ನಂತರ ಇಲ್ಲಿಯ ಡಿವಿಜನಲ್ ಆಫೀಸರರು ಶಾಲಾ ಮಕ್ಕಳಲ್ಲಿ ಹಲವರಿಗೆ ಇನಾಮುಗಳನ್ನು ಹಂಚಿದರು.

ಈ ಜಿಲ್ಲೆಯ ಅನೇಕ ಭಾಗಗಳಲ್ಲಿ ವಿಷಕರವಾದ ಹಣ್ಣು ಮತ್ತು ಎಲೆಗಳನ್ನು ಮೀನುಗಳಿಗೆ ಹಿಡಿಯುವುದಕ್ಕೆ ಪ್ರಯೋಗಿಸುವ ಪದ್ಧತಿ ಇದೆಯಷ್ಟೆ. ಈ ರೀತಿ ಹಿಡಿದ ಮೀನು ಮನುಷ್ಯರ ಆಹಾರಕ್ಕೆ ಸಹಾ ಯೋಗ್ಯವಲ್ಲವೆಂದೂ, ಈ ವಿಷ ಹಾಕಿದ ನೀರನ್ನು ಕುಡಿಯುವುದರಿಂದ ದನಕರುಗಳಿಗೆ ಅಪಾಯ ಉಂಟಾಗುತ್ತದಾದ್ದರಿಂದ ಈ ವಿಷ ಹಾಕಿ ಮೀನು ಹಿಡಿಯುವವರನ್ನು ಕಂಡವರು ಪೋಲೀಸಿಗೆ ರಿಪೋರ್ಟು ಮಾಡಿ ಶಿಕ್ಷೆಗೆ ಗುರಿಪಡಿಸಬೇಕೆಂದೂ ಗ್ರಾಮ ಉದ್ಯೋಗಸ್ಥರು ಪ್ರಕಟಿಸಿರುವರು.

ವಿಟ್ಲ —ಕಳೆದ ಸೋಮವಾರ ನಮ್ಮ ಚಕ್ರವರ್ತಿಗಳಾದ V ನೇ ಜೋರ್ಜ ದೊರೆಗಳವರ ಜನ್ಮ ದಿನವಾದುದರಿಂದ ಇಲ್ಲಿಯ ಅರಸುಗಳಾದ ಮ| ರಾ| ರಾ| ರವಿವರ್ಮ ನರಸಿಂಹ ರಾಜರವರು ಹುಡುಗರ ಮತ್ತು ಹುಡುಗಿಯರ ಶಾಲೆಗೆ ಸಂದರ್ಶಿಸಿ ಸಕ್ಕರೆ ಮಿಠಾಯಿ ಹಂಚಿದರು. ಅದಲ್ಲದೆ ವಿಟ್ಲ ಶ್ರೀನಿವಾಸರಾಯರ ಪಿಟೀಲು ಗಾಯನವು ನಡೆಯಿತು.

ಇಲ್ಲಿಯ ಪರಸ್ಪರ ಸಹಾಯಕ ಸಂಘದ ೨ನೇ ವರ್ಷದ ಜನರಲ್ ಮೀಟಿಂಗ್ ಎಂಬ ಸಭೆಯು ಈ ವರೆಗೆ ಜರಗದೆ ಇದ್ದದ್ದರಿಂದ ಬಹಳ ವಿಷಾದ ಪಡುತ್ತೇವೆ. ಈ ಸಭೆಯು ಯಾವಾಗ ಜರಗುತ್ತದೊ ಮತ್ತು ನಮ್ಮ ಕೆಲವು ಕಷ್ಟಗಳು ಯಾವಾಗ ನಿವಾರಣೆಯಾಗುವದೊ ಎಂಬದಾಗಿ ಕಾದುಕೊಂಡಿರುತ್ತೇವೆ

ಸುಳ್ಯ ಮಡಿಕೇರಿಯಿಂದ ಮಂಗಳೂರಿಗೆ ಹೋಗುವ ಟಪ್ಪಾಲು ಇದೇ ತಾ ೧೫ರಲ್ಲು ತಕ್ಕ ಸಮಯಕ್ಕೆ ಬಾರದೆ ಸಂಪಾಜೆಯಿಂದ ಪುತ್ತೂರು ವರೆಗಿನ ಪೋಸ್ಟು ಮಾಸ್ತರರೂ ರನ್ನರರೂ ಊಟ ಉಪಚಾರ ಬಿಟ್ಟು ಕಾಯುತ್ತಾ ಇದ್ದು ಕಡೆಗೆ ಎಂದಿನಂತೆ ಮರುದಿನ ಟಪ್ಪಾಲು ಬಂದಿತು. ಹೀಗೆ ಒಂದು ದಿನ ಟಪ್ಪಾಲು ಬಾರದಿರಲು ಕಾರಣವೇನೋ ತಿಳಿಯದು.

ಇಲ್ಲಿಯ ಪೋಸ್ಟಾಫೀಸಿನಿಂದ ೪೧ ಗ್ರಾಮಗಳಿಗೆ ಕಾಗದ ಬಟ್ವಾಡೆಯಾಗತಕ್ಕದಿದೆ. ಈ ಗ್ರಾಮಗಳು

ಬಹಳ ಕಾಡು ಪ್ರದೇಶವಾಗಿರುವುದರಿಂದ ಬೇಸಿಗೆ ಕಾಲದಲ್ಲಿ ಹಳ್ಳಿನಾಡಿನವರಿಗೆ ಟಪ್ಪಾಲು ಸರಿಯಾಗಿ ಬಟವಾಡೆಯಾಗುವುದಿಲ್ಲ. ಈ ಮಳೆಗಾಲದಲ್ಲಂತೂ ಹೊಳೆಗಳಲ್ಲಿ ನೀರು ತುಂಬುವುದರಿಂದ ಈಗ ಇರುವ ೩ ಬಟವಾಡೆ ಪೇದೆಯರಿಂದ ಕಾಗದ ಬಟವಾಡೆ ಮಾಡಲು ಆಗುವಂತಿಲ್ಲ. ಈ ವಿಷಯವನ್ನು ಸರಕಾರದವರು ಚಿತ್ತಕ್ಕೆ ತಂದು ಮಳೆಗಾಲವಲ್ಲಾದರೂ ಇಲ್ಲಿಯ ಗ್ರಾಮ ಬಟವಾಡೆ ಪೋಸ್ಟ್ ಮ್ಯಾನರ ಸಂಖ್ಯೆಯನ್ನು ಹೆಚ್ಚಿಗೆ ಮಾಡಬೇಕೆಂದು ವಿನಂತಿ ಇದೆ

ವಿದ್ಯೆಯಲ್ಲಿ ಹಿಂದುಳಿದ ಜಾತಿಯವರಾದ ದಕ್ಷಿಣ ಕನ್ನಡ ಜಿಲ್ಲೆಯ ತುಳು ಮತ್ತು ಕನ್ನಡ ಗೌಡುಗಳ ಜಾತಿಯ ಹುಡುಗರಿಗೆ ಎಲಿಮೆಂಟರಿ ಶಾಲೆಗಳಲ್ಲಿ ಶಾಲಾ ಫೀಸು ಮಾಫಿ ಎಂತ ದಕ್ಷಿಣ ಕನ್ನಡ ಜಿಲ್ಲಾ ಗಜೆಟಿನಲ್ಲಿ ಪ್ರಕಟವಾಗಿದೆಯಾದರೂ ಅಪ್ಪರ್ ಪ್ರೈಮರಿ ಶಾಲೆಗಳಲ್ಲಿ ಈ ವಿದ್ಯಾರ್ಥಿಗಳಿಂದ ಫೀಸು ವಸೂಲಾಗುವುದರ ಕಾರಣ ವೇನೋ ತಿಳಿಯದು ಅಪ್ಪರ್ ಪ್ರೈಮರಿ ಶಾಲೆಗಳು ಕೂಡಾ ಎಲಿಮೆಂಟರಿ ಶಾಲೆಗಳ ಲೆಕ್ಕಕ್ಕೆ ಸೇರುವುದರಿಂದ ಇಂಥಾ ಬಾಲಕರಿಂದ ಶಾಲಾ ಫೀಸು ವಸೂಲುಮಾಡದಂತೆ ಸರಕಾರದವರು ನಿಗಾಕೊಡುವುದು ಅಗತ್ಯವಾಗಿರುವುದು. ಶಾಲಾ ಫೀಸು ವಸೂಲಾಗುವುದರಿಂದ ಫೀಸು ಕೊಡಲಶಕ್ತರಾದ ಈ ಜಾತಿಯ ಅನೇಕ ಬಡ ಬಾಲಕರು ಮನೆಯಲ್ಲೇ ಕಾಲಹರಣ ಮಾಡುತ್ತಿರುವರು.

~~~~~

ಮಂಜೇಶ್ವರ -ಮಂಜೇಶ್ವರ ಮಾಗಣೆ ಉದ್ಯಾವರ ಗ್ರಾಮದಲ್ಲಿ ಬಂದೆರಡು ಮನೆಗಳಿಗೆ ಕಳ್ಳರು ಕನ್ನ ಕೊರೆದಿರುವರು. ಮನೆಯವರಿಗೆ ಎಚ್ಚರಿಕೆ ಆದುದರಿಂದ ಏನೂ ಕಳವು ಹೋಗಲಿಲ್ಲ

ತಾ ೨೨ನೇ ಸೋಮವಾರ ದಿವಸ ಸಾಯಂಕಾಲ ಸುಮಾರು ೭॥ ಘಂಟೆ ಸಮಯದಲ್ಲಿ ಕೇಡಿ ಬೊಗ್ಗ ಎಂಬವನು ಉದ್ಯಾವರ ಗ್ರಾಮದ ಬ್ಯಾರಿ ಮಾಪಿಳ್ಳೆಯ ಮನೆಯಲ್ಲಿ ಇರುವದಾಗಿ ಮಂಜೇಶ್ವರ ಸಬ್ ಇನ್ಸ್ಪೆಕ್ಟರರು ವರ್ತಮಾನ ಕೇಳಿದ ಕೂಡಲೇ ಏಳೆಂಟು ಪೋಲೀಸಿನವರ ಸಮೇತ ಇನ್ಸ್ಪೆಕ್ಟರರು ಕೂಡಾ ಸದರಿ ಮಾಪಿಳ್ಳೆಯ ಮನೆಗೆ ಬರುವದರೊಳಗೆ ಕೇಡಿ ಬೊಗ್ಗ ತನ್ನ ಒಂದು ಕೊಡೆಯನ್ನು ಸಹಾ ಬಿಟ್ಟು ತಪ್ಪಿಸಿ ಪಲಾಯನ ಮಾಡಿರುತ್ತಾನೆ ಮರುದಿನ ಬೇಗ್ಯ ಬೊಗ್ಗ ತಲಪಾಡಿಯಲ್ಲಿ ಇದ್ದಾನೆ ಎಂಬ ವರ್ತಮಾನ ಉಂಟು. ಕೇಡಿ ಬೊಗ್ಗನ ಕೆಲವು ಕೇಡಿ ಸ್ನೇಹಿತರು ಉದ್ಯಾವರದಲ್ಲಿ ಇರುತ್ತಾರಾಗಿ ತಿಳಿದು ಬರುತ್ತದೆ

~~~~~

ಬೊಳ್ಮ. ಇದೇ ಕಳೆದ ಏಪ್ರಿಲ್ ತಿಂಗಳಲ್ಲಿ ಮಿಶ್ಯನ್ ಮುದ್ದೆಯಾಗಿ ತನ್ನ ಪ್ರಾಕ್ಸು ವಕ್ಕಲು ಮುದ್ದೆಯಾಲಿ ಹಮ್ಮದೆ ಬ್ಯಾರಿ ಮೇಲೆ ಮಂಗಳೂರು ತಾಲೂಕು ಸ್ಪೇಶನರಿ ಮೇಜಿಸ್ಟ್ರೇಟರವರ ಕೋರ್ಟಿನಲ್ಲಿ ದಾಕಲುಮಾಡಿದ ಕೆಲೆಂಡರ್ ನಂಬ್ರ 130/1914ನೇ ಮೊಕದಮೆಯಲ್ಲಿ ಮುದ್ದೆಯಾಲಿ ಹಮ್ಮದೆ ಬ್ಯಾರಿಗೆ ಇಪ್ಪತ್ತು ರೂಪಾಯಿ ಜುಲುಮಾನೆಯಾಗಿತ್ತು. ಮುದ್ದೆಯಾಲೆಯು ಮಂಗಳೂರು ತಾಲೂಕು ಹೆಡ್ ಕ್ವಾರ್ಟರ್ಸ್ ಡಿಪ್ಯೂಟಿ ಮೇಜಿಸ್ಟ್ರೇಟರವರಲ್ಲಿ ಅಪೀಲುಮಾಡಿಕೊಂಡಲ್ಲಿ ಹಮ್ಮದೆ ಬ್ಯಾರಿ ನಂಬ್ರವು ಗುಣವಾಗಿ ಜುಲುಮಾನೆ ಐವಜು ವಾಪಾಸು ಸಿಕ್ಕುವ ಹಾಗಾಯಿತು.

—o—

ಕಾಪು: —ಇತ್ತಲಾಗೆ ಅಸ್ಪಾಸಿನ ಶಾಲೆಗಳಿಗೆ ಪರೀಕ್ಷೆಗೋಸ್ಕರ ಬಂದಿದ್ದ ಉಡುಪಿ ರೇಂಜು ಸ್ಕೂಲುಗಳ ಸ. ಅ. ಇನ್ಸ್ಪೆಕ್ಟರ ರಾ। ಯು ಮಂಗೇಶರಾಯರು ಇಲ್ಲಿಯ ಪಂಚಮರ ಜಾತಿಯ ೨೫ ಮಕ್ಕಳಿಗೆ ಮಳೆಗಾಲದ ಉಪಯೋಗದ ಬಗ್ಗೆ ತಮ್ಮ ಸ್ವಂತ ಕೈಯಿಂದ ೨೫ ಪಾಲೆ ಕೊಡೆಗಳನ್ನು ಧರ್ಮಾರ್ಥವಾಡಿದ್ದು ಕೇಳಿ ತುಂಬಾ ಸಂತೋಷಿಸಬೇಕಾಗಿದೆ. ಆದರೆ ಸದರಿ ಮಕ್ಕಳು ಯೋಗ್ಯವಾದ ಕಷ್ಟೋಣದಲ್ಲಿರದೆ ಹಾಳು ಬಿದ್ದ ಕಟ್ಟೋಣದಲ್ಲಿ ಇರುವ ಸಂಗತಿಯೂ ನಮ್ಮ ಮಾನ್ಯ ಇನ್ಸ್ಪೆಕ್ಟರವರು ನಿಗಾ ಕೊಡದೆ ಇರಲಾರರೆಂದು ನಂಬುವೆವು

ಮ. ರಾ ರಾ ಇ ಇನ್ಸ್ಪೆಕ್ಟರವರಾದ ಉಳ್ಳಾಲ ಮಂಗೇಶರಾಯರು ಇಲ್ಲಿಯ ಬೋರ್ಡು ಕನ್ನಡ ಶಾಲೆಯ ಮಕ್ಕಳನ್ನೂ, ಪಂಚಮರ ಶಾಲೆಯ ಮಕ್ಕಳನ್ನೂ ಕರಕೊಂಡು ಇಲ್ಲಿಯ ದೀಪಸ್ತಂಭಕ್ಕೆ ಹೋಗಿ ಅದರ ವಿಷಯವಾಗಿ ಮಕ್ಕಳಿಗೆ ಬಂದು ಪಾಠವನ್ನು ಕೊಟ್ಟಿರುವರು.

~~~~~

ಬೋಳಾರ —ಮುನ್ಸಿಪಾಲ್ ಬೋರ್ಡಿಗೆ ಸೇರಿದ ಬೋಳಾರ ಎಲಿಮೆಂಟರಿ ಶಾಲೆಯಲ್ಲಿ ವೈಸರಾಯರವರ ಜನ್ಮದಿನೋತ್ಸವವು ಈ ದಿವಸ ಬೆಳಿಗ್ಗೆ ಘಂಟೆ ೧೦ ರಿಂದ ಮಧ್ಯಾಹ್ನ ಘಂಟೆ ೧೨ ವರೆಗೆ ಬಹಳ ವಿಜೃಂಭಣೆಯಿಂದ ನಡೆಸೋಣಾಯಿತು. ಕಡೆಯಲ್ಲಿ ಮೆಸ್ಸರ್ಸ್ ಸ್ಟೀವನ್ ಎಂಡ್ ಸನ್ಸ್ ಇವರಿಂದ ಉಚಿತಾರ್ಥವಾಗಿ ಕೊಡಲ್ಪಟ್ಟ ಬಿಸ್ಕೂಟು ಮಿಕರೂನ್ ಎಂಬ ಭಕ್ಷ್ಯಗಳು ಎಲ್ಲಾ ಮಕ್ಕಳಿಗೆ ಹಂಚೋಣಾಯಿತು

~~~~~

ಒಬ್ಬ ಬಾತ್ಮೀದಾರರಿಂದ —ನಿರೇಶ್ವಾಲ್ಯ ನಾರ್ಣಪ್ಪ ಸುವರ್ಣರು ತನ್ನ ೨೨ನೇ ವಯಸ್ಸಿನಲ್ಲಿ ಬಿ. ಎಲ್. ಪರೀಕ್ಷೆಯಲ್ಲಿ ಉತ್ತೀರ್ಣರಾದದ್ದು ಸಂತೋಷಕರವೇ ಬಿಲ್ಲವರ ಪೈಕಿ ಬಿ. ಎಲ್. ಪರೀಕ್ಷೆ ತೇರ್ಗಡೆ ಪಟ್ಟವರಲ್ಲಿ ಇವರು ಪ್ರಥಮರು.

~~~~~

ಮಂಗಳೂರು

—————

ತಂಜಾವೂರು ಡಿಸ್ಟ್ರಿಕ್ಟ್ ಕೋರ್ಟಿನ ಶಿರಸ್ತೆದಾರರಾಗಿದ್ದ ರಾ॥ ಸಿ ಎನ್ ಕುಪ್ಪುಸ್ವಾಮಿ ಐಯ್ಯರ್ ಬಿ. ಎ ಎಮ್ ಎಲ್ ರವರು ಉಡುಪಿಯ ಡಿಸ್ಟ್ರಿಕ್ಟ್ ಮುನ್ಸಿಫರಾಗಿ ನೇಮಿಸಲ್ಪಟ್ಟಿರುವರು

ವಿಕ್ಟೋರಿಯ ಜುಬ್ಲಿ ವೇತನ ಫಂಡಿನಿಂದ ವೇತನಗಳನ್ನು ಪಡೆಯಬಿಚ್ಛಿಸುವ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಇದೇ ಬರುವ ಜುಲಾಯಿ ೭ತಾ ೭ನೇ ಮಂಗಳವಾರ ೧೦ ಗಂಟೆಗೆ ಇಲ್ಲಿಯ ಗವರ್ನಮೆಂಟ ಕಾಲೇಜಿಯಲ್ಲಿ ಮೇಲಾಟದ ಪರೀಕ್ಷೆಯು ಜರಗುವುದೆಂಬದಾಗಿ ಡಿಸ್ಟ್ರಿಕ್ಟ್ ಜಡ್ಜರೂ ಸದರಿ ಫಂಡಿನ ಪ್ರೆಸಿಡೆಂಟರೂ ಆಗಿರುವ ಮೆ॥ ಫ್ರೊಂಟನ್ ದೊರೆಗಳವರು ಪ್ರಕಟಿಸಿರುವರು. ಈ ಪರೀಕ್ಷೆಗೆ ನಿಲ್ಲುವಂಥವರ ಅರ್ಜಿಗಳು ಜುಲಾಯಿ ತಾ. ೧೫ರ ಒಳಗೆ ಪ್ರೆಸಿಡೆಂಟರಿಗೆ ತಲಪ ಬೇಕಾಗಿರುವುದು. ಅರ್ಜಿ ಫೋರ್ಮುಗಳನ್ನೂ ಈ ಬಗ್ಗೆ ಬೇಕಾದ ಕ್ರಮಗಳ ಪಟ್ಟಿಯನ್ನೂ ಡಿಸ್ಟ್ರಿಕ್ಟ್ ಕೋರ್ಟಿನಿಂದ ೧ ಆಣೆ ೨ ಆಣೆ ಕ್ರಯಕ್ಕೆ ಪಡೆಯಬಹುದು.

ಇದೇ ತಾ. ೧೯ನೇ ಶುಕ್ರವಾರ ರಾತ್ರಿ ಕುದ್ರೋಳಿಯಲ್ಲಿರುವ ಮೆ॥ ಎಸ್. ಕರ್ಕಡರ ಮನೆಗೆ ಕಳ್ಳರು ಕನ್ನ ಹಾಕಿರುವರು. ಮನೆಯಲ್ಲಿ ಮಗು ಮಲಗಿದ್ದ ಕೋಣೆಯಲ್ಲಿ ದೀಪ ಉರಿಯುತ್ತಿದ್ದದರಿಂದಲೋ ಏನೋ ಕಳ್ಳರು ಕೊರೆದ ತೂತಿನ ಒಳ ಬದಿಯಲ್ಲಿದ್ದ ಖಜಾನೆ ಪೆಟ್ಟಿಗೆಯನ್ನು ಹೊರಗಿನಿಂದಲೇ ಹೊರ ತೆಗೆದು ಅದರಲ್ಲಿದ್ದ ಕೆಲವು ಕಾಗದ ಪತ್ರಾದಿಗಳನ್ನೂ ಐದು ರೂಪಾಯಿಯ ಒಂದು ನೋಟನ್ನೂ ಜಾರಿಸಿಕೊಂಡು.ಹೋಗಿರುವರೆಂದು ಕೇಳುತ್ತೇವೆ. ದೀಪ ಉರಿಯುತ್ತಿದ್ದುದರಿಂದ ಕಳ್ಳರಿಗೆ ಒಳನುಗ್ಗಲು ಧೈರ್ಯ ಸಾಲದೆ ಚಿನ್ನಾಭರಣವಿದ್ದ ಪೆಟ್ಟಿಗೆಯು ದೈವವಶಾತ್ ಉಳಿದಿರುವುದಂತೆ. ಪಟ್ಟದಲ್ಲಿ ಕಳ್ಳರ ಕಾಟವು ಪುನಃ ತೊಡಗಿರುವುದು ಕಳವುಗಳ ಪತ್ತೆಯು ಮಾತ್ರ ಆಗುವಂತೆ ತೋರುವುದಿಲ್ಲ. ಕಳವು ರಿಪೋರ್ಟುಗಳನ್ನು ಮಾಡಿದರೆ ಪೋಲಿಸ್ ಆಪೀಸರರು ಸ್ಟೇಶನಿನಲ್ಲೇ ಕುಳಿತು "ಹೆಚ್ಚಿಗೆ ಹೋಗಲಿಲ್ಲವಲ್ಲಾ, ಬೀಟಿನ ಪೋಲೀಸಿನವರಿಗೆ ಆ ಸ್ಥಳದಲ್ಲಿ ಬಿಗಿಲ್ ಮಾಡಲು ಅಪ್ಪಣೆಸುತ್ತೇವೆ"ಂದು ಹೇಳುವುದರ ಬದಲಿಗೆ ತಾವೇ ಅಂತಹ ಸ್ಥಳಕ್ಕೆ ಹೋಗಿ ಕೆಲಸವಿಲ್ಲದೆ ಪುಂಡಾಟಿಗತನದಿಂದ ತಿರುಗುವವರು ಅಂತಹ ಸ್ಥಳದಲ್ಲಿದ್ದಾರೋ ಎಂಬ ವಿಚಾರ ನಡಿಸಿ ಅಂಥವರ ಹೆಸರುಗಳನ್ನು ತಮ್ಮ ಪುಸ್ತಕದಲ್ಲಿ ದಾಕಲು ಮಾಡಿಕೊಂಡರೆ ಯಾ ಅಂಥವರಿಂದ ಜಾಮೀನು ಪಿತುರಿಗಳನ್ನು ತೇಳಿಕೊಂಡರೆ ಇಂತಹ ಕಳವುಗಳು ಕಮ್ಮಿಯಾಗುವುದರಲ್ಲಿ ಅನುಮಾನವಿರದು.

ಬೆಲ್ಮಠ ಗೇಟಿನಿಂದ ಕಲೆಕ್ಟರ್ ದೊರೆಗಳ ಗೇಟಿನ ವರೇಗೆ ಮಾರ್ಗದ ಎರಡು ಬದಿಗಳಲ್ಲಿಯೂ ಇರುವ ಸಾಲುಮರದ ಮರಗಳು ಅಪಾಯಕರ ಸ್ಥಿತಿಯಲ್ಲಿರುತ್ತವೆ ಅದಿ ಕುಂಬಾಗಿ ಹೋಗಿನ ಬಾರ ಹೆಚ್ಚಾಗಿ ಎರಡು ಮರಗಳು ಬಿದ್ದ ಹೋದವು ನಿನ್ನೆ ದಿನ ಬಹು ಮಂದಿ ಜನರು ಆ ಮರಗಳ ಬುಡಗಳನ್ನು ಪರೀಕ್ಷಿಸಿ ನೋಡಿದ್ದಲ್ಲಿ ಬಂದೆರಡರ ವಿನಹ ಎಲ್ಲ ಮರಗಳು ಕುಂಬಾಗಿ ಅಪಾಯಕರ ಸ್ಥಿತಿಯಲ್ಲಿರುವುದು ತೋರಿತು. ಮಳೆ ಬರುವಾಗ ಜನರಾಗಲೀ ಪಶುಗಳಾಗಲೀ ಮರಗಳ ಅಡಿಯಲ್ಲಿ ಆಶ್ರಯದ ಬಗ್ಗೆ ನಿಲ್ಲುವ ಕಾರಣದಿಂದಲೂ, ಮೆಲ್ಲಗೆ ನಡಿಯುವ ಕಲ್ಲು ಗಾಡಿಗಳೂ. ಇತರ ಸವಾರಿ ಸಾರೋಟುಗಳೂ ಜಟ್ಕಾ ಬಂಡಿಗಳೂ ವಿಶೇಷವಾಗಿ ಆ ಮಾರ್ಗದಿಂದ ಹೋಗುವುದರಿಂದಲೂ. ಬಾಧಕ ಉಂಟಾಗದಂತೆ ಕಲೆಕ್ಟರ ದೊರೆಗಳಾಗಲೀ ಮುನಿಸಿಪಲ್ ಚೆಯ್ಯರ್ಮನರಾಗಲೀ ಈ ಕುರಿತು ನಿಗಾಕೊಡುವದು ಅಗತ್ಯವಾಗಿದೆ ಕಲೆಕ್ಟರ್ ದೊರೆಗಳ ಗೇಟಿನಿಂದ ಮುಂದಕ್ಕೆ ಸಹ ಮಾರ್ಗದ ಅಂತ್ಯದ ವರೇಗೆ ಇರುವ ಎಲ್ಲಾ ಮರಗಳನ್ನೂ ಹಂಪನಕಟ್ಟೆಯ ಬ್ರಿಷೊ ಬಿಲ್ಡಿಂಗಿನ ಎದುರಿರುವ ಮರಗಳನ್ನೂ ಪರೀಕ್ಷಿಸಿ ನೋಡುವುದೂ ಅಗತ್ಯವಾಗಿರುವುದು

ಸರ್ಜನ್ ಜನರಲ್ ದೊರೆಗಳವರು ಇದೇ ಬರುವ ಜುಲಾಯಿ ತಿಂಗಳ ತಾ. ೯ರಲ್ಲು ಇಲ್ಲಿಯ ವೆನ್‌ಲಾಕ್ ಆಸ್ಪತ್ರೆಯನ್ನು ಸಂದರ್ಶಿಸುವರು

ಇಲ್ಲಿಯ ಹಂಪನಕಟ್ಟೆಯ ಪೋಸ್ಟಾಫೀಸಿನ ಮೆಟ್ಟನ್ನು ಕಡಿದು ಬಿಟ್ಟದ್ದರಿಂದ ಮೇಲಕ್ಕೆ ಹತ್ತುವುದೇ ಕಷ್ಟಸಾಧ್ಯವಾಗಿದೆಂದು ಹಿಂದಿನ ಒಂದು ಸಂಚಿಕೆಯಲ್ಲಿ ತಿಳಿಸಿತ್ತಷ್ಟೆ. ಆದರೆ ಈಗ ಇದ್ದ ಮೆಟ್ಲಿನ ಅರ್ಧ ಭಾಗವು ಮಳೆಯಿಂದ ಜರಿದು ಬಿದ್ದು ಪೋಸ್ಟಾಫೀಸಿನ ಮೇಲಕ್ಕೆ ಹತ್ತುವುದೇ ಅಪಾಯಕರವಾಗಿ ತೋರುವುದರಿಂದ ಈ ವಿಷಯ ಮೇಲಾಧಿಕಾರಿಗಳು ತ್ವರ್ಯದಲ್ಲಿ ನಿಗಾಕೊಡಬೇಕಾಗಿರುವುದು.
~~~~~

ಇಲ್ಲಿಯ ರೈಲ್ವೇಸ್ಟೇಶನಿಗೆ ಹಂಪನಕಟ್ಟೆಯಿಂದ ಹೋಗುವ ದಾರಿಯಲ್ಲಿರುವ ಸ್ಟೇಶನ್ ಗೇಟಿನಿಂದ ಮತ್ತು ಪೋಲಿಸ್ ಲ್ಯಾನಿನಿಂದ ಹೋಗುವ ದಾರಿಯ ಸ್ಟೇಶನ್ ಗೇಟಿನಿಂದ ಸ್ಟೇಶನ್ ವರೆಗಿರುವ ಮಾರ್ಗದಲ್ಲಿಯೂ ಸ್ಟೇಶನ್ ಮುಂದುಗಡೆಯೂ ಕಂಪೆನಿಯವರು ಪ್ರಯಾಣಸ್ಥರ ಬಗ್ಗೆ ದೀಪಸ್ತಂಭಗಳನ್ನು ಇರಿಸಿರುತ್ತಾರೆ. ಪರಂತು ಈ ದೀಪ ಸ್ತಂಭಗಳನ್ನು ಕಂಪೆನಿ ನೌಕರರು ರಾತ್ರಿಕಾಲ ಹೊತ್ತದಿರುವುದರಿಂದ ಮುಖ್ಯವಾಗಿ ಕತ್ತಲೆ ಇರುವ ಈ ಮಳೆಗಾಲದಲ್ಲಿ ಪ್ರಯಾಣಿಕರಿಗೆ ಉಂಟಾಗುತ್ತಿರುವ ತೊಂದರೆಗಳನ್ನು ಹೇಳಿ ತೀರದು. ಈ ದೀಪಗಳನ್ನು ಸರಿಯಾಗಿ ಉರಿಸುವಂತೆ ರೈಲ್ವೇ ಅಧಿಕಾರಿಗಳು ಜಾಗ್ರತೆ ತಕ್ಕೊಂಡು ಪ್ರಯಾಣಿಕರಿಗಿರುವ ಈ ತೊಂದರೆಯನ್ನು ನಿವಾರಿಸಬೇಕಾಗಿರುವುದು.

ಇದೇ ತಿಂಗಳ ತಾರೀಕು ೨೮ನೇ ಆದಿತ್ಯವಾರ ಪ್ರಾತಃಕಾಲ ೭ ಗಂಟೆಗೆ ಮಂಗಳೂರು ಬ್ರಹ್ಮಮಂದಿರದಲ್ಲಿ ರಾ। ಕುದ್ಮುಲ ರಂಗರಾಯರು ದೇವಾರಾಧನೆ ಮತ್ತು ಉಪನ್ಯಾಸ ನಡಿಸುವರು. ಉಪನ್ಯಾಸದ ವಿಷಯ.—ಸಂತ ತುಕಾರಾಮ.

ಸರಕಾರದವರು ಪಾಸುಪೋರ್ಟುಗಳನ್ನು ರದ್ದುಮಾಡಿ ಹೊಸ ಫೋರ್ಮುಗಳು ಮಾಡಿದ್ದರಿಂದ ಜನರಿಗೆ ಬಹು ದುಪಕಾರವಾಯಿತು. ಪರಂತು ಮಂಗಳೂರಿಂದ ರೈಲ್ವೇ ಪ್ಲೈಲಾಟಿಯಲ್ಲಿ ಹೋಗುವ ಪ್ರಯಾಣಸ್ಥರಿಗೆ ಇನ್ನೊಂದು ವಿಧದಲ್ಲಿ ತೊಂದರೆಯು ಆಗಿರುವದೆ. ಪ್ರತಿದಿನವೂ ಕೆಲವು ಮಂದಿಗಳಿಗೆ ಎಂಬಿಗ್ರೇಶನ್ ಫೋರ್ಮುಗಳು ಸಿಕ್ಕುವುದಕ್ಕೆ ತಡವಾಗಿ ಪ್ಲೈಲಾಟಿ ಹೋಗಿ ಬಿಡುತ್ತದೆ. ದಕ್ಕೆ ತೋಟಕ್ಕೆ ಹೋಗುವ ಆಟದ ಹೆಚ್ಚು ಇರುವ ದಿನ ಆದಿತ್ಯವಾರ ಮತ್ತು ಪಡಿತಗಳ ಸವಾರಿ ಮೊದಲಾದ ಕಾರಣಗಳಿಂದ ವಿಶೇಷ ಪ್ರಯಾಣಸ್ಥರು ಇರುವ ದಿನ ಇಂಬಿಗ್ರೇಶನ್ ಸಿಕ್ಕುವುದಕ್ಕೆ ಬಹಳ ಪ್ರಯಾಸವಾಗುತ್ತದೆ. ಮೊದಲು ಪಾಸುಪೋರ್ಟುಗಳಿಗೆ ಟಿಕೇಟು ಕ್ಲಾರ್ಕರ ದಸ್ಕತು ಬೇಕಾಗಿದ್ದಿಲ್ಲ. ಈಗ ಅಂತೂ ಇಂಬಿಗ್ರೇಶನ್ ಫೋರ್ಮು ತೋರಿಸದ ಹೊರತು ಮಾಡಿದ ವಿನಹ ಟಿಕೇಟು ಕ್ಲಾರ್ಕರು ಟಿಕೇಟೇ ಕೊಡುವುದಿಲ್ಲ. ಈ ಕಾರಣದಿಂದ ಪ್ರಯಾಣಸ್ಥರಿಗೆ ಆಗುವ ತೊಂದರೆ ನಿವಾರಿಸುವುದಕ್ಕೆ ಸರಕಾರದವರು ಏನಾದರೂ ಏರ್ಪಾಟು ಮಾಡಿದರೆ ಜನರಿಗೆ ಬಹು ಉಪಕಾರವಾಗುವುದು.

ಇದೇ ಕಳೆದ ೨೨ನೇ ಸೋಮವಾರ ಬ್ರಿಟಿಶ ಚಕ್ರವರ್ತಿಯವರ ಜನನ ದಿನದ ಜ್ಞಾಪಕಾರ್ಥವಾಗಿ ಇಲ್ಲಿಯ ಎಲ್ಲಾ ಸರಕಾರಿ ಆಫೀಸುಗಳೂ ಶಾಲೆಗಳೂ ಮುಚ್ಚಲ್ಪಟ್ಟಿದ್ದವು.

ಕಳೆದ ಸಂಚಿಕೆಯಲ್ಲಿ ಗಣಪತಿ ಹೈಸ್ಕೂಲಿನ ಕಟ್ಟೋಣದ ಖರ್ಚಿನ ಬಗ್ಗೆ ~~ತಿರಿಗಿ ಕಟ್ಟಿಸ ರೂಪಾಯಿ~~ ಸರಕಾರದಿಂದ ಸಿಕ್ಕಿತ್ತೆಂದು ಪ್ರಕಟಿಸಿದ್ದೆವು. ಈ ಮೊಬಲಗು ಶಾಲೆಯ ಮುಖ್ಯ ಕಟ್ಟಡಕ್ಕಲ್ಲ, ಇದಕ್ಕೆ ತಾಗಿಯೇ ಕಟ್ಟಿಸಲ್ಪಡಾಗುವ ಪ್ರತ್ಯೇಕ ಎರಡು ಕೋಣೆಗಳ ಬಗ್ಗೆ ಆಗಿರುವುದೆಂತ ತಿಳಿಯುತ್ತೇವೆ. ಮುಖ್ಯ ಕಟ್ಟಡದ ಬಗ್ಗೆ ಸರಕಾರದಿಂದ ಸಿಕ್ಕಬೇಕಾಗಿದ್ದ ದ್ರವ್ಯಸಹಾಯವು ಈ ಮೊದಲೇ ದೊರಕಿರುತ್ತದೆ.

ಇಲ್ಲಿಯ ಡಿಸ್ಟ್ರಿಕ್ಟ್ ಸರ್ಜನ್ ದೊರೆಗಳವರು ಒಂದು ತಿಂಗಳ ರಜೆಯಮೇಲೆ ಹೋಗುವರಾಗಿ ಕೇಳುತ್ತೇವೆ.

ಇಲ್ಲಿಯ ಡಿಸ್ಟ್ರಿಕ್ಟ್ ಜಡ್ಜರವರಿಗೆ ಮಳೆಗಾಲದ ಹವೆಯನ್ನು ತಡೆಯಲಿಕ್ಕೆ ಕೂಡದ್ದರಿಂದ ಇಲ್ಲಿಂದ ಬೇರೆ ಕಡೆಗೆ ವರ್ಗಾಯಿಸಲ್ಪಡುವರೆ ಅಪೇಕ್ಷಿಸಿರುವರೆಂತ ವಾರ್ತೆ ಇದೆ.

ಶ್ರೀ ಕಾಶೀಮಠದ ವರದೇಂದ್ರ ತೀರ್ಥ ಶ್ರೀ ಪಾದಂಗಳವರು ನಿನ್ನೆ ಪೂರ್ವಾಹ್ನ ಗಂಟೆ ೧೧ಕ್ಕೆ ಮುಂಬಯಿಯಲ್ಲಿ ವಾಳ್ಕೇಶ್ವರ ಮಠದಲ್ಲಿ ದೈವಾಧೀನರಾದರೆಂಬದನ್ನು ತಿಳಿಸಲು ವಿಷಾದಪಡುತ್ತೇವೆ.

ಕಳೆದ ವಾರ ಮುನ್ಸಿಪಾಲಿಟಿಯಲ್ಲಿ ಒಂದು ಪ್ಲೇಗು ಮರಣವಾಯಿತು.

ಇಲ್ಲಿ ಮಳೆಯು ಕಳೆದ ವರ್ಷಕ್ಕಿಂತ ಈ ವರ್ಷ ಕಮ್ಮಿಯಾಗಿ ಬಿದ್ದಿರುವುದು. ಕಳೆದ ವರ್ಷ ಇದೇ ತಿಂಗಳ ೨೪ರ ವರೆಗೆ ೬೮.೪೪ ಇಂಚುಗಳ ಮಳೆ ಬಿದ್ದಿತ್ತು. ಈ ವರ್ಷ ಇದೇ ತಾ ೨೪ರ ವರೇಗೆ ೩೭.೨೪ ಇಂಚುಗಳ ಮಳೆ ಮಾತ್ರ ಬಿದ್ದಿರುವುದು.

ಕುಂದಾಪುರ ತಾಲೂಕಿಗೆ ಸೇರಿದ ಕಾವಾರಿನಲ್ಲಿ ಜಾಸೆಫ್ ಮಿಸ್ಕಿತನೆಂಬವನು ಸುಮಾರು ೫೦೦ ಎಕ್ರೆ ಭೂಮಿಯನ್ನು ತಕ್ಕ ರೀತಿಯಲ್ಲಿ ಹಸನುಮಾಡುವದಕ್ಕಾಗಿ ತಕ್ಕ ಮಾಹಿತಿಯನ್ನು ಪಡೆಯುವ ಬಗ್ಗೆ ಮಿಸ್ಕಿತನವರು ಮಿ. ಬಿಶ್ ದೊರೆಗಳವರನ್ನು ಶಿವಮೊಗ್ಗೆಗೆ ಕಳುಹಿಸಿದ್ದರು. ಇವರು ಈಗ ತಾನೇ ಹಿಂತಿರುಗಿದ್ದು ವ್ಯವಸಾಯ ಸಂಬಂಧ ತಕ್ಕ ಮಾಹಿತಿಯನ್ನು ಪಡಕೊಂಡು ಬಂದೆ ಬಂದಿರುವರು. ಈ ದೇಶದ ವ್ಯವಸಾಯ ಮಾಹಿತಿಯನ್ನು ಪಡಿಯುವದಕ್ಕೋಸ್ಕರ ಇವರ ಕೂಡ ಮುತ್ತೂರ ಕಾಲೇಜಿಗೆ ಸೇರಿ ೬ ತಿಂಗಳ ವರೇಗೆ ಅಭ್ಯಸಿಸ್ಸ ನಂತರ ಕಳವಾರಿಗೆ ಹೋಗಿ ವ್ಯವಸಾಯ ಕೆಲಸವನ್ನು ಪ್ರಾರಂಭಿಸುವರೆಂದು ತಿಳಿಯುತ್ತೇವೆ.

ಹೊಸ್ಪಗೆ ರುಜಾರಿಯೋ ಇಗರ್ಜಿ ಪಡು ದಿಕ್ಕಿನ ಹಿತ್ತಲಲ್ಲಿರುವ ಕೆಲವು ಬಾವಿಗಳಿಗೆ ಆವರಣವಿಲ್ಲದೆ ಇರುವುದರಿಂದ ಮುನ್ಸಿಪಾಲಿಟಿಯವರು ಈ ಬಾವಿಗಳ ಮಾಲೀಕರನ್ನು ಎಚ್ಚರಿಸಿ ತ್ವರೆಯಾಗಿ ಆವರಣ ಹಾಕಿಸುವಂತೆ ಏರ್ಪಾಡು ಮಾಡುವುದು ಅವಶ್ಯವಾಗಿರುತ್ತದೆ.

ಕಾರ್ಪೊರೇಶನ್ ರೆಸಿಡೆಂಟ್ ಡಾಕ್ಟರ್ ಸಬ್ ಅಸಿಸ್ಟಾಂಟ ಎನ್ಸಪೆಕ್ಟರರಾದ ರಾ ॥. ಮಂಗೇಶರಾಯರು ಪ್ರಿವಿಲೆಜ್ ರಜೆಯ ೨೦ ದಿವಸಕ್ಕೆ ಹೆಚ್ಚಿಸಲ್ಪಟ್ಟಿರುವುದು. ಇದೇ ಜುಲಾಯಿ ತಾ. ೧೭ಲ್ಲ ಇವರ ಕೆಲಸಕ್ಕೆ ಹಾಜರಾಗುವರು.

ಈ ವರ್ಷದ ಬಿ ಎಲ್ ಪರೀಕ್ಷೆಯಲ್ಲಿ ರಾ ನಾರ್ಣಪ್ಪ ಸುವರ್ಣ, ರಾ। ವೆಂಕಟ್ರಾಯ ಬಾಳಿಗ, ರಾ। ಬಿ. ನಾರಾಯಣ ನ್ಯಾಕ—ಇವರು ಪಾಸಾಗಿರುತ್ತಾರೆ. ಎಫ್ ಎಲ್ ಪರೀಕ್ಷೆಯಲ್ಲಿ ರಾ। ಕೆ. ಬಾಲಕೃಷ್ಣ ಕಾಮತ್, ರಾ ರಾಮ ಕುಡುವ, ರಾ। ಎಮ್ ಬಪ್ಪು ರಾವ್, ರಾ। ಎಮ್ ಜನಾರ್ದನಪ್ಪೈ—ಇವರು ಪಾಸಾಗಿರುವರು.

ವಿಟ್ಲದಲ್ಲಿ ವಕೀಲ ರಾ। ಕೃಷ್ಣಭಟ್ಟರವರನ್ನು ಕೊಂದ ಬಸ್ಸ ಹೆಡ್‌ಕನಿಸ್ಟೇಬಲರನ್ನು ಗಾಯಪಡಿಸಿದ ಜಾಡರ ಕೃಷ್ಣ ಎಂಬವನಿಗೆ ಸೆಶ್ಶನ್ಸ್ ಜಡ್ಜರವರು ಹೆಡ್‌ಕನಿಸ್ಟೇಬಲರನ್ನು ಗಾಯಪಡಿಸಿದ ತಕ್ಸೀರಿನ ಮೇಲೆ ೫ವರ್ಷಗಳ ಕಠಿಣ ಸಜೆಯನ್ನೂ ವಕೀಲರನ್ನು ಕೊಂದ ತಕ್ಸೀರಿನ ಮೇಲೆ ಫಾಶಿ ಶಿಕ್ಷೆಯನ್ನೂ ವಿಧಿಸಿದರು.

೧೯೧೩ನೇ ಇಸವಿ ದೀಪಾವಳಿ ಸಮಯದಲ್ಲಿ ಗೌಡ ಸಾರಸ್ವತ ಕಾಲೇಜಿ ವಿದ್ಯಾರ್ಥಿಗಳು ಸ್ಥಾಪಿಸಿದ ಬಡ ವಿದ್ಯಾರ್ಥಿಗಳ ಸಹಾಯಕ ಫಂಡಿನಿಂದ ವಿದ್ಯಾರ್ಥಿಗಳಿಗೆ ಸಹಾಯ ಕೊಟ್ಟ ವಿವರ:—೧೯೧೩ನೇ ಇಸವಿಯ ಇಂಟರ್ ಮಿಡಿಯೇಟ್ ಪರೀಕ್ಷೆಯ ಫೀಸು ಬಗ್ಗೆ ಕೊಟ್ಟದ್ದು. ಎಮ್ ಮಾಧವಶೆಣಾಯಿ ರೂ. ೧೫; ಮ. ರಾಮಪ್ಪಕಮ್ತಿ ರೂ. ೧೫; ಎ ನಾರಾಯಣಪ್ಪೈ ರೂ ೧೫, ಸದರಿ ವರುಷದ ಬಿ ಎ. ಪರೀಕ್ಷೆಯ ಫೀಸು ಬಗ್ಗೆ ಮ. ಅನಂತಶೆಣಾಯಿ ರೂ. ೨೦; ಕೆನರಾ ಹ್ಯಾಸ್ಕೂಲು IV ನೇ ಫೋರ್ಮಿನಲ್ಲಿ ಕಲಿಯುವ ಜಿ. ವೆಂಕಟ್ರಾಯಪ್ಪೈಗೆ ಫೀಸಿಗೆ ಸಹಾಯವಾಗಿ ೧೯೧೩ರಲ್ಲಿ ಕೊಟ್ಟದ್ದು ರೂ ೫, ೧೯೧೪ನೇ ಇಸವಿ ಇಂಟರ್ ಮಿಡಿಯೆಟ್ ಪರೀಕ್ಷೆಯ ಫೀಸಿನ ಬಗ್ಗೆ ಕೊಟ್ಟದ್ದು ಎಮ್. ಮಾಧವಶೆಣಾಯಿ ರೂ. ೧೮, ಎಮ್. ಪಾಂಡುರಂಗನ್ಯಾಕ್ ರೂ ೧೮, ಎ ನಾರಾಯಣಪ್ಪೈ ರೂ ೧೮ ಜುಮ್ಲಾ ರೂ. ೧೧೮; ಜಾತಾ ಬಾಕಿ ೪೧. ರೂ. ೧೦೦ ಕೆನರಾ ಬೇಂಕಿನಲ್ಲಿ ೧೯೧೨ನೇ ದಶಂಬರದಿಂದ ೧೯೧೩ನೇ ದಶಂಬರದ ವರೇಗೆ ಡಿಪೋಜಿಟಿನಲ್ಲಿಯಿಟ್ಟದಕ್ಕೆ ಸಿಕ್ಕಿದ ಬಡ್ಡಿ ರೂ. ೫. ಜುಮ್ಲಾ ಪ್ರೆಸಿಡೆಂಟರ ಹತ್ತರ ಇರುವ ಶಿಲ್ಕು ರೂ ೪೬.

M Madhava Rao,
President

ನೋಟೀಸು

ಕೆನರಾ ನ್ಯಾಟ್ ಸ್ಕೂಲ್. ಮಂಗಳೂರು.

ಈ ರಾತ್ರೆಶಾಲೆಯು ಇದೇ ಬರುವ ಜುಲಾಯಿ ತಿಂಗಳ ೧ನೇಕ್ಕೆ ಆರಂಭವಾಗುವುದು. ಇಂಗ್ಲಿಷ್ ಕಲಿಯಲು ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸದವರ ಕೂಡೆ ಮೊಕ್ತಾ ಮಾತಾಡುವದು. ೩೫ ವಿದ್ಯಾರ್ಥಿಗಳಿಗೆ ಮಾತ್ರ ದಾಖಲು ಮಾಡುವದು.

ವಿಳಾಸ — ಎಮ್. ವೆಂಕಟಸುಬ್ರಾವ್,
ಡೊಂಗರಕೇರಿ ರಸ್ತೆ,
ತಾ 17—6—1914 ಮಂಗಳೂರು, ದ. ಕ.

ಜಿನಸುಗಳ ಧಾರಣೆ, ಮಂಗಳೂರು. (ರಖಂ)

ಅವಲ್‌ಮುಸ್ಸಿಕಿ ಅಕ್ಕಿ ...	5—4—0	5-10—0
ದುಯಂ ,, ,, ...	5—0—0	5—4—0
ಸುಗ್ಗಿ .	5—0—0	5—4—0
ದುಯಂ ರಾಶಿ ಸುಗ್ಗಿ	4-14—0	5—0—0
ಗುಡ್ಡು	4-15—0	5—3—0
ಅವಲ್ ಬೆಳ್ತಿಗೆ ..	5—12—0	5-15—0
ಗುಡ್ಡು ಬೆಳ್ತಿಗೆ	5—2—0	5—4—0
ರಂಗೂನ್ ಬೆಳ್ತಿಗೆ ಗೋಣಿ ೧೧	9—4—0	9—6—0
ಗೋದಿ ಗೋಣಿ ೧೧		11-12—0
ಹುರುಳಿ ಗೋಣಿ, ೧೧ ...	7—4—0	7-12—0
ಕಡಲೆ ಗೋಣಿ ೧೧		10—0—0
ತೊಗರಿ ಗೋಣಿ ೧೧	10—8—0	11 8—0
ತೊಗರಿಬೇಳೆ ಗೋಣಿ ೧೧	12—0—0	14—8—0
ಉದ್ದು ಗೋಣಿ ೧೧	10—8—0	11—0—0
ಉಪ್ಪು ಗೋಣಿ ೧೧	3—12—0	4—0—0
ಊರು ಬೆಲ್ಲ ಖಂಡಿ ೧೧	50—0—0	52-8—0
ಕೊಪ್ರಿ ಖಂಡಿ ೧೧ ...	90—0—0	95—0—0
~~ಕೊಪ್ರಿ ಹಿಂಡಿ ಖಂಡಿ೧೧~~	~~28—0—0~~	~~30—0—0~~
ಎಳ್ಳಿಂಡಿ ಖಂಡಿ ೧೧	30—8—0	35—0—0
ಕೊಪ್ರಿ ಎಣ್ಣೆ ಮಣ ೧೧	6—12—0	7—0—0
ಎಳ್ಳೆಣ್ಣೆ ಮಣ ೧೧ ...	7—2—0	7—6—0
ಬಿಳಗೋಟು ಖಂಡಿ ೧೧	95—0—0	102—0—0
ಯಾಲಕ್ಕಿ ಮಣ ೧೧ಕ್ಕೆ	50—0—0	56—0—0
ಕಾಫಿ ಖಂಡಿ೧೧ ...	215—0—0.	225—0—0
ತಾಂಬ್ರ ತಗಡು ಮಣ ೧೧		16—7—0
,, ಪಾತ್ರಗಳು ಮಣ ೧೧	20-8-0	21—0—0
ಚಿಮ್ನಿ ಎಣ್ಣೆ ಪೆಟ್ಟಿಗೆ ೧೧ಕ್ಕೆ	4—9—0	5—0—0
ಚೀನಿ ಬೆಲ್ಲ ಸೇರು ೧೧ಕ್ಕೆ		19—8—0

ಮುಳಿಯಿಲ್‌ರವರ ದಿವ್ಯೌಷಧಗಳು.

ಮಸ್ತಕಾಮೃತ ತೈಲ—ಕುಡ್ತೆ 1ಕ್ಕೆ ಕ್ರಯ 10 ಆಣೆ. ಇದು ಎಲ್ಲಾ ತರದ ಶಿರೋರೋಗ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಬಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ.

....ಮಸ್ತಕಾಮೃತ ತೈಲವನ್ನು ಕಳೆದ ಇದು ವರುಷಗಳ ದ ಉಪಯೋಗಿಸಿಕೊಳ್ಳುತ್ತಿರುವುದರಿಂದ ನನ್ನ ಮುದಿ ಮೆದುಳು ಯೌವನ ಪ್ರಾಯದಲ್ಲಿರುವದು. ಈ ದಿವ್ಯ ತೈಲಕ್ಕಾಗಿ ಏನಡಾ ನಾನು ಕೆಲಸವಾದಲ್ಲಿರೆನು, ನನ್ನ ನಾತ್ರೀ ಪ್ರಿಯರ ... ...

ರೆವೆರೆಂಡ್ ಇ. ಸರ್‌ನ್ಸ್.
ಮುಲ್ಕಿ

ತಾ 15—4—13.

ಮುಳಿಯಿಲ್ಸ್ ಹೇರ್ ಓಯಿಲ್—ಕ್ರಯ 12 ಆಣೆ ... ... ನಿಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಇನ್ನೊಂದು ಕುಪ್ಪಿ ವಿ. ಪಿ. ಮೂಲಕ ರವಾನಿಸಿರಿ.

ಮಿಸಿಸ್. ವೈ ಕುರಿಯಾನ್.
ಗ್ರೀನ್‌ವಿಲ್ಲಾ, ಕಲ್ಲಿಕೋಟೆ

ತಾ. 23—5—13

....ಮುಳಿಯಿಲ್ಸ್ ಹೇರ್ ಓಯಿಲ್ ಉಪಯೋಗಿಸಿದಂದಿನ ನನ್ನ ತಲೆಕೂದಲು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ಸಬಲವಾಗಿ ಬೆಳೆದಿರುವವು. ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ. ಇನ್ನೊಂದು ಡಜನ್ ಕುಪ್ಪಿಗಳನ್ನು ... ರವಾನಿಸಿರಿ.

ಮಿಸ್ ಎಸ್ ಸೋನ್ಸ್,
ಸ್ಕೂಲು ಮಿಸ್ಟ್ರೆಸ್, ಮಂಗಳೂರು.

21ನೇ ಒಕ್ಟೋಬರ 1913.

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ. ಎಲ್ಲಾ ತರದ ಛಳಿ ಜ್ವರಕ್ಕೆ ರಾಮಬಾಣದಂತಿದೆ.

ಚತುರ್ಥಿ ಮಾತ್ರೆಯನ್ನು ತಕ್ಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ. ಇದು ಒಳ್ಳೇ ಗುಣಕರವೆಂಬದಾಗಿ ಹೇಳುವದರಲ್ಲಿ ಅನುಮಾನವಿಲ್ಲ.

ವಿ. ಪುರುಷೋತ್ತಮ ಹೆಗ್ಗಡೆ,
ಕಲ್ಯಾ, ಕಾರ್ಕಳ

ತಾ. 13—6—13.

ವಯೊಲೆಟ್ ಹೇರ್ ಓಯಿಲ್—ಸುವಾಸನೆಯುಳ್ಳ ಈ ತೈಲದ ಪ್ರಯೋಗದಿಂದ ಕಲ್ಮಷ ವೇದನೆಯು ಗುಣಪಡುವದು. ... ವ ಕಠಿಣ ತರದ ತಲೆನೋವಿನಿಂದ ಪೀಡಿತರಾಗಿರುವವರಿಗೆ ನಿಮ್ಮ ವಯೊಲೆಟ್ ಹೇರ್ ಓಯಿಲ್ಲಿಗಿಂತ ಅತ್ಯುತ್ತಮ ತೈಲವು ಬೇರೆಯಿಲ್ಲ ಎಂದೆಣಿಸುತ್ತೇನೆ. ಅತಿ ಘೋರವಾದ ತಲೆನೋವಿನಿಂದ ಶ್ರಮೆಪಡುತ್ತಿದ್ದ ನನ್ನ ಹೆಂಡತಿಗೆ ತಮ್ಮಿಂದ ತರಿಸಿದ 2 ಕುಪ್ಪಿ ಎಣ್ಣೆಯು ಅತಿರೇಕ ಸೌಖ್ಯವನ್ನುಂಟುಮಾಡಿರುತ್ತದೆ. ಅದಿಲ್ಲದೆ ಅವಳು ಇರಲಾರಳು. ... ರೋಗಗಳ ಪ್ರಯೋಜನಕ್ಕಾಗಿ ದೇವರು ತಮ್ಮ ಈ ಲೋಕೋಪಕಾರಿಯಾದ ಕೆಲಸವನ್ನು ಆಶೀರ್ವದಿಸಲೆಂಬದು ನನ್ನ ಪ್ರಾರ್ಥನೆಯಾಗಿದೆ.

M. JACOBI,
Hd Clerk, CALICUT

4—7—13

ವಿಳಾಸ:— ಮುಳಿಯಿಲ್ ಎಂಡ್ ಸನ್ಸ್, ಕಾಸರಗೋಡು, ದ. ಕ.

---

150 ಪುಟಗಳ ಪುಸ್ತಕವು.
ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರೆಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ತಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ಬ್ರಿಜೊವಿಲ್ಲೆ
2. ಜುಬಿಲಿ ಕೇಕ್ ಬಜಾರ್, ಬೆಂಗಳೂರು. ಮಂಗಳೂರು.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವುದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತೆ ಸುಲಭವಾಗಿಯೂ ವಿಶದವಾಗಿಯೂ ಇರುವುದು ಮತ್ತಾವದೂ ಇಲ್ಲವೆಂದು ವಿಷಯವು ಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕೆ" ಎಂಬ ಸಂಸ್ಕೃತ ವ್ಯಾಖ್ಯಾನವೂ ಜಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಆಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರಯಿಸಿ ದಪ್ಪ ಕಾಗದದಲ್ಲಿ ಸುಂದರ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪುಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ, ಸೂರ್ಯ ಚಂದ್ರ ಗ್ರಹಣನಿರ್ಣಯ, ಅಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರಚ್ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೩೬ ವಿಷಯಗಳ ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು. ಇದರ ಕ್ರಯ ೧ಕ್ಕೆ ೧—೮—೦. ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ, ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ, ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು.

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳುವಳಿಕೆಗೂ ಅನುಭವಕ್ಕೂ ತೆಗೆದುಕೊಳ್ಳುವದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೭೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೩—೦—೦ ಟಪ್ಪಾಲ ಹಾಸಲು ೪ ಆಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನೂ ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. ನಮ್ಮ ವಿಳಾಸ:—

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ನಾಟಕ ಬುಕ್ ಡಿಪೋ ಏಜಂಟ್, ಬಳ್ಳಾರಿ

MUSICAL MART
Kavi & Sons,
MANGALORE

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರ್ಮೊನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. ಹೇಂಡ್ ಹಾರಮೊನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರು ವರೇಗೂ, ಫೋಲ್ಡಿಂಗ್ ರೂ. 70, 75, 105.

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ, ಮಂಗಳೂರು ದ. ಕ.

ವಿವಾಹ ಮಂಟಪ.

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡೆದಿದೆ. ಕನ್ನಾನೂರ, ಮೈಸೂರು, ನಾಗಪುರ, ವಿಶಾಕಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಲಾರಿರಾ!

ಸ್ಟೀವನ್ಸ್ ಎಂಡ್ ಸನ್ಸ್,
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ,
ಹಂಪನಕಟ್ಟಾ, ಮಂಗಳೂರ

Madeena Watch Co., Madras

ಡಿ. ನ್ಯೂ ಪೆಂಡುಲಂ ವಾಚ್. Rs, 3—15—0.

ಇದು ಒಂದು ಆಶ್ಚರ್ಯಕರವಾದ ಘಡಿಯಾರ.



Rs. 3-15-0

ಇದು ಬಹು ಚಂದವಾಗಿಯೂ ಇರುತ್ತೆ. ಇದನ್ನು ಟೈಪಿಸಿ ಸಿನಂತೆ ಮೇಜಿನ ಮೇಲೂ ನಿಂದಿರಿಸಬಹುದು ಜೇಬಿನಲ್ಲಿಯೂ ಉಪಯೋಗಿಸಿಕೊಳ್ಳ ಬಹುದು

ಬಾಂಬೆ ಮೇಲ್ ವಾಚ್ ಕ್ರಯ	ರೂ.	2—7—0
ರಾಸ್ಕೋಪ್ ವಾಚು ಕ್ರಯ	,,	1 12—0
ಬೆಸ್ಟ್ ಲೀವರ್ ವಾಚು ಕ್ರಯ	,,	3 —8—0
ಟೈಲ್ಸ್ ರೆಗುಲೇಟರ್ ಕ್ರಯ	,,	2- 12—0
ಸೆಲ್ಫ್ ಕ್ಲೊಸಿಕ್		3--15—0
ಟೈಂಪೀಸು—ಸಾದಾ	,,	1—5—0
ಅಲಾರಾಂ ಟೈಂಪೀಸು		1 13—0
ಚಿಕ್ಕ ಸೈಜು ಲೇಡಿವಾಚ್		2-15—0

ಕಾಟೇಜ್ ಹಾರ್ಮೋನಿಯಂ ರೂ 20=0—0, ಮ್ಯೂಜಿಕ್ ಕ್ಲಾಕ್ ರೂ. 5—2—0, ಪಿಟಲು ರೂ 8—0—0.

ಅಡ್ರಸ್—ಮದಿನಾವಾಚು ಕಂಪೆನಿ,

ನಂ. 27 ಅನೆಕಾರ್ಕೋರ್ನ ಬೀದಿ, ಜಿ ಟಿ ಮದ್ರಾಸು

THE BOMBAY LIFE ASSURANCE CO. LTD.

(Established 1908)

HEAD OFFICE BOMBAY

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA

Extract from the Actuary's Report —

„There can be no doubt that the Policy Contracts are well secured'

Chairman The Hon'able Mr Lallubhai Samaldas, Justice of the Peace, Director of the Bank of India Ltd., The Tata Hydro Electric Co Ltd The Tata Mills Co Ltd., Managing Agent of Messrs Marshland Price & Co Ltd, and fellow of the Bombay University

Actuary —George King Esq F I A, F. F. A. (London)

Medical Referee —Dr R Row, M D D Sc London)

Managing Director —Pramrose R Joshi Justice of the Peace, The Honorary Presidency Magistrate & etc

Wanted Agents ... liberal commission

Apply for full particulars to—**Kochikar Bros** Udipi, Chief Agents for South Canara Malabar Travancore and Cochin

ಮುಂಬಯಿ ಲೈಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(1908 ರಲ್ಲಿ ಸ್ಥಾಪಿಸಲ್ಪಟ್ಟಿತು)

ಪ್ರಧಾನ ಆಫೀಸು ಮುಂಬಯಿ

ಒಂದು ಲಕ್ಷ ರೂಪಾಯಿನ ಸರ್ಕಾರಿ ಸರಕಾರದ ಪ್ರಾಮಿಸರಿ ನೋಟುಗಳು ಶೇಕಡಾ ... ಸರಕಾರದಲ್ಲಿ ಡಿಪೊಸಿಟಾಗಿ ಇಡೋಣಾಗಿರುವುದು

"ವಿಮೆ ದಾರರ ಬಾಧ್ಯತೆಗೆ ... ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ... ರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಟುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು:— ಹುಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್ಟೀಸ್ ಆವ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೋಲಿಕ್ ಮಾರ್ಸ್ ಲೆಂಡ್ ಪ್ರೈಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೋಗಳವರು

ಎಕ್ಟುಯುರಿ:—ಮಿ। ಜೋರ್ಜಕಿಂಗ್ ಎಫ್ ಎಫ್ ಎ ಎಫ್. ಐ ಎ. (ಲಂಡನ್)

ಮೆಡಿಕಲ್ ರಿಫರಿ:—ಡಾಕ್ಟರ್ ಆರ್. ರಾವ್ ಎಂ ಡಿ ಡಿ. ಎಸ್. ಸಿ. (ಲಂಡನ್).

ಮೆನೇಜಿಂಗ್ ಡ್ಯಾರೆಕ್ಟರ್:—ರಾ। ಪ್ರೆಮ್‌ರೋಜ್ ಆರ್ ಜೋಶಿ ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು.

ಏಜಂಟರು ಬೇಕಾಗಿರುವರು. ಧಾರಾಳವಾದ ಕಮಿಶನ್ ಕೊಡೋಣಾಗುವುದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್

ಪ್ರಾಮುಖ್ಯ ಏಜಂಟರು, ಉಡ್ಪಿ.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವವು ರಕ್ತಮಿಶ್ರಿತವೆಂದೂ ನಿರ್ಧರಿಸಿರುವರು ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಫುಪ್ಫುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಎಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ಸೇರಿಕೊಳ್ಳುವವು ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುವ್ಯಾರೆ ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರೋಕ್ತ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಚತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ ಚಾರ್ಜು ಪ್ರತ್ಯೇಕ ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು

ವಿಳಾಸ — ಯಮ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಸಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನನ್ನ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಶಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಹಾರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ ತೂಕದ ಸೇರು 1ಕ್ಕೆ ರೂ! 12-0-0, 5-0-0, 3-0-0, 2—8-0, 1—4—0, 1—0—0.

ಅರಗಜ ಮತ್ತು ಪಿಲ್ಲೆಗಳು ತೊಲಾ 1ಕ್ಕೆ 2—0 0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0—4—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸ**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,

ಸುಗಂಧಕಾರಿ, ಮೈಸೂರು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧೪ ೩ ಬಾಟ್ಲಿಗೆ ೨ ರೂ. ೧೦ ಆಣೆ.

೨ ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ೮ ೦

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ

ನಮ್ಮ ವಿಳಾಸ—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಕಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟ ನೋವು, ಉಳುಕು, ದೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯೂ ವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ಪೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B. M. Nath & Co, *Ayurvedic Chemists,*
Vepery Post MADRAS

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನ ಬೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದ ಚಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾತ), ಮೈ ನಡುಕ, ಶೀತ



ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 10ಂದ 12 ಕುಪ್ಪಿ ವರೇಗೆ ಪೋಸ್ಟೇಜು 4 ಆಣೆ.

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—"ಶ್ರೀ ಸೀತಾರಾಘವ ವೈದ್ಯಶಾಲಾ"
ಮೈಸೂರು.

ಡೋಂಗರೆ ಇವರ ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ, ಎಲ್. ಎಲ್. ಬಿ. ಹೆಡ್ ಮಾಸ್ತರ ಹ್ಯಾಸ್ಕೂಲು ಜುನಾಗಡ ಇವರು ಬರೆದದ್ದು.

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

ಬಾಟ್ಲಿ ಒಂದರ ಕಿಮ್ಮತು 0—12—0. ಟಪ್ಪಾಲ ಖರ್ಚು 0-4-0

K. T. Dongre & Co, ಕೆ. ಟಿ. ಡೋಂಗರೆ ಮತ್ತು ಕಂಪನಿ
Girgaon Bombay. ಗಿರಗಾಂವ ಮುಂಬಯಿ

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯ ವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಡಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—9.

ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು—ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬುದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್ ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರೆ.

ವಿಳಾಸ — ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ.

Estd. 1888 ಸ್ಥಾಪನೆ 1888

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟವಾರಿ **ಗಜಕರ್ಣವು** ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು

ಸಾರ್ಸಾಪರಿಲ್ಲಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖುಂಗಳೂ, ವ ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ **ಸಾರ್ಸಾಪರಿಲ್ಲೆಯು** ಕ್ರಯ ಬಾಟ್ಲಿಗಕ್ಕೆ ರೂ ೧—೪—೦. ಅಂಚೆ ವೆಚ್ಚ ೪ ಆಣೆ

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್

ಕೆ. ಬಿ. ರೇಳೆ ಪನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.



ಎಲಂಬಿಕ್ ವೆಜಿಟೆಬಲ್ ಟೊನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು. **ಆಯುರ್ವೇದ ಗ್ರಂಥಗಳಲ್ಲಿ** ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿ ಸಂಥಾದ್ದು ಪಿತ್ತಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು ರಕ್ತಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ **ಸ್ತ್ರೀಯರಿಗೂ,** ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1 2 0 ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಪರಿಗೋಳಿಸುತ್ತದೆ ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ ಸೇವನೆಗೆ ಬಹು ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ 1—6—0

ಅನೊಡ್ಯಾನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು —ಶೀತ, ಬೇದಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂದಿವಾತ, ನುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟ್ಲಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:-

ಎಸ್. ವೈದ್ಯಾ ಆಂಡ್ ಕೊ.
ಪಾರ್ಕ್ ಟೌನು, ಮದ್ರಾಸು.

S. VAIDYA & Co.
Park Town, Madras

"ಅಯೊನಿಕ್ ಫಾರ್ಮಸಿ"

ಎಂಬ ಔಷಧ ಕಾರ್ಖಾನೆಯ ಗೃಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೀಕ್ತ ಔಷಧಗಳು ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯುಷನ್. ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂದುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ

ಜಪಾನರುನ್ನತ ಸ್ಥಿತಿಗೆ ಮೂಲಾಧಾರ	೧—೪—೦
ಆರ್ಯ ಕೀರ್ತಿ	೦—೧೦—೦
ವೈದ್ಯಸಾರ ಸಂಗ್ರಹ	೩—೦—೦

ಇದು ಇಂಡಿಯ ದೇಶದಲ್ಲೆಲ್ಲಾ ದೊಡ್ಡ ವೈದ್ಯ ಗ್ರಂಥಗಳು ಘನ ಪಂಡಿತರಿಂದ ಪರಿಶೋಧಿಸಲ್ಪಟ್ಟದ್ದು

ಹನುಮದ್ವಿಲಾಸ	೦—೮—೦
ಋಗ್ವೇದ ನಿತ್ಯ ಕರ್ಮ	೦—೪—೦

ಶೋಭನೆ, ನರಬಲಿ, ಯಾಮಿನಿ ಈ ಪುಸ್ತಕಗಳನ್ನು ಒಂದು ಸರ್ತಿ ಓದಿದರೆ ಯಾವಾಗಲೂ ಓದುತ್ತಿರಬೇಕೆಂದು ಇಷ್ಟವಾಗುತ್ತದೆ.

ವಿಳಾಸ:— ಬಿ. ನರಸಿಂಹ ಅಯ್ಯಂಗಾರ್.

ಮೆನೇಜರ್ ವಿದ್ಯಾಸಾಗರ ಬುಕ್ ಡಿಪೋ,

ಚಿಕ್ಕಪೇಟೆ ಬೆಂಗಳೂರು ಸಿಟಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 3ನೇ ಜುಲ್ಯಾ 1914.

ಕೋಓಪರೇಟಿವ್ ಸೊಸ್ಯಾಟಿಗಳೂ ಡಿಸ್ಟ್ರಿಕ್ಟ್ ಆಫೀಸರರೂ

ಕ್ರೆಡಿಟ್ ಸೊಸ್ಯಾಟಿಗಳ ಪರವಾಗಿ ಶ್ರಮಪಡುತ್ತಿರುವ ದೇಶವತ್ಸಲರಿಗೆ ಕೊಓಪರೇಟಿವ್ ಸೊಸ್ಯಾಟಿಗಳ ವಿಷಯ ಇಂಡಿಯಾ ಗವರ್ನಮೆಂಟಿನವರು ಇತ್ತಲಾಗೆ ಪ್ರಕಟಿಸಿರುವ ಪ್ರಕಟಣೆಯನ್ನು ನೋಡಿ ತೃಪ್ತಿಯುಂಟಾಗದೆ ಇರದು. ಕ್ರೆಡಿಟ್ ಸೊಸ್ಯಾಟಿಗಳ ಇನ್ಸಪೆಕ್ಟರರು ಅಥವಾ ರಿಜಿಸ್ಟ್ರಾರರುಗಳ ಹೊರತು ಸರಕಾರದ ಇತರ ಆಫೀಸರರು, ಮುಖ್ಯವಾಗಿ ಜಿಲ್ಲಾಫೀಸರರು ಪ್ರಜಾಕ್ಷೇಮಾಭಿವೃದ್ಧಿಯ ಈ ಸಂಸ್ಥೆಗಳ ಕಡೆಗೆ ತಮ್ಮ ದೃಷ್ಟಿಯನ್ನು ಸಹ ಹಾಕುತ್ತಿದ್ದಿಲ್ಲ. ಜಿಲ್ಲಾ ಆಫೀಸರರ ಅಭಾವದ ಈ ವರ್ತನೆಯನ್ನು ತಿದ್ದುವ ಸಂದರ್ಭವನ್ನು ಸೂಚಿಸಿ ಇಂಡಿಯಾ ಸರಕಾರದವರು ಪ್ರಕಟಿಸಿರುವ ಈ ಆಜ್ಞೆಗೆ ಅನುಸಾರವಾಗಿ ಸಂಸ್ಥಾನಿಕ ಸರಕಾರದವರೂ ಇವರ ಕೈಕೆಳಗಿರುವ ಜಿಲ್ಲಾ ಆಫೀಸರರೂ ನಡದ್ದಲ್ಲಿ ವಿಶೇಷ ಪ್ರಯೋಜನವು ದೇಶಕ್ಕೆ ಈ ಮೂಲಕ ಸಂದೇಹವಿಲ್ಲದೆ ಪ್ರಾಪ್ತವಾಗುವುದು. ಯಾಕಂದರೆ ಇಂಡಿಯಾ ಸರಕಾರದವರ ಈ ಪ್ರಕಟಣೆಯು ಪ್ರಕೃತ ಪ್ರಜಾ ಮುಂದಾಳುಗಳಲ್ಲಿ ಅಂಕುರಿಸುತ್ತಿರುವ ಪ್ರಜಾ ಸೇವಾಭಾವನೆಗಳಿಗನುಕೂಲವಾಗಿರುವುದು. ಒರಿಯ ದೇಶವಾತ್ಸಲ್ಯ, ಪ್ರಜಾಪ್ರೀತಿ ಈ ಎರಡು ಉದ್ದೇಶಗಳಿಂದ ಪ್ರೇರಿತವಾದ ಧರ್ಮಬದ್ಧವಾದ ದೇಶ ಸೇವೆಯು ಬಾವನೆಗಳಲ್ಲಿ ಸರಕಾರದವರ ಮನ್ನಣೆಗೆ ಹೇಗೂ ಪ್ರಾಪ್ತವಾಗಬೇಕೆಂಬ ಭಾವವು ಪ್ರಕೃತ ಕಲಿತುಹೋದುದರಿಂದ ಸರಕಾರದವರ ಗೌರವದ ದೃಷ್ಟಿಯಿಲ್ಲದ ದೇಶ ಸೇವೆಯು ಸರಿಯಾಗಿ ಸಾಗುವುದು ದುರ್ಲಬವಾಗಿದೆ. ತಮ್ಮ ವರ್ತನೆಯಿಂದ, ತಮ್ಮ ಸೇವಾಸಾಧನಗಳಿಂದ ಸರಕಾರದವರ ಪ್ರೀತಿ, ಅವರ ಮನ್ನಣೆ ದೊರಕುವ ಸಂದರ್ಭಗಳಿವೆ ಎಂತಾದರೆ ಹಲವರು ಮುಂದೆ ಬಂದು ಆ ಸಾಧನಗಳನ್ನು ಕೈಕೊಳ್ಳುವರು. ಇಂಥಾ ಸೂತ್ರಾಧಾರದ ಮೇಲೆ ಪ್ರಜಾ ಸೇವೆಯನ್ನು ಕೈಕೊಳ್ಳುವುದು ಆಕ್ಷೇಪಕರವಾದರೂ ಪ್ರಜೆಗಳ ದೀನ ಸ್ಥಿತಿಯ ಈ ಕಾಲದಲ್ಲಿ ದೇಶ ಸೇವೆಯ ಪ್ರಾರಂಭದ ಪ್ರಯತ್ನಗಳಿಗೆ ಸರಕಾರದವರ ಈ ವಿಧಾನದ ಪ್ರೋತ್ಸಾಹವು ಆಗತ್ಯವಾಗಿರುವದು. ಪರಸ್ಪರ ಸಹಾಯಕ ಸಂಘಗಳ ಸ್ಥಾಪನೆಯಲ್ಲಿ ಜಿಲ್ಲಾ ಕಲೆಕ್ಟರ್ ದೊರೆಗಳವರಿಗೆ ವಿಶೇಷ ಒಲುಮೆಯಾಗವಿದೆ ಎಂತ ಜನರು ತಿಳಕೊಂಡರೆ ಈ ಸಂಘಗಳನ್ನು ಸ್ಥಾಪಿಸಲು ಹಲವರು ಮುಂದೊತ್ತಿ ಬರುವರು. ಜಿಲ್ಲಾ ಕಲೆಕ್ಟರರುಗಳಂದರೆ ವಿಶಿಷ್ಟ ಸರಕಾರವೆಂತ ಜನರ ಭಾವನೆಯು ಇರುವದರಿಂದ ಕೊಓಪರೇಟಿವ್ ಕ್ರೆಡಿಟ್ ಸೊಸ್ಯಾಟಿಗಳ ಸ್ಥಾಪನೆ ಪಾಲನೆಗಳಲ್ಲಿ ವಿಶೇಷ ಅಗ್ರಹವನ್ನು ಜಿಲ್ಲಾ ಕಲೆಕ್ಟರರುಗಳು ಇಂಡಿಯಾ ಸರಕಾರದವರ ಅಪೇಕ್ಷೆಗನುಗುಣವಾಗಿ ತೋರಿಸುವುದು ಆಗತ್ಯವಾಗಿದೆ.

ಜಿಲ್ಲಾ ಆಫೀಸರರುಗಳಿಗೆ ತಮ್ಮ ರೆವಿನ್ಯು ಮೊದಲಾದ ಇತರ ಆಡಳಿತೆ ಕೆಲಸಗಳಲ್ಲಿ ಪರಸ್ಪರ ಸಹಾಯಕ ಸಂಘಗಳಿಂದ ಇರುವ ಪ್ರಯೋಜನವನ್ನು ಇಂಡಿಯಾ ಸರಕಾರದವರು ಸೂಚಿಸಿರುವರು. ಪರಸ್ಪರ ಸಹಾಯಕ ಕ್ರೆಡಿಟ್ ಸಂಸ್ಥೆಗಳು ಇನ್ನೂ ಪರೀಕ್ಷಾರ್ಥ ಸಂಸ್ಥೆಗಳಾಗಿರವು. ಅವುಗಳು ಜನರಿಗೆ ಅರ್ಥ ಲಾಭವನ್ನು ಪ್ರಾಪ್ತಿಸುವುದರ ಹೊರತು ಪ್ರಜೆಗಳ ಇತರ ಹಾನಿ ವೃದ್ಧಿಯ ಸಾಧಕ ಸಂಸ್ಥೆಗಳು ಇವುಗಳಾಗಿರುತ್ತಿರುವುದರಿಂದ ಜಿಲ್ಲಾ ಆಫೀಸರರು ಇವುಗಳ ಕೆಲಸವು ತಮಗೆ ಸಂಬಂಧಪಟ್ಟದ್ದಲ್ಲವೆಂತ ಸುಮ್ಮನಿರುವುದು ಸರಿಯಲ್ಲ. ರೆವಿನ್ಯು ಇಲಾಖೆಯ ಕಾನೂನು ಮೊದಲಾದ ವಿಷಯಗಳು ಹೇಗೆ ಜಿಲ್ಲಾ ಆಫೀಸರರುಗಳಿಗೆ ಅಗತ್ಯವಾಗಿ ಗೊತ್ತಿರಬೇಕಾಗಿವೆಯೋ ಹಾಗೆಯೇ ಕೊಓಪರೇಟಿವ್ ಕ್ರೆಡಿಟ್ ಸೊಸ್ಯಾಟಿಗಳ ಮಾಹಿತಿಯನ್ನು ಜಿಲ್ಲಾ ಆಫೀಸರರು ಅಗತ್ಯವಾಗಿ ತಿಳಿಯಬೇಕಾಗಿರುವುದು. ಅದಲ್ಲದೆ ಈ ಸಂಘಗಳು ಆಕ್ಷೇಪಕರವಾದ ರೀತಿಯಲ್ಲಿ ಬೆಳೆದು ಪ್ರಯೋಜನ ಇಲ್ಲದವುಗಳಾಗದಂತೆಯೂ ಅವುಗಳು ಅಗತ್ಯವಾದ ಸಹಾಯವಿಲ್ಲದೆ ಬಿದ್ದುಹೋಗದಂತೆಯೂ ಜಿಲ್ಲಾ ಆಫೀಸರರುಗಳು ನೋಡಿಕೊಳ್ಳತಕ್ಕದ್ದೆಂತ ಶ್ರೇಷ್ಠ ಸರಕಾರದವರು ಆಜ್ಞಾಪಿಸಿರುತ್ತಾರೆ. ಸಂಘಗಳನ್ನು ಸ್ಥಾಪಿಸುತ್ತಿರುವ ತಮ್ಮ ಜಿಲ್ಲೆಯ ಜನರನ್ನು ಅವರ ಈ ಪ್ರಯತ್ನಗಳಲ್ಲಿ ಪ್ರೋತ್ಸಾಹಿಸುತ್ತ ಜಿಲ್ಲೆಯಲ್ಲಿ ಈ ಸಂಸ್ಥೆಗಳಿಗೆ ಸೇರದೆ ಇರುವ ಪ್ರಜಾ ಸಂಪನ್ನರನ್ನೂ ಇತರರನ್ನೂ ಈ ಸಂಸ್ಥೆಗಳಿಗೆ ಸೇರಿಸಿ ಇವುಗಳ ಅಭಿವೃದ್ಧಿಯನ್ನು ಜಿಲ್ಲಾ ಆಫೀಸರರು ಸಾಧಿಸಬೇಕೆಂತ ಇಂಡಿಯಾ ಸರಕಾರದವರು ಸೂಚಿಸಿರುತ್ತಾರೆ. ಮೇಲೆ ಈ ರೀತಿ ಸೂಚಿಸೋಣಾದ ಕಾರ್ಯ ಭಾರವನ್ನು ಜಿಲ್ಲಾಫಿಸರರು ತಾವೇ ಸ್ವತಹ ವಹಿಸಿಕೊಳ್ಳಬೇಕೆಂತ ಸಹ ಆಜ್ಞೆ ಇರುವುದು. ಜಿಲ್ಲೆಯ ಆಡಳಿತೆ ಮೊದಲಾದ ವಿಷಯಗಳಲ್ಲಿ ಜನರ ಯಥಾರ್ಥವಾದ ಅಭಿಪ್ರಾಯವನ್ನು ತಿಳಕೊಳ್ಳುವುದು, ಪ್ರಾಯಮರಿ ವಿದ್ಯಾಭ್ಯಾಸ ಪ್ರಸರಣೆಯನ್ನು ಮಾಡುವುದು, ಆರೋಗ್ಯ ರಕ್ಷಣೆಯ ಏರ್ಪಾಡುಗಳನ್ನು ಕೈಕೊಳ್ಳುವುದು, ರೋಗಿಗಳ ಆರೈಕೆ ನೋಡುವುದು, ಗ್ರಾಮುಗಳ ಆಡಳಿತೆ ಕೆಲಸ—ಈ ಎಲ್ಲಾ ವಿಷಯಗಳಲ್ಲಿ ಪರಸ್ಪರ ಸಹಾಯಕ ಸಂಘಗಳ ಸ್ಥಾಪನೆಯು ಹೇಗೆ ಅನುಕೂಲವಾಗಿ ಪರಿಣಮಿಸಬಹುದೆಂಬ ವಿಷಯವನ್ನು ಆಯಾ ಸಂಸ್ಥಾನಿಕ ಸರಕಾರದವರು ಪರ್ಯಾಲೋಚಿಸಬಹುದೆಂತ ಇಂಡಿಯಾ ಸರಕಾರದವರು ಸೂಚಿಸಿರುತ್ತಾರೆ. ಜಿಲ್ಲಾ ಆಡಳಿತೆಯ ಕೆಲಸಗಳಲ್ಲಿ ಈ ಸಂಸ್ಥೆಗಳು ಯಾವರೀತಿ ಮತ್ತು ಎಷ್ಟರ ಮಟ್ಟಿಗೆ ಸಹಾಯಕರವಾಗಿರಬಹುದೆಂಬ ವಿಷಯವನ್ನು ಈ ತನಕ ದೃಢವಾಗಿ ಹೇಳಲು ಸಾಧ್ಯವಲ್ಲವಾದರೂ ಈ ಸಂಘಗಳ ಸ್ಥಾಪನೆಯಿಂದ ಜಿಲ್ಲಾ ಆಡಳಿತೆಯ ಕಾರ್ಯನಿರ್ವಾಹದಲ್ಲಿ ಅಗತ್ಯವಾಗಿ ನೋಡಿಕೊಳ್ಳಬೇಕಾದ ನೂತನ ವಿಷಯಗಳು ತಲೆದೋರಿರುವುದರಿಂದ ಜಿಲ್ಲಾ ಆಫೀಸರರು ಈ ವಿಷಯಕ್ಕೆ ಅಗತ್ಯವಾಗಿ ತಮ್ಮ ನಿಗಾ ಕೊಡತಕ್ಕದ್ದಾಗಿದೆ.

ಇಂಡಿಯಾ ಸರಕಾರದವರ ಈ ಸೂಚನೆಗಳು ವಂದನೀಯವಾಗಿರುವವು. ಈ ಸೂಚನೆಗಳಿಗನುಸಾರವಾದ ಕಾರ್ಯಬಾರವನ್ನು ಜಿಲ್ಲಾ ಆಫೀಸರರು ನಡಿಸುವಾಗ ಜನರ ಮನಸ್ಸಿನಲ್ಲಿ ಯಾವ ವಿಧದಲ್ಲಿಯಾದರೂ ಸಂಶಯಕ್ಕೆ ಆಸ್ಪದ ಕೊಡದಂತೆ ಜಾಗರೂಕತೆಯುಳ್ಳವರಾಗಬೇಕೆಂದೂ ಪರಸ್ಪರ ಸಹಾಯದ ಶೀಲವು ಜನರಲ್ಲಿ ಯಥಾರ್ಥವಾದ ರೀತಿಯಲ್ಲಿ ಬೆಳೆಯಲು ಆಸ್ಪದ ಕೊಡುವ ರೀತಿಯಲ್ಲಿ ಜಿಲ್ಲಾ ಆಫೀಸರರು ಇವುಗಳಿಗೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕಾಗಿಯೂ ಈ ಮೂಲಕ ಸೂಚಿಸಿರುತ್ತೇವೆ.

ವೈಸರಾಯರವರ ಕಾರಭಾರಾವಧಿಯನ್ನು ಹೆಚ್ಚಿಸುವದು.

ಬ್ರಿಟಿಷ್ ಆದಿಪತ್ಯಕ್ಕೆ ಒಳಪಟ್ಟಿರುವ ಈ ವಿಶಾಲವಾದ ಹಿಂದೂಸ್ಥಾನ ದೇಶದ ರಾಜ್ಯಕಾರಭಾರವನ್ನು ಸಾಗಿಸುವದಕ್ಕ ಚಕ್ರವರ್ತಿಗಳ ಪ್ರತಿನಿಧಿಗಳಾಗಿ ಸರಕಾರದವರು ಕಳಿಸುವ ಸರ್ವಾಧಿಪತಿಗಳ ಕಾರ್ಯಭಾರದ ಅವದಿಯು ಐದು ವರ್ಷಗಳ ಮಟ್ಟಿಗೆ ಇರುವದೆಂಬದು ಎಲ್ಲರಿಗೂ ಗೊತ್ತುಂಟು. ಆದರೂ ಸಾಮ್ರಾಜ್ಯದ ರಾಜ್ಯ ಸೂತ್ರಗಳನ್ನು ನಡೆಯಿಸುವವರು ಪ್ರಸಂಗವನ್ನು ನೋಡಿಕೊಂಡು ಈ ಅವಧಿಯನ್ನು ಹೆಚ್ಚುಕಡಿಮೆ ಮಾಡಿದ ಉದಾಹರಣೆಗಳೂ ಹಿಂದೂಸ್ಥಾನದ ಆಧುನಿಕ ರಾಜಕೀಯ ಇತಿಹಾಸದಲ್ಲಿ ದೊರೆಯುತ್ತವೆ. ಲಾರ್ಡ್ ರಿಪನ್ ಪ್ರಭುಗಳವರು ಇಂಗ್ಲಂಡದ ಮಂತ್ರಿ ವರ್ಗದವರು ತಿರಿಗಿ ಕರೆದುದರಿಂದ ತಮ್ಮ ಕಾಲಾವಧಿಯು ಮುಗಿಯುವ ಪೂರ್ವದಲ್ಲಿಯೇ ಕೆಲಸ ಬಿಟ್ಟು ಹೋಗಬೇಕಾಯಿತು. ಸಾಮ್ರಾಜ್ಯ ವಾದಿಗಳೂ ನಿರಂಕುಶ ಪ್ರಭುತ್ವಕ್ಕೆ ಮೆಚ್ಚಿದವರೂ ಆದ ಲಾರ್ಡ್ ಕರ್ಜನ್‌ರವರ ಕಾಲಕೀರ್ದಿಯು ಮತ್ತೂ ೫ ವರ್ಷಗಳ ವರೆಗೆ ಬೆಳೆಯಿಸಲ್ಪಟ್ಟದ್ದೂ ಪ್ರಸಿದ್ಧ ಸಂಗತಿಯಾಗಿರುವದು. ಲಾರ್ಡ್ ಕರ್ಜನ್‌ರವರ ಕಾಲಕ್ಕೆ ಹಿಂದೂಸ್ಥಾನದ ಸೇನಾಪತಿಗಳಾಗಿದ್ದ ಲಾರ್ಡ್ ಕಿಚನರ್‌ರವರಿಗೂ ಸರ್ವಾಧಿಪತಿಗಳಿಗೂ ಕೆಲವು ಸಂಗತಿಗಳಲ್ಲಿ ಮತಭೇದವಾಗಿ, ಲಾರ್ಡ್ ಕರ್ಜನ್‌ರವರು ರಾಜೀನಾಮೆಯನ್ನು ಕೊಡುವ ಪ್ರಸಂಗವು ಬಾರದಿದ್ದ ಪಕ್ಷದಲ್ಲಿ, ಇವರ ಕಾರಭಾರವು ಏಳೇ ವರ್ಷಗಳಲ್ಲಿ ಮುಗಿಯದೆ, ಹತ್ತು ವರ್ಷಗಳ ವರೆಗೆ ಅಖಂಡವಾಗಿ ಸಾಗುತ್ತಿತ್ತೆಂಬದು ನಿರ್ವಿವಾದವಾಗಿದೆ. ಪ್ರಕೃತದಲ್ಲಿ ವ್ಹೈಸರಾಯರಾಗಿರುವ ಘನವನ್ನು ಹೊಂದಿದ ಲಾರ್ಡ್ ಹಾರ್ಡಿಂಜರವರ ಪಂಚ ವಾರ್ಷಿಕ ಕಾರಭಾರವು ಬರುವ ೧೯೧೫ನೇ ಇಸವಿಯ ಅಕ್ಟೋಬರು ತಿಂಗಳ ೧೫ನೇ ತಾರೀಕಿಗೆ ಮುಗಿಯುವದರಿಂದ, ಕೂಡಲೆ ಅವರನ್ನು ಕೆಲಸ ಬಿಡಿಸದೆ, ಮುಂದೆ ಎರಡು ವರ್ಷಗಳ ವರೆಗಾದರೂ ಲಾರ್ಡ್‌ರವರನ್ನೇ ಸರ್ವಾಧಿಪತಿಗಳಾಗಿ ಇಲ್ಲಿ ಇಡಬೇಕೆಂದು ಚಕ್ರವರ್ತಿಗಳನ್ನೂ ಅವರ ಪ್ರಧಾನಮಂಡಲವನ್ನೂ ಪ್ರಾರ್ಥಿಸಬೇಕಾಗಿ ಈಗ ಇಂಡಿಯಾದೇಶದಲ್ಲೆಲ್ಲ ಕಡೆಗೂ ಉದ್ಯೋಗ ನಡೆದಿರುವದು. ಹಾರ್ಡಿಂಜಪ್ರಭುಗಳು ಸರ್ವಾಧಿಪತಿಗಳಾಗಿ ಬಂದಂದಿನಿಂದಲೂ ದೇಶದೊಳಗಿನ ಅಕ್ರಮಗಳೆಲ್ಲ ದೂರವಾಗಿ, ಪ್ರಜಾಸೌಖ್ಯವೂ ನೆಮ್ಮದಿಯೂ ಹೆಚ್ಚುತ್ತಲಿರುವದು ಸಕಲರೂ ಅನುಭವಗೊಂಡ ಮಾತಾಗಿದೆ. ಪ್ರಕೃತದಲ್ಲಿ ಇಂಡಿಯಾ ಗವರ್ನಮೆಂಟಿನವರು ಮುಖ್ಯವಾಗಿ ಅಂಗೀಕರಿಸಿರುವ ಶಿಕ್ಷಣ ವಿಷಯವೂ

ಜನಾರೋಗ್ಯ ವಿಷಯವೂ ದೇಶದ ತುಂಬೆಲ್ಲ ಚಿರವಾಗಿ ನೆಲೆಗೊಳ್ಳುವರಕ್ಕೆ ಇನ್ನೂ ಕಾಲಾವಧಿಯು ಬೇಕಾಗಿರುವದು. ಆ ವರೆಗೆ ಲಾರ್ಡ್ ಹಾರ್ಡಿಂಜ್‌ರವರಂತಹ ಸಹಾನುಭೂತಿಪೂರ್ಣರಾದ ಸರ್ವಾಧಿಪತಿಗಳು ಹಿಂದುಸ್ಥಾನದ ರಾಜ್ಯ ಸೂತ್ರಧಾರಿಗಳಲ್ಲಿ ಪ್ರಮುಖರಾಗಿರತಕ್ಕದ್ದು ಅತ್ಯಂತ ಅವಶ್ಯವಾಗಿದೆ. ಕಳೆದ ಜೂನ್ ೨೦ನೆಯ ತಾರೀಕಿನ ದಿವಸ ದೇಶದಲ್ಲೆಲ್ಲ ಕಡೆಗೆ ನಡೆದಿರುವ ವೈಸರಾಯರವರ ವರ್ಧಂತಿ ದಿವಸದಲ್ಲಿ ಅಲ್ಲಲ್ಲಿ ನಡೆದ ಸಭೆಗಳಲ್ಲಿ ಲಾರ್ಡ್ ಹಾರ್ಡಿಂಜ ದೊರೆಗಳ ಕಾರ್ಯಭಾರದ ಅವಧಿಯನ್ನು ಎರಡು ವರ್ಷಗಳ ವರೆಗಾದರೂ ಹೆಚ್ಚಿಸಬೇಕೆಂದು ಬಾದಶಹರನ್ನು ಪ್ರಾರ್ಥಿಸುವ ಠರಾವುಗಳು ಪಾಸುಮಾಡಲ್ಪಟ್ಟಿವೆ. ಈ ಬಗೆಯ ಅರ್ಜಿಗಳು ಬ್ರಿಟಿಷ್ ಪ್ರಧಾನಮಂಡಲವನ್ನು ಬೇಗನೇ ಸೇರುವದು ಅಗತ್ಯವಾಗಿರುವದರಿಂದ ಈ ಕಾರ್ಯದಲ್ಲಿ ವಿಳಂಬವಾಗಿ ಉಪಯೋಗವಿಲ್ಲ. ಯಾಕಂದರೆ ಲಾರ್ಡ್ ಹಾರ್ಡಿಂಜರವರ ತರುವಾಯದಲ್ಲಿ ಹಿಂದೂಸ್ಥಾನದ ಸರ್ವಾಧಿಪತಿಗಳೆಂದು ಯಾರನ್ನು ನೇಮಿಸಬೇಕೆಂಬ ಬಗ್ಗೆ ಈಗಿನಿಂದಲೇ ಚರ್ಚೆಗೆ ಪ್ರಾರಂಭವಾಗಿರುವದಾಗಿ ವಿಲಾಯತಿಯ ವರ್ತಮಾನವಿದೆ ಲಾರ್ಡ್ ಕರ್ಜನ್‌ರವರು ರಾಜೀನಾಮೆಯನ್ನು ಕೊಡಲಿಕ್ಕೆ ಪ್ರತ್ಯಕ್ಷವಾಗಿ ಕಾರಣರಾಗಿರುವ ಲಾರ್ಡ್ ಕಿಚನರ್ ದೊರೆಗಳು ನೇಮಿಸಲ್ಪಡುವ ಸಂಭವವಿರುವದಾಗಿಯೂ ವಿಲಾಯತಿಯಲ್ಲಿ ವರ್ತಮಾನವಿದೆ. ಅಲ್ಲಿಯ ಪರಿಷ್ಟಜನ ಪರಿಘದಲ್ಲಿ ಈ ವಿಷಯ ನಾಗಿ ಅನುಕೂಲಮತವೇ ಇರುವದೆಂದೂ ತಿಳಿಯುತ್ತದೆ. ಆದುದರಿಂದ ಈ ವಿಷಯವದಾದರೊಂದು ಮಾತಿನ ಕೊನೆಯ ನಿರ್ಣಯವಾಗುವ ಪೂರ್ವದಲ್ಲಿಯೇ ಇಲ್ಲಿಂದ ವಿಜ್ಞಾಪನೆಗಳು ಹೋಗಿ ತಲ್ಪುವದು ಕಾರ್ಯದ ಸಫಲಸಾಧ್ಯತೆಗೆ ಅನುಕೂಲವಾಗಬಹುದು.

~~~~~~~~

ಸಿವಿಲ್ ಕೋರ್ಟುಗಳ ಸ್ಥಾಪನೆಯಲ್ಲಿ ಆಗಬೇಕಾದ ಮಾರ್ಪಾಟಗಳು.

~~~~~~~~

ಮಾಜಿ ಹ್ಯಾಕೋರ್ಟ ಜಡ್ಜರಾಗಿದ್ದ ಸರ್ ಎಸ್ ಸುಬ್ರಮಣ್ಯಯ್ಯರವರು ಸಿವಿಲ್ ಕೋರ್ಟು ಸ್ಥಾಪನೆಯಲ್ಲಿ ಮಾಡಬೇಕಾದ ಮಾರ್ಪಾಟಗಳನ್ನು ಕುರಿತು ಬರೆದ ಲೇಖನವು ಕೊಮನ್‌ವೀಲ್ ಎಂಬ ಇಂಗ್ಲೀಷ ಪತ್ರದಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಸಿವಿಲ್ ಕೋರ್ಟುಗಳ ಸ್ಥಾಪನೆಯಲ್ಲಿ ಬ್ರಿಟಿಷ್ ಕಾಯಿದೆಗಳ ಸ್ಥಾಪನೆಯನ್ನು ಹೇಗೆ ಅನುಸರಿಸಿದೆ ಎಂಬುದನ್ನು ತಮ್ಮ ಲೇಖನದ ಪ್ರಾರಂಭದಲ್ಲಿ ವಿವರಿಸಿರುತ್ತಾರೆ. ವೃತ್ತಪತ್ರಿಕೆಗಳ ಪ್ರಾಬಲ್ಯದಿಂದಲೂ ಪಾರ್ಲಿಮೆಂಟ ಸಭೆಯ ... ಆಗಿರುವ ವಿಶೇಷ ಅಧಿಕಾರ ಬಲದಿಂದಲೂ ಕೋರ್ಟುಗಳನ್ನು ಯುಕ್ತವಾದ ರೀತಿಯಲ್ಲಿ ನಡೆಯಗೊಳಿಸುವ ಸ್ವತಂತ್ರವುಳ್ಳ ದೇಶವಾದ ಬ್ರಿಟಿಷ್ ಕೋರ್ಟುಗಳ ಪದ್ಧತಿಯನ್ನನುಸರಿಸಿ ಹಿಂದೂಸ್ಥಾನದಲ್ಲಿ ಸಹ ಕೋರ್ಟುಗಳನ್ನು ಸ್ಥಾಪಿಸುವದು ಯುಕ್ತವಲ್ಲವೆಂತ ಇವರ ವಾದವಾಗಿರುವುದು ಕೋರ್ಟುಗಳು ಬಡ ಜನರ ಸಿವಿಲ್ ದಾವೆಗಳ ... ಟ್ಟುವೆಂಬದನ್ನು ವಾದಿಸುವುದು ಅಗತ್ಯವಲ್ಲವೆಂತ ಸೂಚಿಸಿ ಪ್ರಕೃತಕ್ಕೆ ಈ ಕೋರ್ಟುಗಳಲ್ಲಿ ಬೇಕಾದ ಮಾರ್ಪಾಟಗಳನ್ನು ಸೂಚಿಸಿರುತ್ತಾರೆ. ಹ್ಯಾಕೋರ್ಟುಗಳಲ್ಲಿಯೂ ಡಿಸ್ಟ್ರಿಕ್ಟ್ ಕೋರ್ಟುಗಳಲ್ಲಿಯೂ ಅಪೀಲುಗಳಿಗೆ ಬಹಳ ವಿಶೇಷವಾದ ಅವಕಾಶ ದೊರಕದಂತೆ ಕೆಲವು ಸೂಚನೆಗಳನ್ನು ತಮ್ಮ ಲೇಖನದಲ್ಲಿ ಸರ್ ಸುಬ್ರಮಣ್ಯಯ್ಯರವರು ಬರೆದಿರುವರು. ಈಗ ಇರುವ ಗ್ರಾಮಕೋರ್ಟುಗಳು ನಿಷ್ಪ್ರಯೋಜಕವಿದ್ದುವೆಂಬುದು ಸುಬ್ರಮಣ್ಯಯ್ಯರವರ ಅಭಿಪ್ರಾಯವಾಗಿದೆ. ಗ್ರಾಮಕೋರ್ಟುಗಳನ್ನು ... ನಡತೆ, ಪ್ರಾಮಾಣಿಕತ್ವ ಮೊದಲಾದ ಸದ್ಗುಣಗಳಿಂದ ಹೆಸರುವಾಸಿ ಹೊಂದಿದ ಗ್ರಾಮಸ್ಥರ ಪೈಕಿ ಮೂವರನ್ನು ಗ್ರಾಮಕೋರ್ಟಿನ ಜೊತೆಗೆ ನೇಮಿಸಬೇಕು. ... ಮೂರು ವರುಷಗಳ ಕಾಲದ ವರೆಗೆ ಇವರು ಈ ಅಧಿಕಾರವುಳ್ಳವರಾಗಿದ್ದು ಇವರಿಗೆ ಮೊಕದ್ದಮೆಗಳನ್ನು ತೀರ್ಮಾನಿಸಿದ ಸಲುವಾಗಿ ... ಪ್ರತಿಫಲವನ್ನು ಕೊಡಬೇಕೆಂತ ಸೂಚಿಸಿರುತ್ತಾರೆ. ಈ ಪಂಚಾಯತರು ಒಂದುವೇಳೆ ಅಸಾಧ್ಯವೆಂತ ಕಂಡುಬಂದರೆ ಈ ಮೂವರಲ್ಲಿ ಒಬ್ಬರನ್ನು ತಿಂಗಳು ಒಂದಕ್ಕೆ ೫೦ರಿಂದ ೧೦೦ ರೂಪಾಯಿಗಳ ಸಂಬಳದ ಮೇಲೆ ನೇಮಿಸಬೇಕೆಂದು ಹೇಳಿರುವರು. ಈ ರೀತಿ ಸಂಬಳವು ಕೊಡೋಣವಾಗುವದರಿಂದ ಈ ಕೆಲಸಕ್ಕೆ ತಕ್ಕ ಯೋಗ್ಯತೆಯುಳ್ಳವರು ದೊರಕುವರು. ಈ ಗ್ರಾಮಕೋರ್ಟುಗಳ ಚಕಬಂದಿಗೆ ಸೇರುವ ವಿಸ್ತೀರ್ಣವನ್ನು ಬೇಕಾದಂತೆ ಹೆಚ್ಚಿಸಿ ಒಂದು ಜಿಲ್ಲೆಯಲ್ಲಿ ಇಂಥಾ ಕೋರ್ಟುಗಳ ಸಂಖ್ಯೆಯು ಅನಾವಶ್ಯಕವಾಗಿ ಹೆಚ್ಚಾಗದಂತೆ ನೋಡಿಕೊಳ್ಳಬೇಕಾಗಿರುವುದು. ರೂಪಾಯಿ ನೂರರ ಮೌಲ್ಯಕ್ಕೆ ಮಿಕ್ಕಿದ ಮೌಲ್ಯವುಳ್ಳ ಮೊಕದ್ದಮೆಗಳ ವಿಚಾರಣೆಯೂ ಈ ಕೋರ್ಟುಗಳಲ್ಲಿ ನಡಿಯಬೇಕು. ಮತ್ತು ಇಂಥಾ ಕೋರ್ಟು ತೀರ್ಮಾನಗಳಲ್ಲಿ ಕಾನೂನುಗಳ ಉಲ್ಲಂಘನೆ ಮಾತ್ರ ಇದ್ದರೆ ಅಪೀಲು ನಡಿಯುವಂತೆ ಆಗಬೇಕಲ್ಲದೆ ಇತರ ವಿದ್ಯಮಾನಗಳಲ್ಲಿ ಈ ಕೋರ್ಟಿನ ತೀರ್ಮಾನವೇ ಆಖೈರ ತೀರ್ಮಾನವಾಗಿರಬೇಕೆಂತ ಸೂಚಿಸೋಣಾಗಿರುತ್ತದೆ. ಇಂಥಾ ಗ್ರಾಮಕೋರ್ಟಿನ ಬೆಂಚುಗಳಲ್ಲಿ ಸಂಬಳ ಹೊಂದುವ ಅಧಿಕಾರಸ್ಥನಿಗೆ ಎಲ್ಲಾ ಕಾಲಗಳಲ್ಲಿಯೂ ಕೆಲಸವಿಲ್ಲದ ಸಂದರ್ಭಗಳಲ್ಲಿ ಗ್ರಾಮ ಪಂಚಾಯತರ ಇತರ ಕೆಲಸಗಳನ್ನು ಈ ಅಧಿಕಾರಿಯು ಮಾಡುವುದರಿಂದ ಈ ಅಧಿಕಾರಿಯ ಸಮಯವು ವ್ಯರ್ಥವಾಗಿ ಕಳೆದುಹೋಗದು ಹೀಗೆ ಈ ಗ್ರಾಮಾಧಿಕಾರಸ್ಥಾನಕ್ಕೆ ಅರ್ಹರಾಗಿರುವರರು ದೊರಕುವಂತೆ ಪ್ರತ್ಯೇಕವಾಗಿ ಒಂದು ಪರೀಕ್ಷೆಯನ್ನು ಏರ್ಪಡಿಸಬೇಕೆಂಬ ಸೂಚನೆಯು ಸುಬ್ರಮಣ್ಯಯ್ಯರವರ ಲೇಖನದಲ್ಲಿರುವುದು. ಇಂತಹ ಗ್ರಾಮಕೋರ್ಟುಗಳ ಮೇಲ್ವಿಚಾರವನ್ನು ನಡಿಸಲು ರೂ. ೬೦೦ ಸಂಬಳದ ಒಬ್ಬ ಸಬ್ ಜಡ್ಜರನ್ನು ನೇಮಿಸುವುದು ಅಗತ್ಯ. ಈ ಅಧಿಕಾರಸ್ಥರು ಜಿಲ್ಲೆಯ ದೇಶಭಾಷೆಯ ಒಳ್ಳೇ ಪರಿಚಿತಿಯುಳ್ಳವರಾಗಿರಬೇಕಾಗಿರುವುದು.

ಡಿಸ್ಟ್ರಿಕ್ಟ್ ಮುನ್ಸೀಫರ ನೇಮಕಗಳನ್ನು ಒಂದನೇ ಮತ್ತು ಎರಡನೇ ಗ್ರೇಡುಗಳ ನೇಮಕಗಳಾಗಿ ವಿಂಗಡಿಸಿ ರೂ ೪೦೦ ಮತ್ತು ೫೦೦ರಂತೆ ತಿಂಗಳು ಒಂದಕ್ಕೆ ಇವರಿಗೆ ಸಂಬಳವು ದೊರಕಬೇಕೆಂಬದಾಗಿಯೂ, ರೂ. ೫೦೦೦ದ ಮೌಲ್ಯದ ವರೇಗಿನ ದಾವೆಗಳನ್ನು ಇವರು ತನಖಿ ನಡಿಸುವ ಅಧಿಕಾರವನ್ನು ಇವರಿಗೆ ಕೊಡಬೇಕೆಂತಲೂ ಸುಬ್ರಮಣ್ಯಯ್ಯರರವರು ಸೂಚಿಸಿರುತ್ತಾರೆ. ಇದೇ ರೀತಿ ಸಬ್‌ಜಡ್ಜರ ನೇಮಕಗಳಲ್ಲಿ ಬೇಕಾದ ತಿದ್ದುಪಡಿಯು ಸೂಚಿಸೋಣಾಗಿರುವುದು. ರೂ. ೧೦,೦೦೦ ಮೌಲ್ಯದ ದಾವೆಗಳ ತೀರ್ಮಾನದಲ್ಲಿ ಕಾನೂನು ಉಲ್ಲಂಘನೆಯಲ್ಲದೆ ಇತರ ವಿದ್ಯಮಾನಗಳಲ್ಲಿ ಸಬ್ ಜಡ್ಜರವರ ತೀರ್ಮಾನದ ಮೇಲೆ ಅಪೀಲು ಇರಕೂಡದೆಂಬ ಸುಬ್ರಮಣ್ಯಯ್ಯರವರ ಸೂಚನೆಯಿಂದ ಹ್ಯಾಕೋರ್ಟುಗಳಲ್ಲಿ ಅಪೀಲು ಕೆಲಸವು ಕಡಿಮೆಯಾಗಿ ಹ್ಯಾಕೋರ್ಟ ಜಡ್ಜರುಗಳಿಗೆ ಡಿಸ್ಟ್ರಿಕ್ಟ್ ಕೋರ್ಟುಗಳ ಮತ್ತು ಮುನ್ಸಿಪ್ ಕೋರ್ಟುಗಳ ಕೆಲಸದ ತನಖಿಯನ್ನು ಮಾಡಲು ಅವಕಾಶ ದೊರಕುತ್ತದೆ ಹ್ಯಾಕೋರ್ಟ ಜಡ್ಜರವರ ಈ ಮೇಲ್ವಿಚಾರದಿಂದ ಸಿವಿಲ್ ಕೋರ್ಟುಗಳ ಕೆಲಸವೆಲ್ಲವು ಸರಿಯಾಗಿ ನಡಿಯುವದೆಂತ ಸರ್ ಎಸ್ ಸುಬ್ರಮಣ್ಯಯ್ಯರರವರು ಸೂಚಿಸಿರುವರು.

~~~~~~~~

ಗತಿಸಿದ ಮ॥ ರಾ॥ ಗಳಾದ ಬಿ ವೆಂಕಟಾಚಾರ್ಯರು.

~~~~~~~~

ಕನ್ನಡ ಗ್ರಂಥಲೇಖನ ಕಾರ್ಯದಲ್ಲಿ ಕ್ರಾಂತಿಯನ್ನುಂಟುಮಾಡಿ, ಹೊಸಗನ್ನಡದಲ್ಲಿ ಗದ್ಯಗ್ರಂಥವನ್ನು ಸುಲಭವಾದ ಶೈಲಿಯಲ್ಲಿ ಬರೆಯಬಹುದೆಂಬದನ್ನು ಇಡೀ ಕನ್ನಡ ನಾಡಿನ ಅಕ್ಷರಕ್ಷರ ಅನುಭವಕ್ಕೆ ತಂದುಕೊಟ್ಟು, ಉತ್ಕೃಷ್ಟ ಕನ್ನಡ ಗ್ರಂಥಕಾರರೆಂದು ಇಡೀ ಕರ್ನಾಟಕದ ವಾಚನ ಪ್ರಿಯ ಸ್ತ್ರೀಪುರುಷರಿಗೆ ಪರಿಚಿತರಾಗಿರುವ ಮ॥ ರಾ॥ ಗಳಾದ ಬಿ ವೆಂಕಟಾಚಾರ್ಯರವರು ಗತಿಸಿದ ೨೭ನೇ ತಾರೀಕು ಶುಕ್ರವಾರ ದಿವಸ ದಿವಂಗತರಾದರೆಂಬದಾಗಿ ಅತ್ಯಂತ ದುಃಖದಾಯಕ ವರ್ತಮಾನವು ಬಂದಿದೆ ತಮ್ಮ ವಯಸ್ಸಿನ ೧೮ನೇ ವರ್ಷ ಪ್ರಾಯದಲ್ಲಿ ಮೈಸೂರ ಸಂಸ್ಥಾನದ ಸರಕಾರೀ ನವಕರಿಯಲ್ಲಿ ಒಂದು ಚಿಕ್ಕ ಉದ್ಯೋಗಕ್ಕೆ ಸೇರಿ ತಮ್ಮ ಜಾಣತನದಿಂದಲೂ, ನಿಷ್ಪಕ್ಷಪಾತದಿಂದಲೂ, ಕರ್ತವ್ಯದಕ್ಷತೆಯಿಂದಲೂ ೧ನೇ ತರಗತಿಯ ಮುನಸೀಫ ಪದವಿಯನ್ನು ಹೊಂದಿ ೩೭ ವರ್ಷಗಳ ರಾಜಸೇವೆಯಾದನಂತರ, ೧೯೦೦ನೇ ಇಸವಿಯಲ್ಲಿ ಸರಕಾರೀ ಕಾರ್ಯದಿಂದ ನಿವೃತ್ತರಾದ ಸಂಗತಿಯಿಂದ ಅವರು ಯಾವ ಯೋಗ್ಯತೆಯವರಾಗಿದ್ದರೆಂಬುದನ್ನು ಸ್ವಾಭಾವಿಕವಾಗಿಯೇ ತರ್ಕಿಸಬಹುದಾಗಿದೆ. ಆದರೆ, ಇವರ ಕರ್ತೃತ್ವದ ಪ್ರವಾಹವು ರಾಜಸೇವೆಯಲ್ಲಿಯೇ ಅಡಗಿಹೋಗದೆ, ಲೋಕಸೇವೆಯಲ್ಲಿಯೂ ವಿಶಾಲವಾಗಿ ಫಲಪ್ರದವಾಯಿತೆಂಬದು ವಿಶೇಷವಾಗಿ ಅಭಿನಂದಿಸತಕ್ಕ ಸಂಗತಿಯಾಗಿದೆ ಸರ್ವಭಕ್ಷಕ ಕಾಲನ ಅನಂತಸಾಮ್ರಾಜ್ಯದಲ್ಲಿ ಇಂದಿನ ವರೆಗೆ ನಮ್ಮ ಕನ್ನಡ ನಾಡಿನಲ್ಲಿ ಎಷ್ಟೋ ಮುನಸೀಫರಾಗಿ ಹೋದರು; ಇನ್ನು ಮುಂದೆ ಹೋಗುವರು. ಆದರೆ ಮ॥ ರಾ॥ ಗಳಾದ ಬಿ. ವೆಂಕಟಾಚಾರ್ಯರಂತೆ ಭಾಷಾಸೇವೆಯ ವ್ರತವನ್ನು ಅಂಗೀಕರಿಸಿ ಹೆಚ್ಚುಕಡಿಮೆ ೩೦ ವರ್ಷಗಳ ವರೆಗೆ ಅದನ್ನು ಅಬಾಧಿತವಾಗಿ ನಡಿಸಿ ಹೊಸಗನ್ನಡದಲ್ಲಿ ಪ್ರಚಂಡವಾದ ಗ್ರಂಥಸಮೂಹವನ್ನು ನಿರ್ಮಾಣಮಾಡಿ, ಇಡೀ ಕರ್ನಾಟಕ ವಾಸಿಯರನ್ನು ತಮ್ಮ ಉಪಕಾರ ಭಾರದಿಂದ ನಮ್ರರಾಗುವಂತೆ ಮಾಡಿರುವವರು ಬೇರೆ ಯಾರಿರುವರು? ಇಂದಿಗೆ ಹಿಂದುಸ್ಥಾನದ ಯಾವತ್ತೂ ದೇಶಭಾಷೆಗಳಲ್ಲಿ ಅಗ್ರೇಸರತ್ವದ ಬಹುಮಾನವನ್ನು ಪಡೆದಿರುವ ವಂಗಸಾಹಿತ್ಯ ಸಾಗರದಿಂದ ಉಜ್ವಲವಾದ ರತ್ನಗಳನ್ನು ಹುಡುಕಿ ತೆಗೆದು, ಅವುಗಳಿಗೆ ಕನ್ನಡ ಸ್ವರೂಪವನ್ನಳವಡಿಸಿ ಆ ರತ್ನಮಾಲೆಯಿಂದ ಕರ್ನಾಟಕ ವಾಗ್ದೇವತೆಯ ಕಂಠದೇಶವನ್ನು ಭಕ್ತಿಪುರಸ್ಸರವಾಗಿ ಅಲಂಕರಿಸಿ, ಅವಳನ್ನು ಆರಾಧಿಸಿದ 'ಭಕ್ತಶಿಖಾಮಣಿಗಳು ಮ॥ ರಾ॥ ಗಳಾದ ಬಿ. ವೆಂಕಟಾಚಾರ್ಯರು. ದುರ್ಗೇಶನಂದಿನೀ, ದೇವೀಚೌಧುರಾಣೀ, ವಿಷವೃಕ್ಷ, ರಾಜಸಿಂಹ, ಆನಂದಮಠ ಮೊದಲಾದ ಅವರ ಕೃತಿಗಳು ಆ ರತ್ನಮಾಲೆಯೊಳಗಿನ ದೈದೀಪ್ಯಮಾನವಾದ ಮಣಿಗಳು. ಇವುಗಳಲ್ಲದೆ ಇನ್ನೂ ಅನೇಕ ಚಿಕ್ಕ ಪುಟ್ಟ ಕನಕ ಮಣಿಭೂಷಣಗಳು ಮ॥ ರಾ॥ ಬಿ. ವೆಂಕಟಾಚಾರ್ಯರವರಿಂದ ವಾಙ್ಮಯ ದೇವತೆಯ ಚರಣಾರವಿಂದಗಳಲ್ಲಿ ಸಮರ್ಪಿತವಾಗಿರುವವು. ರಾಜಸೇವೆಯ ಅವಧಿಯು ಮುಗಿದ

ನಂತರ "ಮಹಾಸ್ವಾಮಿ, ಪ್ರಭೋ, ನನಗೆ ಇನ್ನೊಂದೆರಡು ವರ್ಷ ಸೇವೆಯಲ್ಲಿರಗೊಟ್ಟರೆ ನನ್ನ ಹೆಂಡತಿ ಮಕ್ಕಳ ಮೈಮೇಲೆ ಇನ್ನಿಷ್ಟು ಚಿನ್ನಬೆಳ್ಳಿಯ ತೊಡವುಗಳನ್ನು ಮಾಡಿಸಿ ಇಡಬೇಕೆನ್ನುತ್ತೇನೆ. ನನಗೆ ಪೆನ್‌ಶನ್ ಆದರೆ, ನನ್ನನ್ನು ಯಾರೂ ಕೇಳರು" ಎಂಬದಾಗಿ ವರಿಷ್ಠರನ್ನು ಅಂಗಲಾಚಿ ಬೇಡಿಕೊಳ್ಳುವ ಅಧಿಕಾರಿಗಳು ಎಷ್ಟು ಜನರಿಲ್ಲ? ಅನೇಕಾನೇಕ ಶತಸಂಖ್ಯಾತರು ದೊರೆಯಬಹುದು. ಆದರೆ ವೆಂಕಟಾಚಾರ್ಯರವರಿಗೆ ಲಕ್ಷ್ಮಿಯ ಆರಾಧನೆಗಿಂತಲೂ, ಭಗವತೀ ಶಾರದಾಮಾತೆಯ ಆರಾಧನೆಯಲ್ಲಿ ವಿಶೇಷ ಸ್ವಾರಸ್ಯವೆನಿಸಿತು. ರಾಜಸೇವೆಗಿಂತಲೂ ಭಾಷಾಸೇವೆಯು ಪವಿತ್ರವಾಗಿ ತೋರಿತು. ಆದುದರಿಂದ ಅವರು ನಶ್ವರವಾದ ಭೌತಿಕ ಧನದಾಶೆಯನ್ನು ತೊರೆದು, ಆಚಂದ್ರಾರ್ಕ ಶಾಶ್ವತವಾದ ಕೀರ್ತಿಧನವನ್ನು ಕಾಮಿಸಿ, ಸೇವಾವೃತ್ತಿಯಿಂದ ಕೂಡಲೇ ನಿವೃತ್ತರಾಗಿ, ಗ್ರಂಥಕರ್ತೃತ್ವವನ್ನು ಯಥಾಕ್ರಮವಾಗಿ ಮುಂದೆ ಸಾಗಿಸಿದರು. ಮರಣದ ಪೂರ್ವ ದಿನದಲ್ಲಿಯೂ ಅವರು ತಮ್ಮ ಲೇಖನ ವ್ಯವಸಾಯವನ್ನು ಬಿಟ್ಟಿದ್ದಿಲ್ಲವಾಗಿ ಪ್ರಸಿದ್ಧವಾಗಿದೆ. ಹೀಗೆ ಒಂದೇ ಒಂದು ವರ್ಷ ಕಡಿಮೆಯಾದ ೭೦ ವರ್ಷಗಳ ಮುಪ್ಪಿನ ಕಾಲದಲ್ಲಿಯೂ ಉತ್ಸಾಹದಿಂದ ಭಾಷಾಸೇವೆಯ ಕೆಲಸವನ್ನು ಮಾಡುವವರು [illegible] ಹತಭಾಗಿಯಾದ ಈ ಕರ್ನಾಟಕಕ್ಕೆ ಯಾರು ದೊರೆಯುವರು? ಈ ದೃಷ್ಟಿಯಿಂದ ನೋಡಿದರಂತೂ ಮ|| ರಾ|| ವೆಂಕಟಾಚಾರ್ಯರವರ ಸುರಲೋಕ ಯಾತ್ರೆಯು ಅತ್ಯಂತ ಶೋಚನೀಯವಾಗಿರುವದು. ಪರಂತು, ಮಾಡುವುದೇನು? ಮನುಷ್ಯನ ಜೀವಿತವು ಎಂದಾದರೂ ನಶ್ವರವೇ ಎಂಬ ವೇದಾಂತ ವಿಚಾರದಿಂದ ಮನಸ್ಸನ್ನು ಸಮಾಧಾನಪಡಿಸಿಕೊಂಡು ಯಾವ ಪರಮಾತ್ಮನು ವೆಂಕಟಾಚಾರ್ಯರ ಆತ್ಮಕ್ಕೆ ಚಿರಸುಖ ಶಾಂತಿಯನ್ನು ಕೊಡತಕ್ಕವನೋ ಅದೇ ಪರಮಾತ್ಮನನ್ನು ಕರ್ನಾಟಕದ ದೈನ್ಯವನ್ನು ದೂರೀಕರಿಸುವದಕ್ಕೆ ಬೇರೆ ವೆಂಕಟಾಚಾರ್ಯರನ್ನು ನಿರ್ಮಿಸೆಂದು ಪ್ರಾರ್ಥಿಸುವದೇ ಪ್ರಕೃತದಲ್ಲಿ ನಮ್ಮ ಕರ್ತವ್ಯವಾಗಿದೆ.

ಸ್ತ್ರೀಯರ ಪೋಷಾಕು

ಕಳೆದ ಜೂನ್ ೧೧ನೇ ತಾರೀಕಿಗೆ ಅಮೇರಿಕದ ಚಿಕಾಗೋ ಪಟ್ಟಣದಲ್ಲಿ ಅಲ್ಲಿಯ ಸ್ತ್ರೀ ಸಮಾಜಗಳ ಸಂಯುಕ್ತ ಸಂಘದ ಪರಿಷದವು ನೆರೆಯಿತು. ಆ ಕಾಲಕ್ಕೆ ವಿಚಾರಿಸಲ್ಪಟ್ಟ ಸಂಗತಿಗಳಲ್ಲಿ ಆ ದೇಶದ ಸ್ತ್ರೀಯರು ಉಡುಪುಗಳಿಗಾಗಿ ವೆಚ್ಚಮಾಡುವ ಹಣದ ವಿಷಯವಾಗಿಯೂ ಅವುಗಳ ಸ್ವರೂಪದ ವಿಷಯವಾಗಿಯೂ ಬಹಳವಾಗಿ ಚರ್ಚೆಯಾಯಿತು. ಮಿಸೆಸ್ ರಾಬರ್ಟ ಬರ್ಡಿಟ ಎಂಬವರೋರ್ವರು ಮಾತಾಡುವಾಗ್ಯೆ "ಅಮೇರಿಕದ ಸ್ತ್ರೀಯರಿಗೆ ಉಡುಪಿನ ಹುಚ್ಚು ಹತ್ತಿರುವದು" ಎಂದೂ ಹೇಳಿದರಾಗಿ ಪ್ರಸಿದ್ಧವಾಗಿದೆ. ಪರಿಷದದಲ್ಲಿ ಪಾಸಾದ ಠರಾವಿನಲ್ಲಿ ಅಲ್ಲಿಯ ಪೋಷಾಕಿನ ಮಾದರಿಯು ಮಿತಿಮೀರಿ ಅಶ್ಲೀಲವೆಂದೂ ಸೌಂದರ್ಯ ವಿಹೀನವೆಂದೂ ಹೇಳಿ, ಚಿತ್ತಾಕರ್ಷಕವಾಗಿಯೂ ಆಡಂಬರವಿಲ್ಲದಾಗಿಯೂ ವಿನಯಶೀಲವಾಗಿಯೂ ಇರುವ ಸಾದಾ ಪೋಷಾಕುಗಳ ಮಾದರಿಯನ್ನು ವಿಚಾರಮಾಡಿ ಗೊತ್ತುಪಡಿಸುವದಕ್ಕಾಗಿ ಪ್ರತಿಯೊಂದು ಪ್ರಾಂತದಲ್ಲಿ ಒಂದೊಂದು ಕಮಿಟಿಯೂ ನೇಮಿಸಲ್ಪಟ್ಟಿರುವದು. ಈ ವಿಚಾರವನ್ನು ನೋಡಲಾಗಿ ಪಾಶ್ಚಿಮಾತ್ಯ ದೇಶದ ಸ್ತ್ರೀ ವರ್ಗದಲ್ಲಿ ತಮ್ಮ ಸದ್ಯದ ಉಡುಪಿನ ಮಾದರಿಯ ವಿಷಯವಾಗಿ ತಿರಸ್ಕಾರ ಹುಟ್ಟಿರುವುದೆಂದು ಸ್ಪಷ್ಟವಾಗಿ ತಿಳಿದುಬರುವದು. ನಮ್ಮ ದೇಶದ ಸ್ತ್ರೀಯರು ಅನಾದಿಕಾಲದಿಂದಲೂ ಧರಿಸುತ್ತಿದ್ದ ನಮ್ಮ ದೇಶೀಯ ಸೀರೆ ಕುಪ್ಪುಸಗಳಲ್ಲಿ ಅಮೇರಿಕೆಯವರು ಹೊಸದಾಗಿ ಹುಡುಕಬೇಕೆನ್ನುವ ಎಲ್ಲ ಗುಣಗಳು ನಿಸರ್ಗಸಿದ್ಧವೆಂಬಂತೆ ಸ್ವಾಭಾವಿಕವಾಗಿವೆ. ಹೀಗಿರಲು ನಮ್ಮ ಸ್ತ್ರೀವರ್ಗವು "ಪೋಲಕಾ, ಶರ್ಟು"ಗಳಿಗೆ ಮರುಳಾಗಿ, ಪಾಶ್ಚಿಮಾತ್ಯರನ್ನು ಕುರುಡರಂತೆ ಅನುಕರಿಸುವದನ್ನು ಕಂಡರೆ, ಅವರಲ್ಲಿ ಈಗ ಕಂಡು ಬರುವ "ಹುಚ್ಚು" ನಮ್ಮ ಸ್ತ್ರೀಸಮೂಹವನ್ನೂ ಆಕ್ರಮಿಸುವದೇನೋ ಎಂದು ಭಯಪಡಬೇಕಾಗಿದೆ. "ವೇಣೀಬಂಧನ"ವು ಹದ್ದು ಪಾರಾಗಿ "ಬುಚಡೆ"ಯು ಪ್ರತಿಷ್ಠಿತವಾದದ್ದೂ, ನಡುವಿನ ಬೈತಲು ಬದಿಗೆ ಸರಿದದ್ದೂ ಮುಂತಾದವುಗಳೆಲ್ಲ ಸುಧಾರಣೆಯ ಲಕ್ಷಣಗಳೋ ಹೇಗೆಂಬದನ್ನು ವಿದ್ಯಾವತಿಯರಾದ ನಮ್ಮ ಭಗಿನಿಯರು ವಿಚಾರಿಸಿ ನೋಡುವಾಗ್ಯೆ ಅಮೇರಿಕದ ಸ್ತ್ರೀವರ್ಗದವರು ಪ್ರಾರಂಭಿಸಿರುವ ಕಾರ್ಯವನ್ನು ಅವಶ್ಯವಾಗಿ ಆಲೋಚಿಸಬೇಕಾಗಿದೆ.

ಅಮೇರಿಕೆಯ ಸ್ತ್ರೀಯರಲ್ಲಿ ಸದ್ಯಕ್ಕೆ ಬಹಳವಾಗಿ ಬೆಳೆದಿರುವ ಆಡಂಬರದ ಪೋಷಾಕಿನ ಮಾದರಿಯು ಮೊದಲು ಪ್ಯಾರಿಸದ ಸೂಳೆಯರಿಗಾಗಿ ನಿರ್ಮಿತವಾಯಿತೆಂದೂ, ಅದರ ಮೋಹಜಾಲಕ್ಕೆ ಮನಸೋತು ಬೇರೆ ಸಭ್ಯ ಸ್ತ್ರೀಯರೂ ಅರಿವಿಲ್ಲದೆ ಅದನ್ನು ಅನುಕರಿಸಿದರೆಂತಲೂ ಮಿಸೆಸ್ ರಾಬರ್ಟರವರು ದೂಷಿಸಿರುತ್ತಾರೆ. ನಮ್ಮ ಸಮಾಜದ ವಿಷಯದಲ್ಲಿಯೂ ಈ ದೂಷಣೆಯು ಯಥಾರ್ಥವಾಗಿರುವದಾಗಿ ಭಾವಿಸಬೇಕಾಗಿದೆ. ಪರಪುರುಷರ ಚಿತ್ತವನ್ನು ಆಕರ್ಷಿಸುವದೇ ಧರ್ಮವೆಂದು ತಿಳಿದ ವಾರನಾರಿಯರು ಈ ಸೋಗುಲಾಡಿತನಗಳನ್ನು ಮೊದಲು ಪ್ರಚಾರದಲ್ಲಿ ತಂದರು. ಅದನ್ನು ನಮ್ಮ ಕುಲವಧೂಗಳೆನಿಸುವವರೂ ಗೃಹಿಣಿಯರೆನಿಸುವವರೂ ಅರಿವಿಲ್ಲದೆ ಅನುಕರಿಸಹತ್ತಿರುವರು. ಈ ಅಂದಚಂದಗಳಿಗಾಗಿ ಸಂಸಾರದ ಹಾನಿಯು ಅಪಾರವಾಗಿ ಆಗುತ್ತಿರುವದೆಂಬದು ಅಮೇರಿಕೆಯವರ ಅನುಭವಕ್ಕೆ ಬಂದು ಈಗ ಅವರು ವಿವಂಚನಾಪರರಾಗಿ ಮುಂದೇನುಮಾಡಬೇಕೆಂದು ಆಲೋಚಿಸುತ್ತಾರೆ. ಆದರೆ ನಾವು ನಮ್ಮಲ್ಲಿಲ್ಲದ ಆಡಂಬರ ದುಂದುಗಾರಿಕೆಗಳನ್ನು ನವನಾಗರಿಕತೆಯ ಲಕ್ಷಣವೆಂಬ ಮಿಥ್ಯಾಭಾವನೆಯಿಂದ ಹೊಸದಾಗಿ ಕಲಿತು ನಮ್ಮ ಕಾಲುಗಳ ಮೇಲೆ ನಾವೇ ಕಲ್ಲು ಹಾಕಿಕೊಳ್ಳಹತ್ತಿರುತ್ತೇವೆ. ಅದರಿಂದ ಉಡುಪಿನ ಅಂದ ಸೌಕರ್ಯಗಳ ಕಡೆಗೆ ಲಕ್ಷ್ಯ ಕೊಡುವದು ಅಗತ್ಯವಾಗಿದ್ದಂತೆಯೇ ನಮ್ಮ ಕೌಟುಂಬಿಕ ದರಿದ್ರಾವಸ್ಥೆಯಲ್ಲಿ ಬಟ್ಟೆಬರೆಗಳಿಗೆ ನಾವು ವೆಚ್ಚಮಾಡುವ ಹಣದ ಪ್ರಮಾಣವು ಈಗ ಆವಶ್ಯಕತೆಯ ಪ್ರಾಕಾರವನ್ನು ಬಿಟ್ಟು, ದುಂದುಗಾರಿಕೆಯ ಸ್ವರೂಪವನ್ನು ಹೊಂದಹತ್ತಿದೆಂಬದನ್ನೂ ಮರೆಯಲಾಗದು. ಅಮೇರಿಕೆಯಲ್ಲಿ ನ್ಯೂಯಾರ್ಕದ ಒಬ್ಬ ಗಂಡನು ತನ್ನ ಉತ್ಪನ್ನದ ಒಂದು ರೂಪಾಯಿಯಲ್ಲಿ [illegible] ಪೈಗಳನ್ನು ತನ್ನ ಹೆಂಡತಿಯ ಪೋಷಾಕನ್ನು ಸಜ್ಜುಗೊಳಿಸುವಕ್ಕೆ ವೆಚ್ಚಮಾಡಬೇಕಾಗುತ್ತದೆಂದು ಮೇಲಿನ ವಿದುಷಿಯರು ಸಭೆಯಲ್ಲಿ ಆಡಿತೋರಿಸಿರುತ್ತಾರೆ. ನಮ್ಮಲ್ಲಿಯ ಸದ್ಯ ಸ್ಥಿತಿಯು ಅಪ್ರತಿಬಂಧವಾಗಿ ಹೀಗೆಯೇ ನಡೆಯಹತ್ತಿದರೆ ಮುಂದೆ ಬೇಗನೇ ನಮಗೂ ಈ ಅವಸ್ಥೆಯು ಬರುವದೆಂಬ ದುರ್ಲಕ್ಷಣಗಳು ಈಗಿನಿಂದಲೇ ಕಾಣಹತ್ತಿವೆ. ಹತ್ತಿಪ್ಪತ್ತು ರೂಪಾಯಿ ಹುಟ್ಟುವಳಿಯ ಗಂಡನು ವರುಷಕ್ಕೆ ೫೦-೬೦ ರೂಪಾಯಿಗಳನ್ನು ತನ್ನ ಹೆಂಡತಿಯ ಉಡುಪಿಗೂ ಮಿಕ್ಕ ಅಂದಚಂದಕ್ಕೂ ಹಾಳುಮಾಡುವ ಪ್ರಚಾರವು ನಮ್ಮಲ್ಲಿ ಈಗಲೇ ಬಂದಿರುವದಾಗಿ ಭಾವಿಸುತ್ತೇವೆ. ಚಿನ್ನಬೆಳ್ಳಿಯ ತೊಡವುಗಳಿಂದ ರಾಷ್ಟ್ರದ ಸಂಪತ್ತು ಅನುಪಯುಕ್ತವಾಗಿ ಕೊಳೆಬಿದ್ದು ಹಾನಿಯಾಗುತ್ತದೆಂದು ಕಂಠಶೋಷ ಮಾಡುತ್ತ, ಪೂರ್ವಿಕರ ಪದ್ಧತಿಗೆ ಮೂಗು ಮುರಿಯುವ ನಮ್ಮ ಸಮಾಜ ಸುಧಾರಕರು ಈ ಹೊಸ "ಸುಧಾರಣೆ"ಗಳಿಂದ ನಮ್ಮ ಕುಟುಂಬದ ಸಾಂಪತ್ತಿಕ ಹಾನಿಯಾಗಿ ಇವು ರಾಷ್ಟ್ರೀಯ ಹಾನಿಗೂ ಕಾರಣವಾಗುವದೆಂಬದನ್ನು ನಮ್ಮ ಭಗಿನೀ ವರ್ಗಕ್ಕೆ ತಿಳಿಸಿಕೊಡುವ ಪ್ರಯತ್ನಮಾಡುವದು ಪ್ರಸ್ತುತದಲ್ಲಿ ಅಗತ್ಯವಾಗಿದೆ.

"ಅದೇನಿಲ್ಲ, ಬರೇ ನೆಗಡಿ"

ಒಬ್ಬನು ಸೀನು ತೆಗೆಯುವುದನ್ನು ನೋಡಿದರೆ ಜನರು "ದೇವರು ನಿನ್ನನ್ನು ಕಾಯಲಿ" ಎಂದು ಹೇಳಲೇಬೇಕು. ಸೀನುಬರುವ ಮನುಷ್ಯನಿಗೆ ದೇವರ ಸಹಾಯವು ಅಗತ್ಯ. ಯಾಕಂದರೆ ಸೀನಿನಿಂದ ನೆಗಡಿ ಪ್ರಾರಂಭಿಸುತ್ತದೆ. ಇದರ ಅಂತ್ಯವು ನಾಶನ. ಪರಂತು, ನೆಗಡಿಯು ಜನರಿಂದ ಬರೇ ಅಲ್ಪವೆಂದೆಣಿಸಲ್ಪಟ್ಟು "ಅದೇನಿಲ್ಲ, ಬರೇ ನೆಗಡಿಯಷ್ಟೆ" ಎಂದು ಹೇಳುವ ವಾಡಿಕೆ ಇದೆ. ಬರೇ ನೆಗಡಿ ಎಂದು ಎಣಿಸಲ್ಪಟ್ಟ ಈ ನೆಗಡಿಯಿಂದ ಕಠಿಣ ರೋಗವು ಪ್ರಬಲಿಸಿಕೊಂಡು ಕಷ್ಟ ನಷ್ಟ ಕಡೆಗೆ ಮರಣವೂ ಸಂಭವಿಸುತ್ತದೆ. ನೆಗಡಿಯಿಂದ ಮನುಷ್ಯನ ದೇಹದ ಬಲಗುಂದಿ ನಂತರ ದೇಹವು ಅಂಟುರೋಗಗಳ ಬೀಜವು ಅಂಕುರಿಸಲು ಹಸನುಮಾಡಿದ ಭೂಮಿಯಂತಾಗುತ್ತದೆ. ಕ್ಷಯ ಮೊದಲಾದ ರೋಗಗಳಿಗೆ ನೆಗಡಿಯೇ ಮೂಲಕಾರಣವಾಗಿ ನಾಗರಿಕತನ ಹೊಂದಿದ ಜನರಲ್ಲಿ ಅರ್ಧಾಂಗವನ್ನು ತುತ್ತುಗೊಳ್ಳುತ್ತಿದೆ.

"ಅದೇನಿಲ್ಲ ಬರೇ ನೆಗಡಿ" ಎಂದೆಣಿಸಲ್ಪಟ್ಟ ನೆಗಡಿಯಿಂದ ಕ್ಷಯರೋಗವು ಹೇಗೆ ಪ್ರಾಪ್ತಿಸುತ್ತದೆಂಬದಕ್ಕೆ ಒಬ್ಬ ಡಾಕ್ಟರರು ತನ್ನ ಪುಸ್ತಕದಲ್ಲಿ ಬರೆದಿಟ್ಟ ದೃಷ್ಟಾಂತವನ್ನು ಇಲ್ಲಿ ಕೊಡುವೆವು—ಒಬ್ಬ ಯೌವನ ಹುಡುಗಿಗೆ ನೆಗಡಿ ಹಿಡಿಯಿತು. ಅವಳು ಮೊದಲಾಗಿ ಸೀನುತೆಗೆಯಲು ಪ್ರಾರಂಭಿಸಿದಳು. ಮೂಗು ಕಟ್ಟಿತು, ತಲೆಶಿಡಿತ, ಚಳಿ, ಜ್ವರ, ಎಲುಬು, ಮ ಗಂಟುನೋವು ಕಾಣಿಸಿಕೊಂಡಿತು. ಅನಂತರ ಎದೆಯಲ್ಲಿ ಶೀತವು ತಾಗಿಕೊಂಡಾಗ ಕೆಮ್ಮು ಹಿಡಿಯಿತು. ಈಗ ಅವಳು ಮನೆಯಲ್ಲೇ ಇದ್ದುಕೊಂಡು ನೆಗಡಿ ಹೋಗುವ ವರೆಗೆ ಶೈತೋಪಚಾರ ಹೊಂದಬೇಕಾಗಿತ್ತು. ಆದರೆ ಒಂದು ಅಂಗಡಿಯಲ್ಲಿ ಕೆಲಸಕ್ಕಿದ್ದವಳಾದ್ದರಿಂದ ಅಲ್ಲಿಗೆ ಕೆಲಸಕ್ಕೆ ಹೋದಳು. ಅಲ್ಲಿ ಈ ಮೊದಲೇ ಕ್ಷಯರೋಗ ಪೀಡಿತಳಾದ ಇನ್ನೊಬ್ಬ ಹೆಂಗಸಿದ್ದಳು. ಅವಳು ಕೆಮ್ಮುತ್ತಿದ್ದಳು. ಕಫವನ್ನು ಅಲ್ಲಲ್ಲಿ ಉಗುಳುತ್ತಿದ್ದಳು. ನೆಗಡಿ ಹಿಡಿದ ಈ ಯುವತಿಯ ದೇಹವು ಕ್ಷಯಾಣುಗಳು ಅಂಕುರಿಸಲು ಹಸನಾದ ಭೂಮಿಯಂತಿದ್ದದರಿಂದ ಕೂಡಲೇ ಇವಳಲ್ಲಿ ಅವಳ ಕ್ಷಯಾಣುಗಳು ಸೇರಿಕೊಂಡವು. "ಅದೇನಿಲ್ಲ; ಬರೇ ನೆಗಡಿ" ಎಂದು ಭಾವಿಸಲ್ಪಟ್ಟಿದ್ದ ಈ ಯುವತಿಯು ಕ್ಷಯರೋಗದಿಂದ ನರಳುವವಳಾದಳು. ಹೀಗೆ ದಿನೇ ದಿನೇ ಸೊರಗುತ್ತಾ, ಕೆಲಸಮಾಡಲಿಕ್ಕೆ ಬೇಕಾದ ಆಸಕ್ತಿಯನ್ನು ಕಳಕೊಂಡು ಕೆಲಸಮಾಡಲಶಕ್ತಳಾದಳು. ಮೈಯಲ್ಲಿದ್ದ ಮಾಂಸವೂ ಬಲವೂ ಕುಂದಿತು. ಗುಂಡಿಗೆಯ ಬಲಗುಂದಿತು. ಶ್ವಾಸ ತೆಗೆಯಲು ಕಷ್ಟವಾಯಿತು. ಅನಂತರ ಛಳಿ, ಮ ಜ್ವರವು ತೊಡಗಿತು. ರಾತ್ರಿಯೆಲ್ಲಾ ಬೆವರು ಬಂದು ಬೆಳಿಗ್ಗೆ ನೋಡುವಾಗ ವಸ್ತ್ರ ಒದ್ದೆಯಾಗುತ್ತಿತ್ತು. ಇದು ಹೊಟ್ಟೆಯ ದೋಷದಿಂದ ಬಂದ

ಕೆಮ್ಮು ಎಂದು ತನ್ನಷ್ಟಕ್ಕೆ ಭಾವಿಸಿಕೊಂಡಳು. ಪರಂತು, ಕೆಮ್ಮು ನಿಲ್ಲಲಿಲ್ಲ. ಕೆಮ್ಮಿನ ಔಷಧಿ, ಸಿರಪ್ ಮೊದಲಾದ ಎಲ್ಲಾ ಔಷಧಿ ತಕ್ಕೊಂಡಳು ಕೆಮ್ಮು ನಿಲ್ಲಲಿಲ್ಲ. ಕಡೆಗೆ ಉಗುಳುವಾಗ ಕಫದೊಂದಿಗೆ ರಕ್ತವೂ ಕಾಣಿಸಿಕೊಂಡಿತು ಇದನ್ನು ನೋಡಿದಾಕ್ಷಣ, ಕಡೇ ಗಳಿಗೆಯಲ್ಲಿ ದಾಕ್ತಾರರ ಸಹಾಯವನ್ನು ಹುಡುಕಿ ಎಲ್ಲಾ ಸಂಗತಿಯನ್ನು ಅರಿಕೆಮಾಡಿದಳು

ಈ ಚಿಕ್ಕ ಹುಡುಗಿಯ ಕುಟುಂಬದಲ್ಲಿ ಒಟ್ಟಿಗೆ ೫ ಮಂದಿ ಇದ್ದರು ಈ ಯುವತಿಯು ಸತ್ತಳು. ಅವಳ ಕುಡಿಕ ತಂದೆಗೆ ಕಷ್ಟವಿಲ್ಲದೆ ಪುಗ್ಗ ಕ್ಷಯರೋಗಾಣುಗಳು ಸೋಂಕಿಕೊಂಡು ಅವನೂ ಸತ್ತನು ೧೮ ವರ್ಷದ ಗಟ್ಟಿಮುಟ್ಟಾಳಾಗಿದ್ದ ಅವನ ಮಗನಿಗೂ ಇದೇ ರೋಗವು ಸೋಂಕಿ ಅವನೂ ಸತ್ತನು ಕಡೆಗೆ ೬ ವರ್ಷದ ಒಬ್ಬ ಹುಡುಗನಿಗೂ ಕ್ಷಯರೋಗವು ಕಾಣಿಸಿಕೊಂಡಿತು ಆದರೆ ಇವು ಗಂಟು ಬೀಗಿಕೊಳ್ಳುವ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಕ್ಷಯರೋಗವಾಗಿ ಪರಿಣಾಮವನ್ನು ಹೊಂದಿದ್ದರಿಂದ ಬಹು ಪ್ರಯತ್ನದಿಂದ ಇವನು ಬದುಕಿಕೊಂಡನು.

"ಅದೇನಿಲ್ಲ, ಬರೇ ನೆಗಡಿ" ಎಂದು ಭಾವಿಸಲ್ಪಟ್ಟ ನೆಗಡಿಯ ಚರಿತ್ರೆಯನ್ನು ಮೇಲೆ ಹೇಳಿದೆವು. ಆದುದರಿಂದ ಶೀತ, ನೆಗಡಿಯನ್ನು ಅಲಕ್ಷ್ಯಮಾಡದೆ ಶೀತ ನೆಗಡಿ ಯಾದಕ್ಷಣ ತಕ್ಕ ಜಾಗ್ರತೆ ತಕ್ಕೊಳ್ಳುವುದು ವಿಹಿತವಾಗಿರುವುದು.

ಪತ್ರವ್ಯವಹಾರ.

ಅಯ್ಯಾ,

ನಿಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಈ ಕೆಳಗೆ ಕೊಟ್ಟ ನಾಲ್ಕು ಪಂಕ್ತಿಗಳಿಗೆ ಸಿಗಾ ಕೊಡುವಿರೆಂದು ನಂಬಿದ್ದೇನೆ. ನಮ್ಮ ಮುಂಡಾಜೆ ಗ್ರಾಮಕ್ಕೆ ಬಂದಿರುವ ವಿದ್ಯಾ ಹೀನತೆಯ ಸ್ಥಿತಿಯನ್ನು ನೋಡಿದರೆ ತುಂಬಾ ಶೋಚನೀಯವಾಗುತ್ತದೆ ಇಲ್ಲಿ ವಿಶೇಷವಾಗಿ ಚಿತ್ಪಾವನ ಬ್ರಾಹ್ಮಣ ಮಂಡಳಿ ಇದ್ದರೂ ಇವರಲ್ಲಿ ಗರೀಬರ ಸಂಖ್ಯೆಯೇ ಹೆಚ್ಚು ಇರುವದೂ ವಿದ್ಯಾ ಪ್ರೋತ್ಸಾಹ ಮಾಡುವಂತಹ ಮುಂದಾಳುಗಳಿಲ್ಲದಿರುವುದೂ ಈ ರೀತಿ ಆಗುವದೆ ಕಾರಣವೆಂತ ಹೇಳಬೇಕು. ನಮ್ಮ ಸ್ವಜಾತಿಯವರು ಪೂನಾ ಅತ್ತಕಡೆ ರಾ ತಿಲಕ್, ರಾ ಗೋಖಲೆ ಮುಂತಾದ ಮಹನೀಯರು ವಿದ್ಯಾವಂತರಾಗಿ ಇರುವ ಸಂಗತಿಯನ್ನು ಕೇಳಿದರೆ ಅಂಥಾ ಕುಲದಲ್ಲಿ ಹುಟ್ಟಿ "ವಿದ್ಯಾ ವಿಹೀನಃ ಪಶುಃ ।" ಎಂಬಂತೆ ನಮ್ಮ ಗತಿ ಆಗಿರುತ್ತದೆ ಈ ಸಂಗತಿಗೆ ನಮ್ಮ ದಯವುಳ್ಳ ಸರಕಾರದವರಾದರೂ ಗಮನ ಕೊಟ್ಟು ಮೂಲೆ ಪ್ರಾಂತ್ಯದಲ್ಲಿ ಇರುವ ವಿದ್ಯಾ ಹೀನತೆಯನ್ನು ಉದ್ಧರಿಸುವ ಏರ್ಪಾಡು ಮಾಡಿ ನಮ್ಮ ಮುಂಡಾಜೆ ಗ್ರಾಮದಲ್ಲಿ ಒಂದು ಬೋರ್ಡುಸ್ಕೂಲು ತೆರೆದು ವಿದ್ಯಾದಾನಮಾಡುವರೆಂದು ಪ್ರಾರ್ಥಿಸುವ,

ಮುಂಡಾಜೆ,
ತಾ. 21 – 6 – 1914 ಒಬ್ಬ ಬ್ರಾಹ್ಮಣ.

ಅಯ್ಯಾ,

ನಮ್ಮ ಇಲ್ಲಿಯ ಗವರ್ನಮೆಂಟು ಹುಡುಗಿಯರ ಶಾಲೆಗೆ ಚಿಕ್ಕ ಚಿಕ್ಕ ಗಂಡು ಮಕ್ಕಳನ್ನು ಕಳುಹಿಸುವ ಪದ್ಧತಿಯು ಹೆಚ್ಚಾಗಿದೆ ಈ ಹುಡುಗಿಯರ ಶಾಲೆಯಲ್ಲಿ ಕೋಲಾಟ, ಜಡೆ ಹೆಣೆಯುವುದು ಮೊದಲಾದ ಆಟಗಳ [illegible] ತಿಂಡಿ ಇತ್ಯಾದಿಗಳ ಹಂಚೋಣವೂ ಇರುವುದರಿಂದ ಮಕ್ಕಳು ಆ ಶಾಲೆಗೆ ಹೋಗಲು ಆತುರರಾಗಿದ್ದಾರೆ. ಪರಂತು, ಹುಡುಗಿಯರ ಶಾಲೆಯಲ್ಲಿ ಬಾಲಕರು ಒಂದೊಂದು ದರ್ಜೆಯಲ್ಲಿ ಮೂರು ಮೂರು ವರ್ಷ ಕಲಿತರೂ ಅಂತಹದರಲ್ಲಿ ೩ನೇ ದರ್ಜೆಯಲ್ಲಿ ಓದಿದ ಬಾಲಕರನ್ನು ಹುಡುಗರ ಶಾಲೆಯಲ್ಲಿ ೧ನೇ ದರ್ಜೆಗೇ ಸೇರಿಸುವುದರ ಕಾರಣವೇನೋ ಅರಿಯೆನು

ಸ್ವಾಮಿ, ಹುಡುಗಿಯರ ಶಾಲೆಯಲ್ಲಿ ಗಂಡು ಉಪಾಧ್ಯಾಯರನ್ನು ನೇಮಿಸುವದು ಹೇಗೆ ನಿಷ್ಪ್ರಯೋಜನವೊ ಹಾಗೆಯೇ ಹುಡುಗಿಯರ ಶಾಲೆಗೆ ಹುಡುಗರನ್ನು ಕಲಿಯ ಹಾಕುವುದೂ ನಿಷ್ಪ್ರಯೋಜನವಾಗಿದೆ. ಹುಡುಗರ ಸ್ವಾಭಾವಿಕ ಜ್ಞಾನಕ್ಕೂ, ಹುಡುಗಿಯರ ಸ್ವಾಭಾವಿಕ ಜ್ಞಾನಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಹೀಗಿರುವುದರಿಂದ ಬಾಲಕೀಯರ ಸ್ವಾಭಾವಿಕ ಜ್ಞಾನಕ್ಕನುಸಾರವಾಗಿ ಉಪಾಧ್ಯಾಯನಿಯರಿಂದ ತಯಾರಿಸಲ್ಪಟ್ಟು ಕಲಿಸಲ್ಪಡುವ ಪಾಠವು ಬಾಲಕರಿಗೆ ಸರಿಯಾಗದು ಎಂಬದನ್ನು ಹೆತ್ತವರು ಮನಸ್ಸಿನಲ್ಲಿಟ್ಟುಕೊಂಡು ತಮ್ಮ ಬಾಲಕರನ್ನು ಹುಡುಗರಶಾಲೆಗೆನೇ ಕಳುಹಿಸುವುದು ವಿಹಿತವಾಗಿರುವುದು.

ಪುತ್ತೂರು,
ತಾ. 29 – 6 – 1914. ಪಟ್ಟಣಿಗ.

ಅಯ್ಯಾ ಪತ್ರಕರ್ತರೇ.

ಸರಕಾರದವರು ಪ್ಲೇಗು ಪಾಸ್‌ಪೋರ್ಟುಗಳನ್ನು ರದ್ದುಮಾಡಿ ನೋಟೀಸ್ ಪಡಕೊಳ್ಳುವ ವಿಧಾನದ ಜಾರಿಯನ್ನು ನಡಿಸಿದ್ದರಿಂದ ಮಹದುಪಕಾರವಾಯಿತೆಂದೂ ಆದರೆ ಈಗ ರೈಲ್ವೇ ಟಿಕೇಟು ಕೊಡುವವರ ದಸ್ಕತು ಸಹಾ ಅದಕ್ಕೆ ಬೇಕಾದುದರಿಂದ ಪ್ರಯಾಣಸ್ಥರಿಗೆ ತೊಂದರೆಯುಂಟಾಗುತ್ತದೆಂದೂ ಪ್ರಕಟಿಸಿರುವರಷ್ಟೆ. ಮದ್ರಾಸ್ ಸರಕಾರದವರು ಪ್ರಕಟಿಸಿದ ಹೊಸ ನೋಟೀಸಿನ ನಿಯಮದಲ್ಲಿ ನೋಟಿಸ್ ಪಡಕೊಂಡವರು ತಮ್ಮ ನೋಟೀಸನ್ನು ಟಿಕೇಟು ಮಾಸ್ತರರಿಗೆ ತೋರಿಸುವ ವಿನಹ ಟಿಕೇಟು ಕೊಡಕೂಡದೆಂಬ ಕ್ರಮ ಉಂಟೋ? ಈ ಕ್ರಮವಿದ್ದ ಪಕ್ಷಕ್ಕೆ ಹಿಂದಿನ ಪಾಸ್ ಪೋರ್ಟು ನಿಯಮಕ್ಕಿಂತಲೂ ಈ ಹೊಸ ನಿಯಮದಿಂದ ಪ್ರಯಾಣಸ್ಥರಿಗೆ ಬಹಳ ಕಷ್ಟವೆಂದೇ ಹೇಳಬೇಕಾಗಿದೆ ಅದರಲ್ಲಿಯೂ ನಮ್ಮ ಮಂಗಳೂರಿಂದ ಅಗ್ಗಾಡಿ ಹತ್ತುವ ಪ್ರಯಾಣಸ್ಥರಿಗೆ ಮತ್ತಷ್ಟು ಸಂಕಟ. ಬೆಳಿಗ್ಯೆ ೬ ಗಂಟೆಗೆ ಮೈಲ್ ಬಂಡಿ ಬಿಡೋಣಾಗುತ್ತದೆ ಮೈಲ್ ಬಂಡಿಯಲ್ಲಿ ಹೋಗುವ ಪ್ರಯಾಣಸ್ಥರ ಸಂಖ್ಯೆ ಹೆಚ್ಚು. ಮೂರನೇ ತರಗತಿಯ ಟಿಕೇಟು ಪಡಕೊಳ್ಳುವ ತೂತಿನಿಂದ ಟಿಕೇಟು ಪಡಕೊಳ್ಳುವುದೇ ಕಷ್ಟವಾಗಿ ಅನೇಕಾವರ್ತಿ ಪ್ರಯಾಣಿಕರು ಹಿಂದುಳಿಯ ಬೇಕಾಗುತ್ತದೆ. ಈ ಟಿಕೇಟು ಪಡಕೊಳ್ಳುವಾಗ ಜನರ ಒತ್ತಾಟದಿಂದ ಉಂಟಾಗುವ ಅನರ್ಥಗಳು ಮೂರನೇ ತರಗತಿಯಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರೆಲ್ಲರಿಗೆ ತಿಳಿದೇ ಇದೆ ಈಗ ನೋಟೀಸಿಗೆ ಟಿಕೇಟು ಮಾಸ್ತರರಿಂದ ಸಹಿ ಹಾಕಿಸಿ ನಂತರ ಟಿಕೇಟುಗಳನ್ನು ಪಡಕೊಳ್ಳುವುದಂದರೆ ಇದು ೩ನೇ ಕ್ಲಾಸಿನ ಬಡ ಪ್ರಯಾಣಿಕರಿಗೆ ಆಗದ ಕಾರ್ಯವೇ ಸೈ. ಪ್ರಯಾಣಿಕರು ಈ ನೋಟೀಸನ್ನೂ ಟಿಕೇಟುಗಳನ್ನೂ ಪಡಕೊಳ್ಳುವರೆ ಸ್ಟೇಶನಿಗೆ ಬೆಳಿಗ್ಯೆ ೩ ೪ ಗಂಟೆಗೆ ತಲಪಿದರೂ ಟಿಕೇಟು ಮಾಸ್ತರರ ಸವಾರಿಯು ೫-೫॥ ಗಂಟೆಗೆ ಬಂದರೆ ನೋಟೀಸಿಗೆ ದಸ್ಕತು ಹಾಕುವುದೆಲ್ಲಿ? ಟಿಕೇಟು ಕೊಡುವುದೆಲ್ಲಿ? ಹೀಗೆ ಹೆಚ್ಚಿನ ಪ್ರಯಾಣಿಕರು ಹಿಂದುಳಿಯ ಬೇಕಾಗುವುದು ಹಿಂದುಳಿದ ಪ್ರಯಾಣಿಕರು ಮೈಲ್ ಬಂಡಿಯು ತಪ್ಪಿದ್ದರಿಂದ ಮೋಟರ್ ಯಾ ಲೋಕಲಿನಲ್ಲಿ ಹೋಗುವುದರಿಂದ ಕಂಪೆನಿಯವರಿಗೆ ಇದರ ನಷ್ಟವು ತಿಳಿಯದು ಪರಂತು, ಅಗತ್ಯ ಜಂಬರದ ಮೇಲೆ ಮೈಲ್ ಗಾಡಿಯಲ್ಲೇ ಪ್ರಯಾಣ ಮಾಡ ಬೇಕಾಗಿದ್ದ ಪ್ರಯಾಣಿಕರಿಗುಂಟಾಗುವ ನಷ್ಟವು ಯಾರಿಗೆ ತಾನೇ ಗೊತ್ತು? ಈ ನೋಟೀಸಿಗೆ ಟಿಕೇಟು ಮಾಸ್ತರರು ದಸ್ಕತು ಹಾಕಿದ ನಂತರ ಟಿಕೇಟು ಕೊಡುವ ಕ್ರಮದಿಂದ ಉಂಟಾಗುತ್ತಿರುವ ತೊಂದರೆಯನ್ನು ಬರೆದು ಪೂರೈಸದು ಆದುದರಿಂದ ಸರಕಾರದವರು ತ್ವರ್ಯದಲ್ಲಿ ಈ ವಿಷಯ ನಿಗಾ ಕೊಟ್ಟು ಟಿಕೇಟು ಮಾಸ್ತರರ ದಸ್ಕತು ಅಗತ್ಯವಿಲ್ಲವೆಂಬ ನಿಯಮವನ್ನು ಜಾರಿಗೆ ತಂದು ಬಡ ಪ್ರಯಾಣಿಕರಿಗುಂಟಾಗುವ ಸಂಕಷ್ಟಗಳನ್ನು ಹೋಗಲಾಡಿಸಬೇಕೆಂದು ವಿಜ್ಞಾಪಿಸ್ವುವ.

ಬಡ ಪ್ರಯಾಣಿಕ.

ಅಯ್ಯಾ ಪತ್ರಕರ್ತರೇ.

ಮುನಿಸಿಪಾಲಿಟಿಗೆ ಸೇರಿದ ವಾರ್ಡುಗಳಲ್ಲಿ ಕೊಡಿಯಾಲ ಬೈಲು ವಾರ್ಡು ಅತಿ ವಿಸ್ತಾರವಾಗಿರುವುದು. ಈ ವಾರ್ಡಿನ ಬೊಕ್ಕಪಟ್ಣ, ಕುದ್ರೋಳಿ, ಬೋಳಾರ ಮೊದಲಾದ ಸ್ಥಳಗಳಲ್ಲಿರುವ ಮನೆಗಳು ಪಟ್ಟಣದ ಮಧ್ಯದಲ್ಲಿರುವ ಮನೆಗಳಂತೆ ಇಲ್ಲ ಈ ವಾರ್ಡಿನ ಜನಸಂಖ್ಯೆಯೂ ಹೆಚ್ಚಾಗಿರುವುದು ಈ ಸ್ಥಳಗಳಲ್ಲಿಯ ಮನೆಗಳ ವ ಮನೆ ವಠಾರಗಳು ಬಹಳ ಮಲಿನ ಸ್ಥಿತಿಯಲ್ಲಿರುವವು. ಬೊಕ್ಕಪಟ್ಣ, ಕುದ್ರೋಳಿ, ಬೋಳಾರ್ ಮೊದಲಾದ ಸ್ಥಳಗಳು ಪಟ್ಟಣಕ್ಕೆ ದೂರವಾಗಿರುವುದರಿಂದಲೂ [illegible] ಕೌನ್ಸಿಲ್ಲರ್ ಮೊದಲಾದವರಿಗೆ ಆ ಕಡೆ ಹೋಗುವ ಜಂಬರ [illegible] ಕಡಿಮೆಯಾಗಿರುವುದರಿಂದಲೂ ಸೆನಿಟರಿ ಆಪೀಸರರು ಕೂಡಾ ಆ ಸ್ಥಳಗಳ ಆರೋಗ್ಯಕ್ಕೆ ತಮ್ಮ ದೃಷ್ಟಿಯನ್ನಿಟ್ಟಂತೆ ಕಾಣುವುದಿಲ್ಲ ಬೋಳಾರ, ಕುದ್ರೋಳಿ ಮೊದಲಾದ ಸ್ಥಳಗಳು ಸೋಂಕು ರೋಗಗಳ ತವರುಮನೆಯಂತಿದೆಯೆಂದು ಇಲ್ಲಿ ಬೇರೆ ಹೇಳಬೇಕೆಂತಿಲ್ಲ ಸೆನಿಟರಿ ಆಫೀಸರರು ತಮ್ಮ ಕೆಲಸವನ್ನು ಆರೋಗ್ಯ ನಿಯಮಗಳನ್ನು ಚನ್ನಾಗಿ ಅರಿತಿರುವ ಹಂಪನಕಟ್ಟೆಯಲ್ಲಿ ಯಾ ಇತರ ಪಟ್ಟಣದ ಆರೋಗ್ಯಕರವಾದ ಸ್ಥಳಗಳಲ್ಲಿ ಮಾಡುವುದಕ್ಕಿಂತ ವಿದ್ಯಾಹೀನರಾದ, ಸೆನಿಟರಿ ಮಾಹೀತಿಯನ್ನು ಅರಿಯದ ಜನರು ವಾಸವಾಗಿರುವ ಸ್ಥಳಗಳಲ್ಲಿ ಮಾಡಿ, ಅಂತಹ ಸ್ಥಳಗಳಲ್ಲಿ ತಮ್ಮ ಜಾಣತನವನ್ನು ಪ್ರಯೋಗಿಸಿದರೆ, ಮುನಿಸಿಪಾಲಿಟಿಗೆ ಪಟ್ಟಣಿಗರು ಕೊಡುವ ಈ ಸಂಬಂಧವಾದ ತೆರಿಗೆಯೂ ಮಾನ್ಯ ಸರಕಾರದಿಂದ ಸಿಗುವ ದ್ರವ್ಯ ಸಹಾಯವೂ ಸದುಪಯೋಗವಾಯಿತೆಂದು ಹಿಗ್ಗಿಕೊಳ್ಳಬಹುದು ಮುನಿಸಿಪಾಲ್ ಚೆಯರ್ಮೇನರಿಗೆ ವ ಕೌನ್ಸಿಲ್ಲರುಗಳಿಗೆ ಸೆನಿಟರಿ ಆಪೀಸರರುಗಳ ಕೆಲಸವು ಎಲ್ಲಾ ಕಡೆಯಲ್ಲಿಯೂ ಸರಿಯಾಗಿ ಸಾಗುತ್ತದೋ ಏನೆಂಬುದನ್ನು ಪ್ರತಿನಿತ್ಯ ನೋಡಿಕೊಳ್ಳಲು ಬಂದುವೇಳೆ ಸಾಧ್ಯವಿರದು ಪರಂತು, ಚೀಫ್ ಸೆನಿಟರಿ ಇನ್ಸ್‌ಪೆಕ್ಟರರು ತನ್ನ ತಾಬೆಯಲ್ಲಿರುವ ಒಳನೌಕರರುಗಳು ತಂತಮ್ಮ ವಾರ್ಡಿನಲ್ಲಿ ಸದಾ ಸಂಚರಿಸುತ್ತಿರುತ್ತಾರೋ? ಪಾಯಖಾನೆಗಳೆಲ್ಲಾ ದಿನವಹಿ ಶುಚಿಮಾಡಲ್ಪಡುತ್ತವೋ? ಬೀದಿಯ ಸರ್ವ ಮೂಲೆಗಳೂ ಶುದ್ಧವಾಗಿರುವವೋ? ಎಂಬಿತ್ಯಾದಿ ವಿಚಾರಗಳನ್ನು ಮಾಡಿ ಸಬ್ ಇನ್ಸ್‌ಪೆಕ್ಟರುಗಳು ಸರಿಯಾಗಿ ಕೆಲಸಮಾಡುವಂತೆ ನೋಡಿಕೊಂಡರೆ ನಮ್ಮ ಪಟ್ಟಣವು ಆರೋಗ್ಯದಮಟ್ಟಿಗಾದರೂ ಉಚ್ಚತೆಯನ್ನು ಹೊಂದುವುದು.

ಕೊಡಿಯಾಲಬೈಲ್, ತಾ. 2 – 7 – 1914. ತೆರಿಗೆ ಕೊಡುವವ.

ವಿದೇಶ ವೃತ್ತಾಂತ.

ಹಿಂದೂಸ್ಥಾನದ ವ್ಯಾಸರಾಯರಾಗಿರುವ ಹಾರ್ಡಿಂಜ ಪ್ರಭುಗಳವರ ಅವಧಿಯು ಬರುವ ವರ್ಷಕ್ಕೆ ತೀರುವುದರಿಂದ ಅವರ ಬದಲಿಗೆ ಹಿಂದೆ ಹಿಂದೂಸ್ಥಾನದಲ್ಲಿ ಸರ್ವ ಸೇನಾದಿಪತಿಯಾಗಿದ್ದ ಕಿಚನರ್ ಪ್ರಭುಗಳವರು ನೇಮಿಸಲ್ಪಡುವ ಹಾಗಿದ್ದಾರೆಂಬದಾಗಿ ಶೀಮೆಯಿಂದ ವಾರ್ತೆ ಬಂದಿರುವುದು

~~~~~

ಹಿಂದೂಸ್ಥಾನದಿಂದ ಬ್ರಿಟಿಷ್ ಕೊಲಂಬಿಯಕ್ಕೆ ಭಾರತೀಯರನ್ನು ಕೊಂಡುಹೋದ ಕೊಮಗಾಟಮಾರು ಎಂಬ ಹಡಗದ ಸಲುವಾಗಿ ಸರಕಾರಕ್ಕೆ ಸಲ್ಲಬೇಕಾಗಿದ್ದ ಹಣವು ಕೊಡಲ್ಪಟ್ಟಿರುವುದು. ಸೆಪ್ಟಂಬರ ತಿಂಗಳ ವರೆಗೆ ಇದರ ಅವದಿಯು ಇರುವುದು ಅನಂತರ ಶರ್ತಪ್ರಕಾರ ಪ್ರಯಾಣಿಕರನ್ನು ಹೊಂಗೊಂಕಿಗೆ ಕೊಂಡುಹೋಗಿ ಬಿಡಬೇಕಾಗುವುದು

ಭಾರತೀಯರ ಸಲುವಾಗಿ ವಿಚಾರಿಸುತ್ತಿದ್ದ ಕಮಿಟಿಯವರು ತಮ್ಮ ಕೆಲಸವನ್ನು ನಿಲ್ಲಿಸಿರುವರು

ನೋರ್ವೆ ದೇಶದ ಒಂದು ಹಡಗವು ಕಲ್ಕತ್ತೆಯಿಂದ ೪೦೦ ಭಾರತೀಯರೊಡನೆ ಬ್ರಿಟಿಷ್ ಕೊಲೊಂಬಿಯಕ್ಕೆ ಹೋಗಲು ಹೊರಟದೆ ಎಂಬದಾಗಿ ವಾರ್ತೆ ಹಬ್ಬಿರುವುದು ನಂತರ ಬಂದ ವಾರ್ತೆಯು ಪ್ರಕಾರ ಕಲ್ಕತ್ತೆಯಲ್ಲಿ ನೋರ್ವೆ ದೇಶದ ಯಾವದೊಂದು ಹಡಗ ಇಲ್ಲವೆಂದು ತಿಳಿಯುಬರುತ್ತದೆ

ಲಾಹೋರಿನ ಲ್ಯಾಲಪುರದ ಖಾಲ್ಸ ಅಕ್ಬರ್ ಎಂಬ ಪತ್ರಿಗೆ ಕೊಮಗಾಟಮಾರು ಹಡಗದಲ್ಲಿರುವ ಭಾರತೀಯರ ವಿಷಯವಾದ ಬಂದ ತಂತೀ ಬಂದಿರುವುದು — "ಕೊಮಗಾಟಮಾರು ಹಡಗದಲ್ಲಿದ್ದ ಭಾರತೀಯ ಪ್ರಯಾಣಿಕರು ಕಾನೂನಿಗೆ ವಿರೋಧವಾಗಿ ಸೆರೆ ಹಿಡಿಯಲ್ಪಟ್ಟರು ಆಹಾರ, ನೀರು, ವಕೀಲರು, ಸ್ನೇಹಿತರು ಯಾರೂ ಬಾರದ ಹಾಗೆ ತಡೆ ಕಟ್ಟಲ್ಪಟ್ಟದೆ ಇಂಥಾ ಅಮಾನುಷ ವರ್ತನೆಗೆ ವಿರೋದವಾಗಿ ಸಭೆಗಳು ಕೂಡಿರುವವು. ಈ ವಿಷಯವು ಹಿಂದೂಸ್ಥಾನದವರಿಂದ ಎಂದೂ ಮರೆಯಲ್ಪಡದಂಥಾದ್ದು ವ ಸರ್ವದಾ ನೆನಪಿಡಲ್ಪಡದಂಥಾದ್ದು ಆಗಿದೆ ಈ ವಿಷಯುವನ ದೇಶದಲ್ಲೆಲಾ ಪ್ರಚುರಪಡಿಸಿರಿ"

ಕೊಮಗಾಟಮಾರಿನಲ್ಲಿರುವ ಭಾರತೀಯರನ್ನು ಇತರ ಹಡಗದಲ್ಲಿ ಹಾಕಿ ಗಡಿಪಾರು ಮಾಡಬೇಕೆಂದು ಇಮಿಗ್ರೇಶನ್ ಅಧಿಕಾರಿಗಳು ಆಲೋಚಿಸಿ ಇತರ ಹಡಗ ಕಂಪೆನಿಗಳನ್ನು ಕೇಳಿದ್ದರು. ಆದರೆ ಹಡಗ ಕಂಪೆನಿಗಳು ನಿರಾಕರಿಸಿದ್ದರಿಂದ ಸರಕಾರದವರು ಏನು ಮಾಡಬೇಕೆಂದರಿಯರು.

~~~~~

ಸಾಲೆಮ್ ಎಂಬ ಪಟ್ಟಣದಲ್ಲಿ ಬೆಂಕಿ ಬಿದ್ದು ಇಡೀ ಪಟ್ಟಣವೇ ಸುಟ್ಟುಹೋಗುತ್ತಿದೆ. ಅನೇಕರು ಸುಟ್ಟುಹೋದರು. ೧೦,೦೦೦ ಮಂದಿ ಮನೆಮಾರಿಲ್ಲದೆ ನಿರ್ಗತಿಕರಾಗಿರುವರು. ಈ ಬೆಂಕಿಯಿಂದ ೪,೦೦೦,೦೦೦ ಪವನುಗಳ ನಷ್ಟವಾಗಿರುವುದು ೫೦ ಮಂದಿ ಆಸ್ಪತ್ರೆಯಲ್ಲಿ ವೈತೋಪಚಾರ ಹೊಂದುತ್ತಿದ್ದಾರೆ ಚರ್ಮದ ಕಾರ್ಖಾನೆಯಲ್ಲಿ ಉಂಟಾದ ಒಂದು ಸಿಡಿತವೇ ಈ ಬೆಂಕಿಯ ಮೂಲಕಾರಣವಾಗಿರುವುದು. ಅನಂತರ ಎಣ್ಣೆಯ ಕೊಳಗಳು ಸಿಡಿದು ಅತಿರೇಕ ನಷ್ಟವಾಯಿತು.

~~~~~

ದಕ್ಷಿಣ ಆಫ್ರೀಕದ ಭಾರತೀಯರ ಕಷ್ಟ ನಿವಾರಕಾರ್ದವಾದ ಮಸೂದೆಯು ಅಲ್ಲಿನ ಸರಕಾರದ ಪ್ರಭು ಮಂದಿರದಲ್ಲಿಯೂ ಮೂರನೇ ಸಲ ಮಂಜೂರಾತಿಯನ್ನು ಪಡೆಯಿತು ಎಂಬ ಸಂತೋಷಕರವಾದ ವಾರ್ತೆ ಬಂದದೆ ದಕ್ಷಿಣ ಆಫ್ರೀಕದ ಗವರ್ನರ್ ಜನರಲರವರು ಈ ವಿಷಯವನ್ನು ಹಿಂದೂಸ್ಥಾನದ ವ್ಯಾಸರಾಯ ಪ್ರಭುಗಳವರಿಗೆ ತಿಳಿಸಿದ್ದಲ್ಲ ವ್ಯಾಸರಾಯ ಪ್ರಭುಗಳವರು ಈ ಒಳ್ಳೇ ವಾರ್ತೆಗೆ ಕೃತಜ್ಞನಾಗಿದ್ದೇನೆ ಎಂಬದಾಗಿ ಮರುತಂತೀ ಬಿಟ್ಟಿರುವರು

ಆಸ್ಟ್ರಿಯ ದೇಶದ ಯುವರಾಜ ಫ್ರಾನ್ಸಿಸ್ ಫರ್ಡಿನಾಂಡರನ್ನೂ ಅವರ ಸತಿಯನ್ನೂ ತಾ ೨೮ರಲ್ಲು ಸರಾಜೇವೋ ಎಂಬಲ್ಲಿ ಗುಂಡುಹೊಡೆದು ಕೊಂದರೆಂಬ ಘೋರ ವಾರ್ತೆಯು ಬಂದಿರುವುದು. ಪಟ್ಟಣ ಸಭಾಸದನಕ್ಕೆ ಇವರು ಸವಾರಿ ಮಾಡುತ್ತಿರುವಾಗ ಒಬ್ಬ ಕಂಪೊಜಿಟರನು ಒಂದು ಬೊಂಬು ಬಿಸಾಡಿದನು. ಅದು ಪ್ರಭುಗಳವರಿಗೆ ತಪ್ಪಿ ಗಾಡಿ ದಾಟಿಹೋಗುವ ವರೆಗೆ ಸಿಡಿಯಲಿಲ್ಲ. ನಂತರ ಸಿಡಿದು ವೈಗಾವಲಿಯ ಇಬ್ಬರು ಮೇಜರರೂ ಜನಸಂದಣಿಯಲ್ಲಿ ೬ ಮಂದಿಯೂ ಗಾಯ ಪೊಂದಿದರು. ಪ್ರಭುಗಳವರು ಹಿಂದೆ ಹೋಗದೆ ಸಭಾಸದನಕ್ಕೆ ತಲಪಿ ಸಂದರ್ಶಿಸುತ್ತಿರುವಾಗ ಹ್ಯಾಸ್ಕೂಲಿನ ವಿದ್ಯಾರ್ಥಿಯು ಎರಡು ಗುಂಡು ಹಾರಿಸಿದನು ಡ್ಯೂಕರೂ ಅವರ ಪತ್ನಿಯವರೂ ಇದರಿಂದ ಮಡಿದು ಹೋದರು. ಘಾತುಕರು ಕೈದು ಮಾಡಲ್ಪಟ್ಟಿದ್ದಾರೆ ಅನಾರೋಗ್ಯ ಸಂಬಂದ ಇಶ್ಚೆಲ್ ಎಂಬಲ್ಲಿ ಹೋಗಿದ್ದ ಚಕ್ರವರ್ತಿ ಜೋಸೆಫ್ ಫರ್ಡಿನಾಂಡರು ಈ ವಾರ್ತೆಯನ್ನು ಕೇಳುತ್ತಲೇ "ಬಯಂಕರ, ಬಯಂಕರ, ನನಗೇನೂ ಉಳಿಯಲಿಲ್ಲ" ಎಂದು ಹೇಳಿಕೊಂಡು ಪಟ್ಟಣಕ್ಕೆ ಹಿಂದೆರಳಿದರು. ಆಸ್ಟ್ರೀಯರಲ್ಲಿ ಸರ್ವಿಯರಿಗೆ ವಿರೋದವಾದ ಒಂದು ಸೊಸ್ಯಾಟಿಯು ಏರ್ಪಾಡಾಗಿತ್ತು. ಈ ಏರ್ಪಾಡಿಗೆ ಯುವರಾಜರು ವಿರೋಧಿಯಾದುದರಿಂದ ಇವರನ್ನು ಕೊಲೆ ಮಾಡಿದರೆಂತ ತಿಳಿದು ಬರುತ್ತದೆ. ಮೃತರ ಸೋದರಳಿಯ ಆರ್ಚ್ ಫ್ರಾಂಜಿಸ್ ಜೋಸೆಫರವರು ಯುವರಾಜರಾಗಿ ನೇಮಿಸಲ್ಪಟ್ಟರು

~~~~~

ಕೆಮೊರಿಕ ಸಂಸ್ಥಾನದ ನ್ಯೂ ಪಟ್ಟಣವಾದ ರೋಮಪುರದಲ್ಲಿ ಎಲಿಮೆಂಟರಿ ಬಾನೆ ಮೂಲಪಾಠಶಾಲೆಗಳಲ್ಲಿ ವಿದ್ಯೆ ಹೊಂದುವ ಮಕ್ಕಳು ೫೦,೦೦೦ ಇರುತ್ತಾರೆಂತಲೂ ಇಷ್ಟು ಮಂದಿ ಮಕ್ಕಳಲ್ಲಿ ಹೆತ್ತವರ ಅಪೇಕ್ಷೆ ಪ್ರಕಾರ ಶಾಲೆಗಳಲ್ಲಿ ಮತಸಂಬಂದವಾದ ಶಿಕ್ಷಣ ಹೊಂದುವಂತಹ ಮಕ್ಕಳು ೧೬೦೦ ಮಾತ್ರವೆಂತಲೂ ಕಳದ ಮೇ ತಿಂಗಳ ೩೧ನೆ ತಾರೀಕಿನ ಕ್ರಿಶ್ಚನ್‌ಲೈವ್ ಎಂಬ ವರ್ತಮಾನ ಪತ್ರದಿಂದ ತೋರುತ್ತದೆ

~~~~~

ಉತ್ತರ ಹಿಂದೂಸ್ಥಾನ.

ರಾ| ಬಾಲಗಂಗಾದರ ತಿಲಕರವರಿಗೆ ಪತ್ರ ಪ್ರತಿನಿದಿಗಳು ಬೇಟಿ ಕೊಟ್ಟಲ್ಲಿ ತಿಲಕರವರು ಈ ರೀತಿ ಹೇಳಿರುವರು — ಜಸ್ಟಿಸ್ ದಾವಾರರು ೬ ವರುಷಗಳ ಬಂಕೋಲೆ ಶಿಕ್ಷೆ ವಿಧಿಸಿದನಂತರ ತನ್ನನ್ನು ಮಹಾಲಕ್ಷ್ಮಿ ಸ್ಟೇಶನಿಗೆ ಕೊಂಡುಹೋಗಿ ಅಲ್ಲಿಂದ ಸ್ಪೆಶ್ಯಲ್ ಟ್ರೈನಿನಲ್ಲಿ ಹಾಕಿ ಅಹಮ್ಮದಾಬಾದಿಗೆ ಕೊಂಡುಹೋದರು. ತಾ. ೧೩ರ ವರೆಗೆ ಅಹಮ್ಮದಾಬಾದಿನಲ್ಲಿ ಉಳಿದನಂತರ ಮಂಡಲೆಗೆ ಕೊಂಡುಹೋದರು. ಶಿಕ್ಷೆ ವಿಧಿಸಿದಂದಿನಿಂದ ಈ ವರೆಗೆ ಸಜಾ ಹೊಂದಿದ್ದ ಬಂದಿವಾನರಂತೆ ನಡಿಸಿದರು. ಆದರೆ ಸಂಕೋಲೆ ಹಾಕಲಿಲ್ಲ. ಅಹಮ್ಮದಾಬಾದಿನಲ್ಲಿರುವಾಗ ಮೊದಲಿನ ಹತ್ತು ದಿವಸಗಳಲ್ಲಿ ತನ್ನ ಭಾರವು ೧೦ ರಾತ್ತಲಿಗೆ ಕಮ್ಮಿಯಾಯಿತು. ತನಗೆ ಕೆಲಸವಿಲ್ಲದಿದ್ದರೂ ಆಹಾರದ ದೋಷವೇ ಹೀಗಾಗಲು ಕಾರಣವಾಯಿತು. ಅನಂತರ ತುಪ್ಪ ಹಾಲು ಇತ್ಯಾದಿ ಒದಗಿಸಿಕೊಟ್ಟರು. ತನ್ನ ಶಿಕ್ಷೆಯು ಸಾದಾರಣ ಶಿಕ್ಷೆಯಾಗಿ ಮಾರ್ಪಟ್ಟಿತ್ತೆಂತ ಮಂಡಲೆಯಲ್ಲಿ ಗೊತ್ತಾಯಿತು ಮಂಡಲೆಯಲ್ಲಿದ್ದ ಒಬ್ಬ ಬ್ರಾಹ್ಮಣ ಬಂದಿವಾನನು ತನಗೆ ಅಡಿಗೆ ಮಾಡಿ ಹಾಕುತ್ತಿದ್ದನು ಒಂದು ತಿಂಗಳ ನಂತರ ಅವನ ಶಿಕ್ಷೆಯ ಅವಧಿಯು ತೀರಿದರಿಂದ ಯರೋಡ ಜೈಲಿನ ಒಬ್ಬ ಕುಲಕರ್ಣಿಯು ತನಗೆ ಅಡಿಗೆ ಮಾಡುತ್ತಿದ್ದನು ಮಂಡಲೆಗೆ ತಾನು ೧೯೦೮ನೇ ಇಸವಿ ಸಪ್ಟಂಬರ ತಾ. ೨೩ನೆಗೆ ತಲಪಿದೆನು. ೨ ವರ್ಷ ಕಾಲ ಆರೋಗ್ಯವು ನೆಟ್ಟಗಿದ್ದರೂ ಅನಂತರ ಪಕ್ಕನೇ ಮೂತ್ರ ರೋಗವು ಬಲಗೊಂಡಿತು. ಡಾಕ್ಟರ್ ಗಾರ್ಡ್ ಎಂಬವರು ಒರೇ ಬಾರ್ಲಿ ಆಹಾರ ತಕ್ಕೊಳ್ಳಬೇಕೆಂದು ಉಪದೇಶಿಸಿದ ಮೇರೆಗೆ ತಾನು ಬಾರ್ಲಿ ಆಹಾರವನ್ನೇ ತಕ್ಕೊಂಡದ್ದರಿಂದ ಮೂತ್ರ ರೋಗದ ಬಲವು ಮುರಿದು ಗುಣಹೊಂದುತ್ತಾ ಬಂದೆನು. ಬಂದಿಖಾನೆಯಲ್ಲಿ ಕಾಲ ಕಳೆಯುವುದು ಬಹಳ ಕಷ್ಟವಾದುದರಿಂದ ಏನಾದರೂ ಕೆಲಸ ಕೊಡಬೇಕೆಂದು ಕೇಳಿದರೂ ಅದಿಕಾರಿಗಳು ನಿರಾಕರಿಸಿದರು. ಕಡೆಗೆ ಪುಸ್ತಕಗಳನ್ನು ಓದುವ ಅಪ್ಪಣೆಯು ಸಿಕ್ಕಿತು. ಜೈಲ್ ಅದಿಕಾರಿಗಳು ತನ್ನನ್ನು ಬಹಳ ದಯಾಭಾವದಿಂದ ನಡಿಸುತ್ತಿದ್ದರು. ಪೂನೆಗೆ ಬಂದು ತಲಪುವ ವರೆಗೆ ಬಂದಿಖಾನೆಯ ವಿಷಯವಲ್ಲದೆ ಹೊರ ಲೋಕದ ವಿಷಯವೇ ತನಗೆ ಗೊತ್ತಿರಲಿಲ್ಲ ೭ನೇ ಎಡ್ವರ್ಡ್ ಮಹಾರಾಜರ ಮರಣ, ಜೋರ್ಜ ಸಾರ್ವಭೌಮರ ಪಟ್ಟಾಭಿಷೇಕ, ಡಿಲ್ಲಿ ದರ್ಬಾರು ವಿಷಯಗಳು ಬಂದಿಖಾನೆಯಿಂದ ಕೆಲವು ಮಂದಿಗೆ ಬಿಡುಗಡೆಯಾದುದರಿಂದ ಮಾತ್ರ ತಿಳಿದು ಬಂತು ಕೇಸರಿ ಪತ್ರಿಕೆಯಿಂದ ೫೦೦೦ ರೂಪಾಯಿಯ ಜೀವಣಾತಿ ಕೇಳಲ್ಪಟ್ಟದ್ದು ಪೂನೆಗೆ ಬಂದನಂತರ ತಿಳಿಯಿತು. ತನ್ನ ಕುಟುಂಬದವರಿಂದ ಒರೇ ಖಾಸಗಿ ವಿಷಯಗಳ ಪತ್ರ ಮಾತ್ರ ಬರಬಹುದಾಗಿತ್ತು ಬಂದಿಖಾನೆಯಲ್ಲಿ "ಗೀತರಸ" ಎಂಬ ಪುಸ್ತಕವು ಬರೆಯಲ್ಪಟ್ಟಿರುವುದು ಇನ್ನು ಪ್ರಖ್ಯಾತ ಅಂಕಾಗಣಿತ ಪುಸ್ತಕವೊಂದೂ ಬರೆಯಲ್ಪಟ್ಟದೆ. ಜರ್ಮನಿಗೆ ಹೋಗುವ ವಿಷಯ ಇನ್ನೂ ನಿಶ್ಚಯವಾದ ಆಲೋಚನೆ ಮಾಡಲಿಲ್ಲ ಎಲ್ಲವೂ ತನ್ನ ಆರೋಗ್ಯದ ಮೇಲೆ ಹೊಂದಿಕೊಂಡದೆ ಎಂದು ಹೇಳಿರುವರು.

~~~~~

ಬರ್ಮದ ಮಿಂಚೂ ಜಿಲ್ಲೆಯಲ್ಲಿ ಅತಿ ವೃಷ್ಟಿಯಿಂದ ಹೊಳೆಗಳಲ್ಲಿ ವಿಪರೀತ ಪ್ರವಾಹವು ಬಂದು ಆ ಇಡೀ ಜಿಲ್ಲೆಯೇ ನೀರಿನಲ್ಲಿ ಮುಳುಗಿತು ನೀರಿನ ಕಾಲಿವೆಗಳು ಕಿತ್ತು ಹೋಗಿವೆ ಸೇತುಗಳು ಮುರಿದಿವೆ. ಹಲವು ಗ್ರಾಮಗಳು ನಿರ್ನಾಮವಾದುವು. ಮನೆ, ಮರಗಳೂ, ದನಕರುಗಳೂ, ದವಸದ ಕಣಜಗಳೂ ಕೊಚ್ಚಿ ಹೋಗಿರುವವು ೫೦ ಅಡಿಗಳುದ್ದದ ನೀರು ಅಖಂಡವಾಗಿ ಪ್ರವಹಿಸಿರುವುದು. ಇಂಥಾ ಭಯಂಕರವಾದ ಪ್ರವಾಹವನ್ನು ಯಾವಾಗಲೂ ಕಂಡಿಲ್ಲವೆಂದು ಅಲ್ಲಿನ ಜನರು ಹೇಳುವರು.

~~~~~

ಮಂಡಲೆಯಲ್ಲಿ ಕೆಲಸಕ್ಕಿದ್ದ ಬಿಥ ಗ್ರಾಮದ ಬಿಲ್ಲಿ
~~~~~

ಲಾಲ ಎಂಬವನು ಶಾಂತಿಭೇದಿ ರೋಗದಿಂದ ಸತ್ತು ಹೋದನೆಂದು ಅವನ ಸಂಬಂಧಿಕರು ಭಾವಿಸಿ ಅವನನ್ನು ನದಿಯ ಹೊಗೆಯಲ್ಲಿ ಹೂತಿಟ್ಟರು. ಅವನನ್ನು ಹೂತಿಟ್ಟ ೧೩ನೇ ದಿವಸ ಇವನ ಮನೆಯಲ್ಲಿ ಉತ್ತರಕ್ರಿಯೆ ನಡಿಸುವಾಗ ಫಕ್ಕನೇ ಬಿರ್ಜಿಲಾಲನು ಮನೆಗೆ ಬಂದನು. ಎಲ್ಲರಿಗೂ ಪರಮಾಶ್ಚರ್ಯವಾಯಿತು. ತನಗೆ ಮೂರ್ಛೆ ತಿಳಿದಾಗ ಹೊಗೆಯಿಂದ ಎದ್ದನು. ಬಹಳ ಕಷ್ಟದಿಂದ ಗ್ರಾಮಕ್ಕೆ ತಲುಪಿ ೧೦-೧೨ ದಿವಸದ ನಂತರ ಗುಣಹೊಂದಿದ ನಂತರ ಮನೆಗೆ ಬರಲು ಸಾಧ್ಯವಾಯಿತು ಎಂದು ಹೇಳಿದನು.

~~~~~

ಅಲ್ಲಹಾಬಾದಿನ ಫೇಟಗಢ ಎಂಬಲ್ಲಿಯ ರೈಲ್ವೇ ಸ್ಟೇಶನಿನ ಟಿಕೇಟ್ ಕಲೆಕ್ಟರ್ ಹೆಮ್ಮರ್ ಎಂಬವನು ತನ್ನ ಹೆಂಡತಿಯನ್ನು ಕೊಂದು ಗಂಗೆಯಲ್ಲಿ ಬಿಸಾಡಿದ್ದನು ಎಂದು ತಿಳಿಸಿತ್ತಷ್ಟೆ. ಈ ಮೊಕದ್ದಮೆಯು ತನಿಖೆಯಾಗಿ ಹೆಮ್ಮರನಿಗೆ ಫಾಸಿ ಶಿಕ್ಷೆ ವಿಧಿಸಲ್ಪಟ್ಟಿತು.

~~~~~

ಹತ್ತು ವರ್ಷಗಳ ಕಠಿಣ ಸಜೆ ವಿಧಿಸಲ್ಪಟ್ಟು ಆಲಿಪುರ ಜೈಲಿನಲ್ಲಿದ್ದ ರಾಮುಲಕ್‌ಚಂದ ಕುರ್ಮಿ ಎಂಬವನು ಬಂದಿಖಾನೆಯಲ್ಲಿ ತಾನು ಇದ್ದಲ್ಲೇ ಕುತ್ತಿಗೆಗೆ ಹಗ್ಗಹಾಕಿ ಸ್ವಹತ್ಯ ಮಾಡಿಕೊಂಡಿರುವನು.

~~~~~

ಕಲ್ಕತ್ತಾ ಪಟ್ಟಣದಲ್ಲಿ ೪೦೦ ಶಾಲೆಗಳು ಇರುತ್ತವೆ. ೧೭೭೮ ಹುಡುಗರೂ ೬೪೮೯ ಹುಡುಗಿಯರೂ ವಿದ್ಯೆ ಹೊಂದುತ್ತಾರೆ. ಒಂದು ವರುಷಕ್ಕೆ ಮುನ್ಸಿಪಾಲಿಟಿಯವರು ಶಾಲೆಗಳಿಗೆ ಸಹಾಯ ಹಣವಾಗಿ ೭೬,೦೦೦ ಕೊಡುತ್ತಾರೆ.

~~~~~

ಬರೋಡೆ ಸಂಸ್ಥಾನದಲ್ಲಿ ಪೌರೋಹಿತ್ಯ ನಡಿಸುವದಕ್ಕೆ ಭಟ್ಟರು ಪರೀಕ್ಷೆ ಪಾಸಾಗಬೇಕಾಗಿ ಕಾನೂನು ಏರ್ಪಡಿಸುತ್ತಾರೆ. ಇಂತಹ ಕಾನೂನು ಆದರೆ ವಿದ್ಯಾಹೀನ ವೈದಿಕರೆಲ್ಲರೂ ಭಟ್ಟ ವೃತ್ತಿಗೆ ಅಯೋಗ್ಯರಾಗುವರು.

~~~~~

ದಕ್ಷಿಣ ಹಿಂದೂಸ್ಥಾನ.

~~~~~

ಮೈಸೂರು ಸಂಸ್ಥಾನದ ಚೀಫ್ ಕೋರ್ಟಿಗೆ ಇದೇ ಜುಲಾಯಿ ತಿಂಗಳಿಂದ ಮದ್ರಾಸ್ ಹ್ಯಾಕೋರ್ಟಿನ ಜಸ್ಟಿಸ್ ಮಿಲ್ಲರರವರು ಚೀಫ್ ಜಡ್ಜರಾಗಿಯೂ ಮಿ ಚಂದ್ರಶೇಖರಯ್ಯನವರು ೨ನೇ ಜಡ್ಜರಾಗಿಯೂ ನೇಮಿಸಲ್ಪಟ್ಟಿರುವರು. ಮಿ' ಇ. ಎಚ್. ವಾಲೆಸ್‌ರವರನ್ನು ಬ್ರಿಟಿಷ್ ಸರಕಾರದವರು ಹಿಂದಕ್ಕೆ ಕರೆಯಿಸಿಕೊಂಡದ್ದರಿಂದ ಫರ್ಲೋ ರಜೆ ಮೇಲಿದ್ದ ಮಿ| ಟಿ. ಪರಮ ಶಿವಯ್ಯರವರು ೩ನೇ ಜಡ್ಜರಾಗಿ ನೇಮಿಸಲ್ಪಟ್ಟಿರುವರು.

~~~~~

ದಕ್ಷಿಣಆಫ್ರೀಕದ ಭಾರತೀಯರಿಗೆ ಸಹಾಯ ಮಾಡುವ ಸಲುವಾಗಿ ಮದ್ರಾಸ್ ಸಹಾಯಕ ಸಂಘದಿಂದ ಒಟ್ಟಿಗೆ ರೂ. ೩೪೩೧—೮—೨ ಕೂಡಿಸಲ್ಪಟ್ಟಿತು. ಈ ಪೈಕಿ ೩೦೦೦ ರೂಪಾಯಿ ದಕ್ಷಿಣ ಆಫ್ರಿಕಕ್ಕೆ ಕಳುಹಿಸಲ್ಪಟ್ಟಿರುವುದು.

~~~~~

ದಕ್ಷಿಣ ಆರ್ಕಾಡಿನ ಡಿಸ್ಟ್ರಿಕ್ಟ್ ಕಲೆಕ್ಟರರಾಗಿರುವ ಮಿ| ಅಜುಜಿದ್ದೀನ ಸಾಹೇಬರ ಮೇಲೆ ರಿಟಾಯರ್ಡ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟ ವ ಬೆರಿಷ್ಟರರಾಗಿರುವ ಮಿ| ಮಿರ್ ಸುಲ್ತಾನ ಮೊಹಿದೀನ ಸಾಹೇಬರವರು ಸೈದಾ ಪೇಟೆಯ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ ಕೋರ್ಟಿನಲ್ಲಿ ಮಾನನಷ್ಟ ಮೊಕದ್ದಮೆಯನ್ನು ತಂದಿದ್ದರೆಂದು ಹಿಂದೆ ತಿಳಿಸಿತ್ತಷ್ಟೆ. ಈ ಮೊಕದ್ದಮೆಯು ತನಿಖೆಯಾಗಿ ಮಿ| ಅಜುಜಿದ್ದೀನರ ಮೇಲೆ ಆಪಾದಿಸಲ್ಪಟ್ಟ ಪಾದಗಳಿಗೆ ತಕ್ಕ ರುಜುವಾತಿಲ್ಲವೆಂಬ ಸೂಚಿಸ ಮೇಲೆ ಮಿ ಅಜುಜಿದ್ದೀನರನ್ನು ಮೇಜಿಸ್ಟ್ರೇಟರು ಬಿಡುಗಡೆಮಾಡಿದರು.

~~~~~

ಮದ್ರಾಸಿನ ಲಾ ಕಾಲೇಜು ವಿದ್ಯಾರ್ಥಿ ಶ್ರೀನಿವಾಸ ಅಯ್ಯರ್ ಎಂಬವರ ೧೫೦ ರೂಪಾಯಿ ಕ್ರಯ ಬಾಳುವ ಸೈಕಲನ್ನು ಕೊಟ್ಟ ಒಂದು ಸೈಕಲನ್ನು ದುರುಸ್ತಿ ಕೆಲಸದ ಅಬ್ದುಲ್ ಖಾದಿರ ಎಂಬವನು ಕಳವು ಮಾಡಿದ ತಪ್ಪಿನ ಮೇಲೆ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು ಅವನಿಗೆ ಒಂದು ವರ್ಷದ ಸಜಾ ವಿಧಿಸಿದರು. ಇನ್ನೊಂದು ಸೈಕಲ್ ಕಳವು ಮಾಡಿದ ಮೊಕದ್ದಮೆಯೂ ಆಪಾದಿತನ ಮೇಲೆ ಬಾಕಿ ಇದೆ.

~~~~~

ಮದ್ರಾಸ್ ಹ್ಯಾಕೋರ್ಟಿನ ಜಸ್ಟಿಸ್ ಮಿಲ್ಲರರವರು ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜರಾಗಿ ನಿಯಮಿಸಲ್ಪಟ್ಟದರಿಂದ ಇವರ ಬದಲಿಗೆ ತಿನ್ನವೆಲ್ಲಿ ಸೆಶ್ಯನ್ಸ್ ಜಡ್ಜರಾದ ಮಿ ಸಿ. ಸಿ. ಸ್ಪೆನ್ಸರರವರು ಮದ್ರಾಸ್ ಹ್ಯಾಕೋರ್ಟಿನ ಜಸ್ಟಿಸರಾಗಿ ನೇಮಿಸಲ್ಪಟ್ಟಿರುವರೆಂತ ತಿಳಿದು ಬರುತ್ತದೆ.

~~~~~

ಮದ್ರಾಸ್ ಗವರ್ನವೆಂಟಿನ ಕೌನ್ಸಿಲಿನ ಸೀನಿಯರ್ ಮೆಂಬರರಾದ ಸರ್ ಆಟ್ಕಿನ್‌ಸನ್‌ರವರು ಕೆಲಸ ನಿವೃತ್ತರಾಗಿ ಇದೇ ತಾ ೧೯ರಲ್ಲು ಹಡಗ ಹತ್ತಿ ಶೀಮೆಗೆ ತೆರಳುವರು. ಸರ್ ಆಟ್ಕಿನ್‌ಸನ್‌ರವರು ಮದ್ರಾಸ್ ಸಂಸ್ಥಾನದ ಆಡಳಿತೆಯಲ್ಲಿ ವಿವಿಧ ಇಲಾಖೆಗಳಲ್ಲಿ ಪ್ರಜಾ ಜನರ ಹಿತಕ್ಕಾಗಿ ೩೬ ವರ್ಷ ಕೆಲಸಮಾಡಿ ಪ್ರಜಾ ಜನರ ಮತ್ತು ಸರಕಾರದ ಪ್ರೀತಿಗೆ ಪಾತ್ರರಾಗಿದ್ದರು. ಇವರ ಕೆಲಸವನ್ನು ಸರಕಾರದವರು ಮಾನ್ಯಮಾಡಿ ೧೯೦೯ನೇ ಇಸವಿಯಲ್ಲಿ ಸಿ ಐ ಇ ಎಂಬ ಬಿರುದನ್ನೂ ೧೯೧೨ನೇ ಇಸವಿಯಲ್ಲಿ ಕೆ ಸಿ. ಎಸ್. ಐ ಎಂಬ ಬಿರುದನ್ನೂ ದಯಪಾಲಿಸಿರುವರು.

~~~~~

ಹೈದರಾಬಾದಿನಲ್ಲಿ ರೆವಿನ್ಯು ಡಿರೆಕ್ಟರ ಜನರಲರ ಹೆಡ್ ಮುನ್ಶಿಯರಾದ ತಡಪತ್ರಿ ಕೇಶವರಾವ್ ಎಂಬವರು ವಿಲ್ಲೂರಿನ ವಿಶ್ವನಾಥಯ್ಯನವರ ವಿಧವೆ ಮಗಳು ಶೀತಾರಾಮಮ್ಮಾ ಎಂಬಾಕೆಯನ್ನು ಇದೇ ತಿಂಗಳ ೫ನೇ ತಾರೀಕಿನ ದಿನ ವಿವಾಹ ಮಾಡಿಕೊಂಡರು. ಉಭಯತರೂ ಸ್ಮಾರ್ಥನಿಯೋಗಿ ಬ್ರಾಹ್ಮಣ ಜಾತಿಯವರು. ಬಾಜಿ ಕೃಷ್ಣರಾವ್ ಬಿ ಎ. ಬಿ. ಎಲ್. ಮತ್ತು ಬಿ. ಎ ಚಂದವರಕಾರ್ ಪುರೋಹಿತರಾಗಿ ಕಾರ್ಯನಿರ್ವಹಿಸಿದರು. ಹುಡುಗಿಯ ಪ್ರಾಯ ೧೭ ವರುಷ, ಮದುಮಗನ ಪ್ರಾಯ ೪೦.

~~~~~

ತಿರುವಂಕೋಡು ಸಂಸ್ಥಾನದ ರಾಜಧಾನಿಯಲ್ಲಿ ಕೆಲವು ದಿವಸಗಳ ಮೊದಲು ಕೂಡಿದ ರಾಜ ಸಭೆಯಲ್ಲಿ ಸಭೆಯ ಮೆಂಬರರಾದ ವೆಂಕಟಾಚಲ ಅಯ್ಯರ್ ಎಂಬವರು ಸರಕಾರಿ ಸೆಕೆಂಡರಿ ಶಾಲೆಗಳಲ್ಲಿ ವಿವಾಹವಾದ ಹುಡುಗರಿಗೆ ಶೇರಿಸಿಕೊಳ್ಳಕೂಡದಾಗಿ ಕಾನೂನು ನಿಬಂಧನೆ ಮಾಡಿದರೆ ದೇಶದ ಕ್ಷೇಮಕ್ಕೆ ಹಾನಿಕರವಾದ ಬಾಲವಿವಾಹ ಪದ್ಧತಿಯು ತಗ್ಗುವುದೆಂತ ಹೇಳಿದರು. ಈ ಕುರಿತು ಅಗತ್ಯವಿರುವ ನಿವೃತ್ತಿ ಏರ್ಪಡಿಸುವುದಕ್ಕೆ ವಿದ್ಯಾಖಾತೆಯ ಡೈರೆಕ್ಟರ್‌ರವರ ರಿಪೋರ್ಟು ತರಿಸಿಕೊಳ್ಳೂಣಾಗುವುದೆಂತ ದಿವಾನರವರು ಉತ್ತರ ಕೊಟ್ಟರು.

—o—

ದಕ್ಷಿಣ ಕನ್ನಡ.

~~~~~

NOTICE.

In the Court of the Dist. Judge, S. Malabar

I P No 10 of 1910

The undersigned will sell the interest of the Insolvent Mamad Akrom Abdul Kadir Sahib, in the under-mentioned properties, by public auction, at 12 noon on the 30th July 1914, from the Sub-Registrar's Office Byndoor, in Coondapur Taluq, South Canara District, subject to the conditions published in the Sale Proclamation Printed copies of the sale Proclamation can be had from the undersigned.

List of Immovable Properties to be sold.

1. Survey Nos—212 7A, 212 7B. 212/7C, 212 4, 212 2A, 201 3, 212/5, 208/7, in Byndoor village No: 3.
2. Survey Nos—309, 310 2, 310 4, in the said village.
3. Survey No:—169 3, in Kirimanjeswar village.
4. 78 6 with the house thereon 78/10, 78 11, 60 3, 63 3, 61/6, 143/4, in Edathara village.

V. G. Ananthararama Iyer, B.A., B.L.

21st June 1914. *Vakil & Receiver in I P No 10 of 1910 District Court S Malabar Calicut*

—o—

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O. P. ನಂಬ್ರ 57/1914.

ಅಂತಮ್ಮಶೆಡ್ತಿ—ಅರ್ಜಿದಾರಳು.

ಮತ್ತು

ದುರ್ಗಿಶೆಡ್ತಿ ಕೂಡಾ—೨ ಪ್ರತಿವಾದಿಗಳು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ:—ಉಡ್ಪಿ ತಾಲೂಕು ನೀಲಾವರ ಮಾ| ಹೇರೂರು ಗ್ರಾಮದ ಸೂರಪ್ಪ ಶೆಟ್ಟಿ ಸೊಸೆ ಅಂತಮ್ಮಶೆಡ್ತಿಯು, 1913ನೇ ಇಸವಿ ಫೇಬ್ರವರಿ ತಿಂಗಳಲ್ಲಿ ಮೃತಪಟ್ಟ ತನ್ನ ಮಗ ಎಲ್ಲಪ್ಪ ಶೆಟ್ಟಿಗೆ ಹೊರಗಿನಿಂದ ಬಾಹಾ ಸಾಲ ವಸೂಲು ಬಗ್ಗೆ ತನಗೆ ವಾರಿಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ಈ ಕೋರ್ಟಿಗೆ ಮನವಿ ಮಾಡಿರುತ್ತಾಳೆ. ಸದರಿ ಅರ್ಜಿ ತನ್ಕಿಯು ತಾ. ೩೦-೭-೧೪ಕ್ಕೆ ಆಗಿರುತ್ತದೆ.

ತಾ. 27—6—14. ಮಂಗಳೂರು. **Pangal Subba Rao.** ಅರ್ಜಿದಾರಳ ಕಡೆಯ ವಕೀಲ್.

~~~~~
~~~~~

ನೋಟೀಸು.

ಮಂಗಳೂರು ತಾಲೂಕು ಕಾವಳ ಮಾಗಣೆ ಅರಳ ಕೈಕ್ಕಿಲ ಗ್ರಾಮದ ಹಿರ್ಣಿ ಗುಮ್ಮಣ್ಣ ಪೂವಣಿಯರ ಸೊಸೆ ಅಪ್ಪೆ ಯಾನೆ ದೇಜಮ್ಮನಾದ ನಾನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ, ನಾನು ಈ ಗ್ರಾಮದಲ್ಲಿಯೂ ರಾಯಿ ಗ್ರಾಮದಲ್ಲಿಯೂ ಕೂಡ ಹೆಚ್ಚು ಬೇರೇಜು ಕೊಡುವ ಜವಿಾನುದಾರ್ತಿಯಾಗಿದ್ದರೂ ದಸ್ಕತ್ತಿಗೆ ಕೂಡ ಬರಹವಿಲ್ಲದೆ ೩ ಗೆರೆಗಳನ್ನು ಮಾತ್ರ ಹಾಕಿಕೊಂಡು ಇದ್ದೆ. ಇನ್ನು ಮುಂದೆ ೩ ಗೆರೆ ಮತ್ತು ನನ್ನ ಎಡಕೈ ಹೆಬ್ಬೆಟ್ಟಿನ ಮೊಹರ ಇಲ್ಲದ ಯಾವ ವಿಧದ ಏನೊಂದು ಕಾಗದ ಪತ್ರಗಳನ್ನು ಸಹ ಯಾರೂ ಮಂಜೂರು ಮಾಡಕೂಡದಾಗಿ ಈ ಮೂಲಕ ತಿಳಿಸಿದ್ದೇನೆ

||| ಈ ಮೂರು ಗೆರೆ ಅಪ್ಪೆ ಯಾನೆ ದೇಜಮ್ಮನ ರುಜು

ನೋಟೀಸು.

ಮಂಗಳೂರ ಡಿಸ್ಟ್ರಿಕ್ಟ್ ಮುನ್ಸಿಪ ಕೋರ್ಟಿನಲ್ಲಿ

ದಿವಾಳಿ ಅರ್ಜಿ ನಂಬ್ರ 1914

ಮಾಂಬ್ಯಾರಿ ಬಾವಬ್ಯಾರಿ ಮಗ— ನಾಮಂಜೂರ ಮಾಗಣೆ ವೃಳ್ಯಾಬೆಟ್ಟು ಗ್ರಾಮದಲ್ಲಿರುವವ } ದಿವಾಳಿ ಅರ್ಜಿದಾರ.

1 ಹಮ್ಮದೆ ಬ್ಯಾರಿ-ಸೇಕೆ ಬ್ಯಾರಿ ಮಗ ಮುಕೂರ ಗ್ರಾಮ
2. ಅಬ್ದು ಬ್ಯಾರಿ ಹಾಜಿ ಅಬ್ದುಲಕಾದ್ರಿ ಬ್ಯಾರಿ ಮಗ, ವೃಳ್ಯಾಬೆಟ್ಟು ಗ್ರಾಮಸ್ಥ.
3. ಪರ್ಮಂಕಿ ಶಿನಯ್ಯ-ರಾಮಪ್ಪಯ್ಯನವರ ಮಗ
4. ತ್ಯಾಂಪ ಪೂಜಾರಿ-ಬಾಲು ಪೂಜಾರಿ ಮಗ
5. ಪಕೀರ ಬ್ಯಾರಿ-ಹಮ್ಮದೆ ಬ್ಯಾರಿ ಮಗ.

} **ಪ್ರತಿವಾದಿಗಳು.**

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ.—ಸದರಿ ಅರ್ಜಿದಾರನು ತನ್ನನ್ನು ಸಾಲ ತೀರಿಸ ಲಿಕ್ಕೆ ಶಕ್ತಿಯಿಲ್ಲದವನೆಂತ ಆದಾಗಿ ಇನ್ಸಾಲ್ವೆಂಟೆಂತ ತೀರ್ಮಾನಿಸಬೇಕೆಂದು ಸದರಿ ಅರ್ಜಿದಾರನು ಸದರಿ ಅರ್ಜಿ ಕೊಟ್ಟಿರುವದರಿಂದ ಸದರ ವಿಷಯವಾಗಿ ಯಾರಿಗಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಅವನ್ನು ಸದರಿ ಕೋರ್ಟಿನ ಮುಂದೆ 1914ನೇ ಜೂನ್ ತಾ. ೩೦ರಲ್ಲಿ ಯಾ ಆ ದಿವಸ ಸದರಿ ಅರ್ಜಿ ಮುಂದರಿಸಿಯಿಟ್ಟ ತಾರೀಕಿಗೆ ಜಾಹೀರು ಮಾಡಿಕೊಳ್ಳತಕ್ಕದೆಂತ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿರುತ್ತದೆ

ತಾ 26—6—14

S Narsing Naik,
Pleader for Insolvent Petitioner

ಮಂಜೇಶ್ವರ ಉದ್ಯಾವರ:—ಉದ್ಯಾವರ ಕುಂಜತ್ತೂರು ಗ್ರಾಮಗಳಲ್ಲಿ ಕಳ್ಳರ ಕಾಟವು ಹೆಚ್ಚುತ್ತಾ ಬರುತ್ತದೆ ಮಳೆಗಾಲ ಪ್ರಾರಂಭವಾದಂದಿನಿಂದ ಈ ಕಳ್ಳರು ತೆಂಗಿನ ಕಾಯಿ ಇತ್ಯಾದಿಗಳನ್ನು ತೋಟದಲ್ಲಿ ಇರಬಿಡುವುದಿಲ್ಲ.

ಇದೇ ಕಳದ ತಾ. ೨೬ನೇ ಶುಕ್ರವಾರ ಒಂದು ವರ್ಷದಿಂದ ಪೋಲಿಸಿನವರು ಹುಡುಕುತ್ತಿದ್ದ ಉಳ್ಳಾಲ ಕೇಡಿ ಸ್ವಾರಿ ಎಂಬವನನ್ನು ಉದಿಯಾವರದಲ್ಲಿ ಮಂಜೇಶ್ವರ ಪೋಲಿಸ್ ಆಫೀಸರರು ಹಿಡಿದು ಕೈದುಮಾಡಿರುತ್ತಾರೆ.

ವಿಟ್ಲ—ಇಲ್ಲಿಯ ಪರಸ್ಪರ ಸಹಾಯಕ ಸಂಘದ ೨ನೇ ವರ್ಷದ ಜನರಲ್ ವಿಾಟಿಂಗ್ ಈ ವಾರ ಜರಗದೆ ಇದೆ ಎಂತ ಕಳದ ಸಂಚಿಕೆಯಲ್ಲಿ ತಿಳಿಸಿತ್ತಷ್ಟೆ. ಪರಂತು ೨ನೇ ವರ್ಷದ ಆಖೈರಿಯು ಜೂನು ತಾ. ೩೦ಕ್ಕೆ ಆಗುವುದರಿಂದಲೂ ವರ್ಷದ ಆಖೈರಿ ಲೆಕ್ಕವು ತಾ. ೩೦ರ ನಂತರ ಆಗಬೇಕಾದ್ದರಿಂದಲೂ ಜನರಲ್ ಮೀಟಿಂಗ್ ಈ ವಾರ್ತೆಯು ಪ್ರಕಟವಾದ ತಾ. ೭ರ ಮೊದಲೇ ನಡಿಯುವುದು ಅಸಾಧ್ಯವಾಗಿರುತ್ತದೆಂತ ತಿಳಿದು ಬರುತ್ತದೆ.

ಪಾವಂಜೆ—ಈ ಕಡವಿನಲ್ಲಿ ದೋಣಿ ದಾಟುವಾಗುವದರ ಬಹಳ ವಿಳಂಬವಾಗುತ್ತಿದೆ ಪಾವಂಜೆ ಕಡವಿನ ಹತ್ತಿರ ಸಾಯಂಕಾಲ ... ಗಂಟೆಗೆ ತಲಪಿದ ಗಾಡಿಗಳು ಸಾಯಂಕಾಲ ೬॥ ಗಂಟೆಯ ವರೆಗೆ ದಾಟಾವಿಲ್ಲ ನಂತರ ಬಹಳ ಒತ್ತಾಯದ ಮೇಲೆ ಗಾಡಿಗಳ ಆಚೆ ದಾಟಿದರೂ ದೋಣಿಗಾರರು ಇನಾಂ ಕೇಳಿದ್ದು ಕೊಡದಿದ್ದರೆ ಕೇಳುವ ಬೈಗಳು ಅಷ್ಟಿಷ್ಟಲ್ಲ. ಕಡವು ದಾಟಿ ಒಂದು ಫರ್ಲಾಂಗ್ ದೂರ ಹೋದ ನಂತರ ಕೂಡಾ ದೋಣಿಗಾರರು ಬಂದು ಗಾಡಿಗಾರರಿಗೆ ಹೊಡಿಯಲಿಕ್ಕೆ ನಿಲ್ಲುವ ಪದ್ಧತಿ ಇದೆ ದೋಣಿ ಬೇಗ ದಾಟುಮಾಡುವಂತೆ ಕಡವಿನ ಗುತ್ತೆದಾರರೂ ಹೆಚ್ಚಿನ ನಿಗಾಕೊಡುವುದಿಲ್ಲವಾದುದರಿಂದ ಪ್ರಯಾಣಿಕರಿಗೆ ಬಹಳ ಕಷ್ಟವಾಗಿದೆ ಈ ವಿಷಯ ಮೇಲಾಧಿಕಾರಿಗಳು ನಿಗಾಕೊಡುವುದು ಅವಶ್ಯವಾಗಿದೆ.

ಸುಳ್ಯ:—ತಾ. ೩೦ನೇ ಬೆಳಿಗ್ಗೆ ೧೦ ಗಂಟೆ ಸಮಯಕ್ಕೆ ಇಲ್ಲಿ ಹೊಸದಾಗಿ ಕಟ್ಟಿಸಿದ ಬೋರ್ಡು ಶಾಲೆಯು ಪ್ರತಿಷ್ಠಿಸಲಾಯಿತು. ಉಪಾಧ್ಯಾಯರೂ ಊರಮಾನ್ಯ ಗೃಹಸ್ಥರೂ ಒಟ್ಟಾಗಿ ಈ ಪ್ರತಿಷ್ಠೆಯ ಕಾರ್ಯವನ್ನು ಸಾಗಿಸಿದರೆಂತ ತಿಳಿಸಲು ಸಂತೋಷಪಡುತ್ತೇವೆ ಶಾಲಾ ಮಕ್ಕಳು ದೇವರ ಪ್ರಾರ್ಥನೆ ರಾಜಭಕ್ತಿ ಹಾಡು ಇತ್ಯಾದಿಗಳನ್ನು ಹಾಡಿ ಕೂಡಿದವರನ್ನು ಆನಂದ ಪಡಿಸಿದರು.

ಮಂಗಳೂರು

ಎಲಿಮೆಂಟರಿ ಶಾಲಾ ಉಪಾಧ್ಯಾಯರ ಜ್ಞಾನಾಭಿವೃದ್ಧಿ ಮಾಡುವ ಬಗ್ಗೆ ಇಲ್ಲಿಯ ಗವರ್ನಮೆಂಟ ಟ್ರೈನಿಂಗ್ ಶಾಲೆಯ ಉಪಾಧ್ಯಾಯರು ಒಂದು ಹೊಸ ಏರ್ಪಾಡನ್ನು ಜಾರಿಗೆ ತಂದಿರುವುದು ಸ್ತುತ್ಯವಾದುದಾಗಿರುವುದು. ಟ್ರೈನಿಂಗ್ ಶಾಲಾ ನಾಯ್ಕರುಗಳೂ ಪಟ್ಟಣದ ಇತರ ಮಹೋಪಾಧ್ಯಾಯರುಗಳೂ ಸರ್ತಿ ಪ್ರಕಾರ ಪ್ರತಿ ಶನಿವಾರ ಬೆಳಿಗ್ಗೆ ೭ ಗಂಟೆಯಿಂದ ೧೦ ಗಂಟೆಯ ವರೆಗೆ ಎಲಿಮೆಂಟರಿ ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರುಗಳಿಗೆ ಆಯಾ ವಿಷಯಗಳಲ್ಲಿ ಉಪನ್ಯಾಸಗಳನ್ನು ಮಾಡುತ್ತಿರುವರು ಕಳೆದ ನಾಲ್ಕು ಶನಿವಾರ ರಾ। ಎಮ್. ಬಾಬು ಬಿ ಎ ಎಲ್. ಟಿಯವರು ಹಿಂದೂಸ್ಥಾನದ ಯಾತ್ರ ಪುಣ್ಯಕ್ಷೇತ್ರಗಳ ಪ್ರಯಾಣಗಳ ವಿಷಯ ಭಾಷಣಗಳನ್ನು ಕೊಟ್ಟು ಭೂಗೋಳವನ್ನು ಇತಿಹಾಸಗಳನ್ನು ಒಟ್ಟುಕೂಡಿಸಿ ಮಕ್ಕಳಿಗೆ ಪಾಠ ಕೊಡುವ ರೀತಿಯನ್ನು ಈ ಭಾಷಣಗಳ ಮೂಲಕ ಉಪಾಧ್ಯಾಯರೊಳಗೆ ಖಚಿತ ಪಡಿಸಿರುವರು. ನಾಳೆಯು ಶನಿವಾರ ರಾ। ಟಿ. ಮಂಗೇಶರಾವ್ ಬಿ. ಎ, ಎಲ್. ಟಿಯವರು ಪಶು ವಿಜ್ಞಾನ ಶಾಸ್ತ್ರ ಸಂಬಂಧವಾದ ಭಾಷಣಗಳನ್ನು ಕೊಡಲು ಪ್ರಾರಂಭಿಸುವರು. ಇವರ ಭಾಷಣವು ಇನ್ನೆರಡು ವಾರಗಳ ಪರ್ಯಂತರ ಇರುವುದು. ಪಟ್ಟಣ ಮತ್ತು ಆಜುಬಾಜಿನ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯ ಉಪಾಧ್ಯಾಯಿನಿಯರೆಲ್ಲರೂ ತಪ್ಪದೆ ಭಾಷಣಗಳನ್ನು ಕೇಳಲು ಹೋಗಿ ತಕ್ಕ ಪ್ರಯೋಜನವನ್ನು ಪಡೆದುಕೊಳ್ಳುವುದು ಅವಶ್ಯವಾಗಿರುವುದು.

ಇದೇ ತಾ. ೯ರಲ್ಲು ಮಂಗಳೂರು ಮುನಿಸಿಪಾಲಿಟಿಯನ್ನು ಸಂದರ್ಶಿಸುವರೆ ಮದ್ರಾಸಿನಿಂದ ಸೆನಿಟರಿ ಕಮಿಷನರ್ ದೊರೆಗಳವರು ಬರುವರೆಂದು ತಿಳಿಯುತ್ತೇವೆ.

ಇಲ್ಲಿಯ ಹೆಕ್ಕಿ ಕೆರೇಜುಗಳೆಂಬ ಜಟ್ಕಾ ಬಂಡಿಗಳನ್ನು ಹೊಡೆಯುವವರು ಜಟ್ಕಾ ಬಾಡಿಗೆಗೆ ಕೊಂಡುಹೋಗಿ ಸ್ಟೇಂಡಿಗೆ ಹಿಂದೆರಳುವಾಗ ಗಾಡಿಯ ಒಳಗೆ ಕೂತುಕೊಂಡು ಒಳಗಿನಿಂದ ಗಾಡಿ ಹೊಡೆಯುತ್ತಿರುವ ಪದ್ಧತಿಯು ರೂಢಿಯಲ್ಲಿದೆ. ಈ ಪದ್ಧತಿಯಿಂದ ಅನೇಕಾವರ್ತಿ ಅಪಗಡಗಳು ಸಂಭವಿಸುತ್ತದಾದ್ದರಿಂದ ಪೋಲಿಸಿನವರು ಈ ವಿಷಯ ನಿಗಾ ಕೊಡಬೇಕಾಗಿರುವುದು.

ಮದ್ರಾಸ್ ಗವರ್ನರರಾದ ಪೆಂಟಲೇಂಡ ಪ್ರಭುಗಳವರು ಇದೇ ಬರುವ ಅಕ್ಟೋಬರ ತಿಂಗಳ ಕಡೆಯ ವಾರದಲ್ಲಿ ಉದಕಮಂಡಲದಿಂದ ಉತ್ತರ ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಚಿತ್ತೈಸುವರು. ಪ್ರಭುಗಳವರು ಪರಿವಾರ ಸಹಿತ ವಾಯನಾಡಿನಿಂದ ಮೋಟೊರ್ ಗಾಡಿ ಮೇಲೆ ಕಲಿಕೋಟೆಗೆ ಪ್ರಯಾಣ ಮಾಡಿ ಅಲ್ಲಿಂದ ತಲಚೇರಿ ಕನ್ನಾನೂರ ಮಾರ್ಗವಾಗಿ ಮಂಗಳೂರಿಗೆ ಚಿತ್ತೈಸುವರು. ಬಹುಶ್ಯಾ ಪ್ರಭುಗಳವರು ಮೂಡಬಿದ್ರೆ ಕಾರ್ಕಳವನ್ನು ಸಂದರ್ಶಿಸುವರೆಂತ ತಿಳಿಯುತ್ತೇವೆ. ಮಂಗಳೂರಿಂದ ಹಿಂದೆರಳುವಾಗ ಪಾಲಕ್ಕಾಟನ್ನು ಸಂದರ್ಶಿಸಿ ನವಂಬರ ತಾ ೭ರಲ್ಲು ಮದ್ರಾಸಿಗೆ ತಲಪುವರು.

ಈಗ ಮುನಿಸಿಪಾಲಿಟಿಯವರು ರಾ। ಭೋಜರಾಯರ ಮನೆಯ ಸಮೀಪ ಕಡಿಸಿದ ಹೊಸ ರಸ್ತೆಯನ್ನು ಕಂಬಳ ತೋಟದಿಂದ ಬೋಳೂರು ರಸ್ತೆಗೆ ಕೂಡಿಸಿದರೆ ಆ ಕಡೆಯ ನಿವಾಸಿಕರಿಗೆ ಮಹದುಪಕಾರವಾಗುವುದಲ್ಲದೆ ಈ ರಸ್ತೆಯನ್ನು ಮುಂದರಿಸುವುದರಿಂದ ಹಾಳು ಸ್ಥಿತಿಯಲ್ಲಿ ಅನಾರೋಗ್ಯಕರವಾಗಿರುವ ಕೆಲವು ಮನೆಗಳು ಕೆಡಲ್ಪಟ್ಟು ಆಜುಬಾಜಿನ ಸಾಂಕ್ರಾಮಿಕ ರೋಗಗಳು ಕಮ್ಮಿಯಾಗಬಹುದು

ಇಲ್ಲಿಯ ಕಾಪಿ ಸಾಹುಕಾರರಾದ ಮೆ ಎವರ್ ಸೌರೋಜಿ ಸೇಟರವರ ಕಾಪಿ ಕೊಠಡಿಯಿಂದ ೭ ೮ ದಿವಸಗಳ ಹಿಂದೆ ಕೆಲವು ಗೋಣೆ ಕಾಪಿ ಕಳವಾಗಿ ಹೋಗಿತ್ತು ಈ ವಿಷಯ ಪೋಲಿಸಿನವರು ಬಂದರಿನಲ್ಲಿ ತನಕಿ ನಡಿಸಿ ಎಂ. ಎನ್. ಮಾರ್ಕಿನ ಕೆಲವು ಗೋಣಿ ಕಾಪಿಯನ್ನು ರಾ। ಬೋಳಂತೂರು ಸರ್ವೋತ್ತಮ ಪ್ರಭುಗಳವರ ಭಂಡಸಾಲೆಯಲ್ಲಿ ಕಂಡುಕೊಂಡಿರುವರೆಂತ ತಿಳಿಯುತ್ತೇವೆ. ಈ ವಿಷಯವಾದ ಹೆಚ್ಚಿನ ತನಕಿಯು ನಡಿಯುತ್ತಿದೆ.

ಮಿಶ್ಯನ್ ಶಾಪಿನ ಎದುರಿರುವ ಕುರೇಯರ ಅಂಗಡಿಯಿಂದ ಇದೇ ಕಳದ ಮೇ ತಿಂಗಳ ತಾ. ೨೭ರಲ್ಲು ಸುಮಾರು ೫೦ ರೂಪಾಯಿ ಕ್ರಯಬಾಳುವ ಚರ್ಮವು ಕಳವಾಗಿತ್ತು. ಪೋಲಿಸಿನವರ ಪತ್ತೆಯಿಂದ ಸುಮಾರು ೨೬॥ ರೂಪಾಯಿ ಕ್ರಯಬಾಳುವ ಚರ್ಮವು ಕೇಡಿ ತುಕ್ಕ ಎಂಬವನಲ್ಲಿ ದೊರಕಿತು. ಟೌನ್ ಮೆಜಿಸ್ಟ್ರೇಟರು ಈ ಮೊಕದಮೆಯನ್ನು ತನಕಿ ನಡಿಸಿ ಜೂನು ತಾ. ೨೫ರಲ್ಲು ಸದರಿ ಕೇಡಿ ತುಕ್ಕನಿಗೆ ೬ ತಿಂಗಳ ಕಠಿಣ ಸಜೆಯನ್ನು ಚರ್ಮವನ್ನು ಅಡಗಿಸಿಟ್ಟು ಕೊಂಡಿದ್ದಳೆಂದು ಅಪಾದಿಸಲ್ಪಟ್ಟ ತುಕ್ಕನ

ಚಿಕ್ಕತಾಯಿ ಅಮ್ಮು ಎಂಬಾಕೆಗೆ ಒಂದು ತಿಂಗಳ ಕಠಿಣ ಸಜೆಯನ್ನು ವಿಧಿಸಿದರು.

ಇದೇ ತಾ. ೮ನೇ ಬುಧವಾರ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಜರಗುವುದು. ಈ ಮೀಟಿಂಗಿನಲ್ಲಿ ಮುಖ್ಯವಾಗಿ ೧೯೧೩-೧೪ನೇ ವರ್ಷದ ಬೋರ್ಡು ಆಡಳಿತ ಸಂಬಂಧವಾದ ಪ್ರಸ್ತಾಪವು ನಡೆಯುವುದು.

ಥಿಯಾಸೋಫಿಸ್ಟ್ ಎಂಡೋವರ್ ಸೊಸ್ಯಾಟಿ ಎಂಬ ಮದ್ರಾಸಿನಲ್ಲಿರುವ ಈ ಹೆಸರಿನ ಸೊಸ್ಯಾಟಿಯು ಒಂದು ಶಾಖೆಯು ಇಲ್ಲಿಯ ಕೆಲವು ಗೃಹಸ್ಥರಿಂದ ಇದೇ ತಾ. ೧೮ರಿಂದ ಇಲ್ಲಿ ತೆರೆಯೋಣಾಗಿರುವುದು. ಈ ಸೊಸ್ಯಾಟಿಯವರು ಹಂಪನಕಟ್ಟೆಯಲ್ಲಿರುವ ಡಿಸ್ಟ್ರಿಕ್ಟ್ ರಿಜಿಸ್ಟ್ರಿ ಆಫೀಸಿನ ಎದುರಿರುವ ಮಾಳಿಗೆಯನ್ನು ಬಾಡಿಗೆಗೆ ಮಾಡಿಕೊಂಡಿರುವರು ಈ ಮಾಳಿಗೆಯಲ್ಲಿ ಜಾತಿಭೇದವಿಲ್ಲದೆ ಎಲ್ಲಾ ಜಾತಿಯವರೂ ಧರ್ಮಾರ್ಥವಾಗಿ ವರ್ತಮಾನಪತ್ರಿಕೆಗಳನ್ನು ಓದಿಕೊಂಡು ಹೋಗಬಹುದಾಗಿರುವುದು. ಈ ಸೊಸ್ಯಾಟಿಗೆ ರಾ| ಎನ್. ಟಿ. ವೆಂಕಪ್ಪನವರು ಸೆಕ್ರೆಟರಿಗಳಾಗಿರುವರು.

ಇಲ್ಲಿಯ ಹಂಪನಕಟ್ಟೆಯು ಬ್ರಿಟೋ ಬಿಲ್ಡಿಂಗ್ಸಿನ ಹಿಂದಕಡೆಯ ವಠಾರವು ಬಹಳ ಗಲೀಜ ಸ್ಥಿತಿಯಲ್ಲಿರುವುದು. ಬ್ರಿಟೋ ಬಿಲ್ಡಿಂಗ್ಸಿನಲ್ಲಿರುವ ಕಾಫಿ ಹೋಟೇಲುಗಳು ಜನರು ತಿಂದು ಕುಡಿಯುವಂಥಾ ಸ್ಥಳವಾದ್ದರಿಂದ ಈ ಗಲೀಜು ಸ್ಥಳಗಳ ದುರ್ವಾಸನೆಯು ಆ ಹೋಟೇಲುಗಳ ಕಿಡಿಕಿಗಳ ಮೂಲಕ ಕಾಫಿ ಹೋಟೇಲನ್ನೆಲ್ಲಾ ವ್ಯಾಪಿಸಿ ಜನರಲ್ಲಿ ಅನಾರೋಗ್ಯವನ್ನುಂಟು ಮಾಡಲು ಕಾರಣವಾಗಬಹುದು. ಈ ಸ್ಥಳದ ಸ್ಥಿತಿಯನ್ನು ಬಲ್ಲವರಾದ ಸೆನಿಟರಿ ಇನ್ಸ್‌ಪೆಕ್ಟರುಗಳು ತ್ವರ್ಯದಲ್ಲಿ ಈ ವಿಷಯ ನಿಗಾ ಕೊಟ್ಟು ಆ ವಠಾರಗಳು ಮಾತ್ರವಲ್ಲ; ಕಾಫಿ ಹೋಟೇಲುಗಳನ್ನು ಕೂಡಾ ನಿರ್ಮಲವಾಗಿರಿಸುವಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ.

ವಲ್ಕರ್ಟ್ ಬ್ರದರ್ಸ್ ಕಾಫಿ ಕ್ಯೂರಿಂಗ್ ಶಾಖೆಯ ಮೆನೇಜರರಾಗಿ ಮೂಡಗಿರಿಯಿಂದ ಮೆ| ಎ ಓ. ಹಪಿಲ್ಟನ್ ದೊರೆಗಳವರು ಬರುವರೆಂದು ತಿಳಿಯುತ್ತೇವೆ

ಇಲ್ಲಿಯ ಮದ್ರಾಸ್ ಬ್ಯಾಂಕಿನ ಮಾಜಿ ಮೆನೇಜರರಾಗಿದ್ದ ಮೆ| ಬಕ್ಲೆ ದೊರೆಗಳವರಿಗೆ ಸ್ವಸ್ತಿ ವಚನವನ್ನು ಕೊಡುವ ಸಂದರ್ಭದಲ್ಲಿ ಇಲ್ಲಿಯ ಸಾಹುಕಾರರು ವಂತಿಗೆ ಕೂಡಿಸಿ ಖರ್ಚುಮಾಡಿ ಉಳಿದ ಸಿಲುಕು ಹಣದಿಂದ ಈ ಸಾಹುಕಾರರು ೪ ಬೆಂಚುಗಳನ್ನು ಕೊಂಡುಕೊಂಡು ಮೈದಾನಿನಲ್ಲಿಡುವರೆ ಉಡಿಗೆರೆ ಮಾಡಿರುವರು. ಈ ಬೆಂಚುಗಳು "ಬಕ್ಲೆ ಬೆಂಚುಗಳು" ಎಂಬ ಹೆಸರಿನಿಂದ ಕರೆಯಲ್ಪಡುವವು.

ಉಪ್ಪಿನಂಗಡಿ ತಾಲೂಕಿನ ಅಮರ ಮತ್ತು ಸುಳ್ಯ ಮಾಗಣೆಗಳಲ್ಲಿ ಬಾನೆಗಳ ಹಕ್ಕುಳ್ಳವರು ಈ ವರೆಗೆ ತಮ್ಮ ಹೆಸರನ್ನು ರಿಜಿಸ್ಟ್ರಿ ಮಾಡಿಸಿಕೊಳ್ಳದಿದ್ದರೆ ತಮ್ಮ ಹಕ್ಕು ಸ್ಥಾಪನಾ ಅರ್ಜಿಯನ್ನು ೨ ತಿಂಗಳೊಳಗೆ ಉಪ್ಪಿನಂಗಡಿ ತಾಹಸೀಲದಾರರಿಗೆ ಕಳುಹಿಸಿಕೊಡಬೇಕೆಂತ ಜಿಲ್ಲಾ ಕಲೆಕ್ಟರ ದೊರೆಗಳವರು ಪ್ರಕಟಿಸಿರುವರು.

ಕಳದ ತಾ. ೨೬ನೇ ಶುಕ್ರವಾರ ರಾತ್ರೆ ಶಾಲಾ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರ ಮ| ರಾ| ರಾ| ಉ. ಮಂಗೇಶರಾಯರು ವಾಸವಾಗಿದ್ದ ಮನೆಯಲ್ಲಿ ಕನ್ನ ಕಳವು ಆಗಿ ಸುಮಾರು ರೂ. ೨೦೦ ಬೆಲೆಯ ಸೊತ್ತು ಚೋರಿಯಾಯಿತೆಂದು ಕೇಳುತ್ತೇವೆ. ಜೈಲ ನೆರೆಹೊರೆಯಲ್ಲಿ ಒಂದು ವರ್ಷದಿಂದೀಚೆಗೆ ಆಗಾಗ್ಯೆ ನಡೆಯುವ ಕಳವುಗಳಲ್ಲಿ ಒಂದಾದರೂ ಇನ್ನೂ ಪತ್ತೆಯಾಗದೇ ಇದ್ದದ್ದು ಶೋಚನೀಯವಾಗಿದೆ. ಈ ಭಾಗದಲ್ಲಿರುವ ಜನರು ಚಿಂತೆಯಿಂದ ರಾತ್ರೆ ಕಳೆಯುವದಾಗಿದೆ. ಕಳ್ಳರಿಗಾದರೂ ತಮ್ಮ ಜಯದಿಂದ ಧೈರ್ಯ ಹೆಚ್ಚುವದು. ಜನರಿಗೆ ಭಯ ಹೆಚ್ಚುವದು ಪೋಲಿಸ ಮೇಲು ಉದ್ಯೋಗಸ್ಥರು ಈ ವಿಷಯದಲ್ಲಿ ಹೆಚ್ಚಿನ ತಾತ್ಪರ್ಯ ಎಟ್ಟು ಕಳ್ಳರನ್ನು ಪತ್ತೆಮಾಡಬೇಕಾಗಿದೆ ಪಟ್ಟಣದಲ್ಲಿ ಆದ ಹೆಚ್ಚಿನ ಕಳವುಗಳು ಪತ್ತೆಯಾಗದಿರುವುದರಿಂದ ಪೋಲೀಸರು ಮಲಗಿ ನಿದ್ದೆ ಹೋಗುತ್ತಿರಬಹುದಾಗಿದೆ ಎಂದು ಜನರು ಆಡಿಕೊಳ್ಳುತ್ತಿರುವರು. ಇಂತಹ ಮಾತುಗಳಿಗೆ ಎಡೆ ಸಿಗದಂತೆ ಪೋಲೀಸಿನವರು ವರ್ತಿಸುವುದು ಅವಶ್ಯವಾಗಿದೆ ಅತ್ತಾವರ, ಬೋಳೂರು, ಉರ್ವ, ಬೋಳಾರ, ಬಂದರ ಮೊದಲಾದ ಪ್ರಾಂತ್ಯಗಳಲ್ಲಿ ಕೆಲಸವಿಲ್ಲದೆ ತಿರಿದುಂಬುವ ವ್ಯಕ್ತಿಗಳು ಮತ್ತು ಜುಗಾರಿಕೋರರ ಕಡೆಗೆ ಪೋಲೀಸ್ ಆಫೀಸರರು ಅಗತ್ಯವಾಗಿ ದೃಷ್ಟಿ ಇಡಬೇಕೆಂದು ಒತ್ತಿ ಪುನ ಹೇಳದಿರಲಾರೆವು.

ಇಲ್ಲಿಯ ಮೆಸ್ಸರ್ಸ್ ಸ್ಟೀವನ್ ಎಂಡ್ ಸನ್ಸರು ವ್ಯಾಸರಾಯ ಹಾರ್ಡಿಂಜ ಪ್ರಭುಗಳವರ ಜನನ ಉತ್ಸವ ದಿನ ಇಲ್ಲಿಯ ಎಲಿಮೆಂಟರಿ ಶಾಲಾ ಮಕ್ಕಳಿಗೆ ಬಿಸ್ಕುಟುಗಳನ್ನು ಹಂಚಿ ಸಂತೋಷಪಡಿಸಿದರೆಂದ ತಿಳಿಸಿದ್ದೆವಷ್ಟೆ ಮೆಸ್ಸರ್ಸ್ ಸ್ಟೀವನ್‌ಸನ್ಸರವರು ಆ ದಿನ ವ್ಯಾಸರಾಯರ ದೀರ್ಘಾಯುಷ್ಯವನ್ನು ಬಯಸಿ ಪ್ರಭುಗಳವರಿಗೆ ತಂತೀ ಬಿಟ್ಟು ಬಹುಮಾನವಾಗಿ ಒಂದು ಕೇಕನ್ನೂ ಕಳುಹಿಸಿದರು ಇದಕ್ಕಾಗಿ ವ್ಯಾಸರಾಯ ಪ್ರಭುಗಳವರ ಅಸಿಸ್ಟಾಂಟ ಸೆಕ್ರೆಟರಿಗಳವರಿಂದ ಸ್ಟೀವನ್‌ಸನ್ಸರವರಿಗೆ ಈ ರೀತಿ ಉತ್ತರ ಬಂದಿರುವುದು "ವ್ಯಾಸರಾಯ ಪ್ರಭುಗಳವರ ಜನನ ದಿನ ನೀವು ಕಳುಹಿಸಿದ ಸನ್ಮಂಗಲವಾಚನ ವ ಆಶೀರ್ವಚನಗಳಿಗೆ ಪ್ರಭುಗಳವರು ತುಂಬಾ ಕೃತಜ್ಞರಾಗಿದ್ದಾರೆ ಜನನ ದಿನ ಮಕ್ಕಳಿಗೆ ತೋರಿಸಿದ ನಿಮ್ಮ ಉದಾರತೆಯನ್ನು ಮಾನ್ಯಮಾಡಿದ್ದಾರೆ ನೀವು ಅವರಿಗೆ ಕಳುಹಿಸಿದ ಕೇಕನ್ನು ಬಹಳ ಸಂತೋಷದಿಂದ ಸ್ವೀಕರಿಸಿರುವರು."

ಉಪ್ಪಿನಂಗಡಿ ಸ್ಟೇಶನ್ ಸಬ್‌ಮೆಜಿಸ್ಟ್ರೇಟರಿಂದ ಸೆಶ್ಶನ್ಸಿಗೆ ಕಮಿಟ್‌ಮಾಡಲ್ಪಟ್ಟ ಯೂಸಿ ಮೊಯ್ದಿನಿಯನ್ನು ಆ ವಾದಿಸಲ್ಪಟ್ಟ ಕಂಬಳಿಗೆ ನೋಟಿಸು ಸ್ವೀಕಾರ ನಿರಪರಾಧಿ ಎಂಬುದಾಗಿ ತೀರ್ಮಾನಿಸಿ ಸೆಶ್ಶನ್ಸ್ ಜಡ್ಜರು ಅವನನ್ನು ಕೇಸಿನಿಂದ ಬಿಡುಗಡೆ ಮಾಡಿಸಿದರು.

ಬಂಟ್ವಾಳ ಸ್ಟೇಶನರಿ ಮೆಜಿಸ್ಟ್ರೇಟರಿಂದ ಕಮಿಟ್‌ಮಾಡಲ್ಪಟ್ಟ ಅಕ್ರಮ ಪ್ರವೇಶನ ಮಾಡಿದ್ದಾಗಿ ಆಪಾದಿಸಲ್ಪಟ್ಟ ಹಸನಬ್ಬಾ ಸಾಹೇಬನಿಗೆ ಸೆಶ್ಶನ್ಸ್ ಜಡ್ಜರು ತಾ. ೨೯ರಲ್ಲು ೬ ತಿಂಗಳ ಸಜಾ ವಿಧಿಸಿದರು.

ಮಂಗಳೂರು ತಾಲೂಕು ಸ್ಟೇಶನರಿ ಮೆಜಿಸ್ಟ್ರೇಟರಿಂದ ಕಮಿಟ್‌ಮಾಡಲ್ಪಟ್ಟ ಖೂನಿ ಮತ್ತು ಸಂಕಟಕರ ಹಿಂಸೆ ನಡಿಸಿದ್ದಾಗಿ ಇ. ಪಿ. ಕೋಡಿನ ೩೦೪ ಮತ್ತು ೩೦೮ನೇ ಪ್ರಕರಣದ ಪ್ರಕಾರ ಆಪಾದಿಸಲ್ಪಟ್ಟ ವೆಂಕಟ್ರಮಣನಿಗೆ ಸೆಶ್ಶನ್ಸ್ ಜಡ್ಜರು ತಾ. ೨೯ರಲ್ಲು ೭ ವರ್ಷದ ಕಠಿಣ ಸಜಾ ವಿಧಿಸಿದರು

ಉಪ್ಪಿನಂಗಡಿ ಸ್ಟೇಶನರಿ ಮೇಜಿಸ್ಟ್ರೇಟರಿಂದ ಇ. ಪಿ. ಕೋಡಿನ ೩೦೨-೩೨೬ನೇ ಪ್ರಕರಣದ ಪ್ರಕಾರ ಸೆಶ್ಶನ್ಸಿಗೆ ಕಮಿಟ್‌ಮಾಡಲ್ಪಟ್ಟ ರಾಮೋಜಿ ಎಂಬವನಿಗೆ ಸೆಶ್ಶನ್ಸ್ ಜಡ್ಜರು ಇ. ಪಿ. ಕೋಡಿನ ೩೦೪ ಪ್ರಕರಣದ ಪ್ರಕಾರ ತಾ. ೨೯ರಲ್ಲು ೨ ವರ್ಷದ ಸಜಾ ವಿಧಿಸಿರುವರು.

ಉಪ್ಪಿನಂಗಡಿ ಸ್ಟೇಶನರಿ ಮೇಜಿಸ್ಟ್ರೇಟರಿಂದ ಖೂನಿ ಮಾಡಿದ್ದಾಗಿ ಕಮಿಟ್ ಮಾಡಲ್ಪಟ್ಟ ಅಂಬು ಎಂಬವನಿಗೆ ಸೆಶ್ಶನ್ಸ್ ಜಡ್ಜರು ತಾ. ೨೯ರಲ್ಲು ೧೦ ವರ್ಷಗಳ ಕಠಿಣ ಸಜಾ ವಿಧಿಸಿದರು.

ಇಲ್ಲಿಯ ಗ್ರಾಮಕೋರ್ಟಿನ ವರಾಂಡವನ್ನು ಈ ವರೆಗೂ ರಿಪೇರು ಮಾಡದೆ ಇರುವುದರಿಂದಲೂ ಅಲ್ಲಿ ದನ ಹಂದಿಗಳು ವಾಸಿಸಿ ಸೆಗಣಿ ಇತ್ಯಾದಿ ಹಾಕಿ ಗಲೀಜುಮಾಡುವುದರಿಂದಲೂ ಕಕ್ಷಿಗಾರರಿಗೆ ನಿಲ್ಲಲು ಸ್ಥಳವಿಲ್ಲದಂತಾಗಿದೆ. ಈ ವಿಷಯ ಮೇಲಾಧಿಕಾರಿಗಳು ತಕ್ಕ ನಿಗಾಕೊಡಬೇಕಾಗಿ ಹಾರೈಸುತ್ತೇವೆ

ಗಾಯನ ವಿದ್ಯೆಯಲ್ಲಿ ಹೆಸರು ಪಡೆದಿದ್ದ ಮೈಸೂರು ರತ್ನಾವಳಿ ಥಿಯೇಟ್ರಿಕಲ್ ಕಂಪೆನಿಯ ಪಾತ್ರಗಳಲ್ಲೊಬ್ಬರಾದ ರಾ| ಉಡುಪ ರಾಮಾಚಾರ್ಯರವರು ಇದೇ ತಾ ೨೮ರಲ್ಲು ಮೈಸೂರಲ್ಲಿ ಹೃದ್ರೋಗದಿಂದ ವಿಧಿವಶರಾದರೆಂಬದನ್ನು ತಿಳಿಸಲು ವಿಷಾದಿಸುತ್ತೇವೆ.

ಕಳದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಒಂದು ಪ್ಲೇಗು ಮರಣವಿತ್ತು

ಕುಂದಾಪುರ ಡಿವಿಜನಲ್ ಆಫೀಸು — ಕುಂದಾಪುರ ಬೋರ್ಡು ಹೈಸ್ಕೂಲಿನ ಮಾಜಿ I ಅಸಿಸ್ಟಾಂಟರಾಗಿದ್ದ ರಾ ಎಸ್. ರಘುನಾಥಯ್ಯನವರು ಕಾರ್ಕಳ ತಾಲೂಕು ಆಫೀಸಿನ ಪ್ರತಿಗಳ ಪರೀಕ್ಷಕರಾಗಿ ನೇಮಿಸಲ್ಪಟ್ಟಿರುವರು. ಇವರು ಕೂಡ್ಲೇ ಕೆಲಸಕ್ಕೆ ಹಾಜರಾಗಬೇಕಾಗಿರುವುದು

ಕುಂದಾಪುರ ತಾಲೂಕು ಆಫೀಸಿನ ಸ್ಪೆಶ್ಯಲ್ ಫಂಡ್ ಕ್ಲಾರ್ಕರಾದ ಮೆ| ಎ ಆರ್. ಮೆಂಡೋಸರವರು ರಜೆ ತಕ್ಕೊಂಡಿರುವುದರಿಂದ ಅದೇ ಆಫೀಸಿನ ೪ನೇ ಕಾರ್ಕರಾದ ರಾ| ಕೆ. ನರಶಿಂಹ ಕಾಮತರವರು ೫ನೇ ಕ್ಲಾರ್ಕರಾಗಿಯೂ ಕುಂದಾಪುರ ತಾಲೂಕು ಆಫೀಸಿನ ರಾ| ಎಮ್ ಶ್ರೀನಿವಾಸರಾಯರು ೫ನೇ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು ಇವರ ಬದಲಿಗೆ ರಾ| ಯು. ಶೇಷಗಿರಿನ್ಯಾಕರವರು ತಾಲೂಕು ಆಫೀಸು ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು.

~~~~~~

ಜೀನಸುಗಳ ಧಾರಣೆ, ಮಂಗಳೂರು (ರಖಂ)

~~~~~~

ಅವಲ್ ಮಸ್ಕತಿ ಅಕ್ಕಿ ...	5—6—0	5—12—0
ದುಯಂ ,, ,, ...	5—2—0	5—5—0
ಸುಗ್ಗಿ ...	5—0—0	5—4—0
ದುಯಂ ರಾಶಿ ಸುಗ್ಗಿ ..	4—15—0	5—0—0
ಗುಡ್ಡು	5—0—0	5—4—0
ಅವಲ್ ಬೆಳ್ತಿಗೆ.. ..	5—12—0	5—15—0
ಗುಡ್ಡು ಬೆಳ್ತಿಗೆ	5—4—0	5—6—0
ರಂಗೂನ್ ಬೆಳ್ತಿಗೆ ಗೋಣಿ ೧ರ		8—14—0
ಗೋದಿ ಗೋಣಿ ೧ರ . . .		11—12—0
ಹುರುಳಿ ಗೋಣಿ ೧ರ ..	7—4—0	7—0—0
ಕಡಲೆ ಗೋಣಿ ೧ರ.	10—0—0	11—8—0
ತೊಗರಿ ಗೋಣಿ ೧ರ	10—8—0	11—8—0
ತೊಗರಿಬೇಳೆ ಗೋಣಿ ೧ರ	12—0—0	14—8—0
ಉದ್ದು ಗೋಣಿ ೧ರ	9—8—0	10—0—0
ಉಪ್ಪು ಗೋಣಿ ೧ರ	3—12—0	4—0—0
ಊರು ಬೆಲ್ಲ ಖಂಡಿ ೧ರ	50—0—0	52—8—0
ಕೊಪ್ರಿ ಖಂಡಿ ೧ರ ...	90—0—0	95—0—0
ಕೊಪ್ರಿ ಹಿಂಡಿ ಖಂಡಿ೧ರ	28—0—0	30—0—0
ಎಳ್ಳಿಂಡಿ ಖಂಡಿ ೧ರ	30—8—0	35—0—0
ಕೊಪ್ರ ಎಣ್ಣೆ ಮಣ ೧ರ	6—12—0	7—0—0
ಎಳ್ಳೆಣ್ಣೆ ಮಣ ೧ರ ...	7—2—0	7—6—0
ಬಳೆಗೋಟು ಖಂಡಿ ೧ರ	95—0—0	102—0—0
ಯಾಲಕ್ಕಿ ಮಣ ೧ಕ್ಕೆ	50—0—0	56—0—0
ಕಾಫಿ ಖಂಡಿ ೧ರ ...	215—0—0	225—0—0
ತಾಂಬ್ರ ತಗಡು ಮಣ ೧ರ		17—0—0
,, ಪಾತ್ರಗಳು ಮಣ ೧ರ	20—8—0	21—0—0
ಚಿಮ್ಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	4—9—0	5—0—0
ಜೀನಿ ಬೆಳ್ಳಿ ಸೇರು ೧ಕ್ಕೆ		19—8—0

~~~~~~
~~~~~~

ಎಲಂಬಿಕ್ ವೆಜಿಟೆಬಲ್ ಟೋನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು **ಆಯುರ್ವೇದ ಗ್ರಂಥಗಳಲ್ಲಿ** ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿಸಿ ಮಾಡಿದ್ದು. ಪಿತ್ತಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು ರಕ್ತ ಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ಸಿತ್ರಾಣಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡಸೆ, ಸಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0

ಆನೊಡ್ಯಾನ್. ಹೊರಗೆ ಹಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು—ಶೀತ, ಬೇದಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂದಿವಾತ, ನುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟ್ಲಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ ಪ್ರಾಮುಖ್ಯ ಏಜಂಟರು:-

ಎಸ್. ವೈದ್ಯಾ ಅಂಡ್ ಕೊ. ಪಾರ್ಕ್ ಟೌನು, ಮದ್ರಾಸು.

S. VAIDYA & Co., *Park Town, Madras.*

"ಅಯೊನಿಕ್ ಫಾರ್ಮೆಸಿ"

ಈ ಔಷಧ ಪರಿಶೋಧನಾ ಗೃಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರ ರವರ ಶಾಸ್ತ್ರೀಯ ಔಷಧಗಳು ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯುಷನ್. ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂದುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ

(3) ಬ್ಲಡ್ ಪ್ಯುರಿಫ್ಯಾಯಿಂಗ್ ಸೊಲ್ಯುಷನ್ ಎಂಬುವ ರಕ್ತಶುದ್ಧಿಯ ರಸಾಯನವು ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಆರೋಗ್ಯವಂತನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರೆತು ಮಾನಸಿಕ ಮತ್ತು ಶಾರೀರಿಕ ಬಲವು ಪ್ರಾಪ್ತವಾಗುವುದು ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ಥಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮೆಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲ್ಲಿ ಈ ಕೆಳಗಿನ ವಿಳಾಸದವರಲ್ಲಿ ದೊರೆಯುತ್ತವೆ.

S. VAIDYA & Co., *Park Town, Madras.*

ಎಸ್. ವೈದ್ಯಾ ಅಂಡ್ ಕೊ. ಪಾರ್ಕ್ ಟೌನ್ ಮದ್ರಾಸು.

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮಗ್ರಿಗಳು ಬೇಕಾದರೂ, ಪಿ. ಡಿ. ನೀಲಕಾಂತ ಎಂಡ್ ಕೊ. ಬೆನಾರಿಸ್ ಸಿಟಿ ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು. ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು. ಇಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ವಿಕರಿಯಾಗುವ ಬೆನಾರಿಸಿನ ಉಡುಪು ತೊಡುಪುಗಳನ್ನು ತರಿಸುತ್ತಿರುವರು. ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಬೆಲೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು. ಸೀದಾ ನಮಗೆ ಬರೆದು ಬಟ್ಟೆಗಳನ್ನು ತರಿಸಿಕೊಳ್ಳುವದರಿಂದ ನಿಮಗೆ ಸೇಕಡಾ 25 ರಂತೆಯಾದರೂ ಮುನಾಫೆಯು ಉಳಿಯುವುದು. ಎಲ್ಲಾ ಬಟ್ಟೆಗಳನ್ನು ವಿ. ಪಿ ಮೂಲಕ ಕಳುಹಿಸಿಕೊಡುವೆವು. ಸಂದೇಹಪಡಬೇಡಿ. (1) ಜರಿತಾರಿನ ರೇಶ್ಮೆ, ನಾನಾ ತರದ ಲಿವಿಶಲ್, ಶೀರೆಗಳು, ರವಿಕೆ ಕಣಗಳು, ಬಿಳಿ ವಸ್ತ್ರ ಇತ್ಯಾದಿ. (2) ಕಂಚಿನ ಅದಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನಮ್ಮ ಕಾರ್ಖಾನೆಗಳಲ್ಲಿ ತಯ್ಯಾರಿಸಲ್ಪಡುವ ಮರದ ಸಾಮಗ್ರಿಗಳು. (4) ಸೀಲ್ಕ್ ಬೆಲೆಯ ಬೆನಾರಿಸಿನ ದಪ್ಪ ಎಲ್ಲಾ ಬಿತವೆಗಳು—ಇವುಗಳಲ್ಲಾವದಾದರೂ ಬೇಕಾದರೆ.

ನಮ್ಮ ಕೆಟಲಾಗು ಅಪೇಕ್ಷಿಸಿದವರಿಗೆ ಉಚಿತವಾಗಿ ಕಳುಹಿಸಿಕೊಡಲ್ಪಡುವದು.

ನಮ್ಮ ವಿಳಾಸ— ಪಿ ಡಿ ನೀಲಕಾಂತ ಎಂಡ್ ಕೊ,

ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಹಳೆಯ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ವರ್ಣನವು ಸುಲಲಿತ!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ, ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 0—1—0. ಗ್ರಾಹಕರು ತ್ವರೆಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ— ಎಮ್. ಶಿವರಾಮಯ್ಯ,

ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಹಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ. — ಮ॥ ಪಾವಂಜೆ ಗುರುರಾವ್, ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.

ಮಂಗಳೂರು. — ಪಾವಂಜೆ ಗೋಪಾಲಕೃಷ್ಣ, ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೊಒಪರೇಟಿವ್

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ ಒಂದು ಕೋಟಿ. ಪ್ರತಿಜ್ಞಾತ ಮೂಲಧನ—ರೂ 870,000,00 . ಆಗತ ಮೂಲಧನ—ರೂ 10,00,000. ಉತ್ತರಿಸೋಣಾದ ವಿಮೆ—ರೂ 2,22,00,000 ಭಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುವದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ಪಟ್ಟಿ ಇತರ ವಿಮೋ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೋಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೋ ಉತ್ತರಾಯಿಸಬಹುದು. ರದ್ದಾದ ವಿಮೋ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ್,

ಸೊಸೈಟಿಯ ಏಜಂಟ್.

ಶ್ರೀಕುಲೀಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,

ಮಂಗಳೂರು.



ಎಲಂಬಿಕ್ ವೆಜಿಟೆಬಲ್ ಟೊನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ತಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು ರಕ್ತ ಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತದೆ

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡಸೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ 1—6—0.

ಅನೊಡ್ಯಾನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು.—ಶೀತ, ಬೇಧಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ಹುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟ್ಲಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:-

ಎಸ್. ವೈದ್ಯಾ ಆಂಡ್ ಕೊ. ಪಾರ್ಕ್ ಟೌನು, ಮದ್ರಾಸು.

S. VAIDYA & Co., *Park Town, Madras.*

"ಆಯೊನಿಕ್ ಫಾರ್ಮಸಿ"

[illegible] ಔಷಧ ಪರಿಶೋಧನಾ ಗ್ರಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) **ಫೀವರ್ ಸೊಲ್ಯುಷನ್.** ಎಂಬ ಜ್ವರನಿವಾರಣೆಯ ರಸಾಯನ. ([illegible] ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂದುಗಳು ವಿಷಮಜ್ವರ, ಶೀತಜ್ವರ ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾ[illegible] ಕಂಡುಬಂದಿವೆ.

(3) **ಬ್ಲಡ್ ಪ್ಯುರಿಫ್ಯಾಯಿಂಗ್ ಸೊಲ್ಯುಷನ್** ಎಂಬುವ ರಕ್ತಶುದ್ಧಿಯ ರಸಾಯನವು ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ತಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನ ಈ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co., *Park Town, Madras.*

ಎಸ್. ವೈದ್ಯಾ ಆಂಡ್ ಕೊ. ಪಾರ್ಕ್ ಟೌನ್ ಮದ್ರಾಸು.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯು ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಆದ್ದ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಿರುವದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾವದು ಲೇಶವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿಸಲ್ಪಟ್ಟ ಇದಕ್ಕೆ ಅದು ಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆವಶ್ಯಕವಿದೆ ಹೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲ ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

ಅಗ! ಅಗ!! ॥ ಕುಟುಂಬ ಜೀವನಿ ॥ ದರ್ಶ! ಧರ್ಮ!!

[illegible] ಜಾರತಿಸು ಮನುಸಿಯರೇ!

ಎಲ್ಲಾ ರೋಗಗಳನ್ನು ಗೆಲ್ಲುವ ಅತಿ ಅಲ್ಪ ದರ, 8 ಕ್ರಯದ 16 ಔಷಧಗಳ ಸಂಗ್ರಹದ "ಕುಟುಂಬ ಜೀವನಿ" ಎಂಬ ಪೆಟ್ಟಿಗೆಯನ್ನು ತರಿಸಲು ಮರೆಯಬೇಡಿರಿ. ಪ್ರತಿ ಕುಟುಂಬಕ್ಕೂ ಅತೀ ಅಗತ್ಯ.

ಅಕ್ಕರಿ ಎಕ್ಕ ಬಂದು ಸಕ್ಕರೆಯಂ ಸೆಕ್ಕಿದಂತೆ ।
ರಕ್ಕ [illegible] ಒಕ್ಕಲಿಗರ ದೊಕ್ಕವೆಲ್ಲ ಮುಕ್ಕಿ ಪೋದರ್ ॥ ಎಂಬಂತೆ

ಈಗ ಆಯಿಕೆಗಳ ಒಳಗಿನ [illegible] ರತ್ನವೆಂಬ ಹೆಸರಿನಿಂದ ಎಲ್ಲಿ ನೋಡಿದರೂ ತುಂಬಿ ಹೋಗಿ, ಕಲ್ಯಾಣ [illegible] ಆದ ಹಾಗೆ ಉಗಿಸುವರು ರಕ್ಕಸಿಂದಲೇ ಸುಲಿಗೆಯಾದರು.

ಪ್ರಿಯ ಬಂಧುಗಳಿರಾ! ನಮ್ಮನ್ನು ಈಗ ಗ್ರಹಿಸಬೇಡಿರಿ. ಅಮೂಲ್ಯವಾದ ಮಾಣಿಕ್ಯವಾದರೂ [illegible] ದ ನಮ್ಮನ್ನು ಆಶ್ರಯಿಸಿರಿ! ಪರೀಕ್ಷಿಸಿನೋಡಿರಿ!!

ನಮ್ಮ ವೈದ್ಯ [illegible] ಎಲ್ಲಾ ರೋಗಗಳನ್ನು ಗೆಲ್ಲುವ ವಿಶೇಷ ಪಥ್ಯವಿಲ್ಲದ ಬಹಳ ಶೋಧಿಸಿ [illegible] ರಸ, ಸಿದ್ಧತೈಲ ಪ್ರಯೋಗಗಳಿಂದಲೂ ತಯ್ಯಾರಿಸಿದ ಔಷಧ ಮಾತ್ರೆಗಳು [illegible] ಚೂರ್ಣಗಳೂ, ತೈಲ ಘೃತಗಳೂ, ಆಸವಾರಿಷ್ಟಗಳೂ, ಟಾನಿಕ್ ಅರಿಷ್ಟಗಳು ಬಡವರಿಗೆ ಧರ್ಮಾರ್ಥ ಇತರರಿಗೆ ಅಲ್ಪ ಕ್ರಯದಲ್ಲಿ ಸಿಕ್ಕುತ್ತವೆ. ಕ್ರಯ ಪಟ್ಟಿಗೋಸ್ಕರ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ, ಕ್ರಯವಿಲ್ಲ, ಬೇಕಾದವರಿಗೆ ಕಳುಹಿಸುವೆವು. 10 ರೂಪಾಯಿಗೆ ಮೇಲೆ ಬೇಕಾದವರು 10ರಷ್ಟು ಕಮಿಷನ್ ಸಿಕ್ಕುವದು. ತರಿಸಿಕೊಳ್ಳಿರಿ. [illegible] ಆಶ್ರಯ ಕೊಡಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

S. U. N. & CO.,

BENARES CITY, U P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯವರು ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ತಮ್ಮ ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

ಮಳೆಗಾಲ ಬಂತು!

ಹವೆಯ ಬದಲಾವಣೆಯಿಂದ ಉಂಟಾಗುವ ವ ಇತರ ತಲೆನೋವ, ಕಣ್ಣುಬೇನೆ, ತಲೆಭಾರ, ನೆಗಡಿ, ಕಫ, ಕಾಸ, ಜ್ವರ, ಛಳಿಜ್ವರ, ಚಳಿವಾತ, ವಾಂತಿಭೇದಿ, ಉಷ್ಣಭೇದಿ, ಮೇಹ ಇತ್ಯಾದಿ ನಾನಾ ಜಾಡ್ಯಗಳೂ ಮನೆಮನೆಯಲ್ಲೂ ಪ್ರತ್ಯಕ್ಷವಾಗಿ ತೋರುತ್ತಿರುವ ಈ ಕಾಲದಲ್ಲಿ

ದಿವ್ಯ ಸಂಜೀವಿನೀ

ಯುಕಲಿಪ್ಟಸ್ ತೈಲ

ಎಂಬ ಅತ್ಯಪೂರ್ವ ಫಲದಾಯಕವಾದ ಈ ಎಣ್ಣೆಯ ಸೀಸೆಯೊಂದನ್ನು ಗೃಹಸ್ಥರು ಸಂಗ್ರಹಿಸಿಕೊಳ್ಳಿ! ಈ ಎಣ್ಣೆ ಇದ್ದಲ್ಲಿ ಆವ ರೋಗ ಸುಳಿವೂ ತೋರದು, ಎಂತಹ ರೋಗವನ್ನೂ ಇದು ತಡೆಗಟ್ಟಿ, ನಿರ್ಮೂಲಿಸಿ ಬಿಡುವುದು! ಉಪಯೋಗಿಸಿದವರ ಅನುಭವಕ್ಕಿಂತಲೂ ಹೆಚ್ಚಿನ ವಿಸ್ತಾರವಾದ ವಿಜ್ಞಾಪನೆಯು ನಮ್ಮೊಡನೆ ಇಲ್ಲ.

ಪ್ರಾಣದಾನ ಮಾಡಿಯದೆ.

ಕಂಕನಾಡಿನ ಮಿ. ಉರ್ಬನ್ ಸಾಹೇಬರು ಈ ರೀತಿ ಬರೆಯುವರು.—"ಸಿ ಯರ್ಲಿ ಕಳೆದ ಸ್ವಲ್ಪ ದಿವಸದ ಕೆಳಗೆ ಒಂದು ಡಜನ್ ನೀಲಗಿರಿ ಯುಕಲಿಪ್ಟಸ್ ತೈಲ ತರಿಸಿಕೊಂಡಿದ್ದೆನು. ಅದನ್ನು ಕೆಲವರಿಗೆ ಕೊಟ್ಟದ್ದರಿಂದ ಪ್ರಾಣದಾನ ಕೊಟ್ಟ ಹಾಗಿದೆ. ಇದನ್ನು ಕೇಳಿ ಎಲ್ಲರೂ ಬಾಟ್ಲಿಗಳನ್ನು ಕೊಂಡುಹೋದುದಲ್ಲದೆ ಈಗ ಅನೇಕರು ಪ್ರತಿ ದಿವಸ ಬರುತ್ತಾ ಇದ್ದಾರೆ. ನನಗೆ ಸಹ ಒಂದು ಬಾಟ್ಲಿ ಉಳಿಯಲಿಲ್ಲ. ಆದ್ದರಿಂದ ಈ ಕಾಗದ ಕಂಡ ಕೂಡಲೇ ಒಂದು ಡಜನ್ ಬಾಟ್ಲಿಗಳನ್ನು ವಿ. ಪಿ. ಮೂಲಕ ಕಳುಹಿಸಿರಿ." ಔನ್ಸ್ ಸೀಸೆ 1ಕ್ಕೆ 0—[illegible]—0 ವಿ. ಪಿ. ಬೇರೆ. ಡಜನ್ ಬಾಟ್ಲಿಗಳನ್ನು ಒಮ್ಮೆಲೇ ತರಿಸಿಕೊಂಡರೆ ರೂ. [illegible] ವಿ. ಪಿ. ಬೇರೆ.

1914ರ ಇಸವಿ ಕೆಲೆಂಡರು ಸಹಿತವಾದ ಪವಿತ್ರ ಕಾರ್ಡುಗಳು. ಡಜನ್ ಕಾರ್ಡುಗಳಿಗೆ [illegible] 12—0 ಗ್ರೋಸ್ ಕಾರ್ಡುಗಳಿಗೆ ರೂ. [illegible] ವಿ. ಪಿ. ಬೇರೆ.

ಸ್ಪಟಿಕಾ ಮಸ್ತಕ ತಾಪಹಾರಿಣಿ ತೈಲ.—ಮೆದುಳು ರೋಗಗಳಿಗೆ ಅತ್ಯುಪಯೋಗವಾದ ತೈಲ ಸೀಸೆ 1ಕ್ಕೆ 0—12—0, ಡಜನ್ ಸೀಸೆಗಳಿಗೆ ರೂ. [illegible] ವಿ. ಪಿ. ಬೇರೆ.

ಫೋಟೊ ಎನ್‌ಲಾರ್ಜ್‌ಮೆಂಟುಗಳು, ರಬ್ಬರ್ ಮೊಹರುಗಳು ಅಗ್ಗ ದರದಲ್ಲಿ ತಯಾರಿಸಿ ಕೊಡಲಾಗುವದು.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಕಂಕನಾಡಿ ಪೋಸ್ಟು, ದ. ಕ.

ವಾಚಕರೇ!

ಕಾಲಕ್ಕೆ ತಕ್ಕ ಜೀವನೋಪಾಯ ಇದಲ್ಲವೆ?

ಈ ನಮ್ಮ ಮೈಸೂರು ದೇಶದಲ್ಲಿ ಆಂಗ್ಲೇಯ ಪ್ರಭುಗಳಿಂದಲೂ ನಮ್ಮನ್ನಾಳುವ ಶ್ರೀಮನ್ಮಹಾರಾಜ ಸರಕಾರದವರಿಂದಲೂ ಸದಾ ಪ್ರೋತ್ಸಾಹಿಸಿ ಪ್ರವರ್ತಿಸಲಾಗುತ್ತಿರುವ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿ ಈಗಿನ ಕಾಲದಲ್ಲಿ ಗೌರವವು ಮತ್ತು ಪ್ರಸಿದ್ಧಿಯುಳ್ಳ ಹಲವು ಕುಶಲ ವಿದ್ವಾಂಸರಿಂದ ನವೀನವಾಗಿ ರಚಿಸಲ್ಪಟ್ಟ ಕನ್ನಡ ಮತ್ತು ಇಂಗ್ಲೀಷ್ ಸ್ಕೂಲುಗಳ ಎಲ್ಲಾ ತರಗತಿಗಳ ಬಾಲಕರು ಮತ್ತು ಬಾಲಕಿಯರಿಗೆ ಪಾಠಕ್ಕೆ ನಿಗದಿಯಾಗಿರುವ ಕನ್ನಡ ಇಂಗ್ಲೀಷ್ ಪುಸ್ತಕಗಳು ಮತ್ತು ಸಂಸ್ಕೃತ ತೆಲಗು ವೈದ್ಯ ವೇದಾಂತ ಜ್ಯೋತಿಷ್ಯ ಕನ್ನಡ ಗ್ರಂಥಗಳು ಅಲ್ಲದೆ ಉತ್ತಮ ಕಾದಂಬರಿಗಳು ನೂತನರೀತಿ ನಾಟಕಗಳು ಅತ್ಯುತ್ತಮವಾದ ಕಾಗದ ಅಕ್ಷರಗಳಿಂದ ತಯಾರಿಸಲ್ಪಟ್ಟು ಸುಲಭ ಕ್ರಯಕ್ಕೆ ಸಿದ್ಧವಾಗಿರುತ್ತೆ.

ಅಪೂರ್ವ ಪುಸ್ತಕಗಳು.

ಇದು ಸರ್ವರಲ್ಲಿಯೂ ಇರಬೇಕಾದ್ದು ಜಮಾ ಖರ್ಚಿನ ಪದ್ಧತಿ 0-12-0 ಮಂಡಿ, ಚಿಲ್ಲರೆ ಅಂಗಡಿ, ಜವಳಿ ಅಂಗಡಿ, ಮನೆ ಮುಂತಾದ ಎಲ್ಲಾ ವಿಧವಾದ ಲೆಖ್ಖಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

ಆಂಗ್ಲಭಾಷ ಪ್ರಕಾಶಿಕ—(ಸ್ವತಃ ಇಂಗ್ಲಿಷ್ ಕಲಿಯುವ ದೊಡ್ಡ ಪುಸ್ತಕ. ಇದನ್ನು ಗುರುವಿನಂತೆ ಭಾವಿಸಿ ಬೆಲೆ 1—8—0. ವೈದ್ಯಸಾರಸಂಗ್ರಹ (ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ಬೆಲೆ 3—0—0.

ಆರ್ಯಕೀರ್ತಿ .	0-10—0	ಚಂದ್ರಕಳ	0—4—0
ಹನುಮದ್ವಿಲಾಸಂ ...	0—8—0	ಕಲಾನಾಥ	0—6—0
ಶಾಕುಂತಲ ನಾಟಕ	0—8—0	ಶಿವಾನಂದಲಹರಿ... .	0—6—0
ಸ್ತ್ರೀಧರ್ಮನೀತಿ ...	0—8—0	ಪ್ರಶ್ನೋತ್ತರ ಲೇಖ್ಯಬೋಧಿನಿ	1—4—0
ಶೋಭನೆ	0—8—0	ಚಿತ್ರವಿಚಿತ್ರಾವಳಿ ...	0—8—0
		ವಿಷವೃಕ್ಷ	1—4—0

ವಿಳಾಸ:— ಬಿ. ನರಸಿಂಹ ಅಯ್ಯಂಗಾರ್.
ಮೆನೇಜರ್ ವಿದ್ಯಾಸಾಗರ ಬುಕ್ ಡಿಪೋ.
ಚಿಕ್ಕಪೇಟೆ ಬೆಂಗಳೂರು ಸಿಟಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 10ನೇ ಜುಲೈ 1914.

ಗವರ್ನರ ದೊರೆಗಳವರ ಆಗಮನವು

ಇದೇ ಬರುವ ಅಕ್ಟೋಬರ ತಿಂಗಳ ತಾ. ೨೫ರಲ್ಲಿ ಬಹುಮಾನಪಟ್ಟ ಗವರ್ನರ ದೊರೆಗಳವರು ಈ ಜಿಲ್ಲೆಯನ್ನು ಸಂದರ್ಶಿಸುವರಾಗಿ ಕಲೆಕ್ಟರ ದೊರೆಗಳವರ ನೋಟೀಸು ಸರ್ವ ಜನರ ಮಾಹಿತಿಗಾಗಿ ಪ್ರಕಟಿಸಲ್ಪಟ್ಟಿರುತ್ತದೆ. ಆ ಸಂಸ್ಥೆಗಳ ಕಡೆಯಿಂದಲೂ ಪ್ರಜಾಜನರ ಕಡೆಯಿಂದಲೂ ಪ್ರಭುಗಳವರ ಮುಂದಿಡೋಣಾಗುವ ಮಾನ ಪತ್ರಗಳ ನಕಲುಗಳನ್ನೂ ಪ್ರಜಾಕಡೆಯಿಂದ ಪ್ರಭುಗಳಿಗೆ ಪರಿಚಯಪಡಿಸುವ ಜನರುಗಳ ಪಟ್ಟಿಯನ್ನೂ ಇದೇ ಆಗೋಸ್ತು ತಿಂಗಳ ತಾ. ೭ರೊಳಗೆ ಜಿಲ್ಲಾ ಕಲೆಕ್ಟರ ದೊರೆಗಳವರಿಗೆ ಒಂದು ತಲ್ಪುವಂತೆ ಕಳುಹಿಸಿಕೊಡೋಣಾಗಬೇಕೆಂದು ಸದರಿ ಕಲೆಕ್ಟರರ ಈ ಪ್ರಕಟಣೆಯಲ್ಲಿರುವದು.

ಆತಿಥ್ಯ ಸತ್ಕಾರಗಳಲ್ಲಿ ಈ ಸಂಸ್ಥಾನದಲ್ಲಿ ಮೊದಲನೇ ಸ್ಥಾನವನ್ನು ಬಹಳ ಕಾಲದಿಂದ ಹೊಂದಿರುವ ಈ ಜಿಲ್ಲೆಗೆ ಚಕ್ರವರ್ತಿಗಳವರ ಪ್ರತಿನಿಧಿಗಳಾಗಿ ಬರುವ ಗವರ್ನರ ಪ್ರಭುಗಳಿಗೆ ಮಾಡಬೇಕಾದ ಸತ್ಕಾರಗಳ ವಿಷಯ ಎಚ್ಚರ ಹೇಳಬೇಕೆಂತಿಲ್ಲ. ಜಿಲ್ಲೆಯ ಸ್ಥಿತಿಗತಿಗಳನ್ನೂ ಈ ಜಿಲ್ಲೆಯ ಜನರಿಗೆ ವಿಶೇಷವಾಗಿರುವ ಸಂಕಷ್ಟಗಳನ್ನೂ ತಿಳಕೊಳ್ಳಲು ಘಾಮಂಡರವರ ಸವಾರಿಯು ಇತ್ತಕಡೆ ಚಿತ್ತೈಸುವದೆಂಬುದನ್ನು ಈ ಸತ್ಕಾರಗಳ ವಿಜೃಂಭಣೆಯಲ್ಲಿ ಮರೆತುಹೋಗದಂತೆ ಜಾಗರೂಕರಾಗಿರಬೇಕಾಗಿರುವದು. ಪ್ರಜೆಗಳ ಸುಖದುಃಖಗಳನ್ನು ಮುಖತಃ ಹೇಳಿಕೊಳ್ಳಲು ತಕ್ಕ ಅವಕಾಶವು ದೊರಕುವಂತೆ ದೊರೆಗಳವರ ಆಗಮನದ ಎರಡೆರಡು ತಿಂಗಳ ಮೊದಲಾಗಿಯೇ ಜಿಲ್ಲಾ ಕಲೆಕ್ಟರ ದೊರೆಗಳವರ ಈ ಪ್ರಕಟಣೆಯು ಪ್ರಕಟಿಸಲ್ಪಟ್ಟಿರುವದೆಂಬ ವಿಷಯವನ್ನು ಪ್ರಜಾಜನರೂ ಪ್ರಜಾ ಮುಂದಾಳುಗಳೂ ತಮ್ಮ ಲಕ್ಷ್ಯಕ್ಕೆ ತಂದುಕೊಳ್ಳಬೇಕಾಗಿದೆ. ಮುನಿಸಿಪಲ್, ಡಿಸ್ಟ್ರಿಕ್ಟ್ ಮತ್ತು ತಾಲೂಕು ಬೋರ್ಡುಗಳು ಮತ್ತು ಇತ್ತಲಾಗೆ ತಲೆದೋರಿರುವ ಕೊಓಪರೇಟಿವ್ ಕ್ರೆಡಿಟ್ ಸೊಸೈಟಿಗಳ ಹೊರತು ತಮ್ಮ ದೃಷ್ಟಿಯಿಂದಲೇ ಪ್ರಜೆಗಳು ತಮ್ಮ ಸಂಕಷ್ಟಗಳನ್ನೂ ತಮ್ಮ ಸ್ಥಿತಿಯನ್ನೂ ಗೊತ್ತುಮಾಡಿಕೊಳ್ಳುವ ಸ್ವತಂತ್ರವಾದ ಪ್ರಜಾಸಂಸ್ಥೆಗಳು ಈ ಜಿಲ್ಲೆಯಲ್ಲಿ ಇಲ್ಲದಿರುವದರಿಂದ ಇಂಥಾ ಸಂದರ್ಭಗಳಲ್ಲಿ ನಾವು ಹೇಗೆ ಸಹಾಯಹೀನರಾಗಿರುವೆವೆಂಬುದು ಸರ್ವರಿಗೂ ವ್ಯಕ್ತವಾಗದೆ ಇರದು. ಈ ಸಹಾಯಹೀನತೆಯನ್ನು ಮನಸ್ಸಿಗೆ ತಂದುಕೊಂಡು ಗವರ್ನರ ದೊರೆಗಳವರ ಆಗಮನದ ಅಪೂರ್ವ ಸಂದರ್ಭವು ಪ್ರಯೋಜನವಿಲ್ಲದ್ದಾಗದಂತೆ ಪ್ರಜಾ ಮುಂದಾಳುಗಳು ವಿಶೇಷ ಚಟುವಟಿಕೆಯಿಂದ ಸಾಹಸಪಡಬೇಕಾಗಿರುವದು.

ಸಂಸ್ಥಾನದ ಪಶ್ಚಿಮ ಕರಾವಳಿಯ ಮೂಲೆಯಲ್ಲಿದ್ದು ಸರಕಾರದವರಿರುವ ಮುಖ್ಯ ಪಟ್ಟಣದಿಂದ ಈ ಜಿಲ್ಲೆಯು ಬಹಳ ದೂರವಾಗಿರುವದು. ಭಾಷಾಭೇದ, ಜಾತಿಭೇದ, ಮತಭೇದಗಳೇ ಮೊದಲಾದ ಭೇದಗಳ ವಿಷವೃಕ್ಷವು ಈ ಜಿಲ್ಲೆಯಲ್ಲಿ ಹೊತ್ತಾಗಿ ಸೇರಿರುವಂತೆ ಸಂಸ್ಥಾನದ ಇತರ ಯಾವ ಜಿಲ್ಲೆಯಲ್ಲಾದರೂ ಸೇರದು. ಸಂಸ್ಥಾನದ ಹೆಚ್ಚಿನ ಪ್ರಾಂತ್ಯಗಳಲ್ಲಿ ಸಾಮಾನ್ಯವಾಗಿರುವ ಪ್ರಕೃತಿ ಲಕ್ಷಣಗಳು ಸಹ ಇಲ್ಲಿ ಪ್ರತ್ಯೇಕವಾಗಿರುವವು. ಇಂಥಾ ಪ್ರಾಂತ್ಯಗಳ ಸಂಕಷ್ಟಗಳನ್ನು ಗವರ್ನರ ದೊರೆಗಳವರು ವಿಶೇಷ ಲಕ್ಷ್ಯಕೊಟ್ಟು ಪರಾಂಬರಿಸೋಣಾಗುವಂತೆ ಜಿಲ್ಲಾಧಿಕಾರಿಗಳು ಪ್ರಜಾಜನರಿಗೆ ಈ ಸಂದರ್ಭದಲ್ಲಿ ತಮ್ಮ ಪೂರ್ಣ ಸಹಕಾರವನ್ನು ಕೊಡಬೇಕಾಗಿ ಈ ಮೂಲಕ ವಿಜ್ಞಾಪಿಸಿರುತ್ತೇವೆ.

ಗವರ್ನರ ದೊರೆಗಳವರ ಮುಂದೆ ತರಬೇಕಾಗಿರುವ ವಿಷಯಗಳ ಕುರಿತು ಮುಂದಿನ ಸಂಚಿಕೆಗಳಲ್ಲಿ ಪ್ರಸ್ತಾಪಿಸುವೆವು.

ಸ್ತ್ರೀಯರ ವಿದ್ಯಾಭ್ಯಾಸದ ಬಗ್ಗೆ ಏರ್ಪಡಿಸಿರುವ ಮದ್ರಾಸು ಕೊಲೇಜು.

ಮದ್ರಾಸಿನಲ್ಲಿ ಈ ತಿಂಗಳ ತಾ. ೧೫ರಿಂದ ತೆರೆಯಲ್ಪಡುವ ಸಂಸ್ಥಾನದ ನೂತನವಾದ ಈ ವಿದ್ಯಾಸಂಸ್ಥೆಯ ಪ್ರಸ್ತಾಪವನ್ನು ಈ ಪ್ರಾಂತ್ಯದ ಪ್ರಜಾಜನರ ತಿಳುವಳಿಕೆಗೆ ತರಬೇಕೆಂಬುವ ಉದ್ದೇಶದಿಂದ ಇಲ್ಲಿಯ ಜಿಲ್ಲಾ ಕಲೆಕ್ಟರ ದೊರೆಗಳವರು ಈ ಕೊಲೇಜಿನ ಕೆಲವು ಮಾಹಿತಿಯನ್ನು ನಮ್ಮ ಕಡೆ ಕಳುಹಿಸಿರುವರು. ಬಾಲಿಕೆಯರ ವಿದ್ಯಾಪ್ರಸರಣೆಗೆ ವಿದ್ಯಾಲಾಭವನ್ನು ಪಡೆದ ಉಪಾಧ್ಯಾಯನಿಯರು ಸಿಕ್ಕದೆ ಇರುವ ವಿಶೇಷ ಸಂಕಷ್ಟವು ಇಂಥಾ ಕೊಲೇಜು ಸ್ಥಾಪನೆಯಿಂದ ಬಹಳಮಟ್ಟಿಗೆ ಕ್ರಮೇಣ ನಿವಾರಣೆ ಹೊಂದುವ ಸಂದರ್ಭಗಳು ಈ ಕೊಲೇಜು ನಿರ್ಮಾಣದಿಂದ ಒದಗುವವಲ್ಲದೆ ಪ್ರೌಢ ವಿದ್ಯಾಭ್ಯಾಸವನ್ನು ಅಪೇಕ್ಷಿಸುವ ಸ್ತ್ರೀಯರುಗಳಿಗೆ ಸಹ ಬೇಕಾದ ಸೌಕರ್ಯಗಳು ಇದರಿಂದ ದೊರಕುವವು. ಈ ವಿದ್ಯಾಸಂಸ್ಥೆಯು ಮುಖ್ಯ ಉಪಾಧ್ಯಾಯನಿಯರಾಗಿ ವಿಶೇಷ ವಿದ್ಯಾ ಯೋಗ್ಯತೆಗಳುಳ್ಳ ಆಂಗ್ಲೇಯ ಸ್ತ್ರೀಯರೊಬ್ಬರು ನೇಮಿಸಲ್ಪಡುವರಲ್ಲದೆ ಇವರ ಸಹಾಯಕರಾಗಿ ಇತರ ಉಪಾಧ್ಯಾಯನಿಯರು ಸಹ ಇರುವರು. ಕೊಲೇಜಿನಲ್ಲಿ ಶಿಕ್ಷಣ ಹೊಂದುವ ಬಾಲಿಕೆಯರ ನಡತೆ ಆರೋಗ್ಯ ಮೊದಲಾದ ವಿಷಯಗಳಲ್ಲಿ ಬೇಕಾದ ಮೇಲ್ವಿಚಾರಕ್ಕೂ ಆರೈಕೆಗೂ ತಕ್ಕದಾದ ಏರ್ಪಾಡು ಈ ಕೊಲೇಜಿನಲ್ಲಿರುವದು. ಇಂಟರ್ ಮೀಡಿಯೇಟ್ ಪರೀಕ್ಷೆಯ ೩ನೇ ಗ್ರೂಪಿನ ತರಗತಿಯವರಿಗೆ ಈ ಕೊಲೇಜಿನಲ್ಲಿ ದರ್ಜೆಗಳಿರುವವು. ಯುನಿವರ್ಸಿಟಿ ಪರೀಕ್ಷೆಯನ್ನು ತೀರಲು ಅಪೇಕ್ಷೆ ಇಲ್ಲದೆ ಬರೇ ಕೊಲೇಜು ಶಿಕ್ಷಣವನ್ನು ಮಾತ್ರ ಅಪೇಕ್ಷಿಸುವ ಸ್ತ್ರೀಯರು ಸಹ ಈ ಕೊಲೇಜಿಗೆ ಬಂದು ಶಿಕ್ಷಣ ಪಡೆಯುವ ವಿಶೇಷ ಸೌಕರ್ಯದ ಏರ್ಪಾಡು ಈ ಕೊಲೇಜಿನಲ್ಲಿರುವದು. ಕೊಲೇಜಿನ ವಿದ್ಯಾರ್ಥಿಗಳಿಗೆ ಉಳಕೊಳ್ಳಲು ವಿದ್ಯಾರ್ಥಿಭವನದ ಏರ್ಪಾಡು ಆಯಾ ಜಾತಿಯವರಿಗೆ ತಕ್ಕದಾದ ರೀತಿಯಲ್ಲಿ ಮಾಡಲು ಅನುಕೂಲವಿದೆ. ಕೊಲೇಜು ಫೀಸು ವರುಷ ಒಂದಕ್ಕೆ ರೂ. ೪೪ ಆಗಿರುವದು. ಕೊಲೇಜು ಪ್ರಕೃತಕ್ಕೆ ಹಂಗಾಮಿಯಾಗಿ ಮದ್ರಾಸಿನ ಮರೀನಾದಲ್ಲಿರುವ "ಕೇಪರ್ ಹೌಸ್" ಎಂಬ ಕಟ್ಟಡದಲ್ಲಿ ಸ್ಥಾಪನೆಯಾಗುವದು. ಈ ಕೊಲೇಜಿಗೆ ಪ್ರವೇಶವನ್ನಪೇಕ್ಷಿಸುವವರು ತಮ್ಮ ಜಾತಿ ಪ್ರಾಯ ಮೊದಲಾದವುಗಳನ್ನು ಸೂಚಿಸಿ ತಮ್ಮ ರಕ್ಷಕರ ಸಹಿ ನಿಶಿ ಅರ್ಜಿಗಳನ್ನು ಮದ್ರಾಸಿನಲ್ಲಿರುವ ವಿದ್ಯಾಖಾತೆಯ ಡಿರೆಕ್ಟರರಿಗೆ ಮಾಡಬೇಕಾಗಿದೆ.

ಗೌಡಸಾರಸ್ವತರ ಶ್ರೀ ಕಾಶೀಮಠವು.

ಮುಂಬಯಿಯಲ್ಲಿ ಈ ಮಠದ ಗುರುಗಳಾದ ಶ್ರೀ ವರದೇಂದ್ರ ತೀರ್ಥ ಸ್ವಾಮಿಯವರು ಗತಿಸಿದ ವೃತ್ತಾಂತವು ಈ ಮಠದ ಶಿಷ್ಯವರ್ಗದವರೆಲ್ಲರೂ ಇಷ್ಟರಲ್ಲಿ ತಿಳಿದಿರಬಹುದು. ಎಲ್ಲಾ ಕಡೆಗಳಲ್ಲಿರುವ ಶಿಷ್ಯವರ್ಗದವರ ಸಹಕಾರವನ್ನು ಗತಿಸಿದ ಶ್ರೀ ಸ್ವಾಮಿಯವರ ಶಿಷ್ಯವರ್ಯರಾದ ಸುಕೃತೀಂದ್ರ ಶ್ರೀ ಪಾದಂಗಳವರು ಅಪೇಕ್ಷಿಸಿರುವರು. ಶ್ರೀ ವರದೇಂದ್ರ ತೀರ್ಥಸ್ವಾಮಿಯವರು ಗತಿಸಿದಂದಿನಿಂದ ಮಠದಲ್ಲಿ ಪ್ರಾಪ್ತವಾದ ವ್ಯವಸ್ಥೆಯನ್ನು ಕುರಿತು ವಿಸ್ತಾರವಾದ ಲೇಖನವು ನಮ್ಮ ಮುಂಬಯಿಯ ವಾತ್ತಾಹಾರರಿಂದ ಈ ದಿನ ನಮಗೆ ಬಂದು ತಲ್ಪುತ್ತದೆ. ಆ ಲೇಖನವನ್ನು ಪ್ರಕಟಿಸುವದು ನಮಗೆ ಉಚಿತ ಕಾಣುವದಿಲ್ಲ. ಲೇಖನವನ್ನು ಮಠದ ಶಿಷ್ಯವರ್ಗದವರಲ್ಲಿ ಯಾರಾದರೂ ಓದಿನೋಡಲು ಅಪೇಕ್ಷಿಸುವವರು ನಮ್ಮ ಆಫೀಸಿಗೆ ಬಂದು ಅದನ್ನು ಓದಿನೋಡಬಹುದು. ಯಾವ ಬಗೆಯಲ್ಲಿ, ಎಂಥಾ ಸಹಕಾರದ ಆಡಚಣೆಯು, ಅಪ್ರಾಯಸ್ಥರಾದ ಶ್ರೀ ಸುಕೃತೀಂದ್ರ ಶ್ರೀ ಪಾದಂಗಳವರಿಗೆ ಪ್ರಾಪ್ತವಾಗಿರುವದೆಂಬುದು ಈ ಲೇಖದಿಂದ ವ್ಯಕ್ತವಾಗುವದು. ಶಿಷ್ಯವರ್ಗದ ಪ್ರತಿನಿಧಿಗಳು ಆಯಾ ಪ್ರಾಂತ್ಯಗಳಿಂದ ಮುಂಬಯಿಗೆ ಹೊರಟು ಹೋಗುವ ಅವಶ್ಯಕತೆಯು ವಿಶೇಷವಾಗಿದೆಂಬುದು ಸಹ ಈ ಲೇಖದಿಂದ ತಿಳಿದುಬರುತ್ತದೆ. ಗುರುಪದವಿಯು ಸಮಾಜದಲ್ಲಿ ಧರ್ಮಸಂಸ್ಥಾಪನೆಗೆ ಹೇಗೆ ಅಗತ್ಯವಾಗಿರುವದೆಂಬುದನ್ನು ನಾವು ಇಲ್ಲಿ ವಿಸ್ತಾರವಾಗಿ ವಿವರಿಸಿ ಹೇಳಬೇಕೆಂತಿಲ್ಲ. ಈ ಮಠದ ಅಸಂಖ್ಯಾತ ಶಿಷ್ಯ ಜನರಲ್ಲಿರುವ ಹಲವು ಲೌಕಿಕ ವೈದಿಕ ವಿದ್ವಾಂಸರುಗಳಿಗೂ, ಸಂಪನ್ನ ಸದ್ಗೃಹಸ್ಥರುಗಳಿಗೂ, ಈ ವಿವರಣೆಯು ಅಗತ್ಯವಿರದಾದ್ದರಿಂದ ಈ ಪ್ರಾಂತ್ಯಗಳ ಪ್ರತಿನಿಧಿಗಳು ಇನ್ನಾದರೂ ಶೀಘ್ರದಲ್ಲಿ, ಮುಂಬಯಿಗೆ ಶ್ರೀ ಸ್ವಾಮಿಗಳವರ ಅಪೇಕ್ಷೆ ಪ್ರಕಾರ ಹೊರಟು ಹೋಗಬೇಕಾಗಿ ಈ ಮೂಲಕ ಇನ್ನೊಮ್ಮೆ ವೃತ್ತಪೂರ್ವಕ ವಿಜ್ಞಾಪಿಸಿಕೊಳ್ಳುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಸಸಿಗೊಬ್ಬರ.

ಕೃಷಿ ಇಲಾಖೆಯ ಮಾಜಿ ಡೈರೆಕ್ಟರರವರಾದ ಮೆ। ಎಂ. ಇ. ಕೌಚ್‌ಮೆನ್ ದೊರೆಗಳವರು ದಕ್ಷಿಣ ಕನ್ನಡ ಜಿಲ್ಲೆಯ ಗೊಬ್ಬರದ ವಿಷಯವಾಗಿ ಬರೆದ ಒಂದು ಲೇಖನದ ಅಂತ್ಯದಲ್ಲಿ ಹೀಗೆನ್ನುವರು "ಜಿಲ್ಲೆಯ ಕಾಡುಕರೆಗಳು ನಾಶವಾಗುತ್ತಾ ಬರುವಾಗ್ಗೆ ಸೊಪ್ಪು ಗೊಬ್ಬರದ ಆಸ್ಪದವು ಕಮ್ಮಿಯಾಗುವದು. ಹೀಗಿರುತ್ತಲೆ, ಸೊಪ್ಪುಗೊಬ್ಬರದ ಬದಲಾಗಿ ಸಸಿಗೊಬ್ಬರವನ್ನು ಬೆಳೆಯಿಸುವ ಏರ್ಪಾಡುಗಳನ್ನು ಕಂಡುಹಿಡಿಯುವದು ಕೃಷಿ ಇಲಾಖೆಯ ಮುಖ್ಯ ಉದ್ದೇಶಗಳಲ್ಲಿ ಒಂದಾಗಿರುವದು." ಹೀಗಾದುದರಿಂದ ಸಸಿಗೊಬ್ಬರವೆಂದರೇನು, ಅದನ್ನು ಹ್ಯಾಗೆ ಬೆಳೆಯಿಸುವದು, ಅದರ ಪ್ರಯೋಜನವೇನೆಂಬುದನ್ನು ಜನರು ತಿಳಿಯುವದು ಅವಶ್ಯ. ಸಸಿಗೊಬ್ಬರವೆಂದರೆ, ಸಸಿಗಳನ್ನು ಗೊಬ್ಬರಕ್ಕೋಸ್ಕರ ಗದ್ದೆಗಳಲ್ಲಿ ಬೆಳೆಯಿಸಿ, ಅವುಗಳನ್ನು ತಕ್ಕ ಕಾಲದಲ್ಲಿ ಗದ್ದೆಗೆ ಉತ್ತುಬಿಡುವದು. ಕೋಡು ಬಿಡುವ ಎಲ್ಲಾ ತೆರದ ಸಸ್ಯಾದಿಗಳು, ಸಸಿಗೊಬ್ಬರಕ್ಕೆ ಯೋಗ್ಯವಾದವುಗಳು. ಇವುಗಳಲ್ಲಿ ಡೈಂಚ, ಸಣಬು, ನೀಲಿ, ಕಾಡುನೀಲಿ, ಅವಡೆ,

ಉದ್ದು, ಹೆಸರು, ಹುರುಳಿ ಮೊದಲಾದವುಗಳನ್ನು ಮದ್ರಾಸು ಸಂಸ್ಥಾನದ ಬೇರೆಬೇರೆ ಜಿಲ್ಲೆಗಳಲ್ಲಿ ಹಸಿಗೊಬ್ಬರಕ್ಕೆ ಉಪಯೋಗಿಸುವರು. ಈ ಕೋಡು ಬಿಡುವ ಸಸ್ಯಾದಿಗಳನ್ನೇ ಮಾತ್ರ ಹಸಿಗೊಬ್ಬರಕ್ಕೆ ಉಪಯೋಗಿಸಲಿಕ್ಕೆ ಕಾರಣವೇನೆಂಬದಾಗಿ ರೈತರಲ್ಲಿ ಅನೇಕರು ಕೇಳಬಹುದು. ಈ ಜಾತಿಯ ಸಸ್ಯಾದಿಗಳಿಗೆ ಒಂದು ವಿಶೇಷ ತರದ ಗುಣ ಉಂಟು. ಈ ಸಸ್ಯಾದಿಗಳನ್ನು ಕಿತ್ತು ಅವುಗಳ ಬೇರುಗಳನ್ನು ಪರೀಕ್ಷಿಸಿದರೆ ಆ ಬೇರುಗಳಲ್ಲಿ ತುಂಬಾ ಉರುಟಾದ ಗಂಟುಗಳನ್ನು ಕಾಣಬಹುದು. ಈ ಗಂಟುಗಳೊಳಗೆ ಬರೆ ಕಣ್ಣಿಗೆ ಕಾಣಿಸದ ಬಂದು ತರದ ಜಂತುಗಳು ವಾಸಿಸಿಕೊಂಡಿರುವವು. ಪೈರುಗಳಿಗೆ ಬೇಕಾದ ಆಹಾರಗಳಲ್ಲಿ ಮುಖ್ಯವಾದ ನೈಟ್ರಜನ್ ಎಂಬ ಆಹಾರವನ್ನು ಒದಗಿಸಿಕೊಟ್ಟು, ಪೈರುಗಳು ತಮ್ಮ ಆಹಾರವನ್ನು ಬೇರುಗಳ ಮುಖಾಂತರ ಹೀರಿಕೊಳ್ಳಲಿಕ್ಕೆ ಯೋಗ್ಯವಾದ ರೀತಿಗೆ ತರುವ ವಿಶೇಷಗುಣವು ಈ ಜಂತುಗಳಿಗೆ ಇರುವದು. ಹಸಿಗೊಬ್ಬರವನ್ನು ಗದ್ದೆಗಳಲ್ಲಿ ಬೆಳೆಯಿಸುವದರಿಂದ ಆದ ಗದ್ದೆಯ ಸಾರವನ್ನು ಹೀರಿಕೊಳ್ಳುವದಿಲ್ಲವೋ ಎಂದು ಕೆಲವರು ಕೇಳಬಹುದು. ಹಸಿಗೊಬ್ಬರವು ಅದರ ಜೀವಿಕೆಗೆ ಗದ್ದೆಯ ಮಣ್ಣಿನಿಂದ ಸಾರವನ್ನು ಹೀರಿಕೊಂಡರೂ ಅದನ್ನು ಪುನಹ ಅದೇ ಗದ್ದೆಗೆ ಬಿತ್ತುಬಿಡುವದರಿಂದ ಮಣ್ಣಿನ ಸಾರವು ನಷ್ಟವಾಗುವದಿಲ್ಲ. ಅದಲ್ಲದೆ ಹಸಿಗೊಬ್ಬರಗಳ ಬೇರುಗಳಲ್ಲಿ ವಾಸಿಸಿಕೊಂಡಿರುವ ಸೂಕ್ಷ್ಮಜಂತುಗಳು ಗಾಳಿಯಿಂದ ಪೈರಿನ ಮುಖ್ಯ ಆಹಾರವಾದ ನೈಟ್ರಜನ್ ಎಂಬ ಪದಾರ್ಥವನ್ನು ಸೆಳಕೊಂಡು ಗದ್ದೆಗಳ ಮಣ್ಣಿಗೆ ಕೂಡಿಸಿ, ಆದರಿಂದ ಪೈರುಗಳು ಪ್ರಯೋಜನ ಹೊಂದುವಂತೆ ಮಾಡುವವು. ಹೀಗಿರುವದರಿಂದ ಹಸಿಗೊಬ್ಬರದಿಂದ ಮಣ್ಣಿನ ಸಾರವು ನಷ್ಟವಾಗುವದರ ಬದಲಿಗೆ ವೃದ್ಧಿಯಾಗುವದು. ಹಸಿಗೊಬ್ಬರವು ಮಣ್ಣಿನ ಸಾರವನ್ನು ವೃದ್ಧಿಸುವದಲ್ಲದೆ ಇನ್ನು ಅನೇಕ ವಿಧಗಳಿಂದ ಮಣ್ಣಿನ ಘಟಕಗಳ ಜೋಡಣೆಯನ್ನು (texture of soil) ಒಳ್ಳೇ ರೀತಿಗೆ ತಂದು ನೆಲ್ಲಿನ ಪೈರನ್ನು ವೃದ್ಧಿಸುವದು. ಬೇಗನೆ ನೀರು ನಿಲ್ಲದೆ ಹರಿದುಹೋಗುವ ಹೊಯಿಗೆ ಮಣ್ಣಿನ ಗದ್ದೆಗಳಲ್ಲಿ ಹಸಿಗೊಬ್ಬರವನ್ನು ಬಳಸಿ, ಗದ್ದೆಗೆ ಉತ್ತು ಬಿಡುವದರಿಂದ ಗದ್ದೆಯ ಮಣ್ಣು ಉತ್ತೇಜಿತ ಸ್ಥಿತಿಗೆ ಬಂದು, ಅದರಲ್ಲಿ ನೀರು ಹರಿದುಹೋಗದೆ ನಿಂತು ನೆಲ್ಲಿನ ಪೈರಿಗೆ ಬೇಕಾದಂತೆ ಒದಗುವದು. ಅದಲ್ಲದೆ ನೀರು ಸರಿಯಾಗಿ ಹೀರಿ ಹೋಗದೆ ಬಗ್ಗೆಗಳು ಏಳುವ ಕಪ್ಪುಮಣ್ಣಿನ ಗದ್ದೆಗಳಲ್ಲಿ ಹಸಿಗೊಬ್ಬರವನ್ನು ಬಳಸುವದರಿಂದ, ಹೆಚ್ಚಾದ ನೀರು ಹರಿದುಹೋಗಿ ಉತ್ತದ ಪೈರಿಗೆ ಬೇಕಾದಷ್ಟು ನೀರು ದೊರೆತು ಪೈರು ಒಳ್ಳೇ ಸ್ಥಿತಿಗೆ ಬರುವದು. ಆದುದರಿಂದ ಹಸಿಗೊಬ್ಬರದಿಂದ ಎಲ್ಲಾ ತರದ ಮಣ್ಣೂ ಉತ್ತೇಜಿತ ಸ್ಥಿತಿಗೆ ಬರುವದು. ನೆಲ್ಲಿನ ಪೈರಿನ ಬೇರುಗಳು ಮಣ್ಣಿನ ಮೇಲ್ಭಾಗದಲ್ಲಿಯೇ ಬೆಳೆದು ಆಹಾರವನ್ನು ಹೀರಿಕೊಳ್ಳುವದರಿಂದ, ಮಣ್ಣಿನ ಅಡಿಯಲ್ಲಿರುವ ಆಹಾರವು ಹಾಗೆಯೇ ನಿಂತುಬಿಡುತ್ತದೆ. (Paddy is a shallow feeder) ಆದರೆ ಹಸಿಗೊಬ್ಬರದ ಬೇರುಗಳು ಆಳಕ್ಕೆ ಹೋಗಿ, ಅಡಿಯಿಂದ ಆಹಾರವನ್ನು ಹೀರಿಕೊಂಡು ಎತ್ತರದ ಪೈರಿಗೆ ಅದನ್ನು ಒದಗಿಸಿಕೊಡುತ್ತದೆ. ಅದಲ್ಲದೆ ಅನೇಕವೇಳೆ ಒತ್ತದಪೈರಿಗೆ ಕೆಡುಕುಕರವಾದ ಪದಾರ್ಥಗಳನ್ನು ಹಸಿಗೊಬ್ಬರವು ಹೀರಿಕೊಂಡು ಆದರಿಂದ ಪೈರಿಗೆ ಕೆಡುಕನ್ನು ತಪ್ಪಿಸುತ್ತದೆ. ಈ ಹಸಿಗೊಬ್ಬರದಿಂದ ಕಾಡುಕರೆಗಳ ಆಶ್ರಯವಿಲ್ಲದ ಕರಾವಳಿಯ ರೈತರು ಹೆಚ್ಚಿನ ಪ್ರಯೋಜನ ಹೊಂದುವರು. ಯಾವ ಹಸಿಗೊಬ್ಬರದ ಬೀಜವನ್ನು ಬಿತ್ತಿದರೆ ಒಳ್ಳೇದೆಂಬ ವಿಷಯ ಆಯಾ ಮಣ್ಣಿನ ಮೇಲೂ, ಕಾಲದ ಮೇಲೂ ಅವಲಂಬಿಸಿರುತ್ತದೆ. ಸಣಬು, ಅವರೆ ಮತ್ತು ದೊಡ್ಡಹೆಸರು ಮೊಳತು ಆ ದಿವಸದಲ್ಲಿ ಹೂಡಲಿಕ್ಕಾಗುತ್ತದೆ. ಧೈಂಚ, ನೀಲಿ, ಕಾಡುನೀಲಿ ಮೂರುನಾಲ್ಕು ತಿಂಗಳ ವರೇನೂ ಗದ್ದೆಗಳಲ್ಲಿ ಮೇಲ್ಲಗೆ ಬೆಳೆದು ಜೂನು ತಿಂಗಳಲ್ಲಿ ಮಳೆ ಬಂದ ತರುವಾಯ ಗದ್ದೆಗಳಿಗೆ ಹೂಡಲಿಕ್ಕೆ ಸಿದ್ಧವಾಗುತ್ತದೆ. ಕಪ್ಪು ಮಣ್ಣಿನಲ್ಲಿ ಧೈಂಚವೂ, ಹೊಯಿಗೆ ಮಣ್ಣುಗಳಲ್ಲಿ ನೀಲಿಯೂ ಒಳ್ಳೇದಾಗುತ್ತದೆ. ಕಳೆದ ಎರಡು ವರ್ಷಗಳಿಂದ ಈ ಜಿಲ್ಲೆಯ ಕಲೆಕ್ಟರ್ ದೊರೆಗಳವರ ಸಹಾಯದಿಂದ ಕೃಷಿ ಇಲಾಖೆಯವರು ಮಂಗಳೂರು ತಾಲೂಕಿನಲ್ಲಿ ಹಸಿಗೊಬ್ಬರವನ್ನು ಬೆಳೆಯಿಸುವ ಪ್ರಯತ್ನ ನಡಿಸುತ್ತಿದ್ದಾರೆ. ಕಂಕನಾಡಿ, ಕೊಡಿಯಾಲಬೈಲು, ಅತ್ತಾವರ ಗ್ರಾಮಗಳಲ್ಲಿ ಧೈಂಚ ಮತ್ತು ನೀಲಿಯನ್ನು ಹಸಿಗೊಬ್ಬರಕ್ಕೆ ಬೆಳೆಯಿಸಿದ್ದಲ್ಲಿ ಫಲಿತಾಂಶವು ಬಹು ಇಷ್ಟದಾಯಕವಾಗಿ ಕಂಡುಬಂದಿರುವದು. ಈ ಮೂರು ಗ್ರಾಮಗಳಲ್ಲಿಯೂ ಹಸಿಗೊಬ್ಬರವನ್ನು ಬೈಲುಗದ್ದೆಯಲ್ಲಿ ಬಿತ್ತಿತ್ತು. ಜನವರಿ ತಿಂಗಳಲ್ಲಿ ಸುಗ್ಗಿ ಬೆಳೆಯು ಕರಾವು ಆದ ಒಳಿಕ ಉತ್ತು ಫೇಬ್ರವರಿ ತಿಂಗಳ ಆದಿಯಲ್ಲಿ ಧಾನ್ಯದ ಪೈರಿನೊಡನೆ ಧೈಂಚದ ಬೀಜವನ್ನು ಕೂಡಾ ಬೆರಸಿ ಬಿತ್ತಿರುತ್ತದೆ. ಹೀಗೆ ಬೆರಸಿ ಬಿತ್ತುವದರಿಂದ ಧಾನ್ಯದ ಪೈರಿಗೆ ಯಾವದೊಂದು ದೋಷ ತಗಲುವದಿಲ್ಲ. ಎಪ್ರಿಲ್ ತಿಂಗಳಲ್ಲಿ ಧಾನ್ಯದ ಪೈರನ್ನು ಕಿತ್ತು ತೆಗೆಯುವಾಗ ಹಸಿಗೊಬ್ಬರದ ಪೈರನ್ನು ಮಾತ್ರ ಗದ್ದೆಯಲ್ಲಿ ಹಾಗೆಯೇ ಬಿಡಬೇಕು. ಈ ಪೈರು ಎಪ್ರಿಲ್ ಮೇ ತಿಂಗಳಲ್ಲಿ ಬೀಳುವ ಮುಂಗಾರು ಮಳೆಗೆ ಚನ್ನಾಗಿ ಬೆಳೆದು ಜೂನು ತಿಂಗಳಲ್ಲಿ ಗದ್ದೆಗೆ ಹೂಡಲಿಕ್ಕೆ ಸಿದ್ಧವಾಗುತ್ತದೆ, ಮತ್ತು ಆ ಸಮಯದಲ್ಲಿ ಐದಾರು ಅಡಿ ಎತ್ತರಕ್ಕೆ ಬೆಳೆಯುತ್ತದೆ. ಹೀಗೆ ಬೆಳೆದ ಹಸಿಗೊಬ್ಬರವನ್ನು ಗದ್ದೆಗೆ ಕಡಿದುಹಾಕಿ ಉತ್ತು ಏಳೆಂಟು ದಿವಸದಲ್ಲಿ ನೇಜಿ (ಅಗೆ) ಯನ್ನು ನಟ್ಟರೆ ಬತ್ತದ ಪೈರು ಬಹುಚನ್ನಾಗಿ ಬೆಳೆಯುತ್ತದೆ. ಈ ರೀತಿಯಾಗಿ ಹಸಿಗೊಬ್ಬರವನ್ನು ಬೆಳೆಯಿಸುವದರಿಂದ ರೈತರಿಗೆ ಯಾವದೊಂದು ಹೆಚ್ಚಿಗೆ ಖರ್ಚು ತಗಲುವ ಹಾಗಿಲ್ಲ. ಒಂದು ಎಕ್ರೆಗದ್ದೆಯಲ್ಲಿ ಸಸ್ಯಗೊಬ್ಬರವನ್ನು ಬೆಳೆಯಿಸಲಿಕ್ಕೆ ಒಂದು ರೂಪಾಯಿ ಬೆಲೆಯ ಬೀಜ ಮಾತ್ರ ಬೇಕಾಗುತ್ತದೆ. ಬೀಜವನ್ನು ಬಿತ್ತಿ, ಗದ್ದೆಯನ್ನು ಪ್ರತ್ಯೇಕ ಹೂಡುವದವಶ್ಯವಿಲ್ಲ. ಯಾಕಂದರೆ ರೈತರು ತಮ್ಮ ಧಾನ್ಯದ ಪೈರಿಗೆ ಗದ್ದೆಯನ್ನು ಹೂಡುತ್ತಾರೆ. ಒಂದು ರೂಪಾಯಿ ಖರ್ಚು ಮಾಡಿ ಸಾಧಾರಣ ಐದಾರು ರೂಪಾಯಿ ಖರ್ಚು ಮಾಡಿ ದೊರೆಯುವಷ್ಟು ಸೊಪ್ಪು ಗೊಬ್ಬರವನ್ನು ದೊರೆಯಬಹುದು. ಸೊಪ್ಪು ಗೊಬ್ಬರವು ದೊರೆಯಲಿಕ್ಕೆ ಈ ಕಾಲದಲ್ಲಿ ಬಹಳ ಕಷ್ಟವಾಗುತ್ತದೆ. ಸರಕಾರದವರು ಹೆಚ್ಚಿನ ಶ್ರಮೆಯಿಂದಲೂ ದ್ರವ್ಯವ್ಯಯದಿಂದಲೂ ಕೃಷಿ ಕ್ರಮಗಳಲ್ಲಿ ಕೆಲವು ಸುಧಾರಣೆಗಳನ್ನು ಕಂಡುಹಿಡಿದಿರುತ್ತಾರೆ. ಇಂಥಾ ಸುಧಾರಣೆಗಳನ್ನು ರೈತರು ಅನುಸರಿಸಿ ಪ್ರಯೋಜನವನ್ನು ಹೊಂದಲಿಕ್ಕೆ ಬಹು ಸಮಯವು ದಾಟುತ್ತಲಿದೆ. ಈ ವಿಧಾನವಾದ ಮಾರ್ಪಾಟಕ್ಕೆ ಅನೇಕ ಕಾರಣಗಳಿರುತ್ತವೆ. ಹೀಗಾದುದರಿಂದ ರೈತರ ಮುಂದಿಡುವ ಕೃಷಿ ಸುಧಾರಣೆಗಳು ಬಹು ಸುಲಭ ಖರ್ಚಿನಿಂದ ಕೈಲಾಗುವಂಥಾದ್ದಾಗಬೇಕು. ಹಸಿ ಗೊಬ್ಬರವು ಸುಲಭ ಖರ್ಚಿನಿಂದ ಸಾಧ್ಯವಾಗಿ ಹೆಚ್ಚು ಆಧಿಕ್ಯವುಳ್ಳದ್ದಾಗಿರುವುದರಿಂದ ರೈತರು ಇದನ್ನು ಆದಷ್ಟು ಬೇಗನೆ ತಮ್ಮ ಹೊಲಗಳಲ್ಲಿ ಬೆಳಸಿ ಪ್ರಯೋಜನ ಹೊಂದಬೇಕು. ಈ ವಿಷಯದಲ್ಲಿ ಹೆಚ್ಚಿನ ಅನುಭವವು ಬೇಕೆಂದಿರುವವರು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಅವರಿಗೆ ಕೃಷಿ ಇಲಾಖೆಯವರಿಂದ ಧರ್ಮಾರ್ಥ ಸಹಾಯವು ದೊರೆಯುವದು.

ಕೆ. ಟಿ. ಆಳ್ವ,
ತಳಿಪರಂಬ ಫಾರ್ಮ್,
ಮಲಬಾರು.

ವಿವಾಹಿತಳಾಗುವ ಪ್ರಿಯ ಭಗಿನಿಗೆ.

ಕಂದಂ
ಬಾಂಧವಲೋಚನೆ ನೀನನು ।
ರಾಗವು ಪತಿಯೊಡನೆ ಸುಖಮುಪೊಂದುತೆ ಮತ್ರಂ ।
ಶೀಲಯುತರ್ ಪುತ್ರರ ಪಡೆ! ।
ಮಾಲಶೀಲನನುಗ್ರಹದೆ, ಸುಮಂಗಲೆ, ಭಗಿನೀ! ॥ ೧ ॥

ಪತಿಸ್ವತ್ವಂಬಿರದೊಡೆಯನು, ।
ಪತಿಪ್ರೇಮವೆ ದನವು, ಸುಖವು, ಕೀರ್ತಿಯು, ಪುಣ್ಯಂ, ॥
ಪತಿಸೇವೆಯೆ ಧರ್ಮವು ತಿಳಿ, ।
ಪತಿಗರ್ಪಿಸುತಂಗಿ ಮಾನ ಪ್ರೀತಿಯನೆಲ್ಲಂ ॥ ೨ ॥

ಪ್ರೀತಿಯು ಹೃದಯದ ಜೀವನ, ।
ಪ್ರೀತಿಯೆ ಸಂಕಷ್ಟದುರಿಗೆ ಶೀತಲಲೇಪಂ, ।
ಪ್ರೀತಿಯಸುಧೆ ಕುಡಿಯನುದಿನ, ।
ಭೂತಳದೊಳಪಡೆಯೆ, ನಿತ್ಯಸರ್ಗದ ಸುಖಮಂ ॥ ೩ ॥

ಪತಿಗೃಹದಲಿಸತತವು ಶಾಂ।
ತತೆಯಾನಂದಗಳ ಬೆಳಸು, ಸ್ಥಿರಣೆಯಿಂದಂ, ॥
ಸತತಪ್ರಫುಲ್ಲಿತವದನದಿ, ।
ಪತಿಹಿತರಾದರಣೆ ಮಾಡು; ಹರಿಯಂಬೇಡೌ. ॥ ೪ ॥

ಚಿಂತರಹಿತ ಸುಖ ಸಂಪದ ।
ಮಂತಾಳುತೆ ಬಾಳುತಾರ್ಯಗೃಹಿಣಿಯ ಧರ್ಮ ॥
ಕ್ಯಂತರ ಬಾರದ ತೆರದಿರು, ।
ಸಂತತಚಿತಕ್ಕೊಪ್ರೀಧೆಯಾಗಿ, ವಿನಯದಿ ಬಾಗಿ! ॥ ೫ ॥

L.

ಕೊಬ್ಬರಿ ಬೆಣ್ಣೆ.

Cocoanut Butter.

ಬೊಹಿಮಿಯಾ ದೇಶದಲ್ಲಿ ತಯಾರಾಗುವ ಬೆಣ್ಣೆಯು ಇಂಡಿಯಾ ದೇಶದ ಕೊಬ್ಬರಿಯಿಂದಲೇ ತಯಾರಾಗತಕ್ಕದ್ದು. ಕೊಬ್ಬರಿಯನ್ನು ಸಣ್ಣ ಸಣ್ಣ ತುಂಡುಗಳಾಗಿ ಕತ್ತರಿಸಿ ಗಾಣಕ್ಕೆ ಕೊಟ್ಟು ಎಣ್ಣೆಯನ್ನು ತೆಗೆಯುತ್ತಾರೆ. ಈ ಎಣ್ಣೆಯಲ್ಲಿ ಒಂದು ತರಹೆ ಕೊಬ್ಬು ಇರುತ್ತೆ. ಇದರಿಂದ ಒಂದು ತರಹೆ ಕೆಟ್ಟ ವಾಸನೆವುಂಟಾಗುತ್ತೆ. ಎಣ್ಣೆಯನ್ನು ದೊಡ್ಡ ತೊಟ್ಟಿಗಳಲ್ಲಿ ತುಂಬಿ ಶೀಮೆ ಸುಣ್ಣದ ಪುಡಿಯನ್ನು ಹಾಕಲು ಇದು ಕೊಬ್ಬಿನೊಂದಿಗೆ ಸೇರಿ ತಳದಲ್ಲಿ ನಿಂತುಹೋಗುತ್ತೆ. ನಂತರ ಮೇಲೆ ನಿಂತಿರುವ ಎಣ್ಣೆಯನ್ನು ಫಿಲ್ಟರ್‌ಗಳ ಮೂಲಕ ಮತ್ತೊಂದು ತೊಟ್ಟಿಗೆ ಪಂಪು ಮಾಡಬೇಕು. ನಂತರ ಹಬೆಯಿಂದ ಶಾಖಮಾಡಿದ ಮತ್ತೊಂದು ತೊಟ್ಟಿಗೆ ಪಂಪುಮಾಡುತ್ತಾರೆ. ಈ ಎಣ್ಣೆಯನ್ನು ಆರಿಸಲು ಗಟ್ಟಿಯಾಗಿ ಗಡ್ಡೆಕಟ್ಟುತ್ತೆ. ಇದನ್ನು ಬಿಲ್ಲೆಗಳಾಗಿ ಮಾಡಿ ಇತರ ಸ್ಥಳಗಳಿಗೆ ಕಳುಹಿಸುತ್ತಾರೆ. ಕೊಂಚ ಭಾಗ ಎಣ್ಣೆಯನ್ನು ಕೊಳವಿಗಳಲ್ಲಿ ತುಂಬಿ ಮಾರುತ್ತಾರೆ. ತಳದಲ್ಲಿ ನಿಂತಿರುವ ಶೀಮೆ ಸುಣ್ಣದ ಪುಡಿಯನ್ನು ಸಲ್ಫೂರಿಕ್ ದ್ರಾವಕದೊಂದಿಗೆ ಸೇರಿಸಲು ಇದರೊಂದಿಗೆ ಸೇರಿರುವ ಕೊಬ್ಬು ಪದಾರ್ಥವು ಬಿಡುಗಡೆಯಾಗಿ ಮೇಲಕ್ಕೆ ಬರುತ್ತೆ. ಇದನ್ನು ಒಟ್ಟುಕೂಡಿಸಿ ಸಾಬೂನು ತಯಾರಿಸುವವರಿಗೆ ಮಾರುತ್ತಾರೆ. ಕೊಬ್ಬರಿಯ ಹಿಂಡಿಯನ್ನು ಪುಡಿಮಾಡಿ ದನಗಳಿಗೆ ಮೇವಾಗಿ ಉಪಯೋಗಿಸಬಹುದು. ಕೊಪರಿ ಕೊಬ್ಬು ಬೆಳ್ಳಗೆ ಇರುತ್ತೆ. ಆದರೆ ಇದರ ಬೆಣ್ಣೆಯು ಬೇರೆ ಬಣ್ಣವನ್ನು ಹೊಂದಿರುತ್ತೆ. ಮೆತುವು ಮಾಡುವುದಕ್ಕಾಗಿ ಒಳ್ಳೆಣ್ಣೆಯನ್ನು ಸೇರಿಸುವುದುಂಟು. ಕೊಬ್ಬರಿ ಬೆಣ್ಣೆಯು ಉಷ್ಣ ದೇಶಗಳಲ್ಲಿ ಕೂಡ ಬಹಳ ದಿನಗಳವರಿಗೆ ಕೆಡದೆ ಇರುತ್ತೆ. ಕೊಬ್ಬಿನ ಬೆಣ್ಣೆಗೂ ಇದಕ್ಕೂ ಇರತಕ್ಕ ವ್ಯತ್ಯಾಸವನ್ನು ಸಾಧಾರಣವಾಗಿ ಕಂಡುಹಿಡಿಯಲು ಸಾಧ್ಯವಲ್ಲ. ಆರು ವರುಷಗಳ ಹಿಂದೆ ಆಸ್ಟ್ರಿಯಾ ದೇಶದಲ್ಲಿ ದಿನ ಒಂದಕ್ಕೆ ೪೦ ಟನ್ ತಯಾರಾಗುತ್ತಿತ್ತು. ಈಗ ೬೦೦ ಟನ್ ತಯಾರಾಗುತ್ತಿದೆ. ೨೦೦ ಪೌಂಡುಗಳಿಗೆ ೫೫ ರೂಪಾಯಿ ಬೆಲೆ ಇದ್ದದ್ದು, ಈಗ್ಗೆ ೮೦ ರೂಪಾಯಿ ಇರುತ್ತೆ. ಮತ್ತು ಈಚೆಗೆ ಗಿರಾಕಿಯು ಹೆಚ್ಚುತ್ತಿದೆ. ರ. ಗ.

ಪತ್ರವ್ಯವಹಾರ

ಅಯ್ಯಾ ಪತ್ರಕರ್ತರೇ,

ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ನನ್ನ ಈ ಸಣ್ಣ ವಿಷಯಕ್ಕೆ ಒಂದಿಷ್ಟು ಎಡೆಕೊಡುವಿರಾಗಿ ಹಾರೈಸುತ್ತೇನೆ.

ಮೂಡು ಪ್ರಾಂತ್ಯಕ್ಕೆ ಸೇರಿದ ಬೆಳ್ತಂಗಡಿಯಲ್ಲಿಯೂ ದಯಾಳು ಸರಕಾರದವರು ಒಂದು ಆಸ್ಪತ್ರಿಯನ್ನು ಇಟ್ಟಿರುತ್ತಾರೆ. ಮತ್ತು ಇತ್ತಲಾಗೆ ಬಹಳ ಹಣ ವೆಚ್ಚ ಮಾಡಿ ನಮಗೆ ಒಂದು ಹೊಸ ಕಟ್ಟೋಣವನ್ನು ಇದಕ್ಕಾಗಿ ಮಾಡಿರುತ್ತಾರೆ. ನಮ್ಮ ಆಸ್ಪತ್ರಿಯ ಸಬ್ ಅಸಿಸ್ಟಾಂಟ್ ಸರ್ಜನರಾದರೂ ಬಹಳ ದಯಾಳೂ ಕರುಣಾಳೂ ಆಗಿದ್ದು ಮೇಲ್ಜಾತಿ ಕೀಳ್ಜಾತಿ ಎಂಬ ಭೇದಾಭೇದ ಮಾಡದೆ ಸರ್ವರನ್ನು ಏಕ ಪ್ರಕಾರ ದೃಷ್ಟಿಸಿ ಎಲ್ಲಾ ವಿಷಯಗಳಲ್ಲಿ ತನ್ನಿಂದಾಗುವಷ್ಟು ಸಾಹಸ ತಕ್ಕೊಂಡು ಕೆಲಸ ನಡಿಸುತ್ತಿರುತ್ತಾರೆ. ಘಟ್ಟಕ್ಕೆ ಕಾಪಿ ತೋಟಕ್ಕೆ ಹೋಗುವ ಆಳುಗಳೂ, ನೆರೆಹೊರೆಯ ಹಳ್ಳಿಹಳ್ಳಿಯ ಜನರೂ ಅನೇಕಾವರ್ತಿ ಮಲೆಜ್ವರ ಪೀಡಿತರಾಗಿಯೂ, ಬೇರೆ ಸಂಕಟಪ್ಪಡಾಗಿಯೂ ದೂರದಿಂದ ಈ ಆಸ್ಪತ್ರಿಯ ಮದ್ದು ವಗೈರೆ ಮಾಡಿಸುವರೆ ಅನುಕೂಲವಿರುವುದಿಲ್ಲ, ಮತ್ತು ಈ ವಿಧದ ಸಂಕಟಪ್ಪರನ್ನು ನೋಡಿ ನಮ್ಮ ಸರ್ಜನರ ಮನಸ್ಸೂ ಅನೇಕಾವರ್ತಿ ಕರಗಿದ್ದೀತೆಂದೂ ನಂಬುತ್ತೇನೆ. ನಮ್ಮ ಆಸ್ಪತ್ರಿಯ ಕಟ್ಟಡವು ತಕ್ಕ ಮಟ್ಟಿಗೆ ಚಲೋದೂ ದೊಡ್ಡದೂ ಆಗಿರುವದರಿಂದ ದಯಾಳು ಲೋಕಲ್ ಫಂಡಿನವರು ಈ ವಿಷಯದಲ್ಲಿ ನಿರ್ಗತಿಕರೆಂಬಂತೆ ಇರುವ ಬಡ ಪುರವಾಸಿಗಳಿಗೆ ಸದರಿ ಆಸ್ಪತ್ರಿಯಲ್ಲಿ ಒಂದು ಇನ್‌ಪೇಷಂಟ್ಸ್ ವಾರ್ಡ್ ಇಡುವರೆ ಹುಕುಂ ದಯಪಾಲಿಸುತ್ತಿದ್ದರೆ ಮಹದುಪಕಾರವಾಗುತ್ತಿತ್ತು. ಮಾತ್ರವಲ್ಲ, ಈ ಪ್ರಾಂತ್ಯದಲ್ಲಿ ಇದೇ ಕಡೇ ಆಸ್ಪತ್ರಿಯಾಗಿರುವುದರಿಂದ ತಕ್ಕ ಮಟ್ಟಿಗೆ ಎಲ್ಲಾ ಔಷಧಗಳು ಇಲ್ಲಿ ಶಿಕ್ಕುವಂತೆ ಮಾಡುತ್ತಿದ್ದರೆ ಅವರ ಉಪಕಾರವು ಅತಿಶಯವಾಗುವದು. ಬಡವನ ಅರಿಕೆಯು ಎಡೆಯಲ್ಲಿ ಬಿದ್ದುಹೋಗದೆ ಸಾಫಲ್ಯವನ್ನು ಹೊಂದುವದು ಎಂದು ನಂಬುತ್ತೇನೆ.

ಬೆಳ್ತಂಗಡಿ,
ತಾ. 1ನೇ ಜುಲೈ 1914.

ಬಡ ಪುರವಾಸಿ

ಆದಾಯ ತೆರಿಗೆ.

ಅಯ್ಯಾ,

ತಮ್ಮ ತಾರೀಕು ೨೬ನೇ ಪತ್ರಿಕೆಯಲ್ಲಿ ಸಾವಿರ ರೂಪಾಯಿ ಕಡಿಮೆ ಮುನಾಫೆ ಇರುವವರಿಗೆ ರೆವಿನ್ಯೂ ಇಲಾಖೆಯವರು ಆದಾಯ ತೆರಿಗೆಗೆ ಗುರಿಪಡಿಸಿರುವದಾಗಿಯೂ ತಾಲೂಕು ಆಫೀಸರರ ಪಟ್ಟಿಯಲ್ಲಿದ್ದವರನ್ನು ಅಪೂರ್ಣ ತನಖಿಯಿಂದ ಡಿವಿಜನಲ್ ಆಫೀಸರರ ಪಟ್ಟಿಗೆ ಬಡ್ತಿಮಾಡಿರುವದಾಗಿಯೂ 'ಪಟ್ಟಣಿಗ'ನು ಒಬ್ಬಿಬ್ಬರ ಮಾತಿನ ಮೇಲೆ ಬರದ ಲೇಖನವು ಬಹಳ ವಿಷಾದಕರವಾಗಿರುತ್ತದೆ.

ಈಗಿನ ಖಾವಂದರರ ಪೂರ್ವಾಧಿಕಾರಿಗಳಾದರೋ ತೆರಿಗೆಯ ಕುಳಗಳ ಸ್ಥಿತಿ ಗೊತ್ತಿಲ್ಲದೆ, ಒಳನೌಕರರನ್ನು ತಮ್ಮ ಬಂಗ್ಲೆಯ ಕೋಣೆಯಲ್ಲಿಟ್ಟು, ಬಾಗಲುಗಳನ್ನು ಮುಚ್ಚಿ, ಅವರ ಮಾತಿನ ಪ್ರಕಾರ ತೆರಿಗೆ ಹೊರಿಸುತ್ತಿದ್ದರು. ಒಳನೌಕರರಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರರು ಹೆಚ್ಚಿನ ಕುಳಗಳ ಗುರ್ತು ಪರಿಚಿತಿಯಿಲ್ಲದೆ ತೆರಿಗೆ ತನಖಿ ಸಮಯ ಕೆಲಸಕ್ಕೆ ತಕ್ಕ ನಿಗಾ ಕೊಡುವರೆ ಸಮಯ ಸಾಲದೆ ಮೇಲು ಉದ್ಯೋಗಸ್ಥರ ಕಂಟ್ರೋಕ್ತ ಹುಕುಂ ತಲಪತ್ರಲೇ ತಮ್ಮ ಒಳ ನೌಕರರಾದ ಗ್ರಾಮ ಉದ್ಯೋಗಸ್ಥರ ಹತ್ತರ ವಿಚಾರಿಸಿ ಹಿಂದಿನ ವರುಷದ ಪಟ್ಟಿಯ ಯಥಾಪ್ರತಿಯನ್ನು ಅಲ್ಪಸ್ವಲ್ಪ ತದ್ಬದಲಿಯಿಂದ ರವಾನಿಸುವ ವಾಡಿಕೆ ಇತ್ತು. ಇದರಿಂದ ಗ್ರಾಮ ಉದ್ಯೋಗಸ್ಥರಿಗೆ ಜನರಿಗೆ ಸಹಾಯ ಮಾಡಲಿಕ್ಕೂ ಪೀಡಿಸಲಿಕ್ಕೂ ಒಳ್ಳೇ ಅನುಕೂಲವಿತ್ತು. ಇದರ ವ್ಯವಹಾರವು ತಮ್ಮ ವಾಚಕರಲ್ಲಿ ಹಲವರಿಗೆ ಗೊತ್ತಿರುವ ಸಂಗತಿಯಷ್ಟೆ. ಈ ವಿಷಯ ನಾನು ಹೆಚ್ಚು ಬರೆಯುವದು ಅಗತ್ಯವಿಲ್ಲ. ಈಗಿನ ತಾಲೂಕು ಖಾವಂದರ ವರ್ತನೆಗೂ ಇವರ ಪೂರ್ವಾಧಿಕಾರಿಗಳ ವರ್ತನೆಗೂ ಇರುವ ವ್ಯತ್ಯಾಸವು ಜನಜನಿತ ಗೊತ್ತಿದೆಯಷ್ಟೆ. ಡಿವಿಜನಲ್ ಆಫೀಸರರ ಪಟ್ಟಿಗೆ ಬಡ್ತಿಹೊಂದಿದವರ ಸಂಗತಿಯಲ್ಲಿ ಕಳೆದ ವರುಷ ತನಖಿ ನಡಿಸದೆ ಇದ್ದದ್ದಕ್ಕೆ ನಮ್ಮ ಮೊದಲಿನ ಖಾವಂದರವರೇ ಜವಾಬ್ದಾರರು. ಇವರಿಗೆ ತನಖಿಯೇ ಅಗತ್ಯವಿರಲಿಲ್ಲ. ಹೊಸ ಹೊಸ ವಿಚಾರಿಗಳನ್ನು ಮಾಡಿಮಾಡಿ ಮುಗಿದು ಮುಗಿಯದೆ ಇದ್ದ ದೆಸೆಯಿಂದ ತನಖಿಗೆ ಸಮಯವೆಲ್ಲಿ? ಈ ಸಂಗತಿ ಬಡ 'ಪಟ್ಟಣಿಗ'ನಿಗೆ ಹ್ಯಾಗೆ ಗೊತ್ತು? ಪಾಪ! ಅತನು ಈ ವರೇಗೆ ಹೆಚ್ಚು ಮುನಾಫೆ ತಿಂದಾಗ್ಯೂ ಒಳನೌಕರರ ಸಹಾಯದಿಂದ ತೆರಿಗೆಯನ್ನು ತಪ್ಪಿಸಿಕೊಂಡಿದ್ದಾನೆಂತ ಕಾಣುತ್ತದೆ. ಆದರೆ ಈ ವರುಷ ಅಂದೊಂದು ಕೈಲಾಗದ್ದರಿಂದ ನಮ್ಮ ಪ್ರಿಯ 'ಪಟ್ಟಣಿಗ'ನಿಗೆ ಹೆಚ್ಚಿನ ನೋವು ಉಂಟಾದ್ದರಿಂದ ಆಶ್ಚರ್ಯವೇನು?

ಈ ವರುಷ ತಾಲೂಕು ಖಾವಂದರವರು ಯಾವ ತರದ ಒಳ ಸಂಚನೆಗೆ ಆಸ್ಪದ ಕೊಡದೆಯೂ, ತಮ್ಮ ಪೂರ್ವಾಧಿಕಾರಿಗಳಂತೆ ದೇಹಾರೋಗ್ಯಕ್ಕೇನೇ ಲಕ್ಷ್ಯಕೊಡದೆಯೂ, ನ್ಯಾಯಕ್ಕೂ ನೀತಿಗೂ ಸರಿಯಾಗಿ ಕುಲಾಂಕುಶ ಬುದ್ಧಿ ತನಖಿಯಿಂದ ತೆರಿಗೆ ಕೆಲಸವನ್ನು ನಡಿಸುವದು ಬಹಳ ಶ್ಲಾಘನೀಯವಾದದ್ದೇ ಸರಿಯೆಂದು ಅನೇಕರ ಅಭಿಪ್ರಾಯವಿರುವುದು. ಪಟ್ಟಣಿಗನೊಬ್ಬನು ಮಾತ್ರ ಅನ್ಯಾಯ ಹೊಂದಿದವನಂತೆ ವೃಥಾ ನಟಿಸುತ್ತಾನೆ. ಅದು ಅವನ ಜನ್ಮ ಪ್ರಾರಬ್ಧವೆಂದು ನಾವು ತಿಳಕೊಳ್ಳೋಣ.

ಪುತ್ತೂರು,
ತಾ. 1—7—1914.

ಸತ್ಯವಾದಿ.

"ಕೊಂಕಣ ದಿರ್ವೆಂ" ಪತ್ರದ "ಕೊಂಕೆ" ಮಾತುಗಳು.

ಅಯ್ಯಾ ಪತ್ರಕರ್ತರೇ,

ರೋಮನ್ ಕೆಥೋಲಿಕ ಸಮುದಾಯ ರಾಜ್ಯದಲ್ಲಿ ಒಡೆಯರವರ ಕಾರ್ಯ ಸಾಧನೆ ನಡಿಸುವಾಗ್ಯೆ ಅಜಾಗ್ರತೆಯಿಂದಲಾಗಲೀ ವ ಕಾರ್ಯಸಿದ್ಧಿಯನ್ನು ಹೊಂದುವ ಉದ್ದೇಶ ಆಶ್ರಯಿಗಳಾದ ನಮ್ಮ ಅನೇಕ ವಸ್ತುಗಳಿಗೆ ಘಾಯ ಬಿದ್ದು ಗುಪ್ತವಾಗಿ ಅವು ಇದ್ದಲ್ಲಿಯೇ ಕೊಳೆತುಹೋಗುತ್ತವೆ. ಪರರಿಗೆ ತಿಳಿಯದೆ ಕುಂಬು ಆಗಿ ಹೋಗುವ ಈ ದ್ರವ್ಯಗಳು ದನಿಗಳ ವಿಸ್ತಾರವಾದ ಗದ್ದೆ ಹೊಲಗಳಿಗೆ ಒಳ್ಳೇ ಗೊಬ್ಬರವಾಗುವುದರಿಂದ ಧನಿಗಳು ನಮಗೆ ಹೀಗೆ ಪ್ರಾಪ್ತವಾಗುವ ವಿಪರೀತವಾದ ನಷ್ಟಕ್ಕೆ ಕಾರಣಗಳನ್ನು ಹೆಚ್ಚಿಸುವದರಲ್ಲಿ ಆನಂದಪಡುವದು ಮಾತ್ರವಲ್ಲದೆ ಯಾರಾದರೂ ಅನ್ಯರು ಪಶ್ಚಾತ್ತಾಪಪಟ್ಟು ಕೊಳೆತು ಹೋಗುವ ಈ ವಸ್ತುಗಳನ್ನು ರಕ್ಷಿಸುವದರಲ್ಲಿ ಕೈಹಾಕಿದ್ದಲ್ಲಿ ಒಡೆಯರುಗಳ ಕೋಪದ ಉರಿಗೆ ಕಾರಣ ಭೂತರಾಗುವರು.

ಕೊಳೆತು ಹೋಗುವ ಇಂಥಾ ಸಾಮಾನುಗಳು ನಮಗೆ ಬಲು ಅಮೂಲ್ಯವಾದವುಗಳಾದ ಕಾರಣ, ಅವುಗಳನ್ನು ಹೊರಗೆ ತಂದು ನಮ್ಮ ಪತ್ರವಾದ ಕೊಂಕಣಿ ದಿರ್ವೆಂಯ ಅಂಗಳದಲ್ಲಿ ಬಿಡಿಸಿ ಲೋಕಾಭಿಪ್ರಾಯವೆಂಬ ಬಿಸಿಲಿನಲ್ಲಿ ಒಣಗಿಸಿ ಅವುಗಳನ್ನು ಉಳಿಸಿಕೊಳ್ಳಬೇಕೆಂಬ ಆಲೋಚನೆಯನ್ನು ಮಾಡುವಷ್ಟರಲ್ಲಿ "ಕೊಂಕಣಿ ದಿರ್ವೆಂ" ಪತ್ರವು ನನ್ನಂಥವರ ಈ ಆಲೋಚನೆಗಳನ್ನು ಮೊದಲೇ ಊಹಿಸಿಕೊಂಡು, ಕೊಳೆತ ಸರಕುಗಳು ಒಣಗುವ ಸಮಯದಲ್ಲಿ ಏಳುವ ಕಠಿಣವಾದ ದುರ್ವಾಸನೆಗೆ ತಾ ಯಾಕೆ ಗುರಿಯಾಗಬೇಕೆಂಬ ಸ್ವಾರ್ಥ ಮನೋಭಾವನೆಯಿಂದ ಕದ್ರಿ ಮಾರ್ಸ್

ಡಿ'ಸೋಜರಿಗೂ ಅವರ ಶಾಸ್ತ್ರಾಧಿಕಾರಿಗಳಿಗೂ ಬಿಜೈ ಶಾಲೆಯ ಆಡಳಿತೆ ಹಕ್ಕಿನ ಬಗ್ಗೆ ನಡಿಯುವ ವಾದವಿವಾದವನ್ನು ಮೇಲುಷಂಗ್ತಿಯಾಗಿ ಹಿಡಿದು ತಾವು ಹೀಗೆ ತಮ್ಮ ಸ್ನೇಹಿತರೊಳಗೂ ಮತಾಧಿಕಾರರೊಳಗೂ ಆಗುವ ವಾದವಿವಾದದಲ್ಲಿ ಯಾವ ತರದ ಕೈಹಾಕುವದಿಲ್ಲಾ; ಯಾಕಂದರೆ ಹೀಗೆ ಪ್ರವೇಶಿಸಿದಲ್ಲಿ ಒಂದು ಪಂಗಡದವರು ತಮ್ಮ ಮೇಲೆ ಶಿಟ್ಟುಕೊಂಡು ಲಂಕೆಯನ್ನು ಸುಟ್ಟುಬಿಡುವರೆಂಬಿತ್ಯಾದಿ ಮಾತುಗಳಿರುವ ಉಪನ್ಯಾಸವನ್ನು ಫೆಬ್ರವರಿ ತಿಂಗಳಿಗೆ ಪ್ರಕಟವಾದ ಸದರಿ ಪ್ರಥಮ ಸ್ಥಾನದಲ್ಲಿ ಛಾಪಿಸಿ "ಪಿಲಾತ"ನಂತೆ ಕೈತೊಳೆದು ಸಂಕಷ್ಟಪಡುವ ನಮ್ಮೆಲ್ಲರನ್ನು ನಮ್ಮ ಮೇಲ ಅಧಿಕಾರಿಗಳು ಹೊರಿಸಿದ ಕಷ್ಟದಲ್ಲಿಯೇ ನಮ್ಮನ್ನು ಸಾಯಲಿಕ್ಕೆ ಬಿಟ್ಟರು.

ನಿರ್ಗತಿಕನಾಗಿ ದಾರಿಯಲ್ಲಿ ಬಿದ್ದು ಘಾಯಗಳಿಂದ ಸಾಯುವ ನನ್ನನ್ನು "ಕೊಂಕಣಿ ದೀರ್ವೆಂ" ಪತ್ರವು ಬೈಬಲ್ ಪುಸ್ತಕದಲ್ಲಿ ಹೇಳುವ "ಫಾರಿಸ್ಯ" ಮನುಷ್ಯನಂತೆ ನನ್ನ ಸಂಕಟವನ್ನು ನೋಡಿದರೂ ಏನೂ ಸಹಾಯಮಾಡದೆ ಮುಂದರಿಸಿದ್ದಾಗ ಭ್ರಾತೃಭಾವದಿಂದ ನೀವು ನನ್ನನ್ನು ದೃಷ್ಟಿಸಿ ಪಶ್ಚಾತ್ತಾಪಪಟ್ಟು, ಪತ್ರದಲ್ಲಿ ಪ್ರಕಟಣೆ ಎಂಬ ಎಣ್ಣೆಯನ್ನು ನನ್ನ ಸರ್ವ ಘಾಯಗಳಿಗೆ ಸವರಿಸಿ, ನನ್ನ ಬೇನೆಗಳನ್ನು ಗುಣಪಡಿಸುವಂಥಾ ಉಪಚಾರಗಳನ್ನು ನನಗೆ ನೀವು ಮಾಡಿದ್ದು ನಿಮ್ಮಲ್ಲಿರುವ ಉದಾರಭಾವವನ್ನು ವ್ಯಕ್ತಗೊಳಿಸುತ್ತಿದೆ. ವಾಚಕರೆಲ್ಲರೂ, ವಿಶೇಷವಾಗಿ ನಮ್ಮ ರೋಮನ್ ಕಥೋಲಿಕ ಮತಸ್ಥರು, "ಕೊಂಕಣಿ ದೀರ್ವೆಂ"ಯ ಸ್ವಾರ್ಥಭಾವವನ್ನೂ [illegible] ನಿಮ್ಮ ಪತ್ರದ ಉದಾರಭಾವವನ್ನೂ ಮನೋನ್ಯೆಯನವನ್ನೂ ಕಂಡು [illegible] ಸಂಗತಿಯನ್ನು ಕೊಂಕಣಿ ದೀರ್ವೆಂ ಸಂಪಾದಕರ ಗೋಚರಕ್ಕೆ ಒಂದು [illegible] ನಿಮ್ಮ ಅಮೂಲ್ಯವಾದ ಪತ್ರದ ಮೇಲಿರುವ ಒಳ್ಳೇ ಅಭಿಪ್ರಾಯವನ್ನು ಕೆಡಿಸಬೇಕೆಂಬ ಉದ್ದೇಶ ಇತ್ತಲಾಗೆ ಮೇಲೆ ಹೇಳಿದ ದುರ್ಬುದ್ಧಿಯನ್ನು ವ್ಯಕ್ತಗೊಳಿಸುವ ಅನ್ಯಾಯಕರವಾದ ಪತ್ರಕರ್ತರ ಸ್ವತಃ ಬಾತ್ಮಿಗಳನ್ನು [illegible] ಅನ್ಯ ಹೆಸರುಗಳನ್ನು ಕೊಟ್ಟು ಪ್ರಕಟಿಸುತ್ತಿದ್ದಾರೆ.

ಇನ್ನೂ ಬಾಲಾವಸ್ಥೆಯಲ್ಲಿಯೇ ಇರುವ ಈ ಕೊಂಕಣಿ ದೀರ್ವೆಂ ಪತ್ರ [illegible] ಗೋಜಿಗೆ ನೀವು ಹೋಗದಿರುವಾಗಲೂ, ಇವರ ಶಾಸ್ತ್ರಾಧಿಕಾರಿಗಳೂ, ಸದರಿಯವರುಗಳ ಆಶ್ರಯಿಗಳೂ ಕಲಹ ಮಾಡಿಕೊಳ್ಳುವಾಗ ಇವರ ಯಾವ [illegible] ಬೇಡವೆಂಬದಾಗಿ ಕೊಂಕಣಿ ದೀರ್ವೆಂಯು ಸ್ಪಷ್ಟಪಡಿಸಿದಾಗ ಸಹ [illegible] ಸಂಗತಿಗಳನ್ನು ಇದ್ದ ಹಾಗೆ ಬರದು ಪ್ರಕಟಿಸಿದ್ದು ನಿಮ್ಮ "ಕೊಂಕೆ" [illegible] ಕ್ರೈಸ್ತ ಸಮಾಜದ ಒಳಿತಕ್ಕೆ ಹಾನಿ ತರುವ [illegible] ನೀವು [illegible] ಪಡೆದು ಪ್ರಕಟಿಸುತ್ತೀರೆಂತಲೂ ನಿರ್ದಯವಾಗಿ ಅವರ ಪತ್ರದಲ್ಲಿ [illegible] ಕೊಂಕೆ ಮಾತು ಮಾತ್ರವಲ್ಲ; ಕೊಂಚ ಮೇಲುಸ್ತಾನಕ್ಕೆ [illegible] ಮಾನಕ್ಕೆ ಹಾನಿ ತರುವಂಥಾದ್ದಾಗಿರುತ್ತದೆ. [illegible] ಹೇಳಿದರೆ, ಮೊಲೆ ತಿನ್ನುವ ಮಗುವು ತಾಯಿಯು ಮೊಲೆಯನ್ನೇ ಕಚ್ಚಿದರೆ ಅದು ತನ್ನಲ್ಲಿರುವ ಸಾಪಿ ಸ್ವಭಾವವನ್ನು ತೋರಿಸುತ್ತದೆ. ಈ ಸ್ವಭಾವವು ಬೇರೆ ಕಾರಣವಿಲ್ಲದೆ ಕೈಗೆ [illegible] ಗಳನ್ನು ಕಚ್ಚಲಿಕ್ಕೆ ಹೋದರೆ ಆ ಮಗುವಿಗೆ ಹುಚ್ಚು ತಾಗಿದ ದೋಷ ಎಂದೆಣಿಸಿ [illegible] ಹೀಗೆ ಸರ್ವರನ್ನು ಹಿಂಸೆಪಡಿಸುತ್ತಾ ಹೋದಲ್ಲಿ [illegible] ದುರ್ಪ್ರಯೋಗ ಮಾಡಲ್ಪಡುವ ಅದರ ಹಲ್ಲುಗಳನ್ನು ಕಲ್ಲಿನ ಸಹಾಯದಿಂದ ತೆಗೆದುಬಿಡುವರು. ಈ ದುರಾದೃಷ್ಟವು ಕೊಂಕಣಿ ದೀರ್ವೆಂ ಪತ್ರಕ್ಕೆ ಒಂದೊದಗದಂತೆ ಆ ಮಗುನಡತೆಯುಳ್ಳ ಪತ್ರವನ್ನು ನಿಮ್ಮ ಯಾವಾ ತರದ ಉದಾರ ಮನಸ್ಸಿನಿಂದ ಎಚ್ಚರಿಸಬೇಕಾಗಿ ಅಪೇಕ್ಷಿಸುತ್ತೇನೆ.

ನಮ್ಮ ರೋಮನ್ ಕಥೋಲಿಕ ಸಮಾಜವನ್ನು ಇನ್ನೂ ಬಂಧಿಸುವ ಬಗ್ಗೆ ಇತ್ತಲಾಗೆ ನಡಿಸಲ್ಪಡುವ ಪ್ರಯತ್ನಗಳಿಂದ ಅದನ್ನು ಬಿಡುಗಡೆ ಹೊಂದಿಸಬೇಕೆಂಬ ಆಲೋಚನೆಯಿಂದ ಒಂದೆರಡು ಬಾತ್ಮಿಗಳನ್ನು ನಿಮ್ಮ ಪತ್ರದಲ್ಲಿ ನಾನಾಗಲೀ ನನ್ನಂತಹ ಕಷ್ಟದಲ್ಲಿರುವ ಬೇರೆಯವರಾಗಲೀ ಪ್ರಕಟಿಸಿರುವೆವು. ಇದಕ್ಕಾಗಿ ನನಗೆ "ಜುದಾಸ್"ವೆಂಬ ಬಿರುದನ್ನು ಕೊಂಕಣಿ ದೀರ್ವೆಂ ಪತ್ರದವರು ದಯಪಾಲಿಸಿರುವರು. ಈ ಬಹುಮಾನವನ್ನು ನಾನು ಮನಃಪೂರ್ವಕವಾಗಿ ಸ್ವೀಕರಿಸತಕ್ಕದ್ದಾಗಿರುತ್ತದೆ. ಯಾಕಂದರೆ ಜುದಾಸನು ಸ್ವಾಮಿ ಯೇಸು ಕ್ರಿಸ್ತರನ್ನು ವಿಕ್ರಿತಮಾಡಿದುದರಿಂದ ನಿರಾಪರಾಧಿಯಾದ ಯೇಸುವಿಗೆ ಸಂಭವಿಸಿದ ಕಷ್ಟಗಳ ಫಲವಾಗಿ ಭೂಲೋಕವೆಲ್ಲವೂ ಪಾಪದ ಗುಲಾಮತನದ ಬಂಧನೆಗಳಿಂದ ಬಿಡುಗಡೆ ಪಟ್ಟಿತು. ಹೀಗೆಯೇ ನಾನು ನಮ್ಮ ಸಮಾಜದ ಗುಟ್ಟುಗಳನ್ನು ಹೊರಪಡಿಸುವದರಿಂದ ನಮ್ಮ ಸಮಾಜವು ಅದರ ಮೇಲೆ ನಡಿಸಲಿಕ್ಕಿರುವ ದಾಸತ್ವದ ಕಟ್ಟುಗಳಿಂದ ತಪ್ಪಿಸಲ್ಪಟ್ಟರೆ ನನ್ನ ಉದ್ದೇಶವು ನೆರವೇರಿದಂತಾಯಿತು. ಜುದಾಸನು ತಾನು ಮಾಡಿದ ಪಾಪಕ್ಕಾಗಿ ತನ್ನ ಕುತ್ತಿಗೆಗೆ ಹಗ್ಗ ಸುತ್ತಿಸಿ ಸತ್ತನು. ನನ್ನ ಸಮಾಜವು ಬಿಡುಗಡೆ ಹೊಂದಿದ್ದಲ್ಲಿ ಅದಕ್ಕೆ ಕಾರಣವಾಗುವ ನನ್ನ ಪಾಪಕ್ಕೆ ನಾನು ನನ್ನ ಗುರುವಾದ ಜುದಾಸನಂತೆ ಸಾಯಲಿಕ್ಕೆ ಸಿದ್ಧವಾಗಿದ್ದೇನೆ. ಆದರೆ ಅರ್ಚ ಪೇತ್ರನು ತನ್ನ ಸ್ವಾಮಿಯಾದ ಕ್ರಿಸ್ತನ ಹಾಗೆ ಕ್ರೂಜೆಯ ಮೇಲೆ ಶಿಲುಬೆಗೊಂಡು ಸಾಯುವ ಸಂದರ್ಭವು ತನಗೆ ಬಂದಾಗ ತಾನು ಕಾಲು ಮೇಲೆ\ ತಲೆ ಕೆಳಗೆಯಾಗಿ ತೂಗಾಡಿಸಲ್ಪಡುವ ಹಾಗೆ ಕೇಳಿಕೊಂಡನು. ನಾನು ಸಹ ನನ್ನ ಗುರುವಾದ ಜುದಾಸನು ಕುತ್ತಿಗೆಗೆ ಹಗ್ಗ ಹಾಕಿ ಸತ್ತದ್ದರಿಂದ, ಅವನ ಶಿಷ್ಯನಾದ ನಾನು ಹಗ್ಗವನ್ನು ನನ್ನ ಪಾದದ ಅಡಿಯಲ್ಲಿ ಹಾಕಿ ಸಾಯುವದೆ ನನ್ನಿಂದೇನೂ ಅಡ್ಡಿ ಇರುವದಿಲ್ಲ.

ಅಯ್ಯಾ, ಈ ರೂಪಲಂಕಾರದ ಮಾತುಗಳು ಹಾಗಿರಲಿ, ಕೊಂಕಣಿ ದೀರ್ವೆಂಯ ಕೊಂಕೆ ಮಾತುಗಳು ಹಾಗಿರಲಿ. ಕೊಂಕಣಿ ದೀರ್ವೆಂಯ ದುರ್ಬುದ್ಧಿಯು ಇಷ್ಟರೊಳಗೆ ನಿಮಗೆ ಸ್ಪಷ್ಟವಾಯಿತ್ತಲ್ಲವೇ? ತಾನು ಯಾರಿಗೂ ಸಹಾಯಮಾಡುವದಿಲ್ಲ. ಕಷ್ಟದಲ್ಲಿರುವ [illegible] ಸ್ಥಿತಿಯವರಿಗೆ ಬೇರೆಯವರು ಸಹಾಯಮಾಡಕೂಡದೆಂಬ ಈ [illegible] ಕಟ್ಟಿಕೊಂಡು ದನಕರುಗಳಿಗೆ ಹುಲ್ಲನ್ನು ತಿನ್ನಲಿಕ್ಕೆ ಬಿಡದ ನಾಯಿಯ ನೀತಿ [illegible] ನೀವು ಅಂಗೀಕರಿಸಲಿಕ್ಕಿಲ್ಲವೆಂದಾಗಿ ನಂಬುತ್ತೇನೆ. ಎಲ್ಲರನ್ನು [illegible] ನಿಮ್ಮ ಪತ್ರದ ಚಂದಾದಾರರು ಬೇರೆ ಬುದ್ಧಿ [illegible] ಕಚ್ಚಲಿಕ್ಕೆ ಬರುವ ಕೊಂಕಣಿ ದೀರ್ವೆಂ ಪತ್ರದ ಚಂದಾದಾರರಾಗ [illegible]? [illegible] ಈ ಜಗಳವನ್ನು ತಮ್ಮಲ್ಲಿ ಹುಟ್ಟಿಸುವ [illegible] ಪತ್ರದ ಕೊಂಕೆ ಮಾತಿನಿಂದ ನಿಮಗೆ ರಿಕ್ಷಣೆ ದೊರಕಿತೆಂದು [illegible] ಕಾರಣ ಕೊಡಲಿಕ್ಕೆ ನಿಮ್ಮ ಮರ್ಯಾದೆಗೆ ಸಲ್ಲುವದೇ? ಅನಾವಶ್ಯ "ಮಂಗಳೂರ್ ಎಕ್ಸ್‌ಪ್ಲೋರರ್" ಪತ್ರದ ಸಂಪಾದಕರಿಗೆ ಕಚ್ಚಲಿಕ್ಕೆ ಹೋಗಿ ಉಭಯ [illegible] ಕಚ್ಚಾಟ ಪ್ರಾರಂಭವಾಗಿಯದೆ.

[illegible] ಪತ್ರದ ಸಂಪಾದಕರಾದ ಶಸ್ತ್ರ ಪ್ರಯೋಗ [illegible] ಡಾಕ್ಟರರು ಕೊಂಕಣಿ ದೀರ್ವೆಂ [illegible] ನಾಲಗೆಯಲ್ಲೂ ಹಲ್ಲುಗಳಲ್ಲೂ ಇರುವ ಕೊರತೆಯನ್ನು ಆಯುಧ [illegible] ಸರಿ ತರುವರು. ನೀವಾದರೋ ಕೊಂಕಣಿ ದೀರ್ವೆಂಯ ಈ [illegible] ಬಾಯಿಯಿಂದ ಹೊರಡುವ ಬೊಗಳಿಕೆಗೆ ಅಂಜಿಕೊಂಡು [illegible] ನಿಮ್ಮ ಯಥಾಕಾಲದ ಉದಾರ ಮನಸ್ಸಿನಿಂದ ಸಹಾಯ ಮಾಡ [illegible] ಬಿಟ್ಟು ಬಿಡಬಾರದಾಗಿ ಪ್ರಾರ್ಥಿಸುವ,

ರೋಮನ್ ಕೆಥೋಲಿಕ ಮತಸ್ಥ.

ಅಯ್ಯಾ,

ನಾನು [illegible] ಕಲ್ಕತ್ತೆಯಿಂದ ಬಹಳ ಬೆಲೆಯುಳ್ಳ ರಬ್ಬರ್ ಗಿಡದ ಬೀಜ [illegible] ಬೆಳಸಿರುತ್ತೇನೆ. ಈ ಗಿಡದಲ್ಲಿ ಚಲೋ ರೀತಿಯಲ್ಲಿ ಹಾಲು [illegible] ಮಾಡಲಿಕ್ಕೆ ತಯಾರಾಗಿದೆ. ಇದನ್ನು ಬೆಳಸುವವರು ಈ ಕೆಳಗಿನ [illegible] ಮಾಹಿತಿಯನ್ನು ತಿಳಕೊಳ್ಳಬಹುದು

[illegible] ಎಮ್. ಪುಟ್ಟಣ್ಣ.

[illegible]—7—14. ಅಮರ ಮಾಗಣೆ ಮೂಡ್ನೂರು ಗ್ರಾಮ.

ಬಡವರ ಸಂಕಷ್ಟ.

ಕದ್ರಿಯಲ್ಲಿ (ಸರ್ಕಾರ ಜಾತಿಯ) ಪಾಲಗದವರ ಒಂದು ಮನೆಯಲ್ಲಿ ಸುಮಾರು [illegible] ವರ್ಷದ ಮತ್ತು [illegible] ವರ್ಷದ ಮಕ್ಕಳು [illegible] ದಿವಸಗಳ ಹಿಂದೆ ಸತ್ತುಹೋದವು. [illegible] ದಿನ [illegible] ವರ್ಷದ ಮತ್ತೊಂದು ಮಗುವಿಗೆ ಸಹ ಅದೇ ರೋಗ [illegible] ತಂದೆಯು ಆ ಮಗುವನ್ನು ಮಂಗಳೂರು ಶಹಾರ ಬವಂತಿ [illegible] ಗಣಪತಿ ಹೆಗ್ಡೆಯರ ಸ್ಥಳದ ಬಿಡಾರಕ್ಕೆ ಸುಮಾರು [illegible] ಗಂಟೆಗೆ ತಂದಿದ್ದರು. ಪರಂತು, ಆ ಮಗು ಮಧ್ಯಾನ್ಹ ೩ ಘಂಟೆಗೆ ಸತ್ತುಹೋಯಿತು. ಕೂಡಲೇ ಮುನ್ಸಿಪಾಲಿಟಿ ಪ್ಲೇಗ್ ಇಲಾಖೆಯವರು ಅಲ್ಲಿಗೆ ಬಂದು ಹೆಣ ನೋಡಿ, ಹೆಣ ತೆಗೆಯಲಿಕ್ಕೆ ಡಾಕ್ಟ್ರರು ಹುಕುಂ ಕೊಡ್ಬೇಕು ಎಂತ ಹೇಳಿ ಹೋದರು. ಡಾಕ್ಟ್ರರ ಸಮಯವನ್ನು ಸಾಯಂಕಾಲದ ವರೆಗೆ ಕಾದರೂ ಡಾಕ್ಟ್ರರು ಬರಲೇ ಇಲ್ಲ. ಈ ದಿನ ಬೆಳಗ್ಯೆ ೯॥ ಘಂಟೆಗೆ ಡಾಕ್ಟ್ರರು ಬಂದು ನೋಡಿ ಹೋಗಿದ್ದಾರೆ. ನಮ್ಮಂಥ ಬಡವರು ಹೆಣವನ್ನು ಮನೆ ಒಳಗೆ ಇಟ್ಟುಕೊಂಡು ದುಃಖಪಡುವುದಲ್ಲದೆ ಸಣ್ಣ ಸಣ್ಣ ಮಕ್ಕಳಿಗೆ ಉಪವಾಸ ಹಾಕಿ ಜಾತಿ ರಿವಾಜಿ ಪ್ರಕಾರ ಸದರಿ ಪಡಾರದವರು ಕೂಡಾ ಹೆಣ ತೆಗೆಯುವ ವರೆಗೆ ಅವರವರ ಚಿಕ್ಕಪುಟ್ಟ ಮಕ್ಕಳನ್ನು ಉಪವಾಸ ಬೀಳಿಸಬೇಕಾಯಿತು. ಇಂತಹ ಸಂಕಷ್ಟವನ್ನು ನಿವಾರಣೆ ಮಾಡಲು ತಕ್ಕ ವಿಲೆವಾರಿ ಮಾಡುವರೆ ಸಂಬಂಧಪಟ್ಟ ಮೇಲಾಫೀಸರರು ನಿಗಾಕೊಡಬೇಕಾಗಿ ವಿಜ್ಞಾಪಿಸುವ,

ಭವಂತಿಕೇರಿ 9—7—14. ಬಡವ.

ವಿದೇಶ ವೃತ್ತಾಂತ.

ಹೊಸ ಇಂಡಿಯಾ ಕೌನ್ಸಿಲ್ ಬಿಲ್ಲು ಈಗ ಬ್ರಿಟಿಷ್ ಪಾರ್ಲಿಮೆಂಟ ಪ್ರಭು ಮಂದಿರದ ಮುಂದಿದೆ. ಇದರ ಪ್ರಕಾರ ಕೌನ್ಸಿಲಿನಲ್ಲಿ ಉಪಯುಕ್ತವಾದ ಕೆಲವು ಸುಧಾರಣೆಗಳು ಮಾಡಲ್ಪಟ್ಟಿವೆ. ಇದರ ಪ್ರಕಾರ ಕೌನ್ಸಿಲಿನಲ್ಲಿ ಭಾರತೀಯ ಪ್ರತಿನಿಧಿಗಳನ್ನು ಸೇರಿಸುವದು ಅಪಾಯಕರವಾದುದೆಂದೂ, ಇದು ೧೮೫೮ನೇ ಆಕ್ಟಿಗೆ ಪೂರ್ಣ ವಿರೋಧವಾಗಿರುವುದರಿಂದ ಇದನ್ನು ತಳ್ಳಿಬಿಡಬೇಕೆಂದು ಹಿಂದೆ ಹಿಂದೂಸ್ಥಾನದಲ್ಲಿ ವ್ಹಾಯಿಸರಾಯ ಪ್ರಭುಗಳಾಗಿದ್ದ ಕರ್ಜನ ಪ್ರಭುಗಳು ಪ್ರಭು ಮಂದಿರದಲ್ಲಿ ಮಾತೆತ್ತಿದ್ದಾರೆ. ಕೋರ್ಝ್ ಪ್ರಭುಗಳವರು ಇದು ವರೆಗೆ ಪ್ರಯತ್ನಪಟ್ಟು ಅಣಿಮಾಡಿದ ಈ ಬಿಲ್ಲನ್ನು ಒತ್ತರಿಸಿಟ್ಟರೆ ಭರತ ಖಂಡದಿಂದ ರಾಷ್ಟ್ರೀಯ ಸಭಾ ಪ್ರತಿನಿಧಿಗಳಾಗಿ ಇಲ್ಲಿಯವರೆಗೆ ಬಂದಿದ್ದ ಪ್ರತಿನಿಧಿಗಳನ್ನು ನಿರಾಶೆಗೊಳಿಸಿ ಅವರನ್ನು ಹಿಂದೆ ಕಳುಹಿಸಿದಂತಾಗುವದು. ಭರತ ಖಂಡದ ಅಶಾಂತಿಯನ್ನು ಉತ್ತಮವಾದ ಶಾಸನಗಳಿಂದ ನಿವಾರಿಸಬೇಕಾಗಿದೆ. ಆದುಕಾರಣ ಹಾಗೆ ಮಾಡುವುದಕ್ಕಿಂತಲೂ ಈ ಹೊಸ ಬಿಲ್ಲಿನ ವಿಷಯವಾಗಿ ವಿಚಾರಿಸುವದೆ ಒಂದು ಕಮಿಟಿಯನ್ನು ಏರ್ಪಡಿಸುವುದು ಉಪಯುಕ್ತ ಎಂದು ಹೇಳಿದರು. ಇದೇ ತಾ. ೨ಕ್ಕೆ ಈ ವಿಷಯ ಪಾರ್ಲಿಮೆಂಟಿನಲ್ಲಿ ಪುನಃ ಚರ್ಚೆ ನಡೆದು ಬಹುಮತದಿಂದ ಬಿದ್ದುಹೋಯಿತು.

ಮಾನ್ಯ ಗೋಖಲೆಯವರು ದೇಹಾರೋಗ್ಯವನ್ನು ಹೊಂದುತ್ತಿರುವರು. ಬರುವ ವಾರ ರಾಜಕೀಯೋದ್ಯೋಗ ಸಭೆಯ ಕೆಲವು ಸಭೆಗಳಿಗೆ ಹಾಜರಾಗುವರೆಂತ ಲಂಡನ್ನಿನಿಂದ ವಾರ್ತೆ ಬಂದಿದೆ.

ಇಂಗ್ಲಾಂಡಿನಲ್ಲಿ ರಾಜನೀತಿ ವಿಶಾರದರಾದ ಪ್ರಖ್ಯಾತಿ ಪಟ್ಟ ಮಿ| ಜೋಸೆಫ್ ಚೆಂಬರ್ಲೇನರವರು ಇದೇ ತಾ. ೩ರಲ್ಲು ಲಂಡನಿನಲ್ಲಿ ವಿಧಿವಶರಾದರು.

ಬ್ರಿಟಿಷ್ ಕೊಲೊಂಬಿಯಕ್ಕೆ ಕೊಮಗಾಟಮಾರು ಹಡಗದಲ್ಲಿ ಹೋದ ಭಾರತೀಯರ ಪೈಕಿ ೫ ಮಂದಿಯನ್ನು ವಾನಕವರಿನಲ್ಲಿರುವ ಅವರ ಸಮ್ಮಂಧಿಕರೊಡನೆ ಮಾತಾಡುವುದಕ್ಕಾಗಿ ಇಮಿಗ್ರೇಶನ್ ಆಫೀಸರರು ಹಡಗದಿಂದ 'ಲಾಂಚ್' ಎಂಬ ಸಣ್ಣ ದೋಣಿಗೆ ಇಳಿಯ ಬಿಟ್ಟರು. ಈ ಭಾರತೀಯರು ಹಡಗದಿಂದಿಳಿದ ಕೂಡಲೇ ಹಡಗದಲ್ಲಿದ್ದ ಇತರ ಭಾರತೀಯರು ಏಣಿಯನ್ನು ಮೇಲಕ್ಕೆ ಎಳೆದು ಕೆಳಗಿಳಿದ ಭಾರತೀಯರನ್ನು ಮೇಲಕ್ಕೆ ಹತ್ತಲು ಬಿಡಲಿಲ್ಲ. ಕೆಪಿಟಾನನು ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾಯಿತು. ಲಾಂಚಿಯನ್ನು ಆಫೀಸರರು ಹಡಗ ಸೇರಲು ಬಿಡಲಿಲ್ಲ. ಲಾಂಚಿಗೆ ಇಳಿದವರನ್ನು ಹಡಗಕ್ಕೆ ಸೇರಿಸಲು ನಾಳೆಯೊಳಗೆ ಪ್ರಯತ್ನ ಮಾಡಬೇಕು; ಇಲ್ಲವೆ ಹಡಗವನ್ನು ಕೆನಡಾ ಸರಕಾರದವರ ವಶ ಕೊಡಬೇಕೆಂದು ಇಮಿಗ್ರೇಶನ್ ಆಫೀಸರರು ಹಡಗದ ತಾಂಡೇಲನನ್ನು ಬೆದರಿಸಿರುವರು.

೩೫೦ ಭಾರತೀಯರಿರುವ ಇನ್ನೊಂದು ಹಡಗವು ಕಲ್ಕತ್ತೆಯಿಂದ ಹೊರಟು ಹೊಂಕೊಂಗ ವರೆಗೆ ಬಂದದೆಂತ ವಿಕ್ಟೋರಿಯಕ್ಕೆ ತಂತೀ ಹೋಗಿರುವುದು.

ಉತ್ತರ ಹಿಂದೂಸ್ಥಾನ.

ರತ್ನಗಿರಿ ಡಿಸ್ಟ್ರಿಕ್ಟಿನ ಮಾಲ್ವಾನಿನಲ್ಲಿರುವ ರಾ| ಅನಂತ ಶಿವಾಜಿ ದೇಸಾಯಿಯವರು ಮಾಲ್ವಾನಿನ ಹ್ಯಾಸ್ಕೂಲಿಗೆ ವ ಅದರ ಯೋಗ್ಯ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡುವ ಬಗ್ಗೆ ಮುಂಬಾಯಿ ಸರಕಾರದವರ ವಶ ೭೫,೦೦೦ ರೂಪಾಯಿಗಳನ್ನು ಕೊಟ್ಟಿರುವರು.

ಈ ವರ್ಷದಲ್ಲಿ ಮುಸಲ್ಮಾನರಿಗೆ 'ಅಕ್ಬಾರಿಹಾಜಿ' ನಾಲ್ಕು ವರ್ಷಕ್ಕೊಂದಾವರ್ತಿ ಆಚರಿಸಲ್ಪಡುವ ಹಬ್ಬವಿರುವುದರಿಂದ ಕಳೆದ ವರ್ಷಗಳಿಗಿಂತ ಈ ವರ್ಷ ಮಕ್ಕಾಯಾತ್ರೆ ಮಾಡುವ ಮುಸಲ್ಮಾನ ಯಾತ್ರಿಕರ ಸಂಖ್ಯೆ ಹೆಚ್ಚಾಗಿದೆ. ಈ ತನಕ ಮುಂಬಾಯಿಂದ ಜೆಡ್ಡಕ್ಕೆ ೩ ಹಡಗಗಳು ಹೋದವು. ಒಟ್ಟಿಗೆ ಈ ವರ್ಷ ೨೦-೨೫ ಸಾವಿರ ಯಾತ್ರಿಕರು ಮಕ್ಕಕ್ಕೆ ಹೋಗಬಹುದೆಂದು ಅಂದಾಜಾಗಿಯದೆ.

ಕರಾಚಿ ಸಿಂದಿನಲ್ಲಿಯ ಒಬ್ಬ ವಿವಾಹಿತನು ಒಬ್ಬ ಹೆಂಗಸು ತನ್ನೊಡನೆ ಸಂಸಾರ ನಡೆಸಲು ಒಪ್ಪದ್ದರಿಂದ ಕೊಂದುಹಾಕಿದನು. ಈ ಖೂನಿಯ ವಿಚಾರಣೆಯಾಗಿ ಜಡ್ಜರು ಜನ್ಮಾಂತರ ಕರಿನೀರಿನ ಶಿಕ್ಷೆಯನ್ನು ವಿಧಿಸಿದರು. ಸಿಂದಿನ ಗಂಡಸರು ತಮ್ಮ ಹೆಂಗಸರನ್ನು ಕಾಡು ಮೃಗಗಳು ತಮ್ಮ ಬೇಟೆಯನ್ನು ಹಿಡಿಸಿದ ಕಠಿಣ ರೀತಿಯನ್ನು ಹಿಡಿಸುತ್ತಾರೆ ಎಂಬದಾಗಿ ಜಡ್ಜರು ತೀರ್ಮಾನದ ಒಂದೆಡೆ ಹೇಳಿದರು.

ಕಲ್ಕತ್ತೆಯ ಕಾರ್ಪೊರೇಷನ್ ಸ್ಕೂಲಿನ ಒಬ್ಬ ಹುಡುಗಿಯು ರೈಲ್ ಗಾಡಿಯು ಓಡುತ್ತಿರುವಾಗ ಅದರ ಅಡಿಯಲ್ಲಿ ಬಿದ್ದು ಸ್ವಘಾತ ಮಾಡಿಕೊಂಡಿರುವಳು. ಕಾರಣವೇನೋ ತಿಳಿಯದು.

ರಾಜಾ ಬಾಬಿನ ಬೊಂಬಾಯಿ ಪೊಕ್ಕದವೊಯಲ್ಲಿ ಒಗೇಂದ್ರನಾಥನನ್ನು ಜಡ್ಜರು ಖುಲಾಸು ಪಡಿಸಿ ಉಳಿದ ಐದು ಮಂದಿಯಲ್ಲಿ ಶಶಾಂಕ ಶೇಖರಬೋಸ್ ಎಂಬವನಿಗೆ ೧೫ ವರ್ಷ ಮತ್ತು ೧೦ ವರ್ಷಗಳ ಸಂಕೋಲೆ ಶಿಕ್ಷೆಯನ್ನೂ ಉಳಿದ ನಾಲ್ವರಲ್ಲಿ ಒಬ್ಬೊಬ್ಬನಿಗೆ ಹತ್ತತ್ತು ವರ್ಷಗಳ ಸಂಕೋಲೆ ಶಿಕ್ಷೆಯನ್ನೂ ವಿಧಿಸಿದ್ದರು. ಈ ಶಿಕ್ಷೆಯು ಕಮ್ಮಿಯಾಗಿರುವುದೆಂತ ಸ್ಥಳೀಕ ಸರಕಾರದ ಪರವಾಗಿ ಹೈಕೋರ್ಟಿನಲ್ಲಿ ಮನವಿ ಮಾಡಲ್ಪಟ್ಟಿರುವುದು. ವರಿಷ್ಠ, ಅಪರಾಧಿಗಳು ಅಪೀಲು ಮಾಡಿಕೊಳ್ಳಲಿಕ್ಕಿರುವುದರಿಂದ ಅವರ ಅಪೀಲ್ ಮನವಿಯೊಡನೆ ಈ ಮನವಿಗೂ ನಿಗಾ ಕೊಡಲಾದೀತೆಂದು ಹೈಕೋರ್ಟ್ ಜಡ್ಜರ ಅಪ್ಪಣೆಯಾಗಿದೆ.

ಹೆಂಗಸರು ಪ್ರಸೂತವಾಗುವ ಕಾಲದಲ್ಲಿ ಅವರ ಮತ್ತು ಮಕ್ಕಳ ವಿಷಯ ಜಾಗ್ರತೆ ತಕ್ಕೊಳ್ಳುವದೆ ಮುಂಬಾಯಿ ಗವರ್ನರರ ಪತ್ನಿಯವಾದ ಲೇಡಿ ವಿಲಿಂಗ್ಡನರವರು ಒಂದು ಫಂಡನ್ನು ಸ್ಥಾಪಿಸಬೇಕೆಂದು ಪ್ರಯತ್ನ ಮಾಡಿ ಈ ಉದ್ದೇಶ ಬಹಳ ಕೊಂಚ ಕಾಲದಲ್ಲಿ ೧೦,೫೦೦ ರೂಪಾಯಿ ಕೂಡಿಸಿರುವರು. ಲೇಡಿ ವಿಲಿಂಗ್ಡನರವರು ಖಾಸಗಿಯಾಗಿ ೫೦೦೦ಕ್ಕಿಂತ ಹೆಚ್ಚಿಗೆ ರೂಪಾಯಿ ಕೂಡಿಸಿರುವರು. ಈ ಉದ್ದೇಶ ಬೋಪಾಲದ ಬೇಗಮ್ಮರವರು ೨೦೦೦ ರೂಪಾಯಿ ದಾನ ಮಾಡಿರುವರು. ಮುಂಬಾಯಿ ಸೆನಿಟರಿ ಇಲಾಖೆಯವರು ಅಲ್ಲಿಯ ಪೇಟೆಯ ಖಾಸಗಿ ಸೂಲಗಿತ್ತಿಯರನ್ನು ಕೂಡಿಸಿ ಹೆಂಗಸರ ಪ್ರಸೂತ ಸಂಬಂಧವಾದ ಸಾರ ಕೊಡುವದೆ ಏರ್ಪಾಡು ಮಾಡಿರುವರು. ಈ ತರಗತಿಗಳಲ್ಲಿ ಈ ಸೂಲಗಿತ್ತಿಯರಿಗೆ ಶಾಸ್ತ್ರರೀತಿಯಾಗಿ ಹೆರಿಸುವ ಕ್ರಮ, ಆರೋಗ್ಯ ಮಾಹಿತಿಗಳು ಹೇಳಿಕೊಡೋಣಾಗುವವು.

ಬಂಗಾಳ ಸ್ಥಳೀಕ ಕಾಂಗ್ರೆಸ್ ಕಮಿಟಿಯವರು ಈ ವರ್ಷ ಕೂಡುವ ಕಾಂಗ್ರೆಸ್ ಸಭೆಗೆ ಮೆಸ್ಸರ್ಸ್ ಎಮ್. ಕೆ. ಗಂಧಿ, ಅಂಬಿಕಚರಣ ಮುಜುಮ್‌ದಾರ್, ಮಜರುಲ್ ಹೇಕ್ಯ, ಭೂಪೇಂದ್ರನಾಥಬಾಸು—ಇವರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಬಹುದೆಂದು ಸಿಫಾರಸು ಮಾಡಿರುವರು.

ಸಿಲ್ಹೆಟ್ಟಿಗೆ ಸೇರಿದ ಸೊನ್ನಗಂಜ್ ಎಂಬ ಹಳ್ಳಿಯಲ್ಲಿ ಜನಗಳು ಗಾಢನಿದ್ರೆಯನ್ನು ಮಾಡುತ್ತಿರುವಾಗ ವಿಪರೀತ ಮಳೆ ಬಂದು ಪ್ರವಾಹಗಳು ಹೆಚ್ಚಿ ಅಲೆಗಳು ೧೫-೨೦ ಅಡಿಗಳ ವರೆಗೆ ಎದ್ದು ಬಹಳ ಅನಾಹುತಕ್ಕೆ ಕಾರಣವಾಗುತ್ತಿತ್ತು. ಅಷ್ಟರೊಳಗೆ ಜನರು ಮರಗಳ ಮೇಲೆ ಹತ್ತಿ ಪ್ರಾಣ ಉಳಿಸಿಕೊಂಡರು. ಅನೇಕ ಗೋಕಾಯಿ ಬೆಳೆಗಳೂ ನಾಶವಾಗಿವೆ. ಸುಮಾರು ೫೦ ಮೈಲು ವಿಸ್ತೀರ್ಣಕ್ಕೆ ಜನರು ಮನೆಗಳಿಲ್ಲದೆ ಅಲೆದಾಡುತ್ತಿರುವರು.

ಲಾಹೋರು ಚೀಫ್ ಕೋರ್ಟಿನಲ್ಲಿ ಜಡ್ಜರಾಗಿದ್ದ ಸರ್ ಪ್ರತುಲಚಂದ್ರ ಚಟರ್ಜಿಯವರು ನಾಭಾ ಸಂಸ್ಥಾನದ ಮಂತ್ರಿಯಾಗಿ ನೇಮಿಸಲ್ಪಟ್ಟಿದ್ದಾರೆ. ಇವರಿಗೆ ತಿಂಗಳಿಗೆ ೩,೦೦೦ ರೂಪಾಯಿಗಳ ವೇತನವನ್ನು ಕೊಡುವದಾಗಿ ತಿಳಿದು ಬಂದಿದೆ.

ಕ್ಯಾಂಬಿಷಿನಲ್ಲಿ ವಿಶೇಷ ಮಳೆ ಸುರಿದು ಸೂರತ್ ಪಟ್ಟಣವು ಉಳಿದದ್ದೇ ದುರ್ಘಟವಾಯಿತು. ಪ್ರವಾಹವು ಊರಿನೊಳಗೆ ಪ್ರವೇಶಿಸಿ ಬಹಳ ನಷ್ಟವನ್ನುಂಟು ಮಾಡಿತು. ಬೀದಿ ಬೀದಿಗಳೆಲ್ಲಾ ೩ ಅಡಿ ನೀರು ನಿಂತುಕೊಂಡು ಹುಡುಗರ ಭೋಜನ ಶಾಲೆಯ ವಠಾರದಲ್ಲಿ ಜನಗಳು ಓಡಾಡುವುದಕ್ಕೆ ಸಹಾ ಆಸ್ಪದವಿಲ್ಲದೇ ಹೋಯಿತು. ಹೊರಗೆ ಹೋಗಿದ್ದ ಒಬ್ಬ ವಿದ್ಯಾರ್ಥಿಯು ಭೋಜನ ಶಾಲೆಗೆ ಬಂದು ಸೇರಲಿಕ್ಕಾಗದೆ ರಾತ್ರಿ ಕಾಲವೆಲ್ಲಾ ಮರದ ಮೇಲೆ ಕಳೆದನು. ಮರುದಿನ ಬೆಳಿಗ್ಗೆ ಒಬ್ಬ ಜೈನರವನು ಅವನನ್ನು ಶಾಲೆಗೆ ತಂದು ಬಿಟ್ಟನು.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಗವರ್ನರರಾದ ಪೆಂಟಲೇಂಡ ಪ್ರಭುಗಳವರು ಇದೇ ಕಳೆದ ತಾ. ೩೦ರಲ್ಲು ಅನಂತಪುರವನ್ನು ಸಂದರ್ಶಿಸಿದರು. ಮುನ್ಸಿಪಾಲ್, ಡಿಸ್ಟ್ರಿಕ್ಟ್ ಬೋರ್ಡು ಪರವಾಗಿ ಬಹುಮಾನ ಪತ್ರಗಳು ಓದಿ ಆದನಂತರ ಪ್ರಭುಗಳವರು ಕಾಲೋಚಿತ ಉತ್ತರವನ್ನು ಕೊಟ್ಟರು. ತಾ. ೧ರಲ್ಲು ಅಲ್ಲಿಯ ಆಸ್ಪತ್ರೆ ಹ್ಯಾಸ್ಕೂಲುಗಳನ್ನು ಸಂದರ್ಶಿಸಿದರು. ಅನಂತಪುರದಿಂದ ಗೂಟಿ, ಗೂಟಿಯಿಂದ ಬಳ್ಳಾರಿಯನ್ನು ಚಿತ್ತೈಸಿರುವರು.

ಮದ್ರಾಸಿನಿಂದ ಸ್ಟ್ರೈಟ್ ಸೆಟ್ಲಮೆಂಟಿನ ಪೆನಾಂಗಿಗೆ ದನಗಳನ್ನು ಕೊಂಡುಹೋಗುವದೆ ಅಲ್ಲಿಯ ಸರಕಾರದವರು ಅಡ್ಡಿ ಮಾಡಿದ್ದರು. ಈ ವಿಷಯ ಮದ್ರಾಸಿನ ಬಿನ್ನಿ ಎಂಡ್ ಕಂಪೆನಿಯವರು ಮದ್ರಾಸ್ ಸರಕಾರದವರೊಡನೆ ವಿಜ್ಞಾಪಿಸಿಕೊಂಡು ಈ ಸಂಬಂಧ ರಿಯಾಯತಿ ತೋರಿಸುವದೆ ಸೆಟ್ಲಮೆಂಟ ಸರಕಾರದವರನ್ನು ಕೇಳಿಕೊಳ್ಳಬೇಕೆಂದು ವಾದಿಸಿದ್ದರು. ಪೆನಾಂಗ್ ಮತ್ತು ಸಿಂಗಪುರಕ್ಕೆ ಈ ಶರ್ತ

ದ ಮೇಲೆ ದನಗಳನ್ನು ಸಾಗಿಸಬಹುದೆಂದು ಈಗ ತಾನೇ ಹುಕುಂ ದೊರಕಿದೆ. ಪ್ರತಿ ಒಂದು ಪಶು ವೆಟರಿನರಿ ಆಫೀಸರರಿಂದ ಪರೀಕ್ಷಿಸಲ್ಪಡಬೇಕು. ೬ ತಿಂಗಳಿಂದೀಚೆಗೆ ಅಂಟುರೋಗಗಳಿಲ್ಲದ ಪ್ರದೇಶದಿಂದ ಈ ದನಗಳು ಬಂದವೆ ಎಂಬ ಸರ್ಟಿಫಿಕೇಟು ಇರತಕ್ಕದ್ದು.

ಮಡಿಕೇರಿ:—ತಾಳತ್ತಮಾನಿ ರಾ| ರಾಮಣ್ಣಯ್ಯ ಗಳವರ ಮಗ ರಾ| ಬಿ. ಆರ್. ಶೇಷಪ್ಪಯ್ಯಗಳವರಿಗೂ ಮಂಗಳೂರು ಕೊಡಿಯಾಲಗುತ್ತ ದೇವಸಿಟ್ರ ಸೊಸೆ ಸೌ| ರತ್ನಾಬಾಯಿಯವರಿಗೂ ಮಂಗಳೂರಲ್ಲಿ ವಿವಾಹವಾದ ಸಂಬಂಧ ತಮ್ಮ ಸ್ವದೇಶವಾದ ಕೊಡಗು ಭಾಗಮಂಡ್ಲದಲ್ಲಿ ಇದೇ ತಾ. ೫ರಲ್ಲು ಮಿತ್ರ ಮಂಡಳಿಯವರಿಗೆ ಒಂದು ಉಪಚಾರವು ಮಾಡೋಣಾಯಿತು. ಈ ಸತ್ಕಾರಕ್ಕೆ ಸಂತೋಷಚಿತ್ತರಾಗಿ ಭಟ್ಟಾಚಾರ್ಯರು ಶಾಸ್ತ್ರಿಗಳು ಮುಂತಾದವರೇ ಇದ್ದು ವೇದ ಮಂತ್ರಗಳೊಡನೆ ವಧೂವರರನ್ನು ಆಶೀರ್ವದಿಸಿ ಮಂತ್ರಾಕ್ಷತೆಯನ್ನು ಕೊಟ್ಟರು. ಸಬ್ ಇನ್ಸ್‌ಪೆಕ್ಟರ್ ರಾ| ಕೆ. ಕರಿಂಬೈಯವರೂ ಕೊಡಗು ದೇಶದ ಟೆಂಪಲ್ ಮೆನೇಜರ್ ಮೊದಲಾದ ಸದ್ಗೃಹಸ್ಥರೂ ಭಾಷಣಗಳನ್ನು ಕೊಟ್ಟು ಬ್ರಾಹ್ಮಣರು, ಕೊಡಗರು, ಕೊಂಕಣಸ್ಥರು, ಬಂಟರು, ಗೌಡುಗಳು ಮುಂತಾದ ಜಾತಿಯವರು ಜಾತಿಭೇದವೆಣಿಸದೆ ಒಟ್ಟಾಗಿ ಕೂಡಿ ಬಂದು ಈ ದಿನದ ಸಂತೋಷದಲ್ಲಿ ಪಾಲುಗಾರರಾದದ್ದು ದೇಶದ ಪ್ರರೋಭಿವೃದ್ಧಿಗೆ ಕಾರಣವಾಯಿತೆಂಬದನ್ನು ಸಭಿಕರಿಗೆ ತಿಳಿಯ ಹೇಳಿದರು.

ಇಲ್ಲಿ ದರೋಡೆ ಕಳವು ಮಾಡುತ್ತಿದ್ದವರ ತಂಡದ ಮುಖ್ಯಸ್ಥರಲ್ಲಿ ಕೆಲವರನ್ನು ಪೋಲಿಸರು ಬಲು ಪ್ರಯತ್ನದಿಂದ ಹಿಡಿದಿರುವರು. ಈ ಪೈಕಿ ಮುಖಂಡರಾದ ಇಬ್ಬರಿಗೆ ಡಿ. ಮೇಜಿಸ್ಟ್ರೇಟರು ೫ ವರ್ಷಗಳ) ಸಜೆಯನ್ನೂ ೫ ಮಂದಿಗೆ ೪ ವರುಷದಂತೆಯೂ ಶಿಕ್ಷೆ ವಿಧಿಸಿದರು. ಮಾನ್ಸಾಡು ದರೋಡೆಯಲ್ಲಿ ೫ ಜನರಿಗೆ ೬ ವರ್ಷದಂತೆಯೂ ಉಳಿದವರಿಗೆ ೫ ವರ್ಷದಂತೆಯೂ ಶಿಕ್ಷೆ ವಿಧಿಸಿದರು ಕೊಡಗಿನ ಎಲ್ಲಾ ಭಾಗದ ಪೋಲಿಸಿನವರು ಏಕ ಕಾಲದಲ್ಲಿ ಪ್ರಯತ್ನ ತೆಗೆದುಕೊಂಡು ಕಳ್ಳರ ಪತ್ತೆ ಮಾಡಿದಕ್ಕಾಗಿ ಕೊಡಗು ನಿವಾಸಿಕರೆಲ್ಲರೂ ಬಹಳ ಸಂತೋಷದಲ್ಲಿರುವರು.

~~~~~

ದಕ್ಷಿಣ ಕನ್ನಡ.

ನೋಟೀಸು.

ಮಂಗಳೂರು ತಾಲೂಕು ಕಾವಳ ಮಾಗಣೆ ಅರಳ ಕ್ಕೊಲ ಗ್ರಾಮದ ಓರ್ಣಿ ಗುಮ್ಮಣ್ಣ ಪೂವಣಿಯರ ಸೊಸೆ ಅಪ್ಪೆ ಯಾನೆ ದೇಜಮ್ಮನಾದ ನಾನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ, ನಾನು ಈ ಗ್ರಾಮದಲ್ಲಿಯೂ ರಾಯಿ ಗ್ರಾಮದಲ್ಲಿಯೂ ಕೂಡ ಹೆಚ್ಚು ಬೇರೇಜು ಕೊಡುವ ಜವೀನಾನುದಾರ್ತಿಯಾಗಿದ್ದರೂ ದಸ್ತತಿಗೆ ಕೂಡ ಬರಹವಿಲ್ಲದೆ ೩ ಗೆರೆಗಳನ್ನು ಮಾತ್ರ ಹಾಕಿಕೊಂಡು ಇದ್ದೆ. ಇನ್ನು ಮುಂದೆ ೩ ಗೆರೆ ಮತ್ತು ನನ್ನ ಎಡಕೈ ಹೆಬ್ಬೆಟ್ಟಿನ ಮೊಹರ ಇಲ್ಲದ ಯಾವ ವಿಧದ ಏನೊಂದು ಕಾಗದ ಪತ್ರಗಳನ್ನು ಸಹ ಯಾರೂ ಮಂಜೂರು ಮಾಡಕೂಡದಾಗಿ ಈ ಮೂಲಕ ತಿಳಿಸಿದ್ದೇನೆ.

||| ಈ ಮೂರು ಗೆರೆ ಅಪ್ಪೆ ಯಾನೆ ದೇಜಮ್ಮನ ರುಜು.

~~~~~

ನೋಟೀಸು.

ಮಂಗಳೂರ ಡಿಸ್ಟ್ರಿಕ್ಟ್ ಮುನ್ಸಿಪ ಕೋರ್ಟಿನಲ್ಲಿ

ದಿವಾಳಿ ಅರ್ಜಿ ನಂಬ್ರ $\frac{8}{1914}$

ಶುಕ್ರಬೈದ್ಯಾ—ಕೃಷ್ಣಬೈದ್ಯನ ಅಳಿಯ—ತಲಪಾಡಿ ಮಾಗಣೆ ಕೊಟೆಕಾರ ಗ್ರಾಮದ ಅಡ್ಕದಲ್ಲಿರುವವ } ದಿವಾಳಿ ಅರ್ಜಿದಾರ.

1. ತ್ಯಾಂಪ ಸೆಟ್ಟಿ—ಮಂಗಳೂರ ಸಬ್ ಡಿವಿಜನಲ್ ಆಫೀಸಿನ ದಫೆದಾರ—ಕೊಡಿಯಾಲಬೈಲು ಗ್ರಾಮ.
2. ಸುಬ್ಬಣ್ಣಯ್ಯ-ಕೇಶವಯ್ಯನ ಮಗ—ಕೋಟೆಕಾರ ಗ್ರಾಮಸ್ಥ.
3. ಬಿ. ಯಂ. ಡಿ. ಸೋಜಾ ಅಲೆಕ್ಸ್ಯಂಡರ ಡಿ'ಸೋಜನ ಮಗ—ಮಂಗಳೂರು ಶ್ಯಾಹಾರ ಬೋಳಾರದಲ್ಲಿರುವವ.
4. ತಿಮ್ಮಯ ಸೆಟ್ಟಿ—ತ್ಯಾಂಪ ಸೆಟ್ಟಿ ಮಗ-ಕೋಟೆಕಾರ ಗ್ರಾಮಸ್ಥ.

} ರೆಸ್ಪಾಂಡೆಂಟರು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ:—ಸದರಿ ಅರ್ಜಿದಾರನು ತನ್ನನ್ನು ಸಾಲ ತೀರಿಸಲಿಕ್ಕೆ ಶಕ್ತಿಯಿಲ್ಲದವನೆಂತ ಆದಾಗಿ ಇನ್ಸಾಲವೆಂಟೆಂತ ತೀರ್ಮಾನಿಸಬೇಕೆಂದು ಸದರಿ ಅರ್ಜಿದಾರನು ಮೇಲಿನ ಅರ್ಜಿ ಕೊಟ್ಟಿರುವದರಿಂದ ಅದರ ವಿಷಯವಾಗಿ ಯಾರಿಗಾದರೂ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಅದನ್ನು ಸದರಿ ಕೋರ್ಟಿನ ಮುಂದೆ ೩೧ನೇ ಜುಲೈ ತಾ. ೨೦ರಲ್ಲು ಜಾಹೀರು ಮಾಡಿಕೊಳ್ಳತಕ್ಕದೆಂದು ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿರುತ್ತದೆ.

6—7—14.

S. Narsing Naik
Pleader for Insolvent Petitioner.

~~~~~

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಒ. ಪಿ. ನಂಬ್ರ $\frac{51}{1914}$.

ರಮಾಬ್ಯಾ ಯಾನೆ ಸರಸ್ವತಿಬ್ಯಾ—ಮೈನರ ಗಾರ್ಡಿಯನ್-ಪಾಣೆಮಂಗಳೂರ ಪಾಂಡುರಂಗ ಭಂಡಾರಿ } ಅರ್ಜಿದಾರಳು.

ಮತ್ತು

ಕೊಂಚಾಡಿ ರಾಮಚಂದ್ರ ಶ್ಯಾನುಭಾಗ ಕೂಡಾ—ಎದ್ರಿರು

ತಾ. ೧೬-೪-೧೯೧೪ರಲ್ಲು ಮಂಗಳೂರು ಶ್ಯಾಹಾರಿನಲ್ಲಿ ಮೃತನಾದ ಕೊಂಚಾಡಿ ವಾಮನ ಶ್ಯಾನುಭಾಗನ ಸಾಲಗಳನ್ನು ವಸೂಲು ಮಾಡುವರೆ ಸದರಿ ಅರ್ಜಿದಾರಳು ಮೇಲ್ಕಂಡ ಕೋರ್ಟಿನಲ್ಲಿ ಮಾಡಿದ ಅರ್ಜಿಯು ಇದೇ ಬರುವ ತಾ. ೧೬—೭—೧೪ಕ್ಕೆ ಪೂರ್ವಾಹ್ನ ಗಂಟೆ ೧೧ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಖಿಗೆ ಇಟ್ಟಿರುತ್ತದೆ. ಸದರಿ ಅರ್ಜಿಯಲ್ಲಿ ಆಕ್ಷೇಪವಿದ್ದವರು ಅವರವರ ಆಕ್ಷೇಪಗಳನ್ನು ಸದರಿ ತಾರೀಕಿಗೆ ಸದರಿ ಕೋರ್ಟಿನಲ್ಲಿ ಜಾಹೀರು ಮಾಡತಕ್ಕದ್ದು.

ಮಂಗಳೂರು
ತಾ. 7—7—14.

A. Varada Rao
Vakil for Petitioner.

~~~~~

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O. P. ನಂಬ್ರ $\frac{59}{1914}$.

ಪಡಂಬೂರ ಸದಾಶಿವರಾವ್ (ಮೈನರ್)—**ಅರ್ಜಿದಾರ.**

ಈತನ ಬಗ್ಗೆ ಕ್ಷೇಮಚಿಂತಕ ತಲಚೇರಿ ರಘುನಾಥಯ್ಯ.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ:—ಮಂಗಳೂರ ಶಹಾರ ಬ್ರಾಹ್ಮಣ ಕೇರಿಯಲ್ಲಿ ಇರುತ್ತಿದ್ದ ಪಡಂಬೂರ ಅನಂತಯ್ಯನವರ ಮಗ ದೇವರಾಯರು ೧೯೧೩ನೇ ಇಸವಿ ಮೇ ತಾ. ೧೭ರಲ್ಲು ಮೃತಪಟ್ಟು ಆತನ ಮೈನರ ಮಗ ಸದಾಶಿವರಾಯನಿಗೋಸ್ಕರ ಕ್ಷೇಮಚಿಂತಕ ತಲಚೇರಿ ರಘುನಾಥಯ್ಯನು ಹೊರಗಿನಿಂದ ಬರುವ ಸಾಲ ವಸೂಲಿ ಬಗ್ಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಈ ಕೋರ್ಟಿಗೆ ಮನವಿ ಮಾಡಿರುತ್ತಾರೆ. ಸದರಿ ಅರ್ಜಿ ತನಖೆಯು ಇದೇ ಜುಲೈ ತಾ. ೨೩ ಗುರುವಾರಕ್ಕೆ ಇಟ್ಟಿರುತ್ತದೆ.

ಮೈನರ ಸದಾಶಿವರಾಯನ ಬಗ್ಗೆ ಕ್ಷೇಮಚಿಂತಕ

ಮಂಗಳೂರು.
ತಾ. 6—7—14. } ತಲಚೇರಿ ರಘುನಾಥಯ್ಯ

~~~~~

ನೋಟೀಸು

—o—

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O. P. ನಂಬ್ರ $\frac{62}{1914}$.

ಬಿ. ರಾಮಯ್ಯ—**ಅರ್ಜಿದಾರ**

ಮತ್ತು

1. ಹೂವಮ್ಮ
2. ಪರಮೇಶ್ವರ
3. ವೆಂಕಮ್ಮ

} ರೆಸ್ಪೊಂಡೆಂಟರು.

ಸದರಿ ಮಂಗಳೂರು ಶ್ಯಾಹಾರಿನಲ್ಲಿ ಕಳೆದ ತಾ. ೨೧-೫-೧೪ರಲ್ಲಿ ಮೃತಪಟ್ಟ ಬಂಟ್ವಾಳ ಬಾಬು ಎಂಬವನ ಸಾಲಗಳನ್ನು ವಸೂಲು ಮಾಡುವರೆ ಸರ್ಟಿಫಿಕೇಟು ಅಪೇಕ್ಷಿಸಿ ಮೃತನ ಮಗನಾದ ಮೇಲ್ಕಂಡ ಅರ್ಜಿದಾರನು ಬರಕೊಂಡ ಅರ್ಜಿ ಬರುವ ಜುಲಾಯಿ ತಾ. ೨೩ನೇಗೆ ತನಖಿಗೆ ಇಟ್ಟಿರುತ್ತದೆ. ಆ ಕುರಿತು ಯಾರೊಬ್ಬರ ಆಕ್ಷೇಪವಿದ್ದರೆ ಅದನ್ನು ಸದರಿ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ಜಾಹೀರು ಮಾಡಿಕೊಳ್ಳತಕ್ಕದ್ದು.

7—7—14.

G. Krishna Rao,
Pleader for Petitioner

~~~~~

ಪುತ್ತೂರು:—ನೆಟ್ಟಣಿಗೆ ಮುಡ್ನೂರು ಗ್ರಾಮದ ರಾಮ ಕೇಕುಣ್ಣಾಯರ ಒಂದು ಚಿನ್ನದ ಉಂಗುರವು ಕಳವಾದ ಮೊಕದಮೆಯಲ್ಲಿ ಸದ್ರಿ ಗ್ರಾಮದ ರಾಮಕೃಷ್ಣ ಪುತ್ತೂರಾಯ ಮತ್ತು ಪರಮೇಶ್ವರಯ್ಯ ಎಂಬವರಿಬ್ಬರು ಆಪಾದಿಸಲ್ಪಟ್ಟು ಡಿವಿಜನಲ್ ಆಫೀಸರರ ಮುಂದೆ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರು. ಈ ಮೊಕದಮೆಯಲ್ಲಿ ಮುದ್ದೈ ಮಗ ಲಕ್ಷ್ಮೀನಾರಾಯಣ ಎಂಬವನು ತಾನೇ ಕಳವಾದ ಉಂಗುರವನ್ನು ಆಲೆಗೆ ಕೊಟ್ಟದ್ದಾಗಿ ಬರೆದಿದ್ದ ಒಂದು ಕೈ ಕಾಗದವು ಡಿಫೆನ್ಸ ಕಡೆಯಿಂದ ಹಾಜರು ಮಾಡಲ್ಪಟ್ಟಿದ್ದಿತು. ಡಿವಿಜನಲ್ ಆಫೀಸರರು ಇದನ್ನು ನಂಬದೆ ೧ನೇ ಆಲೆಗೆ ಮೂರು ತಿಂಗಳು; ೨ನೇ ಆಲೆಗೆ ೨ ತಿಂಗಳುಗಳ ಸಜಾ ವಿಧಿಸಿದರು.

ಕಳೆದ ಮೇ ತಿಂಗಳಲ್ಲಿ ಇಲ್ಲಿಯ ಖಚೇರಿ ಸಮೀಪವಿರುವ ಬಿರ್ಯಾನಿಬ್ಯಾರಿ ಎಂಬವನ ಅಂಗಡಿಯನ್ನು ಪುತ್ತೂರು ಕಸಬಾ ಗ್ರಾಮದ ಖಾದ್ರಿಬ್ಯಾರಿ ಎಂಬವನು ಬೆಂಕಿ ಕೊಟ್ಟು ಸುಟ್ಟದ್ದಾಗಿ ಇಲ್ಲಿಯ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನಕಿ ನಡೆಯುತ್ತಿದ್ದ ಮೊಕದ್ದಮೆಯು ಸೆಶ್ಶನ್ಸಿಗೆ ಕಮಿಟ್‌ಮಾಡಲ್ಪಟ್ಟಿರುವುದು

ಟಪ್ಪಾಲು ಇಲಾಖೆಯ ಸುಪರಿಂಟೆಂಡಂಟ ದೊರೆಗಳವರು ಇದೇ ಕಳೆದ ಜೂನ್ ತಾ ೨೯ರಲ್ಲು ಇಲ್ಲಿಗೆ ತಲುಪಿ ಟಪ್ಪಾಲು ಆಫೀಸು ತನಕಿ ನಡಿಸಿ ತಾ ೧ರಲ್ಲು ಹಿಂದೆರಳಿದರು.

ಅಳತೆ ತೂಕಗಳಿಗೆ ಮೊಹರು ಹಾಕುವ ಸಿಬಂದಿಯವರು ಇಲ್ಲಿಯ ಅಂಗಡಿಗಳ ಅಳತೆಗಳಿಗೆ ಮೊಹರು ಹಾಕುವ ಕೆಲಸ ಪ್ರಾರಂಭಿಸಿರುವರು. ದಕ್ಕ ಅಳತೆಗಳನ್ನು ಇಟ್ಟುಕೊಂಡ ವ್ಯಾಪಾರಸ್ಥರು ನಮ್ಮಲ್ಲಿ ತುಂಬಾ ಇದ್ದು ಜನರನ್ನು ಮೋಸಗೊಳಿಸುತ್ತಿರುವುದರಿಂದ ಮೇಲ್ಪಟ್ಟ ಆಫೀಸರರು ಹೆಚ್ಚಿನ ನಿಗಾ ಕೊಡಬೇಕಾಗಿರುವುದು.

ಬೆಳ್ತಂಗಡಿ —ಬಂಟ್ವಾಳ ಸರ್ಕಲ್ ಇನ್ಸ್‌ಪೆಕ್ಟರರಾದ ಮ ರಾ. ರಾ ಶಾಂತರಾಮರಾಯರು ಜೂನ್ ತಾರೀಕು ೨೯ರಲ್ಲು ಇಲ್ಲಿಗೆ ಚಿತ್ತೈಸಿ ಈ ಸ್ಟೇಶನನ್ನು ಸಂದರ್ಶಿಸಿ ಚಾರ್ಮಾಡಿ ಕಡೆಗೆ ಹೋಗಿರುವರು.

ಮಳೆಗಾಲವು ಪ್ರಾರಂಭವಾಗಿದೆ. ಸುತ್ತುಮುತ್ತಿನ ಹಳ್ಳಿಗಳಲ್ಲಿ ಹುಲಿರಾಯರು ದನಕರುಗಳನ್ನು ನಶಿಸ ಪ್ರಾರಂಭಿಸುತ್ತಾರೆಂದು ವದಂತಿ ಇದೆ.

ಕಾಸರಗೋಡು.—ಮಳೆಗಾಲ ಪ್ರಾರಂಭಿಸಿದಂದಿನಿಂದ ಕಳ್ಳರ ವಾರ್ತೆಯು ಅಲ್ಲಲ್ಲಿ ಕೇಳಸಿಗುತ್ತಿದೆ. ಪೋಲೀಸಿನವರು ಹೆಚ್ಚಿನ ಶ್ರದ್ಧೆಯಿಂದ ಪತ್ತೆ ಮಾಡುವರಾಗಿ ಕೋರುತ್ತೇವೆ. ಪೋಲೀಸಿನವರಿಗೆ ಊರ ಗೃಹಸ್ಥರು ಕೂಡಾ ಈ ಸಂದರ್ಭದಲ್ಲಿ ಸಹಾಯಕರಾಗಿ ವರ್ತಿಸುವುದು ವಿಹಿತವಾಗಿರುವುದು.

ಇಲ್ಲಿಯ ಕೆಲವು ಸಾಮುಕಾರರು ಜಿವಿಣಿ ಎಣ್ಣೆ ಡಬ್ಬಿಯಿಂದ ಎಣ್ಣೆ ತೆಗೆದು ನೀರು ಬೆರಸಿ ಡಬ್ಬಿಯನ್ನು ಮಾರುತ್ತಿರುವರೆಂತ ವಾರ್ತೆ ಇದೆ. ಈ ವಿಷಯ ಸಂಬಂಧಪಟ್ಟ ಅಧಿಕಾರಿಗಳು ನಿಗಾ ಕೊಡುವುದು ಅವಶ್ಯವಾಗಿದೆ.

ಇಲ್ಲಿಯ ಆಸ್ಪತ್ರೆಗೆ ಮಿ. ಸೂನ್ಸರವರು ದಾಕ್ತಾರರಾಗಿ ವರ್ಗಾಯಿಸಲ್ಪಟ್ಟಂದಿನಿಂದ ಆಸ್ಪತ್ರೆಗೆ ಬರುವ ಜನಸಂಖ್ಯೆಯು ಹೆಚ್ಚುತ್ತಿದೆ. ಪರಂತು, ಆಸ್ಪತ್ರೆಯಲ್ಲಿ ಬೇಕಾದ ಔಷದಿಗಳು ಇಲ್ಲದಿರುವುದರಿಂದ ದಾಕ್ತಾರರು ನಾಲ್ಕು ಔಷಧಿಗಳನ್ನು ಬರೆದು ಕೊಟ್ಟರೆ ಮಿಶ್ರ ಮಾಡಲು ಒಂದೆರಡು ಔಷದಿಗಳು ಮಾತ್ರ ದೊರಕುವಂತಾಗಿದೆ. ಆದುದರಿಂದ ತಕ್ಕ ಔಷದಿಗಳನ್ನು ಆಸ್ಪತ್ರೆಗೆ ಒದಗಿಸಿಕೊಡುವಂತೆ ನಮ್ಮ ಮಾನ್ಯ ದಾಕ್ತಾರರು ಮೇಲಾಫೀಸರರನ್ನು ವಿಜ್ಞಾಪಿಸಿಕೊಂಡು ಬಡ ಜನರಲ್ಲಿ ಪ್ರಕಾಶ ಪಡಿಸಿರುವ ತನ್ನ ಪ್ರೀತಿಯನ್ನು ಮತ್ತಷ್ಟು ವಿಸ್ತರಿಸಬೇಕಾಗಿದೆ.

ಶ್ರೀ ವಿವೇಕಾನಂದ ವಾಚಕ ಮಂದಿರದ ಪುಸ್ತಕ ಭಂಡಾರವನ್ನು ವೃದ್ಧಿ ಪಡಿಸಬೇಕೆಂಬದಾಗಿ ಆಲೋಚಿಸಿರುವುದರಿಂದ ಪಟ್ಟಣಿಗರೆಲ್ಲರೂ ತಮ್ಮಿಂದಾದಷ್ಟು ದ್ರವ್ಯ ಸಹಾಯವನ್ನು ಮಾಡಿ ವ ಪುಸ್ತಕಗಳನ್ನು ಇನಾಮಾಗಿ ಕೊಟ್ಟು ಪ್ರೋತ್ಸಾಹಿಸಬೇಕೆಂದು ವಿನಂತಿ ಇದೆ.

ಪರಸ್ಪರ ಸಹಾಯಕ ಸಂಘದ ಪಂಚಾಯತಿ ಮೆಂಬರ ಸಂಖ್ಯೆಯನ್ನು ಏರಿಸುವರೆ ಅಪ್ಪಣೆ ದೊರಕಿರುವದಂತೆ ಈ ಹುಕುಮಿನ ಜಾರಿ ನಡೆಯಿಸುವಂಥವರು ಪ್ರತಿ ಒಂದು ಗ್ರಾಮದಿಂದ ಒಬ್ಬೊಬ್ಬರನ್ನಾದರೂ ಆರಿಸಿ ತೆಗೆಯುವಂತೆ ನೋಡುವದು ಉಚಿತವಾಗಿದೆ.

ಇಲ್ಲಿಂದ ಕೂಡ್ಲು ಮದೂರು ಮೊದಲಾದ ಗ್ರಾಮಗಳಿಗೆ ಹೋಗುವ ಮಾರ್ಗಗಳಿಗೆ ತಿರುಗುವ ಸ್ಥಳಗಳಲ್ಲಿರುವ ನಾದುರುಸ್ಥಿಯನ್ನು ಸರಿ ಪಡಿಸದೆ ಹೋದರೆ ಗಾಡಿಗಳಿಗೆ ಹೆಚ್ಚಿನ ಕಷ್ಟವೇ ಸರಿ

ವಿಕ್ಟೋರಿಯಾ ಇನ್ಶೂರೆನ್ಸ ಕಂಪೆನಿಗೆ ಸೇರಿದ ಪೋಲಿಸಿದಾರರಲ್ಲಿ ಕೆಲವರಿಗೆ ತಮ್ಮ ಹಕ್ಕಿನ ಹಣ ಸಿಗಲಿಲ್ಲವಾಗಿಯೂ ತಾವು ಕಟ್ಟಿದ ಹಣಕ್ಕೆ ರಶೀದಿ ಕೂಡಾ ತಲುಪಲಿಲ್ಲವಾಗಿಯೂ ವಾರ್ತೆ ಇರುವುದರಿಂದ ಇಲ್ಲಿ ಪೋಲಿಸಿದಾರರೊಳಗೆ ಅನುಮಾನಕ್ಕೆ ಕಾರಣವಾಗಿದೆ. ಈ ವಿಷಯ ಸತ್ಯ ಮಾಹಿತಿಯನ್ನು ಯಾರಾದರೂ ತಮ್ಮ ಪತ್ರ ಮೂಲಕ ತಿಳಿಸಿ ಬಡ ಜನರು ಮುಂದಕ್ಕೂ ನಷ್ಟ ಕಷ್ಟಗಳಿಗೆ ಗುರಿಯಾಗದಂತೆ ಮಾಡುತ್ತಿದ್ದರೆ ಕೃತಜ್ಞರಾಗುತ್ತಿದ್ದೆವು

ಹೊಸದುರ್ಗ —ಬಹು ಕಾಲದಿಂದ ಗೋಚರಾವಿಗೆ ಸುರಕ್ಷಿತ ಪಡಿಸಿದ ಹುಲ್ಲುಗಾವಲನ್ನೂ ಬೀಸಣೆ ಹುಲ್ಲು ಬೆಳವಣಿಕೆಗೆ ಉಳಿಸಿದ ಪ್ರದೇಶವನ್ನೂ ಜನರು ಹಕ್ಕಲು ಕೃಷಿಗೋಸ್ಕರ ಕೂಡತೊಡಗಿದ್ದಾರೆ. ಇದರಿಂದ ಬಡ ಜನರಿಗೆ ಅಗತ್ಯವಿರುವ ಮನೆ ಹಾವಣಿ ಹುಲ್ಲು ಇಲ್ಲದೆಯೂ ಜಾನುವಾರುಗಳಿಗೆ ಮೇಯುವದಕ್ಕೆ ಅಸ್ಪದವಿಲ್ಲದೆಯೂ, ಜನಜಾನುವಾರುಗಳು ನಿರಾಲಂಬರಾಗುವದೇ ಸ್ಥಿರವು. ಇಷ್ಟು ಕಲೆಕ್ಟರ ದೊರೆಗಳು ಇದನ್ನು ಮನ್ನಾ ಪಡಿಸಿದರೆ ಬಹಳ ಉಪಕಾರವಾಗುವದು

ಮಳೆಯ ದೆಸೆಯಿಂದ ಪೇಟೆಯಲ್ಲಿಯ ಅಂಗಡಿಗಳ ಎದುರಿನಲ್ಲಿ ಕಸ ಮೊದಲಾದ ಪದಾರ್ಥಗಳು ಕೊಳೆತು ಅಲ್ಲಲ್ಲಿ ಕೂಡಿಕೊಂಡಿದೆ. ಇದನ್ನು ಸರಕಾರದವರಾಗಲೀ ಅಂಗಡಿಗಾರರಾಗಲೀ ತೆಗೆಸಿ ಶುಚಿ ಮಾಡದಿದ್ದರೆ ಜ್ವರ ಮೊದಲಾದ ಸೊಂಕು ರೋಗಗಳು ತಲೆದೋರದಿರಲಾರವು

ಇಲ್ಲಿ ಕೆಲವು ಕಾಲದಿಂದ ಪೋಸ್ಟುಮಾಸ್ಟರರಾಗಿದ್ದ ರಾ। ಚಂದಪ್ಪಶೆಟ್ಟರು ಉಪ್ಪಿಗೆ ವರ್ಗಾಯಿಸಲ್ಪಟ್ಟ ಸಂಗತಿಯು ವಿಷಾದವನ್ನುಂಟು ಮಾಡುತ್ತಲಿದೆ. ಇವರು ಬಹು ಯೋಗ್ಯರೀತಿಯಲ್ಲಿ ಕೆಲಸವನ್ನು ಮಾಡುತ್ತಿದ್ದರಲ್ಲದೆ ಎಲ್ಲಾ ಜನರ ಪ್ರೀತಿಗೆ ಪಾತ್ರರಾಗಿದ್ದರು.

ವಿಟ್ಲ:—ಫಲಮಾರ ನರಶಿಂಹಪ್ಪೈ ಬ್ರಹ್ಮರವರ ಮನೆಯು ಇದೇ ಕಳೆದ ತಿಂಗಳ ತಾ ೬ರಲ್ಲು ಬೆಂಕಿಯ ಪಾಲಾದ ವಾರ್ತೆಯು ತಿಳಿಸೋಣಾಯಿತಷ್ಟೆ. ಆದರೆ ಪಟ್ಟಣದ ಕೆಲವು ಮಹನೀಯರ ಸಹಾಯದಿಂದ ಪುನಃ ಒಂದು ಹೊಸ ಮನೆಯನ್ನು ಕಟ್ಟಿಸುವರೆ ಅನುಕೂಲವಾಯಿತೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ.

ಇಲ್ಲಿಯ ಪಟೇಲ ಕೆಲಸವನ್ನು ನೋಡುತ್ತಿದ್ದ ರಾ। ಸುಂದರ ಭಟ್ಟರವರು ನ್ಯಾಯಪರರಾಗಿಯೂ ಬಡವರ ಮೇಲೆ ಪ್ರೀತಿಯಿಂದಲೂ ತಮ್ಮ ಕೆಲಸವನ್ನು ನಡಿಸುತ್ತಾರಾಗಿ ತಿಳಿದು ಸಂತೋಷವೇ. ಇಂತಹ ನ್ಯಾಯಪರರಾದ ಪಟೇಲರು ಇರುತ್ತಾ ಇತರ ಪಟ್ಟಣಗಳಲ್ಲಿರುವಂತೆ ಇಲ್ಲಿಯೂ ಒಂದು ಗ್ರಾಮಮುನ್ಸೀಫ್ ಕೋರ್ಟು ತೆರೆಯಲು ಏನೊಂದೂ ಅಡ್ಡಿ ಇರದು. ಈ ವಿಷಯ ಜಿಲ್ಲಾ ಮೇಲಾಫಿಸರರು ನಿಗಾ ಕೊಟ್ಟು, ಒಂದು ಗ್ರಾಮಮುನ್ಸೀಫ್ ಕೋರ್ಟನ್ನು ತೆರೆಯುತ್ತಿದ್ದರೆ ಮಹದುಪಕಾರವಾಗುತ್ತಿತ್ತು.

ಕಾಪು:—ಪಾಂಗಾಳ ಹಿಂದು ಎಲಿಮೆಂಟರಿ ಶಾಲೆಯಲ್ಲಿ ಇದೇ ಕಳೆದ ತಿಂಗಳ ತಾ. ೨೯ರಲ್ಲು ಕಾರ್ಕಳ ರೇಂಜಿನ ಉಪಾಧ್ಯಾಯರುಗಳ ಒಂದು ಮಹಾ ಸಭೆಯು ಜರಗಿತು. ಈ ಸಭೆಗೆ ದಕ್ಷಿಣ ಕನ್ನಡಾ ಜಿಲ್ಲೆಯ ಶಾಲೆಗಳ ಅಸಿಸ್ಟಾಂಟ್ ಇನ್ಸ್‌ಪೆಕ್ಟರವರೂ ಉಡುಪಿ ರೇಂಜು ಶಾಲೆಗಳ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರವರೂ ಹಾಜರಿದ್ದರು. ಸಭೆಯು ಮಧ್ಯಾನ್ಹ ೨ ಗಂಟೆಯಿಂದ ೬ ಗಂಟೆ ತನಕ ನಡೆದಿತ್ತು. ಸಭೆಗೆ ಅಧ್ಯಕ್ಷರಾಗಿ ಅಸಿಸ್ಟಾಂಟ್ ಇನ್ಸ್‌ಪೆಕ್ಟರವರೇ ಕುಳಿತಿದ್ದರು. ಸಭೆಯ ಪ್ರಾರಂಭ ಹಿಂದಿನ ಸಭೆಯ ರಿಪೋರ್ಟನ್ನು ಕಾಪು ಬೋರ್ಡು ಶಾಲೆಯ ಹೆಡ್ ಮಾಸ್ಟರರು ಓದಿದರು. ಅಧ್ಯಕ್ಷರು ಮೀನಿನ ವಿಷಯ ಒಂದು ಪಾಠವನ್ನು ಒಂದನೇ ತರಗತಿಗೆ ಮಾದರಿಯಾಗಿ ಕೊಟ್ಟಿದ್ದಲ್ಲದೆ, ಉಪಾಧ್ಯಾಯರು ಶಾಲಾ ಹುಡುಗರ ಆರೋಗ್ಯವನ್ನು ಕಾಪಾಡುವ ಬಗೆ ಹ್ಯಾಗೆ ಎಂಬುದನ್ನು ವಿಶದವಾಗಿ ವಿವರಿಸಿ, ತಾವೇ ತಂದ ಮನುಷ್ಯ ಶರೀರದ ಚಿತ್ರಗಳಲ್ಲಿರುವ ಪ್ರತಿ ಒಂದು ಭಾಗದ ವಿಷಯ ತೋರಿಸಿ ವಿವರಿಸಿದರು. ನಂತರ ಸಬ್-ಅಸಿಸ್ಟಾಂಟ್ ಇನ್ಸ್‌ಪೆಕ್ಟರವರು ತಾವು ತಯಾರಿಸಿದ ನಂಬಾಪಣೆ. ಚಿತ್ರಪಟನ, ಪ್ರಬಂಧಗಳ ಶರ್ಮಿಲಾರನ್ನು ನೆರೆದ ಉಪಾಧ್ಯಾಯರಿಗೆಲ್ಲಾ ಹಂಚಿ ಆ ವಿಷಯಗಳನ್ನು ವಿವರಿಸಿದರು. ನಂತರ ಎಲ್ಲಾ ಶಾಲೆಗಳ ಉಪಾಧ್ಯಾಯರುಗಳು ತಮ್ಮ ಶಾಲೆಯ ಕಂಪೌಂಡಿನಲ್ಲಿ ಬೇರೆ ಬೇರೆ ತರದ ಸಸಿಗಳನ್ನು ಈ ಸಮಯವೇ ನೆಡಬೇಕೆಂದು ಕಲೆಕ್ಟರವರ ಹುಕುಂ ಇದೆಯಾದ್ದರಿಂದ ಆ ವಿಷಯ ಹೆಚ್ಚಿನ ಗಮನ ಕೊಡಬೇಕೆಂದು ತಿಳಿಸಿದರು. ಕೊನೆಗೆ ಅಧ್ಯಕ್ಷರು ಎಲ್ಲಾ ಉಪಾಧ್ಯಾಯರಿಗೆ ಮೇಜಿಕ್ ಲೇಂಟರ್ನನ್ನು ತೋರಿಸಿ ಸಂತೋಷಗೊಳಿಸಿದರು. ಅಲ್ಲದೆ ಬರುವ ಸಭೆಯು ಕಟಪಾಡಿ ಮಿಶನ್ ಶಾಲೆಯಲ್ಲಿ ಆಗೋಸ್ತು ತಿಂಗಳಲ್ಲಿ ಜರಗುವದಾಗಿ ತಿಳಿಸಿ ಸಭೆಯು ಕೊನೆಗಾಣಿತು. ಅಧ್ಯಕ್ಷರು ಆ ದಿನವೇ ಮಂಗಳೂರಿಗೆ ತೆರಳಿರುವರು.

ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರವರು ಪಡುಬಿದ್ರೆ, ಎರ್ಮಾಳ, ಕಾಪು ಮುಂತಾದ ಶಾಲೆಗಳನ್ನು ಪರೀಕ್ಷೆ ಮಾಡುವ ಉದ್ದೇಶ ಇತ್ತಲಾಗೆ ಇರುವರು.

ಕೆಲವು ಪಂಚಮ ಜಾತಿಯವರು ಕೇಳಿದ ದರಖಾಸ್ತು ಅರ್ಜಿಯನ್ನು ಬಹಳ ಕಾಲದ ವರೇಗೆ ಇಟ್ಟುಕೊಂಡದ್ದರ ವ ಆಕ್ರಮಣ ಕಟ್ಟೋಣ ಕಟ್ಟಿಸಿದ್ದರ ಕುರಿತು ರಿಪೋರ್ಟು ಮಾಡದೆ ಇದ್ದ ಕಾರಣದಿಂದ ಇಲ್ಲಿಯ ಮಾಗಣೆ ಶ್ಯಾನುಭಾಗರಾದ ಪಿ. ವೆಂಕಟಕೃಷ್ಣರಾಯರನ್ನು ಕೆಲಸದಿಂದಲೇ ನಿವೃತ್ತಿ ಪಡಿಸಿರುತ್ತದೆಂತಲೂ ಉಳಿಯಾರುಗೋಳಿಗ್ರಾಮ ಪಟೇಲರಾದ ಕುದ್ದು ಸೆಟ್ಟಿಗೆ ೬ ತಿಂಗಳು ಅಮಾನತು ಮಾಡಿರುತ್ತದೆಂತಲೂ ಕುಂದಾಪುರ ಡಿವಿಜನಲ್ ಆಫೀಸರವರಿಂದ ಹುಕುಂ ಬಂದಿದೆಯಾಗಿ ಕೇಳುತ್ತೇವೆ.

ಮಂಗಳೂರು.

ಮದ್ರಾಸ್ ಗವರ್ನರ ಪ್ರಭುಗಳವರು ಇದೇ ಬರುವ ಒಕ್ಟೋಬರ ತಾ. ೩೦ರಲ್ಲು ಮಂಗಳೂರಿಗೆ ಚಿತ್ತೈಸುವರು. ಪ್ರಭುಗಳವರಿಗೆ ಬಿನ್ನಹ ಪತ್ರಗಳನ್ನು ಅರ್ಪಿಸಲಿಚ್ಛಿಸುವ (Official bodies) ಉದ್ಯೋಗ ಮಂಡಲಿಯವರು ಅಂತಹ ಬಿನ್ನಹ ಪತ್ರಗಳ ಪ್ರತಿಯನ್ನು ಕಲೆಕ್ಟರ ದೊರೆಗಳ

ವರಿಗೆ ಆಗೋಸ್ತು ತಿಂಗಳ ತಾ. ೭ರ ಒಳಗೆ ಕಳುಹಿಸಿ ಕೊಡತಕ್ಕದ್ದು. ಪ್ರಭುಗಳವರಿಗೆ ವಿಜ್ಞಾಪನೆ ಮಾಡಲಿಚ್ಛಿಸುವ ಪ್ರಜಾಜನ ಮಂಡಲಿಯುವರು ಈ ಸಂಗತಿಯನ್ನು ಕಲೆಕ್ಟರ ದೊರೆಗಳವರಿಗೆ ಆಗೋಸ್ತು ತಿಂಗಳ ತಾ. ೭ರ ಒಳಗೆ ತಿಳಿಸಿ ತಾವು ಚರ್ಚೆಮಾಡಲಿಕ್ಕಿರುವ ವಿಷಯಗಳ ಪಟ್ಟಿಯನ್ನೂ ಕಳುಹಿಸಿಕೊಡತಕ್ಕದೆಂಬದಾಗಿ ಜಿಲ್ಲಾ ಕಲೆಕ್ಟರ ದೊರೆಗಳವರು ಪ್ರಕಟಿಸಿರುವರು.

೧೯೧೪ನೇ ಇಸವಿ ಅಕ್ಟೋಬರ ೧ನೇ ತಾರೀಕಿಗೆ ಆರಂಭವಾಗಿ ೧೯೧೫ನೇ ಇಸವಿ ಸಪ್ಟಂಬರ ೩೦ನೇ ತಾರೀಕಿಗೆ ಅಂತ್ಯವಾಗುವ ಗುತ್ತೆಯ ಬಗ್ಗೆ ಈ ಜಿಲ್ಲೆಯ ಸೇಂದಿ ಅಂಗಡಿಗಳು ಕೆಳಗೆ ಕಾಣಿಸಿದ ತಾರೀಕುಗಳಲ್ಲಿ ಪತ್ತಸ್ಥಳಗಳಲ್ಲಿ ಬಹಿಟವಾಗಿ ಏಲಂ ಮಾಡಲ್ಪಡುವವು. ತಾ ೩ನೇ ಆಗೋಸ್ತು ಮಂಗಳೂರಲ್ಲಿ ಮಂಗಳೂರು ಡಿವಿಜನಲ್ ಆಫೀಸರರಿಂದ, ತಾ ೧೦ನೇ ಆಗೋಸ್ತು ಕಾಸರಗೋಡಿನಲ್ಲಿ, ತಾ ೧೪ರಲ್ಲು ಹೊಸದುರ್ಗ, ಶನಿವಾರ ೧ನೇ ಆಗೋಸ್ತು ಪುತ್ತೂರು, ತಾ. ೭ನೇ ಆಗೋಸ್ತು, ಬೆಳ್ತಂಗಡಿ, ಪುತ್ತೂರು ಡಿವಿಜನಲ್ ಆಫೀಸರರಿಂದ, ತಾ ೬ನೇ ಆಗೋಸ್ತು ಉಡುಪಿ, ತಾ. ೪ನೇ ಆಗೋಸ್ತು ಕುಂದಾಪುರ, ತಾ. ೧೩ನೇ ಆಗೋಸ್ತು, ಕಾರ್ಕಳ, ಕುಂದಾಪುರ ಡಿವಿಜನಲ್ ಆಫೀಸರರಿಂದ ಏಲಂ ಮಾಡೋಣಾಗುವವು.

ಮರಗಳ ಮುತ್ರ್ಪೆ ಫೀಸು ಸರಕಾರದವರಿಂದ ಸೇಕಡಾ ೬೩।೭ ಪ್ರಕಾರ ಏರಿಸಲ್ಪಟ್ಟಿರುವುದು. ತೆಂಗಿನ ಮರ ೧ಕ್ಕೆ ರೂ ೩, ಬೈನಿಮರ (ರೂ. ೭. ಪ್ರತಿ ಅರ್ಧ ವರ್ಷಕ್ಕೆ) ತಾಳೇಮರ ರೂ. ೨, ದಡಸಾಲ್‌ಮರ ರೂ ೧ (ಇಡೀ ವರ್ಷಕ್ಕೆ) ಈ ದರಗಳಲ್ಲಿ ತೆರಲ್ಪಡತಕ್ಕದ್ದು.

ಕಾಸರಗೋಡು ಮಿಶ್ಶನ್ ಶಾಲಾ ಮೆನೇಜರರಾಗಿರುವ ರೆವರೆಂಡ್ ಸ್ವೈಕರ್ಟ್ ದೊರೆಗಳವರು ಕಾಸರಗೋಡಿನ ಆನರರಿ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ.

ಮಾಜಿ ರಾ ಎಮ್ ಗೋಪಾಲರಾಯರ ಬದಲಿಗೆ ರಿಟಾಯರ್ಡ ಡ್ಯುಪಿಟಿ ಕಲೆಕ್ಟರರಾದ ರಾ ವರ್ಕಾಡಿ ರಾಮರಾಯರು ಮಂಗಳೂರಿನ ಸ್ಪೆಶ್ಯಲ್ ೧ನೇ ಕ್ಲಾಸ್ ಆನರರಿ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ.

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗ್ ತಾ ೬ನೇ ಮಂಗಳವಾರ ಕೂಡಿ ಬಂತು. ಈ ಸಭೆಯಲ್ಲಿ ಮುಖ್ಯವಾಗಿ ಡಿಸ್ಟ್ರಿಕ್ಟ ಇಂಜಿನಿಯರರಿಂದ ಸಂಕ ಇತ್ಯಾದಿಗಳ ಖರ್ಚು ಬಗ್ಗೆ ಕಳುಹಿಸಲ್ಪಟ್ಟ ಅಂದಾಜು ಪಟ್ಟಿಯೂ ಲೋಕಲ್ ಫಂಡ್ ರಿಪೋರ್ಟೂ ಮಂಜೂರಾತಿಯನ್ನು ಹೊಂದಿರುವುದು. ಮಂಗಳೂರಿಂದ ಆಗುಂಬೆ ಮಾರ್ಗವಾಗಿ ಮೈಸೂರಿಗೆ ಹೋಗುವ ದಾರಿಯಲ್ಲಿರುವ ಕಲಕಳ ಸಂಕದ 'ಪೀಯರ'ನ್ನು ಬಲಪಡಿಸುವರೆ ೧೦೪೦ ರೂಪಾಯಿ, ಉಡ್ಪಿ ಬೋರ್ಡು ಹುಡುಗಿಯರ ಶಾಲಾ ಕಟ್ಟೋಣದ ಬಗ್ಗೆ ರೂ ೨೪೫೦, ಉಳ್ಳಾಲ–ಪಾತ್ತೂರು ರಸ್ತೆಯನ್ನು ಕಡಿಸುವರೆ ೫೦೦೦ ರೂಪಾಯಿ, ಫಾದರ್ ಮುಲ್ಲರ್ಸರ ಆಸ್ಪತ್ರೆಗೆ ಅಗ್ರವಾಗಿರುವ ಕುಷ್ಟ ರೋಗಿಗಳ ಚಿಕಿತ್ಸೆಯ ಸಹಾಯ ಬಗ್ಗೆ ರೂ. ೫೦೦, ಚಾರ್ಮಾಡಿ, ಸಂಪಾಜೆ ದಾರಿಗಳು ಪೂರ್ಣವಾಗಿ ಹಾಳಾಗಿರುವುದರಿಂದ ಆ ರಸ್ತೆಯನ್ನು ಕಲ್ಲು ಹಾಕಿ ಸರಿಪಡಿಸುವರೆ ೨೬,೦೦೦ ರೂಪಾಯಿ; ಇನ್ನು ಇತರ ಕೆಲವು ಸಂಕ ವ ರಸ್ತೆಗಳಿಗೂ ಹೆಚ್ಚಿನ ಹಣವು ಸೆಂಕ್ಷನ್ ಮಾಡಲ್ಪಟ್ಟಿರುವುದು.

ಕಳೆದ ಮಂಗಳವಾರ ದಿವಸ ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ ವರದೇಂದ್ರ ತೀರ್ಥಸ್ವಾಮಿಯವರ ಪುಣ್ಯತಿಥಿ ದಿನ ಇಲ್ಲಿಯ ಕೆಲವು ಸ್ವಜಾತಿ ಯುವಕರು ಬಡಬಗ್ಗರಿಗೆ ೫ ಮುಡಿಅಕ್ಕಿಯನ್ನು ಹಂಚಿ, ಮಧ್ಯಾಹ್ನ ಬ್ರಾಹ್ಮಣ ಸಂತರ್ಪಣೆ, ಉತ್ಸವ, ರಾತ್ರೆ ಹರಿಕೀರ್ತನ ಪೂಜಾದಿಗಳನ್ನು ಸಾಂಗವಾಗಿ ಮಾಡಿಸಿದರು.

ಕಳೆದ ತಿಂಗಳಲ್ಲಿ ಮುನಿಸಿಪಾಲಿಟಿಯಲ್ಲಿ ಒಟ್ಟಿಗೆ ೧೯೨ ಜನನ, ೧೫೬ ಮರಣಗಳಾಗಿರುವವು.

ಇದೇ ತಾ ೬ರ ವರೆಗೆ ಇಲ್ಲಿ ೫೭ ಅಂಗುಲ ಮಳೆ ಬಿದ್ದಿರುವುದು. ಕಳೆದ ವರ್ಷ ಈ ಕಾಲಕ್ಕೆ ೪೭ ಇಂಚು ಮಳೆ ಮಾತ್ರ ಬಿದ್ದಿತ್ತು.

ಉಳ್ಳಾಲ ಹಯ್ಯಾತುಲ್ಲಾ ಇಸ್ಲಾಮ್ಸ್ ಸಭೆಯವರು ಚಕ್ರವರ್ತಿಯವರ ಜನನ ದಿನ ಅವರಿಗೆ ದೀರ್ಘಾಯುಷ್ಯವನ್ನು ಬಯಸಿ ವ್ಯಾಸರಾಯರ ಮೂಲಕ ತಂತೀ ಕಳುಹಿಸಿದ್ದರು. ಇದಕ್ಕೆ ಉತ್ತರವಾಗಿ ನಿಮ್ಮ ಆಶೀರ್ವಚನಗಳಿಗೆ ಚಕ್ರವರ್ತಿಯವರು ಕೃತಜ್ಞರಾಗಿದ್ದಾರೆ ಎಂಬ ಉತ್ತರವು ಬಂದಿರುವುದು.

ಕಂಕನಾಡಿಯಲ್ಲಿ ಒಂದು "ಪಬ್ಲಿಕ್‌ವೆಲ್" ಎಂಬ ಸಾರ್ವಜನಿಕ ಉಪಯೋಗಕ್ಕಾಗಿ ಕಟ್ಟಿಸಲ್ಪಟ್ಟ ಸರಕಾರದ ಬಾವಿ ಇದೆ. ಆ ಊರಜನರಿಗೆ ನೀರಿನ ಕೊರತೆ ಇರುವುದರಿಂದ ಆ ಪರಾರದವರೆಲ್ಲರೂ ಆ ಬಾವಿಯಿಂದಲೇ ನೀರು ಕೊಂಡುಹೋಗಬೇಕು. ಪರಂತು ಈಗ ಕೆಲವು ಸಮಯದಿಂದ ಮುನಿಸಿಪಾಲಿಟಿ ತೋಟಿಗಳು ಅಲ್ಲಿ ಕೂಡಿ ಬಾವಿಯ ದಂಡೆಯ ಮೇಲೆ ಕುಳಿತು ತಲೆಯ 'ಹೇನ್ನು' ನೋಡುವುದು ಇತ್ಯಾದಿ ಕೆಲಸಗಳಿಂದ ಬಾವಿಯನ್ನು ಹೊಲಸು ಮಾಡುತ್ತಿರುವುದರಿಂದ ಆ ಸ್ಥಳದವರು ಭಾವಿಯ ನೀರು ತೆಗೆಯಲು ಹೇಸಿ, ನೀರಿಗಾಗಿ ಪೇಚಾಟಪಡುತ್ತಿದ್ದಾರೆಂತ ಒಬ್ಬ ಬಾತ್ಮೀದಾರರು ತಿಳಿಸಿರುವರು. ಈ ವಿಷಯ ಸಂಬಂಧಪಟ್ಟ ಆಫೀಸರರು ನಿಗಾ ಕೊಡಬೇಕಾಗಿದೆ.

ಬಲ್ಮಠ ಗೇಟಿನಿಂದ ಕಲೆಕ್ಟರ ದೊರೆಗಳ ಗೇಟಿನವರೇಗೆ ಎರಡು ಬದಿಗಳಲ್ಲಿಯೂ ಇರುವ ಸಾಲುಮಾರಿನ ಗೋಳಿ ಮರಗಳು ಕುಂಬಾಗಿ ಈ ಪೈಕಿ ಎರಡು ಬಿದ್ದು ಹೋಗಿದೆಯೆಂದೂ ಉಳಿದ ಮರಗಳು ಕೂಡಾ ಕುಂಬಾಗಿರುವುದರಿಂದ ದಾರಿಗರಿಗೆ ಅಪಾಯಕರವಾಗಿ ಪರಿಣಮಿಸಬಹುದಾದ್ದರಿಂದ ಮುನಿಸಿಪಾಲಿಟಿಯವರು ನಿಗಾಕೊಡಬೇಕೆಂದೂ ಕಳೆದ ಒಂದು ಸಂಚಿಕೆಯಲ್ಲಿ ತಿಳಿಸಿದ್ದೇವಷ್ಟೆ. ಪರಂತು, ಈ ವರೆಗೆ ಮುನಿಸಿಪಾಲಿಟಿಯವರು ಈ ಮರಗಳ ವ್ಯವಸ್ಥೆ ಮಾಡದೆ ಹೋದದರಿಂದ ಈ ವಾರದಲ್ಲಿ ಅದೇ ಸಾಲಿನಲ್ಲಿ ಇನ್ನೊಂದು ಮರದ ದೊಡ್ಡ ಕೊಂಬೆಯು ಮೇಲಿಂದಲೇ ಮುರಿದು ಬಿದ್ದಿರುವುದು. ಈ ಕೊಂಬೆಯು ಮುರಿದಲ್ಲೇ ಕುಂಬಾಗಿರುವುದು. ಆದುದರಿಂದ, ಇನ್ನಾದರೂ ಮುನಿಸಿಪಾಲಿಟಿಯವರು ಈ ಸಾಲುಮರಗಳನ್ನು ಪರೀಕ್ಷಿಸಿ, ದಾರಿಗೆ ಬಾಗಿರುವ ಹುಳತಾಗಿದ ಮರಗಳನ್ನು ಕಡಿಸಿ, ಕಡಿಸಿದ ಮರಗಳ ಬದಲಿಗೆ ಈ ಮಳೆಗಾಲದಲ್ಲೇ ಹೊಸ ಸಸಿಗಳನ್ನು ನೆಡುವುದು ವಿಹಿತವಾಗಿದೆ.

ಉಡ್ಪಿಗೆ ಸೇರಿದ ಹೆರ್ಗಾ ಗ್ರಾಮದ ಒಂದು ಸರಾಬು ಅಂಗಡಿಗೆ ಬೆಂಕಿ ಇಟ್ಟನೆಂಬದಾಗಿ ಉಡ್ಪಿ ಸಬ್ ಮೇಜಿಸ್ಟ್ರೇಟರಿಂದ ಇ. ಪಿ. ಕೋಡಿನ ೪೩೬ನೇ ಪ್ರಕರಣದ ಮೇಲೆ ಸೆಶ್ಶನ್ಸಿಗೆ ಕಮಿಟ್ ಮಾಡಲ್ಪಟ್ಟ ದಾನಿಯೇಲ್ ಮಸ್ಕರೇಂಜನು ತಪ್ಪಿತಸ್ಥನಲ್ಲವೆಂಬದಾಗಿ ಎಸ್ಸೆಸ್ಸರುಗಳು ಅಭಿಪ್ರಾಯಪಟ್ಟಿದ್ದರಿಂದ ಜಡ್ಜರು ಅವನನ್ನು ಖುಲಾಸುಪಡಿಸಿದರು.

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ನಿನ್ನೆಯ ಮೈಲ್ ಬಂಡಿಯಲ್ಲಿ ಮದ್ರಾಸಿನಿಂದ ಸರ್ಜನ್ ಜನರಲ್ ದೊರೆಗಳವರೂ ಸೆನಿಟರಿ ಕಮಿಷನರ್ ದೊರೆಗಳವರೂ ಇಲ್ಲಿಗೆ ಬಂದಿರುವರು.

ಇಂಡಿಯನ್ ಎಡ್ಯುಕೇಶನಲ್ ಸರ್ವಿಸಿದ ಮೆ। ಜೆ. ಎಮ್. ಹಂಟರ್ ದೊರೆಗಳವರು ರಜೆ ತಕ್ಕೊಂಡಿರುವುದರಿಂದ ಅವರ ಬದಲಿಗೆ ಇಲ್ಲಿಯ ಗವರ್ನಮೆಂಟ ಕಾಲೇಜಿನ ಪ್ರಿನ್ಸಿಪಾಲರು ವ ಪ್ರೊವಿನ್ಸಿಯಲ್ ಎಡ್ಯುಕೇಶನಲ್ ಸರ್ವಿಸಿನ ಮೆಂಬರರಾಗಿರುವ ಮೆ। ಎಸ್. ಮೆಲಿಮ್ ದೊರೆಗಳವರು ನೇಮಿಸಲ್ಪಟ್ಟಿರುವರು.

ಇಲ್ಲಿಯ ಡಿಸ್ಟ್ರಿಕ್ಟ್ ಸರ್ಜನರಾಗಿರುವ ಕೆಪ್ಟನ್ ಕರ್ಕ್‌ವೂಡ್ ದೊರೆಗಳವರಿಗೆ ಇದೇ ತಾ ೧೩ರಿಂದ ಒಂದು ತಿಂಗಳ ಪ್ರಿವಿಲೆಜ್ ರಜೆ ಕೊಡಲ್ಪಟ್ಟಿರುವುದು.

ಮ. ರಾ ರಾ. ವರ್ಕಾಡಿ ರಾಮರಾಯರು, ರಾ। ನಗರ ದಾಮೋದರ ಶ್ಯಾನುಭಾಗರು, ರಾ। ಮೊಕ್ತೇಸರ ರಂಗಪ್ಪೈಗಳು ಮೊದಲಾದವರು ಕಾಶೀಮಠದ ಶ್ರೀ ಸ್ವಾಮಿಗಳವರ ದರ್ಶನಾರ್ಥವಾಗಿ ಇಲ್ಲಿಂದ ಬೊಂಬಾಯಿಗೆ ನಾಳೆ ದಿವಸ ಹೊರಡುವರು.

ಶಾಲೆಗಳ ಪರಾರದಲ್ಲಿ ವ ಆಡುವ ಸ್ಥಳಗಳಲ್ಲಿ ವಿದ್ಯಾರ್ಥಿಗಳು ಬೀಡಿ ಸಿಗರೇಟು ಸೇದದ ಹಾಗೆ ಕಟ್ಟಾಜ್ಞೆಮಾಡಬೇಕೆಂದು ಮದ್ರಾಸ್ ಸರಕಾರದವರು ವಿದ್ಯಾ ಖಾತೆಯ ಡಿರೆಕ್ಟರರವರನ್ನು ಕೇಳಿಕೊಂಡಿರುವರು.

ದಕ್ಷಿಣಕನ್ನಡಾ ಜಿಲ್ಲಾ ಕಲೆಕ್ಟರರ ಆಫೀಸು.— ಆಕ್ಟಿಂಗ್ ೧ನೇ ಗ್ರೇಡ್ ರೆವಿನ್ಯು ಇನ್ಸ್‌ಪೆಕ್ಟರ್ ಮೆ। ಸಿ. ವ್ಯಾಸರವರ ಸ್ಪೆಶ್ಯಲ್ ಡ್ಯೂಟಿ ತೀರಿದಂದಿನಿಂದ ಅವರಿಗೆ ೧ ತಿಂಗಳ ಪ್ರಿವಿಲೆಜ್ ರಜೆ ಕೊಡಲ್ಪಟ್ಟಿರುವುದು.

೨ನೇ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರ್ ರಾ। ಎಮ್. ಹರಿ ಕಾಮತರವರು ಮೆ। ಸಿ. ವ್ಯಾಸರ ಬದಲಿಗೆ ರೂ. ೪೦ರ ೧ನೇ ಗ್ರೇಡ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು.

ಮೆ। ಸಿ. ವ್ಯಾಸರವರ ಪ್ರಿವಿಲೆಜ್ ರಜೆಯು ತೀರಿದ ನಂತರ ಪುತ್ತೂರು ಫಿಕಿಸಿಗೆ ವರ್ಗಾಯಿಸಲ್ಪಟ್ಟಿರುವರು.

ಮಂಗಳೂರು ತಾಲೂಕು ಆಫೀಸಿನ ಹೆಡ್ ಕ್ಲಾರ್ಕರಾಗಿರುವ ರಾ। ಎಮ್. ಅಣ್ಣಪ್ಪ ಕಾಮತರು ೧ ತಿಂಗಳ ಪ್ರಿವಿಲೆಜ್ ರಜೆ ತಕ್ಕೊಂಡಿರುವುದರಿಂದ ೨ನೇ ಕ್ಲಾರ್ಕ ರಾ। ಎನ್. ರಾಘವೇಂದ್ರರಾಯರು ರೂ ೩೫ರ ಹೆಡ್ ಕ್ಲಾರ್ಕರಾಗಿಯೂ ಟೌನ್‌ಮೇಜಿಸ್ಟ್ರೇಟ್‌ಕೋರ್ಟಿನ ಹೆಡ್‌ಕ್ಲಾರ್ಕ್ ರಾ। ಎಸ್. ವೆಂಕಪ್ಪರವರು ರೂ. ೩೦ರ ತಾಲೂಕು ಆಫೀಸಿನ ೨ನೇ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು.

ವಿವಿಧ ವಿಷಯ.

ಹಣವನ್ನು ವಿಶೇಷವಾಗಿ ಪ್ರೀತಿಸುತ್ತಿದ್ದ ಒಬ್ಬ ಲೋಭಿಯು ಒಂದು ದಿನ ಪಾದ್ರಿ ಸಾಹೇಬರನ್ನು ಕಂಡು, "ಸ್ವಾಮಿ, ನನಗೆ ಸ್ವಲ್ಪ ಸಮುದ್ರ ಪ್ರಯಾಣ ಮಾಡಬೇಕೆಂಬ ಆಶೆಯುಂಟು. ಪರಂತು, ಆಗಬೋಟಿನಲ್ಲಿ ಕೂತುಕೊಳ್ಳುತ್ತಲೇ ವಾಂತಿಯಾಗುತ್ತದೆ ಏನು ಮಾಡಲಿ?" ಅಂದನು. ಪಾದ್ರಿಸಾಹೇಬರು, "ಒಂದು ಚಿಕ್ಕದಾದ ಬೆಳ್ಳಿಯ ನಾಣ್ಯವನ್ನು ನುಂಗಿ ಬಿಡು. ನೀನು ನುಂಗಿದ ಬೆಳ್ಳಿ ಹೊರಗೆ ಬರಲಿಕ್ಕಿಲ್ಲವಾದುದರಿಂದ ನಿನಗೆ ವಾಂತಿಯಾಗದು" ಅಂದರು.

ಮುಳಿಯಿಲ್‌ರವರ ದಿವ್ಯೌಷಧಗಳು.

ಮಸ್ತಕಾಮೃತ ತೈಲ—ಕುಪ್ಪಿ 1ಕ್ಕೆ ಕ್ರಯ 10 ಆಣೆ. ಇದು ಎಲ್ಲಾ ತರದ ಶಿರೋರೋಗ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಬಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ.

…………………ಮಸ್ತಕಾಮೃತ ತೈಲವನ್ನು ಕಳೆದ ಐದು ವರುಷಗಳಿಂದ ಉಪಯೋಗಿಸಿಕೊಳ್ಳುತ್ತಿರುವ್ಯದರಿಂದ ನನ್ನ ಮುದೀ ಮೆದುಳು ಯೌವ್ವನ ಪ್ರಾಯದಲ್ಲಿರುವದು ಈ ದಿವ್ಯ ತೈಲದ ಹೊರ್ತಾಗಿ ವಿನಹಾ ನಾನು ಕೆಲಸವನಾದಲಾರೆನು; ನನ್ನ ನೇತ್ರೇಂದ್ರಿಯಗಳು ಪರಿಶುದ್ಧವು.

ರೆವೆರೆಂಡ್ ಇ. ಸೋನ್ಸ್,
ಮುಲ್ಕಿ.

ತಾ. 15—4—13.

ಮುಳಿಯಿಲ್ಸ್ ಹೇರ್ ಓಯ್ಲ್—ಕ್ರಯ 12 ಆಣೆ. ಕೂದಲಿಗೆ ಅಮೃತದಂತಿರುವ ನಿಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಇನ್ನೊಂದು ಕುಪ್ಪಿ ವಿ. ಪಿ. ಮೂಲಕ ರವಾನಿಸಿರಿ.

ಮಿಸಿಸ್. ವೈ. ಕುರಿಯಾನ್,
ಗ್ರೀನ್‌ವಿಲ್ಲಾ, ಕಲ್ಲಿಕೋಟೆ.

ತಾ. 23—5—13.

…………ಮುಳಿಯಿಲ್ಸ್ ಹೇರ್ ಓಯ್ಲ್ ಉಪಯೋಗಿಸಿದಂದಿನಿಂದ ನನ್ನ ತಲೆನೋವು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ನಿಬಿಡವಾಗಿ ಬೆಳೆದಿರುವವು ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ. ಇನ್ನೊಂದು ಡಜನ್ ಕುಪ್ಪಿಗಳನ್ನು ಆದಷ್ಟು ತ್ವರ್ಯದಲ್ಲಿ ರವಾನಿಸಿರಿ.

ಮಿಸ್. ಎಸ್. ಸೋನ್ಸ್,
ಸ್ಕೂಲು ಮಿಸ್ಟ್ರೆಸ್, ಮಂಗಳೂರು.

21ನೇ ಒಕ್ಟೋಬರ 1913.

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ. ಎಲ್ಲಾ ತರದ ಛಳಿ ಜ್ವರಕ್ಕೆ ರಾಮಬಾಣದಂತಿದೆ.

ಚತುರ್ಥಿ ಮಾತ್ರೆಯನ್ನು ತಕ್ಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ ಇದು ಒಳ್ಳೇ ಗುಣಕರವೆಂಬದಾಗಿ ಹೇಳುವದರ ಅನುಮಾನವಿಲ್ಲ.

ಎ. ಪೊಕ್ರು ಹೆಗ್ಗಡೆ,
ಕುಕ್ಕುಛೆ, ಕಾರ್ಕಳ.

ತಾ. 13—6—13.

ವಯೊಲೆಟ್ ಹೇರ್ ಓಯ್ಲ್—ಸುವಾಸನೆಯುಳ್ಳ ಈ ತೈಲದ ಪ್ರಯೋಗದಿಂದ ತಲೆವೇದನೆಯು ಗುಣಪಡುವದು. ಕಾಯಂ ವ ಕಠಿಣ ತರದ ತಲೆನೋವಿನಿಂದ ಪೀಡಿತರಾಗಿರುವವರಿಗೆ ನಿಮ್ಮ ವಯೊಲೆಟ್ ಹೇರ್ ಓಯ್ಲಿಗಿಂತ ಅತ್ಯುತ್ತಮ ತೈಲವು ಬೇರೆಯಿಲ್ಲ ಎಂದೆಣಿಸುತ್ತೇನೆ. ಅತಿ ಘೋರವಾದ ತಲೆನೋವಿನಿಂದ ಶ್ರಮೆಪಡುತ್ತಿದ್ದ ನನ್ನ ಮೊಮ್ಮಗಳಿಗೆ ತಮ್ಮಿಂದ ತಕ್ಕೊಂಡ 2 ಕುಪ್ಪಿ ಎಣ್ಣೆಯು ಅತಿರೇಕ ಸೌಖ್ಯವನ್ನುಂಟುಮಾಡಿರುತ್ತದೆ. ಅದಿಲ್ಲದೆ ಅವಳು ಇರಲಾರಳು. ಜೆಟ್ಟಿನ ರೋಗಿಗಳ ಪ್ರಯೋಜನಕ್ಕಾಗಿ ದೇವರು ತಮ್ಮ ಈ ಲೋಕೋಪಕಾರಿಯಾದ ಕೆಲಸವನ್ನು ಆಶೀರ್ವದಿಸಲೆಂಬದು ನನ್ನ ಪ್ರಾರ್ಥನೆಯಾಗಿದೆ.

M. JACOBI,
Hd. Clerk, CALICUT.

4—7—13

ವಿಳಾಸ:— ಮುಳಿಯಿಲ್ ಎಂಡ್ ಸನ್ಸ್, ಕಾಸರಗೋಡು, ದ. ಕ.

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ತಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ಬ್ರಿಟೊಬಿಲ್ಡಿಂಗ್
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರು

MUSICAL MART
Kavi & Sons,
MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೋನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. **ಹೇಂಡ್ ಹಾರಮೋನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೇಗೂ, ಫೋಲ್ಡಿಂಗ್ ರೂ. 70, 75, 105.**

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ್, ಮಂಗಳೂರು ದ. ಕ.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವುದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವುದು ಮತ್ತಾವದೂ ಇಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕ" ಎಂಬ ಸಂಸ್ಕೃತ ವ್ಯಾಖ್ಯಾನವೂ ಜಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಆಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರೆಯಿಸಿ ದಪ್ಪ ಕಾಗದದಲ್ಲಿ ಸುರೇಖ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪಷ್ಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ ಸೂರ್ಯ ಚಂದ್ರ ಗ್ರಹಣನಿರ್ಣಯ, ಅಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರಚ್ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೩೬೧ ವಿಷಯಗಳ ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು. ಇದರ ಕ್ರಯ ೧ಕ್ಕೆ ೧—೮—೦. ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾ ಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು.

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳಿವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೭೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಆಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರಿಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು, ನಮ್ಮ ವಿಳಾಸ:—

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ಣಾಟಕ ಬುಕ್ ಡಿಪೊ ಏಜಂಟ್, **ಬಳ್ಳಾರಿ.**

ವಿವಾಹ ಮಂಟಪ

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡದಿದೆ. ಕನ್ನಾನೂರ, ಮೈಸೂರು, ನಾಗಪುರ, ವಿಶಾಖಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಲಾರಿರಾ!

ಸ್ಟೀವನ್ಸ್ ಎಂಡ್ ಸನ್ಸ್
ಪೋಸ್ಟು ಆಫೀಸಿನ ಮತ್ತು ರಜಿಸ್ಟ್ರಿ ಆಫೀಸಿನ ಮಧ್ಯೆ
ಹಂಪನಕಟ್ಟಾ, ಮಂಗಳೂರು.

Madeena Watch Co., Madras

ದಿ ನ್ಯೂ ಪೆಂಡುಲಂ ವಾಚ್. Rs, 3—15—0

ಇದು ಒಂದು ಆಶ್ಚರ್ಯಕರವಾದ ಘಡಿಯಾರ.



Rs. 3-15-0

ಇದು ಬಹು ಚಂದವಾಗಿಯೂ ಇರುತ್ತೆ. ಇದನ್ನು ಟ್ರೈಪಿಸಿ ಸಿನಂತೆ ಮೇಜಿನ ಮೇಲೂ ನಿಂದಿರಿಸಿಡಬಹುದು. ಜೇಬಿನಲ್ಲಿಯೂ ಉಪಯೋಗಿಸಿಕೊಳ್ಳ ಬಹುದು.

ಬಾಂಬೆ ಮೇಲ್ ವಾಚ್ ಕ್ರಯ	ರೂ.	2—7—0
ರಾಸ್ಕೋಪ್ ವಾಚು ಕ್ರಯ	„	1--12—0
ಬೆಸ್ಟ್ ಲೀವರ್ ವಾಚು ಕ್ರಯ	„	3—8—0
ರೈಲ್ವೆ ರೆಗ್ಯುಲೇಟರ್ ಕ್ರಯ	„	2--12—0
ಸೆಲ್ಫ್ ಕ್ಲೊಸಿಕ್		3--15—0
ಟೈಂಪೀಸು—ಸಾದಾ	„	1—5—0
ಅಲಾರಾಂ ಟೈಂಪೀಸು		1 -13—0
ಚಿಕ್ಕ ಸೈಜು ಲೇಡಿವಾಚ್		2-15—0

ಕಾರೇಜ್ ಹಾರ್ಮೋನಿಯಂ ರೂ. 20=0—0, ಮ್ಯೂಜಿಕ್ ಕ್ಲಾಕ್ ರೂ. 5—2—0, ಫಿಡಲು ರೂ. 8—0—0.

ಅಡ್ರಸ್:—ಮೆಡಿನಾವಾಚ್ ಕಂಪೆನಿ,

ನಂ. ೫೧ ಅನೆಕಾರಕೋರ್ನ ಬೀದಿ, ಜಿ. ಟಿ. ಮದ್ರಾಸು.

THE BOMBAY LIFE ASSURANCE CO. LTD.

(Established 1908).

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

„There can be no doubt that the Policy Contracts are well secured".

Chairman:-The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electric Co Ltd., The Tata Mills Co. Ltd., Managing Agent of Messrs Marsland Price & Co Ltd., and fellow of the Bombay University.

Actuary:—George K[illegible] Esq. F. F. A, F. I. A. London.)

Medical Ref[illegible] -Dr. R. Row, M. D D. Sc London)

Managing Director —Pramrose R. Joshi, Justice of the Peace, The Honorary Presidency Magistrate & etc.

Wanted Agents on very liberal commission.

[A]pply for full particulars to—**Kochikar Bros.**; Udipi, Chief Agents for South Canara, Malabar, Travancore and Cochin.

ಮುಂಬಯಿ ಲೈಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು)

ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಾತಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು.

"ವಿಮೆದಾರರ ಬಾಧ್ಯತೆಗಳ ಒಪ್ಪೆ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು: — ಹುಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್‌ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೋಲಿಕ್ ಮಾರ್ಸ್‌ಲೆಂಡ್ ಪ್ರ್ಯಾಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೊಗಳವರು.

ಎಕ್ಚುಯುಯರಿ:—ಮೆ। ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ ಎ. (ಲಂಡನ್)

ಮೆಡಿಕಲ್‌ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ. ಡಿ. ಎಸ್. ಸಿ. (ಲಂಡನ್).

ಮೆನೇಜಿಂಗ್ ಡ್ಯಾರೆಕ್ಟರ್:—ರಾ। ಪ್ರೆಮ್‌ರೋಜ್ ಆರ್ ಜೋಶಿ ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು.

ಏಜಂಟರು ಬೇಕಾಗಿರುವರು. ಧಾರಾಳವಾದ ಕಮಿಶನ್ ಕೊಡೋಣಾಗುವುದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್,

ಪ್ರಾಮುಖ್ಯ ಏಜಂಟರು, ಉಡ್ಪಿ.

ಯುವಸ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಯಿಲಿಕ್) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಆ ಕೆಲ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಆವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಆತನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರರ್ಗಳವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಯಾಂಗಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಚಿತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನು ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯುವಸ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಸಿಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0—4—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,

ಸುಗಂಧಕಾರಿ, ಮೈಸೂರು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಬೇರಳ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾದ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೩ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸಪ್ಷೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ ಎಮ್, ನಾಥ್ ಮತ್ತು ಕಂಪೆನಿ,
ವೇಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists*,
Vepery Post, MADRAS

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ಹಾಳು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹೊಟ್ಟೆ ಶೂಲೆ, ಮಕ್ಕಳ ಎಳವು, ಜ್ವರ, ನಡುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಕೂಡಲೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—“ಶ್ರೀ ಸೀತಾರಾಘವ ವೈದ್ಯಶಾಲಾ”
ಮೈಸೂರು.

ಡೋಂಗರೆ ಇವರ ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ, ಎಲ್. ಎಲ್. ಬಿ. ಹೆಡ್ ಮಾಸ್ತರ ಹ್ಯಾಸ್ಕೂಲು ಜುನಾಗಡ ಇವರು ಬರೆದದ್ದು.

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

ಬಾಟಲಿ ಒಂದರ ಕಿಮ್ಮತ್ತು 0—12—0. ಟಪ್ಪಾಲ ಖರ್ಚು 0—4—0

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ
Girgaon Bombay. ಗಿರಗಾಂವ ಮುಂಬಯಿ.

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪಸಕ್ಷಯುಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ್ದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯ ವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ತಣಗಿ ಹೋಗುವದು ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ **4—8—0.**।

ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು – ಕಲ್ಲಿಕೋಟೆಯ ಯು. ಬಿ ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ ಡಿ. ಅಂಡ್ರೂಸ್ ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರೆ.

ವಿಳಾಸ—ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

Estd. 1888 ಸ್ಥಾಪನೆ 1888

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳೆತ, ಕರೆ ಮತ್ತು ಹಟವಾರಿ **ಗಜಕರ್ಣವು** ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ ೧೦–೨೫ ವರ್ಷಗಳ ಹಳೆತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ~~ದೊಡ್ಡ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ~~ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ,ವೆ ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ~~ಮೈಯ ಸಂದು ನೋವೋಣ, ಕೈಕಾಲು ಒಡೆ~~ಯೋಣ, ಪ್ರಮೇಹ (ಪರಮಿ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ **ಸಾರ್ಸಾಪರಿಲ್ಲೆಯು** ಕ್ರಯ ಬಾಟ್ಲಿ ೧ಕ್ಕೆ ರೂ ೧—೪—೦. ಅಂಚೆ ವೆಚ್ಚ ೪ ಆಣೆ

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪುರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ತಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:– ಕಲ್ಲಿಕೋಟೆಯ ಯು. ಬಿ. ದತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್ ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರೆ.

ವಿಳಾಸ:— ಯು. ಬಿ. ದತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

Estd. 1888. ಸ್ಥಾಪನೆ 1888.

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ ೨೦-೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖುಗಳೂ,ವೆ ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ **ಸಾರ್ಸಾಪರಿಲ್ಲೆಯು**. ಕ್ರಯ ಬಾಟ್ಲಿಗಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪುರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಆಂಗ್ಲಭಾಷಾ ಪ್ರವೇಶದಾಯಿನಿ.

೧ನೇ ಪುಸ್ತಕ.

ಮೊದಲು ಕ್ರಯ ೧—೮—೦. ಈಗಣ ಕ್ರಯ ೧—೩—೦.

ಇಂಗ್ಲೀಷ್ ಅಕ್ಷರಗಳ ಗುರುತು ಕೂಡ ತಿಳಿಯದ ಪ್ರಥಮಾಭ್ಯಾಸಿಗಳಾದ ಕನ್ನಡಿಗರು ಬೋಧಕರ ಸಹಾಯವಿಲ್ಲದೆ ಕೆಲವು ದಿನಗಳಲ್ಲಿ ಕೇವಲ ಸ್ವಪ್ರಯಾಸದಿಂದ ಸುಲಭ ತಮವಾಗಿ ಇಂಗ್ಲಿಷ್ ಭಾಷೆಯನ್ನು ಕಲಿಯುವ ಹನ್ನೊಂದು ಭಾಗಗಳುಳ್ಳ ಅತ್ಯುತ್ತಮವಾದ ಪುಸ್ತಕವು.

ಮೊದಲನೆಯ ಭಾಗ. ಇಂಗ್ಲಿಷ್ ವರ್ಣಮಾಲೆಯ ಅನುಸಾರವಾಗಿ A. ಏ. a ಏ. B. ಬಿ b ಬಿ. Z. ಜಡ್. z ಜಡ್. ವರೆಗಿನ ಅಚ್ಚು ಮತ್ತು ಕೈ ಬರವಣಿಗೆಗಳಲ್ಲಿ ಉಪಯೋಗಿಸುವ ಸಣ್ಣ ಮತ್ತು ದೊಡ್ಡ ಅಕ್ಷರಗಳನ್ನು ಸೇರಿಸಿ ಬರೆದಿದೆ. ಎರಡನೆಯ ಭಾಗ ಕನ್ನಡ ದಡ್ಡಕ್ಷರ (ಒತ್ತಕ್ಷರ)ಗಳಿಗೆ ಬದುಲು ಇಂಗ್ಲೀಷಿನಲ್ಲಿ ಬರೆಯುವ ವಿಧಾನ ಮುಂತಾದುವು. ಮೂರನೆಯ ಭಾಗ. ಇಂಗ್ಲೀಷ್ ಭಾಷೆಯ ಸಂಪ್ರದಾಯವನ್ನನುಸರಿಸಿ ಅಕ್ಷರ ಸಂಯೋಜನ ಕ್ರಮ ಪಾಠಗಳು ಇಪ್ಪತ್ತೆರಡು. ನಾಲ್ಕನೆಯ ಭಾಗ. ಪ್ರಥಮಾಭ್ಯಾಸಯೋಗ್ಯವಾದ ಸಣ್ಣ ಸಣ್ಣ ಪಾಠಗಳು ಅರವತ್ತೈದು. ಉಚ್ಚಾರಣೆಯು ಕುದುರುವುದಕ್ಕೆ ತಕ್ಕ ವಿವಿಧ ಶಬ್ದ ಸಮುದಾಯ ಐದನೆಯ ಭಾಗ. ಹೆಚ್ಚು ತರಗತಿಯ ಬಗೆಬಗೆಯ ಪಾಠಗಳು ಇಪ್ಪತ್ತೆರಡರ ವರೆಗೆ ಸರ್ಕಾರದ ಪಾಠಶಾಲೆಗಳಲ್ಲಿ ಉಪಯೋಗಿಸುವ ಪುಸ್ತಕದಿಂದೆತ್ತಿ ಬರೆದಿದೆ. ಆರನೆಯ ಭಾಗ. ವ್ಯವಹಾರ ಸಮ್ಮತವಾದ ಪ್ರಶ್ನೋತ್ತರ ರೂಪವಾಗಿರುವ ಸಣ್ಣಪುಟ್ಟ ವಾಕ್ಯಗಳು. ಏಳನೆಯ ಭಾಗ ಒಬ್ಬರಿಗೊಬ್ಬರು ಬರೆಯುವ ಕಾಗದಗಳಲ್ಲಿ ಇಂಗ್ಲಿಷ್ ಪದ್ಧತಿಯಂತೆ ತಿಳಿಯಬೇಕಾದ ವಿಧಿ ವಿಧಾನಗಳು ಎಂಟನೆಯ ಭಾಗ ಸಣ್ಣ ತರಗತಿಗಳವರು ಒಬ್ಬರಿಗೊಬ್ಬರು ಸಮಯೋಚಿತವಾಗಿ ಬರೆಯುವ ಕೆಲವು ಕಾಗದಗಳ ಮಾದರಿಗಳು ಒಂಭತ್ತನೆಯ ಭಾಗ ತಂತಿಯ ಸಮಾಚಾರದ ಕೆಲ ಮಾದರಿಗಳು. ಹತ್ತನೆಯ ಭಾಗ. ಕನ್ನಡ ಇಂಗ್ಲಿಷ್ ಗಾದೆಗಳು. ಹನ್ನೊಂದನೆಯ ಭಾಗ. ಇಂಗ್ಲಿಷ್ ಭಾಷೆಯಲ್ಲಿ ಬರೆಯುವಾಗ ಉಪಯೋಗಿಸುವ ಸಾಂಕೇತಿಕ ಚಿಹ್ನೆಗಳು.

ಇಂಗ್ಲಿಷ್ ಭಾಷೆಯನ್ನರಿತು ಬಗೆ ಬಗೆಯ ಲಾಭವನ್ನು ಹೊಂದಬೇಕೆಂಬ ಬಯಕೆಯುಳ್ಳ ಎಲ್ಲಾ ಬಗೆಯ ಜನರಿಗೂ ಅತ್ಯುಪಯೋಗಿಯಾದ ಪುಸ್ತಕವಿದು.

ಆಂಗ್ಲಭಾಷಾ ಪ್ರವೇಶ ದಾಯಿನಿ. ೨ನೆ ಪುಸ್ತಕ.

ಮೊದಲು ಕ್ರಯ ೧—೮—೦. ಈಗಣ ಕ್ರಯ ೧—೩—೦.

ಮೊದಲನೆಯ ಪುಸ್ತಕವನ್ನೋದಿ ಇಂಗ್ಲಿಷ್ ಭಾಷೆಯಲ್ಲಿ ಅಕ್ಷರ ಜ್ಞಾನ ಸ್ವಲ್ಪ ಶಬ್ದ ಜ್ಞಾನವನ್ನು ಸಂಪಾದಿಸಿದ ಗ್ರಾಹಕರೆಲ್ಲರಿಗೂ ಬೋಧಕರ ಸಹಾಯವಿಲ್ಲದೆ ಕೆಲವು ದಿನಗಳಲ್ಲಿ ಕೇವಲ ಸ್ವಪ್ರಯಾಸದಿಂದ ಸುಲಭತಮವಾಗಿ ಇಂಗ್ಲಿಷ್ ಭಾಷೆಯ ವ್ಯಾಕರಣ ಶಾಸ್ತ್ರ ಜ್ಞಾನವನ್ನುಂಟುಮಾಡಿಕೊಳ್ಳಲು ಬರೆಯಲ್ಪಟ್ಟ ಆರು ಭಾಗಗಳುಳ್ಳ ಅತ್ಯುತ್ತಮವಾದ ಪುಸ್ತಕವು. ಮೊದಲನೆಯ ಪುಸ್ತಕದಲ್ಲಿಲ್ಲದ ಅನೇಕ ಹೊಸ ಸಂಗತಿಗಳು ಇದರಲ್ಲಿದೆ.

ಮೊದಲನೆಯ ಭಾಗದಲ್ಲಿ ೧. ಶರೀರದ ಅಂಗಾಂಗಗಳನ್ನು ಕುರಿತು ವಿವಿಧ ಶಬ್ದ ಸಮುದಾಯ, ೨. ಶಾಲೆಯಲ್ಲಿ ಬಳಸುವ ಶಬ್ದಗಳು, ೩. ಕಾಲವಾಚಕ ಶಬ್ದಗಳು. ೪. ಉಡುಗೆತೊಡುಗೆಗಳ ಕುರಿತು, ೫. ಸಾಮಾನ್ಯೋಪಯೋಗಿ, ೬. ರಕ್ತ ಸಂಬಂಧಿಗಳನ್ನು ಕುರಿತು, ೭. ಜಾತಿ ವಾಚಕ ಶಬ್ದಗಳು, ೮ ವ್ಯಾಪಾರದಲ್ಲಿ ಹೇರಳವಾಗಿ ಬಳಸುವ ಶಬ್ದಗಳು, ೯. ಮಾತನಾಡುವಾಗ ಬಳಸುವ ಶಬ್ದಗಳು, ೧೦. ಬೇಸಾಯ ಕಾಯಿಫಲ್ಯ, ಧಾನ್ಯ ಪಲಸರಕುಗಳ ಕುರಿತು, ೧೧. ಕಟ್ಟಡಗಳು, ಅಲಂಕಾರ ವಸ್ತುಗಳ ಕುರಿತು, ೧೨ ವೈದ್ಯೋಪಯೋಗಿ, ೧೩. ದಿಗ್ವಾಚಕ ಶಬ್ದಗಳು, ೧೫. ಕಚೇರಿ, ಉದ್ಯೋಗ ಮುಂತಾದವುಗಳಲ್ಲಿ ದೊಡ್ಡ ದೊಡ್ಡ ಡಿಕ್ಷನರಿಗಳಲ್ಲಿ ಇಲ್ಲದ ಅಪರೂಪವಾದ ಪಾರಿಭಾಷಿಕ (Technical) ಶಬ್ದಗಳನ್ನು ಆರಿಸಿದ ದೊಡ್ಡ ಜಂತ್ರಿಯನ್ನು ಸೇರಿಸಿದೆ. ಎರಡನೆಯ ಭಾಗದಲ್ಲಿ ಬಾಲಬೋಧೋಪಯುಕ್ತವಾದ ವ್ಯಾಕರಣ ಶಾಸ್ತ್ರನಿಯಮಗಳು, ಸಂಪ್ರದಾಯಗಳ ವಿಧಿ ವಿಧಾನಗಳು ಸೇರಿವೆ. ಮೂರನೆಯ ಭಾಗದಲ್ಲಿ ಕನ್ನಡದಿಂದ ಇಂಗ್ಲಿಷಿಗೂ, ಇಂಗ್ಲಿಷಿನಿಂದ ಕನ್ನಡಕ್ಕೂ ತರ್ಜಮೆ ಮಾಡುವಾಗ ತಿಳಿಯಬೇಕಾದ ವಿಧಿ ವಿಧಾನಗಳು, ಮಾದರಿಗಳು, ಉದಾಹರಣೆಗಳು ಅಭ್ಯಾಸಗಳು.

ನಾಲ್ಕನೆಯ ಭಾಗದಲ್ಲಿ ಭಾಷಾ ಸಂಪ್ರದಾಯಗಳು, ಉದಾಹರಣೆಯ ಪಾಠಗಳು, ಅಭ್ಯಾಸಗಳು ಮುಂತಾದುವು. ಐದನೆಯ ಭಾಗದಲ್ಲಿ ವರ್ತಕರಿಗೆ ಹೇರಳವಾಗಿ ಬಳಕೆಯಲ್ಲಿರುವ ಮುಖ್ಯ ಮುಖ್ಯ ಸಂಗತಿಗಳಲ್ಲಿ ಲೇಖನ ಪ್ರತಿ ಲೇಖನಗಳು, ಮಾದರಿಗಳು, ಅರ್ಜಿಯ ನಮೂನೆಗಳು ಅಡಗಿವೆ. ಆರನೆಯ ಭಾಗದಲ್ಲಿ ಪ್ರೌಢಭ್ಯಾಸ ಯೋಗ್ಯವಾದ ಸಣ್ಣ ಸಣ್ಣ ನೀತಿ ವಾಕ್ಯಗಳೂ, ಕಟ್ಟು ಕಥೆಗಳೂ, ಮುಂತಾದವು ಸೇರಿವೆ.

ಒಟ್ಟಿನಲ್ಲಿ ಈ ಪುಸ್ತಕವು ವ್ಯಾಪಾರಸ್ಥರಿಗೆ ತುಂಬಾ ಉಪಯೋಗವಾಗಿರುವುದರಿಂದ ಪ್ರತಿಯೊಬ್ಬರೂ ಒಂದೊಂದು ಪ್ರತಿಯನ್ನು ಜೇಬಿನಲ್ಲಿಡತಕ್ಕದು. ಮೊದಲನೆಯ ಪುಸ್ತಕವನ್ನೋದಿದವರಿದನ್ನು ಅಗತ್ಯವಾಗಿ ಸಂಗ್ರಹಿಸಿಡಬೇಕು.

ಆಂಗ್ಲಭಾಷಾ ಪ್ರವೇಶದಾಯಿನಿ. ೩ನೇ ಪುಸ್ತಕ.

ಮೊದಲು ಕ್ರಯ ೧—೮—೦. ಈಗಣ ಕ್ರಯ ೧—೩—೦

ಮೊದಲನೆಯ ಪುಸ್ತಕವನ್ನೂ, ಎರಡನೆಯ ಪುಸ್ತಕವನ್ನೂ ಓದಿ, ಅಕ್ಷರಜ್ಞಾನ, ಶಬ್ದ ಜ್ಞಾನ, ಸ್ವಲ್ಪ ಮಟ್ಟಿಗೆ ವ್ಯಾಕರಣ ಶಾಸ್ತ್ರಜ್ಞಾನವನ್ನು ಸಂಪಾದಿಸಿರುವ ಗ್ರಾಹಕರೆಲ್ಲರಿಗೂ ಬೋಧಕರ ಸಹಾಯವಿಲ್ಲದೆ ಕೆಲವು ದಿನಗಳಲ್ಲಿ ಕೇವಲ ಸ್ವಪರಿಶ್ರಮದಿಂದ ಸುಲಭ ತಮವಾಗಿ ಇಂಗ್ಲಿಷ್ ಭಾಷೆಯಲ್ಲಿ ಮಾತಾಡುವುದು ಬರೆಯುವುದು, ಓದುವುದು, ಮುಂತಾದವುಗಳಲ್ಲಿ ಜ್ಞಾನಾರ್ಜನೆ ಮಾಡಿ ಸಾಧಾರಣ ವ್ಯವಹಾರಗಳಲ್ಲಿ ಸ್ವತಂತ್ರಿಸಿ ಮುಂದು ನುಗ್ಗುವುದಕ್ಕೆ ತಕ್ಕಷ್ಟು ಧೈರ್ಯವನ್ನುಂಟುಮಾಡಿಕೊಳ್ಳಲು ಅನುಕೂಲವಾದ ಅನೇಕ ಸಂಗತಿಗಳನ್ನು ಸೇರಿಸಿರುವ ಮೂವತ್ತು ಭಾಗಗಳುಳ್ಳ ದೊಡ್ಡ ಪುಸ್ತಕವಿದು.

೧. ಕಾಫಿಯ ಕ್ಲಬ್ಬಿನಲ್ಲಿ ಮಾತನಾಡುವುದು, ೨. ಸಂತೆಯ ಸಂಭಾಷಣೆ, ೩. ಚಿಣಿವಾರರ ಪ್ರಸ್ತಾಪ, ೪. ಬರವಣಿಗೆಯ ವಾಗ್ವಾದ, ೫. ಲೇವಾದೇವಿಯನ್ನು ಕುರಿತು, ೬. ಬಗೆ ಬಗೆಯ ಸಂಗತಿಗಳನ್ನು ಕುರಿತು, ೭ ನೆಂಟಸ್ತಿಕೆಯನ್ನು ಕುರಿತು, ೮ ಗಂಡ ಹೆಂಡಿರ ಸಂಭಾಷಣೆ, ೯. ಉಡಿಗೆತೊಡಿಗೆಗಳನ್ನು ಕುರಿತು, ೧೦. ವಿದ್ಯಾಭ್ಯಾಸಂಗವನ್ನು ಕುರಿತು, ೧೧ ಬೈದಾಡುವಿಕೆಯನ್ನು ಕುರಿತು, ೧೨ ಗಾಳಿಯ ಸವಾರಿಯನ್ನು ಕುರಿತು, ೧೩ ನೀತಿಬೋಧಕ ಪ್ರಶ್ನೋತ್ತರ, ೧೪ ವಾಸದ ಮನೆಯನ್ನು ಕುರಿತು, ೧೫ ಕಾಲಸ್ಥಿತಿಯನ್ನು ಕುರಿತು, ೧೬ ಗೃಹಾಲಂಕಾರ ವಸ್ತುಗಳನ್ನು ಕುರಿತು, ೧೭ ವೈದ್ಯರು ಮತ್ತು ಔಷಧಗಳನ್ನು ಕುರಿತು. ೧೮ ಭೋಜನ ಕ್ರಮವನ್ನು ಕುರಿತು, ೧೯ ಹೊಗೆ ಬಂಡಿಯ ಪ್ರಯಾಣ, ೨೦ ದೇಹಸ್ಥಿತಿಯನ್ನು ಕುರಿತು, ೨೧ ಸೇವಕನನ್ನು ಕುರಿತು, ೨೨ ನಾಟಕಶಾಲೆಯನ್ನು ಕುರಿತು, ೨೩ ಸಂದರ್ಶನವನ್ನು ಕುರಿತು, ೨೪ ಹಡಗಿನ ಪ್ರಯಾಣ, ೨೫ ಚಂತವ ಗುಂಡಿನಾಟ, ೨೫ ಸೀಮೆಯ ಪ್ರಯಾಣ, ೨೬ ವಿದ್ಯಾರ್ಥಿಗಳನ್ನು ಕುರಿತು, ೨೮ ಮನೋಹರವಾದ ಕಥೆಗಳು, ೨೯ ಕನ್ನಡದಿಂದ ಇಂಗ್ಲಿಷಿಗೂ, ಇಂಗ್ಲಿಷಿನಿಂದ ಕನ್ನಡಕ್ಕೂ (ತರ್ಜುಮೆ) ಪರಿವರ್ತನ ಮಾಡುವ ಚಮತ್ಕಾರವು ಬಹು ಸ್ವಾರಸ್ಯವಾಗಿ ಬೋಧಜನಕವಾಗಿದೆ, ೩೦ ಪ್ರೌಢವಾದ ಅನೇಕ ವಿಷಯಗಳಲ್ಲಿ ವ್ಯವಹಾರಿಕ ಲೇಖನ ಪ್ರತಿ ಲೇಖನಗಳು, ಕಟ್ಟುಕಥೆಗಳು ಮುಂತಾದುವು.

೧-೨-೩ ಈ ಮೂರು ಪುಸ್ತಕಗಳೂ ಅಭ್ಯಾಸದ ಅನುಕೂಲತೆಗೂ ಕೊಳ್ಳುವವರ ಸೌಕರ್ಯಕ್ಕೂ ಬೇರೆ ಬೈಂಡಾಗಿದೆ. ಮೂರು ಪುಸ್ತಕಗಳನ್ನೂ ಒಂದೇ ಸಾರಿ ತರಿಸಿಕೊಳ್ಳುವವರಿಗೆ ಅಂಚೆಯ ವೆಚ್ಚ ಸಂಪೂರ್ಣವಾಗಿ ಮಾಫಿ! ಯಾವುದಾದರೊಂದು ಅಥವ ಎಲ್ಲವನ್ನು ಸೇರಿಸಿ ಒಟ್ಟಾಗಿ ಒಂದೇ ಸಲ ಹತ್ತು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಒಂದು ಪ್ರತಿ ಉಚಿತ!!! ಪ್ರತಿ ಮುದ್ರಣದಲ್ಲಿಯೂ ಹಿಂದಣ ಮುದ್ರಣ ಪುಸ್ತಕಗಳು ಮುಗಿದು ಹೋಗಿ ಮುಂದೆ ಅಚ್ಚಾಗುವ ವರೆಗೆ ಅಪೇಕ್ಷಿತರು ಕಾಯಬೇಕಾಗುತ್ತಿದೆಯೆಂಬುವುದು ಗ್ರಾಹಕರನೇಕರಿಗೆ ಅನುಭವವೇದ್ಯವಾದುದಷ್ಟೆ? ಕೆಲವು ಪ್ರತಿಗಳೇ ಉಳಿದಿವೆ. ಕೈಮೀರುವುದಕ್ಕೆ ಮುಂಚಿತವಾಗಿ ಬೇಗ ಬೇಗ ಬರೆಯಿರಿ!!!

ಸಂಪಾದಕ. "ಸವಿನುಡಿ" ಮತ್ತು "ಭಾಷಾನಿಧಿ",

ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಹೊಸ ಪುಸ್ತಕ! ಸೊಗಸಾದ ಸರಣಿ!!

ಬೆಲೆ ಕಡಿಮೆ! ಓದುವದಕ್ಕೆ ಆನಂದ!!

ಸಚಿತ್ರ ಝಾನ್ಸಿ ರಾಣಿ ಚರಿತ್ರೆ.

ಇದರಲ್ಲಿ ರಾಣಿಯಾದ ಲಕ್ಷ್ಮೀಬಾಯಿಯು ಹುಟ್ಟಿದಾರಭ್ಯ ಬಾಲ್ಯದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿ, ರಾಣಿಯಾದ ಮೇಲೆ ಪ್ರಜಾಹಿತಕರವಾದ ಅನೇಕ ಕಾರ್ಯಗಳನ್ನು ಮಾಡಿ, ಲೋಕಪ್ರಸಿದ್ಧವಾದ ತನ್ನ ಕೀರ್ತಿಯನ್ನು ಪ್ರಕಾಶಿಸಿದ ಕಥೆಯು ಬಹು ಸ್ವಾರಸ್ಯವಾದ ಕನ್ನಡ ಮಾತುಗಳಿಂದ ಬರೆಯಲ್ಪಟ್ಟಿದೆ ಮಕ್ಕಳಿಗೂ ಅರ್ಥವಾಗುವಂಥ ಸುಲಭವಾದ ಶೈಲಿ, ರಸಭರಿತವಾದ ಕಾದಂಬರಿಯಂತೆ ಮಧುರವಾದ ಮಾತುಗಳನ್ನುಂಟಾಗಿದೆ. ಹಿಂದೂ ನಾರಿಯರ ಪಾತಿವ್ರತ್ಯ, ಸದ್ಗುಣ ಮೊದಲಾದವುಗಳನ್ನು ಪ್ರತ್ಯಕ್ಷವಾಗಿ ತಿಳಿಸುವ ಈ ಪುಸ್ತಕದಲ್ಲಿ ೩೩೬ ಪುಟಗಳೂ, ೧೬ ಅಧ್ಯಾಯಗಳೂ ಅಡಕವಾಗಿವೆ ಓದಿ ನೋಡಿದವರಿಗೆ ಇದರ ಯೋಗ್ಯತೆಯು ಸ್ವತಃ ತಿಳಿಯಬರುವಲ್ಲಿ ಹೆಚ್ಚಿಗೆ ಬರೆಯಬೇಕಾದುದೇನು? ಎಲ್ಲರಿಗೂ ಅನುಕೂಲಿಸಬೇಕೆಂಬ ಕೋರಿಕೆಯಿಂದ ಬೆಲೆಯನ್ನು ಕಡಿಮೆ ಮಾಡಿದೆ. ಅನೇಕಾನೇಕ ಚಿತ್ರಪಟಗಳಿವೆ.

ಕ್ರಯ ೧ ರೂಪಾಯಿ ಮಾತ್ರ ವಿ. ಪಿ. ಚಾರ್ಜು ೪ ಆಣೆ.

ಹಾರ್ಮೋನಿಯಂ ಸ್ವಯಂ ಬೋಧಿನೀ.

ಕನ್ನಡದಲ್ಲಿ ಇಂತಹ ಪುಸ್ತಕವು ಇದುವರೆಗೆ ಒಂದಾದರೂ ಪ್ರಚುರವಾಗಿಲ್ಲ ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ, ಮತ್ತು ದಕ್ಷಿಣ ಕರ್ನಾಟಕ ಈ ಮೂರು ರಾಜ್ಯಗಳಲ್ಲಿರುವ ಕನ್ನಡಿಗರಿಗೂ ನಾ ಕೊಲಿಸುವಂತೆ ಪುರಂದರ ದಾಸರ ಕೀರ್ತನೆಗಳೇ ಮುಂತಾದ ಕನ್ನಡ ಕೀರ್ತನೆಗಳನ್ನು ಮಾತ್ರವೇ ಆರಿಸಿ ಎಲ್ಲರೂ ತಿಳಿದುಕೊಳ್ಳುವಂತೆ ಸುಲಭ ಮಾರ್ಗದಲ್ಲಿ ಬರೆದಿದೆ ಇದರಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಸ್ವರಸ್ಥಾಯಿಗಳೂ ವಿವರವಾಗಿ ಕೊಟ್ಟಿರುವುದರಿಂದ ಯಾವ ವಿಚಾರದಲ್ಲಿಯೂ ಸಂದೇಹಕ್ಕೆ ಆಸ್ಪದವೇ ಇರುವುದಿಲ್ಲ ಹಾರ್ಮೋನಿಯಮ್ ಬೋಧಕರಿಗೂ ಇದರಿಂದ ಅನೇಕ ವಿಷಯಗಳು ತಿಳಿಯಬರುವವು

ಬೆಲೆ 0—4—0 ಅಂಚೆ ವೆಚ್ಚ ಬೇರೆ

ವಿಳಾಸ:— ಎಚ್. ಎನ್ ರಾವ್ ಅಂಡ್ ಬ್ರದರ್ಸ್,
ಪುಸ್ತಕ ವ್ಯಾಪಾರಸ್ಥರು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಹಾತ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಸೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಸೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವ ಗ ಧಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹೆಂಪನ್‌ಕಟ್ಟ್ಯಾ ಮಂಗಳೂರ

ಬರ್ಮೀಸ್ ಬ್ಯುಟಿ ಒಯಿಲ್

ಎಂಬ

ಬರ್ಮಾದೇಶದ ಸೌಂದರ್ಯ.



ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳತಲೆ, ತಲನಾಶಿ, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿಕೊಡುವಷ್ಟು ಚಲೋದಾಗಿರುವುದು ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ. ೩. ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರುಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾಯುವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡುಬಂದದೆ ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ. ಚಾರ್ಜು ಬೇರೆ.

ಒಟ್ಟೊ ಪೆರೆಡ್ಯಾಸ್.

ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟು ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ಬಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೊ ಪೆರೆಡ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಚಿನದಕ್ಕೆ	0—8—0.
ನಡುತರದ್ದಕ್ಕೆ	0-12—0.
ದೊಡ್ಡ ಸ್ಯಾಚಿಗೆ	1-14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೋರಲ್ ಪರ್‌ಫ್ಯುಮರಿ ಕಂಪೆನಿ,
ಮುಂಬಯಿ.

ಹೊಸ ಪುಸ್ತಕ! ಸೊಗಸಾದ ಸರಣಿ!!

ಕ್ರಯ ಕಡಿಮೆ! ಓದುವದಕ್ಕೆ ಆನಂದ!!

ಸಚಿತ್ರ ಝಾನ್ಸಿ ರಾಣಿ ಚರಿತ್ರೆ.

ಇದರಲ್ಲಿ ರಾಣಿಯಾದ ಲಕ್ಷ್ಮೀಬಾಯಿಯು ಹುಟ್ಟಿದಾರಭ್ಯ ಬಾಲ್ಯದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿ, ರಾಣಿಯಾದ ಮೇಲೆ ಪ್ರಜಾಹಿತಕರವಾದ ಅನೇಕ ಕಾರ್ಯಗಳನ್ನು ಮಾಡಿ, ಲೋಕಪ್ರಸಿದ್ಧವಾದ ತನ್ನ ಕೀರ್ತಿಯನ್ನು ಪ್ರಕಟಿಸಿದ ಕಥೆಯು ಬಹು ಸ್ವಾರಸ್ಯವಾದ ಕನ್ನಡ ಮಾತುಗಳಿಂದ ಬರೆಯಲ್ಪಟ್ಟಿದೆ ಮಕ್ಕಳಿಗೂ ಅರ್ಥವಾಗುವಂಥ ಸುಲಭವಾದ ಶೈಲಿ, ರಸಭರಿತವಾದ ಕಾದಂಬರಿಯಂತೆ ಮಧುರವಾದ ಮಾತುಗಳನ್ನುಂಟಾಗಿದೆ. ಹಿಂದೂ ನಾರಿಯರ ಪಾತಿವ್ರತ್ಯ, ಸದ್ಗುಣ ಮೊದಲಾದವುಗಳನ್ನು ಪ್ರತ್ಯಕ್ಷವಾಗಿ ತಿಳಿಸುವ ಈ ಪುಸ್ತಕದಲ್ಲಿ ೩೩೭ ಪುಟಗಳೂ, ೧೭ ಅಧ್ಯಾಯಗಳೂ ಅಡಕವಾಗಿವೆ ಓದಿ ನೋಡಿದವರಿಗೆ ಇದರ ಯೋಗ್ಯತೆಯು ಸ್ವತಃ ತಿಳಿಯಬರುವಲ್ಲಿ ಹೆಚ್ಚಿಗೆ ಬರಿಯಬೇಕಾದುದೇನು? ಎಲ್ಲರಿಗೂ ಅನುಕೂಲಿಸಬೇಕೆಂಬ ಕೋರಿಕೆಯಿಂದ ಬೆಲೆಯನ್ನು ಕಡಿಮೆ ಮಾಡಿದೆ. ಅನೇಕಾನೇಕ ಚಿತ್ರಪಟಗಳಿವೆ.

ಕ್ರಯ ೧ ರೂಪಾಯಿ ಮಾತ್ರ ವಿ. ಪಿ. ಚಾರ್ಜು ೪ ಆಣೆ.

ಹಾರ್ಮೋನಿಯಂ ಸ್ವಯಂ ಬೋಧಿನೀ.

ಕನ್ನಡದಲ್ಲಿ ಇಂತಹ ಪುಸ್ತಕವು ಇದುವರೆಗೆ ಒಂದಾದರೂ ಪ್ರಚುರವಾಗಿಲ್ಲ. ಉತ್ತರ ಕರ್ನಾಟ, ಮಧ್ಯ ಕರ್ನಾಟ, ಮತ್ತು ದಕ್ಷಿಣ ಕರ್ನಾಟ ಈ ಮೂರು ರಾಜ್ಯಗಳಲ್ಲಿರುವ ಕನ್ನಡಿಗರಿಗೂ ಸಂತೋಷಿಸುವಂತೆ ಪುರಂದರ ದಾಸರ ಕೀರ್ತನೆಗಳೇ ಮುಂತಾದ ಕನ್ನಡ ಕೀರ್ತನೆಗಳನ್ನು ಮಾತ್ರವೇ ಆರಿಸಿ ಎಲ್ಲರೂ ತಿಳಿದುಕೊಳ್ಳುವಂತೆ ಸುಲಭ ಮಾರ್ಗದಲ್ಲಿ ಬರೆದಿದೆ. ಇದರಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಸ್ವರಸ್ಥಾಯಿಗಳೂ ವಿವರವಾಗಿ ಕೊಟ್ಟಿರುವುದರಿಂದ ಯಾವ ವಿಚಾರದಲ್ಲಿಯೂ ಸಂದೇಹಕ್ಕೆ ಆಸ್ಪದವೇ ಇರುವದಿಲ್ಲ. ಹಾರ್ಮೋನಿಯಮ್ ಬೋಧಕರಿಗೂ ಇದರಿಂದ ಅನೇಕ ವಿಷಯಗಳು ತಿಳಿಯಬರುವವು.

ಬೆಲೆ 0–4–0 ಅಂಚೆ ವೆಚ್ಚ ಬೇರೆ.

ವಿಳಾಸ:— ಎಚ್. ಎಸ್. ರಾವ್ ಅಂಡ್ ಬ್ರದರ್ಸ್,
ಪುಸ್ತಕ ವ್ಯಾಪಾರಸ್ಥರು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಕತ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಕೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಚಾ ಚಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗಧಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರ

ಬರ್ಮೀಸ್ ಬ್ಯುಟಿ ಒಯಿಲ್

ಎಂಬ

ಬ್ರಹ್ಮದೇಶದ ಸೌಂದರ್ಯ.



ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟಿದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳತಲೆ, ತಲನಾಶಿ, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿಕೊಡುವಷ್ಟು ಚಲೋದಾಗಿರುವುದು. ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು. ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ. ೩. ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರುಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾಯುವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡುಬಂದದೆ. ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ. ಚಾರ್ಜು ಬೇರೆ.

ಒಟ್ಟೊ ಪೆರೆಡ್ಯಾಸ್.

ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟು ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ಬಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೊ ಪೆರೆಡ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ವಾಜಿನದಕ್ಕೆ	0—8—0.
ನಡುತರದ್ದಕ್ಕೆ	0–12—0.
ದೊಡ್ಡ ಸ್ವಾಜಿಗೆ	1–14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೊರಲ್ ಪರ್ಫ್ಯುಮರಿ ಕಂಪೆನಿ,
ಮುಂಬಯಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಆಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	A ಅರಗಜ	ತೊಲೆ 1ಕ್ಕೆ	2 0-0
ಅಂಬರ್ ಬತ್ತಿ	,, ,,	6-0-0	B ಅರಗಜ	,, ,,	1-0 C
ಕಸ್ತೂರಿ ಬತ್ತಿ	,, ,,	3-0-0	ಕಸ್ತೂರಿ ಬಿಲ್ಲೆ	,, ,,	2 0-C
ಜವಾಜಿ ಬತ್ತಿ	,, ,,	2-0-0	ಜವಾಜಿ ಬಿಲ್ಲೆ	,, ,,	1-0-0
ಸುರಗಿನ ಬತ್ತಿ	,, ,,	1-8-0	ಕೇಸರಿ ಬಿಲ್ಲೆ	,, ,,	0-8 0
ಪನ್ನೀರ್ ಬತ್ತಿ	,, ,,	0-12 0	ತಾಂಬೂಲ ರತ್ನ ಸೀಸೆ 1ಕ್ಕೆ		0 4-0
ಮಸಾಲಾ ಬತ್ತಿ	,, ,,	0-6-0	ದಶಾಂಗ ಡಬ್ಬಿ 1ಕ್ಕೆ		0 4 (

ಮೇನೇಜರ್, "ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ

ಅಚ್ಚಾಗುತ್ತಲಿದೆ! ಅಚ್ಚಾಗುತ್ತಲಿದೆ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ಪಂಚಾಂಕೀ ಮರಾಠಿನಾಟಕವು ಈಗ ಅಚ್ಚಿನಲ್ಲಿದ್ದು, ಬರುವ ಆಗೋಸ್ತು ತಿಂಗಳ ಆಖೈರ ಒಳಗೆ ಪ್ರಕಾಶಿತವಾಗುವದು ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕ ಜನರು ಈ ಸಂದರ್ಭವನ್ನು ಬಿಡಲಾಗದು ಬೆಲೆ 10 ಆಣೆ ಟ ಹಾ ಬೇರೆ

ಜುಲೈ ಆಖೈರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡು, ಓರ್ಡರುಗಳನ್ನು ರಿಜಿಸ್ಟರ್ ಮಾಡುವ ಗ್ರಾಹಕರಿಗೆ 8 ಆಣೆ ಟ ಹಾ ಬೇರೆ ಹಣವನ್ನು ಮುಂಗಡವಾಗಿ ಪೋಸ್ಟೇಜು ಸ್ಟಾಂಪುಗಳ ದ್ವಾರಾ ಅದವಾ ಮನಿಆರ್ಡರು ದ್ವಾರಾ ಕಳುಹಿಸಬೇಕು.

ತ್ವರೆಮಾಡಿರಿ!!!

ಕಲ್ಯಾಣಪುರ ಮಂಗೇಶರಾವ್,

ಕಲ್ಯಾಣಪುರ, ದ ಕನ್ನಡ

ಕೃಷ್ಣವಿಲಾಸ ಟ್ರೇಡಿಂಗ್ ಎಸೋಸಿಯೇಶನ್

ಗಿರಗಾಂ, ಮುಂಬಯಿ.

ಮಾನ್ಯ ಗೃಹಸ್ಥರೇ,

ತಮ್ಮ ಕಡೆಯ ಹಲವು ಮಂದಿ ಗೃಹಸ್ಥರು ವರ್ತಮಾನ ಪತ್ರಗಳಲ್ಲಿ ಕೊಟ್ಟಿರುವ "ಪ್ರಸಿದ್ಧ ಪತ್ರಿಕೆ"ಗಳು ಹೊಗಳಿ ವಿವರಿಸುವ ಸಾಮಾನುಗಳನ್ನು ಇಲ್ಲಿಗೆ ಬರೆದು ತರಿಸಿಕೊಳ್ಳುತ್ತಿರುವಲ್ಲಿ ಆ ವಸ್ತುಗಳು ಪ್ರಸಿದ್ಧ ಪತ್ರಿಕೆಗಳಲ್ಲಿ ಬರೆದಿರುವಂತೆ ಚನ್ನಾಗಿರುವದರ ಬದಲಿಗೆ ಬಹಳ ಹಲಕೀ ಸಾಮಾನುಗಳಿದ್ದು ಅವುಗಳಿಗೆ ಕೊಟ್ಟ ಹಣ ದುರ್ವ್ಯಯ ಮಾಡಿದಂತೆ ಆಯಿತಲ್ಲಾ ಎಂದು ವ್ಯಸನಪಡುತ್ತಿರುವದು ನಮ್ಮ ತಿಳುವಳಿಕೆಗೆ ಬಂದದೆ ನಾವು ಹಲವು ವರ್ಷಗಳಿಂದ ಪರವೂರ ಗೃಹಸ್ಥರಿಗೆ ಇಲ್ಲಿಂದ ಅತ್ಯುತ್ಕೃಷ್ಟವಾದ ವಸ್ತುಗಳನ್ನು ಪೇಟೆಯಿಂದ ಬಹಳ ಚೌಕಶೀಯಿಂದ ಕಡಿಮೆ ಖರೀದಿಗೆ ಕೊಂಡುಕೊಂಡು ರವಾನಿಸುತ್ತಿರುವುದು ಸಮಸ್ತರಿಗೂ ಗೊತ್ತೇ ಇದ್ದ ವಿಷಯವಾಗಿದೆ ಆದುದರಿಂದ ಎಲ್ಲಾ ಗೃಹಸ್ಥರು ತಮಗೆ ಮುಂಬಯಿಯಿಂದ ಏನೇ ವಸ್ತುಗಳು ಬೇಕಿದ್ದರೂ ನಮಗೆ ಬರೆದಲ್ಲಿ ನಾವು ಅವುಗಳನ್ನು ಪೇಟೆಯಿಂದ ಕಡಿಮೆ ಕಿಮ್ಮತ್ತಿಗೆ ತಕ್ಕೊಂಡು ವಿ. ಪಿ ಟಪ್ಪಾಲು ಮೂಲಕ ಕಳುಹುವೆವು. ಈ ಸಂಗತಿಯನ್ನು ತಮ್ಮ ಮಿತ್ರಬಾಂಧವರೊಡನೆ ಪ್ರಚಾರಪಡಿಸಬೇಕಾಗಿ ನಾವು ನಮ್ಮ ಎಲ್ಲಾ ಗೃಹಸ್ಥರನ್ನು ಬೇಡುವೆವು.

ರೂಪಾಯಿ ಹತ್ತು ಯಾ ಹೆಚ್ಚಿನ ಬೆಲೆಯ ಸಾಮಾನುಗಳಿಗೆ ಬರಿಯುವವರು ರೂಪಾಯಿ ಒಂದನ್ನು ಮುಂಗಡವಾಗಿ ಕಳುಹಿಸಬೇಕು. ಇದನ್ನು ಜುಮಲಾ ಹಣದಿಂದ ಕಳೆಯುವೆವು.

Krishnavilasa Trading Association,

Girgaum, Bombay.

500 ರೂಪಾಯಿಗಳ ಬಹುಮಾನ!!

ಲೋಕ ಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬು ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಪ್ರಿಯ ಸಹೋದರರೇ, ನಿಮ್ಮ ರಕ್ತವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರ್ಮಾಡಿರುವ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ! ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು ಈ "ಪಂಜಾಬು ಸಾಲಾಮಿಸ್ರೀ ಮುರಬ್ಬಾ"ವನ್ನು ಸೇವಿಸುವದರಿಂದ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲಮೂತ್ರವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆ

ಯುವುದರಿಂದ ಮೇಲುಬ್ಬಸ ಬರುವುದೂ, ತಲೆಯ ನೋವೂ ಇವುಗಳೆಲ್ಲವೂ ಪಂಜಾಬು ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವು, ಗಳನ್ನು ಹೋಗಲಾಡಿಸುವುದು, ಧಾತುವನ್ನು ಶೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಕೆಲಸಮಾಡುವುದರಲ್ಲಿ ಉತ್ಸಾಹವೂ, ಧೈರ್ಯವೂ, ಬುದ್ಧಿಕುಶಲತೆಯೂ, ಶರೀರ ಕಾಂತಿಯೂ ಉಂಟಾಗುತ್ತದೆ ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ್ಗಡ್ಡೆಯನ್ನು ನಾಶಪಡಿಸುತ್ತದು ಶ್ವಾಸಕಾಸವನ್ನು ನಿರ್ಮೂಲಪಡಿಸುವುದು

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾಬ್ ಸಾಲಾಮಿಸ್ರೀಯೋ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರೀಯಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು 15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ 2 0 0 ಟಪ್ಪಾಲ್ ಖರ್ಚು ಅಲಾಯದ ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ಈಗ ಸಾಲಾಮಿಸ್ರಿ ಧಾರಣೆಯು ಜಾಸ್ತಿ ಆಗಿರುವದರಿಂದ 1—8—0 ಕ್ರಯವಿರುವುದನ್ನು 2—0—0 ಮಾಡಿರುತ್ತೇವೆ

1 ದಾತುಪುಷ್ಟಿ ಚೂರ್ಣ —ಬೆಲೆಯು ಡಬ್ಬಿ 1ಕ್ಕೆ 0—5—0.
2 ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರೆ ತೈಲವು —ಸೀಸಾಯಿ 1ಕ್ಕೆ 0 2 0
3 ವಾತ ನಿವಾರಣೆ ತೈಲವು —ಕ್ರಯ ಸೀಸಾಯಿ 1ಕ್ಕೆ 0—4—0.
4 ಹೊಟ್ಟೆ ನೋವಿಗೆ ಔಷಧ —ಸೀಸಾಯಿ 1ಕ್ಕೆ 0—4—0
5 ಕೆಮ್ಮಲು ರೋಗಕ್ಕೆ ಔಷಧ —ಕ್ರಯ ಸೀಸಾಯಿ 1ಕ್ಕೆ 0—4—0
6 ವ್ರಣಕ್ಕೆ ಔಷಧ —ಕ್ರಯ ಡಬ್ಬಿ 1ಕ್ಕೆ 0—4—0
7 ಆಶ್ಚರ್ಯಕರವಾದ ಬೇದಿ ಮಾತ್ರೆಗಳು —ಕ್ರಯ 0—4—0.
8 ತಲೆನೋವಿಗೆ ತೈಲವು —ಕ್ರಯ ಸೀಸಾಯಿ 1ಕ್ಕೆ 0—2—6.
9 ಉಷ್ಣಕಾರಕಕ್ಕೆ ಮಾತ್ರೆಗಳು —ಉಷ್ಣ ಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ ಗುಣವಾಗುವದು ಕ್ರಯ ಸೀಸಾಯಿ 1ಕ್ಕೆ 1—0—0.
10 ಮೂಲವ್ಯಾದಿಗೆ ಔಷದ.—ಮಲದ್ವಾರದಲ್ಲಿ ರಕ್ತ ಸ್ರಾವವೂ, ಮತ್ತು ಮೊಳಕೆಯ ಬಾಧೆಯು ಸಹಾ ಸಂಪೂರ್ಣವಾಗಿ ಗುಣಮಾಡುವದು ಕ್ರಯ ಸೀಸಾಯಿ 1ಕ್ಕೆ 0—8—0
ಕಣ್ಣಿಗೆ ಸುರ್ಮಾ —ಕ್ರಯ ಸೀಸಾಯಿ 1ಕ್ಕೆ 0—4—0.
12 ದಂತ ಚೂರ್ಣವು —ಕ್ರಯ ಡಬ್ಬಿಗೆ 0—1—3.
13 ಕೂದಲು ಬೆಳೆಯುವ ಎಣ್ಣೆ —ಕ್ರಯ ಸೀಸಾಯಿ 1ಕ್ಕೆ 0—4—0
14 ಆಶ್ಚರ್ಯಕರವಾದ ದ್ರಾವಕ—ಇದನ್ನು ಸ್ವಲ್ಪ ಮೂಸಿನೋಡುವುದರಿಂದ 1 ನಿಮಿಷದಲ್ಲಿ ತಲೆನೋವು ನಿಲುತ್ತೆ. ಕ್ರಯ ಸೀಸಾಯಿ 1ಕ್ಕೆ 0—4—0.
15. ಕಜ್ಜಿ ಮತ್ತು ಹುಳಕಡ್ಡಿ ಔಷದ.—ಕ್ರಯ ಸೀಸಾಯಿ 1ಕ್ಕೆ 0—4—0.
16 ಆಶ್ಚರ್ಯಕರವಾದ ಪೆನ್‌ಸಲ್ —ಈ ಪೆನ್ಸಲಿನಿಂದ ಕಾಗದದ ಮೇಲೆ ಬರೆಯುವಾಗ ಏನೂ ಕಾಣುವದಿಲ್ಲ ನಂತರ ನೀರನ್ನು ಬರೆದ ಕಾಗದದ ಮೇಲೆ ಸವರಿದರೆ ಎಲ್ಲಾ ಅಕ್ಷರಗಳು ಚನ್ನಾಗಿ ಕಾಣುವವು. ನೋಡುವವರಿಗೆ ಬಹಳ ಆಶ್ಚರ್ಯಕರವಾಗಿ ಕಾಣುತ್ತೆ. ಕ್ರಯ 0-4-0.
17 ಬಿಳೇ ಕೂದಲನ್ನು ಕರೇ ಕೂದಲನ್ನಾಗಿ ಮಾಡುವ ದ್ರಾವಕ:—ಈ ಔಷಧವನ್ನು ಒಂದಾವರ್ತಿ ಕೂದಲಿಗೆ ಸವರುವದರಿಂದ ಬಹಳ ದಿವಸಗಳವರಿವಿಗೂ ಕರಿಯ ಕೂದಲುಗಳು ಇರುತ್ತೆ ಕ್ರಯ 1—0—0.

1—0—0 ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ.

ನಮ್ಮ ಏಜಂಟರು.— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ.

ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,

5 ಹಾಜಿಸಾಹೇಬ್ ಮಹದಿ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಕರ್ಣಾಟಕ ವನೌಷಧಾಲಯ ಶಿರ್ಸಿ.

ಔಷಧಗಳ ಗುಣದ ಬಗ್ಯೆ ಡಾಕ್ತಾರ ಮುಂತಾದವರ ಕಡೆಯಿಂದ
ಸರ್ಟಿಫಿಕೇಟುಗಳು ಶಿಕ್ಕಿರುತ್ತವೆ.

೧. ರೋಗನಾಶಕ, ರಕ್ತ, ಧಾತು ಶುದ್ಧಿ ವ ವೃದ್ಧಿಕರ ಲೋಹ ಮಿಶ್ರಿತ ಗುಳಿಗೆ ೪೨ ಟ ಖ ಸಹ ಕ್ರಯ ರೂ. ... ೨—೪—೦
೨. ಪ್ರವಾಳ ಕೇಶರ ಅಮರಸತ್ವ ಶಿಲಾಜಿತು ವ ವನಸ್ಪತಿ ಮಿಶ್ರಿತ ಧಾತುಪೌಷ್ಟಿಕ ಶಕ್ತಿವರ್ಧಕ ಗುಳಿಗೆ ೪೨ ಕ್ರಯ ರೂ ೨—೪—೦
೩. ಗರ್ಮಿ ರೋಗನಾಶಕ ಗುಳಿಗೆ. ೭ ದಿವಸದಲ್ಲಿ ಖಚಿತ ಗುಣ ೪೨ ಗುಳಿಗೆ ಡಬ್ಬಿ ೧ಕ್ಕೆ ಕ್ರಯ ರೂ .. ... ೩—೪—೦
೪. ಟಾಕಿಚಪ್ಪಿನಾಶಕ ಮಲಮು ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೫ ವಾತನಾಶಕ ತೈಲ ಯಾವದೇ ತರದ ವಾತವಿದ್ದರೂ ಗುಣ ಕುಪ್ಪಿ ೧ಕ್ಕೆ ಕ್ರಯ ರೂ ೧—೪—೦
೬. ಭೃಂಗಾಮಲಕಾದ್ಯ ತೈಲ ಶಿರೋರೋಗ ನೇತ್ರರೋಗ ನಿವಾರಣ ಅಕಾಲದಲ್ಲಿ ಆದ ಹಣ್ಣುಕೂದಲು ಕಪ್ಪಾಗುತ್ತವೆ ಕುಪ್ಪಿ ೧ಕ್ಕೆ ಕ್ರಯ ರೂ .. ೧—೪—೦
೭ ಜಂಬೀರ ತೈಲ ಮೇಲಿನಂತೆ ಗುಣ ಕುಪ್ಪಿ ೧ಕ್ಕೆ ಕ್ರ ರೂ ೧—೨—೦
೮. ಮೂಲವ್ಯಾದಿ ಹರಚೂರ್ಣ. ಡಪ್ಪಿ ೧ಕ್ಕೆ ಕ್ರಯ ರೂ ೧—೪—೦
೯. ಕಫದಮ್ಮುಹರ ಚೂರ್ಣ ಡಪ್ಪಿ ೧ಕ್ಕೆ ಕ್ರಯ ರೂ ೧—೪—೦
೧೦. ಇಸುಬುರುತ್ತಿ ಮಲಮು ಡಪ್ಪಿ ೧ಕ್ಕೆ ಕ್ರಯ ರೂ ೧—೪—೦
೧೧. ಅಸಾಧ್ಯಕೆಟ್ಟ ಹುಣ್ಣುಗಳಿಗೆ ಮಲಮು ೧—೪—೦
೧೨. ಮದನೋದ್ಭವ ಚೂರ್ಣ ಡಪ್ಪಿ ೧ಕ್ಕೆ ರೂ ೧-೧—೦
೧೩. ಅಮೃತಪಾಕ (ವೃದ್ಧನಾದರೂ ಸಶಕ್ತನಾಗುತ್ತಾನೆ) ಅತ್ಯಂತ ಪೌಷ್ಟಿಕ ಶಕ್ತಿವರ್ಧಕ ೪೦ ತೊಲೆ ಡಪ್ಪಿ ೧ಕ್ಕೆ ೩—೮—೦
೧೪. ಅಮೃತಗುಟಿ ಅಗ್ನಿವೃದ್ಧಿಕರ ಪಿತ್ತಕಫನಾಶಕ ಜ್ವರಗತ್ತೆ ಅಸಿಗತಜ್ವರ ನಾಶವಾಗಿ ಶಕ್ತಿ ಬರುತ್ತದೆ ದಮ್ಮು ಕೆಮ್ಮು ಗುಣವಾಗುತ್ತದೆ ಗುಳಿಗೆ ೪೦ರ ಕ್ರಯ ರೂ ೨—೦—೦

ಈ ಶಿವಾಯ ಇನ್ನೂ ಅನೇಕ ಔಷಧಗಳು ಶಿಕ್ಕುತ್ತವೆ ರೋಗದ ಲಕ್ಷಣ ಪೂರ್ಣವಾಗಿ ತಿಳಿಸಿದರೆ ಯೋಗ್ಯ ಕಿಮ್ಮತಿಗೆ ಉತ್ತಮ ಔಷಧಗಳು ಕಳುಹಿಸಲಾಗುವದು

ಪತ್ತೆ:—ಆರ್. ಯಸ್. ವಝೆ ಕಸಬೆ, ವೈದ್ಯಭೂಷಣ,
ಪೋಸ್ಟು ಶಿರಸಿ, ಜಿಲ್ಲಾ ಉತ್ತರ ಕಾನಡಾ

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ ಸದರಿ ಕಾಖಾನೆಯಲ್ಲಿ ಪ್ರಸಿದ್ಧವಾದ ಬಿ ಎಸ್ ಎ ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ಸನ್, ರೊಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ ಎಸ್ ಎ ಬ್ರೆಂಪ್ಟನ್, ಬ್ರೂಕ್ಸ್, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4 ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

K. K. Shanbhog, *Proprietor*
THE CANARA CYCLE MART,
Udipi, S. Canara.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು
ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

ಧಾತುಪೌಷ್ಟಿಕ ವಜ್ರಾಂಗಪಾಕ.

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು ರಕ್ತದೂಷಿತರೋಗ, ಮೆಂದುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ, ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ. ೪೦ ತೊಲೆಗೆ ಕ್ರಯ ರೂ ೩—೮—೦, ಒಮ್ಮೇಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ. ೬—೦—೦. ಟಪ್ಪಾಲು ಖರ್ಚು ಬೇರೆ

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿರೋಗ ನಾಶಕ ಗುಳಿಗೆ ೪೨ಕ್ಕೆ ಉತ್ತಮ ಗುಣ ಕ್ರಯ ರೂ ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೨೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೇಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ. ೧ ಟಪ್ಪಾಲು ಖರ್ಚು ಬೇರೆ

ಇನ್ನು ಅನೇಕ ಔಷಧಗಳು ನಮ್ಮ ಕಂಪೆನಿಯಲ್ಲಿ ಶಿಗುತ್ತವೆ ಅನುಪಾನ ಪತ್ರಿಕೆ ಒಂಗಿಯ ಸಂಗಡ ಕಳುಹಿಸುವೆವು

ನಮ್ಮ ವಿಳಾಸ:— **ವಿ. ಎಸ್. ಮೋಡಕ,**
ಕರ್ಣಾಟಕ ಔಷಧಾಲಯ,
ಮುಕ್ಕಾಂ ಶಿರ್ಸಿ, ಪೋಸ್ಟ್ ಶಿರ್ಸಿ, ಜಿಲ್ಲಾ ಕಾನಡಾ

ಯುನಿವರ್ಸಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಸೂರೆನ್ಸ್ ಕಂಪೆನಿಯು ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬದನ್ನು ನೀವು ಅರಿತಿರುವಿರೋ?

ಇನ್ಸೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ. ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಆವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

		ಮೊದಲನೇ ವರ್ಷ.	2ನೇ ವರ್ಷ
ಹೊಸಕೇಸ್ (ಜೀವ)	ರೂ.	13,329—0—0	22,549—0—0
,, (ವಿವಾಹ)	,,	25,670—0—0	38,933—0—0
ಜುಮ್ಲಾ ಕೇಸುಗಳು	,,	38,999—0—0	61,482—0—0
ವಸೂಲಾದ ಪ್ರಿಮಿಯಮ್	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	,,	10,000—0—0	50,000—0—0
(ಜನರಲ್) ರಕ್ಷಿತ ದನ	,,	37,220—0—0	23,778—3—2
ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ			ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. ಅದು 1912ನೇ ಲ್ಯಾಪ್ ಎಷ್ಯೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ರೇವಣಾತಿಯನ್ನಿಟ್ಟಿರುವುದು 2 ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು. 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4. ರೂ. 3,00,000ಗಿಂತಲೂ ಹೆಚ್ಚಿಗೆ ಭಾದ್ಯತೆಗಳನ್ನು ಕೊಟ್ಟಿದೆ 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ 9. ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ.

"ಬಂಗಾಳಿ"—14ನೇ ಜನವರಿ 1914—ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡೆ ಇದೆ. ನಾವು ಅದನ್ನು ಓದಿನೋಡಿ ಅದು 61,482 ಪ್ರೊವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರನೇ ಮಾಡಿತ್ತು. ಸಮಾರು 3 ಲಕ್ಷ ಭಾಧ್ಯತ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟರುಗಳು ಬೇಕಾಗಿವೆ. ಎಲ್ಲಾ ವಿಧದ ಏಜಂನ್ಸಿ ಶರ್ತಗಳಿಗೆ—

ವಿಳಾಸ:— **ಲಕ್ಷ್ಮಣ ರಾವ್ ಬ್ರದರ್ಸ್,**
ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು; ಪೋಸ್ಟು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.



ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗ್ಗಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್ "ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂದುಗಳು, ಒಸವನಗಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ. ದ್ವಾರಾ ರವಾನಿಸುವುದು.

ಸೀಸೆಯೊಂದರ ಕ್ರಯ ರೂ 1 0-0, ಅ. ವೆ 0-4 0 ಬೇರೆ, 3 ಸೀಸೆಗಳ ಕ್ರಯ ರೂ. 2-10 0, ಅ. ವೆ. 0-7-0 ಬೇರೆ.

ಸೂಚನೆ — ಅನೇಕ ದುರ್ನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಮಾರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮುಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಅರ್ವಾಚೀನ ಮತ್ತು ಪ್ರಾಚೀನ ಮತಾಚಾರ ಪಂಡಿತರ ಗುದ್ದಾಟಗಳ ಮೂಲಕ ಗುರು ಮಠಗಳಿಂದ ಸಮಾಜಕ್ಕೆ ಪ್ರಕೃತ ಉಂಟಾಗುವ ಪ್ರಯೋಜನವು ಬಯಲಿಗೆ ಬಂದಿರುವುದು. ತಾವು ಕೃತತ್ರೇತದ್ವಾಪರ ಯುಗಗಳಲ್ಲಿ ಜನ್ಮನೆತ್ತಿದವರಂತೆ ಕಲಿಕಾಲ ಕಲಿಕಾಲವೆಂತ ಸೃಷ್ಟಿಯ ಯಾವತ್ತು ವಸ್ತುಗಳನ್ನೂ ದೂಷಿಸಿ ಸರ್ವೇಶ್ವರನ ಪ್ರೀತಿಮಯವಾದ ಜಗತ್ತಿನಲ್ಲಿ ಪ್ರೀತಿ ಸಹಾನುಭೂತಿಗಳನ್ನು ಕನಸ್ಸಿನಲ್ಲೂ ಕಾಣದೆ ತಮ್ಮ ಮುಷ್ಟಿಕೆಯಿಂದ ಹೊರಬಿದ್ದ ಎಲ್ಲವನ್ನೂ ಸಮಾಜದಿಂದ ಬಹಿಷ್ಕಾರ ಹಾಕುವ ವರ್ಗವೊಂದು. ಎಲ್ಲಾ ಸುಧಾರಣೆಗೂ ಅಭಿವೃದ್ಧಿಗೂ ಆತಂಕಗಳಾಗಿರುವ ಗುರು ಮಠ ಮತ್ತು ಪ್ರಾಚೀನ ಪಂಡಿತರು ಮಾಜಿಹೋಗದೆ ಒಳ್ಳಿತವು ಉಂಟಾಗದೆಂದು ಬಹಿರಂಗವಾಗಿ ಹೇಳಿಕೊಂಡು, ಅಲ್ಲದ ಸಲ್ಲದ ಧರ್ಮವಿರುದ್ಧ, ಸ್ವಭಾವ ವಿರುದ್ಧವಾದ ವರ್ತನೆಗಳನ್ನು ಮನಸ್ವಿಯಾಗಿ ಅವಲಂಬಿಸಲು ಇಚ್ಛಿಸುವ ವರ್ಗವು ಮತ್ತೊಂದು, ಒಂದು ಕಡೆಯಲ್ಲಿ ಅನರ್ಥಕಾರಿಯಾದ ಹಟ ಬುದ್ಧಿ, ಮತ್ತೊಂದು ಕಡೆಯಲ್ಲಿ ಸರ್ವನಾಶಕಾರಿಯಾದ ವಿಪರೀತ ಬುದ್ಧಿ—ಈ ಎರಡು ಬುದ್ಧಿ ವಿಕಾರಗಳು ವಿಕಾಸವಾಗುವಂಥಾದ್ದನ್ನು ನೋಡಿ ಸುಮಾರ್ಗವನ್ನು ಕಾಣದೆ, ಉಭಯ ಬುದ್ಧಿಗಳಿಗೆ ವರಕ್ಷಿಯೂ ಅಭಾವನನ್ನು ತಾಳಿ, ಎಂಥಾ ಕಾರ್ಯ ಸಾಧನದಲ್ಲಿಯಾದರೂ ತಟಸ್ಥರಾಗಿರುವ ವರ್ಗವು ಮತ್ತೊಂದು ಪತ್ರಕರ್ತರೇ, ಸಮಾಜವು ಛಿನ್ನ ಭಿನ್ನವಾಗಿ ಹೋಗುವಂಥ ವರ್ಗಗಳಲ್ಲಿ ಈ ಮೂರು ವರ್ಗಗಳು ಮುಖ್ಯವಾಗಿವೆ. ಪೂರ್ವಾಪರ ವಿಚಾರವಿಲ್ಲದೆ, ಕಾಲ ಪ್ರವಾಹವೆಂದರೇನು, ಈ ಪ್ರವಾಹದ ಮೂಲಕ ದೇವರು ಸಮಾಜಕ್ಕೆ ತೋರಿಸಿ ಕೊಟ್ಟಿರುವ ಮಾರ್ಗ ಯಾವುದು, ಜನರ ಸ್ಥಿತಿಗತಿಗಳೇನು, ಕಾಲ ಮಾನಾರ್ಹವೇನೆಂಬುದನ್ನು ತಿಳಿಯುವಷ್ಟು ಸಮಾಧಾನ ವ ತಾಳ್ಮೆಯು ಇಲ್ಲದೆ ಸಮಾಜವು ವರ್ಗ ವರ್ಗಗಳಲ್ಲಿ ಶೀಘ್ರವಾಗಿ ಹೋಗುತ್ತಿದೆ. ಹಲವರು ತಮ್ಮ ವಿಚಾರ ಬೇರೆ, ಮತ ಬೇರೆ ಎಂತ ಸ್ವಮತಕ್ಕೆ ಬಹಿಷ್ಕಾರ ಹಾಕುವರು. ಇನ್ನು ಕೆಲವರು ಮನಸ್ವಿ ವರ್ತಿಸುವವರೆಂದು ಗುರು ಮಠದಿಂದ ಬಹಿಷ್ಕಾರ ಹೊಂದುವರು. ಈ ರೀತಿ ಸಮಾಜವು ನಿಕೃಷ್ಟಾವಸ್ಥೆಯನ್ನು ಹೊಂದುತ್ತಿರುವುದು. ಸ್ವಾಮೀ, ಮಠಾಧಿಪತಿಗಳ ವಿಶೇಷವಾದ ಲಕ್ಷವು ಈ ನಿಕೃಷ್ಟಾವಸ್ಥೆಯತ್ತ ಗಡೆ ಇರಬೇಕು. ಇಂತಹ ನಿಕೃಷ್ಟಾವಸ್ಥೆಯಿಂದ ಸಮಾಜವನ್ನು ಧರ್ಮ ಗುರುಗಳು ಪಾರಗೊಳಿಸಬೇಕು. ಶಿಷ್ಯ ಮಂಡಳಿಯವರ ಸಹಕಾರವು ಇಂತಹ ವಿಷಯಗಳಲ್ಲಿ ಅಗತ್ಯವಾಗಿರಬೇಕು. ಇಂತಹ ಸಹಕಾರವು ಸಮಾಜದಿಂದ ಗುರು ಮಠಗಳಿಗೆ ದೊರೆಯದೆ ಇದ್ದದ್ದರಿಂದ ಅಥವಾ ಇಂತಹ ಸಹಕಾರವು ಗುರು ಮಠಗಳಿಂದ ತಿರಸ್ಕರಿಸಲ್ಪಟ್ಟದ್ದರಿಂದ ಸಮಾಜಕ್ಕೆ ಅವರ್ಣನೀಯವಾದ ದೀನ ಸ್ಥಿತಿಯು ಪ್ರಾಪ್ತವಾಗಿದೆ. ಅಪ್ರಾಯಸ್ಥರಾದ ಶ್ರೀ ಕಾಶೀ ಮಠದ ಯತಿಗಳಿಗೆ ಮಾತ್ರವಲ್ಲ, ಇತರ ಹಿಂದೂ ಧರ್ಮ ಗುರುಗಳಿಗೆ ಸಹ ಈ ಕಾಲದಲ್ಲಿ ಇಂತಹ ಸಹಕಾರವು ಅಗತ್ಯವಾಗಿ ಬೇಕಾಗಿರುವುದು.

ಸಹಕಾರವು ಬೇಕಾಗಿದೆಂದ ಮೇಲೆ ಅಂತಹ ಸಹಕಾರವನ್ನು ಮಾಡುವ ಬಗೆ ಹೇಗೆ ಎಂಬುವ ಪ್ರಶ್ನೆಯು ಸ್ವಭಾವಿಕವಾಗಿ ವಿಚಾರಕ್ಕೆ ಬರುವುದು. ಸ್ವಾಮೀ, ಸಮಾಜದಲ್ಲಿ ಸಂಪತ್ತಿನ ಅಭಿವೃದ್ಧಿಗೆ ಮುಖ್ಯ ಕಾರಣ ಯಾವುದು? ವಿದ್ಯೆ. ವಿದ್ಯಾ ಮೂಲಕ ಶಾಸ್ತ್ರ ಪರಿಶೋಧನೆ. ಇಂತಹ ಪರಿಶೋಧನಾ ಫಲಗಳ ಅನುಸರಣೆಯಿಂದ ದ್ರವ್ಯಾರ್ಜನೆ. ಇದೇ ರೀತಿ ಸಂಘ ವ್ಯವಹರಣೆಯ ರೀತಿಗಳನ್ನು ಲೋಕಾನುಭವದಿಂದ ಶೋಧಿಸಿ ನಿರ್ಧರಿಸಿರುವ ಸಮಾಜ ಶಾಸ್ತ್ರವು ಇದೆ. ಗುರುಮಠಗಳಲ್ಲಿ ವ್ಯವಹರಣಾ ರೀತಿಗಳ ಶೋಧನೆಯು ಅಗತ್ಯವಾಗಿರುವುದು. ಗುರುವರ್ಯರು ಇದನ್ನೊಬ್ಬರೇ ಕೈಕೊಳ್ಳುವುದಕ್ಕಿಂತ ಅರ್ವಾಚೀನ ಮತ್ತು ಪ್ರಾಚೀನ, ಲೌಕಿಕ ಮತ್ತು ವೈದಿಕ ವಿದ್ವಾಂಸರನ್ನು ಮಠದಲ್ಲಿ ಸದಾ ಇರಗೊಳಿಸಿ, ಇಂತಹ ಶೋಧನೆಗಳನ್ನು ನಡೆಸಿ, ಸಮಾಜಕ್ಕೆಲ್ಲ ತಮ್ಮ ಸಿದ್ಧಾಂತಗಳನ್ನು ಸಾರಿ ಹೇಳುವುದರಿಂದ, ಧರ್ಮಸಂಸ್ಥಾಪನೆಯ ಕಾರ್ಯವು ಬಹಳ ಸುಲಭದಲ್ಲಿ ಕೈಗೂಡುವುದು. ಸಮಾಜದಲ್ಲಿ ಎಂತಹ ಅಡಚಣೆಗಳು ಬಂದು ಬಿದ್ದಿವೆ, ಅವು ಯಾವ ಕಾರಣಗಳಿಂದ ಪ್ರಾಪ್ತವಾಗಿರುವವು, ಅವುಗಳನ್ನು ಎದುರಾಡುವ ಬಗೆ ಹೇಗೆ ಎಂಬುದನ್ನು ತಮ್ಮ ತಪೋವರ್ಚಸ್ಸಿನಿಂದಲೂ ಈ ವಿದ್ವಾಂಸ ಮಂಡಳಿಯ ಸಹಾಯದಿಂದಲೂ ಧರ್ಮ ಗುರುಗಳಿಗೆ ನಿರ್ಧರಿಸಲು ಅನುಕೂಲವಾಗುವುದು. ದೇವಸ್ಥಾನಗಳ ಮತ್ತು ಮಠಗಳ ಹೊರತು ಈ ಕಾಲದಲ್ಲಿ ಶಿಷ್ಯ ವರ್ಗದವರಿಗೆ ಅಗತ್ಯವಿರುವ ಇತರ ಸಂಸ್ಥೆಗಳು ಯಾವವು, ಇವನ್ನು ಹೇಗೆ ಸ್ಥಾಪಿಸಬೇಕು, ಹೇಗೆ ನಡೆಸಬೇಕು, ಇಂತಹ ಸಂಸ್ಥೆಗಳ ಲಾಲನೆ ಪಾಲನೆ ಬಗ್ಗೆ ಸ್ವಾರ್ಥವನ್ನು ಪೂರ್ಣವಾಗಿ ಬಿಟ್ಟು ಯೋಗಿ ಯೋಗಿನಿಯರ ವರ್ಗಗಳನ್ನು ಸಮಾಜದಲ್ಲಿ ಹೇಗೆ ನಿರ್ಮಿಸಬೇಕು, ಇಷ್ಟೆಲ್ಲ ವಿಚಾರಗಳು ಧರ್ಮ ಗುರುಗಳಿಂದ ಮಾಡತಕ್ಕವುಗಳಾಗಿವೆ. ನನ್ನಂತಹ ಅಲ್ಪ ಮತಿಯು ತಿಳಿದಿರುವ ಮೇರೆಗೆ ಎಂದೆಂದಿಗೂ ಶುಭವನ್ನೇ ಸೂಚಿಸುವ ಕಾಲ ಪ್ರವಾಹವು ಈ ಕಲಿಕಾಲದಲ್ಲಿ ಸಹ ಶುಭವನ್ನೇ ಸೂಚಿಸುತ್ತಿರುವುದು ಪ್ರವಾಹದ ಸೆಳವನ್ನು ಸಮಾಜದೇಳಿಗೆಗೆ ಸಹಾಯಕವಾಗುವಂತೆ ತಿದ್ದಲು ವಿಶೇಷ ಆಸಕ್ತಿಯೂ ಸ್ವಾರ್ಥತ್ಯಾಗವೂ, ಚಟುವಟಿಕೆಯೂ ಪ್ರಾಚೀನ ಕಾಲಕ್ಕಿಂತ ಈ ಕಾಲದಲ್ಲಿ ಹೆಚ್ಚಾಗಿ ಬೇಕಾಗಿದೆ ಅಂತಹ ಸ್ವಾರ್ಥತ್ಯಾಗವನ್ನು ನಾವು ಮಾಡಲಾರೆವಾದ್ದರಿಂದ ಎಲ್ಲಾ ಕಡೆಗಳಿಂದಲೂ ಕಲಿಕಾಲದ ಮಹಿಮೆಯನ್ನು ಕೇಳುತ್ತಿರುವೆವು. ಸ್ವಾಮೀ, ಕಲಿಕಾಲದ ಮಹಿಮೆಯನ್ನು ನಾನು ಈ ರೀತಿ ತಿಳಿದಿರುವೆನು. ಆದ್ದರಿಂದ ತ್ಯಾಗಶಾಲಿಗಳಲ್ಲಿ ಅಗ್ರಗಣ್ಯರಾಗಿರಬೇಕಾದ ಧರ್ಮ ಗುರುಗಳ ಪದವಿಯು ಸಮಾಜಕ್ಕೆ ಅಗತ್ಯವೆಂಬ ತಮ್ಮ ಅಭಿಪ್ರಾಯವು ನ್ಯಾಯವಾದದ್ದೆಂತ ಹೇಳಿದೆನು. ಮಹತ್ವವಾದ ಗುರು ಪದವಿಯ ಕಾರ್ಯಗಳಲ್ಲಿ ಸಹಕಾರವೆಂದರೇನೆಂದು ಸೂಚಿಸಿದೆನು. ತಮ್ಮ ಅಪ್ಪಣೆಯಾದರೆ ಇಂತಹ ಸಹಕಾರವನ್ನು ಮಾಡತಕ್ಕವರ್ಯಾರೆಂಬುದನ್ನು ಇನ್ನೊಮ್ಮೆ ಬರಕೊಳ್ಳುವೆನು.

ತಮ್ಮ ಸೇವಕ,

ಅತ್ರಿಗೋತ್ರಜ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ.

ಕ್ರಮ ನಂಬ್ರ $\frac{361}{1914}$.

ಯಡ್ಯಾವಿಲ್ ಅಬ್ದುಲ್ ರಹಿಮಾನ — ವಾದಿ

ಮಿಸ್ಟರ್ ಕೆ. ಶ್ಯಾಮಶೆಟ್ಟಿ.—ವಕೀಲ.

ಕೋಟೆಪುರ ಯಡ್ಯಾವಿಲ್ ಅರಬಿ ಹಾಜಿ ಸಹಾ 4 ಜನರು— ಪ್ರತಿವಾದಿರು.

ಇವರೊಳಗೆ

ವಾದಿಯು ತರವಾಟ ಹಕ್ಕಿನ ಬಾಬತು ನೀಲೇಶ್ವರ ಕಸಬಾ ಗ್ರಾಮದ ಸರ್ವೇ ನಂಬ್ರ $\frac{39}{1\text{-}3\text{-}2}$ — $\frac{40}{1\text{—}2}$ನೇ ಜುಮಲಾ ತೀರ್ವೆ ರೂಪಾಯಿ 116—9—0 ಬೇರೇಜಿನ ಆಸ್ತಿಗೆ ಸಂಬಂಧಪಟ್ಟು 4ನೇ ಪ್ರತಿವಾದಿಯು ವಾದಿಯಾಗಿ 1—2—3ನೇ ಪ್ರತಿವಾದಿರ ಮೇಲೆ ಮಾಡಿದ ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಪ್ ಕೋರ್ಟ ಕ್ರಮ ನಂಬ್ರ $\frac{408}{1912}$ನೇ ವ್ಯಾಜ್ಯದಲ್ಲಿ ಆದ ರಾಜಿಯು ಒಳ ಸಂಚಿನ ಮೋಸದ್ದಾಗಿ ವಾದಿಯ ತರವಾಟಿಗೆ ಬಾಧಿಸತಕ್ಕದ್ದಲ್ಲವೆಂತಲೂ ಸದರಿ ಆಸ್ತಿಗಳು ವಾದಿಯ ತರವಾಟ ಹಕ್ಕಿನವುಗಳೆಂತ ಸಹಾ ಸ್ಥಾಪಿಸಿ ಡಿಕ್ಲರೇಶನ್ ಬಗ್ಗೂ ಸದರಿ ಆಸ್ತಿಯನ್ನು ತರವಾಟಿನಗೋಸ್ಕರ ವಾದಿಯ ಸ್ವಾಧೀನ ಬಿಡಿಸಿಕೊಡಬೇಕಾಗಿ ಸಹಾ ವಾದಿಯು ತರವಾಟಿನಗೋಸ್ಕರ, ಮೇಲ್ಕಂಡ ವ್ಯಾಜ್ಯ ದಾಖಲು ಮಾಡಿರುತ್ತಾನೆ.

ಸದರಿ ವ್ಯಾಜ್ಯದಲ್ಲಿ ವಾದಿ ಮತ್ತು 1—4ನೇ ಪ್ರತಿವಾದಿರ ತರವಾಟಿನವರು ಕಕ್ಷಿಯಾಗಿ ಸೇರುವರೆ ಮನಸ್ಸಿದ್ದವರು ಸದರಿ ವ್ಯಾಜ್ಯವನ್ನು ಪ್ರಥಮ ತನಖಿಗೆ ಇಟ್ಟ ತಾರೀಕು 1—8—1914ನೇ ಒಳಗೆ ಮೇಲ್ಕಂಡ ಕೋರ್ಟಿಗೆ ಹ್ಯಾಜಿರು ಮಾಡಿಕೊಳ್ಳತಕ್ಕದ್ದು

ಅವಶ್ಯವುಳ್ಳ ಪ್ಲೆಂಟು ನಕಲು ವಗೈರೆಯನ್ನು ವಾದಿರ ವಕೀಲ ಮ|ರಾ|ರಾ| ಕೆ ಶ್ಯಾಮ ಶೆಟ್ಟರ ಆಫೀಸಿನಲ್ಲಿ ಪಡಕೊಳ್ಳಬಹುದು.

District Munsif's Court,
Kasargode.
13th July 1914.

V. Kunhi Raman Nair
Ag. District Munsiff.

ಇಲ್ಲಿಯ ಸಾವಕಾರ ಮಿಜಾರ ವೆಂಕಟರಮಣ ಪೈಗಳವರು ಇದೇ ಕಳದ ಬುಧವಾರ ತಮ್ಮ ೬೨ನೇ ವರುಷದಲ್ಲಿ ಹೃದ್ರೋಗದಿಂದ ಮೃತಪಟ್ಟರೆಂಬುದನ್ನು ತಿಳಿಸಲು ವಿಷಾದಪಡುತ್ತೇವೆ. ಇವರಲ್ಲಿಯ ಪರೋಪಕಾರ ಭಾವವೂ ಉದಾರ ಮನಸ್ಸು ವಿಶೇಷವಾಗಿ ದೇವಸ್ಥಾನಗಳ ಜೀರ್ಣೋದ್ಧಾರ, ಬ್ರಾಹ್ಮಣ ಸಂತರ್ಪಣೆಗಳಲ್ಲಿ ವ್ಯಕ್ತವಾಗುತ್ತಿತ್ತು. ತನ್ನ ಹತ್ತಿರ ಸಾರಿದ ದೀನರಿಗೆ ಗುಪ್ತವಾದ ರೀತಿಯಲ್ಲಿ ಹಣ ಸಹಾಯವನ್ನು ಇವರು ವಿಶೇಷವಾಗಿ ಮಾಡುತ್ತಿದ್ದರು. ವೆಂಕಟರಮಣ ಪೈಗಳವರ ಮರಣದಿಂದ ಇವರ ಕುಟುಂಬ ಮಿತ್ರವರ್ಗದವರಲ್ಲಿ ಉಂಟಾದ ದುಃಖದಲ್ಲಿ ನಮ್ಮ ಸಹತಾಪವನ್ನು ಈಮೂಲಕ ಸೂಚಿಸಿರುವೆವು.

ವಿದೇಶ ವೃತ್ತಾಂತ.

ಕೆನಡಾ ದೇಶಕ್ಕೆ ಕೊಮಗಾಟಮಾರು ಎಂಬ ಹಡಗದಲ್ಲಿ ಹೋದ ಹಿಂದುಗಳನ್ನು ಇಳಿಯ ಬಿಡದೆ ಹಡಗದಲ್ಲಿಯೇ ಇರಿಸಿದ್ದರಷ್ಟೆ. ಈ ವಿಷಯ ಭಾರತೀಯ ಮುಂದಾಳಾದ ಗುರುದತ್ತ ಸಿಂಘರು ಅಪೀಲ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದರು. ಈ ಅಪೀಲ್ ತನಿಕೆ ನಡೆದು ಭಾರತೀಯರಿಗೆ ವಿರೋಧವಾಗಿಯೇ ತೀರ್ಮಾನವು ಹೇಳಲ್ಪಟ್ಟಿತು. ಈ ಕಾರಣದಿಂದ ಕೊಮಗಾಟಮಾರುವಿನಲ್ಲಿದ್ದ ಭಾರತೀಯರು ಹಿಂತಿರುಗಿ ಹೋಗಬೇಕಾಗಿರುವುದು. ಈ ಹಡಗದಲ್ಲಿರುವ ಭಾರತೀಯರನ್ನು ಗಡಿಪಾರು ಮಾಡಬೇಕೆಂದು ಸರಕಾರದವರು ಇಮಿಗ್ರೇಷನ್ ಆಫೀಸರರಿಗೆ ಅಜ್ಞಾಪಿಸಿದ್ದಾರೆ. ಹಡಗದಲ್ಲಿದ್ದ ಭಾರತೀಯರು ಹೊಂಕೊಂಗಿಗೆ ಹಿಂದಿರುಗಲು ಒಪ್ಪಿರುವರು ಆದರೆ ತಮ್ಮ ಕೂಡೆ ಖರ್ಚಿಗೆ ಇಲ್ಲದಿರುವುದರಿಂದ ಹಣ ಸಹಾಯ ಮಾಡಬೇಕೆಂದು ಕೆನಡಾ ಸರಕಾರದವರನ್ನು ಕೇಳಿಕೊಂಡಿದ್ದಾರೆ. ಹಿಂದಿರುಗಲು ೧೫,೦೦೦ ಪವನುಗಳ ಖರ್ಚು ತಗಲುವುದು ಗುರುದತ್ತ ಸಿಂಘರವರು ಲಂಡನ್ ಮತ್ತು ಕೆನಡಾ ಸರಕಾರಗಳನ್ನು ಈ ವಿಷಯ ದೂರುತ್ತಿರುವರು ಹೊಂಕೊಂಗಿನಿಂದ ಹಡಗವು ಬಿಡುವ ಮೊದಲು ಅದಕ್ಕಾಗುವ ಪರಿಣಾಮವನ್ನು ತಿಳಿದಿದ್ದರೂ ಈ ವಿಷಯ ವಿರೋಧಿಸದೆ ಇದ್ದದ್ದು ಉಭಯ ಸರಕಾರದವರ ತಪ್ಪಾಗಿದೆ ಎಂಬದು ಗುರುದತ್ತ ಸಿಂಘರ ವಾದವಾಗಿರುವುದು. ಕೆನಡಾ ಸರಕಾರದವರು ಹಿಂದಿರುಗುವ ಖರ್ಚನ್ನು ಕೊಡುವ ಹಾಗಿಲ್ಲವೆಂತ ತಿಳಿದುಬರುತ್ತದೆ.

ದಕ್ಷಿಣ ಆಫ್ರೀಕದ ಭಾರತೀಯ ಮುಂದಾಳುಗಳು ಹಿಂದೂಸ್ಥಾನಕ್ಕೆ ತಂತೀ ಬಿಟ್ಟು ದಕ್ಷಿಣ ಆಫ್ರೀಕದ ಭಾರತೀಯರು ೮ ವರ್ಷಗಳಿಂದ ಕಾದಾಡುತ್ತಿದ್ದ ಕರ್ಮಸನ್ಯಾಸಕ್ಕೆ ಪರಿಪೂರ್ಣ ಅಂತ್ಯವಾಯಿತು, ಇಂಪೀರಿಯಲ್, ಇಂಡಿಯನ್, ಯೂನ್ಯನ್ ಸರಕಾರಗಳಿಗೂ ಹಿಂದೂಸ್ಥಾನದ ಜನರಿಗೂ, ಮಾನ್ಯಗೋಖಲೆ, ರೆವರೆಂಡ್ ಅಂಡ್ರೂಸ ಮತ್ತು ರೆವರೆಂಡ್ ಪಿಯರ್ಸನರಿಗೂ ಕರ್ಮಸನ್ಯಾಸವನ್ನು ಕೈಕೊಂಡಿದ್ದ ಸಾವಿರಾರು ಮಂದಿ ಕೃತಜ್ಞರಾಗಿದ್ದಾರೆ ಎಂಬಿತ್ಯಾದಿ ಮಾತುಗಳಿಂದ ತಮ್ಮ ಕೃತಜ್ಞತೆಯನ್ನು ತೋರ್ಪಡಿಸಿರುವರು.

ಬಾಲ್ಕಾನ್ ತುರ್ಕಿ ಯುದ್ಧದ ಫಲವಾಗಿ ಅಲ್ಬಾನಿಯವೆಂಬ ಒಂದು ಹೊಸರಾಜ ಸ್ಥಾಪಿಸಲ್ಪಟ್ಟು ಒಬ್ಬ ಕ್ರೈಸ್ತ ಪ್ರಿನ್ಸರು ಅದಕ್ಕೆ ಅರಸರಾಗಿ ನೇಮಿಸಲ್ಪಟ್ಟರು. ಈಗ ಆ ರಾಜ್ಯದ ಸ್ಥಿತಿಯು ಬಹಳ ಭಯಂಕರವಾಗಿದೆ ಒಂದು ಕಡೆಯಲ್ಲಿ ಎಫಿರಸಿನ ಜನರು ಗ್ರೀಕ ಗವರ್ನರರ ಕೆಳಗೆ ಸ್ವತಂತ್ರಾಧಿಕಾರವನ್ನು ಸಾರಿಸಿಕೊಂಡು ಅಲ್ಬಾನಿಯಕ್ಕೆ ಸೇರಿದ ಕೆಲವು ಸ್ಥಳಗಳನ್ನು ವಶ ಮಾಡುತ್ತಲಿದ್ದಾರೆ ಇನ್ನೊಂದು ಕಡೆಯಲ್ಲಿ ಅಲ್ಲಿಯ ಪೂರ್ವವಾಸಿಗಳಾದ ಮುಸಲ್ಮಾನರು ದಂಗೆ ಎದ್ದು ಪ್ರಿನ್ಸರಿಗೆ ವಿರೋಧವಾಗಿ ಕಾದಾಡುತ್ತಿದ್ದಾರೆ. ಪ್ರಿನ್ಸರು ಏನು ಮಾಡಬೇಕೆಂದರಿಯದೆ ಇದ್ದಾರೆ. ಎಫಿರಸಿನವರು ಕೊರಿಟ್ಜ ಮತ್ತು ಆಜುಬಾಜಿನ ಇತರ ಸ್ಥಳಗಳನ್ನು ಯುದ್ಧಮಾಡಿ ತಮಗೆ ಸೇರಿಸಿಕೊಂಡಿರುವರು. ಈ ಎಲ್ಲಾ ಸ್ಥಳಗಳು ಲಂಡನ್ ಸಂಧಾನದ ಪ್ರಕಾರ ಅಲ್ಬಾನಿಯಕ್ಕೆ ಸೇರಿತ್ತು. ಮುಖ್ಯ ಪಟ್ಟಣವಾದ ದುರಾಜ್ಜೊಗೆ ದಂಗೆಗಾರರು ಪ್ರತಿ ರಾತ್ರಿ ಎಂಬಂತೆ ಗುಂಡು ಹೊಡೆಯುತ್ತಿದ್ದಾರೆ. ತಾ. ೧೫ರಲು ಪ್ರಿನ್ಸರ ಅಧ್ಯಕ್ಷತೆಯಲ್ಲಿ ಅಲ್ಬಾನಿಯದ ೪೦ ಮುಖ್ಯಸ್ಥರು ಸಭೆ ಕೂಡಿ ಮುಂದಿನ ಗತಿ ಏನೆಂಬ ವಿಷಯ ಆಲೋಚಿಸಿದರು ಕೆಲವರು ಶ್ರೇಷ್ಠ ರಾಜ್ಯಗಳಿಗೆ ತಮ್ಮ ಸಂಕಷ್ಟವನ್ನು ತಿಳಿಸಿ ಅವರ ಸೇನೆಯನ್ನು ತರಿಸಬೇಕೆಂಬ ಆಲೋಚನೆ ಕೊಟ್ಟರು ಇನ್ನು ಕೆಲವರು ರುಮೇನಿಯರ ಸಹಾಯವನ್ನು ಕೇಳಿಕೊಳ್ಳಬೇಕೆಂಬ ಆಲೋಚನೆ ಕೊಟ್ಟರು ತನ್ಮಧ್ಯೆ ಬೀರಟ್ ಎಂಬ ಸ್ಥಳವನ್ನು ದಂಗೆಗಾರರು ಉತ್ತರದಲ್ಲಿಯೂ ಎಫಿರಸಿನವರು ದಕ್ಷಿಣದಲ್ಲಿಯೂ ಮುತ್ತಿರುವರೆಂಬ ವಾರ್ತೆ ಬಂದದೆ

ಐರ್ಲ್ಯಾಂಡಿನ ಹೋಮ್ ರೂಲ ಮಸೂದೆಗೆ ವಿರೋಧವಾಗಿ ಹೋರಾಡುವ ಅಲ್ಸ್ಟರಿನವರು ದಿನೇ ದಿನೇ ಆಯುಧ ಸಾಮುಗ್ರಿಗಳನ್ನು ತರಿಸುತ್ತಿದ್ದಾರೆ ಕೆಲವು ಕಸ್ಟಮ್ ಆಫೀಸರರಿಂದ ಹಿಡಿಯಲ್ಪಟ್ಟವು ಈ ಪಕ್ಷದ ಮುಂದಾಳಾದ ಸರ್ ಎಡ್ವರ್ಡ್ ಕಾರ್ಸನರು ಬೆಲ್‌ಫಾಸ್ಟಿಗೆ ಹೋಗಿರುವರು ಅಲಸ್ಟರಿಗೆ ಪ್ರತ್ಯೇಕ ಯೂನ್ಯನಿಸ್ಟರ ಒಂದು ಕೌನ್ಸಿಲ್ ಏರ್ಪಡಿಸೋಣಾಗಿಯದೆ ಒಟ್ಟಾರೆ ಅಲಸ್ಟರಿನ ಸ್ಥಿತಿಯನ್ನು ನೋಡ ವಾಗ ಅವರು ಸಂಧಾನಕ್ಕೆ ಒಪ್ಪುವ ಹಾಗೆ ತೋರುವದಿಲ್ಲ ಅಂತಃಕಲಹವು ಬೇಗನೇ ಆಗುತ್ತದೋ ಏನೋ ಎಂಬ ಭಯವಿದೆ ವಲಂಟಿಯರರು ಯುದ್ಧ ಸನ್ನಾಹರಾಗಿಯೇ ಇರುವರು

ಉತ್ತರ ಹಿಂದೂಸ್ಥಾನ.

ಇದೇ ತಿಂಗಳ ತಾ ೪ಕ್ಕೆ ಅಂತ್ಯವಾಗುವ ವಾರದಲ್ಲಿ ೫೪೨ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೪೭೪ ಮಂದಿ ಮೃತಪಟ್ಟರು. ಈ ಪೈಕಿ ಮುಂಬಾಯಿ ೯, ಮದ್ರಾಸ್ ೪, ಬಂಗಾಲ ೧೨, ಬಿಹಾರ್ ೭, ಸಂಯುಕ್ತ ಸಂಸ್ಥಾನ ೨೫೩, ಪಂಜಾಬ ೨೧೦, ಬರ್ಮ ೧೧೧, ಮೈಸೂರು ೧೭, ವಾಯುವ್ಯ ಸರಹದ್ದ ೧ ಮರಣಗಳಾದವು.

ಕಲ್ಕತ್ತೆಯ ಏರಿಕಪುರದಿಂದ ರೈಲ್ವೇ ಲೈನು ಕಾವಲುಗಾರರಾದ ೩ ಜನರು ರಾತ್ರಿಕಾಲ ಲೈನಿನಲ್ಲಿ ನಿದ್ದೆಮಾಡುತ್ತಿದ್ದರಿಂದ ವ್ಯಾಸರಾಯರ ಸ್ಪೆಶ್ಯಲ್ ಟ್ರೇನು ಹಾದು ಹೋಗುವಾಗ ಇವರ ಮೇಲಿಂದ ದಾಟಿ ಮೂರು ಮಂದಿಯು ಅಲ್ಲಲ್ಲಿ ಸತ್ತು ಬಿದ್ದಿದ್ದರು

ಮುಂಬಾಯಿಗೆ ಸೇರಿದ ಬ್ರೋಚಿನ ಡಿಸ್ಟ್ರಿಕ್ಟ್ ಕಲಕ್ಟರರಾದ ಹೆಂಡರ್ಸನ್ ಎಂಬವರು ಅವರ ಗೋವಾನಿ ಭಟ್ಟನ ಒಂದು ಸರ್ಟಿಫಿಕೇಟನ್ನು ಇಟ್ಟುಕೊಂಡಿದ್ದಾರೆಂಬ ತಕ್ರೀರಿನ ಮೇಲೆ ಖಾಂಡೇಸಿನ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರ ಮುಂದೆ ಆಪಾದಿಸಲ್ಪಟ್ಟಿದ್ದರು. ಹೆಂಡರ್ಸನರಲ್ಲಿ ಕೆಲಸಕ್ಕಿದ್ದ ಈ ಅಡಿಗೆ ಭಟ್ಟನು ಕೆಲಸಕ್ಕೆ ಸೇರುವಾಗ ತನ್ನಲ್ಲಿದ್ದ ಕೆಲವು ಸರ್ಟಿಫಿಕೇಟುಗಳನ್ನು ಅವರ ಕೂಡೆ ಇಡಲು ಕೊಟ್ಟಿದ್ದನು. ಅನಂತರ ಈ ಅಡಿಗೆ ಭಟ್ಟನು ಅವರಲ್ಲಿಂದ ಕೆಲಸ ಬಿಡಲು ಆಲೋಚಿಸಿ ಸರ್ಟಿಫಿಕೇಟುಗಳನ್ನು ಹಿಂದಕ್ಕೆ ಕೇಳಿದನು ಆದರೆ ಹೆಂಡರ್ಸನರಿಗೆ ಇತರ ಅಡಿಗೆ ಭಟ್ಟರು ಸಿಗದ್ದರಿಂದ ಸರ್ಟಿಫಿಕೇಟುಗಳನ್ನು ಹಿಂದೆ ಕೊಡದೆ ಅವನನ್ನು ತನ್ನಲ್ಲಿಯೇ ಇರಿಸಬೇಕೆಂದು ಪ್ರಯತ್ನಿಸಿದರು. ವರಂತು, ಅಡಿಗೆ ಭಟ್ಟನು ಕೆಲಸ ಬಿಟ್ಟು ಹೋಗಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಲ್ಲಿ ಮೊಕದಮೆ ತಂದನು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಹೆಂಡರ್ಸನರಿಗೆ ೩೦ ರೂಪಾಯಿ ಜುರುಮಾನೆ ತಪ್ಪಿದರೆ ೭ ದಿವಸಗಳ ಸಾಧಾರಣ ಸಜೆಯನ್ನು ವಿಧಿಸಿದರು. ಹೆಂಡರ್ಸನರು ಆ ಕಾಲದಲ್ಲಿ ಖಾಂಡೇಸಿನಲ್ಲಿ ಅಸಿಸ್ಟಾಂಟ ಕಲೆಕ್ಟರರಾಗಿದ್ದರು. ಈ ತೀರ್ಮಾನದ ಮೇಲೆ ಹೆಂಡರ್ಸನರು ಹೈ ಕೋರ್ಟಿಗೆ ಅಪೀಲುಮಾಡಿಕೊಂಡರು. ಹೆಂಡರ್ಸನರಿಗೆ ಶಿಕ್ಷೆ ವಿಧಿಸಿದ ಡಿಸ್ಟ್ರಿಕ್ಟ್ ಕಲೆಕ್ಟರರು ಹೆಂಡರ್ಸನರ ಮೇಲಿನ ದ್ವೇಷದಿಂದ ಹೆಂಡರ್ಸನರವರ ವಾಗ್ಮೂಲಗಳನ್ನು ಸರಿಯಾಗಿ ತಕ್ಕೊಳ್ಳದೆ ಈ ಶಿಕ್ಷೆ ವಿಧಿಸಿದರೆಂಬದಾಗಿ ಹ್ಯಾಕೋರ್ಟಿನಲ್ಲಿ ವಾದ ನಡೆದು ಹೆಂಡರ್ಸನರಿಗೆ ವಿಧಿಸಿದ ಶಿಕ್ಷೆಯು ತೆಗೆದುಹಾಕಲ್ಪಟ್ಟಿತು.

ಪರಸ್ಪರ ಸಹಾಯಕ ಸಂಘಗಳ ವಿಷಯವಾಗಿ ಒಂದು ಪುಸ್ತಕವು ಮುಂಬಾಯಿ ಸರಕಾರದವರಿಂದ ಪ್ರಕಟಿಸಲ್ಪಟ್ಟಿರುವುದು. ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರರಾದ ಮಿ॥ ಎಸ್ ಬೇಂಕರರವರು ಈ ಪುಸ್ತಕದ ಕರ್ತೃವಾಗಿರುವರು. ಪುಸ್ತಕದ ಬೆಲೆ ೮ ಆಣೆಯಾಗಿದೆ

ಮುಂಬಾಯಿಯ ನಜೀರ್ ಹುಸೇನನೆಂಬ ಒಬ್ಬ ಮಹಮ್ಮದೀಯನು ಸುಮಾರು ೯೧ ಸಾವಿರ ರೂಪಾಯಿ ಕ್ರಯಬಾಳುವ ಕೊಕ್ಯಾನ್ ಎಂಬ ಅಫೀಮನ್ನು ವಸ್ತ್ರ ಮಡಿಮಾಡುವ ಒಬ್ಬ ಹೆಂಗಸಿನ ಮನೆಯಲ್ಲಿ ಬಚ್ಚಿಟ್ಟಿದ್ದನೆಂಬದಾಗಿ ಆಪಾದಿಸಲ್ಪಟ್ಟಿದ್ದನು. ಇವನಿಗೆ ತಾ. ೮ ರಲ್ಲು ಒಂದು ವರ್ಷದ ಕಠಿಣ ಸಜಾ ವಿಧಿಸಲ್ಪಟ್ಟಿತು

ದಕ್ಷಿಣ ಆಫ್ರೀಕದ ಭಾರತೀಯರ ಸಂಕಷ್ಟ ನಿವಾರಣಾರ್ಥವಾದ ಮಸೂದೆಯು ದಕ್ಷಿಣ ಆಫ್ರೀಕದ ಯೂನ್ಯನ್ ಸರಕಾರದಿಂದ ಮಂಜೂರಾತಿಯನ್ನು ಹೊಂದಿದ ಸಂಬಂಧ ಅಲ್ಲಿರುವ ಭಾರತೀಯರ ಪರವಾಗಿ ಕೃತಜ್ಞತೆಯನ್ನು ತೋರಿಸುವ ತಂತೀಯನ್ನು ಮಾನ್ಯ ಗೋಖಲೆಯವರು ಲಂಡನಿನಿಂದ ವೈಸರಾಯ ಹಾರ್ಡಿಂಜ ಪ್ರಭುಗಳವರಿಗೆ ಬಿಟ್ಟಿರುವರು. ವೈಸರಾಯ ಪ್ರಭುಗಳವರು ಉಪಕಾರ ಸೂಚಕವಾದ ಮರುತಂತಿ ಬಿಟ್ಟಿದ್ದಾರೆ

ಶೀಮೆಗೆ ಹೋಗಿದ್ದ ಥಿಯೋಸಫಿ ಸೊಸೈಟಿಯ ಪ್ರೆಸಿಡೆಂಟರಾದ ಮಿಸೆಸ್ ಅನ್ನಿಬಿಸೆಂಟರವರು ತಾ. ೧೦ ರಲ್ಲು ಶೀಮೆಯಿಂದ ಮುಂಬಾಯಿ ಬಂದರದಲ್ಲಿ ಬಂದಿಳಿದು ಥಿಯೋಸಫಿ ಸೊಸೈಟಿಯವರಿಂದ ಬಹುಮಾನ ಪತ್ರವನ್ನು ಸ್ವೀಕರಿಸಿಕೊಂಡು ಅಂದೇ ಮದ್ರಾಸಿಗೆ ತೆರಳಿದರು.

ಬಹುಮಾನಪಟ್ಟ ಗೋಖಲೆಯವರು ಲಂಡನಿನಲ್ಲಿದ್ದುಕೊಂಡು ದೇಹಾರೋಗ್ಯ ಹೊಂದುತ್ತಿದ್ದಾರೆ ಪಬ್ಲಿಕ್ ಸರ್ವಿಸ್ ಕಮಿಷನಿನ ೨ ಮೀಟಿಂಗುಗಳಿಗೆ ಹಾಜರಾಗುವಷ್ಟು ಶಕ್ತರಾಗಿರುವರು

ಅಲಿಗಡದ ಒಬ್ಬ ಬ್ರಾಹ್ಮಣ ವಿಧವೆಯು ಒಬ್ಬ ಕಸಾಯಿಯನ್ನು ಮದುವೆಯಾದಳೆಂಬ ವಾರ್ತೆಯು ಬಂಗಾಳಿ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವದು. ಈ ವಿವಾಹವನ್ನು ಬಹುಮಾನಪಟ್ಟ ಪಂಡಿತ ಮದನ ಮೋಹನ್ ಮಲವಿಯವರು ಜರುಗಿಸಿದರು. ಈ ಬ್ರಾಹ್ಮಣ ವಿಧವೆಯನ್ನು ಕಸಾಯಿಯು ಮದುವೆ ಮಾಡಿಕೊಳ್ಳುತ್ತಾನೆಂಬ ವಾರ್ತೆಯು ಸ್ಥಳೀಕ ಇತರ ಹಿಂದೂಗಳಿಗೆ ಗೊತ್ತಾಗಲು ಅವರು ಸಿಟ್ಟುಗೊಂಡು ಕಸಾಯಿಯ ಮೇಲೆ ಕ್ರಿಮಿನಲ್ ದಾವೆ ಮಾಡಲು ಪ್ರಯತ್ನಿಸಿದರು. ಕೆಲವರು ಅಲ್ಲಹಾಬಾದಿನ ವಕೀಲರಲ್ಲಿಗೆ ಹೋಗಿ ಸಂಗತಿಯನ್ನು ಹೇಳಿಕೊಂಡರು. ಈ ವಿಧವೆಯನ್ನು ಸ್ವಜಾತಿಯವರಲ್ಲಿ ಯಾರಾದರೂ ವಿವಾಹ ಮಾಡಿಕೊಳ್ಳುವೆನಂತ ಹೇಳಿ ನನ್ನ ಮುಂದೆ ಬಂದರೆ ಧರ್ಮಾರ್ಥವಾಗಿ ವಕಾಲತು ನಡಿಸುತ್ತೇನೆಂತ ಒಬ್ಬ ವಕೀಲರು ಹೇಳಿದರು. ಆದರೆ ಅವಳನ್ನು ವಿವಾಹವಾ

ಗುಹೆಗೆ ಮುಂದೆ ಬಂದ ಸ್ವಜಾತಿಯವರು ಯಾರೂ ಇಲ್ಲ. ಹ್ಯಾಗೂ ಕಡೆಗೆ ಮೆಜಿಸ್ಟ್ರೇಟರಲ್ಲಿ ಫಿರ್ಯಾದು ದಾಖಲು ಮಾಡಲ್ಪಟ್ಟಿತು. ಮೆಜಿಸ್ಟ್ರೇಟರು ಅವಳನ್ನು ವೈದ್ಯ ಪರೀಕ್ಷೆಗೆ ಕಳುಹಿಸಿದರು. ವಿಧವೆಯ ಪ್ರಾಯ ೪೫-೫೦ ವಯಸ್ಸಾಗಿರಬಹುದೆಂದು ಸಿವಿಲ್ ಸರ್ಜನರು ಬರೆದರು. ವಿಧವೆಯನ್ನು ಪ್ರಶ್ನಿಸಿದಲ್ಲಿ ತಾನು ಕಸಾಯಿಯೊಡನೆ ಸಂತೋಷದಲ್ಲಿದ್ದೇನೆಂದು ಉತ್ತರ ಕೊಟ್ಟಳು. ಮೆಜಿಸ್ಟ್ರೇಟರು ದಾವೆಯನ್ನು ತಳ್ಳಿಹಾಕಿದರು. ಸಹಮ್ಮದೀಯರು ಇಬ್ಬರನ್ನೂ ಬಹಳ ವಿಜೃಂಭಣೆಯಿಂದ ತಮ್ಮ ಮನೆಗೆ ಕರಕೊಂಡು ಹೋದರು. ಈ ಕೃತ್ಯದ ಅಪವಾದವು ಕಸಾಯಿಯ ಯಾ ಆ ವಿಧವೆಯ ಮೇಲೆ ಬೀಳುವುದಿಲ್ಲ. ಪರಂತು, ವಿಧವೆಯರನ್ನು ಬಂದಿಸುವ ಕ್ರೂರ ಸಮಾಜದ ಮೇಲೆ ಹೊರಿಸಲ್ಪಡತಕ್ಕದ್ದಾಗಿದೆಂದು ಆ ಪತ್ರವು ಹೇಳುವುದು.

ಹಿಂದೂ ಯುನಿವರ್ಸಿಟಿಯನ್ನು ಸ್ಥಾಪಿಸುವರೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಂದ ಅನುಮತಿ ದೊರಕಿರುವುದೆಂಬದಾಗಿ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ

ಮುಂಬಾಯಿ ಪ್ರೆಸಿಡೆನ್ಸಿ ಪೋಸ್ಟ್ ಆಫೀಸಿನಿಂದ ಕಳದ ತಾ. ೫ರಲ್ಲು ಬಿ. ಬಿ. ಮತ್ತು ಸಿ ಐ ರೈಲ್ವೇಯಲ್ಲಿ ಕಳುಹಿಸಲ್ಪಟ್ಟ ೧೮೦ ರೂಪಾಯಿ ಮತ್ತು ೫೫೦ ರೂಪಾಯಿ ಕ್ರಯಬಾಳುವ ಭಂಗಾರದ ಗಟ್ಟಿಗಳುಳ್ಳ ಒಂದು ರಿಜಿಸ್ಟ್ರಿ ಪಾರ್ಸೆಲ್ ಕಳವಾಗಿರುವುದು.

ದಕ್ಷಿಣ ಕನ್ನಡ.

ನೋಟೀಸು

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಒ. ಪಿ. ನಂಬ್ರು $\frac{56}{1914}$

ಕಸ್ತೂರಿ ನಾಗೇಶ ಪೈ — ಅರ್ಜಿದಾರ

ಮೃತಪಟ್ಟ ಕಸ್ತೂರಿ ಸುಬ್ರಾಯ ಪೈಗಳ ಸಾಲ ವಸೂಲು ಕುರಿತು ಸರ್ಟಿಫಿಕೇಟು ಅಪೇಕ್ಷಿಸಿ ಅರ್ಜಿದಾರನು ಡಿಸ್ಟ್ರಿಕ್ಟ್ ಕೋರ್ಟಿಗೆ ದಾಖಲು ಮಾಡಿದ ಸದ್ರಿ ಅರ್ಜಿಯು ಇದೇ ತಿಂಗಳ ತಾ ೩೦ಕ್ಕೆ ತನಖಿಗೆ ಇಟ್ಟಿರುವದರಿಂದ ಆಕ್ಷೇಪ ಇದ್ದವರು ಆ ತಾರೀಕಿಗೆ ಸದರಿ ಕೋರ್ಟಿನ ಮುಂದೆ ಹಾಜರಾಗತಕ್ಕದೆಂತ ಈ ಮೂಲಕ ಪ್ರಕಟಿಸೋಣಾಗುತ್ತದೆ

M. Rangappa Bhandary

ತಾ 15-7-14. *Pleader for Petitioner*

ಬೆಳ್ತಂಗಡಿ —ಇತ್ತ ಕಡೆಯ ಬಂಗವಾಡಿ ಪ್ರಾಂತ್ಯದಲ್ಲಿ ಲ್ಲೂರು ಸುಬ್ರಾಯರ ವಕ್ಕಲು ಬೋರಗೌಡ ಎಂಬವನು ಗರಿಮಾರು ಅಪ್ಪು ಪೂಜಾರಿ ಆತನ ಸಮ್ಮಂದಿಕರೂ ಹಿತರೂ ಮೊದಲಾದ ೬-೧೦ ಜನರ ಮೇಲೆ ಘಾರಿಯದ್ದ ಸೆಶ್ಶನ್ಸ್ ಮೊಕದಮೆಯನ್ನುಂಟುಮಾಡಿದ್ದನು. ದು ಸೆಶ್ಶನ್ಸಿಗೆ ಕಮಿಟ್ ಆಗಿತ್ತು. ಆದರೆ ಜಡ್ಜರು ಅವಧಿ ವಗೈರೆರನ್ನು ಇದೇ ತಾ ೧೧ರಲ್ಲಿ ಖುಲಾಸುಪಡಿದರು

ಕಾಶೀ ಮಠದ ಗುರುಗಳಾದ ಶ್ರೀ ವರದೇಂದ್ರ ತೀರ್ಥ ಸ್ವಾಮಿಯವರು ಗತಿಸಿದ ಸಂಬಂಧ ಗುರುವಾಯನಕೆರೆ ಶ್ರೀ ಮತ್ತು ಇಲ್ಲಿಯ ಗೌಡ ಸಾರಸ್ವತರು ವರಾಡತಿಗೆ ಕೂಡಿಸಿ ಇದೇ ತಿಂಗಳ ತಾ. ೮ರಲ್ಲು ಜಾತ್ಯಸ್ಥರಿಗೆ ಭೋಜನವೂ ಬಡಬಗ್ಗರಿಗೆ ಅಕ್ಕಿಯನ್ನೂ ಹಂಚಿಸಿ ಸು.

ಇದೇ ತಿಂಗಳ ತಾರೀಕು ೮ರಲ್ಲು ಬೆಳ್ತಂಗಡಿ ಪೇಟೆ ಸಮೀಪವಿರುವ ಮಾಯಿಲ ಪೂಜಾರಿ ಎಂಬವನ ಸುಮಾರು ೪-೫ ವರ್ಷ ಪ್ರಾಯದ ಹೆಣ್ಣು ಮಗು ಮನೆ ಸಮೀಪವಿರುವ ಬಾವಿಗೆ ಬಿದ್ದು ಮೃತಪಟ್ಟಿತು ಬಾವಿಗೆ ತಕ್ಕ ಆವರಣವಿಲ್ಲದ್ದೇ ಇಂಥಾ ಅವಗಡಕ್ಕೆ ಕಾರಣವಾಗಿತ್ತು ನಾದುರುಸ್ತಿ ಸ್ಥಿತಿಯ ಆವರಣಗಳುಳ್ಳ ಬಾವಿಗಳು ನಮ್ಮ ಕಸಬೆಯಲ್ಲೂ ಬಹಳವಿದೆ ಇಂಥವುಗಳ ಯಜಮಾನರು ತಕ್ಕ ಕಾಲದಲ್ಲಿ ದುರುಸ್ತು ಮಾಡಿಸುವುದಾದರೆ ಅನಾಹುತಗಳಿಗೆ ಕಾರಣವಿರಲಿಕ್ಕಿಲ್ಲ ಈಗ ಮಳೆಗಾಲವಾಗಿ ಎಲ್ಲಾ ಬಾವಿಗಳಲ್ಲಿಯೂ ಹೊಂಡಗಳಲ್ಲಿಯೂ ನೀರು ತುಂಬಿರುವುದರಿಂದ ಹೆತ್ತವರು ಮಕ್ಕಳ ವಿಷಯ ಹೆಚ್ಚಿನ ಜಾಗರೂಕತೆಯಿಂದಿರುವುದು ಅವಶ್ಯಕವಾಗಿರುವುದು

ಪುತ್ತೂರು —ನಮ್ಮ ಪಟ್ಟಣಕ್ಕೆ ತಾಲೂಕು ಬೋರ್ಡಿನವರಿಂದ ಒದಗಿಸಿಕೊಟ್ಟ ದೀಪಸ್ತಂಭಗಳು ಇದೇ ತಾ ೬ರಲ್ಲು ಪ್ರತಿಷ್ಠಿಸಲ್ಪಟ್ಟಿರುವವು ಈ ಪಟ್ಟಣದಲ್ಲಿ ಹೆಚ್ಚಿಗೆ ದೀಪಗಳನ್ನು ಒದಗಿಸಿ ಕೊಡುವರೆ ಒಪ್ಪಿಕೊಂಡ ಪರಸ್ಪರ ಸಹಾಯಕ ಸಂಘದ ದೀಪಗಳು ಇನ್ನೂ ಪ್ರತಿಷ್ಠಿಸಲ್ಪಡದೆ ಇದ್ದುದು ಆಶ್ಚರ್ಯ

ಮುನ್ಸಿಫ ಕೋರ್ಟಿನಲ್ಲಿ ಪ್ರೋಸೆಸ್ ಸರ್ವರ ಕೆಲಸಗಳು ಖಾಲಿ ಬಿದ್ದಾಗ್ಯೆ ತಂದೆಯ ಕೆಲಸ ಮಕ್ಕಳಿಗೆ ಕೊಡಬಹುದೆಂತಲೂ ಇತರ ಸಂಗತಿಗಳಲ್ಲಿ ಹಂಗಾಮಿ ಕೆಲಸಗಳು ಮುಸಲ್ಮಾನ ಜಾತಿಯವರಿಗೆನೇ ಕೊಡಬೇಕಾಗಿಯೂ ಜಿಲ್ಲಾ ಜಡ್ಜರವರಿಂದ ಹುಕುಂ ಒಂದದೆಂತ ವಾರ್ತೆ ಇದೆ. ಈ ವಾರ್ತೆಯು ೨-೩ ವರ್ಷಗಳಿಂದ ಉಮೇದ್ವಾರಿ ಕೆಲಸ ನೋಡುತ್ತಿದ್ದವರಿಗೆ ವಿಷಾದವನ್ನುಂಟು ಮಾಡುವುದಾಗಿದೆ

ಆರಿಯಡ್ಕ ಗ್ರಾಮದಲ್ಲಿ ಪರಸ್ಪರ ಸಹಾಯಕ ಸಂಘವಿಲ್ಲದಿರುವುದು ಗ್ರಾಮಕ್ಕೆ ಒಂದು ಕುಂದಾಗಿರುವುದು ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸುವುದರಲ್ಲಿ ಮುಂದಾಳಾದ ರಾ ಮೊಳಹಳ್ಳಿ ಶಿವರಾಯರು ಇಲ್ಲಿಯೂ ಒಂದು ಇಂತಹ ಸಂಘವನ್ನು ಸ್ಥಾಪಿಸುವರೆ ಪ್ರಯತ್ನಿಸದಿರಲಾರರೆಂದು ನಂಬಿರುವೆವು

ಇಲ್ಲಿಯ ಮುನ್ಸೀಫ್ ಕೋರ್ಟಿನ ವರಾಂಡದಲ್ಲಿರುವ ಎರಡು ಬೆಂಚುಗಳ ವ ಲಿನ ಸ್ಥಿತಿಯಲ್ಲಿರುವುದರಿಂದ ಕೋರ್ಟಿಗೆ ಬಂದ ಕಕ್ಷಿಗಾರರು ಈ ಮಳೆಗಾಲದಲ್ಲಿ ಕೂತುಕೊಳ್ಳಲು ಸ್ಥಳವಿಲ್ಲದೆ ಬಹಳ ಪ್ರಯಾಸ ಪಡಬೇಕಾಗಿದೆ ಮೇಲಾಧಿಕಾರಿಗಳು ಇದ್ದ ಬೆಂಚನ್ನು ತ್ವರ್ಯದಲ್ಲಿ ಶುಚಿ ಮಾಡಿಸಿ ಕಕ್ಷಿಗಾರರಿಗೆ ಸೌಕರ್ಯವನ್ನುಂಟು ಮಾಡಬೇಕಾಗಿ ಹಾರೈಸುತ್ತಿರುವೆವು.

ಪಾಣೆಮಂಗಳೂರು —ಅನೇಕ ವರ್ಷದಿಂದ ಇಲ್ಲಿಯ ಜಮಾಯಿತರು ಕೂಡಿ ಬರುವ ಜುಮ್ಮಾಮಸೀದಿಯೊಂದಿರುವುದು ಇದು ಮರಗಳ ಮೋಪಿನ ಮೇಲೆ ಕಲ್ಲಿನಿಂದ ಕಟ್ಟಿದ ದೊಡ್ಡ ಕಟ್ಟೋಣವಾಗಿದೆ ಈಗ ಕೆಲವು ವರ್ಷದಿಂದ ಇದಕ್ಕೆ ಹಾಕಿರುವ ಮರಮೋಪುಗಳು ಕುಂಬು ಲಡ್ಡಾಗಿ ಈಗಲೋ ಮತ್ತೊ ಬೀಳಲಿಕ್ಕಿರುವ ಸಂಭವ ಇರುವುದರಿಂದ ಇದರ ಅಡಿಗೆ ಹೋಗಲಿಕ್ಕೆ ಬಹಳ ಭಯಾಸ್ಪದವಾಗಿದೆ. ಇದು ವಾರಕ್ಕೊಮ್ಮೆ ಈ ಊರಿನ ಅನೇಕ ಜಮಾಯಿತರು ಕೂಡುವ ಸ್ಥಳವಾದುದರಿಂದ ಇದನ್ನು ಭದ್ರಪಡಿಸದಿದ್ದರೆ ಈ ಮಸೀದಿಯು ಅಪಕೀರ್ತಿಗೆ ಗುರಿಯಾಗುವದು. ಸರಕಾರದಿಂದ ತಸ್ತಿಕನ್ನು ಪಡೆದು ಬರುವ ಈ ಮಸೀದಿಯು ವಿಷಯ ಸರಕಾರದವರು ವಿಚಾರಿಸಿಕೊಂಡಾರೆಂತ ನಂಬುತ್ತೇನೆ ಇದಕ್ಕೆ ಬೇಕಾದ ಮರಮಟ್ಟುಗಳು ತಯಾರಿದ್ದಾಗ್ಯೂ ಇಕ್ಕಟ್ಟಿನವರು ಒಕ್ಕಟ್ಟಾಗಬೇಕಾಗಿದೆ.

ಪಾಣೆಮಂಗಳೂರು ಸಂಕಕ್ಕೆ ಬೇಕಾಗಿರುವ ಕಬ್ಬಿಣದ ಸಾಮಾನುಗಳು ಮಂಗಳೂರಿನಲ್ಲಿ ಬಂದು ಬಿದ್ದಿರುತ್ತದೆ. ಇದನ್ನು ಅಲ್ಲಿಂದ ಪಾಣೆಮಂಗಳೂರಿಗೆ ಸಾಗಿಸುವರೆ ಒಬ್ಬ ದೋಣಿ ಸಾವುಕಾರರು ೬೦೦೦ (ಆರು ಸಾವಿರ) ರೂಪಾಯಿಗೆ ವಹಿಸಿಕೊಂಡಿರುತ್ತಾರೆ

ಮಂಗಳೂರಿಂದ ೧೩ನೆ ಕಲ್ಲಿನ ಸಮೀಪ ಬ್ರಹ್ಮರಕೊಡ್ಲ ಎಂಬಲ್ಲಿ ಪ್ರತಿ ವರ್ಷ ಮಳೆಗಾಲದಲ್ಲಿ ಜುಲಾಯಿ ಆಗೋಸ್ತು ತಿಂಗಳಲ್ಲಿ ಅನೇಕ ಸರ್ತಿ ಮಾರ್ಗದಲ್ಲಿ ಸುಮಾರು ನೂರು ಗಜ ಉದ್ದಕ್ಕೆ ಒಂದೆರಡು ಆಳು ನೀರು ನಿಂತು ಪ್ರಯಾಣಸ್ಥರಿಗೆ ಬಹಳ ತೊಂದರೆಯಾಗಿದೆ. ಪುತ್ತೂರು ಬಂಟವಾಳ ಎಂತ ೧೫ ಸರ್ತಿ ಟ್ರಾನ್ಸಿಟು ಒಡ್ಯಾಡುತ್ತಾ ಇರುವುದರಿಂದ ಅದರಲ್ಲಿ ಬಂದ ಜನರೂ ಅಲ್ಲಿವರೆಗೆ ಬಂದ ಗಾಡಿ ಮುಂದಕ್ಕೆ ಎಲ್ಲಿಗೆ ಹೋಗುವದು? ಹ್ಯಾಗೆ ಹೋಗುವದು? ಎಂತ ಗೋಳಾಡುತ್ತಿರುತ್ತಾರೆ ಈ ಕಷ್ಟ ಅನುಭವಿಸಿದವರಿಗೆ ಮಾತ್ರ ಅನುಭವ ಹೊರ್ತು ಇನ್ನಾರಿಗೂ ತಿಳಿಯುವಹಾಗಿಲ್ಲ. ಈ ಜಿಲ್ಲೆಗೆ ಮೆ। ಬ್ರಾಸ್ ದೊರೆಗಳು ಕಲೆಕ್ಟರಾಗಿರುವಾಗ ಈ ಸ್ಥಳವನ್ನು ಎತ್ತರಿಸಬೇಕೆಂಬ ಪ್ರಸ್ತಾಪ ಬೋರ್ಡಿನ ಮುಂದೆ ಇಟ್ಟಿದ್ದರು ಅದು ಅವರ ಹಿಂದೆಯೇ ಪಲಾಯನ ಮಾಡಿತು ಈಗಿರುವ ನಮ್ಮ ಜನ ಪ್ರೀತ ಮಾನ್ಯ ಕಲೆಕ್ಟರ್ ದೊರೆಗಳು ಮನಸ್ಸಿಗೆ ತಂದು ಈ ಸಂಕಷ್ಟ ಪರಿಹರಿಸ್ಯಾರೆಂತ ದೃಢವಾಗಿ ನಂಬಿರುವೆವು

ಇಲ್ಲಿಯ ಜಮೀನ್‌ದಾರ ಬೊಂಡಾಲ ಹಮ್ಮದೆಬ್ಯಾರಿ ಎಂಬವರು ತನ್ನ ಮಗನಿಗೆ ಮಾಡಿದ ಮದುವೆಯಲ್ಲಿ ಜಮಾಯಿತರಿಗೆ ಅವಮಾನಕರವಾದ ಕಾರ್ಯ ನಡಿಸಿದರೆಂಬದಾಗಿ ಆರೋಪಣೆ ಮೇಲೆ ಇಲ್ಲಿಯ ಜಮಾಯಿತರು ಸದರಿಯವರನ್ನು ಬಹಿಷ್ಕಾರಪಡಿಸಿರುವರು ಇದರ ಪರಿಣಾಮ ಮುಂದಕ್ಕೆ ನೋಡಲಿಕ್ಕಿದೆ

ಬಂಟ್ವಾಳ —ಇದೇ ಬರುವ ಅಕ್ಟೋಬರ ತಿಂಗಳ ಅಂತ್ಯಕ್ಕೆ ಮದ್ರಾಸ್ ಗವರ್ನರರಾದ ಪೆಂಟಲೆಂಡ್ ಪ್ರಭುಗಳವರ ಸವಾರಿಯು ನಮ್ಮ ಜಿಲ್ಲೆಯ ಪ್ರಧಾನ ಪುರಕ್ಕೆ ಚಿತ್ತೈಸಿ ಅಲ್ಲಿಂದ ಮೂಡಬಿದ್ರೆ ಕಾರ್ಕಳವನ್ನು ಸಂದರ್ಶಿಸಲಿಕ್ಕೆ ಸಾಕು ಎಂತ ವರ್ತಮಾನ ಉಂಟಷ್ಟೆ ಇಷ್ಟರವರೆಗೆ ಮೂಡಬಿದ್ರೆಗೆ ಹೋಗುವ ಗವರ್ನರ ದೊರೆಗಳೆಲ್ಲಾ ಗುರ್ಪುರ ದಾರಿಯಿಂದ ಹಾದುಹೋಗುತ್ತಿದ್ದರು ಬಂಟವಾಳ ದಾರಿಯಿಂದ ಹೋಗದಿರಲಿಕ್ಕೆ ಪುಂಜ್ಯೇರಿ ಹೊಳೆಗೆ ಸಂಕ ಇಲ್ಲದ್ದರಿಂದಲೇ ಕಾರಣವಾಯಿತು ಈಗಲಾದರೋ ಈ ಪುಲಾನಿ ಹೊಳೆಗೆ ಕಬ್ಬಿಣ ಸಂಕವಾಗಿ ಮಂಗಳೂರಿಂದ ಮೂಡಬಿದ್ರೆಗೆ ಏನೊಂದು ಆತಂಕವಿಲ್ಲದೆ ಹೋಗಿ ಬರುವುದಕ್ಕೆ ಅಡ್ಡಿ ಇಲ್ಲ. ಗುರ್ಪೂರದಿಂದ ಹೋಗುವದಾದರೆ ಹೊಳೆ ಕಡವಿನ ತೊಂದರೆಯೂ ಗುರ್ಪೂರ ಅಣೆಯ ತೊಂದರೆಯೂ ಹ್ಯಾಗೂ ಇರಬಹುದು ಕಳದ ವರ್ಷ ಮೈಸೂರಿನ ದಿವಾನರವರು ಉಡುಪಿಗೆ ಇದೇ ದಾರಿಯಿಂದ ನಿರಾತಂಕವಾಗಿ ಹೋಗಿ ಬಂದರು. ಆದುದರಿಂದ ಈ ದಾರಿಯಿಂದ ಬಂದರೆ ಉದ್ದಕ್ಕೂ ಮಾರ್ಗದ ಇಕ್ಕಡೆಯಲ್ಲಿರುವ ಸಾವಿರಾರು ನಿವಾಸಿಗಳೂ ಸುಮಾರು ೧೫ ಶಾಲೆಯ ವಿದ್ಯಾರ್ಥಿಗಳೂ ನೋಡಿ ಸಂತೋಷಪಡುವ ಕಾರಣವಿದೆ. ಗುರ್ಪೂರ ದಾರಿಯಿಂದಲೇ ಹೋಗಬೇಕೆಂಬದಿದ್ದರೆ ಬರುವಾಗ್ಲಾದರೂ ಬಂಟವಾಳ ದಾರಿಯಿಂದ ಬಂದರೆ ನಮ್ಮೆಲ್ಲರಿಗೆ ಆನಂದವಾಗುತ್ತಿತ್ತು.

ವಿಟ್ಲ:—ವಿಟ್ಲ ಕಸಬೆ ಕುರುಂಬಳ ಬಡ್ವಕುಂಜ್ಞ ಬ್ಯಾರಿಗಳ ಮಗ ಇಸ್ಮಾಲಿ ಬ್ಯಾರಿಗಳಿಗೆ ೯ ತಿಂಗಳ ಸಜೆಯನ್ನು ಪುತ್ತೂರು ಡಿವಿಜನಲ್ ಆಫೀಸರು ವಿಧಿಸಿದ್ದರಷ್ಟೆ. ಅಪಾದಿತರು ಆಪೀಲುಮಾಡಿಕೊಂಡಲ್ಲಿ ಶಿಕ್ಷೆಯು ಮಾಫಿ ಆಯಿತು ಎಂಬದಾಗಿ ಕೇಳುತ್ತೇವೆ.

ಇಲ್ಲಿಯ ಪರಸ್ಪರ ಸಹಾಯಕ ಸಂಘದ ೨ನೇ ವರ್ಷದ ಜನರಲ್ ಮೀಟಿಂಗ್ ಎಂಬ ಮಹಾ ಸಭೆಯು ಇದೇ ತಾ. ೧೨ರಲ್ಲು ಬಹಳ ವಿಜ್ರಂಭಣೆಯಿಂದ ನಡೆಯಿತು. ಕೆಲವು ಹೊಸ ಏರ್ಪಾಡುಗಳು ಏರ್ಪಡಿಸಲ್ಪಟ್ಟವು. ಸಂಘವು ಕಳದ ವರ್ಷಕ್ಕಿಂತ ಈ ವರ್ಷ ಎಷ್ಟೋ ಅಭಿವೃದ್ಧಿಗೆ ಬಂದಿರುವುದಾಗಿ ತಿಳಿದುಬಂದದ್ದರಿಂದ ಬಹಳ ಸಂತೋಷಪಡುತ್ತೇವೆ.

~~~~~

ಕಾಸರಗೋಡು:—ಇಲ್ಲಿಯ ಕಾಯಮ್ ಶಾಲಾ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ರಾ| ಪಂಜಿ ಮಂಗೇಶರಾಯರು ಇದೇ ಜುಲಾಯಿ ತಿಂಗಳ ತಾರೀಕು ೧೧ರಲ್ಲು ರಾ| ಮಂಜೇಶ್ವರ ರಘುನಾಥರಾಯರಿಂದ ಚಾರ್ಜು ವಹಿಸಿಕೊಂಡರು. ರಾ| ರಘುನಾದರಾಯರು ತಮ್ಮ ೩ ತಿಂಗಳ ಬದಲಿ ಕಾಲದಲ್ಲಿ ಬಹಳ ಆತುರದಿಂದ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸಿದ್ದಲ್ಲದೆ ರಾ| ಮಂಗೇಶರಾಯರಂತೆಯೇ ನಿಷ್ಪಕ್ಷಪಾತಿಗಳಾಗಿಯೂ ಕರುಣಾಳುಗಳಾಗಿಯೂ ತಮ್ಮ ಒಳನವುಕರುಗಳನ್ನೆಲ್ಲಾ ನಡಿಸುತ್ತಿದ್ದರು.

ನಿಲೇಶ್ವರದಲ್ಲಿ ಸಾಲಿಯರ ಬಗ್ಗೆ ಒಂದು ಪ್ರತ್ಯೇಕ ಶಾಲೆಯ ಏಪಾರ್ಡಿನ ಬೀಜವು ರಾ| ಮಂಗೇಶರಾಯರ ಕಾಲದಲ್ಲಿ ಬಿತ್ತಲ್ಪಟ್ಟಿತ್ತು. ಈ ಬೀಜವು ರಾ| ರಘುನಾಥರಾಯರ ಕಾಲದಲ್ಲಿ ಮೊಳಕೆ ಒಡೆದಿದೆ. ಈ ಶಾಲೆಯು ಕಳದ ಜೂನ್ ತಿಂಗಳ ತಾ. ೧೮ರಲ್ಲು ತೆರೆಯಲ್ಪಟ್ಟಿತು. ಶಾಲೆ ತೆರೆದ ದಿನ ಒಟ್ಟು ೪೦ ಮಂದಿ ಮಕ್ಕಳು ಇದ್ದರು. ಇನ್ನು ನೆರೆ ಗ್ರಾಮಗಳಿಂದ ಮಕ್ಕಳು ಬರುತ್ತಲಿದ್ದಾರೆ. ಈ ಶಾಲೆಯಲ್ಲಿ ಸದ್ಯದಲ್ಲಿ ಮಕ್ಕಳಿಗೆ ನೇಯಿಗೆ ಕೆಲಸದ ವಿಶೇಷ ಮಾಹಿತಿಯನ್ನು ಕೊಡುವರೆ ಸಹಾ ಏರ್ಪಾಡು ಆಗುವದು. ಈ ಉದ್ದೇಶದಿಂದ ಕಳದ ಮೇ ತಾ ೨೦ರಲು ವೀವಿಂಗ್ ಸುಪರಿಂಟೆಂಡೆಂಟರವರೂ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರವರೂ ಮತ್ತು ಜಿಲ್ಲಾ ಅಸಿಸ್ಟಾಂಟ ಇನ್ಸ್‌ಪೆಕ್ಟರವರೂ ನೀಲೇಶ್ವರಕ್ಕೆ ಬಂದು ಆಗತ್ಯವಿರುವ ಮಾಹಿತಿಯನ್ನು ಪಡೆದುಕೊಂಡು ಹೋಗಿರುತ್ತಾರೆ. ಈ ವಿಧದ ಶಾಲೆಯು ನಮ್ಮ ಜಿಲ್ಲೆಗೆ ಇದೇ ಪ್ರಥಮದ್ದಾಗಿದೆ. ವಿದ್ಯೆಯಲ್ಲಿ ಹಿಂದುಳಿದ ಈ ಸಾಲಿಯರ ಮಕ್ಕಳ ಅಭಿವೃದ್ಧಿಯನ್ನು ಕೋರುವ ಶಾಲಾ ಇಲಾಖೆಯವರಿಗೂ ತಾಲೂಕು ಬೋರ್ಡು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರಿಗೂ ಮತ್ತು ಬೇಕಾದ ದ್ರವ್ಯ ಸಹಾಯವನ್ನು ಮಾಡಲಿಕ್ಕಿರುವ ಕರುಣಾಳು ಸರಕಾರದವರಿಗೂ ಸಾಲಿಯರು ಕೃತಜ್ಞತಾಪೂರ್ವಕವಾದ ವಂದನೆಗಳನ್ನು ತಮ್ಮ ಅಮೂಲ್ಯ ಪತ್ರಿಕೆಯ ಮೂಲಕ ಅರ್ಪಿಸಿರುತ್ತಾರೆ

ಈ ವಾರದ ಇಲ್ಲಿಯ ವಾರ್ತೆಗಳೆಲ್ಲವೂ ತುಂಬಾ ಶೋಚನೀಯಕರವಾಗಿ ವಾಚಕರ ಮನಸ್ಸನ್ನು ನೋಯಿಸುವಂತಹವುಗಳಾಗಿವೆ ಎಂಬದಕ್ಕಾಗಿ ವಿಷಾದಿಸಬೇಕಾಗಿದೆ. ಮೊನ್ನೆ ಆದಿತ್ಯವಾರ ದಿನ ಇಲ್ಲಿಂದ ಎರಡು ಮೈಲು ದೂರವಿರುವ ಚೆಮನಾಡಿನಿಂದ ಒಬ್ಬ ವೈದ್ಯನು ಬಂದು ತನ್ನ ಪರಿಚಿತರೊಬ್ಬರ ಮನೆಯಲ್ಲಿ ಕುಳಿತುಕೊಂಡನು. ಸ್ವಲ್ಪ ಸಮಯವಾಗುತ್ತಲೇ ಮನೆಯ ಯಜಮಾನನು ತನ್ನ ಹೆಂಡತಿಯನ್ನೂ ಮಗುವನ್ನೂ ಮಾತ್ರ ಬಿಟ್ಟು ಅಂಗಡಿಗೆ ಹೋದವನು ತಿರಿಗಿ ಬಂದು ನೋಡುತ್ತಲೇ ಯಾರೂ ಕಾಣಿಸಲಿಲ್ಲ. ಅರ್ಧಾಂಗಿಯನ್ನು ಕರೆಯಲು ಪ್ರತ್ಯುತ್ತರವು ಸಿಗಲಿಲ್ಲ. ಒಳಗೆ ಪ್ರವೇಶಿಸಿದಾಗ ಸ್ವಗೃಹವು ರಣರಂಗದಂತೆ ಭಯಂಕರವಾಗಿ ಪರಿಣಮಿಸಿತ್ತು. ನೆಲವೆಲ್ಲ ರಕ್ತಮಯ! ಪತ್ನಿಯ ಮತ್ತು ಎರಡೇ ವರುಷ ಪ್ರಾಯದ ಎಳೆಗೂಸುವಿನ ಶರೀರದ ಹೋಳುಗಳು!! ಮನೆಯಲ್ಲಿ ಅವಕಾಶ ಕೊಡಲ್ಪಟ್ಟ ಆ ದುಷ್ಟಭೃತ್ಯನೇ ಈ ಕ್ರೂರ ಕೃತ್ಯವನ್ನು ನಡಿಸಿರಬೇಕಾಗಿ ಪೋಲಿಸಿನವರಿಗೆ ವದಂತಿ ಕೊಡಲು ನೆರೆಮನೆಯಲ್ಲಿ ಸ್ನಾನ ತೀರಿಸಿ ಧೈರ್ಯದಿಂದ ಭೋಜನಕ್ಕೆ ಕುಳಿತಿದ್ದ ಆ ಘಾತುಕನು ಸಿಕ್ಕಿದನು ಆತನ ದೇಹವು ಮತ್ತು ವಸ್ತ್ರದ ಮೇಲಿನ ರಕ್ತದ ತಟಿಕುಗಳು ಇನ್ನೂ ಮಾಸಿಹೋಗದುದರಿಂದ ಈ ಘೋರ ಕೃತ್ಯವನ್ನು ಅವನೇ ಮಾಡಿರಬೇಕೆಂದು ಖಚಿತಪಟ್ಟು ಅವನನ್ನು ಬಂದಿಖಾನೆಯಲ್ಲಿಟ್ಟಿರುವರು ಅವನ ಕಾಮೋದ್ರೇಕವೇ ಇದರ ಕಾರಣವಂತೆ ಪತಿವ್ರತಾಸ್ತ್ರೀಯು ತನ್ನ ಪ್ರಾಣಕ್ಕಿಂತಲೂ ದರ್ಮವೇ ಶ್ರೇಷ್ಠವಾಗಿಟ್ಟಿರುವಳೆಂಬುದಕ್ಕೆ ಬಿಲ್ಲವ ಜಾತಿಯ ಈ ವ್ಯತಳೇ ದೃಷ್ಟಾಂತ.

ಸಮೀಪದ ಒಂದು ಗ್ರಾಮದಲ್ಲಿ ಒಂದು ಸಣ್ಣ ಮಗುವು ಮನೆಬಳಿಯಲ್ಲಿದ್ದ ತೋಡಿನಲ್ಲಿ ಅಕಸ್ಮಾತ್ತಾಗಿ ಬಿದ್ದು ಪ್ರಾಣವನ್ನು ಕಳೆದುಕೊಂಡಿತು. ಪ್ರಾಣವಿದೆಯೋ ಏನೋ ಎಂಬಬಿಲಾಷೆಯಿಂದ ದಾಕ್ತರರ ಬಳಿಗೆ ತೆಗೆದುಕೊಂಡು ಬಂದಾಗ ಅವರಿಂದ ನಿರಾಶೆಯ ಉತ್ತರವು ದೊರಕಿತು. ಮಳೆಕಾಲದಲ್ಲಿ ಮಕ್ಕಳ ವಿಷಯದಲ್ಲಿ ನೀರಿನ ಜಾಗ್ರತೆ ತೆಗೆದುಕೊಳ್ಳುವುದು ತುಂಬಾ ಅವಶ್ಯವಲ್ಲವೇ?

ನಿನ್ನೆಯ ಮಂಗಳವಾರ ದಿನ ಮಧ್ಯಾಹ್ನ ಸೆಕೆಂಡರಿ ಶಾಲಾ ಕಟ್ಟೋಣದಲ್ಲಿ ನಮ್ಮ ತಾಲೂಕಿನ ಎಲ್ಲಾ ಶಾಲೆಗಳ ಉಪಾಧ್ಯಾಯರ ಒಂದು ಸಭೆಯು ಅಸಿಸ್ಟಾಂಟ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ಜರುಗಿತು ಉಪಾಧ್ಯಾಯ ಉಪಾಧ್ಯಾಯಿನಿಯರುಗಳೂ ಕೂಡಿ ಸುಮಾರು ೧೫೦ ಮಂದಿ ಹಾಜರಿದ್ದರು. ಅಧ್ಯಕ್ಷರು ಈ ಜಿಲ್ಲೆಯ ವಾರ ಶಾಲೆಗಳ ಕೆಲವು ನ್ಯೂನತೆಗಳೇ ಮೊದಲಾದ ಅನೇಕ ಸಂಗತಿಗಳನ್ನು ಸಭಿಕರಿಗೆ ಸೂಚಿಸಿದ ತರುವಾಯ ಮಾನವ ಶರೀರದ ಆಕೃತಿಯು ಕುರಿತು ವಿವಿಧ ಪರಗಳ ಸಹಾಯದಿಂದ ವಿವರಿಸಿದ್ದಲ್ಲದೆ ಮ| ರಾ| ರಾ| ಪಿ. ಮಂಗೇಶರಾಯರು ಭೂಗೋಳ ಶಾಸ್ತ್ರವನ್ನು ಕಲಿಸುವ ವಿಧಾನದ ಸಲುವಾಗಿ ಮಾಡಿದ ಭಾಷಣವು ಬಹಳ ಮನೋರಂಜಕವಾಗಿದ್ದಿತು. ಮೇಜಿಕ್‌ಲಾಂಟರ್ನ್ ಪ್ರದರ್ಶನವು ಮುಗಿದೊಡನೆ ಎಲ್ಲರೂ ಸಂತೋಷದಿಂದ ಮನೆಗೆ ತೆರಳುವುದಕ್ಕಿದ್ದಾಗಲೇ ನಮ್ಮ ಹಾರ್ಡಿಂಜ್ ಪ್ರಭುಗಳ ದೊರೆಸಾನಿಯವರ ಅಕಾಲಮರಣದ ದುಃಖವಾರ್ತೆಯು ಬಂದುದರಿಂದ ಮರುಗಿ ತಮ್ಮ ಸಹತಾಪವನ್ನು ಪ್ರಭುಗಳವರಿಗೆ ತಿಳಿಸುವ ಉದ್ದೇಶ ಒಂದು ತಂತಿಯನ್ನು ಬಿಡುವುದಾಗಿ ನಿಶ್ಚಯಿಸಿ ತೆರಳಿದರು. ಸಂತೋಷದುಃಖಗಳೆರಡೂ ಸಂಗಡಲೇ ಇರುತ್ತವೆಂಬುದಕ್ಕೆ ಬೇರೆ ದೃಷ್ಟಾಂತಬೇಕೇ?

~~~~~

ಕಾಪು:—ಇಲ್ಲಿಯ ಬೋರ್ಡು ಕನ್ನಡ ಶಾಲೆಯ ವ ಬೋರ್ಡು ಪಂಚಮ ಶಾಲೆಯ ವರ್ಷಾವಧಿ ಪರೀಕ್ಷೆಯು ತಾ. ೧೦ರಲ್ಲು ನಡೆಯುವದಾಯಿತು. ಕನ್ನಡ ಶಾಲೆಯಲ್ಲಿ ಹುಡುಗರ ಸಂಖ್ಯೆಯು ಕಡಿಮೆ. ಇದರ ಕಾರಣಗಳನ್ನು ಪರೀಕ್ಷಾಕರ್ತರು ತಿಳಿದು ಊರ ಮುಖಂಡರನ್ನು ತಮ್ಮ ಆಫೀಸಿಗೆ ಬರಮಾಡಿಕೊಂಡು ಮುಖಂಡರೊಳಗೆ ನಾಟಿಕೊಂಡ ಶಾಲೆಯ ಕಡೇಗೆ ಇರತಕ್ಕ ವೈಮನಸ್ಸನ್ನು ಹೋಗ[illegible] ತುಂಬಾ ಶ್ಲಾಘನೀಯವಾಗಿಗೆ.

~~~~~

ಉಡುಪಿ:—ಶ್ರೀ ಮಧ್ವಸಿದ್ಧಾಂತ ಸಂವರ್ಧನೀ ಸಭೆಯನ್ನು ಈ ತಾ. ೯ರಿಂದ ೧೨ರ ವರೆಗೆ ನಡೆಸಿದರು. ನಾಲ್ಕು ಮಂದಿ ಧರ್ಮಾಧಿಕಾರಿಗಳೂ ಸುಮಾರು ೩೦ ಮಂದಿ ವಿದ್ಯಾರ್ಥಿಗಳೂ ಹಾಜರಿದ್ದರು. ಪರೀಕ್ಷಕರ ಮತ್ತು ಪರೀಕ್ಷಣೀಯರ ಸಂಖ್ಯೆಯು ಕಡಿಮೆಯಾಗುತ್ತಾ ಬರುವದನ್ನು ನೋಡುವಾಗ ಈ ಸಭೆಯ ಕಾರ್ಯನಿರ್ವಾಹಕರಿಗೆ ಸಭಾಭಿವೃದ್ಧಿಯಲ್ಲಿ ವೈರಾಗ್ಯ ಪ್ರಾಪ್ತಿಯಾಗಿರುವಂತೆ ತೋರುತ್ತೆ ವೈಷ್ಣವರಿಗೆ ವೈರಾಗ್ಯ ಭಾಗ್ಯವೇ ಭಾಗ್ಯವಷ್ಟೆ!!

ಈ ತಾ ೧೦ನೇ ಶುಕ್ರವಾರ ರಾತ್ರೆ ಇಲ್ಲಿಯ ಸಂಸ್ಕೃತ ವಿದ್ಯಾಶಾಲೆಯ ವಿದ್ಯಾರ್ಥಿಗಳು "ವಿಕ್ರಮೋರ್ವಶಿ" ಎಂಬ ಕಾಳಿದಾಸ ಪ್ರಣೀತ ಸಂಸ್ಕೃತ ನಾಟಕವನ್ನು ಬಹು ಸೊಗಸಾಗಿ ಆಡಿದರು. ಇವರ ಉಚ್ಚಾರಣೆಯನ್ನೂ ದಾಟಿಯನ್ನೂ ನೋಡುವಾಗ ಸಂಸ್ಕೃತವೇ ಇವರ ಸ್ವಭಾಷೆಯೋ ಎಂಬಂತೆ ತೋರಿತು. ಇವರನ್ನು ತರಬೇತು ಮಾಡಿದ ಮ ಸಂ. ಕೆ. ವೆಂಕಟರಾಮಾಚಾರ್ಯರವರ ಪ್ರಯತ್ನವನ್ನು ಎಷ್ಟು ಶ್ಲಾಘಿಸಿದರೂ ಸ್ವಲ್ಪವೇ. ಇದರಂತೆಯೇ ಶಾಕುಂತಲ, ವೇಣೀಸಂಹಾರ, ಮೃಚ್ಛಕಟಿಕಾ ಮೊದಲಾದ ನಾಟಕಗಳನ್ನು ಅಭ್ಯಾಸ ಮಾಡಿಸಿದರೆ ಸಂಸ್ಕೃತ ಭಾಷಾಭಿವೃದ್ಧಿಗೆ ಮಾರ್ಗವೂ ಈ ಕ್ಷೇತ್ರಕ್ಕೆ ಕೀರ್ತಿಯೂ ಆಗುವದು

ಇಲ್ಲಿಯ ಸಂಸ್ಕೃತ ನಾಟಕಶಾಲೆಯು ಕಳದ ವರ್ಷದಿಂದ ದ್ವೈತ ಕೋಲಜಾಗಿ ಪರಿಣಮಿಸಿರುವದಷ್ಟೆ. ಇದರ ವಿಶಿಷ್ಟ ಆಡಳಿತೆಯನ್ನು ಶ್ರೀಪಾದಂಗಳವರೆಲ್ಲರೂ ಒಂದು ಕಮಿಟಿ ಏರ್ಪಡಿಸಿ ಅದಕ್ಕೆ ಒಪ್ಪಿಸಿದ್ದರು. ಈ ಆಡಳಿತೆ ಕಮಿಟಿಗೆ ಮ|ರಾ| ಯು. ಸಿ ಕೃಷ್ಣಭಟ್ಟ, ಹ್ಯಾಕೋರ್ಟು ವಕೀಲ್, ಮಂಗಳೂರು, ಇವರು ಪ್ರೆಸಿಡೆಂಟರಾಗಿಯೂ, ಡಾಕ್ಟರ್ ರಾಮಚಂದ್ರರಾವ್ ಸೆಕ್ರಿಟರಿ, ಕರಸ್ಪಾಂಡಂಟ್, ಮೆನೇಜರರಾಗಿಯೂ, ಮ| ರಾ| ವಕೀಲ್ ಕೆ. ಶಂಕರನಾರಾಯಣರಾಯರು ಟ್ರೆಜರರಾಗಿಯೂ, ಜಿ. ಶ್ರೀನಿವಾಸರಾಯರು, ಬಿ. ಶ್ರೀನಿವಾಸರಾಯರು, ಮ. ರಾಜಗೋಪಾಲಾಚಾರ್ಯರು ಇವರೇ ಮೊದಲಾಗಿ ಈ ಊರಿನ ಕೆಲವು ಗೃಹಸ್ಥರು ಸಭಾ ಮೆಂಬರರಾಗಿಯೂ ಸ. ಮ. ಸಂ ಕೆ. ಪದ್ಮನಾಭಾಚಾರ್ಯರು ಮುಖ್ಯ ಉಪಾಧ್ಯಾಯರೂ, ಬೇರೆ ಮೂವರು ಸಹಾಯಕ ಉಪಾಧ್ಯಾಯರಾಗಿಯೂ ಇದ್ದಾರೆ. ಇವರೆಲ್ಲರ ಮಹತ್ಪಯತ್ನಗಳನ್ನು ನೋಡುವಾಗ ಈ ಮಹಾ ವಿದ್ಯಾಶಾಲೆಯನ್ನು ಈ ಭರತಖಂಡದಲ್ಲಿ ಇದಕ್ಕೆ ಸರಿ ಸಮಾನವಾದ ಬೇರೆ ವಿದ್ಯಾಶಾಲೆ ಇಲ್ಲದಂತೆ ಮಾಡುತ್ತಾರೋ ಎಂಬಂತೆ ಅತ್ಯಾಶ್ಚರ್ಯ ತೋರುತ್ತಿದೆ. ಮುಖ್ಯ ದೇವರೇ ನಡಿಸಬೇಕು.

~~~~~

ಕಲ್ಯಾಣಪುರ:—ಇಲ್ಲಿಯ ಜನರು ಬಹಳ ವರ್ಷಗಳಿಂದ ಅಪೇಕ್ಷಿಸುತ್ತಿದ್ದ ಸೆಕಂಡರಿ ಶಾಲೆಯು ಬಿಶೋಪ ಸಾಹೇಬರ ದಯೆಯಿಂದ ಫಾದರ್ ಗೋನ್ಸಾಲ್ವಿಸರ ಪ್ರಯತ್ನದಿಂದ ಇಲ್ಲಿ ತೆರೆಯಲ್ಪಟ್ಟು ಒಂದು ವರ್ಷವಾಯಿತು. ಈಗ ಈ ಶಾಲೆಯು ದಿನೇದಿನೇ ಉನ್ನತಿಯನ್ನು ಹೊಂದುತ್ತಲಿದೆ.

ಇದೇ ಜುಲೈ ತಾ. ೬ರಲ್ಲು ಕಲ್ಯಾಣಪುರ ಮಿಲಾಗ್ರಿಸ್ ಕೊಓಪರೇಟಿವ್ ಸೊಸೈಟಿಯ ವರ್ಷಾವಧಿ ಸಭೆಯು ಇಲ್ಲಿಯ ಶಾಲೆಯಲ್ಲಿ ಕೂಡಿಬಂತು. ಈ ಸಭೆಯಲ್ಲಿ ಸೊಸೈಟಿಯ ಸುಪರ್‌ವೈಸರರಾದ ಮತ್ತು ಇದೇ ಸೊಸೈಟಿಯ ಸೆಕ್ರಿಟರಿಗಳಾದ ರಾ| ಆನಂದರಾಯರು ಹಾಜರಿದ್ದು ಸೊಸೈಟಿಯ ಪ್ರಯೋಜನ, ಸ್ಥಾಪನ ಕಾರಣಗಳನ್ನು ಕುರಿತು ಕಾಲೋಚಿತ ಭಾಷಣ ಕೊಟ್ಟರು.

ಈಸ್ಟರ್ನ್ ಡೆವೋಲೊಪ್‌ಮೆಂಟ್ ಎಂಬ ಕಂಪೆನಿಯವರು ಇಲ್ಲಿ ಒಂದು ದೊಡ್ಡ ಕಾರ್ಖಾನೆ ತೆರೆದಿರುವರು.

~~~~~
~~~~~

ಗಂಗೊಳ್ಳಿ:—ಶ್ರೀ ಕಾಶಿ ಮಠದ ವರದೇಂದ್ರ ತೀರ್ಥ ಸ್ವಾಮಿಗಳವರು ಬೊಂಬಾಯಿಯಲ್ಲಿ ಮುಕ್ತರಾದ ತಂತೀ ವಾರ್ತೆ ಬಂದ ತರುವಾಯ ಇಲ್ಲಿಯ ಮಹಾ ಜನರು ವಂತಿಗೆಯಿಂದ ಕೆಲವು ಹಣವನ್ನು ಕೂಡಿಸಿ, ರೂ. ೫೦ನ್ನು ಬೊಂಬಾಯಿಗೆ ಶ್ರೀ ಸುಕೃತೇಂದ್ರ ತೀರ್ಥಸ್ವಾಮಿಗಳವರ ಹೆಸರಿಗೆ ತಂತಿ ಮನಿಆರ್ಡರ ಮೂಲಕ ರವಾನಿಸಿ ಕೊಟ್ಟು, ಶ್ರೀ ವರದೇಂದ್ರ ತೀರ್ಥಸ್ವಾಮಿಗಳವರ ಪುಣ್ಯ ತಿಥಿಯಾದ ಮಂಗಳವಾರ ದಿನ ಇಲ್ಲಿಯ ಮೂರು ದೇವಸ್ಥಾನಗಳಲ್ಲಿ ಸಂತರ್ಪಣೆ, ರಾತ್ರೆ ಪೂಜೆ, ಊಡಾ ಮಾಡಿ, ಸರಸ್ವತಿ ವಿದ್ಯಾಲಯದಲ್ಲಿ ಆ ದಿನ ಸಭೆ ಸೇರಿ, ಶ್ರೀ ಸ್ವಾಮಿಗಳವರ ಭಾವಚಿತ್ರಗಳನ್ನು ಇಟ್ಟು ದೇವತಾ ಪ್ರಾರ್ಥನೆಮಾಡಿ ರಾ। ಹಟ್ಯಂಗಡಿ ಲಕ್ಷ್ಮೀನಾರಾಯಣ ಕಾಮತರ ಅಧ್ಯಕ್ಷತೆಯಿಂದ ಶ್ರೀ ಸ್ವಾಮಿಗಳವರ ಮರಣದಿಂದ ಉಂಟಾದ ದುಃಖವನ್ನು ತೋರ್ಪಡಿಸಿ, ಅವರ ದಿವ್ಯ ಆತ್ಮಕ್ಕೆ ನಿತ್ಯ ಶಾಂತಿಯನ್ನೂ ಶ್ರೀ ಸುಕೃತೇಂದ್ರ ತೀರ್ಥಸ್ವಾಮಿಗಳವರಿಗೆ ಆಯುರಾರೋಗ್ಯ ಯಶೋಭಿವೃದ್ಧಿಯನ್ನೂ ಬಯಸಿ ತಂತಿ ಮೂಲಕ ಈ ಸಂಗತಿಯನ್ನು ಶ್ರೀ ಮಠಕ್ಕೆ ಸೂಚಿಸಬೇಕಾಗಿ ರವಾನೆ ಮಾಡಿ, ನಂತರ ಶಾಲಾ ಹುಡುಗರಿಂದ ಹಾಡುಗಳನ್ನು ಹಾಡಿಸಿ, ಹುಡುಗರಿಗೆ ಮಿಠಾಯಿ ವಗೈರೆ ಹಂಚಿ, ಸಭೆಯು ಮುಕ್ತಾಯಿತು. ನಂತರ ತಂತೀ ಕಳುಹಿಸಲ್ಪಟ್ಟಿತು.

~~~~~

ಮಂಜೇಶ್ವರ:—ಮಂಜೇಶ್ವರ ಮತ್ತು ಉದಿಯಾವರ ಈ ಮಧ್ಯೆ ಇರುವ ರೈಲ್ವೆಸ್ಟೇಶನ್ ಹತ್ತರವಾಗಿ ಮೀನು ವಗೈರೆ ಮಾರಾಟದ ಬಗ್ಗೆ ಒಂದು ಮಾರ್ಕೆಟು ಮಾಡುವರೆ ನಿನ್ನೆಯ ದಿವಸ ಕಾಸರಗೋಡು ತಹಶೀಲದಾರರವರು ಬಂದು ಗುತ್ತೆ ಏಲಂ ಮಾಡಿ ರೂಪಾಯಿ ೪೦ಕ್ಕೆ ಮಂಜೇಶ್ವರ ಮೊಗೆರರ ಅಂಗರ ಎಂಬವನು ಕಂಟ್ರಾಕ್ಟಿಗೆ ವಹಿಸಿಕೊಂಡಿರುತ್ತಾನೆ. ಮೀನು ಮಾರಾಟಕ್ಕೆ ಸಪ್ಟಂಬರ ತಿಂಗಳಲ್ಲಿ ಪ್ರಾರಂಭ ಆಗುವದಾಗಿ ತಿಳಿಯುತ್ತೇವೆ. ಈ ಮಾರ್ಕೇಟು ತೆರೆಯಲ್ಪಟ್ಟದ್ದರಿಂದ ದೂರದಿಂದ ಮೀನು ವಗೈರೆಗೆ ಬರುವ ಬಡ ಜನರಿಗೆ ಬಹಳ ಉಪಕಾರವಾಯಿತು.

~~~~~

ಮಂಗಳೂರು

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೧ ಪ್ಲೇಗು ಮರಣವಿತ್ತು.

ಇದೇ ತಿಂಗಳ ತಾ. ೧೫ರ ವರೆಗೆ ಇಲ್ಲಿ ೬೮.೯೨ ಇಂಚು ಮಳೆ ಬಿದ್ದಿರುವುದು. ಕಳೆದ ವರ್ಷ ಇದೇ ಸಮಯಕ್ಕೆ ೫೭.೦೩ ಇಂಚು ಮಳೆ ಮಾತ್ರ ಬಿದ್ದಿತ್ತು.

ಇದೇ ತಿಂಗಳ ತಾ. ೨೫ಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನ ಸ್ಪೆಶ್ಯಲ್ ಮೀಟಿಂಗು ಜರಗುವುದು. ಈಗಿನ ಡಿಸ್ಟ್ರಿಕ್ಟ್ ಇಂಜಿನಿಯರರ ಆಫೀಸು ಬಾಡಿಗೆಯ ಕಟ್ಟೋಣವಾಗಿರುವುದರಿಂದ ಈ ಬಗ್ಗೆ ಒಂದು ಹೊಸ ಕಟ್ಟೋಣವನ್ನು ಕಟ್ಟಿಸುವುದರ ಕುರಿತು ಆಲೋಚಿಸುವುದೇ ಕೂಡಲಿಕ್ಕಿರುವ ಸ್ಪೆಶ್ಯಲ್ ಮೀಟಿಂಗಿನ ಉದ್ದೇಶವಾಗಿರುವುದೆಂತ ತಿಳಿಯುತ್ತೇವೆ.

ಡಿಸ್ಟ್ರಿಕ್ಟ್ ಜಡ್ಜರವರು ಇದೇ ತಾ. ೧೮ರಿಂದ ೧೦ ದಿವಸಗಳ ಕೇಜುವಲ್ ರಜೆ ತಕ್ಕೊಂಡಿರುವರು. ಈ ರಜೆಯ ಕಾಲವನ್ನು ನೀಲಗಿರಿಯಲ್ಲಿ ಕಳೆಯುವರು.

ಕುಂದಾಪುರ ಫೋರೆಸ್ಟ್ ೨ನೇ ಗ್ರೇಡ್ ರೇಂಜರರಾದ ರಾ। ಎಫ್. ಬಿ. ರಾಮಚಂದ್ರರಾಯರು ದಕ್ಷಿಣ ಕೊಯಂಮುತ್ತೂರಿನ ಟುನಾಕಡುವು ಎಂಬಲ್ಲಿಗೆ ವರ್ಗಾಯಿಸಲ್ಪಟ್ಟಿರುವರು.

ಟುನಾಕಡುವಿನ ೩ನೇ ಗ್ರೇಡ್ ರೇಂಜರರಾದ ರಾ। ಎ. ಆರ್. ನರಶಿಂಹ ಐಯ್ಯಂಗಾರರವರು ಕುಂದಾಪುರಕ್ಕೆ ವರ್ಗಾಯಿಸಲ್ಪಟ್ಟಿದ್ದಾರೆ.

ಜಿಲ್ಲಾ ಕಲೆಕ್ಟರ ದೊರೆಗಳವರು ೪ ದಿವಸಗಳ ರಜೆಯ ಮೇಲೆ ಇದೇ ತಾ ೧೬ರಲ್ಲು ಕೊಯಮುತ್ತೂರಿಗೆ ಹೋಗಿರುವರು.

ಜಿಲ್ಲಾ ಸರ್ಜನರಾದ ಮೆ। ಕರ್ಕ್‌ವುಡ್ ದೊರೆಗಳವರು ಒಂದು ತಿಂಗಳ ಪ್ರಿವಿಲೆಜ್ ರಜೆಯ ಮೇಲೆ ಇದೇ ತಾ. ೧೪ರಲ್ಲು ನೀಲಗಿರಿಗೆ ಹೋಗಿರುವರು. ಅಸಿಸ್ಟಾಂಟ ಸರ್ಜನರಾದ ರಾ। ಬಿ ರಾಮಬಾಳಿಗರವರು ಈಗ ಡಿಸ್ಟ್ರಿಕ್ಟ್ ಸರ್ಜನರ ಚಾರ್ಜಿನಲ್ಲಿರುವರು.

ಪ್ರಯಾಣಿಕರಿಗೆ ಪ್ಲೇಗು ಪಾಸ್‌ಪೋರ್ಟುಗಳನ್ನು ಕೊಡುವ ಕ್ರಮವನ್ನು ರದ್ದು ಪಡಿಸಿ ನೋಟಿಸುಗಳನ್ನು ಕೊಡುವ ಕ್ರಮವು ಜಾರಿಗೆ ಒಂದಂದಿನಿಂದ ಮಂಗಳೂರು ರೈಲ್ವೇ ಸ್ಟೇಶನಿನಿಂದ ನೋಟಿಸುಗಳನ್ನು ಪಡಕೊಂಡ ನಂತರ ಮಾತ್ರ ಟಿಕೇಟುಗಳನ್ನು ಕೊಡುವುದರಿಂದ ಪ್ರಯಾಣಿಕರಿಗೆ ಉಂಟಾಗುತ್ತಿರುವ ತೊಂದರೆಗಳ ಹಲವು ದೂರುಗಳು ಪ್ರಯಾಣಿಕರಿಂದ ಕಲೆಕ್ಟರರವರಿಗೆ ಹೋಗಿರುವ ಕಾರಣ ಇನ್ನು ಮುಂದೆ ಪ್ಲೇಗು ನೋಟೀಸುಗಳನ್ನು ಪ್ರಯಾಣಿಕರಿಗೆ ಎಲ್ಲಾ ಕಾಲದಲ್ಲಿ ಮತ್ತು ಪ್ರಯಾಣಿಕರು ಹೊರಡಲಿಕ್ಕಿರುವ ಹಿಂದಿನ ದಿನ ಸಹಾ ಕೊಡುವಂತೆ ನೋಟಿಸು ಕೊಡುವ ಕ್ಲಾರ್ಕರಿಗೆ ಆಜ್ಞಾಪಿಸಬೇಕೆಂದು ಜಿಲ್ಲಾ ಕಲೆಕ್ಟರ ದೊರೆಗಳವರು ಇಲ್ಲಿಯ ಅಸಿಸ್ಟಾಂಟ ಪ್ಲೇಗ್ ಆಫೀಸರರಿಗೆ ಹುಕುಂ ಕೊಟ್ಟಿರುವರು.

ಈ ಜಿಲ್ಲೆಯಲ್ಲಿ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ ಕಂಪೆನಿ ಲಿಮಿಟೆಡ್ ಎಂಬ ಕಂಪೆನಿಯವರು ಅಲ್ಲದೆ ಹಿಂದೂ ಟ್ರೇಡಿಂಗ ಕಂಪೆನಿಯ ಮಾಲೀಕರಾದ ರಾ। ಬೆಳ್ಳೆ ಸುಬ್ಬಯ್ಯ ಸೆಟ್ಟರು ಸಹಾ ಮೊಟರ್ ಬಸ್ ಸರ್ವಿಸನ್ನು ನಡಿಸುತ್ತಾರೆಂಬದಾಗಿ ತಾ. ೧೧ನೇ ವೆಸ್ಟ ಕೋಸ್ಟ ಸ್ಪೆಕ್ಟೆಟರ್ ಎಂಬ ಪತ್ರಿಕೆಯಲ್ಲಿ ಪ್ರಕಟಿಸಿರುವ ಸಂಗತಿಯು ನಿಜವಾದದ್ದಾಗಿ ಒಬ್ಬ ಬಾತ್ಮೀದಾರರು ತಿಳಿಸಿರುವರು.

ಇಲ್ಲಿಯ ಗೂಡ್ಸು ಆಫೀಸಿನ ಸಮೀಪದ ದಾರಿಯು ಈ ಮಳೆಗಾಲದಲ್ಲಿ ಹುಣ್ಣು ಹುಣ್ಣಾಗಿರುವುದರಿಂದ ಗೂಡ್ಸು ಆಫೀಸಿನಿಂದ ಸಾಮಾನುಗಳನ್ನು ಗಾಡಿಗಳ ಮೂಲಕ ತರುವುದೇ ಕಷ್ಟಸಾಧ್ಯವಾಗಿದೆ. ಆದುದರಿಂದ ಮುನಿಸಿಪಾಲಿಟಿಯವರು ತ್ವರ್ಯದಲ್ಲಿ ಈ ರಸ್ತೆಯನ್ನು ದುರುಸ್ತಿ ಮಾಡಿಸುವುದು ಅವಶ್ಯವಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರ ಆಫೀಸು:—ಮಂಗಳೂರು ಡಿವಿಜನಲ್ ಆಫೀಸಿನ ೨ನೇ ಕ್ಲಾರ್ಕರಾದ ರಾ. ಎ ತಿಮ್ಮಪ್ಪ ಪೂಂಜರವರಿಗೆ ಕೊಡಲ್ಪಟ್ಟಿರುವ ಪ್ರಿವಿಲೆಜ್ ರಜೆಗೆ ಸೇರಿಸಿ ಪುನಃ ೫ ತಿಂಗಳು ೩ ದಿವಸಗಳ ಖಾಸಗಿ ಸಂಬಂಧವಾಗಿ ರಜೆ ಕೊಡಲ್ಪಟ್ಟಿರುವುದರಿಂದ ಕಾಪು ಫಿರ್ಕ ೨ನೇ ಗ್ರೇಡ್ ರೆವಿನ್ಯು ಇನ್ಸ್‌ಪೆಕ್ಟರರಾದ ರಾ। ಬಿ. ಆನಂದಬಾಳಿಗ ಬಿ ಎ ರವರು ಡಿವಿಜನಲ್ ಆಫೀಸಿನ 2ನೇ ಕ್ಲಾರ್ಕರಾಗಿಯೂ, ಕಲೆಕ್ಟರ ಆಫೀಸಿನ ಆಕ್ಟಿಂಗ ಕ್ಲಾರ್ಕರಾದ ರಾ। ಆರ್. ವಾಸುದೇವರಾಯರು ಕಾಪು ಫಿರ್ಕ ೨ನೇ ಗ್ರೇಡ್ ರೆವಿನ್ಯು ಇನ್ಸ್‌ಪೆಕ್ಟರರಾಗಿಯೂ ನೇಮಿಸಲ್ಪಟ್ಟಿರುವರು.

ಕಲೆಕ್ಟರ ಆಫೀಸಿನ ಆಕ್ಟಿಂಗ್ ೫ನೇ ಕ್ಲಾರ್ಕರಾದ ರಾ। ಎಚ್. ಅನಂತಯ್ಯ ಬಿ. ಎ. ರವರವರಿಗೆ ಇದೇ ತಾ. ೨೦ರಿಂದ ೩ ತಿಂಗಳ ಪ್ರಿವಿಲೆಜ್ ರಜೆ ಕೊಡೋಣಾಗಿರುವುದರಿಂದ ರಾ। ಎಮ್. ಸುಬ್ಬರಾವ್ ಬಿ. ಎ ರವರು ರೂ. ೪೦ರ ೫ನೇ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು.

ಕುಂದಾಪುರ ಡಿವಿಜನಲ್ ಆಫೀಸಿನ ೩ನೇ ಕ್ಲಾರ್ಕ ರಾ। ಎ. ಕೃಷ್ಣರಾಯರು ರೂ. ೨೫ರ ತಲಬಿಗೆ ತಗ್ಗಿಸಲ್ಪಟ್ಟದ್ದರಿಂದ ಮಂಗಳೂರು ತಾಲೂಕು ಆಫೀಸಿನ ೭ನೇ ಕ್ಲಾರ್ಕ ರಾ। ಎಸ್. ಯು ಕೃಷ್ಣರವರು ರೂ. ೩೦ರ ಕುಂದಾಪುರ ಡಿವಿಜನಲ್ ಆಫೀಸಿನ ೩ನೇ ಕ್ಲಾರ್ಕರಾಗಿ ನೇಮಿಸಲ್ಪಟ್ಟಿದ್ದಾರೆ. ಇವರ ರೂ. ೨೫ರ ಕೆಲಸವನ್ನು ರಾ। ಎ. ಕೃಷ್ಣರಾಯರವರು ವಹಿಸಿಕೊಳ್ಳಬೇಕಾಗುವುದು.

ಕೀರ್ತಿಶೇಷ ಅಮ್ಮೆಂಬಳ ಸುಬ್ರಾವ್‌ಪೈ ಮೆಮೋರಿಯಲ್ ಫಂಡ್.

~~~~~

ಈ ವರ್ಷ ವಿದ್ಯಾರ್ಥಿ ವೇತನವಾಗಿ ಸಾಲ ಕೊಟ್ಟ ಮೊಬಲಗಿನ ವಿವರ:—1. ರೆಂಜಾಳ ಹರಿಶೆಣೈ ರೂ. ೧೦; (ತಿಂಗಳು ಒಂದಕ್ಕೆ) 2 ಕೆ. ಬಿ. ಕೃಷ್ಣರಾವ್ ರೂ. ೧೦; 3. ಟಿ. ದೇವೇಂದ್ರ ಭಟ್ಟ ರೂ. ೧೦; 4. ವಿ. ದಯಾನಂದ ಕಾಮತ್ ರೂ. ೧೫, 5. ವಿ ವೈಕುಂಠ ಶೆಣೈ ರೂ. ೧೦; *6. ಕೆ. ಲಕ್ಷ್ಮಣ ನಾರಾಯಣಾಚಾರ್ಯ ರೂ. ೫; 7. ಟಿ. ಗೋವಿಂದಪೈ ರೂ ೫; 8. ಬಾಲಕೃಷ್ಣ ಪುರಾಣಿಕ ರೂ. ೫; *ಈ ವಿದ್ಯಾರ್ಥಿಗೆ ಈ ವೇತನವು ಬೇಡವಾದರೆ ಇದು ಎಮ್. ವಾಸುದೇವ ಪ್ರಭುವಿಗೆ, ಇವನಿಗೆ ಬೇಡವಾದರೆ ಯೋಗ್ಯನೆಂದು ತೋರುವ ಇತರ ಉಮೇದ್ವಾರರಲ್ಲಿ ಒಬ್ಬನಿಗೆ ಕೊಡಲ್ಪಡುವುದು.

M. Mukunda Rao.

ತಾ. 13—7—14 Secretary

~~~~~

ಕೀರ್ತಿಶೇಷ ಅಮ್ಮೆಂಬಳ ಸುಬ್ರಾವ್‌ಪೈ ಮೆಮೋರಿಯಲ್ ಫಂಡ್.

~~~~~

೧೯೧೪ನೇ ಇಸವಿ ಎಪ್ರಿಲ ತಾರೀಕು ೩ನೇ ಸ್ವದೇಶಾಭಿಮಾನಿಯಲ್ಲಿ ತೋರುವ ಪ್ರಕಾರ ಒಟ್ಟು ವಸೂಲಿ ರೂಪಾಯಿ ೧೨೪೬—೦—೦ ನಂತರದ ವಸೂಲಿ ವಿವರ. ರಾ। ಕಾಂಬಳೆ ಕೃಷ್ಣ ಪ್ರಭುಗಳು ರೂ. ೨೫; ರಾ। ಕೂಳೂರ ಅಣ್ಣಪ್ಪ ನ್ಯಾಕರು ರೂ ೨೫, ರಾ। ಬಂಟವಾಳ ನಾರಾಯಣಪೈಗಳು (ಅಂಶ) ರೂ. ೨೫; ರಾ। ದೇರೆಬೈಲ ಮಾಧವಪೈಗಳು ರೂ. ೫, ರಾ। ಸುಜೀರ ಬಾಬುರಾಯರು (ಅಂಶ) ರೂ ೨೫; ರಾ। ಬಂಟವಾಳ ಪದ್ಮನಾಭ ವಿಠಲ ಬಾಳಿಗರು (ಅಂಶ) ರೂ. ೪೦, ರಾ। ಕಟಪಾಡಿ ಹರಿ ನ್ಯಾಕರು ವಗೈರೆ (ಅಂಶ) ರಾ। ಪಾಂಡುರಂಗ ನ್ಯಾಕರಿಂದ ರೂ. ೨೦೦; ರಾ। ಉಡುಪಿ ಲಕ್ಷ್ಮೀನಾರಾಯಣ ಬಾಳಿಗರು ರೂ. ೫೧ ಒಟ್ಟು ಜುಮ್ಲಾ ರೂ. ೧೭೪೫—೦—೦

M. Mukunda Rao.

ತಾ. 13—7—14. Secretary

~~~~~

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಕ್ರಮ ಅರ್ಜಿ ಸಂಬ್ರ 52/1914.

1. ರೆಜಿನ ನಜ್ರೇತ್ 2. ಜರೊಮ್ ನಜ್ರೇತ್	ಮೈನರರು-ಇವರ ಕ್ಷೇಮಚಿಂತಕರು ಲುವೀಜ ನಜ್ರೇತ್	ಅರ್ಜಿದಾರರು

ಮೈಸೂರ್ ಜಿಲ್ಲಾ ಸೂಳ್ಯದೈಲಿನಲ್ಲಿ ಕಳೆದ 1913ನೇ ಇಸವಿ ಜನವರಿ ತಾ. ೨೦ರಲ್ಲು ಮೃತಪಟ್ಟ ಜೋನ್ ಜೋಸೆಫ್ ನಜ್ರೇತ್ ಎಂಬವನ ಸಾಲಗಳನ್ನು ವಸೂಲು ಮಾಡುವರೆ ಸರ್ಟಿಫಿಕೇಟು ಅಪೇಕ್ಷಿಸಿ ಮೃತನ ಸಹೋದರಿಯಾದ ಮೇಲ್ಕಂಡ ಲುವೀಜ್ ನಜ್ರೇತಳು ಬರಕೊಂಡ ಅರ್ಜಿಯು ಇದೇ ಜುಲೈ ತಾ ೩೦ಕ್ಕೆ ತನಕಿಗೆ ಇಟ್ಟಿರುತ್ತದೆ. ಆ ಕುರಿತು ಯಾರೊಬ್ಬರ ಆಕ್ಷೇಪ ಇದ್ದರೆ ಅದನ್ನು ಸದರಿ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ಜಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು P. D'Souza

ತಾ. 13—7—14. *Pleader for Petitioner.*

ಒಂದೇ ತಿಂಗಳು! ಮಿಂಚಿ ಹೋದ ಮೇಲೆ ಚಿಂತಿಸಬೇಡಿ!!

ಅಲ್ಪ ಬೆಲೆ!!!

ಬೇರೆ ಬೇರೆ ಪುಸ್ತಕಗಳಿಗೆ ವೃಥಾ ಹೆಚ್ಚು ಹಣವನ್ನು ವೆಚ್ಚ ಮಾಡಬೇಡಿ!!

ಸುಳ್ಳಿಗೆ ನೂರಾರು ದಾರಿ! ನಿಜಕ್ಕೆ ಒಂದೇ ದಾರಿ!!

ನಿಮ್ಮ ಪರೀಕ್ಷೆಗಾಗಿ ಮೊದಲು ಒಂದು ಪ್ರತಿ ಮಾತ್ರ ೧-೮-೧ ಗೆ ಟಪ್ಪಾಲು ಖರ್ಚು ಇಲ್ಲದೆ ದೊರೆಯುತ್ತೆ.

೩ ಪುಸ್ತಕಗಳೂ ಒಟ್ಟಾಗಿ ಒಂದರಲ್ಲೇ ಬೈಂಡಾಗಿವೆ.

ಈ ದಿನವೇ ಒಂದು ಕಾರ್ಡು ಬರಿಯಿರಿ! ಬೇಗ ಬೇಗ ಬರಿಯಿರಿ!!

ಬಹುಮಾನ— ಒಟ್ಟಾಗಿ ತರಿಸಿಕೊಳ್ಳುವವರಿಗೆ, ೩ ಪ್ರತಿಗೆ ಒಂದು ಉತ್ತಮವಾದ ಭಗವದ್ಗೀತ [ಟೀಕು, ತಾತ್ಪರ್ಯ ಸಹ ಉಳ್ಳದ್ದು] ೫ ಪ್ರತಿಗೆ ೧ ಪ್ರತಿ ಉಚಿತ ಅಂಚೆ ವೆಚ್ಚ ಮಾಫಿ

೬೦ ಭಾಗಗಳೂ ಒಂದರಲ್ಲೇ ಅಡಗಿವೆ

ಆಂಗ್ಲಭಾಷಾ ಪ್ರಕಾಶಕ

ಒಂದೇ ತಿಂಗಳು ಟಪ್ಪಾಲ್ ಖರ್ಚಿಲ್ಲ.

(ಸ್ವತಃ ಇಂಗ್ಲೀಷು ಕಲಿಯುವುದಕ್ಕೆ ಅತ್ಯುಪಯೋಗವಾದ ದ್ದು)

ಇದರಲ್ಲಿ ಇಂಗ್ಲೀಷು ವರ್ಣಮಾಲೆ, ಬರಿಯುವ ಸಾದನೆಗಳು, ಶಬ್ದಸಂಯೋಜನ, ಸ್ವರಾಕ್ಷರಗಳ ವಿಧ ವಿಧ ಶಬ್ದಾಭ್ಯಾಸ, ಉಚ್ಚಾರಣೆ—ಅರ್ಥ, ವಾಕ್ಯಗಳನ್ನು ಜೋಡಿಸುವ ಕ್ರಮ, ಲೆಖ್ಖಗಳು, ಪಾಠಶಾಲೆಯಲ್ಲಿ ೫ ವರ್ಷ ಕಲಿಯುವಷ್ಟು ವ್ಯಾಕರಣ ವಿದಿ, ವಿಧಾನಗಳು, ಇವುಗಳಿಗೆ ನೂರಾರು ಸಾದನೆಗಳು, ನಾನಾ ವಿದ ವಾಕ್ಯಗಳನ್ನು ಮಾಡುವ ಶುಲಭ ಅಭ್ಯಾಸಗಳು, ಇಂಗ್ಲೀಷು ಸಂಪ್ರದಾಯ ಮತ್ತು ಭಾಷಾ ಶೈಲಿ, ಮತ್ತು ಭಾಷಾಂತರ ಮಾಡುವ ವಿದಾನಗಳು, ಇವುಗಳಿಗೆ ನೂರಾರು ಸಾಧನೆಗಳು, ಭಾಷಾ ಜ್ಞಾನಕ್ಕೆ ಬೇಕಾದ ಅನೇಕ ಚಿಕ್ಕ ಕಧೆಗಳು, ಸಂಭಾಷಣಾ ಕ್ರಮಗಳು, ಸಂಭಾಷಣೆಯಲ್ಲಿ ಪ್ರತಿಯೊಂದು ವಿಷಯಕ್ಕೂ ಬೇಕಾಗುವ ಕನ್ನಡ—ಇಂಗ್ಲೀಷ್, ಇಂಗ್ಲೀಷ್—ಕನ್ನಡ ಶಬ್ದಕೋಶ (ನಾಣ್ಣುಡಿಯ ನಿಘಂಟು) ೭೪ ಪುಟಗಳು, ಪ್ರಶ್ನೋತ್ತರ ರೂಪವಾದ ಸಂಭಾಷಣಾ ವಾಕ್ಯಗಳು ೬೦೦, ಕನ್ನಡ—ಇಂಗ್ಲೀಷು ಗಾದೆಗಳು ಸಾಂಕೇತಿಕ ಲೇಖನ ಚಿನ್ಹೆಗಳು ತಂತೀ ವರ್ತಮಾನ, ಕ್ಷೇಮಸಮಾಚಾರ, ಲೇವಾದೇವಿ ಕಾಗದಗಳು, ಅರ್ಜಿಗಳು, ಮುಂತಾದುವು ಬರಿಯುವ ಅಭ್ಯಾಸಗಳು, ಇವುಗಳಿಗೆ ನೂರಾರು ಮಾದರಿಗಳು ಅಡಗಿವೆ ಹೆಚ್ಚು ಪ್ರತಿಗಳಿಲ್ಲ. ತ್ವರೆ ಮಾಡಿರಿ ಕ್ರಯ **1-8-0.**

☞ ನಮ್ಮ ವಿಳಾಸ—

ಎ. ವಿ. ರಾಯಲು,
ಅವಿನ್ಯೂ ರೋಡು,
ಬೆಂಗಳೂರು ಸಿಟಿ.

ಕಳವು, ದರೋಡೆ.

ಡಕಾಯಿತಿ, ಅಕ್ರಮ ಸ್ತ್ರೀಸಂಗಮ, ಅಸಾಮಾಚೋರಿ, ಮಾನಭಂಗ, ಮಾನನಷ್ಟ, ಮುಂತಾದವುಗಳಿಗೆ ಶಿಕ್ಷೆ ವಿಧಿಸಿರುವ ದಂಡ ನೀತಿಶಾಸ್ತ್ರವು ಪೂರ್ವದಲ್ಲಿ ಶುಕ್ರಾಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮಂಜೂರಾಗಿ ಕಲ್ಕತ್ತಾ, ಮುಂಬೈ, ಮದ್ರಾಸು, ಮೈಸೂರು ಜಿಲ್ಲಾಗಳಲ್ಲಿ "ಕನ್ನಡ ಇಂಡಿಯನ್ ಪೆನಲ್‌ಕೋಡ್" ಎಂಬ ಅಭಿದಾನದಿಂದ ಜಾರೀಲಿ ತಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಟಿಪ್ಪಣಿಗಳನ್ನು ಬರೆದಿರುವರು ಅವುಗಳೂ ಈ ಪುಸ್ತಕದಲ್ಲಿ ಅಡಗಿರುವದು. ಕ್ರಯ: ದಪ್ಪ ಕಾಗದದ್ದು ರೂ ೨—೦—೦ ಹಸನು ಕಾಗದದ್ದು ರೂ ೨—೮—೦

ಕೆಟಲಾಗು ಬೇಕಾದವರು ಈ ವಿಳಾಸಕ್ಕೆ ಬರೆಯಿರಿ.

ವಿಳಾಸ—ಬಿ ನರಸಿಂಗರಾವ್,
ಎಡಿಟರ್ ಲಾ ಗಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ

ಕಣ್ಣು ಇಲ್ಲದಿದ್ದರೆ ಕಲಿಯುಗವೇ ಇಲ್ಲ.

ಭಾರೀ ಕ್ರಯದ ಕನ್ನಡಕಗಳು ಕ್ರಯ ರೂಪಾಯಿ 2—8—0

ಸ್ಪಟಿಕದ ಕನ್ನಡಕವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ ಅಲ್ಪ ಕ್ರಯದ ಕನ್ನಡಕಗಳು ದೃಷ್ಟಿಯನ್ನು ಹೋಗಲಾಡಿಸಿ ಕ್ರಮೇಣ ವ್ಯಾಧಿಯನ್ನುಂಟುಮಾಡುತ್ತೆ ಆದಕಾರಣ ಅವುಗಳನ್ನು ಉಪಯೋಗಿಸಬೇಡಿರಿ. ನಮ್ಮಲ್ಲಿ ಸ್ಪಟಿಕದ ಕನ್ನಡಕಗಳು ಕ್ರಯಕ್ಕೆ ದೊರಯುತ್ತೆ ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಕನ್ನಡಕಗಳಿರುವ ಭಾರೀ ಕ್ರಯದ ಪೆಟ್ಟಿಗೆ ಒಂದನ್ನು ಉಚಿತವಾಗಿ ಕಳುಹಿಸುತ್ತೇವೆ ಬಾಕೀ ವಿಷಯಗಳು ನಿಮ್ಮ ದರಕಾಸ್ತು ಬಂದನಂತರ ಬರದು ತಿಳಿಸುತ್ತೇವೆ

ವಿಳಾಸ—ನಿಲಕರ್ ಅಂಡ್ ಬ್ರದರ್ಸ್, ತಿರುವಲ್ಲಕ್ಕೇಣಿ, ಮದರಾಸು

ಆನಂದನಾಮ ಸಂವತ್ಸರದ ಕೈಘಡಿಯಾರ ಅರ್ಧಕ್ರಯ 1—13—0.



ಇದು ಆನಂದನಾಮ ಸಂವತ್ಸರದ ಮಹೋತ್ಸವಕ್ಕಾಗಿ ಈ ಭಾರೀಕ್ರಯದ ಗಡಿಯಾರವನ್ನು ಈ ತಿಂಗಳು ಆಖೈರು ಒಳಕಾಗಿ ತರಿಸಿಕೊಳ್ಳುವವರಿಗೆ ಸುಂದರವಾದ ಪೆಟ್ಟಿಗೆ ಸಹಿತ 1—13—0ಗೆ ಕೊಡಲ್ಪಡುತ್ತೆ.

ವಿಳಾಸ—ರಾಮುರಾವ್,
ಜನರಲ್ ಮರ್ಚೆಂಟ್,
18 ಯ. ನ್ ಯಂ ಕೋಯಿಲ್ ಸ್ಟ್ರೀಟ್, ತಿರುವಲಕ್ಕೇಣಿ, ಮದರಾಸು

ಮದುರೆ ಜುನ್ನಡಿ ಅಂಚಿನ ಸೀರೆ

ಸುಂದರವಾದ ಸಿಂಗಪೂರ್ ಚೀಟಿ ರವಕೆ ಇನಾಂ ಸಹಿತ ಕ್ರಯ ರೂ 2-4-0

ಇದು ಉಡುವದಕ್ಕೆ ದಡೂತಿಯಾಗಿಯೂ, ನೋಡುವದಕ್ಕೆ ನಯವಾಗಿಯೂ, ಕೊಳ್ಳಲು ಬೆಲೆ ಸುಲಭವಾಗಿಯೂ, ಇದೆ. ಬಣ್ಣ ಹೋಗದು. ಉದ್ದ 18 ಮೊಳ ಧಾರಾಳವಾಗಿದೆ.

ವಿಳಾಸ—ಯಸ್, ಯಂ ಮೂರ್ತಿ ಕಂಪೆನಿ,
ತಿರುವಲ್ಲಕ್ಕೇಣಿ, ಮದರಾಸು.

ಸ್ವಲ್ಪ ಹೊತ್ತು ನಿಂತುಕೊಳ್ಳಿ!

ಅಗರಬತ್ತಿ ಅಥವಾ ಸುಗಂಧದ ಬತ್ತಿ

ಪ್ರಸಿದ್ಧವಾದ ಅಂಬರು, ಪುನಗು, ಕಸ್ತೂರಿ, ಪನ್ನೀರು, ಜಂತುವಿನಾಸಿನಿ ಬತ್ತಿಗಳು, ಅರಗಜ ಅಥವ ಹಸೀಗಂಧ ಬಿಲ್ಲೆಗಳು, ಪನ್ನೀರು ಅಥವಾ ರೋಸ್ ವಾಟರು, ಹಿಂದೂ ಸೆಂಟುಗಳು, ಸುವಾಸನೇ ದ್ರವ್ಯಗಳು, ಇವುಗಳೆಲ್ಲಾ ಉತ್ತಮವಾದ ಪದಾರ್ಥಗಳಿಂದ ಮಾಡಲ್ಪಟ್ಟಿವೆ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತೆ. ವ್ಯಾಪಾರಗಾರರಿಗೆ ಕಮಿಷನ್ ಕೊಡಲ್ಪಡುತ್ತೆ. ಯಾವ ವಿಷಯಕ್ಕೂ ಈ ಕೆಳಗೆ ಬರದಿರುವ ಅಡ್ರುಸಿಗೆ ಬರದರೆ ಕಳಿಸಲ್ಪಡುತ್ತೆ.

ಮೆನೇಜರ್,
ಸ್ವದೇಶಿ ಪರಪ್ಯೂಮರೀ ವರ್ಕ್ಸ್, ಬೆಂಗಳೂರು ಸಿಟಿ

ಹೊಸ ಪುಸ್ತಕ!　　ಸೊಗಸಾದ ಸರಣಿ!!

ಬೆಲೆ ಕಡಿಮೆ! ಓದುವದಕ್ಕೆ ಆನಂದ!!

ಸಚಿತ್ರ ಝಾನ್ಸಿ ರಾಣಿ ಚರಿತ್ರೆ.

ಇದರಲ್ಲಿ ರಾಣಿಯಾದ ಲಕ್ಷ್ಮೀಬಾಯಿಯು ಹುಟ್ಟಿದಾರಭ್ಯ ಬಾಲ್ಯದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿ, ರಾಣಿಯಾದ ಮೇಲೆ ಪ್ರಜಾಹಿತಕರವಾದ ಅನೇಕ ಕಾರ್ಯಗಳನ್ನು ಮಾಡಿ, ಲೋಕಪ್ರಸಿದ್ಧವಾದ ತನ್ನ ಕೀರ್ತಿಯನ್ನು ಪ್ರಸ್ಥಾಪಿಸಿದ ಕಥೆಯು ಬಹು ಸ್ವಾರಸ್ಯವಾದ ಕನ್ನಡ ಮಾತುಗಳಿಂದ ಬರೆಯಲ್ಪಟ್ಟಿದೆ ಮಕ್ಕಳಿಗೂ ಅರ್ಥವಾಗುವಂಥ ಸುಲಭವಾದ ಶೈಲಿ, ರಸಭರಿತವಾದ ಕಾದಂಬರಿಯಂತೆ ಮಧುರವಾದ ಮಾತುಗಳನ್ನುಂಟಾಗಿದೆ ಹಿಂದೂ ನಾರಿಯರ ಪಾತಿವ್ರತ್ಯ, ಸದ್ಗುಣ ಮೊದಲಾದವುಗಳನ್ನು ಪ್ರತ್ಯಕ್ಷವಾಗಿ ತಿಳಿಸುವ ಈ ಪುಸ್ತಕದಲ್ಲಿ ೩೩೬ ಪುಟಗಳೂ, ೧೬ ಅಧ್ಯಾಯಗಳೂ ಅಡಕವಾಗಿವೆ ಓದಿ ನೋಡಿದವರಿಗೆ ಇದರ ಯೋಗ್ಯತೆಯು ಸ್ವತಃ ತಿಳಿಯಬರುವಲ್ಲಿ ಹೆಚ್ಚಿಗೆ ಬರೆಯಬೇಕಾದುದೇನು? ಎಲ್ಲರಿಗೂ ಅನುಕೂಲಿಸಬೇಕೆಂಬ ಕೋರಿಕೆಯಿಂದ ಬೆಲೆಯನ್ನು ಕಡಿಮೆ ಮಾಡಿದೆ. ಅನೇಕಾನೇಕ ಚಿತ್ರಪಟಗಳಿವೆ

ಕ್ರಯ ೧ ರೂಪಾಯಿ ಮಾತ್ರ. ವಿ. ಪಿ. ಚಾರ್ಜು ೪ ಆಣೆ.

ಹಾರ್ಮೋನಿಯಂ ಸ್ವಯಂ ಬೋಧಿನೀ.

ಕನ್ನಡದಲ್ಲಿ ಇಂತಹ ಪುಸ್ತಕವು ಇದುವರೆಗೆ ಒಂದಾದರೂ ಪ್ರಚುರವಾಗಿಲ್ಲ ಉತ್ತರ ಕರ್ನಾಟ, ಮಧ್ಯ ಕರ್ನಾಟ, ಮತ್ತು ದಕ್ಷಿಣ ಕರ್ನಾಟ ಈ ಮೂರು ರಾಜ್ಯಗಳಲ್ಲಿರುವ ಕನ್ನಡಿಗರಿಗೂ ಸುಕೊಲಿಸುವಂತೆ ಪುರಂದರ ದಾಸರ ಕೀರ್ತನೆಗಳೇ ಮುಂತಾದ ಕನ್ನಡ ಕೀರ್ತನೆಗಳನ್ನು ಮಾತ್ರವೇ ಆರಿಸಿ ಎಲ್ಲರೂ ತಿಳಿದುಕೊಳ್ಳುವಂತೆ ಸುಲಭ ಮಾರ್ಗದಲ್ಲಿ ಬರೆದಿದೆ ಇದರಲ್ಲಿ ಹಾರ್ಮೋನಿಯಂ ವಾದ್ಯದ ಸಕ್ಷ್ಮೆಯೂ ಸ್ವರಸ್ಥಾಯಿಗಳೂ ವಿವರವಾಗಿ ಕೊಟ್ಟಿರುವುದರಿಂದ ಯಾವ ವಿಚಾರದಲ್ಲಿಯೂ ಸಂದೇಹಕ್ಕೆ ಆಸ್ಪದವೇ ಇರುವುದಿಲ್ಲ ಹಾರ್ಮೋನಿಯಮ್ ಬೋಧಕರಿಗೂ ಇದರಿಂದ ಅನೇಕ ವಿಷಯಗಳು ತಿಳಿಯಬರುವವು.

ಬೆಲೆ 0—4—0. ಅಂಚೆ ವೆಚ್ಚ ಬೇರೆ.

ವಿಳಾಸ:— ಎಚ್. ಎಸ್ ರಾವ್ ಆಂಡ್ ಬ್ರದರ್ಸ್,
ಪುಸ್ತಕ ವ್ಯಾಪಾರಸ್ಥರು,
ಅಕ್ಕಿಪೇಟೆ, ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಶನ್ ಚೀಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೀಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಷ್ಮೆ ವಸ್ತ್ರಗಳೂ; ಪೆಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಷ್ಮೆಯ ವಸ್ತ್ರಗಳೂ; ಜರಿ ಸೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಸೀರೆಗಳೂ, ಚೀಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ಮಿತಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು

ಬರ್ಮೀಸ್ ಬ್ಯುಟಿ ಒಯಿಲ್

ಎಂಬ

ಬರ್ಮಾದೇಶದ ಸೌಂದರ್ಯ.



ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳತಲೆ, ತಲೆನಾಶಿ, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿಕೊಡುವವಸ್ತು ಚಲೋದಾಗಿರುವುದು ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ ೧. ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ. ೩. ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರುಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾಯವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡುಬಂದದೆ. ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ. ಚಾರ್ಜು ಬೇರೆ

ಒಟ್ಟೊ ಪೆರೆಡ್ಯಾಸ್.

ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟು ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ಬಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೊ ಪೆರೆಡ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಜಿನದಕ್ಕೆ	0—8—0.
ನಡುತರದ್ದಕ್ಕೆ	0-12—0.
ದೊಡ್ಡ ಸ್ಯಾಜಿಗೆ	1-14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೋರಲ್ ಪರ್ಫ್ಯುಮರಿ ಕಂಪೆನಿ,
ಮುಂಬಯಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಹು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಸುಧಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ಸರ್ದಾರ್ ಬತ್ತಿ	ಸೇರು 1ಕ್ಕೆ	12-0-0	A ಅರಗಜ	ತೊಲೆ 1ಕ್ಕೆ	2-0 0
[illegible] ಬತ್ತಿ	,, ,,	6-0-0	B ಅರಗಜ	,, ,,	1-0 0
ಕಸ್ತೂರಿ ಬತ್ತಿ	,, ,,	3-0-0	ಕಸ್ತೂರಿ ಬಿಲ್ಲೆ	,, ,	2-0-0
[illegible] ಬತ್ತಿ	,, ,,	2-0-0	ಜವಾಜಿ ಬಿಲ್ಲೆ	,, ,,	1-0-0
[illegible]ಗಿನ ಬತ್ತಿ	,, ,,	1-8-0	ಕೇಸರಿ ಬಿಲ್ಲೆ	,, ,,	0 8 0
ಪನ್ನೀರ್ ಬತ್ತಿ	,, ,,	0-12 0	ತಾಂಬೂಲ ರತ್ನ ಸೀಸೆ 1ಕ್ಕೆ		0-4-0
ಮಸಾಲಾ ಬತ್ತಿ	,, ,,	0-6-0	ದಶಾಂಗ ಡಬ್ಬಿ 1ಕ್ಕೆ		0 4 0

ಮೇನೇಜರ್, "ಸುಗಂಧವಿಲಾಸ ಮಂಗಳೂರು.

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ

ಅಚ್ಚಾಗುತ್ತಲಿದೆ! ಅಚ್ಚಾಗುತ್ತಲಿದೆ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

[illegible]ಬ ಪಂಚಾಂಕೀ ಮರಾಠಿನಾಟಕವು ಈಗ ಅಚ್ಚಿನಲ್ಲಿದ್ದು, ಬರುವ ಆಗೋಸ್ತು [illegible]ಂಗಳ ಅಖೈರ ಒಳಗೆ ಪ್ರಕಾಶಿತವಾಗುವದು ಈ ನಾಟಕದ ಕಥಾನಕವು ಚಲೋ [illegible]ವಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇದ್ದುವುದರಿಂದ [illegible]ಸ್ತಿಕ ಜನರು ಈ ಸಂದರ್ಭವನ್ನು ಬಿಡಲಾಗದು ಬೆಲೆ 10 ಆಣೆ ಟ ಹಾ ಬೇರೆ

ಜುಲೈ ಅಖೈರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡು, ಓರ್ಡರು ನಿನ್ನ [illegible]ಜಿಸ್ಟರ್ ಮಾಡುವ ಗ್ರಾಹಕರಿಗೆ 8 ಆಣೆ ಟ ಹಾ ಬೇರೆ ಹಣವನ್ನು ಮುಂಗ[illegible]ವಾಗಿ ಪೋಸ್ಟೇಜು ಸ್ಟಾಂಪುಗಳ ದ್ವಾರಾ ಅಥವಾ ಮನಿಆರ್ಡರು ದ್ವಾರಾ ಕಳುಹಿಸ[illegible]ಬೇಕು.

ತ್ವರೆಮಾಡಿರಿ!!!

ಕಲ್ಯಾಣಪುರ ಮಂಗೇಶರಾವ್,

ಕಲ್ಯಾಣಪುರ, ದ ಕನ್ನಡ

ಕೃಷ್ಣವಿಲಾಸ ಟ್ರೇಡಿಂಗ್ ಎಸೋಸಿಯೇಶನ್

ಗಿರಗಾಂ, ಮುಂಬಯಿ

ಮಾನ್ಯ ಗೃಹಸ್ಥರೇ,

ತಮ್ಮ ಕಡೆಯ ಹಲವು ಮಂದಿ ಗೃಹಸ್ಥರು ವರ್ತಮಾನ ಪತ್ರಗಳಲ್ಲಿ ಕೊಟ್ಟಿರುವ "ಪ್ರಸಿದ್ಧ ಪತ್ರಿಕೆ"ಗಳು ಹೊಗಳಿ ವಿವರಿಸುವ ಸಾಮಾನುಗಳನ್ನು ಇಲ್ಲಿಗೆ ಬರೆದು ತರಿಸಿಕೊಳ್ಳುತ್ತಿರುವಲ್ಲಿ ಆ ವಸ್ತುಗಳು ಪ್ರಸಿದ್ಧ ಪತ್ರಿಕೆಗಳಲ್ಲಿ ಬರೆದಿರುವಂತೆ ಚನ್ನಾಗಿರುವದರ ಬದಲಿಗೆ ಬಹಳ ಹಲಕೀ ಸಾಮಾನುಗಳಿದ್ದು ಅವುಗಳಿಗೆ ಕೊಟ್ಟ ಹಣ ದುರ್ವ್ಯಯ ಮಾಡಿದಂತೆ ಆಯಿತಲ್ಲಾ ಎಂದು ವ್ಯಸನಪಡುತ್ತಿರುವದು ನಮ್ಮ ತಿಳುವಳಿಕೆಗೆ ಬಂದದೆ ನಾವು ಹಲವು ವರ್ಷಗಳಿಂದ ಪರವೂರ ಗೃಹಸ್ಥರಿಗೆ ಇಲ್ಲಿಂದ ಅತ್ಯುತ್ಕೃಷ್ಟವಾದ ವಸ್ತುಗಳನ್ನು ಪೇಟೆಯಿಂದ ಬಹಳ ಚೌಕಶೀಯಿಂದ ಕಡಿಮೆ ಖರೀದಿಗೆ ಕೊಂಡುಕೊಂಡು ರವಾನಿಸುತ್ತಿರುವುದು ಸಮಸ್ತರಿಗೂ ಗೊತ್ತೇ ಇದ್ದ ವಿಷಯವಾಗಿದೆ ಆದುದರಿಂದ ಎಲ್ಲಾ ಗೃಹಸ್ಥರು ತಮಗೆ ಮುಂಬಯಿಯಿಂದ ಏನೇ ವಸ್ತುಗಳು ಬೇಕಿದ್ದರೂ ನಮಗೆ ಬರೆದಲ್ಲಿ ನಾವು ಅವುಗಳನ್ನು ಪೇಟೆಯಿಂದ ಕಡಿಮೆ ಕಿಮ್ಮತ್ತಿಗೆ ತಕ್ಕೊಂಡು ವಿ ಪಿ ಟಪ್ಪಾಲು ಮೂಲಕ ಕಳುಹುವೆವು ಈ ಸಂಗತಿಯನ್ನು ತಮ್ಮ ಮಿತ್ರಬಾಂಧವರೊಡನೆ ಪ್ರಚಾರಪಡಿಸಬೇಕಾಗಿ ನಾವು ನಮ್ಮ ಎಲ್ಲಾ ಗೃಹಸ್ಥರನ್ನು ಬೇಡುವೆವು.

ರೂಪಾಯಿ ಹತ್ತು ಯಾ ಹೆಚ್ಚಿನ ಬೆಲೆಯ ಸಾಮಾನುಗಳಿಗೆ ಬರೆಯುವವರು ರೂಪಾಯಿ ಒಂದನ್ನು ಮುಂಗಡವಾಗಿ ಕಳುಹಿಸಬೇಕು. ಇದನ್ನು ಜುಮಲಾ ಹಣದಿಂದ ಕಳೆಯುವೆವು

Krishnavilasa Trading Association,

Girgaum, Bombay.

500 ರೂಪಾಯಿಗಳ ಬಹುಮಾನ!!

ಲೋಕ ಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬು ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಪ್ರಿಯ ಸಹೋದರರೇ [illegible] ರಕ್ತವನ್ನು [illegible] ದುರುಪಯೋಗಿಸುವುದನ್ನು ಬಿಟ್ಟು ಲೋಕೆ [illegible] ಪಂಜಾಬ್ ಸಾಲಾಮಿಸ್ರೀ ಮುರಬ್ಬಾವನ್ನು ಸೇವಿಸಿರಿ! [illegible] ಕೋಶವು ಬಲಹೀನವಾಗಿ [illegible] ಈ ಪಂಜಾಬು ಸಾಲಾಮಿಸ್ರೀ [illegible] ಇಲ್ಲದಿದ್ದರೂ, [illegible] ದೂರ ನಡೆ[illegible]

[illegible] ತಲೆಯ ನೋವೂ [illegible] ಮುರಬ್ಬಾ ಸೇವನೆ [illegible] ಒಳ್ಳೇ ಸ್ಥಿತಿಯಲ್ಲಿಡುವುದು, [illegible] ಬಲವನ್ನು ಉಂಟುಮಾಡುವುದು, ತಲೆ ತಲೆನೋವು, [illegible] ಧಾತುವನ್ನು [illegible] ಸ್ವಲ್ಪ ಮಾತ್ರವೂ ಇರಲಾರದು. ಕೆಲಸಮಾಡುವುದರಲ್ಲಿ ಉತ್ಸಾಹವೂ, ಧೈರ್ಯವೂ, ಬುದ್ಧಿ ಕುಶಲತೆಯೂ, ಶರೀರ ಕಾಂತಿಯೂ ಉಂಟಾಗುತ್ತದೆ ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ಕಾಂಬ್ರದ ಮತ್ತು [illegible] ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು ಹೊಟ್ಟೆಯಲ್ಲಿರುವ ಜ್ವರದ್ಗಡ್ಡೆಯನ್ನು [illegible] ಶ್ವಾಸಕಾಸವನ್ನು ನಿರ್ಮೂಲಪಡಿಸುವುದು

ಈ [illegible] ಕಾಬೂಲ ಕಾಂದಹಾರ್ ದೇಶಗಳಲ್ಲಿ [illegible] ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು [illegible] ಬಿಟ್ಟ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು [illegible] ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು [illegible] ಮೋಸಪಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ [illegible] ಅಥವಾ ಬೇರೆ ತರದ್ದೋ [illegible] ಬರುತ್ತೆ.

ಈ [illegible] ಪಂಜಾಬ್ ಸಾಲಾಮಿಸ್ರೀಯಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು [illegible] ಕೊಡಲ್ಪಡುವುದು ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು [illegible] ಮೂಲಕ [illegible] ಪಡೆಯಬಹುದು 15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ 2 0 0 [illegible] ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ಈಗ [illegible] ಜಾಸ್ತಿ ಆಗಿರುವದರಿಂದ 1—8—0 ಕ್ರಯವಿರುವುದನ್ನು 2—0—0 ಮಾಡಿರುತ್ತೇವೆ

1 [illegible] ಚೂರ್ಣ —ಬೆಲೆಯು ಡಬ್ಬಿ 1ಕ್ಕೆ 0—[illegible]—0

2 [illegible] ಮತ್ತು ವೃಶ್ಚಿಕದಂಷ್ಟ್ರ ತೈಲವು —ಸೀಸಾಯಿ 1ಕ್ಕೆ 0 2 0.

3 [illegible] ನಿವಾರಣ ತೈಲವು —ಕ್ರಯ ಸೀಸಾಯಿ 1ಕ್ಕೆ 0—4—0

4 ಹೊಟ್ಟೆ ನೋವಿಗೆ ಔಷಧ —ಸೀಸಾಯಿ 1ಕ್ಕೆ 0—4—0

5 [illegible] ರೋಗಕ್ಕೆ ಔಷಧ —ಕ್ರಯ ಸೀಸಾಯಿ 1ಕ್ಕೆ 0—4—0

6 ವ್ರಣಕ್ಕೆ ಔಷಧ —ಕ್ರಯ ಡಬ್ಬಿ 1ಕ್ಕೆ 0—4—0

7 [illegible] ಬೇದಿ ಮಾತ್ರೆಗಳು —ಕ್ರಯ 0—4—0

8 ತಲೆನೋವಿಗೆ ತೈಲವು —ಕ್ರಯ ಸೀಸಾಯಿ 1ಕ್ಕೆ 0 2—6

9 ಉಷ್ಣಕಾಲಕ್ಕೆ ಮಾತ್ರೆಗಳು —ಉಷ್ಣ ಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, [illegible] ಗುಣವಾಗುವದು ಕ್ರಯ ಸೀಸಾಯಿ 1ಕ್ಕೆ 1—0—0

10 [illegible] ಔಷಧ —ಮಲದ್ವಾರದಲ್ಲಿ ರಕ್ತ ಸ್ರಾವವೂ, ಮತ್ತು ಮೊಳಕೆಯ ಬಾಧೆಯು [illegible] ಗುಣಮಾಡುವದು ಕ್ರಯ ಸೀಸಾಯಿ 1ಕ್ಕೆ 0—8—0

[illegible] ಕಣ್ಣಿಗೆ ಸುರ್ಮಾ —ಕ್ರಯ ಸೀಸಾಯಿ 1ಕ್ಕೆ 0—4—0.

12 [illegible]ಂತ ಚೂರ್ಣವು —ಕ್ರಯ ಡಬ್ಬಿಗೆ 0—1—3

13 ಕೂದಲು ಬೆಳೆಯುವ ಎಣ್ಣೆ —ಕ್ರಯ ಸೀಸಾಯಿ 1ಕ್ಕೆ 0 —4—0

14 ಆಶ್ಚರ್ಯಕರವಾದ ದ್ರಾವಕ —ಇದನ್ನು ಸ್ವಲ್ಪ ಮೂಸಿನೋಡುವುದರಿಂದ 1 ನಿಮಿಷದಲ್ಲಿ ತಲೆನೋವು [illegible] ಕ್ರಯ ಸೀಸಾಯಿ 1ಕ್ಕೆ 0—4—0

15 ಕಜ್ಜಿ ಮತ್ತು ಹುಳುಕಡ್ಡಿ ಔಷಧ —ಕ್ರಯ ಸೀಸಾಯಿ 1ಕ್ಕೆ 0—4—0.

16 ಆಶ್ಚರ್ಯಕರವಾದ ಪೆನ್ಸಲ್ —ಈ ಪೆನ್ಸಲಿನಿಂದ ಕಾಗದದ ಮೇಲೆ ಬರೆಯುವಾಗ ಏನೂ ಕಾಣುವದಿಲ್ಲ ನಂತರ ನೀರನ್ನು ಬರೆದ ಕಾಗದದ ಮೇಲೆ ಸವರಿದರೆ ಎಲ್ಲಾ ಅಕ್ಷರಗಳೂ ಚನ್ನಾಗಿ ಕಾಣುವವು. ನೋಡುವವರಿಗೆ ಬಹಳ ಆಶ್ಚರ್ಯಕರವಾಗಿ ಕಾಣುತ್ತೆ ಕ್ರಯ 0-4-0.

17 ಬಿಳೇ ಕೂದಲನ್ನು ಕರೇ ಕೂದಲನ್ನಾಗಿ ಮಾಡುವ ದ್ರಾವಕ:—ಈ ಔಷಧವನ್ನು ಒಂದಾವರ್ತಿ ಕೂದಲಿಗೆ ಸವರುವದರಿಂದ ಬಹಳ ದಿವಸಗಳವರಿಪ್ಪಿಗೂ ಕರಿಯ ಕೂದಲುಗಳು ಇರುತ್ತೆ ಕ್ರಯ 1—0—0.

1—0—0 ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ.

ನಮ್ಮ ಏಜಂಟರು — ಡಿ. ಸಯ್ಯದ್ ಉಸ್ಮಾನ್ ಎಂಡ್ ಕೋ.

ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,

5 ಹಾಜಿಸಾಹೇಬ್ ಮಹದಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ಕರ್ಣಾಟಕ ವನೌಷಧಾಲಯ ಶಿರಸಿ.

ಔಷಧಗಳ ಗುಣದ ಬಗ್ಗೆ ಡಾಕ್ತಾರ ಮುಂತಾದವರ ಕಡೆಯಿಂದ ಸರ್ಟಿಫಿಕೇಟುಗಳು ಶಿಕ್ಕಿರುತ್ತವೆ

೧ ರೋಗನಾಶಕ. ರಕ್ತ, ದಾತು ಶುದ್ಧಿ ವ ವೃದ್ಧಿಕರ ಲೋಹ ಮಿಶ್ರಿತ ಗುಳಿಗೆ ೪೨ ಟ ಖ ಸಹ ಕ್ರಯ ರೂ ೨—೪—೦

೨. ಪ್ರವಾಳ ಕೇಶರ ಅಮರಸತ್ವ ಶಿಲಾಜಿತು ವ ವನಸ್ಪತಿ ಮಿಶ್ರಿತ ಧಾತುಪೌಷ್ಟಿಕ ಶಕ್ತಿವರ್ದಕ ಗುಳಿಗೆ ೪೨ ಕ್ರಯ ರೂ ೨—೪—೦

೩. ಗರ್ಮಿ ರೋಗನಾಶಕ ಗುಳಿಗೆ ೭ ದಿವಸದಲ್ಲಿ ... ೪೨ ಗುಳಿಗೆ ಡಬ್ಬಿ ೧ಕ್ಕೆ ಕ್ರಯ ರೂ ೩—೪—೦

೪. ಟಾಕಿಚಟ್ಟಿನಾಶಕ ಮಲಮು ಡಬ್ಬಿ ೧ಕ್ಕೆ ಕ್ರಯ ರೂ ೧—೪—೦

೫. ವಾತನಾಶಕ ತೈಲ ಯಾವದೇ ತರದ ವಾತವಿದ್ದರೂ ಗುಣ ಕುಪ್ಪಿ ೧ಕ್ಕೆ ಕ್ರಯ ರೂ ೧—೬—೦

೬. ಬೃಂಗಾಮಲಕಾದ್ಯ ತೈಲ. ಶಿರೋರೋಗ ನೇತ್ರರೋಗ ನಿವಾರಣ ಅಕಾಲದಲ್ಲಿ ಆದ ಹಣ್ಣುಕೂದಲು ಕಪ್ಪಾಗುತ್ತವೆ ಕುಪ್ಪಿ ೧ಕ್ಕೆ ಕ್ರಯ ರೂ ೧—೪—೦

೭. ಜಂಬೀರ ತೈಲ ಮೇಲಿನಂತೆ ಗುಣ ಕುಪ್ಪಿ ೧ಕ್ಕೆ ಕ್ರ ರೂ ೧—೨—೦

೮. ಮೂಲವ್ಯಾದಿ ಹರಚೂರ್ಣ ಡಬ್ಬಿ ೧ಕ್ಕೆ ಕ್ರಯ ರೂ ೧—೪—೦

೯. ಕಫದಮ್ಮುಹರ ಚೂರ್ಣ ಡಬ್ಬಿ ೧ಕ್ಕೆ ಕ್ರಯ ರೂ ೧—೪—೦

೧೦. ಇಸುಬುರುತ್ತಿ ಮಲಮು ಡಬ್ಬಿ ೧ಕ್ಕೆ ಕ್ರಯ ರೂ ೧—೪—೦

೧೧. ಅಸಾಧ್ಯಕೆಟ್ಟ ಹುಣ್ಣುಗಳಿಗೆ ಮಲಮು ೧—೪—೦

೧೨ ಮದನೋದ್ಭವ ಚೂರ್ಣ ಡಬ್ಬಿ ೧ಕ್ಕೆ ರೂ ೧ ೧—೦

೧೩. ಅಮೃತಪಾಕ (ವೃದ್ಧನಾದರೂ ...) ಧಾತುಪೌಷ್ಟಿಕ ಶಕ್ತಿವರ್ಧಕ ೪೦ ತೊಲೆ ಡಬ್ಬಿ ೧ಕ್ಕೆ ...

೧೪. ಅಮೃತಗುಟಿ ಅಗ್ನಿವೃದ್ಧಿಕರ ಪಿತ್ತಕಫನಾಶಕ ಜ್ವರಗಳಿಗೆ ... ಗತಜ್ವರ ನಾಶವಾಗಿ ಶಕ್ತಿ ಬರುತ್ತದೆ ... ವಾಗುತ್ತದೆ ಗುಳಿಗ ೪೨ರ ಕ್ರಯ ರೂ ೨—...

ಈ ಶಿವಾಯ ಇನ್ನೂ ಅನೇಕ ಔಷದಗಳ ಶಿಕ್ಕುತ್ತವೆ ರೋಗದ ಲಕ್ಷಣ ಪೂರ್ಣವಾಗಿ ತಿಳಿಸಿದರೆ ಯೋಗ್ಯ ಕಿಮ್ಮತಿಗೆ ಉತ್ತಮ ಔಷದಗಳ ಕಳಿಸಲಾಗುವದು.

ಪತ್ತೆ:—ಆರ್. ಯಸ್. ವರ್ಝೆ ಕಸಬೆ, ವೈದ್ಯಭೂಷಣ,
ಪೋಸ್ಟು ಶಿರಸಿ, ಜಿಲ್ಲಾ ಉತ್ತರ ಕಾನಡಾ

ದಿ ಕೆನರಾ ಸ್ಯಾಕಲ್ ಮಾರ್ಟ, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ... ಎಸ್ ... ಹಂಬರ್ ... ಕೊವೆಂಟ್ರಿ ಅಲ್ಲದೆ ಸಲಬ ... ಸನ್ಸ, ರೊಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅವಕ್ಕೆ ಬೇಕಾದ ವ ಪಿ ಎಸ್ ... ಬ್ರೆಂಪ್ಟನ್, ಬ್ರೂಕ್ಸ, ಲೂಕಸ್, ಪೆರ್ರಿ ಮುಂತಾದ ಉಪಕರಣಗಳೂ, ಡನ್‌ಲೋಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ವ ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯವು

2 ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು

3 ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4 ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು

5 ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

K. K. Shanbhog, *Proprietor*
THE CANARA CYCLE MART,
Udipi, S. Canara.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

ಧಾತುಪೌಷ್ಟಿಕ ವಜ್ರಾಂಗಪಾಕ.)

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು ಇದರಿಂದ ... ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು ರಕ್ತದೂಷಿತರೋಗ, ಪಿಂಡವಿಕಾರ ನರಗಳ ಅಶಕ್ತತೆ, ನಿದ್ರಾಭಂಗ, ಲಿಂಗನಿಸ್ತೇಜತ್ವ, ವಲಿಯಲ್ಲಿ ಧಾತುಹೋಗುವದು, ಕಟಿಶೂಲ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾದಿ ಇವು ಗುಣವಾಗಿ ಧಾತು ಪೌಷ್ಟಿಕ, ರಕ್ತವೋದಕ, ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ, ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ ೪೦ ತೊಲೆಗೆ ಕ್ರಯ ರೂ ೩—೮—೦, ಒಮ್ಮೆಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ ೬—೦—೦ ಟಪಾಲು ಖರ್ಚ ಬೇರೆ

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗನಾಶಕ ಗುಳಿಗೆ ೪೨ಕ್ಕೆ ಉತ್ತಮ ಗುಣ ಕ್ರಯ ರೂ ೩, (೩) ತಾಂಬೂಲಮೋಹಿನಿ ಕಸೂರಿ ಮಾತ್ರೆ ... ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೆಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ... ಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ ೧ ಟಪಾಲು ಖರ್ಚ ಬೇರೆ

ಇನ್ನು ಅನೇಕ ಔಷದಗಳು ನಮ್ಮ ಕಂಪೆನಿಯಲ್ಲಿ ಶಿಗುತವೆ ಅನುಪಾನ ಪತ್ರಿಕೆ ... ಸಂಗಡ ಕಳುಹಿಸುವೆವು

ನಮ್ಮ ವಿಳಾಸ — ವಿ. ಎಸ್. ಮೋಡಕ,
ಕರ್ಣಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ ಶಿರ್ಶಿ, ಜಿಲ್ಲಾ ಕಾನಡಾ

ಯುನಿವರ್ಸಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು —191, ಬೌ ಬಜಾರ, ಕಲ್ಕತ್ತಾ

ಸಹಾಯ! ಉಪಶಾಂತಿ!! ಸಹತಾಪ!!!

... ಇನ್ಶ್ಯುರೆನ್ಸ್ ಕಂಪೆನಿಯು ಸ್ಥಿರತಗ ಯಾವ ವ್ಯವಸ್ಥಾನಗಳು ಬೇಕೆಂಬುದನ್ನು ... ಬಲ್ಲಿರೋ?

ಇನ್ಶ್ಯುರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ..., ರಕ್ಷಿತ ಧನ ಯುನಿವರ್ಸಲಿನಲ್ಲಿ ಈ ಮೂರರ ವೃದ್ಧಿ ... ಆಗಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ

		ಮೊದಲನೇ ವರ್ಷ	2ನೇ ವರ್ಷ
...	ರೂ	13 329—0—0	22,549—0—0
...		25 670—0—0	38 93,—0—0
ಜುವಾಬ್ದಾರಿ ಕೇಸುಗಳು		38 999—0—0	61 482 0—0
...	,	1, 6,685 0—0	5 ,4 683—0—0
...	,	2 0 4—0—0	2 49,460—0—0
(...) ರಕ್ಷಿತ ಧನ		10 000—0—0	50,000 0—0
(...) ರಕ್ಷಿತ ಧನ	,	,7,220—0—0	2 ,778—,—2
... ಕೊಡಲ್ಪಟ್ಟಿದೆ			... ಲಾಭ ... ಕೊಟ್ಟಿದೆ

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1 ಅದು 1912ನೇ ಲ್ಯಾಪ್ ಎಶ್ಯೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ... ಠೇವಣಿಯನ್ನಿಟ್ಟಿರುವುದು 2 ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 1 000 ಆಗಿರುವುದು 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು 4 ರೂ 3,00,000ಗಿಂತಲೂ ಹೆಚ್ಚಿಗೆ ಬಾಧ್ಯತೆಗಳನ್ನು ಕೊಟ್ಟಿದೆ 5 ಫಂಡು 2,00,000 ರೂಪಾಯಿಗೆ ಹೆಚ್ಚಿದೆ 6 ಸರಕಾರಭದ್ರತೆಯಲ್ಲಿ 50,000 ರೂಪಾಯಿ ಇದೆ 7 ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ 8 ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ 9 ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು 10 ಕೊಟ್ಟ ಪ್ರೀಮಿಯಮಿಗಿಂತಲೂ ಮಟ್ಟಾರೆ ಬೋನಸ್ ಕೊಡುವುದು ಇದರಲ್ಲಿ ಮಾತ್ರವೇ.

ಪತ್ರಗಳ ಧ್ವನಿ

'ಬಂಗಾಳೀ'—14ನೇ ಜನವರಿ 1914—ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡ ಇದೆ, ನಾವು ಅದನ್ನು ಓದಿನೋಡಿ ಅದು 61,482 ಪ್ರೋವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು ಸಮಾರು 3 ಲಕ್ಷ ಬಾಧ್ಯಕ ಹಣವನ್ನು ಕಂಪೆನಿಯು ಕೊಟ್ಟಿರುವುದು, ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟರುಗಳು ಬೇಕಾಗಿವೆ ಎಲ್ಲಾ ವಿಧದ ಏಜಂನ್ಸಿ ಶರ್ತಗಳಿಗೆ—

ವಿಳಾಸ.— ಲಕ್ಷ್ಮಣ ರಾವ್ ಬ್ರದರ್ಸ್,
ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು, ಪೋಸ್ಟು, ಉಡುಪಿ ಇವರಿಗೆ ಬರೆದುಕೊಳ್ಳಿರಿ.



ಎಲಂಬಿಕ್ ವೆಜಿಟೆಬಲ್ ಟೊನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧವು ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ಥಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು ರಕ್ತ ಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು, ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಕೆಯಾದ ಮಲಬದ್ಧತೆಯನ್ನು ಪರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಬಾಧನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0

ಅನೊಡ್ಯ್ಯಾನ್. ಹೊರಗೆ ಹಾಗಿಸುವುದಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು—ಶೀತ, ಬೇಧಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ಹುಳಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟ್ಲಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:-

ಎಸ್. ವೈದ್ಯಾ ಆಂಡ್ ಕೊ. **S. VAIDYA & Co.,**
ಪಾರ್ಕ್ ಟೌನು, ಮದ್ರಾಸು. *Park Town, Madras.*

"ಅಯೊನಿಕ್ ಫಾರ್ಮಸಿ"

ಈ ಔಷಧ ಪರಿಶೋಧನಾ ಗೃಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯುಷನ್. ಎಂಬ ಜ್ವರನಿವಾರಣೆಯ ರಸಾಯನ, (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂದುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

ಈ ಮೇರೆಗೆ ನಮ್ಮ ಕನ್ನಡಿನಲ್ಲಿ ಭಾಷಾಭೇದವುಂಟಾಗಿರುವದಕ್ಕೆ ಮಹತ್ವದ ಕಾರಣವೆಂದರೆ ಕರ್ನಾಟಕ ಪ್ರಾಂತದ ಭಿನ್ನ ಭಿನ್ನವಾದ ಅವಸ್ಥೆಯು. ಪೂರ್ವಕಾಲದಲ್ಲಿ ಕಾವೇರಿಯಿಂದ ಗೋದಾವರಿಯ ವರೆಗೆ ಹಬ್ಬಿರುವ ಕರ್ನಾಟಕ ಪ್ರಾಂತವು ಈಗ ಎಲ್ಲಿ ಅಡಗಿದೆಯೋ ಕಾಣುವದೇ ಇಲ್ಲ. ಪ್ರಕೃತಕ್ಕೆ ಕನ್ನಡ ದೇಶವೆಂದರೆ ಮೈಸೂರಿನ ಎಂಟು ಜಿಲ್ಲೆಗಳೂ, ಮದ್ರಾಸು ಇಲಾಖೆಯ ದಕ್ಷಿಣ ಕನ್ನಡ ಜಿಲ್ಲೆಯೂ, ಬಳ್ಳಾರಿ ಅನಂತಪುರ ಜಿಲ್ಲೆಗಳ ಕೆಲವು ಭಾಗಗಳೂ, ಹೈದರಾಬಾದ ಸಂಸ್ಥಾನದ ಕೊಪ್ಪಳದಿಂದ ಕಲಬರ್ಗಿಯ ವರೆಗಿನ ಪಶ್ಚಿಮ ಪ್ರಾಂತವೂ, ಮುಂಬಯಿ ಇಲಾಖೆಯ ವಿಜಾಪೂರ, ಧಾರವಾಡ, ಬೆಳಗಾಂವಿ ಮತ್ತು ಉತ್ತರ ಕನ್ನಡಾ ಜಿಲ್ಲೆಗಳೂ ಇಷ್ಟು ಭಾಗದ ಸಮಾವೇಶವಾಗುತ್ತದೆ. ಅಂದರೆ ಈಗಿನ ಕರ್ನಾಟಕವು ನಾಲ್ಕು ಸರಕಾರಗಳ ಆಡಳಿತೆಗೆ ಅಧೀನವಾಗಿ ಒಡೆದು ಹಾಕಲ್ಪಟ್ಟಂತೆ ಆಗಿರುವದು. ಆದದರಿಂದ ಕನ್ನಡ ಭಾಷೆಯ ಪ್ರಾಥಮಿಕ ಶಿಕ್ಷಣವೇ ನಾಲ್ಕು ಸರಕಾರಗಳಲ್ಲಿ ನಾಲ್ಕು ರೀತಿಯಾಗಿ ಅನುಸರಿಸಲ್ಪಡುವ ಮೂಲಕ ಭಿನ್ನ ಶಿಕ್ಷಣವು ಹೊಂದಿದ ಭಿನ್ನ ಪ್ರಾಂತದ ಜನರ ಭಾಷೆಯು ಭಿನ್ನವಾಗದಿರುವ ಬಗೆ ಹೇಗೆ? ಮುಂಬಯಿ ಕರ್ನಾಟಕದ ಕನ್ನಡಕ್ಕೆ ಮರಾಠೀ ಭಾಷೆಯ ಸಂಸರ್ಗವಾಗಿ ಅಲ್ಲಿಯ ರೂಢ ಶಬ್ದಗಳು ವಿಕೃತಿಯನ್ನು ಹೊಂದಿ ಕನ್ನಡದಲ್ಲಿ ಶೇರಿಕೊಂಡಿರುವದು ಸ್ವಭಾವಿಕವಾಗಿರುವಂತೆಯೇ ಹೈದರಾಬಾದಿನವರ ರಾಜ್

ಭಾಷೆಯು ಉರ್ದು ಆಗಿರುವದರಿಂದ ಆ ಪ್ರಾಂತದ ಕನ್ನಡಕ್ಕೆ ಉರ್ದೂ ಫಾರ್ಸಿಗಳ ಸೆರಗು ಬಡಿದಿದೆ. ಬಳ್ಳಾರಿ, ಅನಂತಪುರಗಳಂತೂ ಆಂಧ್ರರ ನಿರಂತರ ಸಹವಾಸದಿಂದ ತೆಲುಗು ಮಾಯವಾಗುವ ಹೊತ್ತು ಬಂದಿವೆ. ಮೈಸೂರ ಸರಕಾರದಲ್ಲಿ ತಮಿಳ ನಾಡಿನವರ ಪ್ರಾಬಲ್ಯವಿರುವಾಗ ತಮಿಳಿನ ಸ್ಪಷ್ಟ ಬೆಳಕು ಅದರ ಸಂಪರ್ಕ ದೋಷವು ಅಲ್ಲಿಯ ಕನ್ನಡಕ್ಕೆ ತಗಲಿರುವದಂತೂ ಸ್ಪಷ್ಟವಾಗಿದೆ. ಮೇಲಾಗಿ ಹೈದರ ಅಲ್ಲೀ ಟೀಪುಸುಲ್ತಾನರ ಕಾಲದಿಂದಲೋ ಏನೋ ಅನೇಕ ಅರಬೀ, ಪಾರ್ಸೀ, ಉರ್ದೂ ಶಬ್ದಗಳೂ ಮೈಸೂರ ಭಾಷೆಯಲ್ಲಿ ಕನ್ನಡವಾಗಿ ಸೇರಿರುವದಲ್ಲದೆ ಆಂಧ್ರದ ತೆಲುಗಿನ ಛಾಯೆಯಿಂದಲೂ ಮೈಸೂರ ಕನ್ನಡವು ಮುಕ್ತವಾಗಿಲ್ಲ. ನಮ್ಮ ಪ್ರಾಂತದ ಭಾಷೆಯಂತೂ ಕೇಳುವದೇನು? ಪೂರ್ವದಿಂದ ಕೊಡಗೂ, ದಕ್ಷಿಣದಿಂದ ಮಲೆಯಾಳವೂ, ಉತ್ತರದಿಂದ ಕೊಂಕಣಿಯೂ, ಪಶ್ಚಿಮದಿಂದ ಸಮುದ್ರದ ಸೌಳನೀರು ಹೀಗೆ ನಮ್ಮ ಮೇಲೆ ಒಂದೇ ಪ್ರಕಾರ ದೌಡುನಡಿಸಿರುವಾಗ ನಾವು ಕನ್ನಡಿಗರಾಗಿ ಉಳಿಯುವದು ಹೇಗೆ? ಕ್ರೈಸ್ತನ ಸುವಾರ್ತಾವಾಹಕರಾದ ಒಬ್ಬಿಬ್ಬ ಮಿಶನರಿಗಳ ಸಾಹಸದಿಂದ ಇಲ್ಲಿ ಹುಟ್ಟಿದ ಒಂದೆರಡು ಕನ್ನಡ ಮುದ್ರಾಲಯಗಳ ಮೂಲಕವಾಗಿ ಮಂಗಳೂರು ಕನ್ನಡ ಭಿಲ್ಲೆಯೆಂಬ ಹೆಸರನ್ನು ಪಡೆದಿರಬಹುದೇನೋ ಎಂದು ಊಹಿಸಿದರೂ ವಿಶೇಷವಾದ ತಪ್ಪಾಗಲಿಕ್ಕಿಲ್ಲ. ಯಾವ ಭಾಷೆಗಾದರೂ ಸಮೀಪವರ್ತಿಯಾದ ಬೇರೆ ಭಾಷೆಗಳ ಸಂಪರ್ಕವಾಗುವದರಿಂದ ಅದರ ಸ್ವರೂಪದಲ್ಲಿಯು ತುಸುಮಟ್ಟಿಗಾದರೂ ಭಿನ್ನತೆಯುಂಟಾಗುತ್ತದೆಂಬದು ನಿರ್ವಿವಾದವಾಗಿದೆ. ಮತ್ತು ಇದೇ ಕಾರಣದಿಂದ ಮಾತಾಡುವ ವ್ಯವಹಾರಿಕ ಭಾಷೆಯಲ್ಲಿ ಪ್ರಾಂತಭೇದದ ವಿಚಿತ್ರ ಪ್ರಕಾರಗಳು ನಿದರ್ಶನಕ್ಕೆ ಬಂದೇ ಬರುತ್ತವೆ. ಆದರೆ ಗ್ರಂಥಗಳನ್ನು ಬರೆಯುವ ಭಾಷೆಯಲ್ಲಿ ಈ ಬಗೆಯ ವ್ಯತ್ಯಾಸವು ಅನಿಷ್ಟಪರಿಣಾಮಕಾರಿಯಾಗಿಯಾಗುತ್ತದೆ. ಆಂಧ್ರರಿಗಾಗಲೀ ತಮಿಳರಿಗಾಗಲೀ, ಮಹಾರಾಷ್ಟ್ರರಿಗಾಗಲೀ, ಗುಜರಾತೀಯರಿಗಾಗಲೀ ಪ್ರಾಥಮಿಕ ಶಿಕ್ಷಣದ ಪುಸ್ತಕಗಳೆಲ್ಲ ಆ ಆ ಭಾಷೆಗಳಿಗೆ ಒಂದೇ ಆಗಿರುವದರಿಂದ ಅವರಲ್ಲಿ ಗ್ರಂಥಸ್ಥ ಭಾಷೆಯು ಒಂದೇ ಪ್ರಕಾರವು ಸ್ವಭಾವಿಕವಾಗಿಯೇ ರೂಢವಾಗಿ ಹೋಗಿದೆ. ಆದರೆ ನಮ್ಮಲ್ಲಿ ಮೇಲೆ ಹೇಳಿದಂತೆ ಮೈಸೂರ ಸರಕಾರದ ಶಾಲಾಖಾತೆಯ ಪ್ರಾಥಮಿಕ ಶಿಕ್ಷಣದ ಭಾಷಾ ಶೈಲಿಯೇ ಬೇರೆ, ಮುಂಬಯಿ ಸರಕಾರದ ಪದ್ಧತಿಯೇ ಬೇರೆ, ಮದ್ರಾಸದ ಮಾರ್ಗವೇ ಬೇರೆ, ಹೈದರಾಬಾದದ ಸ್ಥಿತಿಯೇ ಬೇರೆ, ಹೀಗಾಗಿರುವ ಮೂಲಕ ಮೂಲತಃ ನಮ್ಮ ಅರ್ವಾಚೀನ ವಾಙ್ಮಯಮಂದಿರದ ಅಸ್ತಿವಾರವೇ ಸದೋಷವಾಗಿರುವದು. ಬಳಿಕ ಮೇಲಿನ ಸ್ವರೂಪವು ಅಸ್ತವ್ಯಸ್ತವಾಗಿದ್ದರೆ ಆಶ್ಚರ್ಯವೇನು? ಕನ್ನಡ ಭಾಷಾಭೇದದ ಈ ಕಾರಣವನ್ನು ದೂರಮಾಡುವದಕ್ಕೆ ಮೈಸೂರ ಸಂಪದಭಿವೃದ್ಧಿ ಸಭೆಯವರು ಏನು ಆಲೋಚನೆಯನ್ನು ಮಾಡುವರೆಂಬದು ನೋಡತಕ್ಕದ್ದಾಗಿದೆ. ಮಿಕ್ಕ ವಿಷಯವನ್ನು ಮುಂದೆ ಪ್ರಸ್ತಾಪಿಸುವೆವು.

ಜಯವಾಲ್ಮೀಕಿ.

ಉಡುಪಿಯ ಶ್ರೀಕೃಷ್ಣಸೂಕ್ತಿಕಾರರಾದ ಮ. ರಾ. ರಾ. ಎನ್. ರಾಜಗೋಪಾಲ ಕೃಷ್ಣರಾಯರು ಬರೆದಿರುವ ಮೇಲ್ಕಂಡ ಹೆಸರಿನ ಪುಸ್ತಕವು ಗ್ರಂಥಕಾರರಿಂದ ನಮ್ಮ ಕಡೆಗೆ ಅಭಿಪ್ರಾಯಕ್ಕಾಗಿ ಬಂದಿರುವುದು. ನಮ್ಮ ಮೇಲೆ ದಯವಿಟ್ಟು ಈ ಪುಸ್ತಕವನ್ನು ಕಾಣಿಕೆಯಾಗಿ ಕಳುಹಿಸಿದ ಬಗ್ಗೆ ನಾವು ಮ|| ರಾ|| ಗಳಾದ ರಾಜಗೋಪಾಲ ಕೃಷ್ಣರಾಯರ ಉಪಕಾರವನ್ನು ತುಂಬಾ ಸ್ಮರಿಸುತ್ತೇವೆ.

ಭರತಖಂಡದ ಪ್ರಾಚೀನ ಇತಿಹಾಸದಲ್ಲಿ ಕಂಡು ಬರುವ ಕೆಲವು ಮಹತ್ವದ ಸಂಗತಿಗಳನ್ನು ಅವಲಂಬಿಸಿ ಈ ಪುಸ್ತಕವು ಬಂಗಾಳೀ ಭಾಷೆಯಲ್ಲಿ ಮ|| ರಾ|| ಗಳಾದ ಮಹಾ ಮಹೋಪಾಧ್ಯಾಯ ಪಂಡಿತ ಹರಪ್ರಸಾದ ಶಾಸ್ತ್ರಿಗಳವರಿಂದ ಕಟ್ಟುಕತೆಯಾಗಿ ಬರೆಯಲ್ಪಟ್ಟಿದೆ. ಇದೇ ಮೂಲಗ್ರಂಥವನ್ನು ಮ|| ರಾ|| ರಾಜಗೋಪಾಲ ಕೃಷ್ಣರಾಯರು ಕನ್ನಡಕ್ಕೆ ಭಾಷಾಂತರಿಸಿರುತ್ತಾರೆ. ಇದರಲ್ಲಿ ಪ್ರತಿಪಾದಿತವಾಗಿರುವ ಮುಖ್ಯ ವಿಷಯವು "ವಿಶ್ವಭ್ರಾತೃತ್ವ" (Universal Brotherhood)ವಾಗಿರುವದಾಗಿ ನಾವು ತಿಳಿಯುತ್ತೇವೆ. ನಮ್ಮ ಪ್ರಾಚೀನ ಋಷಿವರ್ಯರುಗಳಲ್ಲಿ ಶ್ರೇಷ್ಠರಾಗಿರುವ ವಶಿಷ್ಠ, ವಿಶ್ವಾಮಿತ್ರ, ಹಾಗೂ ವಾಲ್ಮೀಕಿ ಇವರುಗಳು ಈ ಪ್ರಬಂಧದಲ್ಲಿ ಮುಖ್ಯ ಪಾತ್ರಗಳಾಗಿರುತ್ತಾರೆ. ವಶಿಷ್ಠ ಋಷಿಗಳು ತಮ್ಮ ಆಶ್ರಮದಲ್ಲಿ ಶಿಷ್ಯರಿಗೆ ವಿದ್ಯಾಧ್ಯಯನ ಮಾಡಿಸುವದರಲ್ಲಿ ತೊಡಗಿರುವರು; ಮೂಲತಃ ಕ್ಷತ್ರಿಯ ರಾಜನಾದ ವಿಶ್ವಾಮಿತ್ರನು ದಿಗ್ವಿಜಯಕ್ಕಾಗಿ ಹೊರಟಿರಲು ಒಂದು ದಿವಸ ಹಿಮಾಲಯದ ಕೆಳಗೆ ತಳಕೊಟ್ಟಿದ್ದಾನೆ, ಬೇಡನಾದ ವಾಲ್ಮೀಕಿಯು ತನ್ನ ಕೊಳ್ಳೆಗಾರರ ಪರಿವಾರದಿಂದ ಕೂಡಿಕೊಂಡು ಎಲ್ಲಿಯೋ "ದರೋಡೆ" ಹಾಕುವುದಕ್ಕೆ ಹೋಗಿದ್ದಾನೆ. ಇದೇ ಕಾಲಕ್ಕೆ ದೇವಗಣವನ್ನು ಸೇರಿದ ಋಭುಗಳೆಂಬ ಪಿತೃಗಳು ಹಿಮಾಲಯದ ಒಂದು ಶಿಖರಕ್ಕೆ ಆಕಾಶದಿಂದ ಇಳಿದು, ಒಂದು "ಭ್ರಾತೃಗೀತೆ"ವನ್ನು ಹಾಡುತ್ತಾರೆ. ಅದರ ತಾತ್ಪರ್ಯವು ಮನುಷ್ಯರೆಲ್ಲರೂ ಸಹೋದರರೆಂಬದಾಗಿರುತ್ತದೆ. ಅದನ್ನು ಈ ಮೂವರೂ ಅಂದರೆ ವಶಿಷ್ಠ ವಿಶ್ವಾಮಿತ್ರ ವಾಲ್ಮೀಕಿಗಳು ಕೇಳುತ್ತಾರೆ. ವಶಿಷ್ಠ ವಿಶ್ವಾಮಿತ್ರರು ತಮ್ಮ ತಮ್ಮ ಭಾವನೆಗಳ ಪ್ರಕಾರ ಬ್ರಹ್ಮವಿದ್ಯಾಬಲದಿಂದಲೋ, ಕ್ಷತ್ರಿಯರ ಭುಜಬಲಪರಾಕ್ರಮದಿಂದಲೋ ಇಡೀ ಜಗತ್ತಿನ ಮನುಷ್ಯವರ್ಗದಲ್ಲಿ—ಸಹೋದರಭಾವದ ಪ್ರೇಮವನ್ನು ಹುಟ್ಟಿಸಬೇಕಾಗಿ ವಿಚಾರಮಾಡುತ್ತಾರೆ; ಆದರೆ ಅದು ಅವರಿಗೆ ಸಾಧ್ಯವಾಗುವದಿಲ್ಲ. ವಾಲ್ಮೀಕಿಯಾದರೋ ಜಾತಿಯಿಂದ ಬೇಡನು, ಮಹಾ ಕ್ರೂರನು, ಆದರೂ ಆ ಭ್ರಾತೃ ಗೀತದಿಂದ ಅವನ ಅಂತಃಕರಣವು ಕರಗಿ ನೀರಾಗಿ ಹೋಗುತ್ತದೆ. "ಅಯ್ಯೋ, ನನ್ನ ಭ್ರಾತೃಗಳಲ್ಲಿ ಅನೇಕ ಜನರನ್ನು ನಾನು ಪರಿಪರಿಯಾಗಿ ಹಿಂಸಿಸಿದೆನಲ್ಲಾ" ಎಂಬದಾಗಿ ಬಹು ಪರಿಯಿಂದ ಅಳಲಿ, ಬಳಲಿ, ಬೆಂದು, ಬೆಂಡಾಗುತ್ತಾನೆ; ಮತ್ತು ಈ ಪಾಪಕ್ಷಾಲನಾರ್ಥ ಅತ್ಯಂತ ದಯಾರ್ದ್ರಹೃದಯನಾಗಿ ಸೋದರಭಾವವನ್ನು ಜಗತ್ತಿನಲ್ಲಿ ಸಾರುತ್ತಾ ನಡೆಯುತ್ತಾನೆ. ವಾಲ್ಮೀಕಿಯ ಶುದ್ಧಾಂತಃಕರಣದೊಳಗಿಂದ ಹೊರಬಿದ್ದ ಕರುಣರಸಪೂರ್ಣ ಉಪದೇಶದಿಂದ ಅನೇಕ ಕೊಲೆಸುಲಿಗೆಗಳು ನಿಂತು ಹೋಗುತ್ತವೆ, ಮಹಾ ದಾರುಣವಾದ ಯುದ್ಧ ಪ್ರಸಂಗಗಳೂ ತಡೆಯುತ್ತವೆ. ಕೊನೆಗೆ ಇಡೀ ಭರತಖಂಡದಲ್ಲಿ "ವಿಶ್ವಭ್ರಾತೃತ್ವ"ದ ಸರ್ವೋತ್ಕೃಷ್ಟ ಮಾದರಿಯಾದ "ರಾಮ ರಾಜ್ಯ"ವು ಸ್ಥಾಪಿತವಾಗುತ್ತದೆ. ಹೀಗೆ ಈ ಪುಸ್ತಕದ ಕಥಾ ಸಾರಾಂಶವಿದ್ದು ವಶಿಷ್ಠನಂಥ ಬ್ರಹ್ಮವಿದ್ಯಾಸಮರ್ಥನಿಗೂ, ಪ್ರತಿಸೃಷ್ಟಿಯನ್ನೂ ಮಾಡಲಾಪನಾದ ವಿಶ್ವಾಮಿತ್ರನಂಥ ಕ್ಷತ್ರಿಯ ವೀರನಿಗೂ ಅಸಾಧ್ಯವಾದ ಸೋದರಭಾವಸಂಸ್ಥಾಪನೆಯು ವಾಲ್ಮೀಕಿಯ ಭೂತದಯೆಯ ಉಪದೇಶದಿಂದ ಸಾಧಿತವಾಗಿ ವಾಲ್ಮೀಕಿಗೆ ಜಯದೊರೆತದ್ದರಿಂದ ಈ ಪುಸ್ತಕಕ್ಕೆ ಕೊಟ್ಟಿರುವ ಹೆಸರು ಸಾರ್ಥಕವಾಗಿದೆ. ಭರತಖಂಡದ ಈಗಿನ ದ್ವೇಷಾಸೂಯ ಪ್ರಬಲತೆಯ ಕಾಲದಲ್ಲಿ ಇಂಥಾ ಮನೋಹರವಾದ ಮತ್ತು ಯಥಾರ್ಥವನ್ನು ಉಪದೇಶಿಸುವ ಗದ್ಯಕಾವ್ಯವು (ಇದರಲ್ಲಿ ಕಂಡು ಬರುವ ಅನೇಕ ಬಗೆಯ ರಸ ಪೂರ್ಣತೆ, ಭಾವ ಚಮತ್ಕೃತಿ, ಕಲ್ಪನಾಚಾತುರ್ಯ ಮುಂತಾದವುಗಳಿಂದ ಮೋಹಿತರಾಗಿ ನಾವು ಇದಕ್ಕೆ ಕಾವ್ಯವೆಂದೇ ಅನ್ನುತ್ತೇವೆ.) ಹುಟ್ಟಿದ್ದು ಭಾಗ್ಯವೆಂದೇ ಎಣಿಸಬೇಕಾಗಿದೆ.

ಇಂಥಾ ಅಮೋಘವಾದ ಗ್ರಂಥವನ್ನು ಮ|| ರಾ|| ರಾ|| ರಾಜಗೋಪಾಲ ಕೃಷ್ಣರಾಯರು ಕನ್ನಡಕ್ಕೆ ಭಾಷಾಂತರಿಸಿ ಕನ್ನಡದ ಆಧುನಿಕ ವಾಙ್ಮಯ ಭಾಂಡಾರದಲ್ಲಿ ಒಂದು "ಚೂಡಾಮಣಿ"ಯನ್ನು ಹೆಚ್ಚಿಗೆ ಸೇರಿಸಿದರೆನ್ನಬಹುದು. ಆದರೆ ಮೂಲ ಗ್ರಂಥಕಾರರಾದ ಪಂಡಿತ ಹರಪ್ರಸಾದ ಶಾಸ್ತ್ರಿಗಳವರು ಈ ಗ್ರಂಥವನ್ನು ಬರೆಯುವಾಗ್ಗೆ ಇದರ ವಾಚನದಿಂದ ಲೋಕದಲ್ಲಿ ಸೋದರಭಾವದ ಉದಯವೇ ಆಗಬೇಕೆಂಬದನ್ನು ಮೂಲ ಉದ್ದೇಶವಾಗಿಟ್ಟುಕೊಂಡಿದ್ದರೆಂದು ಭಾವಿಸಿದ ಪಕ್ಷದಲ್ಲಿ (ಹೀಗೆ ಭಾವಿಸದೆ ಗತ್ಯಂತರವಿಲ್ಲ) ಅದರ ಈ ಕನ್ನಡ ಪರಿವರ್ತನದಿಂದ ಕರ್ನಾಟಕದಲ್ಲಿ ಆ ಉದ್ದೇಶವು ಎಷ್ಟರ ಮಟ್ಟಿಗೆ ಫಲಕಾರಿಯಾಗುವುದೆಂಬದೊಂದು ವಿಚಾರಿಸತಕ್ಕ ಸಂಗತಿಯಾಗಿದೆ. ತಮ್ಮ ಭಾಷಾ ಶೈಲಿಯ ವಿಷಯವಾಗಿ ಗ್ರಂಥಕಾರರು ತಮ್ಮ ಪ್ರಸ್ತಾವನೆಯಲ್ಲಿ ೧೦-೮ ಸಾಲುಗಳನ್ನು ಬರೆದು ನಮ್ಮಂಥವರ ಸಂಭಾವನೆಯನ್ನು ಮೊದಲೇ ಮಾಡಿಬಿಟ್ಟಿರುತ್ತಾರೆ. ಆದರೂ ಅವರು ನಿರ್ದೇಶಿಸಿರುವ ಸಂಗತಿಗಳು ಅವರಿಗೆ ಸಾಕಷ್ಟು ಬೆಂಬಲವಾಗುವವಾಗಿ ನಾವಂತೂ ಭಾವಿಸಲಾರೆವು. "ಪ್ರಾಜ್ಞೋಪಯುಕ್ತ"ವಾಗಿರುವ ಈ "ಪ್ರೌಢ ಗ್ರಂಥವು" ರಸದಾಳಿಯ ಕಬ್ಬಿನಂತಿರುವದೆಂಬದನ್ನು ನಾವು ಒಪ್ಪಿದರೂ ಬಾಲ್ಯಾವಸ್ಥೆಯಲ್ಲಿರುವ ಕರ್ನಾಟಕರಾದ ನಮ್ಮಗಳಿಗೆ ಈ ಕಬ್ಬಿನ ಮೇಲಿನ "ಕಠಿನ" ಸಿಪ್ಪೆಯನ್ನು ತೆಗೆದು, ಒಳಗಿನ ರಸವತ್ತಾದ ತಿಳಿಲನ್ನೇ ತಿನ್ನುವದಕ್ಕೆ ಕೊಟ್ಟು, ರಸವನ್ನಷ್ಟೇ ಹೀರಿಕೊಂಡು ಹಿಪ್ಪೆಯನ್ನು ಉಗುಳಿ ಬಿಡುವದಕ್ಕೆ ತಿಳಿಸುವ ಕಕುಲಾತೆಯ ತಾಯಿಯೊಬ್ಬಳು ದೊರೆತಾಗ ಅದರ ಸ್ವಾದವನ್ನು ನಾವು ಕಾಣಬೇಕು, ಮತ್ತು ಅದರ ರಸದಿಂದ ನಮಗೆ ಪುಷ್ಟಿ ದೊರೆಯಬೇಕು! ಅಲ್ಲಿಯ ವರೆಗೂ ಪರದೇಶಿಗಳಂತಿರುವ ಪಾಮರರಾದ ಕನ್ನಡಿಗರಿಗೆ ಇದರ ಉಪಯೋಗವೇನೂ ಆಗಲಾರದೆಂದೇ ದುಃಖಿಸಬೇಕಾಗಿದೆ.

ವಸ್ತುತಃ ನೋಡಿದರೆ ಈ ಗ್ರಂಥಕಾರರ ಮೂಲ ಉದ್ದೇಶವು ವಿಚಾರ ಹೀನರಾದ ಪಾಮರ ಜನರಲ್ಲಿ ಸೋದರತ್ವಭಾವವನ್ನು ಬೆಳಿಸುವದಾಗಿರಬೇಕಾಗುತ್ತದೆ. ಆದದರಿಂದ ಇದನ್ನು ಪಾಮರೋಪಯುಕ್ತವಾಗಿಯೇ ಪರಿವರ್ತಿಸಿದ್ದರೆ ಮ|| ರಾ|| ರಾಜಗೋಪಾಲಕೃಷ್ಣರಾಯರು ಕರ್ನಾಟಕ ವಾಙ್ಮಯಕ್ಕಷ್ಟೇ ಅಲ್ಲದೆ "ಆಬಾಲವೃದ್ಧ ಸ್ತ್ರೀಪುರುಷಾಜ್ಞಪ್ರಾಜ್ಞ"ರೆಲ್ಲರಿಗೂ ಅನಂತ ಉಪಕಾರಗಳನ್ನು ಮಾಡಿದಂತಾಗುತ್ತಿತ್ತೆಂದು ನಮ್ಮ ಅಲ್ಪಮತಿಗೆ ತೋರುತ್ತದೆ. ಇನ್ನೂ ತಡವಾಗಿಲ್ಲ, ಆಗಿದ್ದರೂ "ಮಾಡದಿರುವದಕ್ಕಿಂತ ತಡವಾಗಿ ಮಾಡುವದು ಲೇಸು" ಎಂಬ ಇಂಗ್ಲಿಷ್ ಗಾದೆಯನ್ನು ಅವಲಂಬಿಸಿ ಮ|| ರಾ|| ರಾಜಗೋಪಾಲ ಕೃಷ್ಣರಾಯರು ಒಂದು ಸಂಗತಿಯನ್ನು ಮಾಡಬೇಕಾಗಿ ನಾವು ಸವಿನಯ ಸೂಚಿಸುತ್ತೇವೆ. ಈ ಗ್ರಂಥದಲ್ಲಿ ಬಂದಿರುವ ಎಲ್ಲ ಕಠಿನ ಶಬ್ದಗಳ ಚಿಕ್ಕದೊಂದು ಕೋಶವನ್ನೂ, ಸಹಜವಾಗಿ ತಿಳಿಯಲಸಾಧ್ಯವಾಗಿರುವ ಕಠಿನ ಪ್ರಯೋಗಗಳ ಸ್ಪಷ್ಟೀಕರಣದ ಟಿಪ್ಪಣಿಯನ್ನೂ ಸಿದ್ಧಪಡಿಸಿ, ಈ ಪುಸ್ತಕದೊಂದಿಗೆ ಕಟ್ಟಿಸಿಬಿಟ್ಟರೆ "ಪ್ರಾಜ್ಞೋಪಯುಕ್ತವಾಗಿಯೇ" ಮುದ್ರಿತವಾಗಿರುವ ಈ ಪುಸ್ತಕದ ಉಪಯೋಗವು ಬಹುಶಃ ಎಲ್ಲರಿಗೂ ಆಗಬಹುದು; ಹೀಗಾದರೆ ಮೂಲ ಗ್ರಂಥಕಾರರ

ಉದ್ದೇಶವು ಕರ್ನಾಟಕದ ಮಟ್ಟಿಗೆ ಫಲಿಸಬಹುದು. ಮ| ರಾ| ರಾಜಗೋಪಾಲ ಕೃಷ್ಣರಾಯರೇ ಸ್ವತಃ ಈ ಕಾರ್ಯವನ್ನು ಮಾಡಲುಪಕ್ರಮಿಸಿದರೆ ಬೇರೆಯವರಿಗಿಂತ ಬೇಗನೆಯಾಗುವದಾಗಿ ನಮಗೆ ದೃಢವಾದ ವಿಶ್ವಾಸವುಂಟು ಆದ್ದರಿಂದ ಅವರೇ ಈ ಕಾರ್ಯವನ್ನು ಕೈಕೊಳ್ಳಬೇಕೆಂದೂ, ನಮ್ಮ ಸ್ಪಷ್ಟವಾದ ಈ ಅಭಿಪ್ರಾಯವನ್ನು "ಬಾಲಾ ದಪಿ ಸುಭಾಷಿತಂ ಗ್ರಾಹ್ಯಂ" ಎಂಬದಾಗಿ ದಯವಿಟ್ಟು ಅಂಗೀಕರಿಸಿ ತಮ್ಮ ಈ ಅಮೋಲಿಕ ಗ್ರಂಥವು ಸರ್ವಜನೋಪಯುಕ್ತವಾಗುವಂತೆ ಮಾಡಬೇಕೆಂದೂ ಅವರನ್ನು ಪ್ರಾರ್ಥಿಸುತ್ತೇವೆ

ಪ್ರೇಮ ಪಿಪಾಸೆ

(ಚೌಪದಿ)

೧ ಕರಗಿ ಪೋದುದ ಮಾಂಸಮಿನಿಸಿನಿಸುಮಿಲ್ಲಂ,
ಜ್ವರದ ಜ್ವಾಲೆಯೊಳಾರಿದುದು ನೆತ್ತರೆಲ್ಲಂ,
ನರಳುವಳು ಸಂದುಗಳ ಬೇನೆಯಿಂದತ್ತು,—
ಹರಣಮೊಂದೇ ದೇಹದಲಿ ತೂಗುತಿತ್ತು

೨ ಅಕ್ಕರೆಯ ಮಗಳ ತಾಯ್‌ತಂದೆಗಳು ಕೂಡಿ,
ಚಿಕ್ಕಂದಿನಲೆ ಕಳುಹಿದರು ಮದುವೆಮಾಡಿ,—
ಪೊಕ್ಕ ಪತಿಸದನದಲಿ ಸುಖಶಾಂತಿಯಿರದೆ,
ಸೊಕ್ಕಿ ಕುಳಿತಳು ರೋಗರಕ್ಕಸಿಯು ಶಿರದೆ

೩ ಗತಿಗೆಡಿಸುವುದು ಮಾವನಂ ದುರ್ವ್ಯಸನಮುಂ;
ಅತಿಕಾಡಿಸುವಳತ್ತೆ, ಸೊಸೆಯನನುದಿನಮುಂ;
ಪತಿಯ ನಡೆನುಡಿಗಳೊಳು ಮಾವಗಂ ಕೋಪಂ!—
ಸತಿಯ ಪಾಡೇನಪ್ಪುದಯ್ಯಯ್ಯೊ ಪಾಪಂ!

೪ ಬಾಲೆಯಲಿ ಕುವರನನು ಪಡೆಯಬೇಕೆಂದು
ಲಾಲಿಸೆಯು ಮಾರೆ, ಜನಿಸಿತು ಗರ್ಭಮೊಂದು
ಕಾಲನ ವಿನೋದವೋ ಮಾತೆಯ ವಿಷಾದಂ!—
ಬಾಲಕನು ಗರ್ಭದಲೆ ಬೀಳ್ಕೊಂಡು ಪೋದಂ!

೫ ಬಾಯೆಂದು ತಂಗಿಯನು ಕರೆಯುತಿಹನಣ್ಣಂ!
ತಾಯಿ ಬರಕೂಗುವಳವಳ ಮುದ್ದು ಪೆಣ್ಣಂ,
ಮಾಯೆಯಣುಗನು, ನೋಡು, ಗೈವ ಕೈಸನ್ನೆ!—
ಕಾಯವನು ತೊರೆದಪುದೆ ಲೇಸಲ್ತೆ, ಮಾನ್ಯೆ?

೬. ಪರಿಪರಿಯ ಸಂಕಷ್ಟಗಳ ಕಂಡಳಲ್ಲಂ,
ಹರುಷವನು ಚಿಂತೆಯಲಿ ಬೆರಸೆ, ಮಗನಿಲ್ಲಂ!—
ಧರಣಿಯಾ ಲಾಲಿಸೆಯದಿನ್ನುಳಿಯ ಬೇಕೆ?
ಹರಣಮೊಂದೇ ನೊಂದು, ತೂಗುತಿಹುದೇಕೆ?

೭ ಮೌನಶೂನ್ಯತ್ವದಲಿ ಶುಭಗೀತೆಯಂತೆ,
ಕಾನನಾಂತರದೊಳಗೆ ಚಂದ್ರಕಳೆಯಂತೆ,
ಮಾನವಧ್ವಂಸದಲಿ ಜಯ ಶೋಭೆಯಂತೆ,—
ಮಾನಿನಿಗೆ ಮಗಳೊಂದು ಜನಿಸಿರ್ದಳಂತೆ.

೮ ಓಡಿಸುವ ಮರಗುದುರೆಯಲಿ ತೃಪ್ತಿ ದೊರೆತು,
ಆಡುವಾರಚಸದೊಳಪಾಯವನು ಮರೆತು,
ಕೇಡನರಿಯದ ಶಿಶುವಿಗೇನಹುದು ಮುಂದೇ?—
ಮೂಢಸಂಸಾರದೊಳಗಿದು ಚಿಂತೆಯೊಂದೇ!

೯. ತಾನು ಪೋದರೆ, ಮತ್ತೆ, ನೋಡುವವರಿಲ್ಲ,
ದೀನ ತಬ್ಬಲಿಯ ಕಾಪಾಡುವವರಿಲ್ಲ;
ಹಾನಿಯಿಂ ತಪ್ಪಿಸಲು ಗತಿಗಾಣೆನಲ್ಲ!
ಏನಗೈವುದು ಸುತೆಯನಾಥಳಹಳಲ್ಲ!

೧೦. ಬರಹೇಳಿ ಕಳುಹಿದಳು ತಂದೆಯನು ತನ್ನ,—
ಮರದ ಪಣ್ಗಳು ಬೀಳುತೆಲೆಯುದುರಿ ಮುನ್ನ,
ಕೊರದು, ಹುಳುತಿಂದು ಬೇರೊಣಗಿ ಪೋದಂದಂ,
ಸುರಿಯೆ ಕಂಬನಿ, ತಂದೆ ಬಂದಲ್ಲಿ ನಿಂದಂ.

೧೧ ಗಗನಮಂ ನುಂಗುವೋಲ್ ಮುಗಿಲೊಡ್ಡಿಗೆರೆವಾ
ಜಗವ ಮುಳುಗಿಸುವಂದದಾಧಾರೆಯೆರೆವಾ
ಮೃಗಶಿರೆಯ ಮಳೆಯಂತೆ, ದೈವೇಚ್ಛೆಗೆರಗಿ,
ಹುಗಿದ, ಚಿಂತೆಯು ಹೊರಗೆ ಬಿಕ್ಕಿದುದು ಕರಗಿ!

೧೨ ಅತ್ತು ಮುಗಿಸಲು, ಮುಗುಳು ನಗುವು ಮೊಗದೊಳಗೆ
ಉತ್ತರೆಯರ ವಿರಶ್ಮಿಯಂದದಲಿ ಬೆಳಗೆ,
ಹತ್ತಿರಕೆ ಕರದು ತಂದೆಯ, ಯೋಚಿಸಿದಳು
ಉತ್ತರೋತ್ತರವನ್ನು ಕುರಿತು ಕೇಳಿದಳು

೧೩ ಅನ್ನೆಗಂದಾಳ್ದ ಬೀತಿಯ ಮನದಿ ತಂದು
ಬಿನ್ನವಿಸಿ, ತಂದೆ ಪೇಳ್ದುದ ಕೇಳಿ, ಮುಂದು
ತನ್ನದೆಂಬುದನೆಲ್ಲವನು ಮಗಳಿಗೆಂದು
ಕನ್ಯೆಯನುಕೂಲವನು ಸಾಧಿಸಿದಳೆಂದು

೧೪ ಮಗಳ ಹಿತವನು ಕುರಿತು ಮರಣಶಾಸನವು
ಮುಗಿದು, ತಂದೆಯು ಬಾಸೆಯಿತ್ತು ಬಿಡೆ, ಮನವು
ಜಗದಾಶೆಯನು ತೊಡೆದು, ತಿರುಗಿಡುದು, ಮತ್ತಂ
ನಗುವು ಮೊಗದಲಿ ತೋರ್ಪುದಗೊ, ನೋಳ್ಪುದತ್ತಂ!

೧೫ ನೋಡುವರು, ಕರೆಯುವರು, ಮುಟ್ಟುವರು, ಮಾತಂ
ಆಡುವರು, ಮೊರೆಯಿಟ್ಟು, ಬೇಡಿ, ಸಂಕೇತಂ
ಮಾಡುವರು, ಮಾಡೆ, ಕಳೆಚುವುದೆ ವಿಧಿ ಬಂದಂ?—
ಓಡಿದುದು ಪ್ರಾಣವಾಯುವು ದೇಹದಿಂದಂ!

ರಾಮಂ

ಪತ್ರವ್ಯವಹಾರ.

"ಬಡ ಉಪಾಧ್ಯಾಯರ ಗೋಳು"

ಆಯ್ಯಾ ಪತ್ರಿಕಾಕರ್ತರೆ,

ಬಡ ಉಪಾಧ್ಯಾಯರ ಗೋಳನ್ನು ತಮ್ಮ ಪತ್ರಿಕೆಯ ಮೂಲಕ ಪ್ರಕಟಿಸಿದ್ದಲ್ಲಿ ಏನಾದರೂ ಉಪಶಾಂತಿ ಸಿಕ್ಕುವದೆಂಬ ಬರವಸೆಯಿಂದ ಬರಕೊಂಡಿರುತ್ತೇನೆ ಎಡೆ ಕೊಟ್ಟು ಪ್ರಕಟಿಸಿದ್ದಲ್ಲಿ ತುಂಬಾ ಕೃತಜ್ಞನಾಗುತ್ತೇನೆ

೮ ರೂಪಾಯಿ ತಲಬುಳ್ಳ ಎಲ್ಲಾ ಬೋರ್ಡು ಶಾಲಾ ಉಪಾಧ್ಯಾಯರುಗಳಿಗೆ ರೂಪಾಯಿ ೧೦ ಆದ ಸಂದರ್ಭದಲ್ಲಿ ಇತರ ಉಪಾಧ್ಯಾಯರುಗಳು ಬಡ್ತಿ ಹೊಂದುವದು ಸಹಜವಲ್ಲವೇ

ಕಲಿಸುವಿಕೆಯ ವಿಷಯಗಳು ಲೋವರ್ ಎಲಿಮೆಂಟರಿ ಶಾಲೆಗಳಿಗಿಂತ ಅಪ್ಪರ್ ಎಲಿಮೆಂಟರಿ ಶಾಲೆಗಳಲ್ಲಿ ವಿಶೇಷವಿರುವಲ್ಲಿ ಅಪ್ಪರ್ ಎಲಿಮೆಂಟರಿ ಶಾಲೆಗಳಲ್ಲಿರುವ ಮಕ್ಕಳ ಫೀಸನ್ನು ಸರಕಾರಕ್ಕೆ ಕಟ್ಟಬೇಕೆಂದು ಇದೆಯಲ್ಲಾ ಇದೇನು? ಅಮೂ ಅಲ್ಲದೆ ಆ ಶಾಲೆಗಳಿಗೆ ಹಂಚಿ ಉಳಿದ ಹಣವು ಗ್ರೇಂಟಾಗಿ ಈ ಶಾಲೆಗಳಿಗೆ ಸಿಕ್ಕುವದಂದರೇನು?

೮ ರೂಪಾಯಿ ಕೆಳಗಿನ ವ ೧೫ ರೂಪಾಯಿ ಮೇಲಣ ತಲಬುಳ್ಳ ಬೋರ್ಡುವ ಸರಕಾರಿ ನೌಕರರಿಗೆ ಮುಂಗಾಯಿ ಭತ್ತೆ ಇರುವಲ್ಲಿ ಈ ತನ್ಮಧ್ಯದ ಸಂಬಳ ಪಡೆಯುವ ನೌಕರರಿಗೆ ಅಂಗಡಿಯಲ್ಲಿ ವ್ಯಾಪಾರಸ್ಥರು ಅಕ್ಕಿಯನ್ನು ಕಡಿಮೆ ಕ್ರಯಕ್ಕೆ ಮಾರುವ ರೂಢಿ ಇದೆಯೋ ಹ್ಯಾಗೆ? ಮುಂಗಾಯಿ ಭತ್ತೆ ಹೊಂದಲು ~~ಈ ನೌಕರರು ಅರ್ಹರ~~ಲ್ಲವೇ, ಹ್ಯಾಗೆ?

ಎಲ್ಲಾ ಸರಕಾರಿ ಆಫೀಸರರಿಗೆ ಪ್ರತೀ ತಿಂಗಳ ಸಂಬಳವು ಮರು ತಿಂಗಳ ೭ರ ಒಳಗೆ ಹ್ಯಾಗೂ ಸಿಕ್ಕುವ ಏರ್ಪಾಡು ಇರುವಲ್ಲಿ, ಬಡ ಉಪಾಧ್ಯಾಯರಿಗೆ ಮಾತ್ರ ಮರು ತಿಂಗಳ ೩೦ರ ಒಳಗೆ ಸಿಕ್ಕುವದಿಲ್ಲವಂದರೇನು? ಪರಸ್ಥಳದಲ್ಲಿ ಜೀವಿಸಿಕೊಂಡು ಕಾಯ ಕಷ್ಟ ಪಡುತ್ತಿರುವ ಉಪಾಧ್ಯಾಯರಿಗೆ ಮರು ತಿಂಗಳ ತಾ. ೧೫ರ ಒಳಗಾದರೂ ಸಿಕ್ಕುವ ಏರ್ಪಾಡು ಮಾಡಲೂ ಯಾರಿಂದಲೂ ಅಸಾಧ್ಯವೇ?

ಜನವರಿ ತಾ. ೮ರಿಂದ ಮೂರು ತಿಂಗಳ ರಜೆ ಅರ್ಧಸಂಬಳದಲ್ಲಿ ಉಪಯೋಗಿಸಿ ಕೊಂಡ ಒಬ್ಬ ಉಪಾಧ್ಯಾಯರು ಇತರ ತಿಂಗಳ ಸಂಬಳ ಪಡೆದಿರುತ್ತಾ ಜನವರಿ ಫೆಬ್ರವರಿ ತಿಂಗಳ ಸಂಬಳ ಇನ್ನೂ ಹೊಂದಲಿಲ್ಲವಲ್ಲಾ—ಇದನ್ನು ಕೇಳುವವರ್‍ಯಾರು!

ಆಹಾ! ಉಪಾಧ್ಯಾಯರುಗಳ ಪದವಿಯ ಗೌರವವೇ! ಇಡೀ ಜನಾಂಗದ ಏಳಿಗೆಯು ಉಪಾಧ್ಯಾಯರುಗಳ ಹಸ್ತದಲ್ಲಿದೆ. ಪರೋಪಕಾರಾಯ ಇದಂ ಶರೀರಂ ಎಂಬದು ಉಪಾಧ್ಯಾಯರು ತಿಳಕೊಳ್ಳಬೇಕು ಎಂಬದೆಲ್ಲ ಸಹಜವಾದದ್ದೇ. ಆದರೆ ಉಪಾಧ್ಯಾಯರ ಈ ಗೋಳನ್ನು ಪರ್ಯಾಲೋಚಿಸುವರೆ ಯಾರಿಗೂ ತೋಚದೆ ಇದ್ದದ್ದು ಉಪಾಧ್ಯಾಯರ ದುರ್ದಶೆ ಎಂದೇ ತಿಳಿಯಬೇಕಾಗಿದೆ. ಹೆಚ್ಚಿಗೆ ಬರಿಯಲೇನು?

ಇಂತಿ ನಮಸ್ಕಾರ,

Kaup,
19 – 7 – 14.

ವಿಚಾರಿ

ಕಾಫಿ ಹೋಟೇಲುಗಳೂ ಶೇಂದಿ ಅಂಗಡಿಗಳೂ.

ಕಾಪಿ ಹೊಟೇಲುಗಳಲ್ಲಿ ಖಾದ್ಯಗಳನ್ನು ಮಾಡುವುದಕ್ಕೆ ನೇಮಕಪಡುವ ನೌಕರರು ಸಾಧಾರಣವಾಗಿ ಮದುವೆಯಾಗದ ತರುಣರು ಅಥವಾ ಹೆಂಡತಿಯನ್ನು ಕಳಕೊಂಡ ವಿಧುರರು. ಇವರಲ್ಲಿ ಬಹು ಮಂದಿ ದುರ್ನಡತೆಯಿಂದ ಅವಾಚ್ಯವ್ಯಾಧಿಗಳನ್ನು ಸಂಪಾದಿಸಿಕೊಂಡವರು. ರೋಗಾಕ್ರಾಂತ ಭಾಗವನ್ನು ಆಗಾಗ್ಗೆ ತುರಿಸಿಕೊಂಡು ನಂಜು ತಾಗಿದ ಬೆರಳುಗಳನ್ನು ತೊಳೆಯದೆ ತಿಂಡಿಗಳನ್ನು ತಯಾರಿಸುತ್ತಾರೆ.

ಕೆಲಸ ಮಾಡುವಾಗ ತಂಬಾಕಿನ ಬೀಡಿ ಬಾಯಿಯಲ್ಲಿ ಉಂಟೇ ಉಂಟು. ಬೀಡಿ ಸರಿಯಾಗಿ ಬರುತ್ತಲೇ ಬಾಯಿಯಲ್ಲಿ ಉಳಿದ ಸಣ್ಣ ತುಂಡನ್ನು ಕೈಯಿಂದ ತೆಗೆದು ಬಿಸಾಡಿ ಎಂಜಲಿನ ಬೆರಳುಗಳನ್ನು ತೊಳೆಯದೆ ಖಾದ್ಯಗಳನ್ನು ಮಾಡುತ್ತಾರೆ.

ಚಾ ಮತ್ತು ಕಾಫಿಯನ್ನು ಸೋಸುವುದಕ್ಕೆ ಕೊಳಕು ಬಟ್ಟೆಯನ್ನು ಉಪಯೋಗಿಸುತ್ತಾರೆ. ಅದು ಕೂಡ ಸಮಿಾಪಕ್ಕಿಲ್ಲದಿದ್ದರೆ ಲಂಗೋಟಿ ಯಾನೆ ಕೋಮಣದಲ್ಲಿ ಚಾ ಮತ್ತು ಕಾಪಿಯನ್ನು ಬಸಿಯುತ್ತಾರೆ.

ಕಪ್ಪುಗಳಿಗೆ ತುಟಿಗಳನ್ನು ತಾಗ್ಗಿಸಿ ಕುಡಿಯುವದರಿಂದ ಕಪ್ಪುಗಳ ಅಂಚಿನಲ್ಲಿ ಎಂಜಲು ತಗಲಿ ದುರ್ವಾಸನೆ ಬರುತ್ತದೆ. ಕಪ್ಪುಗಳನ್ನು ಚೆನ್ನಾಗಿ ತೊಳೆಯುವುದಿಲ್ಲ. ಎಂಜಲಿನಲ್ಲಿದ್ದ ರೋಗಗಳ ಜರ್ಮ್ಸ ಎಂಬ ಜಂತುಗಳು ಕಪ್ಪುಗಳ ಅಂಚಿನಲ್ಲಿ ಅಂಟಿಕೊಂಡಿರುವದರಿಂದ ರೋಗಗ್ರಸ್ತ ಜನರ ಎಂಜಲು ತಾಗಿದ ಕಪ್ಪುಗಳಿಂದ ಕುಡಿಯುವವರಿಗೆ ಕ್ಷಯ, ಫರಂಗಿ, ಮದಕರಿ ಮೊದಲಾದ ವ್ಯಾದಿಗಳು ಹಿಡಿಯುವ ಸಂಭವ ಉಂಟಾಗುತ್ತದೆ.

ತುಪ್ಪ ಮತ್ತು ಎಣ್ಣೆಯ ಪಾತ್ರಗಳಲ್ಲಿ ಎಕ್ಕಲೆ ಆದವ ಇಲಿಮರಿಗಳು ಬಿದ್ದರೆ ಅವುಗಳನ್ನು ತೆಗೆದು ಬಿಸಾಡಿ ಅದೇ ತುಪ್ಪವನ್ನೂ ಎಣ್ಣೆಯನ್ನೂ ಖಾದ್ಯಗಳಿಗೆ ಉಪಯೋಗಿಸುತ್ತಾರೆ.

ಹಾಲನ್ನು ಬೆಂಕಿ ಮೇಲಿಟ್ಟು ಚೆನ್ನಾಗಿ ಕಾಯಿಸದೆ ಉಪಯೋಗಿಸುವುದರಿಂದ ರೋಗಗಳುಂಟಾಗುತ್ತವೆ. ಪಶುಗಳನ್ನು ಪರೀಕ್ಷಿಸದೆ, ವಿವಿದ ಕಡೆಗಳಿಂದ ಕ್ರಯಕ್ಕೆ ತಂದ ಹಾಲನ್ನು ಚೆನ್ನಾಗಿ ಕಾಯಿಸದೆ ಚಾ, ಕಾಪಿ, ಕೋಕೊ ಮೊದಲಾದವುಗಳಿಗೆ ಹ್ವಾಕುತ್ತಾರೆ.

ಅಂಗಡಿಯಲ್ಲೇ ಕೂತು ತಿನ್ನುವಂಥಾದ್ದು ಮರ್ಯಾದೆಗೆ ಹಾನಿಕರವು. ನೀತಿಗೆ ವಿರೋಧವಾದದ್ದು, ಹಣವಂತನಾಗಲೀ ದರಿದ್ರನಾಗಲೀ ನಾಲಿಗೆಯ ರುಚಿಗೆ ಗುಲಾಮನಾಗಿ ಮನೆಯಲ್ಲಿದ್ದ ಹೆಂಡತಿ ಮಕ್ಕಳು ಮೊದಲಾದವರನ್ನು ಮರೆತು, ಹೊಟೇಲಲ್ಲಿ ಕೂತು, ತನ್ನ ಹೊಟ್ಟೆಯನ್ನೇ ತುಂಬಿಸಿಕೊಳ್ಳುವುದು ಪಶುಸ್ವಭಾವವನ್ನು ತೋರಿಸುತ್ತದೆ.

ಕಾಪಿ ಹೊಟೇಲುಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತದೆ. ಇದು ಜನಪದವ ಕ್ಷೇಮವೃದ್ಧಿಗೆ ಹಾನಿಕರವು. ವಿದ್ಯಾರ್ಥಿಗಳಂತೂ ಹೆತ್ತವರ ಕಷ್ಟಗಳನ್ನು ಮರೆತು ಚಾ ಕಾಫಿಗೆ ಗುಲಾಮರಾಗಿ ಹೊಟೇಲುಗಳಲ್ಲಿ ಕಾಯಂ ಗಿರಾಕಿಗಳಾಗುತ್ತಾರೆ. ನಾಲಿಗೆ ರುಚಿಯ ಸಂಬಂಧ ಹೊಟೇಲಿನವರ ಹತ್ತರ ಸಾಲ ಮಾಡುತ್ತಾರೆ. ಸರಕಾರದವರು ಕಾಫಿ ಹೊಟೇಲುಗಾರರ ವರ್ಗವೊಳಿಗವನ್ನು ಪರಿಶೋಧಿಸಿದರೆ ಪ್ರತಿ ಹತ್ತು ಗಿರಾಕಿಗಳಲ್ಲಿ ೮ ಶಾಲಾ ವಿದ್ಯಾರ್ಥಿಗಳೆಂತ ತೋರುವುದು.

ನಾನು ಸ್ವತಹ ಕಾಫಿ ಹೊಟೇಲಿನ ಕಾಯಂ ಗಿರಾಕಿಯಾಗಿದ್ದೆ. ಕಾಪಿ ಹೊಟೇಲನ್ನು ಸಂದರ್ಶಿಸಿದರಿಂದ ಅಭ್ಯಾಸದ ಫಲವಾಗಿ ಪ್ರತಿದಿನವೂ ಕಾಫಿ ಕುಡಿಯುವ ಸಮಯ ಬರುತ್ತಲೇ ಕಣ್ಣಿಗೆ ಕಾಣದ ಪಾಶಗಳಿಂದ ನನ್ನ ಮನಸ್ಸು ಹೊಟೇಲು ಕಡೆಗೆ ಎಳೆಯಲ್ಪಡುತ್ತಿತ್ತು. ಬಿಲ್ಲವರು ಇಟ್ಟ ಶೇಂದಿ ಅಂಗಡಿಗಳೂ ಬ್ರಾಹ್ಮಣರು ಇಟ್ಟ ಕಾಫಿ ಹೊಟೇಲುಗಳೂ ಏಕಪ್ರಕಾರವಾಗಿ ಜನರ ಸ್ಥಿತಿಮತಿಯನ್ನು ಕೆಡಿಸುವ ಸಂಸ್ಥೆಗಳಾಗಿ ನನಗೆ ಕಾಣುತ್ತವೆ. ಶೇಂದಿ ಅಂಗಡಿಗಳನ್ನು ಸಂದರ್ಶಿಸುವ ಕೀಳು ಜಾತಿಯವರೂ, ಕಾಫಿ ಹೊಟೇಲುಗಳನ್ನು ಸಂದರ್ಶಿಸುವ ಮೇಲು ಜಾತಿಯವರೂ, ನಾಲಿಗೆ ರುಚಿಯ ಗುಲಾಮತನದ ಮಟ್ಟಿಗೆ ಒಂದೇ ಜಾತಿಯ ಹೊಲೆಯರಾಗಿ ನನಗೆ ತೋರುತ್ತಾರೆ.

20 – 7 – 1914.

ಮಾಜಿ ಗುಲಾಮ.

ಅಯ್ಯಾ ಪತ್ರಿಕಾಕರ್ತರೆ,

ಫೊರೆಸ್ಟ್ ರಿಜರ್ವ್‌ಗಳಲ್ಲಂತೂ ಮನ್ನಾ ದರವಾರ ಜಾತಿ ಮರಗಳು ಗೃಹಕೃತ್ಯದ ಉದ್ದೇಶಕ್ಕಾದರೂ ಕುತ್ತಿಕಾಣಿಕೆಯ ಮೇಲೆ ಸಿಕ್ಕಲಾರದಷ್ಟೆ. ಮನೆ ಮುಂತಾದ ಕಾಮಗಾರಿಗಳ ಉದ್ದೇಶವಾಗಿ ರೆವಿನ್ಯು ಕಾಡುಗಳಿಂದಾದರೂ ಮರಮಟ್ಟುಗಳು ಸಿಕ್ಕಬಹುದೆಂಬ ಅಭಿಲಾಷೆಯು ಜನರಲ್ಲಿ ಹಬ್ಬಿಕೊಂಡಿರುತ್ತಾ, ಅಂಥಾ ಮರಗಳು ರೆವಿನ್ಯು ಕಾಡಿನಿಂದ ಅಪೇಕ್ಷಿಸಿದರೆ ಮನ್ನಾಜಾತಿ ಮರಗಳು ಸಿಕ್ಕದೇ ಸಿಕ್ಕದೆಂದು ಜಿಲ್ಲಾ ಫೊರೆಸ್ಟ್ ಆಫೀಸರರು ಹುಕುಂ ಮಾಡುವರು. ದರವಾರ ಜಂಗ್ಲಿ ಜಾತಿ ಮರಮಟ್ಟುಗಳು ಅಪೇಕ್ಷಿಸಿದರೆ ಅಂಥಾ ಅರ್ಜಿಯು ತಾಲೂಕು ಆಫೀಸಿನಿಂದ ಗ್ರಾಮ ಉದ್ಯೋಗಸ್ಥರ ಒಳಿಗೆ ಹೋಗಿ ತನಖಿಯಿಂದ ಹಿಂತಿರುಗಲಿಕ್ಕೆ ಸಾಧಾರಣವಾಗಿ ತಿಂಗಳ ಕಾಲವಾದರೂ ಬೇಕು. ಇಂತಹ ತನಖಿ ರಿಪೋರ್ಟು ಆದರಿಸಿ ಕುತ್ತಿಕಾಣಿಕೆ ಹಾಜರು ಪಡಿಸಿ, ಪರ್ಮಿಟು ಪಡಕೊಳ್ಳಬೇಕಾಗಿ ಕೊಡೋಣಾಗುವ ಇಂಡಾರ್ಸ್ ಹುಕುಂ ಆದ ತಾರೀಕಿನಿಂದ ಒಂದು ತಿಂಗಳೊಳಗೆ ಪರ್ಮಿಟು ಹೊಂದದ್ದವರಿಗೆ ಪರ್ಮಿಟು ಸಿಕ್ಕಲಾರದೆಂದು ತಿರಸ್ಕರಿಸುವ ಹೊಸ ಕಾಯಿದೆಯು ನಮ್ಮ ತಾಲೂಕು ಆಫೀಸಿನಲ್ಲಿಯೂ ಇತ್ತಲಾಗೆ ಜ್ಯಾರಿಗೆ ಬಂದಿರುವದು.

ಇಂತಹ ಇಂಡಾರ್ಸ್ ಹುಕುಂ ಆದ ಒಂದು ತಿಂಗಳೊಳಗೆ ಹಣ ಕಟ್ಟಿ ಪರ್ಮಿಟು ಹೊಂದಬೇಕೆಂಬ ಕಾಯಿದೆ ಜ್ಯಾರಿಗೆ ತಂದದ್ದರಿಂದ ಅಂಥಾ ಹುಕುಂ ಟಪ್ಪಾಲು ದ್ವಾರವಾಗಲೀ, ಗ್ರಾಮ ಉದ್ಯೋಗಸ್ಥರ ಮುಖಾಂತರವಾಗಲೀ, ಹಸ್ತಗತವಾಗಿ ಒಂದರಡು ದಿವಸವೆ ಮಾಯಿದೆ ಉಂಟೆಂಬ ಭೀತಿಯಿಂದ ಹಣಕಟ್ಟಿ ಪರ್ಮಿಟು ಹೊಂದಿದಾಗ್ಯೂ ಕಡಿಯುವ, ಶಿಗಿಯುವ ವಹಿವಾಟಿದ ಕೆಲಸಕ್ಕೆ ಆಯಾಯ ಕಾಲಕ್ಕನುಸಾರವಾಗಿ ಜನ ಸಿಕ್ಕದೆ ಅಭ್ಯಂತರ ಉಂಟಾಗುತ್ತದೆ. ಒಂದುವೇಳೆ ಮಾಯಿದೆ ದಾಟಿದ ನಂತರವಾದರೂ ಹೆಚ್ಚಿಗೆ ಮಾಯಿದೆ ಸಿಕ್ಕಲಿಕ್ಕೆ ರಿನ್ಯೂವಲ್ ಫೀಸು ತೆರಬೇಕಾಗುವದು. ಇಂಡಾರ್ಸಮೆಂಟುಗಳ ಮಾಯಿದೆ ದಾಟುತ್ತಲೇ ಅಂಥವುಗಳು ತಿರಸ್ಕರಿಸಲ್ಪಡುವುದರಿಂದ ಪುನಹ ಅಂತಹ ಉತ್ತಾತ್ತಿಯು ಅಪೇಕ್ಷಿಸಿ ಬರಕೊಂಡ ಅರ್ಜಿ ಪುನಹ ಗ್ರಾಮ ಉದ್ಯೋಗಸ್ಥರ ಒಳಿಗೆ ರಿಪೋರ್ಟಿನ ಬಗ್ಯೆ ಹೋಗಬೇಕಾಗಿ, ತಿರಿಗಿ ತನಖಿಯಾಗಬೇಕಾದ್ದರಿಂದ ಗ್ರಾಮಉದ್ಯೋಗಸ್ಥರಿಗೆ ದುಬಾರೆ ದುಬಾರೆ ಕೆಲಸವೂ ಅರ್ಜಿದಾರರಿಗೆ ಶ್ರಮವೂ ಉಂಟಾಗಿ, ಹೆಚ್ಚಿನ ಸಂಕಷ್ಟಕ್ಕೆ ಕಾರಣ ಉಂಟಾಗುವದರಿಂದ ಮಾಯಿದೆಯನ್ನೆ ಹೆಚ್ಚಿಸುವದು ವಿಹಿತವಲ್ಲವೇ? ರೆವಿನ್ಯು ಕಾಡುಗಳಿಂದ ಮನ್ನಾಜಾತಿ ಮರಗಳಂತೂ ಸಿಕ್ಕಲಾರದೆಂದು ತಿರಸ್ಕರಿಸುವರಷ್ಟೆ. ಅಂಥಾ ಮರಗಳು ಕುಮ್ಕಿಯಿಂದಲಾದರೂ ಅಪೇಕ್ಷಿಸಿದರೆ ಕುತ್ತಿಕಾಣಿಕೆಯ ದರ ಇರುವ ಮನ್ನಾಜಾತಿಯ ಸಾಗು, ಬೀಟೆ, ಹಲಸು, ಹೆಬ್ಬಲಸು, ಕಿರಾಲಭೋಗಿ ಮರಗಳಿಗೆ ದರ ಕ್ಯೂಬಿಕ್ ಫೀಟ್ ಗರ ಎಂಟಾಣೆಯಂತೆಯೂ, ಬೆಂಗ ತಿರ್ವೆ ಆರು ಆಣೆಯಂತೆಯೂ, ಮಾವು ಎರಡಾಣೆಯಂತೆಯೂ ಕುತ್ತಿಕಾಣಿಕೆ ತೆತ್ತಲ್ಲಿ ಪರ್ಮಿಟು ಕೊಡಲಾದೀತೆಂದು ಹುಕುಂ ಮಾಡುವರು. ಕುತ್ತಿಕಾಣಿಕೆಯ ದರವು ಗವರ್ನಮೆಂಟಿನವರ ಸೆಂಕ್ಷನಿನ ಶಿವಾಯಿ ಜಿಲ್ಲಾ ಕಲೆಕ್ಟರವರು ತಗ್ಗಿಸಬಹುದಾದರೂ ಹೆಚ್ಚಿಸಕೂಡದ ಅತ್ಯಧಿಕ ದರಗಳಾಗಿರುತ್ತವೆಂತಲೂ ೧೮೯೭ನೇ ಇಸವಿ ಮೇ ತಾ. ೨೦ನೆಯ ನಂಬ್ರ ೩೦೫ನೇ ಗವರ್ನಮೆಂಟ್ ಹುಕುಂನಲ್ಲಿ ವಿಧಿಯಿರುತ್ತಾ, ಅಂಥಾ ಕುತ್ತಿಕಾಣಿಕೆ ದರವನ್ನು ಕ್ಯೂಬಿಕ್ ಫೀಟ್ ದರವಾಗಿ ಏರ್ಪಡಿಸಿದ್ದಾದರೆ ಅಂತಹ ಪ್ರಕಟಣೆಯು ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಿದ್ದುಂಟೆ? ಅಂಥಾ ಹುಕುಂ ಗವರ್ನಮೆಂಟಿನವರ ಸೆಂಕ್ಷನ್ ಶಿವಾಯಿ ಜ್ಯಾರಿಗೆ ತರಲಿಕ್ಕೆ ಕಾರಣವೇನು? ಮನ್ನಾಜಾತಿ ಮರಗಳಿಗೆ ಕುತ್ತಿಕಾಣಿಕೆಯ ದರವನ್ನು ಕ್ಯೂಬಿಕ್ ಫೀಟ್ ದರವಾಗಿ ತಬ್ದೀಲು ಮಾಡಿದ್ದರಿಂದ ಅಂಥಾ ಮರಗಳನ್ನು ಅಪೇಕ್ಷಿಸಿ ಹುಕುಂ ಆದವರ ಪೈಕಿ ಪರ್ಮಿಟು ~~ಪಡಕೊಂಡವರ ಸಂಖ್ಯೆಯೆಷ್ಟು?~~ ಪಡಕೊಂಡವರ ~~ಸಂಖ್ಯೆಯೆಷ್ಟು?~~ ಈ ರೀತಿ ಹೊಸಹೊಸ ಕಾಯಿದೆ ಜ್ಯಾರಿಗೆ ತಂದದ್ದರಿಂದ ಕಟ್ಟೋಣಗಳ ಕಾಮಗಾರಿಗಳಿಗೆ ಮರಮಟ್ಟು ಶಿಕ್ಕಲಿಕ್ಕೆ ಅಭ್ಯಂತರ ಉಂಟಾಗಿ ಈಗ ಇರುವ ಮನ್ನಾ ಜಾತಿಯ ಮರಗಳಿಗೆ ಈಗ ಇರುವ ಹೆಚ್ಚಿಗೆ ಕುತ್ತಿಕಾಣಿಕೆ ದರವನ್ನಾಗಲಿ, ದರವಾರ ಜಾತಿಯ ಕ್ಯೂಬಿಕ್ ಫೀಟ್ ದರವನ್ನಾಗಲಿ ಜಂಗ್ಲಿ ಜಾತಿಯ ಕುತ್ತಿಕಾಣಿಕೆ ದರವನ್ನಾಗಲಿ ಹೆಚ್ಚಿಸದಂತೆಯೂ, ರೆವಿನ್ಯು ಕಾಡುಗಳಿಂದ ಮನ್ನಾ ವ ದರವಾರ ಮರಮಟ್ಟುಗಳು ನಿರಾತಂಕವಾಗಿ ಸಿಕ್ಕುವಂತೆ, ಜಿಲ್ಲಾ ಮೇಲಾಧಿಕಾರಿಗಳು ತಕ್ಕ ನಿಗಾಕೊಡುವರಾಗಿ ಕೋರುತ್ತೇವೆ.

ಇತ್ಯಾದಿ,
ತಾ. ೨೧ನೇ ಜುಲಾಯಿ ೧೯೧೪.

ರೈತ.

—o—

ವಿದೇಶ ವೃತ್ತಾಂತ.

ಕೆನಡಾ ದೇಶಕ್ಕೆ ಹಿಂದೂಗಳನ್ನು ಕೊಂಡು ಹೋದ ಕೊಮಗಾಟಮಾರು ಎಂಬ ಹಡಗಕ್ಕೆ ಅಲ್ಲಿಯ ಸರಕಾರದವರು ಬಹಿಷ್ಕಾರ ಹಾಕಿರುವರಷ್ಟೆ. ಪರಂತು, ಈ ವರೆಗೆ ಹಡಗವು ಹಿಂದಿರುಗಲಿಲ್ಲ. ಅದರಲ್ಲಿರುವ ಭಾರತೀಯರನ್ನು ಹಿಂದೆ ತಕ್ಕೊಂಡು ಹೋಗಲು ಬೇಕಾದ ಖರ್ಚನ್ನು ಸರಕಾರದವರಾಗಲೀ ಹಡಗ ಮಾಲೀಕರಾಗಲೀ ಕೊಡುವ ಹಾಗೆ ತೋರುವುದಿಲ್ಲ. ವಾನ್‌ಕವರಿನ ಆಯುಧಪಾಣಿಗಳಾದ ಸುಮಾರು ೧೦೦ ಪೋಲಿಸಿನವರು ಹಿಂದೂಗಳು ಹಿಂದಿರುಗುವ ಹಾಗೆ ಬಲತ್ಕಾರ ಪಡಿಸಲು ಹಡಗ ಹತ್ತಲು ಪ್ರಯತ್ನಿಸಿದರು. ಆದರೆ ಹಡಗದಲ್ಲಿದ್ದ ಹಿಂದೂಗಳು ಪೋಲಿಸಿನವರಿಗೆ ಕಲ್ಲು ಇತ್ಯಾದಿಗಳನ್ನು ಬಿಸಾಡಿ, ಗಾಯಪಡಿಸಿ, ಮೇಲೆ ಹತ್ತಲು ಬಿಡಲಿಲ್ಲ. ಕೊಮಗಾಟಮಾರು ಹಡಗದಲ್ಲಿರುವ ಹಿಂದೂಗಳಲ್ಲಿ ಕೆಲವರನ್ನು ಬೃಹಸ್ಪತಿವಾರ ಹೊರಡಲಿಕ್ಕಿರುವ ಎಂಪ್ರೆಸ್ ಆಫ್ ಜಾಪಾನ ಎಂಬ ಹಡಗದಲ್ಲಿ ಹಾಕಿ ಬಲತ್ಕಾರದಿಂದ ಬಹಿಷ್ಕಾರಮಾಡಬೇಕೆಂದು ಸರಕಾರದವರು 'ರೈನ್ ಬೋ" ಎಂಬ ತಮ್ಮ ಹಡಗದ ಮುಖ್ಯಾಧಿಪತಿಗೆ ತಿಳಿಸಿರುವರು

ಸ್ಮಿರ್ನದಲ್ಲಿ ಗ್ರೀಕರನ್ನು ಗಾಯಪಡಿಸಿ ಕೊಂದರೆಂಬದಾಗಿ ಆಪಾದಿಸಲ್ಪಟ್ಟ ೩ ಮುಸಲ್ಮಾನರಿಗೆ ತುರ್ಕಿ ಸರಕಾರದವರು ಮರಣ ದಂಡನೆಯನ್ನು ವಿಧಿಸಿದರು

ದಕ್ಷಿಣಆಫ್ರೀಕದ ಭಾರತೀಯ ಮುಂದಾಳಾದ ರಾ| ಗಂಧಿಯವರು ತಾ ೧೮ರಲ್ಲು ದಕ್ಷಿಣಆಫ್ರೀಕದಿಂದ ಇಂಗ್ಲಾಂಡನ್ನು ಕುರಿತು ಪ್ರಯಾಣ ಮಾಡಿದರು

ಜೂರಿಕ್ ನಗರದಲ್ಲಿ ಒಂದು ಸರ್ಕಸ್ ಕಂಪೆನಿಯ ಕೆಲಸಗಾರನು ಅಲ್ಲಿದ್ದ ೫ ಸಿಂಹಗಳನ್ನು ತಾನು ಬೆಕ್ಕಿನ ಹಾಗೆ ಸಾದು ಮಾಡಿರುವೆನು ತನ್ನ ಇಚ್ಛೆಯಂತೆ ಅವುಗಳು ನಡೆಯುತ್ತವೆಂದು ಹೆಗ್ಗಳಿಸಿಕೊಂಡನು ಕೂಡಲೇ ಅಲ್ಲಿದ್ದ ಒಬ್ಬನು ' ಅವುಗಳನ್ನು ನಿನ್ನ ಇಚ್ಛೆಯಂತೆ ನಡಿಸು, ನೋಡುವಾ" ಎಂದನು ಕೆಲಸಗಾರನು ಕೂಡಲೇ ಸಿಂಹವನ್ನು ಮುದ್ದಾಡಲು ಪ್ರಯತ್ನಿಸಿದನು ಸಿಂಹವು ಒಡನೆ ಅವನ ಮೇಲೆ ಬಿದ್ದು ಗಾಯಪಡಿಸಿತು ಇತರ ೪ ಸಿಂಹಗಳೂ ಅವನ ಮೇಲೆ ಬಿದ್ದವು ಕಡೆಗೆ ಅವನು ಬಹಳ ಕಷ್ಟದಿಂದ ಸಿಂಹಗಳ ಬಾಯಿಂದ ತಪ್ಪಿ ಈಗ ಆಸ್ಪತ್ರೆಯಲ್ಲಿ ಮೋದಂಡ ಸ್ಥಿತಿಯಲ್ಲಿದ್ದಾನೆ

ಲೇಡಿ ಹಾರ್ಡಿಂಜರವರ ಶವಸಂಸ್ಕಾರವು ತಾ ೧೫ರಲ್ಲು ಬಹಳ ವಿಜೃಂಭಣೆಯಿಂದ ನಡೆಯಿತು ಇಂಡಿಯಾ ಸ್ಟೇಟ್ ಸೆಕ್ರಟರಿಗಳಾದ ಕ್ರೂ ಪ್ರಭುಗಳವರು ಶವಸಂಸ್ಕಾರಕ್ಕೆ ಹೋಗಿದ್ದರು ಚಕ್ರವರ್ತಿಯವರ ಪರವಾಗಿ ಪ್ರತಿನಿಧಿಗಳು ಕಳುಹಿಸಲ್ಪಟ್ಟಿದ್ದರು ಜ್ಞಾಪಕಾರ್ಥವಾಗಿ ಸೆಂಟ್ ಜೇಮ್ಸ್ ಅರಮನೆಯಲ್ಲಿ ದೇವಾರಾಧನೆಯು ನಡೆಯಿತು ಈ ದೇವಾರಾಧನೆಗೆ ಅಲೆಕ್ಸಾಂಡ್ರಾ ಮಹಾರಾಣಿಯವರೂ, ರುಷ್ಯಾದ ಡೌಗರ ಚಕ್ರವರ್ತಿನಿಯವರೂ, ಪ್ರಿನ್ಸೆಸ್ ವಿಕ್ಟೋರಿಯ, ಸರ್ ಗೈಸ್ಲೀಟ್‌ವುಡ್ ವಿಲ್ಸನರವರೂ ಇತರ ಅನೇಕ ಪ್ರಭುಗಳೂ ಅನೇಕ ಭಾರತೀಯ ವಿದ್ಯಾರ್ಥಿಗಳೂ ಹಾಜರಿದ್ದರು

ಮೆಕ್ಸಿಕೊ ದೇಶದಲ್ಲಿ ಗಲಭೆಗಳು ಎದ್ದು ದಂಗೆಗಾರರಿಗೂ ಸರಕಾರ ಕಡೆಯವರಿಗೂ ಯುದ್ಧ ನಡೆಯುತ್ತಲೇ ಇದೆ. ದಂಗೆಗಾರರು ಜಯ ಹೊಂದುತ್ತಾ ಬರುತ್ತಿದ್ದಾರೆ ತನ್ಮಧ್ಯೆ ಈ ಯುದ್ಧಕ್ಕೆ ಕಾರಣಭೂತರಾದ ಪ್ರೆಸಿಡೆಂಟ ಹುರೇಟರವರು ರಾಜಿನಾಮೆ ಕೊಟ್ಟು ಮೆಕ್ಸಿಕೋ ಪಟ್ಟಣವನ್ನು ಬಿಟ್ಟು ಹೋದರು ಇನ್ನು ಉಭಯತರೊಳಗೆ ಸಂಧಾನವಾಗಲು ಸಾಕು.

ಅಲ್ಬಾನಿಯದ ಸ್ಥಿತಿಯು ಭಯಂಕರವಾಗಿಯೇ ಇದೆ. ದಂಗೆಗಾರರು ದಿನದಿಂದ ದಿನಕ್ಕೆ ಜಯಶಾಲಿಗಳಾಗುತ್ತಾ ಬರುತ್ತಾರೆ. ವಲೋನ ಮತ್ತು ಡುರಾಜ್ಜೋ ಪಟ್ಟಣಗಳು ದಂಗೆಗಾರರ ವಶವಾಗುವ ಸಂಭವವಿದೆ.

ಡಿಲ್ಲಿಯ ಖಾಜಿ ಸರ್ಫರಾಜ್ ಹುಸೇನರೆಂಬ ಒಬ್ಬ ಮುಸಲ್ಮಾನ ಖಾಜಿಯು ಲಂಡನಿನ ಕೆಕ್ಸ್ಟನ್ ಹೋಲ್ ಎಂಬ ಸಭಾಸದನದಲ್ಲಿ ಇಸ್ಲಾಮ್ ಮತಸಂಬಂಧವಾದ ಭಾಷಣಮಾಡುತ್ತಿರುವಾಗ ಹತ್ತಿರ ನಿಂತಿದ್ದ ಒಬ್ಬ ಇಂಗ್ಲಿಷ್ ಹೆಂಗಸು "ನಾನು ಪೂರ್ಣವಾಗಿ ಮತ್ತು ನಿಶ್ಚಯವಾಗಿ ಇಸ್ಲಾಮ್ ಮತವನ್ನು ಅವಲಂಬಿಸಿದ್ದೇನೆ" ಎಂದು ಹೇಳಿದಳು. ಈ ಸಭೆಯ ಅಧ್ಯಕ್ಷರಾಗಿದ್ದ ಮಿ| ಸಯ್ಯದ್ ಅಮಿರ ಅಲಿಯವರು ತನ್ನ ಅಭಿನಂದನೆಯನ್ನು ತೋರ್ಪಡಿಸಿ ಇಸ್ಲಾಮ್ ಮತವು ಹೆಂಗಸರ ಸ್ಥಿತಿಯನ್ನು ಅಧೋಗತಿಗೆ ತರುತ್ತದೆಂಬದಾಗಿ ಬಹಳವಾಗಿ ಕೇಳುತ್ತೇವಾದರೂ ಇಸ್ಲಾಮ್ ಮತವು ಇತರ ಎಲ್ಲಾ ಮತಕ್ಕಿಂತಲೂ ಹೆಚ್ಚಾಗಿ ಹೆಂಗಸರ ಸ್ಥಿತಿಯನ್ನು ಉಚ್ಛಸ್ಥಿತಿಗೆ ತರುತ್ತದೆಂಬದಾಗಿ ಹೇಳಿದರು.

ರಷ್ಯಾ ದೇಶಕ್ಕೆ ಒಳಪಟ್ಟಿರುವ ಕೆಲವು ಭಾಗದಲ್ಲಿ ಕಾಡುಗಳಿಗೆ ಬೆಂಕಿ ಹುಟ್ಟಿ ಕಾಡು ಹತ್ತಿಕೊಂಡು ಸುಡುವದಲ್ಲದೆ ವಿಸ್ತಾರವಾದ ಪ್ರದೇಶಗಳು ಸಹಾ ನಾಶವಾಗುತ್ತಿವೆ ಗ್ರಾಮಗಳೂ ಪೈರುಗಳೂ ನಷ್ಟವಾಗಿ ಪ್ರಜೆಗಳು ಕಷ್ಟನಷ್ಟಕ್ಕೆ ಗುರಿಯಾಗುತ್ತಿರುವರು

ಉತ್ತರಧ್ರುವವನ್ನು ನೋಡಿಬರಬೇಕೆಂದು ಅತಿ ಸಾಹಸದೊಡನೆ ಹೊರಟಿದ್ದ ಸ್ಟೆಪನ್‌ಸನ್ ಎಂಬವರೂ ಇನ್ನೂ ಕೆಲವು ಮಂದಿಯೂ ಸಮುದ್ರಯಾನ ಮಾಡುತ್ತಿರುವಲ್ಲಿ ಈ ಗುಂಪಿಗೆ ಸೇರಿದ ಎಂಟು ಮಂದಿಯು ರಾಸಿಗಲ್ ಎಂಬ ದ್ವೀಪದ ಬಳಿ ಮರಣವಾದರೆಂಬ ವಾರ್ತೆ ಬಂದದೆ

ಉತ್ತರ ಹಿಂದೂಸ್ಥಾನ

ಇದೇ ತಾ ೧೧ನೇಗೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೪೧೫ ಮಂದಿಗೆ ಪ್ಲೇಗ ಜಾಡ್ಯ ಸೋಂಕಿ ೩೦೬ ಮಂದಿ ಆಹುತಿಯಾದರ ಈ ಪೈಕಿ ಮುಂಬಾಯಿಯಲ್ಲಿ ೧೧೫, ಮದ್ರಾಸ್ ೧೩, ಬಂಗಾಳ ೯ ಬಿಹಾರ್ ಮತ್ತು ಒರಿಸ್ಸ ೫, ಸಂಯುಕ್ತ ಸಂಸ್ಥಾನ ೪, ಪಂಜಾಬು ೨೬ ಬರ್ಮ ೧೦೧, ಮೈಸೂರು ೨೭, ರಾಜಪುತಾನ ೬ ಕಾಶ್ಮೀರ ೬ ಮರಣಗಳಾದವು

ಬರ್ಮಾ ಕ್ರಿಟಿಕ್ ಪತ್ರದ ಸಂಪಾದಕರ ಮೇಲೆ ಕೆಪ್ಟನ್ ಎ ಎಂ ಫಿನ್ಲೆಯವರು ೧೫,೦೦೦ ರೂಪಾಯಿಯ ಮಾನ ನಷ್ಟ ದಾವೆ ತಂದಿದ್ದರಷ್ಟೆ ಪರಂತು, ಫಿನ್ಲೆಯವರು ಈ ದಾವೆಯನ್ನು ಹಿಂತೆಗದ್ದರಿಂದ ಚೀಫ್ ಕೋರ್ಟಿನ ಜಸ್ಟಿಸ್ ಒರ್ಮೊಂಡರವರು ಮೊಕದಮೆಯನ್ನು ತಳ್ಳಿಹಾಕಿದರ

ಹಿಂದೂಸ್ಥಾನದಲ್ಲಿ ಪೂರ್ವ ಕಾಲದಿಂದಲೇ ಜ್ಯೋತಿಷ್ಯ ಶಾಸ್ತ್ರದ ಮೇಲೆ ಪೂರ್ಣ ನಂಬಿಕೆ ಇತ್ತೆಂಬದರ ಕುರಿತು 'ಇಂಡಿಯನ್ ಡೈಲಿ ಟೆಲಗ್ರಾಫ್" ಎಂಬ ಪತ್ರಿಕೆಯಲ್ಲಿ ಈ ಕೆಳಗಿನ ವೃತ್ತಾಂತವು ಪ್ರಕಟಿಸಲ್ಪಟ್ಟಿರುವುದು ಇದರ ನಿಜತ್ವವನ್ನು ಪಶ್ಚಿಮ ಹಿಂದೂಸ್ಥಾನದ ಒಂದ ರಾಜ್ಯಕ್ಕೆ ರೆಸಿಡೆಂಟರಾಗಿದ್ದ ಕರ್ನಲ್ ಮೆಡೋಸ್ ಟೈಲರವರು ದೃಢಪಡಿಸಿರುತ್ತಾರೆ ಟೈಲರರು ರೆಸಿಡೆಂಟರಾಗಿದ್ದ ರಾಜ್ಯದ ಅರಸನು ವೈನವನಾಗಿದನು ಈ ವೈನವನಾದ ಅರಸನು ತನ್ನ ೨೧ನೇ ವಯಸ್ಸಿನಲ್ಲಿ ಸಾಯುವನೆಂತ ಆ ರಾಜ ಕುಟುಂಬದ ಪುರೋಹಿತನು ರಾಜರ ಜಾತಕ ನೋಡಿ ಟೈಲರರಿಗೆ ತಿಳಿಸಿದನು ಈ ಗುಟ್ಟು ಪುರೋಹಿತನಿಗಲ್ಲದೆ ಇತರರಿಗಾರಿಗೂ ಗೊತ್ತಿಲ್ಲದ್ದರಿಂದ ಟೈಲರರು ಜಾತಕವನ್ನು ಕಾಗದದಲ್ಲಿ ಬರಾಯಿಸಿ, ತನ್ನ ಖಾಸಗಿ ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟು, ಈ ಭವಿಷ್ಯವನ್ನು ಮನುಷ್ಯರಾದವರಿಂದ ಹೇಳುವುದು ಅಸಾಧ್ಯವೆಂದು ಹೇಳಿದರು ಪುರೋಹಿತನು ರಾಜನು ಹ್ಯಾಗೂ ೨೧ನೇ ವಯಸ್ಸಿನಲ್ಲಿ ಸಾಯುತ್ತಾನೆಂಬದು ನಿಜ ಎಂದು ಹೇಳಿದನ ಪುರೋಹಿತನು ರಾಜನಿಗೆ ಹೇಳಿದ ವಯಸ್ಸು ಬಂದಾಗ ೧೮೫೭ನೇ ಇಸವಿಯಲ್ಲಿ ದಂಗೆ ಎದ್ದಿತು. ಈ ದಂಗೆಗೆ ರಾಜನು ಸೇರಿದ್ದಾನೆಂಬದಾಗಿ ರುಜುವಾತಾಗಿ ರಾಜನಿಗೆ ಮರಣ ದಂಡನೆಯು ವಿಧಿಸಲ್ಪಟ್ಟಿತು ರೆಸಿಡೆಂಟರೂ ಪುರೋಹಿತನೂ ಒಟ್ಟು ಕೂಡಿ ಜಾತಕ ಫಲವನ್ನು ನಿರ್ಧರಿಸಿದರು ಆದರೆ ರೆಸಿಡೆಂಟರು ರಾಜನ ಮರಣದಂಡನೆಯನ್ನು ತಪ್ಪಿಸುವುದಕ್ಕೆ ತನ್ನಿಂದಾದಷ್ಟು ಪ್ರಯತ್ನ ಮಾಡುವನೆಂದು ನಿರ್ಧರಿಸಿ, ಈ ವಿಷಯ ಮೇಲಾಧಿಕಾರಿಗಳಿಗೆ ಅಪೀಲು ಮಾಡಿ, ರಾಜನ ಮರಣ ಶಿಕ್ಷೆಯನ್ನು ತಪ್ಪಿಸಿ, ಮದ್ರಾಸಿನ ಕೋಟೆಯಲ್ಲಿ ರಾಜನನ್ನು ಬಂಧಿಯಾಗಿರಿಸುವ ಹುಕುಮನ್ನು ತರಿಸಿ, ರಾಜನನ್ನು ಇಂಗ್ಲಿಷ್ ಆಫೀಸರರ ಬಂದೋಬಸ್ತಿಯಲ್ಲಿ ಮದ್ರಾಸಿಗೆ ಕಳುಹಿಸಿದರು. ಒಂದು ದಿನದ ದಾರಿ ನಡೆದು ಸಾಯಂಕಾಲ ಒಂದು ಕಡೆಯಲ್ಲಿ ತಂಗಿದಾಗ ಈ ಆಫೀಸರರು ರಾಜನನ್ನು ಏಕಾಂತವಾಗಿ ಬಿಟ್ಟು ಕುರ್ಚಿಯ ಮೇಲೆ ತಮ್ಮ ರಿವೋಲ್ವರನ್ನು ಮರೆತುಬಿಟ್ಟು ಹೊರಗೆ ಹೋದರು. ಕೂಡ್ಲೇ ಗುಂಡಿನ ಶಬ್ದವು ಹೊರಗೆ ಕೇಳಿಸಿತು. ಆಫೀಸರರು ಒಳಗೆ ಬಂದು ನೋಡಿದಾಗ ರಾಜನು ಸತ್ತು ಬಿದ್ದಿದ್ದನು. ಜಾತಕದಲ್ಲಿ ನಮೂದಿಸಿದ ದಿನದಲ್ಲಿಯೇ ರಾಜನ ಈ ಸ್ವಘಾತವು ನಡೆಯಿತು.

ಬಸ್ರರದಲ್ಲಿ ಪ್ಲೇಗು ರೋಗವು ಸೋಂಕಿರುವುದರಿಂದ ಅಲ್ಲಿಗೆ ಹೋಗುವ ಯಾತ್ರಿಕರನ್ನು ಎಚ್ಚರಿಸಬೇಕೆಂದೂ ಸದ್ಯಾ ಪಾಸ್‌ಪೋರ್ಟ ಕೊಡುವುದನ್ನು ನಿಲ್ಲಿಸಬೇಕೆಂದೂ ಬಸ್ರಾರದಿಂದ ಸಿಂಧ್ ಕಮಿಷನರಿಂದ ಮುಂಬಾಯಿ ಸರಕಾರಕ್ಕೆ ತಂತೀ ಬಂದದೆ.

ಸೋಲಾಪುರದಲ್ಲಿ ಪಟೇಲರ ೩ ಮಕ್ಕಳನ್ನೂ ಕುಲಕರ್ಣಿಯವರ ಒಂದು ಮಗುವನ್ನೂ ಹೆತ್ತವರ ದ್ವೇಷದಿಂದ ಕೊಂದ ಮಾದಪ್ಪಖಾರೆ ಎಂಬವನಿಗೆ ಕೆಳಕೋರ್ಟಿನವರು ಫಾಶೀ ಶಿಕ್ಷೆ ವಿಧಿಸಿದ್ದರು ಘಾತುಕನು ಮುಂಬಾಯಿ ಹ್ಯಾಕೋರ್ಟಿಗೆ ಅಪೀಲು ಮಾಡಿಕೊಂಡನು. ಅಲ್ಲಿಯೂ ಫಾಶೀ ಶಿಕ್ಷೆಯೇ ಕಾಯಂ ಆಯಿತು.

ಈಚೆಗೆ ದಿವಾಳಿಯಾದ ಕ್ರೆಡಿಟ್ ಬೇಂಕಿನ ಮೆನೇಜರರಾದ ಜಾಫರ್ ಜೂಸೆಬ್ ಎಂಬವರು ಬೇಂಕಿನ ಹಣವನ್ನು ದುರುಪಯೋಗಮಾಡಿದ್ದಾರೆಂಬದಾಗಿ ಅವರ ಮೇಲೆ ಮುಂಬಾಯಿ ಹ್ಯಾಕೋರ್ಟಿನಲ್ಲಿ ಕಟ್ಲೆ ನಡೆಯುತ್ತಿತ್ತು ಈ ಮೊಕದಮೆಯು ತನಿಕೆಯಾಗಿ ತಾ ೨೦ರಲ್ಲು ಜಾಫರ್ ಜೂಸಬರಿಗೆ ಜಡ್ಜರು ೭ ವರ್ಷಗಳ ಗಡಿಪಾರು ಶಿಕ್ಷೆಯನ್ನು ವಿಧಿಸಿದರು.

ತಾ ೧೯ನೇ ಸಾಯಂಕಾಲ ೭ ಗಂಟೆಗೆ ಡಕ್ಕದ ಬಾಬು ರಘ್‌ಲಾಲ ದಾಸರವರ ಮನೆಯ ಸಮೀಪ ಒಂದು ರಾಜಕೀಯ ಗಲಭೆಯು ನಡೆದಿರುವುದು ಘಾತುಕರಿಂದ ಕೆಲವು ಗುಂಡುಗಳು ಹಾರಿಸಲ್ಪಟ್ಟು ರಾಮದಾಸನೆಂಬವನು ಮೃತಪಟ್ಟನು ಒಬ್ಬ ಕಾನಿಸ್ಟೇಬಲನು ಗಾಯ ಒಡೆದಿರುವನು ಪೋಲಿಸಿನವರು ಈ ಸಂಬಂಧ ಅನುಮಾನದ ಮೇಲೆ ೬ ವಿದ್ಯಾರ್ಥಿಗಳನ್ನೂ ಇತರ ಮೂವರನ್ನೂ ಕೈದುಮಾಡಿರುವರು

ಇಂದೋರು ಸಂಸ್ಥಾನದ ಮಹಾರಾಣಿಯವರು ಒಂದು ಅನಾಥ ಶಿಶು ರಕ್ಷಣಾಲಯವನ್ನೂ ಚಂದ್ರಾವತೆ ಮಹಿಳಾ ವಿದ್ಯಾಲಯವೆಂಬ ಮೆಟ್ರಿಕ್ಯುಲೇಶನ್ ವರೆಗಿನ ಒಂದು ಬಾಲಿಕಾ ಪಾಠಶಾಲೆಯನ್ನೂ ಸ್ಥಾಪಿಸುವರೆಂದು ತಿಳಿದು ಬಂದಿದೆ

ವೈಸರಾಯ ಪ್ರಭುಗಳವರ ಪತ್ನೀವಿಯೋಗ ದುಃಖಗಮನಾರ್ಥವಾಗಿ ಭಾರತೀಯರು ವೈಸರಾಯ ಪ್ರಭುಗಳವರಿಗೆ ಕಳುಹಿಸಿದ ಸಹಾನುಭೂತಿಯ ವಾರ್ತೆಗಳಿಗಾಗಿ ವೈಸರಾಯ ಪ್ರಭುಗಳವರು ಈ ಕೆಳಗೆ ಬರದ ರೀತಿ ಉತ್ತರವಿತ್ತಿರುವರು ಸರ್ವಜ್ಞನೂ ಸರ್ವಶಕ್ತನೂ ಆದ ಪರಮೇಶ್ವರನು ನನ್ನ ಪ್ರಿಯ ಪತ್ನಿಗೆ ಶಾಶ್ವತವಾದ ವಿಶ್ರಾಂತಿಯನ್ನಿತ್ತು, ನನ್ನನ್ನೂ ನನ್ನ ಕುಟುಂಬದವರನ್ನೂ ಆಕೆಯ ವಿಯೋಗದಿಂದುಂಟಾದ ಹೆಚ್ಚಿನ ಚಿಂತೆಗೂ ದುಃಖಕ್ಕೂ ಗುರಿಮಾಡಬೇಕೆಂಬುದು ಆತನ ಸಂಕಲ್ಪವಾಗಿತ್ತು. ಭರತ ಖಂಡದಲ್ಲಿರುವ ಎಲ್ಲಾ ಮತ ಜಾತಿಯವರೂ ಸಹ ತಮಗೆ ಲೇಡಿ ಹಾರ್ಡಿಂಜರವರ ವಿಷಯದಲ್ಲಿದ್ದ ಯಥಾರ್ಥ ಪ್ರೀತಿಯನ್ನು ವಿಶದಪಡಿಸಿ, ನನಗೆ ಕಳುಹಿಸಿರುವ ಅಮಿತವಾದ ದುಃಖೋಪಶಾಮಕ ತಂತೀ ವಾರ್ತೆಗಳಿಗಾಗಿಯೂ, ಅಪಾರವಾದ ದುಃಖದಲ್ಲಿ ಮುಳುಗಿರುವ ನನ್ನ ಮೇಲೆಯೂ, ನನ್ನ ಕುಟುಂಬದ ಮೇಲೆಯೂ, ಅವರು ತೋರಿಸಿದ ಅವಿರಳವಾದ ಸಹಾನುಭೂತಿಗಾಗಿಯೂ, ನನ್ನ ಕೃತಜ್ಞತೆಯನ್ನು ತಿಳಿಯಪಡಿಸುತ್ತೇನೆ. ಈಕೆಯ ಮೃತಿಯಿಂದ ಮನಃಪೂರ್ವಕವಾಗಿ ನನ್ನಲ್ಲಿ ತತ್ಪರಳಾಗಿದ್ದ ಪತ್ನಿಯನ್ನೂ, ಅತ್ಯಂತೋದಾರಶೀಲೆಯಾದ ಸಹಧರ್ಮಿಣಿಯನ್ನೂ ನಾನು ಕಳೆದುಕೊಂಡವನಾದೆನು. ಭಾರತೀಯರಾದರೋ ತಮ್ಮನ್ನು ಅತ್ಯಂತವಾಗಿ ಪ್ರೀತಿಸುತ್ತಿದ್ದ ಒಬ್ಬ ಸುಮಿತ್ರಳನ್ನು ಕಳೆದುಕೊಂಡವರಾದರು. ಭರತಖಂಡದ ಮೇಲೂ, ಬಡವರ ಮೇಲೂ, ಪೀಡಿತರ ಮೇಲೂ ಆಕೆಗೆ ಬಹಳ ಕನಿಕರವಿದ್ದಿತು ಆಕೆಯು ತನ್ನ ಶಾಶ್ವತ ಸ್ಥಾನವನ್ನೈದಿದವಳಾದರೂ ಆಕೆಗೆ ಭರತಖಂಡದ ಮೇಲಿದ್ದ ಅನುರಾಗವು ಅನೇಕ ಶುಭ ಪರಂಪರೆಗಳಿಗೆ ಕಾರಣವಾಗುವದೆಂಬದು ನಿಶ್ಚಯವು

ಗ್ರೀಕ ದೇಶದ ಕನ್‌ಸ್ಟಂಟೀನ ಅರಸರ ಜ್ಞಾಪಕಾರ್ಥವಾದ ಫಂಡನ್ನು ಸ್ಥಾಪಿಸುವರೆ ಪ್ರತ್ಯೇಕವಾಗಿ ಆರಿಸಲ್ಪಟ್ಟ ಒನರರಿ ಕೆಪ್ಟನ್ ಎಂದು ಹೇಳಿಸಿಕೊಂಡು ಫ್ರಾಂಕೆಲ್ ಎಂಬವನೊಬ್ಬನು ೧೯೧೩ನೇ ಇಸವಿಯಲ್ಲಿ ಕರಾಚಿಗೆ ಬಂದು ಅಲ್ಲಿರುವ ಗ್ರೀಕರಿಂದ ಹಣ ವಸೂಲು ಮಾಡುವರೆ ನೋಡಿದನು. ಆದರೆ ಇದು ಅಸಾಧ್ಯವಾದುದರಿಂದ ಕರಾಚಿಯಿಂದ ಫ್ರಾಂಕೆಲನು ಮುಂಬಾಯಿಗೆ ಹೋಗಿ ಅಲ್ಲಿ ತನ್ನನ್ನು ತಾನೇ ದಾಕ್ತಾರನೆಂದು ಹೇಳಿಸಿಕೊಂಡು ದೊಡ್ಡ ಹೊಟೇಲನ್ನು ಬಾಡಿಗೆಗೆ ಮಾಡಿಕೊಂಡು ಕೆಲವು ದೊಡ್ಡ ಮನುಷ್ಯರಿಗೆ ಔಷದೋಪಚಾರವನ್ನು ಮಾಡಿಯೂ ಸಾಲ ತಕ್ಕೊಂಡು ಕೊಂಡು

ಸಮಯದೊಳಗೆ ಸುಮಾರು ೩೦,೦೦೦ ರೂಪಾಯಿ ಸಂಪಾದಿಸಿದನು. ಇವನು ಬಹಳ ಡಾಂಬೀಕತನದಿಂದ ಜೀವನ ಮಾಡುತ್ತಿದ್ದುದರಿಂದ ಪೋಲಿಸಿನವರಿಗೆ ಇವನ ಮೇಲೆ ಅನುಮಾನ ಹುಟ್ಟಿ ಇವನು ಇಟ್ಟು ಕೊಂಡ ಡಿಗ್ರಿಗಳನ್ನು ಪರೀಕ್ಷಿಸಲು ಯಾವದೊಂದು ಸರ್ಟಿಫಿಕೇಟು ಇವನ ಕೂಡೆ ಇರಲಿಲ್ಲ. ಕಡೆಗೆ ಇವನ ಗುಟ್ಟು ತಿಳಕೊಳ್ಳಲು ಇವನು ಕೈರೊ ನಗರದಲ್ಲಿ ಅಫೀಮು ಮೊಕದ್ದಮೆಯಲ್ಲಿ ಸಿಕ್ಕಿ ಬಿದ್ದು ಒಂದು ವರುಷದ ಶಿಕ್ಷೆ ಹೊಂದಿದ ಹಳೇ ಅಪರಾಧಿ ಎಂದು ತಿಳಿದು ಬಂತು. ಕೂಡಲೇ ಇವನು ತಾನು ಬಾಡಿಗೆಗೆ ಇದ್ದ ಹೊಟೇಲಿನ ಸಾಮಾನುಗಳನ್ನು ಅಡವು ಹಾಕಿ ಒಂದು ದಿನ ಫಕ್ಕನೇ ಪರಾರಿಯಾದನು. ಪೋಲಿಸಿನವರು ಅವನನ್ನು ಮತ್ತೊಂದು ಹೊಟೇಲಿನಲ್ಲಿ ಹಿಡಿದು ಮುಂಬಾಯಿ ಸರಕಾರಕ್ಕೆ ವರದಿ ಮಾಡಿದರು. ಮುಂಬಾಯಿ ಸರಕಾರದವರು ಇವನನ್ನು ಗಡಿಪಾರು ಮಾಡಿದರು. ಇವನು ಈಗ ಸಿಂಗಪುರಕ್ಕೆ ಹೋಗಿದ್ದಾನೆ

ಬೆಳ್ಗಾವಿನ ಸಾಹುಕಾರ ಹರಿಗೋವಿಂದ ಕಾಲಕುದ್ರಿ, ಮಲ್ಲ, ಸತ್ಯತಲ್ಲೂರು ಎಂಬವರು ಕೂಡಿ ಕಾಲಕುದ್ರಿಯವರಲ್ಲಿ ಕ್ಲಾರ್ಕನಾಗಿದ್ದ ಶಂಕರರಾವುಜಿ ದೇಶಪಾಂಡೆ ಎಂಬವನನ್ನು ಕೊಂದಿದ್ದಾರೆಂಬದಾಗಿ ಆಪಾದಿಸಲ್ಪಟ್ಟಿದ್ದರು. ಕಾಲಕುದ್ರಿಯವರು ದೇಶಪಾಂಡೆಯನ್ನು ೨-೩ನೇ ಆಪಾದಿತರಿಂದ ಕೊಲ್ಲಿಸಿದರೆಂಬದೇ ಈ ಮೊಕದ್ದಮೆಯ ವಾದವಾಗಿತ್ತು. ಸುಮಾರು ಒಂದು ತಿಂಗಳಿಂದ ಈ ಮೊಕದ್ದಮೆ ನಡೆದ ತಾ. ೧೮ರಲ್ಲಿ ಆಪಾದಿತರು ತಪ್ಪಿತಸ್ಥರಲ್ಲವೆಂದು ಜೂರಿಯವರು ಅಭಿಪ್ರಾಯಪಟ್ಟದ್ದರಿಂದ ಜಡ್ಜರು ಆಪಾದಿತರನ್ನು ಖುಲಾಸುಪಡಿಸಿದರು. ಆಪಾದಿತರ ಕಡೆಯಲ್ಲಿ ಪ್ರಖ್ಯಾತ ಬಾರಿಸ್ಟರರಾದ ಮಿ| ಇ. ನೋರ್ಟನರವರು ವ್ಯವಹರಿಸಿದ್ದರು

ದಕ್ಷಿಣ ಹಿಂದೂಸ್ಥಾನ

ಉದಕಮಂಡಲಿಗೆ ಸೇರಿದ ಕಪ್ಪೆ ಎಂಬಲ್ಲಿ ೬ ಹುಡುಗಿಯರು ಆತ್ಮಹತ್ಯಮಾಡಿಕೊಳ್ಳಲು ಯತ್ನಿಸಿದ ಅಪೂರ್ವ ವೃತ್ತಾಂತವು ಬಂದಿರುವುದು. ೧೩-೧೭ ವರ್ಷ ಪ್ರಾಯದ ಬಡಗ ಜಾತಿಯ ೬ ಹುಡುಗಿಯರು ಕಪ್ಪೆಯ ವಿದ್ಯುಚ್ಛಕ್ತಿಯ ಬಗ್ಗೆ ನಿರ್ಮಿಸಿದ ಕೊಳದಲ್ಲಿ ಬಿದ್ದು ಸ್ವಘಾತಮಾಡಿಕೊಳ್ಳುವದೆ ತಮ್ಮೊಳಗೆ ಮಸಲತ್ತುಮಾಡಿಕೊಂಡರು. ಈ ನಿರ್ಣಯದ ಮೇರೆಗೆ ಈ ಪೈಕಿ ೪ ಮಂದಿ ಹುಡುಗಿಯರು ತಮ್ಮತಮ್ಮ ವಸ್ತ್ರಗಳನ್ನು ಬಿಚ್ಚಿ ಕೊಳಕ್ಕೆ ಬಂದು ನೀರಿಗೆ ಧುಮುಕಿದರು. ಸಮೀಪದ ಬಂಗ್ಲೆಯಲ್ಲಿದ್ದ ಕಾವಲುಗಾರನು ಶಬ್ದವನ್ನು ಕೇಳಿ ಘೂತವೆ ಮುಟ್ಟಿಸಿದನು. ಪರತು ಈ ಹುಡುಗಿಯರು ಮನೆಯಲ್ಲಿ ಕಾಣದಿರಿಂದ ಅವರನ್ನು ಹುಡುಕ ಪ್ರಾರಂಭಿಸಿದರು. ಕಾವಲಗಾರನು ಕೆರೆಯಲ್ಲಿ ಉಂಟಾದ ಶಬ್ದವನ್ನು ಇವರಿಗೆ ತಿಳಿಸಿದಲ್ಲಿ ಇಂಜಿನಿಯರರು ಒಂದು ಕೆರೆಯನ್ನು ಪರಿಶೋಧಿಸಿದರು. ಕೊಳದಲ್ಲಿ ೪ ಹೆಣಗಳು ಸಿಕ್ಕಿದವು. ಈ ಸ್ವಘಾತದ ಉದ್ದೇಶವೇನೆಂಬದು ತಿಳಿದು ಬರಲಿಲ್ಲ

ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ಪ್ರಿನ್ಸಿಪಾಲರಾದ ಬಹುಮಾನಪಟ್ಟ ಜೆ. ಎಚ್. ಸ್ಟೋನರವರು ವಿದ್ಯಾಖಾತೆಯ ಡೈರೆಕ್ಟರರಾಗಿ ನೇಮಿಸಲ್ಪಟ್ಟದ್ದರಿಂದ ಅದೇ ಕಾಲೇಜಿನ ಗಣಿತ ಮಹೋಪಾಧ್ಯಾಯರಾದ ಮಿ| ಇ. ಡಬ್ಲ್ಯು. ಮಿಡ್ಲ್‌ಮಾಸ್ಟರವರು ಆಕ್ಟಿಂಗ್ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟಿರುವರು

——o——

ಮದ್ರಾಸ್ ಹೈಕೋರ್ಟಿನ ಜಸ್ಟಿಸರಲ್ಲೊಬ್ಬರಾದ ಸರ್ ಜಸ್ಟಿಸ ಮಿಲ್ಲರರವರು ಮೈಸೂರು ಚೀಫ್ ಕೋರ್ಟಿನ ಚೀಫ್ ಜಸ್ಟಿಸರಾಗಿ ನೇಮಿಸಲ್ಪಟ್ಟು ತಾ. ೧೯ರಲ್ಲಿ ಉದ್ಯೋಗ ನಿವೃತ್ತರಾದರು. ಇವರ ಬದಲಿಗೆ ಮಿ| ಚಾರ್ಲ್ಸ್ ಗೋರ್ಡನ್ ಸ್ಪೆನ್ಸರರವರು ಮದ್ರಾಸ್ ಹೈಕೋರ್ಟ ಜಡ್ಜರಾಗಿ ನೇಮಿಸಲ್ಪಟ್ಟಿದ್ದಾರೆ

ಕನ್ನಂಬಾಡಿ ತಲಾವಿನ ಅಣೆಕಟ್ಟಿನ ಕಾಮಗಿರಿಯಲ್ಲಿ ತೂಬುಗಳನ್ನು ನಿಲ್ಲಿಸುವ ಕಡೆಯ ಗೋಡೆಗಳು ಪ್ರವಾಹದ ದೆಶೆಯಿಂದ ತೂತು ಬಿದ್ದು ನೀರು ಸುಗ್ಗುತ್ತಿದೆಂದೂ ಉತ್ತರ ಪಾರ್ಶ್ವದ ಗೋಡೆಯಲ್ಲಿ ತೂತು ಬಿದ್ದು ನೀರು ಹರಿಯುತ್ತಿದೆಂದೂ ಇವೆರಡನ್ನೂ ತಡೆಯುವುದಕ್ಕಾಗಿ ಇಂಜನಿಯರರುಗಳು ಇತರ ಕೆಲಸಗಳನ್ನು ನಿಲ್ಲಿಸಿಬಿಟ್ಟು ಈ ಕೆಲಸವನ್ನು ತೊಡಗಿದ್ದಾರೆಂದೂ ಪ್ರಕಟವಾಗಿದೆ.

ತಿರುವಂಕೂರು ರಾಜಧಾನಿಯಲ್ಲಿ ೨೫ ವರ್ಷ ವಯಸ್ಸಿನ ಶಾನಾರ್ ಜಾತಿಯ ಒಬ್ಬ ಹೆಂಗಸು ಕಳೆದ ತಾ. ೨೩ನೇ ರಾತ್ರಿ ೫ ಹೆಣ್ಣುಮಕ್ಕಳನ್ನು ಏಕ ಕಾಲದಲ್ಲಿ ಹೆತ್ತಳು. ಮೊದಲನೇ ಮಗು ೨೪ ತಾಸುಗಳ ಕಾಲ ಬದುಕಿತು. ೩ನೇ ಮಗು ಸತ್ತು ಹೋಗಿತ್ತು. ಉಳಿದ ಮೂರು ಮಕ್ಕಳು ಬೆಳಕು ಹರಿಯುವುದರೊಳಗೆ ಸತ್ತು ಹೋದವು. ಹುಟ್ಟಿದ ೫ ಮಕ್ಕಳೂ ಚೆನ್ನಾಗಿ ಬೆಳದಿದ್ದವೆಂದು ಹೇಳುತ್ತಾರೆ

ಕಲಿಕೋಟೆಯಲ್ಲಿ ಒಂದು ತಿಂಗಳ ಹಿಂದೆ 'ಕೆಲಿಕಟ್ ಮೆಪ್ಪಾಡಿ ಮೋಟೊರ್ ಸರ್ವಿಸ್' ಎಂಬ ಹೆಸರಿನಿಂದ ಒಂದು ಮೋಟೊರ್ ಕಂಪೆನಿಯು ಸ್ಥಾಪಿಸಲ್ಪಟ್ಟು ಕಲಿಕೋಟೆಯಿಂದ ಮೆಪ್ಪಾಡಿವರೆಗೆ ಮೋಟರ್ ಬಸ್‌ಗಳು ನಡಿಯುತ್ತಿದ್ದುವು. ಈಚೆಗೆ ಒಂದು ತಪ್ತಿಯಿಂದ ಬಸ್‌ಗಳು ನಡಿಯುವುದಿಲ್ಲ. ಮಳೆಯ ದೆಶೆಯಿಂದ ಬೀದಿಗಳು ಹಾಳಾಗಿರುವುದರಿಂದ ಬಂಡಿಗಳು ನಾದುರುಸ್ತಿಯನ್ನು ಹೊಂದಿದ್ದೇ ಈ ಬಂಡಿಗಳ ಚಲಾವಣೆ ನಿಲ್ಲಲು ಕಾರಣ. ಒಟ್ಟಾರೆ ಹೆಚ್ಚಾಗಿ ಮಳೆ ಬೀಳುವ ಪಶ್ಚಿಮ ಕರಾವಳಿಯಲ್ಲಿ ಮೋಟರ್ ಬಸ್‌ಗಳನ್ನು ನಡೆಯಿಸುವುದು ಕಷ್ಟಸಾಧ್ಯವೂ ನಷ್ಟವೂ ಆಗಿದೆಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ

ಮದ್ರಾಸಿನ ಯಂಗ್‌ಮೆನ್ ಇಂಡಿಯನ್ ಎಸೋಸಿಯೇಶನ್ ಎಂಬ ಸಂಘದವರು ಮದ್ರಾಸ್ ಪ್ರೆಸಿಡೆನ್ಸಿಯ ಜಿಲ್ಲೆಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಕಮರ್ಶಿಯಲ್ ಕ್ಲಾಸನ್ನು ತೆರೆದಿರುತ್ತಾರೆ. ಮದ್ರಾಸಿನಲ್ಲಿ ಇಂತಹ ಕ್ಲಾಸನ್ನು ತೆರೆದುದರಿಂದ ವ್ಯಾಪಾರ ವೃತ್ತಿಯನ್ನು ಕೈಕೊಳ್ಳಲು ಮನಸ್ಸುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಯೋಜನವಾದೀತು. ತಕ್ಕಷ್ಟು ಇಂಗ್ಲಿಷ್ ಮಾಹಿತಿಯುಳ್ಳ ಹೈಸ್ಕೂಲು ವಿದ್ಯಾರ್ಥಿಗಳು ಈ ತರಗತಿಗೆ ಸೇರಬಹುದು. ಸೇರಲಿಚ್ಛಿಸುವವರು ಜುಲೈ ತಿಂಗಳಲ್ಲಿ ಸೇರಬಹುದು. ಈ ಕಮರ್ಶಿಯಲ್ ಶಾಲೆಗೆ ಸೇರುವ ವಿದ್ಯಾರ್ಥಿಗಳು ಸದರಿ ಸಂಘದ ಮೆಂಬರರಾಗಿರಬೇಕಾಗುವುದು

ಇದೇ ತಿಂಗಳ ೧೭ನೇ ಶುಕ್ರವಾರ ದಿವಸ ಮುಂಬಾಯಿಂದ ಮದ್ರಾಸಿಗೆ ಬರುವ ಆಗ್ಗಾಡಿಯು ಮಳೆಯು ಅತಿರೇಕ ಸುರಿದು, ದಾರಿಯಲ್ಲಿರುವ ಗುಡ್ಡದಿಂದ ಒಂದು ದೊಡ್ಡ ಶಿಲೆಕಲ್ಲು ಕುಸಿದು, ದಾರಿಗೆ ಬಿದ್ದು, ಅದನ್ನು ತೆಗೆಯಲಿಕ್ಕೆ ೫ ತಾಸು ಹಿಡಿದ್ದರಿಂದ ತಡವಾಗಿ ತಲಪಿತು. ಈ ಗಾಡಿಯು ಮದ್ರಾಸಿಗೆ ೧೮ ಮೈಲು ದೂರವಿರುವಾಗ ೧೦ ವರ್ಷ ವಯಸ್ಸಿನ ಒಂದು ಹುಡುಗಿಯು ರೈಲ್ವೆ ದಾರಿಗೆ ಅಡ್ಡಲಾಗಿ ಬರುವುದು ಕಂಡು ಬಂದಿತು. ಬ್ರೇಕ್ ಕೊಟ್ಟು ನಿಲ್ಲಿಸಿದರೂ ಸಾಧ್ಯವಾಗದೆ ಹುಡುಗಿಯು ಗಾಡಿಯ ಅಡಿಗೆ ಬಿದ್ದು ಸತ್ತು ಹೋದಳು

ಸರ್ ಹೆರೊಲ್ಡ ಸ್ಟುವರ್ಟರವರು ಮದ್ರಾಸ್ ನ್ಯಾಯ ವಿಧಾಯಕ ಸಭೆಯ ವೈಸ್ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟಿರುವರು. ಈ ನೇಮಕದಿಂದ ಬಹುಮಾನಪಟ್ಟ ವಿ. ಎಸ್. ಶಿವಸ್ವಾಮಿ ಐಯ್ಯರರಿಗೆ ಅನ್ಯಾಯ ವಾಯಿತೆಂದು ಆಯಾ ಪತ್ರಿಕೆಗಳು ಹೇಳುತ್ತಿವೆ

ಸಿಕಂದರಾಬಾದ್:—ಶ್ರೀಮತ್ಪರಮಹಂಸಾಶ್ರಮಿಗಳಾದ ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ಮದ್ವಿಶ್ವಜ್ಞತೀರ್ಥ ಶ್ರೀಪಾದಂಗಳವರು ಗಂಗಾಸ್ನಾನಾರ್ಥವಾಗಿ ಶ್ರೀ ಸುಬ್ರಹ್ಮಣ್ಯಕ್ಷೇತ್ರದಿಂದ ಹೊರಟವರು ಈ ವರುಷದ ಚಾತುರ್ಮಾಸ್ಯ ಸಂಕಲ್ಪವನ್ನು ನೈಜಾಮು ಇಲಾಖೆ ಸಿಕಂದರಾಬಾದಿನಲ್ಲಿ ಶ್ರೀಮಂತ ವಂಟೇಲ್ ಶ್ರೀನಿವಾಸರಾಯರು ಮುಂತಾದವರ ಪ್ರಾರ್ಥನೆ ಮೇರೆಗೆ ಈ ಸ್ಥಳದಲ್ಲಿ ಆಚರಿಸಿರುತ್ತಾರೆ. ಈ ಸಂಸ್ಥಾನವು ಈ ದೇಶಕ್ಕೆ ನೂತನವಾಗಿ ದಿಗ್ವಿಜಯ ಮಾಡಿದ್ದರಿಂದ ಶ್ರೀಪಾದಂಗಳವರ ಶಮದಮಾದಿ ಗುಣಗಳನ್ನು ನೋಡಿ ಈ ದೇಶದವರು ಬಹಳಾ ಸಂತೋಷಪಡುತ್ತಾರೆ

ದಕ್ಷಿಣ ಕನ್ನಡ.

ಪುತ್ತೂರು:—ಇದೇ ತಾ. ೧೨ರಲ್ಲು ಇಲ್ಲಿಯ ಪರಸ್ಪರ ಸಹಾಯಕ ಸಂಘದ ಮಹಾ ಸಭೆಯು ಜರಗಿತು. ರಾ| ವಕೀಲ ಸವೂರು ಶಿವರಾಯರು ಮತ್ತು ರಾ| ಬೆಳ್ತಂಗಡಿ ಮಂಗೇಶರಾಯರು ಪಂಚಾಯತಿ ಮೆಂಬರುತನಕ್ಕೆ ರಾಜೀಕೊಟ್ಟುದುದರಿಂದ ರಾ| ವಕೀಲ ಬೈಂದೂರು ರಾಮರಾಯರೂ, ರಾ| ವಕೀಲ ಬೆಳ್ಳಿ ವೆಂಕಟಕೃಷ್ಣರಾಯರೂ ಪಂಚಾಯತಿ ಮೆಂಬರರಾಗಿ ಆರಿಸಲ್ಪಟ್ಟರು. ಅನಂತರ ಸಂಘದ ಆಡಳಿಗೆ ವ ವಹಿವಾಟದ ಲೆಕ್ಕವನ್ನು ವಕೀಲ ರಾ| ಬೆಳ್ತಂಗಡಿ ಮಂಗೇಶರಾಯರು ಓದಿದರು. ಇದೇ ಸಮಯ ಪುತ್ತೂರಲ್ಲಿ ಒಂದು ಕ್ರಿಶ್ಚನ್ ಹೈಸ್ಕೂಲನ್ನು ಸ್ಥಾಪಿಸುವದಕ್ಕೋಸ್ಕರ ನಿವಾಸಿಕರ ಅಪೇಕ್ಷೆಯನ್ನು ಕೇಳಿಕೊಳ್ಳುವ ರೆವರೆಂಡ್ ರಿಕ್ಟರ್ ದೊರೆಗಳವರ ಪತ್ರವು ಸಭೆಯಲ್ಲಿ ಓದಲಾಯಿತು. ರೆವರೆಂಡ್ ರಿಕ್ಟರ್ ದೊರೆಗಳವರ ಪರವಾಗಿ ಒಬ್ಬ ಉಪದೇಶಕರು ಮಾತನ್ನಾಡಿ ಶಾಲೆಯ ಬಗ್ಗೆ ಒಂದು ಸ್ಥಳವನ್ನು ೧೭೦೦ ರೂಪಾಯಿಗೆ ಕೊಂಡುಕೊಂಡಿರುತ್ತಾರೆ, ಒಂದು ವರ್ಷದೊಳಗೆ ಹೈಸ್ಕೂಲು ಸ್ಥಾಪಿಸಲ್ಪಡುವುದೆಂದೂ ತಿಳಿಸಿದರು. ಹೈಸ್ಕೂಲು ಸ್ಥಾಪಿಸುವುದು ಅಗತ್ಯವೆಂಬದಾಗಿ ಸಭಿಕರು ಅಭಿಪ್ರಾಯಪಟ್ಟರು

ಇಲ್ಲಿಯ ಕೆಲವು ಗ್ರಾಮಗಳನ್ನು ಒಟ್ಟು ಕೂಡಿಸಿ ಗ್ರಾಮ ಮುನ್ಸೀಫ್ ಕೋರ್ಟುಗಳನ್ನು ಸ್ಥಾಪಿಸುವರೆ ಸರಕಾರದವರು ಸೆಂಕ್ಷನ್ ಮಾಡಿರುವರು.

ಕಾಸರಗೋಡು:—ಪ್ರಕೃತ ವಿದ್ಯಾರ್ಥಿಗಳಿಂದಲೂ ಪಟ್ಟಣದ ಮಹನೀಯರುಗಳಿಂದಲೂ ವ್ಯಾಯಾಮಕ್ಕೆ ಉಪಯೋಗಿಸಲ್ಪಡುವ ಸ್ಥಳವು ತಾಳಿಪಡ್ಪು ಎಂಬ ಮೈದಾನು ಮಾತ್ರವೇ ಆಗಿರುತ್ತೆ. ಇದನ್ನು ಯಾರಿಗೂ ದರಖಾಸ್ತಿಗೆ ಕೊಡಿಸದೆ ಮನ್ನಾ ಇಡಿಸಬೇಕಾಗಿ ಶಾಲಾ ಮೆನೇಜರ ದೊರೆಗಳವರು ಕೂಡಾ ರೆವಿನ್ಯು ಅಧಿಕಾರಿಗಳಿಗೆ ಮನವಿ ಮಾಡಿಕೊಂಡಿದ್ದರಂತೆ. ಫಲಿತಾಂಶವೇನೋ ತಿಳಿಯದು. ಅಲ್ಲಿ ಪಂಚಮರ ಶಾಲೆಯನ್ನು ಕಟ್ಟಿಸುವರೆಂಬ ಗುಜುಗುಜು ವರ್ತಮಾನವು ಕೇಳಿಸುತ್ತಿರುವುದರಿಂದ ಪಟ್ಟಣದ ಮುಂದಾಳುಗಳು ತಾವೇ ಈ ವಿಷಯದಲ್ಲಿ ಕಲೆಕ್ಟರ ದೊರೆಗಳವರಿಗೆ ಮನವಿ ಮಾಡಿಕೊಳ್ಳಬೇಕೆಂದಿರುವರು. ಸಂಬಂಧಪಟ್ಟ ಉದ್ಯೋಗಸ್ಥರು ಇದಕ್ಕೆ ನಿಗಾಕೊಟ್ಟು ಪಟ್ಟಣಿಗರ ಕೋರಿಕೆಯಂತೆ ವರ್ತಿಸುವರಾಗಿ ಹಾರೈಸುತ್ತೇವೆ.

ವಿವಿಧ ಶಾಲೆಗಳ ವಿದ್ಯಾರ್ಥಿಗಳು ತಾವು ಶ್ರಮಪಟ್ಟು ಆಟದಲ್ಲಿ ಪಡೆದ ಜಾಣತನವನ್ನು ಪ್ರದರ್ಶನ ಪಡಿಸಿ, ತಮ್ಮೊಳಗೆ ಮಿಕ್ಕೆಲ್ಲರಿಗಿಂತಲೂ ಪಂಡಿತರೆನ್ನಿಸಿಕೊಳ್ಳುವ ಪಂಗಡದವರಿಗೆ ಒಂದು "ಕಪ್" ಅಥವಾ ಮೆಡಲನ್ನು ಇನಾಮಾಗಿ ಕೊಡೆಯುವ ಕ್ರಮವು ಇದೆಯಷ್ಟೆ. ಸಾಧಾರಣವಾಗಿ ಪಂದ್ಯಾಟಕ್ಕೆ ಮಂಗಳೂರಲ್ಲಿರುವ ಹೈಸ್ಕೂಲು ಕೋಲೇಜುಗಳೇ ರಂಗಸ್ಥಳಕ್ಕೆ ಬರುವುದು ರೂಢಿಯಾಗಿದೆ. ಆದರೆ ನಮ್ಮ ಜಿಲ್ಲೆಯ ಇತರ ತಾಲೂಕು ಪಟ್ಟಣಗಳಲ್ಲಿರುವ ಹೈಸ್ಕೂಲು ಮತ್ತು ಲೋವರ್ ಸೆಕೆಂಡರಿ ಶಾಲೆಗಳು ಕೂಡಾ ಇದರಲ್ಲಿ ಭಾಗಿಗಳಾಗುವುದು ಪರಸ್ಪರ ಪ್ರೀತಿ ಪ್ರೇಮವನ್ನು ಹೆಚ್ಚಿಸುವುದಕ್ಕೆ ಅನುಕೂಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಕೆಲಿ ಪಂದ್ಯಾಟಗಳ ಬಹುಮಾನಗಳನ್ನು ಕೊಲೇಜ ಹೈಸ್ಕೂಲ್ಲು ಕ್ಲಾಸುಗಳನ್ನು ಬಿಟ್ಟು ಎಲ್ಲಾ ಶಾಲೆಗಳ ಲೋವರ್ ಸೆಕೆಂಡರಿ ಕ್ಲಾಸು ವಿದ್ಯಾರ್ಥಿಗಳಿಗಾಗಿ ಮಾತ್ರ ವಿಂಗಡಿಸಿಡುವುದಾದರೆ ಇತರ ಊರುಗಳ ಶಾಲಾ ವಿದ್ಯಾರ್ಥಿಗಳು ಕೂಡಾ ಧೈರ್ಯದಿಂದ ಬರಲು ಹೆಚ್ಚಿನ ಆಸ್ಪದವಿದೆ ಮಾತ್ರವಲ್ಲದೆ ನ್ಯಾಯಕ್ಕೂ ಅನುಸಾರವಾಗಿಯೇ ಇದೆ. ಸದ್ಯದಲ್ಲಿ ಮಂಗಳೂರಲ್ಲಿ ಈ ಬಗ್ಗೆ ಕೂಡುವ ಸಭಾ ಮಹನೀಯರು ಮುಖ್ಯವಾಗಿ ಮುನಿಸಿಪಾಲ್ ಚೆಯರ್‌ಮೇನರೇ ಈ ವಿಷಯಕ್ಕೆ ಮನಸ್ಸು ಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

ಕಾಪು:—ಇಲ್ಲಿಯೇ ಸಮೀಪ ಅಡ್ವಾರು ಎಂಬಲ್ಲಿ ಆಲಿ ಬ್ಯಾರಿ ಮಗ ಅಮದೆಬ್ಯಾರಿ ಎಂಬವನು ಒಬ್ಬ ಮುಂಡಕ್ಕೆ ವ್ಯಾಪಾರ ಮಾಡಿಕೊಂಡು ಬಂದ ಆಸಾಮಿಯು ತನ್ನ ಅಂಗಡಿಯಲ್ಲಿರತಕ್ಕ ಸೇರಿನಲ್ಲಿ ಅಳತೆ ಮಾಡಿಕೊಡಲು ನಿರಾಕರಿಸಿದರಿಂದ ಬ್ಯಾರಿಗೆ ಕೋಪೋದ್ರೇಕವಾಗಿ ಸೇರಿನಿಂದಲೇ ತಲೆಗೆ ಒಂದು ಏಟನ್ನು ಬಡಪಾಯಿಯ ಮೇಲೆ ಬಿಡಲು ಕೂಡಲೇ ಆತನು ಮೂರ್ಛಿತನಾದನು. ಅಲ್ಲದೆ ತಲೆಯಿಂದ ರಕ್ತವು ಸುರಿಯುವದಾಯಿತು. ಪಾಯಿಯು ತನ್ನ ಧನಿಗಳಾದ ಶ್ರೀ ಅಡ್ವಾರು ಸ್ವಾಮಿಯರವರ ಕೂಡೆ ದೂರನ್ನು ಕೊಡಲು ಶ್ರೀಗಳವರು ಬ್ಯಾರಿಯನ್ನು ಕರೆಯಿಸಿ ೮ ರೂಪಾಯಿ ಅಪರಾಧ ಕೊಡುವಂತೆ ಮಾಡಿದರಾಗಿ ಕೇಳುತ್ತೇನೆ

ಯರ್ಮಾಳದಲ್ಲಿ ಟಪ್ಪಾಲು ಆಫೀಸು ತೆರೆಯುವದು ಅವಶ್ಯವಿದೆಯೆಂದು ಹಲವು ಸಾರಿ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಿರುತ್ತದಷ್ಟೆ. ಶ್ರೀ ಅಡ್ವಾರು ಮಠದ ಶ್ರೀಗಳವರ ಸಾಧನೆಯಿಂದ ಸದ್ಯ ಯರ್ಮಾಳದಲ್ಲಿ ಬ್ರೇಂಚಾಫೀಸು ತೆರೆಯಲ್ಪಡುವದೆಂದು ಕೇಳುತ್ತೇನೆ. "ಸಾಧನೆ ಮಾಡಿದರೆ ಸಬಳ ನುಂಗಬಹುದು" ಎಂಬ ಹಿರಿಯರ ಗಾದೆ ಸುಳ್ಳಲ್ಲ. ಹ್ಯಾಗೂ ಇರಲಿ, ಈ ವಿಷಯದಲ್ಲಿ ಟಪ್ಪಾಲು ಇನ್ಸ್ಪೆಕ್ಟರವರು ತಕ್ಕ ನಿಗಾ ಕೊಟ್ಟಲ್ಲಿ ಊರ ನಿವಾಸಿಕರಿಗೆ ಮಹದುಪಕಾರವೆಂದೇ ಹೇಳಬೇಕಾಗಿದೆ.

ಊರ ಮಾನ್ಯ ಗೃಹಸ್ಥರು ಯರ್ಮಾಳದಲ್ಲಿ ಒಂದು ಶಾಲಾ ಕಟ್ಟೋಣ ಕಟ್ಟಿಸಿ ಬೋರ್ಡಿನವರಿಗೆ ಉಚಿತವಾಗಿ ಕೊಟ್ಟಲ್ಲಿ ಯರ್ಮಾಳದಲ್ಲಿಯೇ ಒಂದು ಹೈಯರ್ ಎಲಿಮೆಂಟರಿ ಶಾಲೆ ತೆರೆಯುವ ಆಲೋಚನೆ ಉಡ್ಪಿ ರೇಂಜು ಸ್ಕೂಲುಗಳ ಸಬ್ ಅಸಿಸ್ಟಂಟ್

ಇನ್ಸ್‌ಪೆಕ್ಟರವರಿಗೆ ಇದೆಯಾಗಿ ಕೇಳುತ್ತೇವೆ ಈ ವಿಷಯ ರಾ| ಪಟೇಲ್ ಕುಮಾರರಾಯರು, ರಾ. ಕುಂಜೂರ. ವ್ಯಾಸರಾಯರು ಮುಂತಾದವರು ತಕ್ಕ ನಿಗಾ ಕೊಡುವರು ಎಂದು ನಂಬುತ್ತೇವೆ

~~~~~~

ಉಡುಪಿ:—ಇಲ್ಲಿ 'ಶಾರದಾ ವಿಲಾಸ' ಸಂಸ್ಕೃತ ಬಾಲಿಕಾ ಪಾಠಶಾಲೆಯ ಎರಡನೆ ವರ್ಷದ ವರ್ಧಂತಿಯನ್ನು ಇದೇ ತಾ ೧೯ನೇ ಭಾನುವಾರ ದಿವಸ ಆಚರಿಸಿದರು ನಮ್ಮ ಮಾನ್ಯ ಮುನ್ಸೀಫರಾದ ಮ. ರಾ. ಕುಪ್ಪುಸ್ವಾಮಿ ಅಯ್ಯರವರು ಅಧ್ಯಕ್ಷರಾಗಿ ಇನಾಮು ಹಂಚಿದರು. ತಹಸೀಲದಾರರವರೂ, ಮೆ| ಅಬ್ದುಲ್ಲಾ ಹಾಜಿ ಖಾನ್ ಸಾಹೇಬರವರೂ, ಸಬ್‌ರಿಜಿಸ್ಟ್ರಾರವರೂ, ರಾ| ಬಿ ಶ್ರೀನಿವಾಸರಾವ್. ರಾ| ಬಿ ಭುಜಂಗರಾವ್, ರಾ| ಪಿ. ರಾಮಚಂದ್ರರಾವ್, ರಾ| ಬಿ. ವೆಂಕೋಬಾಚಾರ್ಯ ಇವರೇ ಮೊದಲಾದ ಸದ್ಗೃಹಸ್ಥರು ದಯಮಾಡಿದ್ದರು. ಬಾಲಿಕೆಯರು ಕೆಲವು ಸಂಸ್ಕೃತ ಮತ್ತು ಕನ್ನಡ ಗೀತಗಳನ್ನು ಹಾಡಿದರು. ಇವರಲ್ಲಿ ಸೌ| ಮಂದಾಕಿನಿ ಮತ್ತು ಪದ್ಮಾವತಿ ಎಂಬ ಇಬ್ಬರು ಬಾಲಿಕೆಯರು ಮಾಡಿದ "ಪಾತಿವೃತ್ಯ" (ಸಾವಿತ್ರೀ ಉಪಾಖ್ಯಾನ) ವಿಷಯವಾದ ಸಂಭಾಷಣೆಯು ಅತಿ ಮನೋಹರವಾಗಿದ್ದಿತು ಅಧ್ಯಕ್ಷರವರು ಕಾಲೋಚಿತವಾದ ಭಾಷಣವನ್ನು ಮಾಡಿ ಈ ಪ್ರಾಂತ್ಯದಲ್ಲಿ ಬೇರೆ ಎಲ್ಲಿಯೂ ಇಲ್ಲದಿರುವ ಇಂತಹ ಸಂಸ್ಕೃತ ಬಾಲಿಕಾ ಪಾಠಶಾಲೆಗೆ ಸರ್ವರೂ ಸಹಾಯಮಾಡಬೇಕಾಗಿ ಅಪ್ಪಣೆ ಕೊಡಿಸಿದರು

ಇಲ್ಲಿಯ ಸಂಸ್ಕೃತ ಪಾಠಶಾಲೆಯ. ಹಳೆ ವಿದ್ಯಾರ್ಥಿಗಳೂ ಬೇರೆ ಕೆಲವರೂ ಸೇರಿ "ವೇಣೀ ಸಂಹಾರ" ವೆಂಬ ಸಂಸ್ಕೃತ ನಾಟ್ಯಕವನ್ನು ಬಹು ಪರಿಷ್ಕಾರವಾಗಿ ಆಡಿ ತೋರಿಸಿದರು

ಪರ್ಯಾಯ ಶ್ರೀ ಸೋದೂರು, ಶ್ರೀ ಪುತ್ತಿಗೆ. ಶ್ರೀ ಕಾಣೂರು ಶ್ರೀಪಾದಂಗಳವರು, ಇಲ್ಲಿ ಶ್ರೀ ಕೃಷ್ಣ ಮಠದಲ್ಲಿಯೂ, ಶ್ರೀ ಕೃಷ್ಣಾಪುರ ಶ್ರೀ ಪಾದಂಗಳವರು ಇಲ್ಲಿ ತಮ್ಮ ಮಠದಲ್ಲಿಯೂ, ಅದಮಾರವರು ಅದಮಾರಲ್ಲಿಯೂ, ಫಲಿಮಾರವರ ಫಲಿಮಾರಲ್ಲಿಯೂ ಚಾತುರ್ಮಾಸ ಸಂಕಲ್ಪವನ್ನು ಮಾಡುವವರಾದರು ಪೇಜಾವರ ಮತ್ತು ಸೋದೆ ಶ್ರೀಪಾದಂಗಳವರು ಉತ್ತರ ದೇಶಗಳಲ್ಲಿ ಸಂಚಾರದ ಮೇಲೆ ಇರುವದರಿಂದ ಅವರು ಚಾತುರ್ಮಾಸ ಸಂಕಲ್ಪವನ್ನು ಎಲ್ಲಿ ಪೂರೈಸುತ್ತಾರೊ ತಿಳಿಯಲಿಲ್ಲ

~~~~~~

ನೋಟೀಸು.

~~~~~~

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

1914ನೇ ಇಸವಿ ಮೂಲ ಅರ್ಜಿ ನಂಬ್ರ 69.

ಹೊಸ ಅಂಗಡಿ ಶಿವಶಂಕರರಾವ—
ರಾಘವೇಂದ್ರರಾಯರ ಮಗ— } ಅರ್ಜಿದಾರ
ಕಾರ್ಕಳ ಕಸಬೆಯಲ್ಲಿರುವವ

ಅರ್ಜಿದಾರನ ತಂದೆ ಮೃತಪಟ್ಟ ಹೊಸಂಗಡಿ ರಾಘವೇಂದ್ರರಾಯರಿಗೆ ಹೊರಗಿನಿಂದ ಬರತಕ್ಕ ಸಾಲ ವಸೂಲಿ ಕುರಿತು ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರನು ಕೊಟ್ಟ ಮೇಲಿನ ಅರ್ಜಿಯು ಈ ಕೋರ್ಟಿನಲ್ಲಿ ತಾ 20—8—14ನೇಗೆ ತನಖಿಗೆ ನಿಶ್ಚಯಿಸೋಣಾಗಿಯದೆ. ಈ ಕುರಿತು ಯಾರದಾದರೂ ಆಕ್ಷೇಪಗಳಿದ್ದರೆ ತಾ 20—8—14ನೆ ಹಗಲು 10 ಘಂಟೆಯ ಒಳಗೆ ಸದರಿ ಕೋರ್ಟಿಗೆ ಜ್ಯಾಹೀರುಮಾಡಿಕೊಳ್ಳಬೇಕಾಗಿರುತ್ತದೆ.

ಕುಂದಾಪುರ.
ತಾ. 17—7—14. } T. Ganesha Rau.
ಅರ್ಜಿದಾರನ ವಕೀಲ್.

~~~~~~

ನೋಟೀಸು.

~~~~~~

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

1914ನೇ ಇಸವಿ ಮೂಲ ಅರ್ಜಿ ನಂಬ್ರ 67.

ಸಂಜೀವರಾವ ಯೆಡೇರಿ (ಮ್ಯಾನರ)
ರಕ್ಷಕ ವ ಕ್ಷೇಮಚಿಂತಕಳು ತಾಯಿ } ಅರ್ಜಿದಾರ.
ಸುಶೀಲಾಬಾಯಿ.

ಮತ್ತು

1. ಯೆಡೇರಿ ವೆಂಕಟರಾವ್.
2. ಯೆಡೇರಿ ಆನಂದರಾವ್. } ಎದ್ರಿಲು.

ಇವರೊಳಗೆ

ಮೃತ ಯೆಡೇರಿ ನಾರಾಯಣರಾಯಗೆ ಹೊರಗಿನಿಂದ ಬರತಕ್ಕ ಸಾಲ ವಸೂಲಿ ಕುರಿತು ತನಗೆ ಸಕ್ಸೆಶನ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರನು ಕೊಟ್ಟ ಮೇಲಿನ ಅರ್ಜಿಯು ಈ ಕೋರ್ಟಿನಲ್ಲಿ ತಾ 10—8—14ನೇಗೆ ತನಖಿಗೆ ನಿಶ್ಚಯಿಸೊಣಾಗಿಯದೆ ಈ ಕುರಿತು ಯಾರದಾದರೂ ಆಕ್ಷೇಪಗಳಿದ್ದರೆ ತಾ. 10—8—14ನೆ ಹಗಲು 10 ಘಂಟೆಯ ಒಳಗೆ ಸದ್ರಿ ಕೋರ್ಟಿಗೆ ಜ್ಯಾಹೀರುಮಾಡಿಕೊಳ್ಳಬೇಕಾಗಿರುತ್ತದೆ

ಕುಂದಾಪುರ.
ತಾ 17—7—14 } T. Ganesha Rau
ಅರ್ಜಿದಾರನ ವಕೀಲ.

~~~~~~

ನೋಟೀಸು.

~~~~~~

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O P ನಂಬ್ರ. 67/1914

1 ಕಾಟ್ಟೇರಿ ವ ನಕ್ಕಲ್ ಶ್ರೀಕುಮಾರನ್ ಶಿವ — ಬ
2 ಕಾಯಕ್ಕಾಟ ವ ನಕ್ಕಲ್ ಕುಂಞ ಸುಬ್ರಮಣ್ಯನ್ } ಅರ್ಜಿದಾರರ
ತಿಮ್ಮಂಬ.

ಮೃತಪಟ್ಟ, ತೇವ ಕ್ಕಾಟ ಮನಕ್ಕಲ್ ಚೆರಿಯ ದಾಮೋದರನ್ ಶಿವ ರಂಬುವಿನ ಸಾಲಗಳ ವಸೂಲಿ ಬಗ್ಗೆ ಸದರಿ ಅರ್ಜಿದಾರರು ಮೇಲ್ಕಂಡ ಕೋರ್ಟಿಗೆ ಮಾಡಿದ ಸದರಿ ಅರ್ಜಿಯು ತನಿಕೆ ಬಗ್ಗೆ 1914ನೇ ಇಸವಿ ಅಗೋಸ್ತು ತಾರೀಕು 13ಕ್ಕೆ ಇಡೋಣಾಗಿಯದೆ ಹಕ್ಕುಳ್ಳವರು ತಮ್ಮ ಆಕ್ಷೇಪಣೆಗಳನ್ನು ತನಿಕೆ ತಾರೀಕಿನ ಒಳಗೆ ಜ್ಯಾಹೀರ ಮಾಡಬಹುದ.

ಮಂಗಳೂರು
ತಾ 22—7—14 } ಟಿ. ಶ್ರೀನಿವಾಸಪ್ಪೈ,
ಅರ್ಜಿದಾರನ ಕಡೆ ವಕೀಲ

~~~~~~

ಮಂಗಳೂರು

ಲೇಡಿ ಹಾರ್ಡಿಂಜರವರ ವಿಧಿವಶರಾದ ದುಃಖಕರವಾದ ವಾರ್ತೆ ತಲಪಿದ ದಿವಸೇ ಇಲ್ಲಿಯ ಮುನಿಸಿಪಾಲ ಚೇಯರ್ಮೆನರವರು ಪಟ್ಟಣದ ಮುಂದಾಳುಗಳ ಸಭೆ ಕೂಡಿಸಿ ಪಟ್ಟವಾಸಿಗಳ ಪರವಾಗಿ ಸಹಸಂತಾಪ ಸೂಚಕವಾದ ತಂತಿಯನ್ನು ವೈಸರಾಯ ಪ್ರಭುಗಳವರಿಗೆ ಕಳುಹಿಸಿ ಕೊಟ್ಟರು ಇದಕ್ಕೆ "ನಿಮ್ಮ ಸಹಸಂತಾಪ ಸೂಚಕವಾದ ತಂತಿಗೆ ವೈಸರಾಯ ಪ್ರಭುಗಳವರು ಕೃತಜ್ಞರಾಗಿದ್ದಾರೆ" ಎಂಬ ಉತ್ತರವು ಬಂದಿರುವುದು

ಇಲ್ಲಿಯ ಹಂಪನಕಟ್ಟೆಯ ಬಿಸ್ಕಟು ಸಾಹುಕಾರರಾದ ಮೆಸ್ಸರ್ಸ್ ಸ್ಟೀವನ್ ಎಂಡ್ ಸನ್ಸರವರು ಲೇಡಿ ಹಾರ್ಡಿಂಜರವರು ವಿಧಿವಶರಾದ ಸಹಸಂತಾಪವನ್ನು ಸೂಚಿಸಿ ವೈಸರಾಯ ಹಾರ್ಡಿಂಜ ಪ್ರಭುಗಳವರಿಗೆ ಸಹಸಂತಾಪ ಸೂಚಕವಾದ ತಂತಿಯನ್ನು ಇದೇ ತಾ. ೧೫ರಲ್ಲು ಬಿಟ್ಟಿದ್ದರು 'ವೈಸರಾಯ ಪ್ರಭುಗಳವರು ನಿಮ್ಮ ಸಹಸಂತಾಪ ಸೂಚಕವಾದ ತಂತಿಗೆ ಬಹಳ ಕೃತಜ್ಞರಾಗಿದ್ದಾರೆ'ಂಬ ಉತ್ತರವು ವೈಸರಾಯರವರ ಪ್ರೈವೆಟ್ ಸೆಕ್ರಟರಿಗಳವರಿಂದ ಸ್ಟೀವನ್ ಎಂಡ್ ಸನರವರಿಗೆ ತಾ ೧೮ರಲ್ಲು ಬಂದಿರುವುದು.

ಶ್ರೀ ಬಹುಮಾನಪಟ್ಟ ಮದ್ರಾಸ್ ಗವರ್ನರ ಪ್ರಭುಗಳವರು ಇದೇ ಅಕ್ಟೋಬರ ತಾ ೨೫ನೇಗೆ ಈ ಜಿಲ್ಲೆಗೆ ಬಿಜಯ ಮಾಡುವುದರಿಂದ ಅವರಿಗೆ ತಕ್ಕ ಆದಾರ ಸತ್ಕಾರಗಳನ್ನು ಮಾಡುವ ವಿಷಯವನ್ನೂ, ಸಂಬಂಧಪಟ್ಟ ಇತರ ಸಂಗತಿಗಳನ್ನೂ ಆಲೋಚಿಸುವ ಬಗ್ಗೆ ಇದೇ ತಿಂಗಳ ತಾ ೨೫ನೇ ಶನಿವಾರ ಅಪರಾಹ್ನ ಘಂಟೆ ೫—೩೦ಕ್ಕೆ ಗವರ್ನಮೆಂಟ್ ಕಾಲೇಜಿಯಲ್ಲಿ ಈ ಪಟ್ಟದ ನಿವಾಸಿಕರ ಒಂದು ಸಭೆಯು ಕೂಡಬೇಕಾಗಿ ನಿಶ್ಚಯಿಸೋಣಾಗಿದೆ. ಈ ಸಭೆಗೆ ಸರ್ವರೂ ದಯಮಾಡಿ ಬರಬೇಕೆಂದು ಮುನಿಸಿಪಾಲ್ ಚೇಯರ್ಮೇನರವರಿಂದ ವಿಜ್ಞಾಪಿಸಲ್ಪಟ್ಟಿರುವುದು.

ಇಲ್ಲಿಯ ಹಂಪನಕಟ್ಟೆಯಲ್ಲಿರುವ ಗ್ರಾಮಮುನ್ಸೀಫ್ ಕೋರ್ಟಿಗೆ ಆವರಣವಿಲ್ಲದಿರುವುದರಿಂದ ದನ ಇತ್ಯಾದಿಗಳು ಒಳನುಗ್ಗಿ ಗಲೀಜು ಮಾಡುತ್ತವೆಂದು ತಿಳಿಸಿತ್ತಷ್ಟೆ. ಈಗ ಮುನ್ಸಿಪಾಲಿಟಿಯವರು ಅದರ ಸುತ್ತಲೂ ಕಲ್ಲಿನಿಂದ ಚಲೋದಾದ ಆವರಣ ಹಾಕಿಸುವ ಕೆಲಸವನ್ನು ಪ್ರಾರಂಭಿಸಿರುವರು. ಪರಂತು, ಈ ಗ್ರಾಮ ಮುನ್ಸೀಫ ಕೋರ್ಟ ಈಗ ಶಾಲಾ ಇನ್ಸ್‌ಪೆಕ್ಟರರ ಆಫೀಸು ಇರುವ ರಥಬೀದಿಯ ಹಳೆ ತಾಲೂಕು ಕಚೇರಿಗೆ ವೈಯ್ಯೋಣಾಗುತ್ತದೆಂದೂ ಹಂಪನಕಟ್ಟೆಯ ಪೋಸ್ಟು ಆಫೀಸು ಗ್ರಾಮ ಮುನ್ಸೀಫ್ ಕೋರ್ಟು ಕಟ್ಟಡಕ್ಕೆ ತರೋಣಾಗುತ್ತದೆಂದೂ ವಾರ್ತೆ ಇದೆ.

ಕೊಡಿಯಾಲಬೈಲು ವಾರ್ಡಿನ ಕದ್ರಿ ಮುಸಾಫ್ರಿಕೆರೆ ಬದಿಯಲ್ಲಿರುವ ಮತ್ತು ಕೋರ್ಟು ವಾರ್ಡಿಗೆ ಸೇರಿದ ಕಲ್ಪಣೆಯಲ್ಲಿ ರಿಟಾಯರ್ಡ್ ಮೇಜಿಸ್ಟ್ರೇಟರಾದ ಮ. ಟಿ. ರೋಬರ್ಟ್ಸರ ಮನೆಯಿಂದ ಮುಂದರಿಸುವ ಓಣಿ ವ ಒಳರಸ್ತೆಗಳು ಪಟ್ಟದ ಒಳಗಿದ್ದು ಆ ಓಣಿಗಳ ಉಭಯ ಪಾರ್ಶ್ವಗಳಲ್ಲಿಯ ಮನೆಗಳ ಮ್ಯಾಲೀಕರಿಂದ ಸರಿಯಾಗಿ ತೆರಿಗೆ ವಸೂಲು ಪಡೆಯುತ್ತಿದ್ದರೂ ಸದರಿಯವುಗಳು ಬಹಳ ನಾದುರುಸ್ತಿ ಸ್ಥಿತಿಯಲ್ಲಿದ್ದು ಕೆಲವು ಮನೆ ವಠಾರಗಳ ಮಳೆ ವ ಗಲೀಜು ನೀರು ಈ ಓಣಿಗಳಲ್ಲಿ ಹರಿದು ಹೋಗುತ್ತಿರುವುದರಿಂದ ಹೊಂಡಬಿದ್ದು ಜನರು ಆ ಓಣಿಗಳಲ್ಲಿ ನಡಿಯುವುದೇ ಕಷ್ಟಸಾಧ್ಯವಾಗಿದೆ ಈ ವಿಷಯದಲ್ಲಿ ಮುನಿಸಿಪಾಲಿಟಿಯವರು ನಿಗಾ ಕೊಟ್ಟು ಈ ಒಳರಸ್ತೆಗಳನ್ನು ಮುನಸಿಪಾಲಿಟಿಗೆ ಸೇರಿಸಿಕೊಂಡು ದುರುಸ್ತಿ ಮಾಡಿಸುವ ಏರ್ಪಾಡು ಮಾಡಬೇಕಾಗಿದೆ ಎಂತ ಒಬ್ಬ ಬಾತ್ಮಿದಾರರು ತಿಳಿಸಿರುವರು

ಜುಬ್ಲಿ ವೇತನ ಫಂಡಿನಿಂದ ಶೂದ್ರ ಮತ್ತು ಕ್ರೈಸ್ತ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡುವ ಬಗ್ಗೆ ಪೋಟಾಟ ಪರೀಕ್ಷೆಯು ಇದು ಬರುವ ಅಗೋಸ್ತು ತಿಂಗಳ ತಾ ೧೮ನೇ ಮಂಗಳವಾರ ೧೧ ಗಂಟೆಗೆ ಇಲ್ಲಿಯ ಗವರ್ನಮೆಂಟ ಕಾಲೇಜಿಯಲ್ಲಿ ಜರಗುವುದು. ಈ ಸಂಬಂಧವಾದ ಕ್ರಮಗಳ ಪಟ್ಟಿಯು ೨ ಆಣೆಗೂ, ಅರ್ಜಿ ಫೋರ್ಮುಗಳು ೧ ಆಣೆಗೂ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ದೊರೆಯುವವು ವೇತನಗಳನ್ನು ಪಡೆಯಬಯಸುವ ಪ್ರತ್ಯೇಕ ವಿದ್ಯಾರ್ಥಿಗಳಿಗೂ ಅದೇ ದಿನ ಪೋಟಾಟ ಪರೀಕ್ಷೆ ಜರುಗುವುದು ಎಂತ ಆ ವೇತನ ಫಂಡಿನ ಪ್ರೆಸಿಡೆಂಟರಾಗಿರ ಡಿಸ್ಟ್ರಿಕ್ಟ್ ಜಡ್ಜರವರು ಪ್ರಕಟಿಸಿರುವರು

ಜಪ್ಪಿನಮೊಗರಿನ ಬಳಿ ಪೀಟರ್ಸನರ ಹಂಚು ಕಾರ್ಖಾನೆಯಲ್ಲಿ ಹಂಚು ಕೂಡಿಡ ಮರೆ ಕಟ್ಟಿಸಿದ ಮೈದಾನದಲ್ಲಿ ಕೆಲವು ಕೆಲಸದವರೂ ಸದರಿ ಮೆ| ಮೇಸ್ತ್ರಿಗಳವರೂ ತಾ ೨೦ಲ್ಲು ಕೆಲಸಮಾಡುತ್ತಿರುವಾಗ, ಕಲ್ಲಿನಿಂದ ಕಟ್ಟಿದ ಒಂದು ಸ್ತಂಭವು ಕುಸಿದು ಬಿದ್ದು ಇಡೀ ಮಾಡು ಒಡನೆ ಕೆಳಗೆ ಬಿತ್ತು ಒಳಗಿದ್ದವರು ಫಕ್ಕನೇ ಓಡಿದ್ದರಿಂದ ಜೀವ ಉಳಿಸಿಕೊಂಡರೂ ೫—೬ ಮಂದಿ ಬಹಳ ಜಖಂ ಆಗಿ ಆಸ್ಪತ್ರಿಗೆ ತರಲ್ಪಟ್ಟು ಶೈತ್ಯೋಪಚಾರ ಹೊಂದಿದರು. ಕೂಡಲೇ ಹೊರ ಓಡಿ ಬಾರದಿದ್ದ ಪಕ್ಷಕ್ಕೆ ಒಳಗಿದ್ದವರೆಲ್ಲರೂ ಸಾಯುವ ಗಂಡಾಂತರವಿತ್ತೆಂದು ತಿಳಿಯುತ್ತೇವೆ

ಕದ್ರಿಯ ಮೆ| ಮಿನೇಜಸರಲ್ಲಿ ಕೆಲಸಕ್ಕೆ ನಿಲ್ಲುತ್ತೇನೆಂದು ಅಂತೋನಿ ಎಂಬ ಹುಡುಗನು ಬಂದಿದ್ದನು ಮೆ| ಮಿನೇಜಸರು ಅವನನ್ನು ಕೆಲಸಕ್ಕೆ ಇಟ್ಟುಕೊಂಡ ಮಾರನೇ ದಿನವೇ ಸದರಿ ಹುಡುಗನು ಸುಮಾರು ೪೦ ರೂಪಾಯಿ ಕ್ರಯ ಬಾಳುವ ವಾಚು, ಮತ್ತು ಅಂಗಿ ಸಹಿತ ಪರಾರಿಯಾದನು ಪೋಲೀಸರು ಇವನ ಪತ್ತೆ ಮಾಡಿ ಮೆಜಿಸ್ಟ್ರೇಟರಲ್ಲಿ ಹಾಜರು ಪಡಿಸಿದ್ದಲ್ಲಿ ಹಿಂದೆ ಮೆ| ಟಿ. ರೋಬರ್ಟ್ಸರಲ್ಲಿ ಚಿಲ್ಲರೆಗೆ ಕೊಟ್ಟ ೬ ರೂಪಾಯಿ ಸಹಿತ ಪರಾರಿಯಾದ ಹುಡುಗನು ಇವನೇ ಎಂಬದಾಗಿ ತಿಳಿದು ಬಂದದರಿಂದ ಮೇಜಿಸ್ಟ್ರೇಟರು ಅಂತೋನಿಗೆ ೬ ರೂಪಾಯಿ ಕಳವಿನ ಸಂಬಂಧ ಒಂದು ತಿಂಗಳ ಸಜೆಯನ್ನೂ ಮೆ| ಮಿನೇಜಸರಲ್ಲಿ ಮಾಡಿದ ಕಳವಿನ ಸಂಬಂಧ ಚಡಿ ಶಿಕ್ಷೆಯನ್ನೂ ವಿಧಿಸಿದರು.

ಬೋಳಾರದಲ್ಲಿ ಅಂಗಡಿ ಮಾಡಿಕೊಂಡಿದ್ದ ರೇಗೋ ಎಂಬ ಹೆಸರಿನ ಒಬ್ಬ ರೋಮನ್‌ಕೆಥೋಲಿಕನು ತಾ ೨೧ನೇ ರಾತ್ರಿ ಅಂಗಡಿಗೆ ಬಾಗಲುಹಾಕಿ ಮಲಗಿದ್ದನು. ಅದೇ ಅಂಗಡಿಯ ಮಾಳಿಗೆಯ ಮೇಲೆ ಮಲಗಿದ್ದ ಅವನ ಮಗನು ಬೆಳಿಗ್ಗೆ ತಂದೆಯು ಬಾಗಲು ತೆರೆಯದ್ದನ್ನು ನೋಡಿ ಪರಿಶೋಧಿಸಿದಲ್ಲಿ ಅವನು ಸತ್ತು ಬಿದ್ದಿದ್ದನು. ಯಾವ ಕಾರಣದಿಂದ ಇವನು ಮೃತಪಟ್ಟನೆಂಬದು ತಿಳಿಯದು.

ಪಾಂಡೇಶ್ವರದ ಸಮೀಪ ವಾಸಿಸುವ ಮೆ| ಎಸ್. ಫೆರ್ನಾಂಡಿಸರ ಕೆಲಸದ ಹುಡುಗಿಯು ಇದೇ ತಾ. ೨೦ನೇ ರಾತ್ರಿ ಹೊರಗೆ ಬಾವಿಯ ಬಳಿಗೆ ಹೋದವಳು ಫಕ್ಕನೇ ಕಾಲುಜಾರಿ ಬಾವಿಗೆ ಬಿದ್ದು ಮರಣ ಹೊಂದಿರುವಳು. ಬಾವಿಗಳಿಗೆ ಆವರಣವಿಲ್ಲದವರು ಈ ಅವಗಡದಿಂದ ತಕ್ಕ ಎಚ್ಚರ ತಕ್ಕೊಳ್ಳುವುದು ವಿಹಿತವು.

ಇಲ್ಲಿಯ ಮಣಿಸರಕು ವ್ಯಾಪಾರದ ಹಮ್ಮಬ ಸಾಹೇಬರ ೫೦—೬೦ ರೂಪಾಯಿ ಕ್ರಯಬಾಳುವ ಸರಕು ಈಚೆಗೆ ಕಳವಾಗಿತ್ತು. ಈ ಸರಕುಗಳು ಬಡುವ ಬ್ಯಾರಿ ಎಂಬವನಲ್ಲಿ ಸಿಕ್ಕಿದ್ದರಿಂದ ಪೋಲಿಸರು ಅವನನ್ನು ಕೈದುಮಾಡಿರುವರು.

ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿಯಲ್ಲಿ ಈಚೆಗೆ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಇಲ್ಲಿಯ ರಾ| ಎಸ್. ಆರ್. ಯು.

ಸೆಪ್ಪೂರರವರು ಐ ಸಿ ಎಸ್ ಪರೀಕ್ಷೆಗಾಗಿ ಅಭ್ಯಾಸಿಸುವ ಬಗ್ಗೆ ಇಂಗ್ಲಾಂಡಿಗೆ ಹೋಗುವರೆ ತಾ ೨೯ರಲ್ಲಿ ಮುಂಬಾಯಿಯಲ್ಲಿ ಹಡಗ ಹತ್ತಿರುತ್ತಾರೆ.

ಗವರ್ನಮೆಂಟ ಟ್ರೈನಿಂಗ್ ಶಾಲೆಯ ರಾ| ಟಿ ಮಂಗೇಶರಾಯರು ಇತರ ಡ್ಯೂಟಿಯ ಮೇಲೆ ನೇಮಿಸಲ್ಪಟ್ಟದ್ದರಿಂದ ಇಲ್ಲಿಯ ಗವರ್ನಮೆಂಟ್ ಹೈಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ೧ನೇ ಅಸಿಸ್ಟಾಂಟ ವ ರಾಯದುರ್ಗ ರೇಂಜಿನ ಆಕ್ಟಿಂಗ್ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾಗಿದ್ದ ರಾ| ಎಸ್ ರಘುನಾಥರಾಯರು ಇಲ್ಲಿಯ ಹೈಯರ್ ಎಲಿಮೆಂಟರಿ ಶಾಲೆಯ ಹೆಡ್ ಮಾಸ್ತರರಾಗಿಯೂ ೨ನೇ ಅಸಿಸ್ಟಾಂಟರಾಗಿದ್ದ ರಾ| ಕೆ ರಾಮರಾಯರು ೧ನೇ ಅಸಿಸ್ಟಾಂಟರಾಗಿಯೂ ಉಡುಪಿ ರೇಂಜು ಶಾಲೆಗಳ ಸುಪರ್‌ವೈಸರರಾಗಿರುವ ರಾ| ಎಮ್ ರಘುನಾಥರಾಯರು ರಾಯದುರ್ಗದ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾಗಿಯೂ ನೇಮಿಸಲ್ಪಟ್ಟಿರುವರು

ಇಲ್ಲಿಯ ಗವರ್ನಮೆಂಟ ಟ್ರೈನಿಂಗ್ ಶಾಲೆಯಲ್ಲಿ ಎಲಿಮೆಂಟರಿ ಶಾಲೆಗಳ ಬಗ್ಗೆ ಏರ್ಪಡಿಸಿದ ಪ್ರತಿ ಶನಿವಾರದ ಭಾಷಣಗಳು ಈಗಲೂ ನಡೆಯುತ್ತಲಿವೆ ಇದೇ ಬರುವ ತಾ ೧ನೇ ಶನಿವಾರದಿಂದ ಸದರಿ ಶಾಲೆಯ ರಾ| ಕೋಟೆಕಾರ ರಾಮರಾಯರವರು ಪ್ರಾಣಿಗಳ ಮನಃಶಾಸ್ತ್ರ ಸಂಬಂಧವಾದ ಭಾಷಣಗಳನ್ನು ಕೊಡಲು ಪ್ರಾರಂಭಿಸುವರು ಪಟ್ಟಣದ ಆಜುಬಾಜಿನ ಮತ್ತು ಪಟ್ಟಣದ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರು ಈ ಭಾಷಣಗಳನ್ನು ಕೇಳಲು ಬಂದು ತಕ್ಕ ಪ್ರಯೋಜನವನ್ನು ಹೊಂದಬೇಕಾಗಿ ಹಾರೈಸುವೆವು

ರಾ| ಕೋಟೆಕಾರ ರಾಮರಾಯರು ಈ ವರ್ಷದ ಸಬ್ ಅಸಿಸ್ಟಾಂಟ ಟೆಸ್ಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು

ಈ ಮೊದಲು ಪ್ರಸ್ತಾಪಿಸಿರುವ ಕಾಫಿ ಕಳವಿನ ಪತ್ತೆಯನ್ನು ಪೋಲಿಸಿನವರು ಬಹಳ ಸಾಹಸದಿಂದ ಮಾಡುತ್ತಲಿರುವರು ಈ ತನಕ ಇಬ್ಬರು ಕೂಲಿಕಾರರನ್ನು ಕೈದುಮಾಡಿ ಅವರ ಮೇಲಿನ ಮೊಕದ್ದಮೆಯ ತನಿಕೆಯನ್ನು ಸಬ್ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಇಟ್ಟಿರುವರು ಬೋಳಂತೂರ ಸರ್ವೋತ್ತಮ ಪ್ರಭು ಮತ್ತು ಕಂಪೆನಿಯ ಪಾಲುಗಾರರನ್ನು ಕೈದುಮಾಡಲು ವಾರಂಟುಗಳು ಹೊರಟವೆಂಬದಾಗಿ ಊರಲ್ಲಿ ತುಂಬಾ ಸುದ್ದಿ ಇರುವುದು [illegible] ಇಲ್ಲಿಯ ಸಾವಕಾರ ಪಸಾರಿ ವಿಟ್ಟಲ ಪ್ರಭುಗಳನ್ನು ಕೈದುಮಾಡಿ ರಿಮಾಂಡಿನಲ್ಲಿಟ್ಟಿರುವರು ಸಬ್ ಮೆಜಿಸ್ಟ್ರೇಟರಲ್ಲಿಯೂ ಡಿಸ್ಟ್ರಿಕ್ಟ್ ಜಡ್ಜರಲ್ಲಿಯೂ ಸಹ ವಿಟ್ಟಲ ಪ್ರಭುಗಳನ್ನು ಜಾಮೀನಿನ ಮೇಲೆ ಬಿಡಬೇಕೆಂಬದಾಗಿ ಮಾಡಿದ ಅರ್ಜಿಯು ನಿಷ್ಫಲವಾಗಿ ಹೋಯಿತು ಈ ತನ್ಮಧ್ಯ, ಹೊಸಗಡ್ಡೆ ಕೇರಿ, ತ್ರಿಸೂಲೇಶ್ವರ ದೇವಸ್ಥಾನದ ವಸ್ತುಗಳಿಗೆ ತಾಗಿರುವ ತೋಡುಗಳಲ್ಲಿ ಕಾಫಿ ಗೋಣಿಗಳು ಬಿದ್ದಿರುತ್ತವೆಯೆಂತಲೂ ಬಂದರಿನ ಒಂದು ಅಂಗಡಿಯಲ್ಲಿ ಸುಮಾರು ೧೦ ಖಂಡಿ ಕಾಫಿಯು ಸಿಕ್ಕಿರುತ್ತದೆಂಬದಾಗಿಯೂ ಕೇಳುತ್ತೇವೆ

ಇಲ್ಲಿಯ ಸಿಟಿ ಪೋಸ್ಟಾಫೀಸಿನ ಕನ್ನಡಭಾಷೆ ಬಲ್ಲವರಾದ ಪೋಸ್ಟು ಮಾಸ್ತರರು ವರ್ಗಾಯಿಸಲ್ಪಟ್ಟು ಕನ್ನಡ ಭಾಷೆಯರಿಯದ ಮಲಯಾಳ ಭಾಷೆಯ ಒಬ್ಬ ಪೋಸ್ಟ ಮಾಸ್ತರರು ಬಂದಿರುವರು ಸಿಟಿ ಪೋಸ್ಟು ಆಫೀಸಿಗೆ ಬರುವ ಆಜುಬಾಜಿನ ಜನರು ಮಲಯಾಳ ಭಾಷೆ ವ ಇಂಗ್ಲಿಷ್ ಭಾಷೆಯ ಹೆಚ್ಚಿನ ಮಾಹಿತಿ ಇಲ್ಲದವರಾಗಿರುವುದರಿಂದ ಈ ಪೋಸ್ಟು ಮಾಸ್ತರರ ಕೂಡೆ ವ್ಯವಹಾರ ನಡಿಸಲು ಅನನುಕೂಲವಾಗಿ ತೊಂದರೆ ಪಡಬೇಕಾಗಿದೆ ಆದುದರಿಂದ ಇಲಾಖೆಯವರು ಇಲ್ಲಿ ಕನ್ನಡ ಬಲ್ಲಾದ ಪೋಸ್ಟು ಮಾಸ್ತರರನ್ನೇ ಇರಗೊಡಿಸುವುದು ವಿಹಿತವು

ಹಂಪನಕಟ್ಟೆಯ ಪೋಸ್ಟು ಆಫೀಸಿನ ಮೆಟ್ಟಲುಗಳನ್ನು ಕಡೆದು ಹಾಕಿದ್ದರಿಂದ ಉಂಟಾಗುತ್ತಿದ್ದ ತೊಂದರೆಯನ್ನು ಹಿಂದೆ ತಿಳಿಸಿತ್ತಷ್ಟೆ ಪರಂತು, ಈಗ ಮೆಟ್ಟಲುಗಳು ಕಟ್ಟಲ್ಪಡುತ್ತಿರುವುದರಿಂದ ಈ ಸಂಕಷ್ಟವು ನಿವಾರಣೆಯಾದಂತಾಯಿತು

ರಜೆಯ ಮೇಲೆ ಕೊಯಮುತ್ತೂರಿಗೆ ಹೋದ ಜಿಲ್ಲಾ ಕಲೆಕ್ಟರ ದೊರೆಗಳವರು ೨೨ನೇ ಮೈಲ್ ಬಂಡಿಯಲ್ಲಿ ಹಿಂದೆರಳಿ ಬಂದಿರುವರು.

ಈ ವರ್ಷ ತಾ. ೨೨ರ ವರೆಗೆ ಇಲ್ಲಿ ೭೮ ೦೫ ಅಂಗುಲ ಮಳೆಗರೆದಿರುವುದು.

ಕನ್ನಡ ರೋಮನ್ ಕೆಥೋಲಿಕ ಸಮುದಾಯದ ಶಾಸ್ತ್ರಾಭಿವೃದ್ಧಿಯನ್ನೂ ವಿದ್ಯಾ ಪ್ರಚಾರಣೆಯನ್ನೂ ಸುಧಾರಣಾ ಕೆಲಸವನ್ನೂ ನಡಿಸುವ ಪ್ರಾಮುಖ್ಯ ಉದ್ದೇಶಗಳಿರುವ ಕೆನಡಾ ಕೆಥೋಲಿಕ ಎಸೋಸಿಯೇಶನ್ ಸಂಘವು ಮೊನ್ನೆ ಆದಿತ್ಯವಾರ ತಾ ೧೯ನೇಗೆ ಕೆಥೊಲಿಕ ಯೂನಿಯನ್ ಕ್ಲಬ್ಬಿನಲ್ಲಿ ಸಮಾಜದ ಮುಂದಾಳುಗಳ ಅಧಿಕ ಮಾನ್ಯ ಬಿಶೋಪ್ ದೊರೆಗಳವರ ಅಧ್ಯಕ್ಷತೆಯಲ್ಲಿ ನೆರೆದು ಬಂದ ಸಭೆಯಿಂದ ಸ್ಥಾಪಿಸಲ್ಪಟ್ಟಿತು ರೂ. ೫೦೦ ವಂತಿಗೆ ಕೊಡುವ ೭ ಜನ ಸ್ಥಾಪಕರೂ, ರೂ ೨೦೦ ಕೊಡುವ ೭—೮ ಜನ ಆಶ್ರಯದಾತರೂ, ವರ್ಷ ೧ಕ್ಕೆ ರೂ ಒಂದು ವಂತಿಗೆ ಕೊಡುವ ಒಂದನೇ ವರ್ಗದ ಮೆಂಬರರೂ, ರೂಪಾಯಿ ೩೦ ವಂತಿಗೆ ಕೊಡುವ ಲ್ಯಾಫ್ ಮೆಂಬರ್ಸರೂ ಕೂಡಿ ಸುಮಾರು ೧೦೦ ಮಂದಿ ಇತರರೂ ಈ ಸಂಘಕ್ಕೆ ಕೂಡಲೆ ಸೇರಿದರು ಈ ಸಂಘದ ಆಡಳಿತೆ ಸಭೆಯನ್ನು ಚುನಾಯಿಸುವ ಬಗ್ಗೆ ಇದೇ ಆದಿತ್ಯವಾರ ತಾ ೨೬ನೇ ಸಾಯಂಕಾಲ ೫—೩೦ಕ್ಕೆ ಸದರಿ ಕ್ಲಬ್ಬಿನಲ್ಲಿ ಈ ಸಂಘದ ಪ್ರಥಮ ವರ್ಷದ ವಂತಿಗೆಯನ್ನು ವಸೂಲು ಕೊಟ್ಟ ಮೆಂಬರುಗಳ ಸಭೆಯು ಪುನಃ ಕೂಡುವದು ಮೆಂಬರಗಳನ್ನು ಒದಗಿಸುವ ಬಗ್ಗೆ ಸದ್ಯಕ್ಕೆ ಸೆಕ್ರೆಟರಿಯಾಗಿರುವ ವಕೀಲರಾದ ಮೆ| ಪಾಸ್ಕಲ್ ಸೋಜರವರ ಜನರೂ, ಪ್ರೆಸಿಡೆಂಟರ ಜನರೂ, ಊರಿನ ಎಲ್ಲಾ ಭಾಗಗಳಿಗೆ ಹೋಗಿರುವರು ಬಿಶೋಪ ದೊರೆಗಳವರೇ ಈ ಸಂಘದ ಪ್ರೆಸಿಡೆಂಟರಾಗಿರುವರು ಎಂತ ಒಬ್ಬ ಬಾತ್ಮೀದಾರರು ತಿಳಿಸಿರುವರು

ಇಲ್ಲಿಯ ಸಬೋರ್ಡಿನೇಟ್ ಜಡ್ಜರಿಗೆ ಮಂಗಳೂರು ತಾಲೂಕಿನ ೧೦೦—೫೦೦ ರೂಪಾಯಿ ವರೆಗಿನ ಸ್ಮಾಲ್‌ಕೋರ್ಸ್ ವ್ಯಾಜ್ಯಗಳನ್ನು ತನಿಕೆ ನಡಿಸುವ ಹುಕುಮ ದೊರಕಿದೆ

ಮಂಜೇಶ್ವರದ ಶ್ರೀಮದನಂತೇಶ್ವರ ದೇವಸ್ಥಾನದ ಮೊಕ್ತೇಸರರ ಮತ್ತು ಪಾರಪತ್ಯಗಾರರ ಮೇಲೆ ಇಲ್ಲಿಯ ಸಬ್ ಕೋರ್ಟಿನಲ್ಲಿ ವ್ಯಾಜ್ಯವು ದಾಖಲಾಗಿರುವದೆಂಬದಾಗಿ ತಿಳಿಯುತ್ತೇವೆ

ಹರಪನಹಳ್ಳಿ, ಜಿಲ್ಲಾ ಬಳ್ಳಾರಿ ಮೆನೇಜರ್ ಭಿಷಗ್ಮಣಿ ಔಷಧಾಲಯ, — ಇವರಿಂದ ಕಳುಹಿಸಲ್ಪಟ್ಟ ಪ್ರತ್ಯಕ್ಷ ಆರೂಢ ಪ್ರಶ್ನ ಚಂದ್ರಿಕೆ ಎಂಬ ಜಾಹೀರಾತನ್ನು ಈ ಸಂಚಿಕೆಯೊಂದಿಗೆ ಇಟ್ಟಿರುವೆವು

—o—

ಓಂಟಿವಾಳ ಇಲ್ಲಿ ಪರಸ್ಪರ ಸಹಾಯಕ ಸಂಘ ಶಾಖೆಯು ಸ್ಥಾಪಿಸಲ್ಪಟ್ಟು, ೭ ತಿಂಗಳುಗಳ ಕಾಲವು ದಾಟುತ್ತಲಿದೆಯಷ್ಟೆ! ಇದರಲ್ಲಿ ಮೊತ್ತ ಮೊದಲು ಸಂಘಕ್ಕೆ ವಿಶೇಷ ದೂಷಣೆಯು ಬರುತ್ತಲಿದ್ದರೂ ಈಗ ಈ ಸಂಘದಿಂದ ೮೫೩ ಸಾಲಗಳನ್ನು ಪಡೆದ ೩೦೩ ಮೆಂಬರಿರುವರು ಸಂಘದ ವಹಿವಾಟನ್ನು ರೂ ೨೦,೦೦೦ದ ವರೆಗೆ ಏರಿಸುವ ಹಾಗೆ ಅಪ್ಪಣೆ ದೊರೆತಿರುವುದು ಸಂಘಕ್ಕೆ ಬರತಕ್ಕ ಹಣವು ರೂ ೧೩,೧೨೪ ಸಂಘದಿಂದ ಸಲ್ಲತಕ್ಕದು ರೂ ೧,೨೭೦೦ ಈ ತನಕ ಒಟ್ಟಿಗೆ ೨೯೪ ಸಾಲಗಳು ಕೊಡಲ್ಪಟ್ಟವು ಇವುಗಳಲ್ಲಿ ರೂಪಾಯಿ ೫೦ಕ್ಕೆ ಕಡಮೆಯಾದ ಮೊಬಲಗು ಸಾಲಗಳು ೨೦೦! ಬಡವರಾದ ದಿನಗೆಲಸಮಾಡಿ ಕಷ್ಟದಿಂದ ಜೀವಿಸುವ ಎಷ್ಟೋ ಜನರಿಗೆ ಸಂಘದಿಂದ ಸಹಾಯ ದೊರೆತಿದ್ದೆಂದು ಇದರಿಂದ ವ್ಯಕ್ತವಾಗುವುದು ಕ್ಲುಪ್ತವಾದ ಸಮಯಕ್ಕೆ ಹಣವನ್ನು ತಂದು ಕೊಟ್ಟವನೊಬ್ಬನೂ ಇಲ್ಲ ಸಾಲವನ್ನು ಪುನಃ ತೆರಲು ತಮಗಿರುವ ಜವಾಬುದಾರಿಯನ್ನು ಎಲ್ಲರೂ ಸರಿಯಾಗಿ ತಿಳಿದುಕೊಂಡಿರುವರೆಂಬುದು ಸಂತೋಷಕರವಾದುದಾಗಿದೆ ಸಾಲಗಳನ್ನು — ಇದಕ್ಕೆ ಮೊದಲಾದರೆ — ಬಗೆ ಬಗೆಯ ಬಡ್ಡಿ ಧಾರಣೆಯಿಂದ ಪಡೆದು ಚಿಕ್ಕ ವ್ಯಾಪಾರವುಳ್ಳವರೂ ಬೇಸಾಯಗಾರರೂ ಹೆಚ್ಚಾಗಿ ಸಾಧಾರಣ ಶೇಕಡಾ ೧೫ರಂತೆ ಬಡ್ಡಿ ಕೊಡುವುದೂ ವಾಡಿಕೆಯಾಗಿದ್ದಿತ್ತು ಎಷ್ಟೋ ಹೊಲಿಗೆಗಾರರು ಈ ಅಲ್ಪ ಬಡ್ಡಿ ಸಾಲಗಳ ಮೂಲಕ ಯಂತ್ರ ಸಹಾಯದಿಂದ ಈಗ ಹೊಲಿಗೆ ಕೆಲಸಮಾಡಿ ಚೆನ್ನಾಗಿ ಬಾಳಲುಪಕ್ರಮಿಸಿರುವರು ಎಷ್ಟೋ ಬೇಸಾಯಗಾರರು ಈಗ ಸಂಘದಿಂದ ಪಡೆದ ಹಣದಿಂದ ಸಂತುಷ್ಟರಾಗಿಯೂ, ಸಮಾಧಾನಚಿತ್ತರಾಗಿಯೂ ಬೇಸಾಯ ಮಾಡುತ್ತಿದ್ದಾರೆ ಹೀಗಿದ್ದರೂ ಸಂಘದ ನಷ್ಟೆಯು ೨೬೯ ರೂಪಾಯಿಗಳು ಪೈಕಿ ಪುತ್ತೂರು ಬ್ಯಾಂಕಿನಿಂದ ಷೇರುಗಳನ್ನು ಪಡೆದುದರ ಡಿಪಾಜಿಟು ನೂರು ರೂಪಾಯಿಗಳನ್ನು ಕಳೆದರೆ ಏನ ೧೬೯ ರೂಪಾಯಿ ಮುನಾಫೆ ಉಳಿದಂತೆ ತೋರುವುದು ತೃಪ್ತಿಕರವಾದುದಾಗಿದೆ ಈಗ ಪಂಚಾಯತ ಸಭೆಯ ೫ ಮೆಂಬರರನ್ನು ಹೆಚ್ಚಿಸಿ ೭ ಮೆಂಬರರಾಗಿ ಮಾಡುವಂತೆಯೂ, ಸಂಘದ ಷೇರುಗಳನ್ನು ೧೦೦೦ದಿಂದ ಒಂದೂವರೆ ಸಾವಿರಕ್ಕೆ ಹೆಚ್ಚಿಸುವಂತೆಯೂ ಅನುಜ್ಞೆಯನ್ನು ಕೇಳಿಕೊಳ್ಳಬೇಕಾಗಿದೆ ಈ ಸಂಘದಲ್ಲಿ ಧನಿಕರು ರೂ ೬೭೦೦ರನ್ನು ಡಿಪೋಜಿಟ್ಟಾಗಿ ಇಟ್ಟಿರುವದಲ್ಲದೆ, ಸದಸ್ಯರು ಇಡದಿದ್ದುದರಿಂದ, — ಈಗ ಅಲ್ಲಲ್ಲಿ ತೋರುವ ವಿವಾಹ ಫಂಡುಗಳಿಗೆ ಹಣ ತೆತ್ತು ಕೊನೆಗೆ ನಿರಾಶೆಯನ್ನು ತಾಳಿ ಕ್ಲೇಶವನ್ನು ಅನುಭವಿಸುವುದಕ್ಕಿಂತ, — ಇದರಲ್ಲೇ ತಿಂಗಳಿಗೆ ರೂಪಾಯಿ ಒಂದರಂತೆಯಾದರೂ ನಿಕ್ಷೇಪಮಾಡಿಡುವುದಾದರೆ, ಅತ್ಯುಪಕಾರವನ್ನು ಹೊಂದಬಹುದಾಗಿದ್ದಿತು. ಊರವರೂ ಇನ್ನೂ ಹೆಚ್ಚಾಗಿ ಡಿಪಾಜಿಟ್ಟುಗಳನ್ನು ಇಡುವುದು ಒಳ್ಳೇದೆಂದು ಬೇರೆ ಸೂಚಿಸುವ ಆಗತ್ಯವಿಲ್ಲ ಈ ಬಗೆಯಲ್ಲಿ ಸಂಘವನ್ನು ಉಚ್ಛ್ರಸ್ಥಿತಿಗೆ ತಂದಿರಿಸಿದ, ರಾ| ಮೊಕ್ತೇಸರರಿಗೂ ಅಧ್ಯಕ್ಷರಾಗಿ ಕಾರ್ಯನಿರ್ವಾಹ ಮಾಡುವ ರಾ| ಕೊಂಬ್ರಬೈಲ ಕೃಷ್ಣರಾಯರಿಗೂ ಯಥಾರ್ಥವಾಗಿಯೂ ವಂದಿಸಬೇಕಾಗಿದೆ

ಒಬ್ಬ ಕಾಸರಗೋಡಿನ ಬಾತ್ಮೀದಾರರು ವಿವಾಹ ವಿಮೋ ಸಂಘದ ಕುರಿತು ಪ್ರಲಾಪಮಾಡಿದರು ನಮ್ಮಲ್ಲಿಯ ಕೆಲವರೂ ವಿಲಾಪಮಾಡ ತೊಡಗಿರುವರು ಏಜಂಟರು ಬಂದು ಅಂದ ಚಂದವಾಗಿ ಮರುಳಿಸಿ, ಭಾಪಾ ಫೋಮ್‌ಗಳನ್ನು ಭರಾಯಿಸಿ, ಸಲ್ಲಾಪಮಾಡುತ್ತಿರುವಾಗ, ಈ ಬಗೆಯ ಸಂಘಗಳ ಪ್ರತಾಪವೆಷ್ಟಾಗಿರಬಹುದೋ ಎಂದು ಕನ್ಯಾಪಿತರನೇಕರು ಸಂತೋಷದಿಂದ ಸುಖಸಂಗೀತಾಲಾಪನೆಮಾಡಹತ್ತಿದರು ಈ ಆ ಸಂಘವು ಇದೆಯೊ, ಇಲ್ಲವೊ, ಆಗಿ ಹೋಯಿತೊ, ಎದ್ದಿತೊ, — ಯಾರರಿದಿರುವರು? ಕಾಗದಗಳನ್ನು ಬರೆದರೆ, ಉತ್ತರಗಳೇ ದೊರೆವುದಿಲ್ಲ ದೊರೆತರೂ, ಆ ರೂಲು ಈ ರೂಲು ಎಂದು ಈ ಬಗೆಯ ಸಂಘಗಳ ಮಾಮೂಲೀ ಕಾಯಿದೆಯು ತೋರುವುದು ನಮ್ಮನ್ನು ಕುರಿ ಜನರೆಂದು ಅನ್ಯರು ಕರೆವುದು ತಪ್ಪೇ? ನಮ್ಮ ಮೈಯ ಉಣ್ಣೆಯಿಂದ ಮತ್ತೊಬ್ಬ ಪರದೇಶೀಯನಿಗೆ ಹೊದೆದುಕೊಳ್ಳಲು ಕಂಬಳಿಯನ್ನು ಕೊಡುವೆವಲ್ಲವೆ ಪರಸ್ಪರ ಸಹಾಯ ಸಂಘದಲ್ಲಿ — (ಸೇವಿಂಗ್ಸ ಬ್ಯಾಂಕಿನಲ್ಲಿ) ಡಿಪೋಜಿಟ್ಟು ಇಡದೆ, ಕಡೆಗೆ ಅರಣ್ಯರೋದನಮಾಡುತ್ತಿದ್ದೇವೆ' ಆಹಹ' ಮಗಳಿಗೆ ಮದುವೆಮಾಡುವುದೇ ಕಷ್ಟ' ಅದರಲ್ಲೂ ಇನ್ನೊಂದು ಸವಿಬಗೆಯ ನಷ್ಟ'' ಇನ್ನಾದರೂ ಏಜಂಟ ಮಹಾಶಯರು ಪಾಪದ ಕುರಿಮಂದೆಯನ್ನು ಬಲಿಗೆ ಕೊಂಡೊಯ್ಯದಿರುವುದು ಪುಣ್ಯಕರವಾಗುವುದು

ಕಂಚುಗಾರನೊಬ್ಬನು ಒಬ್ಬ ಮಾಪಿಳ್ಳೆ ಯುವಕನನ್ನು ತಿವಿದು ಕೊಂದು ಒಬ್ಬ ಹೆಂಗಸನ್ನೂ ಚೆನ್ನಾಗಿ ಗಾಯಪಡಿಸಿ, ತಾನು ಈಗ ಕೈದಿಯಾಗಿರುವನು ಪ್ರೇಮದ ವಾಸನೆಯೆ ಈ ವಿಷಯದ ಕಾರಣವಂತೆ'

ಹೊಸದುರ್ಗ — ಇಲ್ಲಿಯ ಪೇಟೆಯಲ್ಲಿ ರಾತ್ರಿ ದೀಪಸ್ತಂಭಗಳು ಇಲ್ಲದಿರುವುದರಿಂದ ರೈಲ್ವೆ ಗಾಡಿಯಿಂದ ಸಾಯಂಕಾಲ ಅಲ್ಲಿಳಿಯುವ ಪ್ರಯಾಣಿಕರು ಬಹಳ ಕಷ್ಟಪಡಬೇಕಾಗಿದೆ ಈ ವಿಷಯ ಮೇಲಾಧಿಕಾರಿಗಳೂ ರಾ| ಹಟ್ಟಂಗಡಿ ಶಂಕರರಾಯರು ಡ್ಯುಪಿಟಿ ಕಲೆಕ್ಟರಾಗಿದ್ದ ಕಾಲದಲ್ಲಿ ಕೆಲವು ದೀಪಸ್ತಂಭಗಳನ್ನು ಇಡಿಸುತ್ತೇನೆಂದು ಮಾತುಕೊಟ್ಟ, ತಾರ್ವಾಡ ಯಜಮಾನರೊಬ್ಬರೂ ನಿಗಾಕೊಟ್ಟು ಬೇಗನೇ ರಾತ್ರಿ ದೀಪಗಳನ್ನು ಇಡಿಸುತ್ತಿದ್ದರೆ ಪ್ರಯಾಣಿಕರಿಗೆ ಮಹದುಪಕಾರವಾಗುತ್ತಿತ್ತು

ವಿವಿಧ ವಿಷಯ.

'ಟೆಫ್‌ಗ್ರಾಸ್'ಎಂಬ ಹುಲ್ಲಿನ ಮೂಲಸ್ಥಾನವು ಅಬಸೀನಿಯವೆಂಬ ದೇಶವಾಗಿದೆ ಈ ದೇಶದವರು ಅದನ್ನು ಗುಡ್ಡ ಪ್ರಾಂತ್ಯಗಳಲ್ಲಿ ಬೆಳಸಿ ಆಹಾರ ಪದಾರ್ಥವಾಗಿ ಪ್ರಯೋಗಿಸುತ್ತಿದ್ದರು ಈಚೆಗೆ ದಕ್ಷಿಣ ಆಫ್ರಿಕದ ಕೆಲವು ರೈತರು ಆ ಹುಲ್ಲಿನ ಬೀಜವನ್ನು ತರಿಸಿ, ಬೀಜ ಬಿತ್ತಿ ಮೊಳೆತ ಹುಲ್ಲು ದನಕರುಗಳಿಗೆ ಉತ್ತಮವೆಂದು ತಿಳಕೊಂಡಿರುವರು ಈ ಹುಲ್ಲು ಬೇಗನೇ ಬೆಳೆಯುವಂಥಾದಾಗಿದೆ ಬೇಸಿಗೆ ಕಾಲದಲ್ಲಿ ಬೀಳುವ ಒಂದೆರಡು ಮಳೆಯು ಇದರ ಬೆಳವಣಿಕೆಗೆ ಸಾಕು ಬೀಜ ಬಿತ್ತಿದ ೭ ವಾರಗಳಲ್ಲಿ ಇದನ್ನು ಕತ್ತರಿಸಬಹುದು ಒಂದು ಸಾರಿ ಕತ್ತರಿಸಿದೊಡನೆ ಅಲ್ಲಿಯೇ ಪುನಹ ಬೆಳೆದು ಸ್ವಲ್ಪ ಕಾಲದೊಳಗೆ ತಿರಿಗಿ ಉಪಯೋಗಕ್ಕೆ ಒದಗುತ್ತದೆ ೪ ಅಡಿ ಎತ್ತರಕ್ಕೆ ಬೆಳೆಯುತ್ತದೆ ಒಂದು ಎಕ್ರೆಯಲ್ಲಿ ೩ ಟನ್ ಹುಲ್ಲು ಸಿಗುತ್ತದೆ ಈ ಹುಲ್ಲು ಪೌಷ್ಟಿಕ ಆಹಾರಾಂಶಗಳು ಕೂಡಿದ್ದಾಗಿದೆ. ಸೇಕಡಾ ೮ ೨ ಲೋಳೆ, ೭೮ ೧ ಹಿಟ್ಟು, ೨ ೮ ಎಣ್ಣೆ ಉಳ್ಳದ್ದಾಗಿದೆ ದನ, ಕುದುರೆ, ಕುರಿಗಳು ಇದನ್ನು ಬಹಳ ಆತುರದಿಂದ ತಿನ್ನುತ್ತವೆ ದನದ ಹಾಲು ಈ ಹುಲ್ಲು ಪ್ರಯೋಗಿಸಿದರಿಂದ ಬಹಳವಾಗಿ ಹೆಚ್ಚಿದೆಂದು ದಕ್ಷಿಣ ಆಫ್ರಿಕದ ಒಬ್ಬ ಹೈನದ ಯಜಮಾನನು ಹೇಳುವನು "ಟೆಫ್" ಹುಲ್ಲಿನ ಬೀಜವನ್ನು ಒದ್ದೆಯಾ ಒಣ ಭೂಮಿಯಲ್ಲಿ ಬಿತ್ತಬಹುದು ಇತರ ಹುಲ್ಲು ಬೆಳೆಯದ ಸ್ಥಳದಲ್ಲಿ ಈ ಹುಲ್ಲು ಸೊಗಸಾಗಿ ಬೆಳೆಯುತ್ತವೆ. ನಮ್ಮ ಹಿಂದೂಸ್ಥಾನಕ್ಕೆ ಇದರ ಬೀಜವನ್ನು ತಂದು ಬಿತ್ತಿದರೆ ರೈತರಿಗೆ ಹೆಚ್ಚಿನ ಪ್ರಯೋಜನವಾದೀತು.

ಮುಳಿಯಿಲ್‌ರವರ ದಿವ್ಯೌಷಧಗಳು.

ಮಸ್ತಕಾಮೃತ ತೈಲ—ಕುಪ್ಪಿ 1ಕ್ಕೆ ಕ್ರಯ 10 ಆಣೆ. ಇದು ಎಲಾ ತರದ ಶಿರೋರೋಗ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಬಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ.

............ಮಸ್ತಕಾಮೃತ ತೈಲವನ್ನು ಕಳೆದ ಬಹು ವರುಷಗಳಿಂದ ಉಪಯೋಗಿಸಿಕೊಳ್ಳುತ್ತಿರುವುದರಿಂದ ನನ್ನ ಮಿದುಳಿಗೆ ಹೆಚ್ಚು ಬಲವೂ ಆರೋಗ್ಯವೂ ಬಂದಿದೆ. ಈ ದಿವ್ಯ ತೈಲ ಕ್ಕೋಸ್ಕರವಾಗಿ ನಾನು ಕೃತಜ್ಞನಾಗಿದ್ದೇನೆ; ನನ್ನ ನೇತ್ರೇಂದ್ರಿಯಗಳು ಪ್ರಕಾಶಿಸುವವು.

ರೆವೆರೆಂಡ್ ಇ ಗೋನ್ಸ್,
ತಾ. 15—4—13 ಮೂಲ್ಕಿ.

ಮುಳಿಯಿಲ್ಸ್ ಹೇರ್ ಓಯ್ಲ್—ಕ್ರಯ 12 ಆಣೆ. ಕೂದಲಿಗೆ ಅಮೃತದಂತಿರುವ ನಿಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಇನ್ನೊಂದು ಕುಪ್ಪಿ ವಿ. ಪಿ. ಮೂಲಕ ರವಾನಿಸಿರಿ.

ಮಿಸಿಸ್. ವೈ ಕುರಿಯಾನ್,
ತಾ. 23—5—13. ಗ್ರೀನ್‌ವಿಲ್ಲಾ, ಕಲ್ಲಿಕೋಟೆ.

............ಮುಳಿಯಿಲ್ಸ್ ಹೇರ್ ಓಯ್ಲ್ ಉಪಯೋಗಿಸಿದಂದಿನಿಂದ ನನ್ನ ತಲೆನೋವು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ನಿಬಿಡವಾಗಿ ಬೆಳೆದಿರುವವು. ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ. ಇನ್ನೊಂದು ಡಜನ್ ಕುಪ್ಪಿಗಳನ್ನು ಆದಷ್ಟು ತ್ವರ್ಯದಲ್ಲಿ ರವಾನಿಸಿರಿ.

ಮಿಸ್. ಎಸ್. ಸೋನ್ಸ್,
21ನೇ ಒಕ್ಟೋಬರ 1913. ಸ್ಕೂಲು ಮಿಸ್ತ್ರೆಸ್, ಮಂಗಳೂರು.

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ. ಎಲ್ಲಾ ತರದ ಛಳಿ ಜ್ವರಕ್ಕೆ ರಾಮಬಾಣದಂತಿದೆ.

ಚತುರ್ಥಿ ಮಾತ್ರೆಯನ್ನು ತಕ್ಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ. ಇದು ಒಳ್ಳೇ ಗುಣಕರವೆಂಬದಾಗಿ ಹೇಳುವರೆ ಅನುಮಾನವಿಲ್ಲ.

ಎ. ಪೊಕ್ರು ಹೆಗ್ಗಡೆ,
ತಾ. 13—6—13. ಕುಕ್ಕಳೆ, ಕಾರ್ಕಳ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯುತ್ತವೆ ರೋಗದಿಂದ ಮುರಿದು ಹೋದ ಅಥವಾ ಒಣಗಿದ ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ತೋರುತ್ತಿ ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ "ಜಾಡಣಿ"ಯು ಕ್ರಮವನ್ನು ಅನುಸರಿಸುತ್ತದೆ, ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ, ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ, ಗತಿಯು ದೃಢವಾಗುತ್ತದೆ ಶೀಲವು ಪ್ರಸನ್ನವಾಗುತ್ತದೆ, ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ, ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ, ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಜಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ 1 4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು

1 ದಿವಾಕರ ಕೃಷ್ಣಾಜಿ ದಾತಾರ, ರಾ ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ — «ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ «ಶಕ್ತಿವರ್ಧಕ" ಗುಳಿಗೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ, ಅವುಗಳ ಇನ್ನೊಂದು ದಾಟಿಯನ್ನು ಕಳುಹಿಸಿಕೊಡಿರಿ.

2 ಶಿವರಾಮು ಸಖಾರಾಮು, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ — ನಾನು ತಮ್ಮಿಂದ ಪ್ರೊ. ಜೇಮ್ಸರ «ವಿದ್ಯುತ್ ಶಕ್ತಿವರ್ಧಕ" ಗುಳಿಗೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು ಅದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟೇಲ್, ಪನವೇಲ್ — «ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಳಿಗೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ತಿರು ರವಾನಿಸಿರಿ."

4 ವಿ. ಆರ್ ಚಾಕ್ಕೋ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟಯಮ್, ತ್ರಾವಣಕೂರ್ ರಾಜ್ಯ. — «ಪ್ರೊ. ಜೇಮ್ಸರ ಗುಳಿಗೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡಿದ್ದೆನ್ನಷ್ಟೇ. ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮಾನಜೀ ನರಸಿಂಗರಾವ್, ಸಂಸ್ಥಾನ ಪಟಿಯಾಲ. — ಪ್ರೊ. ಜೇಮ್ಸರ ಗುಳಿಗೆಗಳಿಂದ ನಾನು ಹೆಚ್ಚಾದ ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಸ್ಟೋರ್ಸ್, ಮಂಗಳೂರು ದ. ಕನ್ನಡಾ.**

ಕರ್ಣಾಟಕ ವನೌಷಧಾಲಯ ಶಿರಸಿ.

ಔಷಧಗಳ ಗುಣದ ಬಗ್ಗೆ ಡಾಕ್ತಾರ ಮುಂತಾದವರ ಕಡೆಯಿಂದ ಸರ್ಟಿಫಿಕೇಟುಗಳು ಶಿಕ್ಕಿರುತ್ತವೆ.

೧. ರೋಗನಾಶಕ. ರಕ್ತ, ಧಾತು ಶುದ್ಧಿ ವ ವೃದ್ಧಿಕರ ಲೋಹ ಮಿಶ್ರಿತ ಗುಳಿಗೆ ೪೨ ಟ. ಖ. ಸಹ ಕ್ರಯ ರೂ ... ೨—೪—೦
೨. ಪ್ರವಾಳ ಕೇಶರ ಅಮರಸತ್ವ ಶಿಲಾಜಿತು ವ ವನಸ್ಪತಿ ಮಿಶ್ರಿತ ಧಾತುಪೌಷ್ಟಿಕ ಶಕ್ತಿವರ್ಧಕ ಗುಳಿಗೆ ೪೨ ಕ್ರಯ ರೂ ೨—೪—೦
೩. ಗರ್ಮಿ ರೋಗನಾಶಕ ಗುಳಿಗೆ. ೭ ದಿವಸದಲ್ಲಿ ಖಚಿತ ಗುಣ ೪೨ ಗುಳಿಗೆ ಡಬ್ಬಿ ೧ಕ್ಕೆ ಕ್ರಯ ರೂ. ... .. ೩—೪—೦
೪. ಟಾಕಿಚಿಬ್ಬೆನಾಶಕ ಮಲಮು. ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೫. ವಾತನಾಶಕ ತೈಲ. ಯಾವದೇ ತರದ ವಾತವಿದ್ದರೂ ಗುಣ ಕುಪ್ಪಿ ೧ಕ್ಕೆ ಕ್ರಯ ರೂ. . . . ೧—೪—೦
೬. ಭೃಂಗಾಮ್ಲಲಕಾದ್ಯ ತೈಲ. ಶಿರೋರೋಗ ನೇತ್ರರೋಗ ನಿವಾರಣ ಅಕಾಲದಲ್ಲಿ ಆದ ಹಣ್ಣುಕೂದಲು ಕಪ್ಪಾಗುತ್ತವೆ ಕುಪ್ಪಿ ೧ಕ್ಕೆ ಕ್ರಯ ರೂ. . .. ೧—೪—೦
೭. ಜಂಬೀರ ತೈಲ ಮೇಲಿನಂತೆ ಗುಣ ಕುಪ್ಪಿ ೧ಕ್ಕೆ ಕ್ರ ರೂ ೧—೨—೦
೮. ಮೂಲವ್ಯಾಧಿ ಹರಚೂರ್ಣ. ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೯. ಕಫದಮ್ಮುಹರ ಚೂರ್ಣ ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೧೦. ಇಸುಬುರುತ್ತಿ ಮಲಮು ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೧೧. ಅಸಾಧ್ಯಕೆಟ್ಟ ಹುಣ್ಣುಗಳಿಗೆ ಮಲಮು .. ೧—೪—೦
೧೨. ಮದನೋದ್ಭವ ಚೂರ್ಣ ಡಬ್ಬಿ ೧ಕ್ಕೆ ರೂ ೧ ೧೨—೦
೧೩. ಅಮೃತಪಾಕ (ವೃದ್ಧನಾದರೂ ಸಶಕ್ತನಾಗುತ್ತಾನೆ) ಅತ್ಯಂತ ಪೌಷ್ಟಿಕ ಶಕ್ತಿವರ್ಧಕ ೪೦ ತೊಲೆ ಡಬ್ಬಿ ೧ಕ್ಕೆ . ೩—೮—೩
೧೪. ಅಮೃತಗುಟಿ ಅಗ್ನಿವೃದ್ಧಿಕರ ಪಿತ್ತಕಫನಾಶಕ ಜ್ವರಗಡ್ಡೆ ಅಸ್ಥಿಗತಜ್ವರ ನಾಶವಾಗಿ ಶಕ್ತಿ ಬರುತ್ತದೆ ದಮ್ಮು ಕೆಮ್ಮು ಗುಣವಾಗುತ್ತದೆ ಗುಳಿಗೆ ೪೨ರ ಕ್ರಯ ರೂ ೨—೦—೦

ಈ ಶಿವಾಯ ಇನ್ನೂ ಅನೇಕ ಔಷಧಗಳು ಶಿಕ್ಕುತ್ತವೆ ರೋಗದ ಲಕ್ಷಣ ಪೂರ್ಣವಾಗಿ ತಿಳಿಸಿದರೆ ಯೋಗ್ಯ ಕಿಮ್ಮತಿಗೆ ಉತ್ತಮ ಔಷಧಗಳು ಕಳುಹಿಸಲಾಗುವದು.

ಪತ್ತೆ:—ಆರ್. ಯಸ್. ವರ್ಧೆ ಕಸಬೆ, ವೈದ್ಯಭೂಷಣ,
ಪೋಸ್ಟು ಶಿರಸಿ, ಜಿಲ್ಲಾ ಉತ್ತರ ಕಾನಡಾ

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು
ಒಮ್ಮೆ ತರಿಸಿಕೊಂಡು ಅನುಭವ ತೆಗೆದು ಕೊಳ್ಳಿರಿ.

ಧಾತುಪೌಷ್ಟಿಕ ವಜ್ರಾಂಗಪಾಕ.

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು, ರಕ್ತದೂಷಿತರೋಗ, ಮೆಂಡುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತಗೆ ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ ೪೦ ತೊಲೆಗೆ ಕ್ರಯ ರೂ ೩—೮—೦, ಒಮ್ಮೇಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ. ೬—೦—೦ ಟಪಾಲು ಖರ್ಚು ಬೇರೆ

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗ ನಾಶಕ ಗುಳಿಗ ೪೨ಕ್ಕೆ ಉತ್ತಮ ಗುಣ ಕ್ರಯ ರೂ ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೨೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೇಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ ೧ ಟಪಾಲು ಖರ್ಚು ಬೇರೆ

ಇನ್ನು ಅನೇಕ ಔಷಧಗಳು ನಮ್ಮ ಕಂಪೆನಿಯಲ್ಲಿ ಶಿಗುತ್ತವೆ ಅನುಪಾನ ಪತ್ರಿಕೆ ಬಂಗಿಯ ಸಂಗಡ ಕಳುಹಿಸುವೆವು

ನಮ್ಮ ವಿಳಾಸ — ವಿ. ಎಸ್ ಮೋಡಕ,
ಕರ್ಣಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ್ ಶಿರ್ಶಿ, ಜಿಲ್ಲಾ ಕಾನಡಾ

ಯುನಿವರ್ಸಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು —191, ಬೌ ಬಜಾರ, ಕಲ್ಕತ್ತಾ

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಸ್ಯೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬದನ್ನು ನೀವು ಅರಿತಿರುವಿರೋ?

ಇನ್ಸ್ಯೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರೀಮಿಯಮ್ ವರಮಾನ, ಮತ್ತು ರಕ್ಷಿತ ಧನ ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ

		ಮೊದಲನೇ ವರ್ಷ	2ನೇ ವರ್ಷ
ಹೊಸಕೇಸ (ಜೀವ)	ರೂ.	13,329—0—0	22,549—0—0
,, (ವಿವಾಹ)	,,	25,670—0—0	38,933—0—0
ಜುಮ್ಲಾ ಕೇಸುಗಳು	,,	38,999—0—0	61,482—0—0
ವಸೂಲಾದ ಪ್ರೀಮಿಯಮ್	,,	1,36,685—0—0	5,34,683—0—0
ಬದ್ಧತೆ ಪತ್ರಗಳು	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	,,	10,000—0—0	50,000—0—0
(ಜನರಲ್) ರಕ್ಷಿತ ದನ	,,	37,220—0—0	23,778—3—2

ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. ಅದು 1912ನೇ ಲ್ಯಾಪ್ ಎಶ್ಯೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿಯನ್ನಿಟ್ಟಿರುವುದು 2 ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು, 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು 4 ರೂ. 3,00,000ಗಿಂತಲೂ ಹೆಚ್ಚಿಗೆ ಭಾದ್ಯತೆಗಳನ್ನು ಕೊಟ್ಟಿದೆ 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ. 9 ಡೈರೆಕ್ಟರು — ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು, 10 ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿಮಾತ್ರವೇ,

ಪತ್ರಗಳ ಧ್ವನಿ

"ಬಂಗಾಳಿ" — 14ನೇ ಜನವರಿ 1914 — ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡ ಇದೆ, ನಾವು ಅದನ್ನು ಓದಿನೋಡಿ ಅದು 61,482 ಪ್ರೊವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು, ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು. ಸಮಾರು 3 ಲಕ್ಷ ಭಾದ್ಯತೆ ಹಣವನ್ನು ಕಂಪೆನಿಯು ಕೊಟ್ಟಿರುವುದು, ಒಳ್ಳೇ ರಕ್ಷಿತ ಧನವಿದೆ, ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟರುಗಳು ಬೇಕಾಗಿವೆ. ಎಲ್ಲಾ ವಿಧದ ಏಜಂನ್ಸಿ ಶರ್ತಗಳಿಗೆ—

ವಿಳಾಸ:— ಲಕ್ಷ್ಮಣ ರಾವ್ ಬ್ರದರ್ಸ್
ಚೀಫ್ ಏಜಂಟ್ಸ್, ಶಿರಸಿ, ಮೈಸೂರು, ಕೊಡಗು, ಪೋಸ್ಟು, ಉಡುಪಿ, ಇವರಿಗೆ ಬರೆದುಕೊಳ್ಳಿರಿ

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ ಎಸ್ ಎ ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆಸ್ಸನ್, ರೊಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ ಎಸ್ ಎ ಬ್ರೆಂಪ್ಟನ್, ಬ್ರೂಕ್ಸ, ಲೂಕಸ್, ಪೆರ್ರಿ ಮುಂತಾದ ಉಪಕರಣಗಳೂ, ಡನ್‌ಲೋಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಸಹಾ ದೊರೆಯುವದು.

2 ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು

3 ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ

K. K. Shanbhog, *Proprietor*
THE CANARA CYCLE MART,
Udipi, S. Canara.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಹು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	A ಅರಗಜ ತೊಲೆ 1ಕ್ಕೆ	2-0-0
ಅಂಬರ್ ಬತ್ತಿ	,, ,,	6-0-0	B ಅರಗಜ ,, ,,	1-0-0
ಕಸ್ತೂರಿ ಬತ್ತಿ	,, ,,	3-0-0	ಕಸ್ತೂರಿ ಬಿಲ್ಲೆ ,, ,,	2-0-0
ಜವಾಜಿ ಬತ್ತಿ	,, ,,	2-0-0	ಜವಾಜಿ ಬಿಲ್ಲೆ ,, ,,	1-0-0
ಕೇದಗಿನ ಬತ್ತಿ	,, ,,	1-8-0	ಕೇಸರಿ ಬಿಲ್ಲೆ ,, ,,	0-8-0
ಪನ್ನೀರ್ ಬತ್ತಿ	,, ,,	0-12-0	ತಾಂಬೂಲ ರತ್ನ ಸೀಸೆ 1ಕ್ಕೆ	0-4-0
ಮಸಾಲಾ ಬತ್ತಿ	,, ,,	0-6-0	ದಶಾಂಗ ಡಬ್ಬಿ 1ಕ್ಕೆ	0-4-0

ಮೇನೇಜರ್, "ಸುಗಂಧವಿಲಾಸ ಮಂಗಳೂರು.

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ

ಅಚ್ಚಾಗುತ್ತಲಿದೆ! ಅಚ್ಚಾಗುತ್ತಲಿದೆ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ಪಂಚಾಂಕೀ ಮರಾಠಿನಾಟಕವು ಈಗ ಅಚ್ಚಿನಲ್ಲಿದ್ದು, ಬರುವ ಆಗೋಸ್ತು ತಿಂಗಳ ಆಖೈರ ಒಳಗೆ ಪ್ರಕಾಶಿತವಾಗುವದು. ಈ ನಾಟಕದ ಕಥಾನಕವು ಚಲೋ ದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕ ಜನರು ಈ ಸಂದರ್ಭವನ್ನು ಬಿಡಲಾಗದು. ಬೆಲೆ 10 ಆಣೆ ಟ. ಹಾ. ಬೇರೆ.

ಜುಲೈ ಆಖೈರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡು, ಓರ್ಡರುಗಳನ್ನು ರಿಜಿಸ್ಟರ್ ಮಾಡುವ ಗ್ರಾಹಕರಿಗೆ 8 ಆಣೆ. ಟ ಹಾ. ಬೇರೆ ಹಣವನ್ನು ಮುಂಗಡವಾಗಿ ಪೋಸ್ಟೇಜು ಸ್ಟಾಂಪುಗಳ ದ್ವಾರಾ ಅಥವಾ ಮನಿಆರ್ಡರು ದ್ವಾರಾ ಕಳುಹಿಸಬೇಕು.

ತ್ವರೆಮಾಡಿರಿ!!!

ಕಲ್ಯಾಣಪುರ ಮಂಗೇಶರಾವ್,

ಕಲ್ಯಾಣಪುರ, ದ. ಕನ್ನಡ.

ಕೃಷ್ಣವಿಲಾಸ ಟ್ರೇಡಿಂಗ್ ಕಂಪೆನಿ,

ಗಿರಗಾಂ, ಮುಂಬಯಿ.

ಮಾನ್ಯ ಗೃಹಸ್ಥರೇ,

ತಮ್ಮ ಕಡೆಯ ಹಲವು ಮಂದಿ ಗೃಹಸ್ಥರು ವರ್ತಮಾನ ಪತ್ರಗಳಲ್ಲಿ ಕೊಟ್ಟಿರುವ "ಪ್ರಸಿದ್ಧ ಪತ್ರಿಕೆ"ಗಳು ಹೊಗಳಿ ವಿವರಿಸುವ ಸಾಮಾನುಗಳನ್ನು ಇಲ್ಲಿಗೆ ಬರೆದು ತರಿಸಿ ಕೊಳ್ಳುತ್ತಿರುವಲ್ಲಿ ಆ ವಸ್ತುಗಳು ಪ್ರಸಿದ್ಧ ಪತ್ರಿಕೆಗಳಲ್ಲಿ ಬರೆದಿರುವಂತೆ ಚನ್ನಾಗಿರುವುದರ ಬದಲಿಗೆ ಬಹಳ ಹಲಕೀ ಸಾಮಾನುಗಳಿದ್ದು ಅವುಗಳಿಗೆ ಕೊಟ್ಟ ಹಣ ದುರ್ವ್ಯಯ ಮಾಡಿದಂತೆ ಆಯಿತಲ್ಲಾ ಎಂದು ವ್ಯಸನಪಡುತ್ತಿರುವದು ನಮ್ಮ ತಿಳುವಳಿಕೆಗೆ ಬಂದದೆ. ನಾವು ಹಲವು ವರ್ಷಗಳಿಂದ ಪರವೂರ ಗೃಹಸ್ಥರಿಗೆ ಇಲ್ಲಿಂದ ಅತ್ಯುತ್ಕೃಷ್ಟವಾದ ವಸ್ತುಗಳನ್ನು ಪೇಟೆಯಿಂದ ಬಹಳ ಅಗ್ಗಳಿಕೆಯಿಂದ ಕಡಿಮೆ ಖರೀದಿಗೆ ಕೊಂಡುಕೊಂಡು ರವಾನಿಸುತ್ತಿರುವುದು ಸಮಸ್ತರಿಗೂ ಗೊತ್ತೇ ಇದ್ದ ವಿಷಯವಾಗಿದೆ. ಆದುದರಿಂದ ಎಲ್ಲಾ ಗೃಹಸ್ಥರು ತಮಗೆ ಮುಂಬಯಿಯಿಂದ ಏನೇ ವಸ್ತುಗಳು ಬೇಕಿದ್ದರೂ ನಮಗೆ ಬರೆದಲ್ಲಿ ನಾವು ಅವುಗಳನ್ನು ಪೇಟೆಯಿಂದ ಕಡಿಮೆ ಕಿಮ್ಮತಿಗೆ ತಕ್ಕೊಂಡು ವಿ. ಪಿ. ಟಪ್ಪಾಲು ಮೂಲಕ ಕಳುಹುವೆವು. ಈ ಸಂಗತಿಯನ್ನು ತಮ್ಮ ಮಿತ್ರಬಾಂಧವರೊಡನೆ ಪ್ರಚಾರಪಡಿಸಬೇಕಾಗಿ ನಾವು ನಮ್ಮ ಎಲ್ಲಾ ಗೃಹಸ್ಥರನ್ನು ಬೇಡುವೆವು.

ರೂಪಾಯಿ ಹತ್ತು ಯಾ ಹೆಚ್ಚಿನ ಬೆಲೆಯ ಸಾಮಾನುಗಳಿಗೆ ಬರಿಯುವವರು ರೂಪಾಯಿ ಒಂದನ್ನು ಮುಂಗಡವಾಗಿ ಕಳುಹಿಸಬೇಕು. ಇದನ್ನು ಜುಮಲಾ ಹಣದಿಂದ ಕಳೆಯುವೆವು.

Krishnavilasa Trading Company,

Girgaum, Bombay.

500 ರೂಪಾಯಿಗಳ ಬಹುಮಾನ!!

ಲೋಕ ಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬು ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಪ್ರಿಯ ಸಹೋದರರೇ, ನಿಮ್ಮ ರಕ್ತವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರ್ಮಾಡಿರುವ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ ಸೇವಿಸಿರಿ!! ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬು ಸಾಲಾಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ, ತಲೆಯ ನೋವೂ

ಇವುಗಳೆಲ್ಲವೂ ಪಂಜಾಬು ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಶೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಕೆಲಸಮಾಡುವುದರಲ್ಲಿ ಉತ್ಸಾಹವೂ, ಧೈರ್ಯವೂ, ಬುದ್ಧಿ ಕುಶಲತೆಯೂ, ಶರೀರ ಕಾಂತಿಯೂ ಉಂಟಾಗುತ್ತದೆ. ಈ ಪಂಜಾಬ್ ಸಾಲಾಮಿಶ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸಕೋಶಾಸವನ್ನು ನಿರ್ಮೂಲಪಡಿಸುತ್ತದೆ.

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಕಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉದುಲುಗಡ್ಡೆ, ಶಾಮುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾಬ್ ಸಾಲಾಮಿಸ್ರೀಯೋ ಅಥವಾ ಬೇರೆ ತರಹದ್ದೋ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರೀಯಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು. 15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2-0-0, ಟಪ್ಪಾಲ್ ಖರ್ಚು ಅಲಾಯಿದ ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ಈಗ ಸಾಲಾಮಿಸ್ರಿ ಧಾರಣೆಯು ಜಾಸ್ತಿ ಆಗಿರುವದರಿಂದ 1—8—0 ಕ್ರಯವಿರುವುದನ್ನು 2—0—0 ಮಾಡಿರುತ್ತೇವೆ.

1. ಧಾತುಪುಷ್ಟಿ ಚೂರ್ಣ:—ಬೆಲೆಯು ಡಬ್ಬಿ 1ಕ್ಕೆ 0—5—0.
2. ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು:—ಸೀಸಾಯಿ 1ಕ್ಕೆ 0-2-0.
3. ವಾತ ನಿವಾರಣ ತೈಲವು:—ಕ್ರಯ ಸೀಸಾಯಿ 1ಕ್ಕೆ 0—4—0.
4. ಹೊಟ್ಟೆ ನೋವಿಗೆ ಔಷಧ:—ಸೀಸಾಯಿ 1ಕ್ಕೆ 0—4—0.
5. ಕೆಮ್ಮಲು ರೋಗಕ್ಕೆ ಔಷಧ:—ಕ್ರಯ ಸೀಸಾಯಿ 1ಕ್ಕೆ 0—4—0.
6. ವ್ರಣಕ್ಕೆ ಔಷಧ:—ಕ್ರಯ ಡಬ್ಬಿ 1ಕ್ಕೆ 0—4—0.
7. ಆಶ್ಚರ್ಯಕರವಾದ ಭೇದಿ ಮಾತ್ರೆಗಳು:—ಕ್ರಯ 0—4—0.
8. ತಲೆನೋವಿಗೆ ತೈಲವು:—ಕ್ರಯ ಸೀಸಾಯಿ 1ಕ್ಕೆ 0—2—6.
9. ಉಷ್ಣಕಾರಕಕ್ಕೆ ಮಾತ್ರೆಗಳು:—ಉಷ್ಣ ಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ ಗುಣವಾಗುವದು. ಕ್ರಯ ಸೀಸಾಯಿ 1ಕ್ಕೆ 1—0—0.
10. ಮೂಲವ್ಯಾಧಿಗೆ ಔಷಧ:—ಮಲದ್ವಾರದಲ್ಲಿ ರಕ್ತ ಸ್ರಾವವೂ, ಮತ್ತು ನೋಳಕೆಯ ಬಾಧೆಯು ಸಹಾ ಸಂಪೂರ್ಣವಾಗಿ ಗುಣಮಾಡುವದು. ಕ್ರಯ ಸೀಸಾಯಿ 1ಕ್ಕೆ 0—8—0.
ಕಣ್ಣಿಗೆ ಸುರ್ಮಾ:—ಕ್ರಯ ಸೀಸಾಯಿ 1ಕ್ಕೆ 0—4—0.
12. ದಂತ ಚೂರ್ಣವು:—ಕ್ರಯ ಡಬ್ಬಿಗೆ 0—1—3.
13. ಕೂದಲು ಬೆಳೆಯುವ ಎಣ್ಣೆ —ಕ್ರಯ ಸೀಸಾಯಿ 1ಕ್ಕೆ 0—4—0.
14. ಆಶ್ಚರ್ಯಕರವಾದ ದ್ರಾವಕ:—ಇದನ್ನು ಸ್ವಲ್ಪ ಮೂಸಿನೋಡುವುದರಿಂದ 1 ನಿಮಿಷದಲ್ಲಿ ತಲೆನೋವು ನಿಲುತ್ತೆ. ಕ್ರಯ ಸೀಸಾಯಿ 1ಕ್ಕೆ 0—4—0.
15. ಕಜ್ಜಿ ಮತ್ತು ಹುಳುಕಡ್ಡಿ ಔಷಧ:—ಕ್ರಯ ಸೀಸಾಯಿ 1ಕ್ಕೆ 0—4—0.
16. ಆಶ್ಚರ್ಯಕರವಾದ ಪೆನ್‌ಸಲ್:—ಈ ಪೆನ್ಸಲಿನಿಂದ ಕಾಗದದ ಮೇಲೆ ಬರೆಯುವಾಗ ಏನೂ ಕಾಣುವದಿಲ್ಲ. ನಂತರ ನೀರನ್ನು ಬರೆದ ಕಾಗದದ ಮೇಲೆ ಸವರಿದರೆ ಎಲ್ಲಾ ಅಕ್ಷರಗಳೂ ಚನ್ನಾಗಿ ಕಾಣುವವು. ನೋಡುವವರಿಗೆ ಬಹಳ ಆಶ್ಚರ್ಯಕರವಾಗಿ ಕಾಣುತ್ತೆ. ಕ್ರಯ 0-4-0.
17. ಬಿಳೇ ಕೂದಲನ್ನು ಕರೇ ಕೂದಲನ್ನಾಗಿ ಮಾಡುವ ದ್ರಾವಕ:—ಈ ಔಷಧವನ್ನು ಒಂದಾವರ್ತಿ ಕೂದಲಿಗೆ ಸವರುವದರಿಂದ ಬಹಳ ದಿವಸಗಳವರೆವಿಗೂ ಕರಿಯ ಕೂದಲುಗಳು ಇರುತ್ತೆ. ಕ್ರಯ 1—0—0.

1—0—0 ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ.

ನಮ್ಮ ಏಜಂಟರು:— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ.
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ ಮಹಡಿ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು.

ಡಬ್ಬಿ 1ಕ್ಕೆ 0—6—0
3 ಡಬ್ಬಿಗಳಿಗೆ 1—0—0.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ.

ಪೆಕೆಟ್ 1ಕ್ಕೆ 0—2—0.
ಡಜನ್ 1ಕ್ಕೆ 1—2—0.

ಮೋಹಿನೀ ತೈಲ.

ಕೂದಲುಗಳು ಕಪ್ಪಾಗಿಯೂ, ನಯವಾಗಿಯೂ, ಉದ್ದವಾಗಿಯೂ ಬೆಳೆಯುವವು. ಇದರಲ್ಲಿ ಸ್ಪಿರಿಟು ವಗೈರೆ ಇಲ್ಲಾ.

ಬಾಟ್ಲ 1ಕ್ಕೆ 0—12—0.
ಮೂರು ಬಾಟ್ಲಿಗಳಿಗೆ 2—2—0.

ಅಮೃತಾಂಜನ

ತಲೆನೋವು, ವಾತ,
ಸಂಧಿ ವಾತ, ಶಿರೋಭಾರ,
ಅರ್ಧಾಂಗವಾಯು,
ಶೀತ, ಕೆಮ್ಮು

ಎದೆ ನೋವು,
ಸೊಂಟದ ನೋವು, ಕಫ,
ಹಲ್ಲು ನೋವು, ಘಾಯ,
ಉರಿ, ಮೊದಲಾದ

ಎಲ್ಲಾ ತರದ ನೋವುಗಳ ಮೇಲೆ ದಿವ್ಯೌಷಧಿ

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಟ್ಟವು.

ಹಿಂದುಸ್ಥಾನದ ಎಲ್ಲಾ ಔಷಧಾಲಯುಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವುದು.

ಬಾಟ್ಲಿ ಒಂದರ ಕಿಮ್ಮತ್ತು 0-8-0 ಡಜನ್ ಒಂದಕ್ಕೆ 5-4-0 ವಿ. ಪಿ. ಪ್ರತ್ಯೇಕ

ಮಂಗಳೂರಲ್ಲಿ.

ಮರ್ಕೆಂಟಾಯಿಲ್ ಮಿಶನ್ ಬ್ರೆಂಚ್.
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ಪರ್ಲ್ಸ ಎಂಡ್ ಸನ್ಸ್.

ಉಡುಪಿ ಮತ್ತು ಕುಂದಾಪುರದಲ್ಲಿ.

ಕೊಚ್ಚಿಕಾರ್ ಬ್ರದರ್ಸ್.
ಕುಮಟೆ ಆರ್. ಪಿ. ಪೈ ಎಂಡ್ ಕಂಪನಿ.

ಅಮೃತಾಂಜನದ ಸೆಂಪಲ್ ಕರಡಿಗೆ ಒಂದಾಣೆಗೆ ಊಲನ್ ಮಾರ್ಕೆಟಿನಲ್ಲಿ ದೊರೆಯುವದು

ಅಮೃತಾಂಜನ ಡಿಪೋ,

109 ಫ್ರೇಯರ್ ರೋಡ್,

ಮುಂಬಯಿ.

Printed & Published by V. S. Kamath at the Mangalore Trading Association's Sharada Press. Mangalore.

Registered No. 495 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ VIII | ಮಂಗಳೂರು ತಾ 31ನೇ ಜುಲ್ಯಾ ಶುಕ್ರವಾರ 1914 | ಸಂಚಿಕೆ 31.

ಆಬಾಲವೃದ್ಧರು ಓದುವುದಕ್ಕೆ ತಕ್ಕವಾಗಿಯೂ ಒಹು ಮನೋಹರಗಳಾಗಿಯೂ ಇರುವ ಕನ್ನಡ ಗ್ರಂಥಗಳು.

(ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ। ರಾ। ಬಿ. ರಾಮರಾವ್ ಎಂ ಎ. ಎಲ್. ಎಲ್. ಬಿ. ಯವರಿಂದ ಕನ್ನಡಿಸಲ್ಪಟ್ಟವು)

೧. ಸತ್ಯರಾಜಾ ಪೂರ್ವದೇಶ ಯಾತ್ರೆಗಳು—ಭಾಗ ೧— ಸ್ತ್ರೀಮಲೆಯಾಳವೆಂಬ ಸಂಪೂರ್ಣ ಕಥೆ. ರಾವ್ ಬಹದ್ದೂರ್ ವಿರೇಶ ಲಿಂಗಂಪಂತರೆಂಬ ಆಂಧ್ರ ಲೇಖಕ ಶಿರೋಮಣಿಗಳಿಂದ ತೆಲುಗಿನಲ್ಲಿ ಒರೆಯಲ್ಪಟ್ಟ ಒಹು ರಸಭರಿತವಾದ ಕಲ್ಪನಾಕಥೆ. ಶುದ್ಧವೂ ಲಲಿತವೂ ಆದ ಕನ್ನಡದಲ್ಲಿ ಪರಿವರ್ತಿತವಾಗಿದೆ. ಮೈಸೂರು ಗವರ್ನಮೆಂಟಿನವರಿಂದಲೂ ಕರ್ಣಾಟ ಮಹಾಜನರುಗಳಿಂದಲೂ ವಿಶೇಷವಾದ ಪ್ರೋತ್ಸಾಹವನ್ನು ಹೊಂದಿದೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ. **ಬೆಲೆ ೮ ಆಣೆ**

೨. ಕೃಷ್ಣಾಕುಮಾರಿ—ಈ ಅದ್ಭುತವಾದ ವಚನ ನಾಟಕವು ಮೂಲ ಒಂಗಾಳಾ ಭಾಷೆಯಲ್ಲಿ ಕವಿಶ್ರೇಷ್ಠ ಮಧುಸೂದನ ದತ್ತರಿಂದ ಬರೆಯಲ್ಪಟ್ಟು ನೂತನವಾಗಿ ಕನ್ನಡಿಸಲ್ಪಟ್ಟದೆ. ಆರ್ಯ ಕುಲಾಂಗನೆಯರಿಗೆ ಆದರ್ಶ ಸ್ವರೂಪಳಾದ ಈ ರಜಪೂತ ಕುಮಾರಿಯ ಜಾಜ್ವಲ್ಯವಾದ ಸ್ವದೇಶ ಭಕ್ತಿಯು ವಾಚಕರನ್ನು ಕ್ಷಣಮಾತ್ರದಲ್ಲಿ ತಲ್ಲೀನರನ್ನಾಗಿ ಮಾಡುತ್ತಿದೆ. ಇಂಥ ಉತ್ಕೃಷ್ಟವಾದ ನಾಟಕವು ಕನ್ನಡದಲ್ಲಿ ಬೇರೊಂದು ಇರುವುದು ಸಂದೇಹವು. ಉತ್ತಮವಾದ "ಗ್ಲೇಜ್" ಕಾಗದದಲ್ಲಿ ಸ್ಪುಟಾಕ್ಷರಗಳಿಂದ ಅಚ್ಚಾಗಿದೆ **ಬೆಲೆ ೧೦ ಆಣೆ.**

೩. ಸದಾಹಾರ ವಿವೇಚನೆ—ಚಿರಸ್ಮರಣೀಯರೂ ಪರಮ ಪೂಜ್ಯರೂ ಆದ ಬ್ರಹ್ಮೀಭೂತ ಶ್ರೀಮದ್ವಿವೇಕಾನಂದ ಸ್ವಾಮಿಯವರ "ಪೂರ್ವ ಮತ್ತು ಪಶ್ಚಿಮ"ವೆಂಬ ದಿವ್ಯವಾದ ಲೇಖನದಿಂದ ಆಹಾರ ವಿಷಯಕವಾದ ಭಾಗಗಳನ್ನು ಮಾತ್ರ ಸಂಗ್ರಹಿಸಿ ಕನ್ನಡಿಸಲಾದ ಈ ಚಿಕ್ಕ ಪುಸ್ತಕದೊಳಗೆ ಅಂತರ್ಗತವಾದ ದಿವ್ಯಾಭಿಪ್ರಾಯಗಳನ್ನು ಆರ್ಯಧರ್ಮಾಭಿಮಾನಿಗಳಾದ ಸಮಸ್ತರೂ ಅಗತ್ಯವಾಗಿ ತಿಳಿದುಕೊಳ್ಳಬೇಕೆಂದು ಸೂಚಿಸುವೆವು **ಬೆಲೆ ೨ ಆಣೆ.**

ನಿತ್ಯ ಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯೋಗವಾದ ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನಂ 0—3—0, ದೇವಪೂಜಾ ಪದ್ಧತಿ 0—3—0, ಋಗ್ವೇದಿ ಬ್ರಹ್ಮಯಜ್ಞವೈಶ್ವದೇವ 0—3—0, ವಾಯುಸ್ತುತಿ 0—2—0, ದ್ವಾದಶಸ್ತೋತ್ರ 0—2—0, ವಿಷ್ಣುಸಹಸ್ರನಾಮಸ್ತೋತ್ರ 0—2—0, ಪ್ರಾತರಾಹ್ನಿಕ ಪದ್ಧತಿ 0—3—0, ಶ್ರೀಸೂಕ್ತ ಪುರುಷಸೂಕ್ತ 0—1—0, ಗೋಪಿಕಾಗೀತೆ 0—1—0, ಪುರಂದರ ದಾಸರ ಕೀರ್ತನೆಗಳು 0—6—0, ಉದಯ ರಾಗ 0—4—0, ಲಕ್ಷ್ಮೀ ಶೋಭಾನೆ ಹಾಡು 0—2—0, ಹರಿಭಕ್ತಿಸಾರ 0—1—0, ಸ್ವಪ್ನ ಪದ ಮಧ್ವನಾಮ 0—1—6, ತುಲಸೀ ಸಂಕೀರ್ತನೆಗಳು 0—2—0, ಕುಮುದಾ 0—8—0, ಈಗ 0—6—0, ಮಹಾರಾಣಿ ಗೃಹಶೀಲೆ 0—3—0, ಪೇಶ್ವೆನಾರಾಯಣರಾವ್ 0—3—0, ಬಾಲಿಕಾನೀತಿಮಾಲಿಕೆ 0—2—0, ರಾಜಭಕ್ತಿಸಾರ 0—2—0. ಹನುಮದ್ರಾಮಾಯಣ ರೂ. 2—1—0, ಚಂದ್ರಾವಲೀ ವಿಲಾಸ 8 ಆಣೆ, ಆಚಾರ ದರ್ಪಣ 4 ಆಣೆ. ಚಂದ್ರಹಾಸಾಭ್ಯುದಯ 4 ಆಣೆ.

ಈಗಲೇ ಬಂದಿವೆ!

ಗೃಹಕೃತ್ಯದ ಉಪಯೋಗಕ್ಕೂ ವೈದ್ಯರಿಗೂ ಅಗತ್ಯವಾಗಿರುವಂಥಾ ಮತ್ತು ಜ್ವರವನ್ನು ನಿಧಾನಿಸಿಕೊಳ್ಳಲು ಅತ್ಯುಪಯುಕ್ತಗಳಾದಂಥಾ

ಥರ್ಮೋಮಿಟರ್‌ಗಳು.

ಅರ್ಧ ಮಿನಿಟಿನಲ್ಲಿ ಜ್ವರ ಎಷ್ಟುಂಟೆಂದು ತಿಳಿಸುವವುಗಳಿಗೆ ಒಂದಕ್ಕೆ ಕ್ರಯ ರೂಪಾಯಿ 2-12-0. ಯೋಗ್ಯವಾದವುಗಳೆಂತ ಪರೀಕ್ಷಿಸಲ್ಪಟ್ಟು ಸರ್ಟಿಫಿಕೇಟು ಉಳ್ಳವುಗಳಿಗೆ ರೂ. 3, ಗಡಿಯಾರಿನ ಸರಪಣಿಯಂತೆ ಸರಪಣಿ ಇದ್ದು ಅಂಗಿ ಕಿಸೆಯಲ್ಲಿ ಭದ್ರವಾಗಿಡಲಿಕ್ಕೆ ಆಗುವಂಥವುಗಳಿಗೆ ರೂ. 3—4—0.

ಸೆಂಟರೊಡ್ಸ್‌ಗಳು: ಕ್ರಯ 3 ಆಣೆ.

ಪರಿಮಳ ದ್ರವಗಳಂತೆ ದ್ರವಿಸಿ ಹೋಗುವಂಥವುಗಳಲ್ಲ ಮತ್ತು ಸೆಂಟೆಡ್ ಕಾರ್ಡುಗಳಂತೆ ಬೇಗನೆ ಚಿಂದಿಯಾಗಿ ಹೋಗುವಂಥವುಗಳಲ್ಲ. ಪರಿಮಳ ಸಾರವನ್ನು ಘನಪದಾರ್ಥರೂಪದಲ್ಲಿ ಸಂಗ್ರಹಿಸಿರುವ ಕಡ್ಡಿಗಳು.

ಡೊಪಾನ್!

ಮಳೆಗಾಲದಲ್ಲಿ ಸ್ಲಾಕಲುಗಳಿಗೆ ನೀರು ತಾಗಿ ಮಣ್ಣು ಹಿಡಿಯುವುದರಿಂದ ಸ್ಲಾಕಲುಗಳನ್ನು ಉಪಯೋಗಿಸುವುದು ಸಾಧ್ಯವಲ್ಲ. ಆದರೆ ಸ್ಲಾಕಲುಗಳಿಗೆ 'ಡೊಪಾನ'ನ್ನು ಹಚ್ಚಿಬಿಟ್ಟರೆ ಇವುಗಳನ್ನು ನೀರಿನಲ್ಲಿ ಅದ್ದಿದರೂ ಮಣ್ಣು ಹಿಡಿಯದು. ಇದರ ಬಾಟ್ಲಿ ಒಂದಕ್ಕೆ ರೂ. 1—12—0.

ಶಿಖೆ ಕಾಲದ ರಜೆಯು ತೀರಿ ಶಾಲೆಗಳು ತೆರಿಯೋಣಾಗಿವೆ.

ವಿದ್ಯಾರ್ಥಿಗಳೆಲ್ಲವರಿಗೆ ಅನುಕೂಲವಾದ ದರದ ಫೌಂಟೆನ್ ಪೇನುಗಳು ಈಗಲೇ ಬಂದಿವೆ. ಕ್ರಯ—1ಕ್ಕೆ ರೂ. 1—14—0ರಿಂದ ರೂ. 7—14—0ರ ವರೆಗಿರುವುದು. ನೆಪ್ಚುನ್, ಬ್ಲೆಕ್‌ಬರ್ಡ್, ಅಲೆಕ್ಸಾಂದ್ರಾ, ವೊಟರ್‌ಮೇನ್, ಸ್ವಾನ್, ಸೀತಾ, ಕಾಂತಾ, ಆನಂದ ಈ ಎಲ್ಲಾ ಜಾತಿ ಪೇನುಗಳಿರುವವು.

ವಿಳಾಸ:—

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ರಥಬೀದಿ ಮಂಗಳೂರು.

ಬನಾರಿಸಿನ ಮಹಾಲುಗಳ ಕೋಠಡಿಯು.

ಬನಾರಿಸಿನಿಂದ ನಿಮಗೆ ಯಾವ ಸಾಮಗ್ರಿಗಳು ಬೇಕಾದರೂ, ಪಿ. ಡಿ. ನೀಲಕಾಂತ ಎಂಡ್ ಕೊ ಬೆನಾರಿಸ್ ಸಿಟಿ ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೋಳ್ಳಬಹುದು. ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು ಇಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ಬಿಕರಿಯಾಗುವ ಬೆನಾರಿಸಿನ ಉಡುವ ತೊಡುವುಗಳನ್ನು ತರಿಸುತ್ತಿರುವರು ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒಡವೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಬವನ್ನು ಈ ಮೂಲಕ ಕೊಟ್ಟಿರುವೆವು ಸೀದಾ ನಮಗೆ ಬರೆದು ಒಡವೆಗಳನ್ನು ತರಿಸಿಕೊಳ್ಳುವುದರಿಂದ ನಿಮಗೆ ಸೇಕಡಾ 25ರಂತೆಯಾದರೂ ಮುನಾಫೆಯು ಉಳಿಯುವುದು ಎಲ್ಲಾ ಒರ್ಡರುಗಳನ್ನು ವಿ. ಪಿ. ಮೂಲಕ ಕಳುಹಿಸಿಕೊಡುವೆವು ಸಂದೇಹಪಡಬೇಡಿರಿ (1) ಜರಿತಾರಿನ ರೇಶ್ಮೆ, ನಾನಾ ತರದ ಅರಿವೆಗಳು, ಶೀರೆಗಳು, ರವಕೆ ಕಣಗಳು, ಅಂಗಿ ವಸ್ತ್ರ ಇತ್ಯಾದಿ. (2) ಕಂಚಿನ ಅಥವಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ. (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನಮ್ಮ ಕಾರ್ಖಾನೆಗಳಿಂದ ತಯ್ಯಾರಿಸಲ್ಪಡುವ ಮರದ ಸಾಮಗ್ರಿಗಳು. (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ ಒಡವೆಗಳು—ಇವುಗಳೆಲ್ಲವುಗಳಿಗೂ ಬರೆಯಬಹುದು

ನಮ್ಮ ಕೆಟಲಾಗು ಅಪೇಕ್ಷಿಸಿದವರಿಗೆ ಉಚಿತವಾಗಿ ಕಳುಹಿಸೋಣಾಗುವುದು.

ನಮ್ಮ ವಿಳಾಸ:— ಪಿ ಡಿ ನೀಲಕಾಂತ ಎಂಡ್ ಕೊ,
ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್ ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ ಶ್ರೀಕೃಷ್ಣನು ಚಂದಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್ ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0—8—0.

ವಿಳಾಸ:—
ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್. ತಿಮ್ಮಪ್ಪಯ್ಯ,
ಮಂಗಳೂರ.

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

IIನೇ ಸ್ಟೆಂಡಾರ್ಡ್ ಗಣಿತ . .	(—3—0
IIIನೇ ,, ,, ..	0—4—0
IVನೇ ,, ,, ...	0—6—0
3ನೇ ಪುಸ್ತಕದ ಶಬ್ದಾರ್ಥ ಪ್ರಾಣಿಕೋಟಿ, ವನಸ್ಪತಿಕೋಟಿ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ)	0—2—6
4ನೇ ಪುಸ್ತಕದ ಶಬ್ದಾರ್ಥ	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು	0—1—6
3ನೇ ದರ್ಜೆಯ ಭೂಗೋಳಶಾಸ್ತ್ರ 1ನೇ ಭಾಗ	0—3—0
3ನೇ ದರ್ಜೆಯ ದಕ್ಷಿಣ ಕನ್ನಡದ ಬೂಗೋಳಶಾಸ್ತ್ರ 2ನೇ ಬಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧನೆಯು (ಇದರಲ್ಲಿ ವೃತ್ತಿಗಳೂ, ಕಥೆಗಳೂ, ಅಭಿನಯದ ಹಾಡುಗಳೂ ಇರುತ್ತವೆ)	0—1—6
ಗಣಿತಸಾರ ಎಂಬ ಮಗ್ಗಿ ಕೋಷ್ಟಕಗಳ ಪುಸ್ತಕ	0—1—0
ಬಾಲಶಿಕ್ಷೆ	(ಅಚ್ಚಿನಲ್ಲಿದೆ)
ಒಂದನೆಯ ಪುಸ್ತಕ	(ತಯ್ಯಾರಿಯಲ್ಲಿವೆ.)
ಎರಡನೆಯ ,,	
ಮೂರನೆಯ ,,	
ನಾಲ್ಕನೆಯ ,,	

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಟಪ್ಪಾಲು ಖರ್ಚು ಇಲ್ಲದೆ ಕಳುಹಿಸಲ್ಪಡುವುವು. ವ್ಯಾಪಾರಸ್ಥರಿಗೆ ಒಳ್ಳೆಯ ಕಮಿಶನ್ ಕೊಡಲಾದೀತು.

ವಿ. ಲಕ್ಷ್ಮಣರಾವ್,
ಸ್ಕೂಲ್ ಮಾಸ್ಟರ್, ಉಡುಪಿ.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!

ಹನೂಮತ್ಪ್ರರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ, ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0 ಗ್ರಾಹಕರುತ್ವರೆಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೆರಡಕ್ಕೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತೃಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ.	ಮಂಗಳೂರು.
ಮ॥ ಪಾವಂಜೆ ಗುರುರಾವ್,	ಪಾವಂಜೆ ಗೋಪಾಲಕೃಷ್ಣ
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.	ಬ್ರಾಹ್ಮಣ ಕೇರಿ

ಹಿಂದೂಸ್ತಾನ ಕೊಓಪರೇಟಿವ್ ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ ಒಂದು ಕೋಟಿ. ಪ್ರತಿಜ್ಞಾತ ಮೂಲಧನ—ರೂ 87,000,00 ಆಗತ ಮೂಲಧನ—ರೂ. 10,00,000. ಉತ್ತರಿಸೋಣಾದ ವಿಮೆ—ರೂ 2,22,00,000 ಭಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೆ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಜಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ್,
ಸೊಸೈಟಿಯ ಏಜಂಟ್.
[illegible]
ಮಂಗಳೂರು.



ಎಲಂಬಿಕ್ ವೆಜಿಟೆಬಲ್ ಟೊನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು. ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ಥಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು. ರಕ್ತಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0.

ಅನೊಡ್ಯಾನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಬೇಧಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ನುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟ್ಲಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:-

ಎಸ್. ವೈದ್ಯಾ ಆಂಡ್ ಕೊ.
ಪಾರ್ಕ ಟೌನು, ಮದ್ರಾಸು.

S. VAIDYA & Co.,
Park Town, Madras.

"ಆಯೊನಿಕ್ ಫಾರ್ಮಸಿ"

ಎಂಬ ಔಷಧ ಪರಿಶೋಧನಾ ಗೃಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು: ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹೋಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯುಷನ್. ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂಧುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) ಬ್ಲಡ್ ಪ್ಯೂರಿಫ್ಯಾಯಿಂಗ್ ಸೊಲ್ಯುಷನ್ ಎಂಬುವ ರಕ್ತಶುದ್ಧಿಯ ರಸಾಯನವು. ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು. ಆದ್ದರಿಂದ ರಕ್ತವು ಯಾವಾಗ್ಯಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ತಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮೆಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮ[illegible] ಈ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co.,
Park Town, Madras.

ಎಸ್. ವೈದ್ಯಾ ಆಂಡ್ ಕೊ.
ಪಾರ್ಕ ಟೌನ್ ಮದ್ರಾಸು.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದ ನ್ನು ತಾನೇ ಅವಲಂಬಿಸಿರುತ್ತದೆ. ಅಣ್ಣ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದ ರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿಸ್ಥ ಇದಕ್ಕೆ ಅದು ಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರ ವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆ ಯನ್ನು ಸೇವಿಸುವದು ಆಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗ ಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಫೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3–4–0. ಅರ್ಧ ಬಾಟ್ಲಿಗೆ 1–12–0.

ದಿ. ಊಲನ್ ಮಾರ್ಟ್. ಮಂಗಳೂರು,

ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8–0–0

೨. ಶತಮೂಲಿಕಾ ಅಮೃತಸಂಜೀವನಿ—ಈ ಟೋನಿಕ್ ದ್ರಾವಕವು ಸಿತ್ರಿಯರಿಗೆ ಚೈತನ್ಯ ಉಂಟುಮಾಡಿ ಅಮೃತತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1–0–0

೩. ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0–12–0.

೪. ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋ ರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ ಬಾಟ್ಲಿ 1ಕ್ಕೆ 1–0–0

೫. ಸುದರ್ಶನಮಾರ್ಜನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4–0–0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2–0–0

೭. ಆನಂದವನವಿಲಾಸ—ಇದು ಡ್ಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5–0–0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧಶಿಲ್ಪ ಭೈಷಜ್ಯ ಪ್ರಯೋಗಗಳಿಂದ ತಯಾರಿಸಿದ ಔಷಧ ಮಾತ್ರೆಗಳು, ಲೇಹ ಚೂರ್ಣಗಳು, ತೈಲ್ಯ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯಪಟ್ಟಿಯಲ್ಲದ ನಮ್ಮ ಲೇಬಲುಗಳನ್ನು ತರಿಸಿಕೊಳ್ಳಿರಿ ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

S. U. N. & CO.,

BENARES CITY, U. P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿ ಗಳು ಮುಂತಾದ ಅಮೂಲ್ಯವಾದ ಸರ ಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿ ಸುವವರಿಗೆ 100 ಪುಟಗಳುಳ್ಳ ಕ್ಯಾಟ ಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟ ಗಳನ್ನು ಇನಾಮಾಗಿ ಕಳುಹಿಸಲಾದೀತು.

ನಮ್ಮ ವಿಳಾಸ:— ಯುಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

ಆರೋಗ್ಯವೇ ಭಾಗ್ಯ!

ಹವೆಯ ಬದಲಾವಣೆಯಿಂದ ಉಂಟಾಗುವ ವ ಇತರ ಶಶಿರೋಗ, ಕಣ್ಣುಬೇನೆ, ಶರೀಭ ಕಫ, ಕಾಸ, ಜ್ವರ, ಛಳಿಜ್ವರ, ಚೇನಾತ, ವಾಂತಿಭೇದಿ, ಉಷ್ಣಭೇದಿ, ಮೇಹ ಇತ್ಯಾದಿ ನೂರಾರು ಬಾಧೆ ಗಳೂ ಮನೆಮನೆಯಲ್ಲೂ ಪ್ರತ್ಯಕ್ಷವಾಗಿ ತೋರುತ್ತಿರುವ ಈ ಕಾಲದಲ್ಲಿ

ದಿವ್ಯ ಸಂಜೀವಿನೀ

ಯುಕೆಲಿಪ್ಟಸ್ ತೈಲ

ಎಂಬ ಅತ್ಯಪೂರ್ವಫಲಕಾರಿಯಾದ ಈ ಎಣ್ಣೆಯ ಸೀಸೆಯೊಂದನ್ನು ಗೃಹಸ್ಥರು ಸಂಗ್ರಹಿಸಿಕೊಳ್ಳಿ! ಈ ಎಣ್ಣೆ ಇದ್ದಲ್ಲಿ ಆವ ರೋಗದ ಸುಳಿವೂ ತೋರದು; ಎಂತಹ ರೋಗವನ್ನೂ ಇದು ತಡೆಗಟ್ಟಿ, ನಿರ್ಮೂಲಿಸಿ ಬಿಡುವುದು" ಉಪಯೋಗಿಸಿದವರ ಅನುಭವಕ್ಕಿಂತಲೂ ಹೆಚ್ಚಿನ ವಿಸ್ತಾರವಾದ ವಿಜ್ಞಾಪನೆಯು ನಮ್ಮೊಡನೆ ಇಲ್ಲ.

ಪ್ರಾಣದಾನ ಮಾಡಿಯದೆ.

ಕುಂದಾಪುರದ ಮೆ। ಉಮ್ಮರ್ ಸಾಹೇಬರು ಈ ರೀತಿ ಬರೆಯುವರು:—"ಪ್ರಿಯರೇ ತಮ್ಮಲ್ಲಿಂದ ನಾನು ಸ್ವಲ್ಪ ದಿವಸದ ಕೆಳಗೆ ಒಂದು ಡಜನ್ ನೀಲಗಿರಿ ಯುಕಲಿಪ್ಟಸ್ ತೈಲ ತರಿಸಿಕೊಂಡಿ ದ್ದೆನು ಅದನ್ನು ಕೆಲವರಿಗೆ ಕೊಟ್ಟದ್ದರಿಂದ ಪ್ರಾಣದಾನ ಕೊಟ್ಟ ಹಾಗಿದೆ. ಇದನ್ನು ಕೇಳಿ ಎಲ್ಲರೂ ಬಾಟ್ಲಿಗಳನ್ನು ಕೊಂಡುಹೋದುದಲ್ಲದೆ ಈಗ ಅನೇಕರು ಪ್ರತಿ ದಿವಸ ಬರುತ್ತಾ ಇದ್ದಾರೆ. ನನಗೆ ಸಹಾ ಒಂದು ಬಾಟ್ಲಿ ಉಳಿಯಲಿಲ್ಲ. ಆದ್ದರಿಂದ ಈ ಕಾಗದ ಕಂಡ ಕೂಡಲೇ ಒಂದು ಡಜನ್ ಬಾಟ್ಲಿಗಳನ್ನು ವಿ. ಪಿ. ಮೂಲಕ ಕಳುಹಿಸಿರಿ." ಔನ್ಸ್ ಸೀಸೆ1ಕ್ಕೆ 0–5–0. ವಿ. ಪಿ. ಬೇರೆ ಡಜನ್ ಬಾಟ್ಲಿಗಳನ್ನು ಒಮ್ಮೆಯೇ ತರಿಸಿಕೊಂಡರೆ ರೂ. 3. ವಿ. ಪಿ ಬೇರೆ.

1914ನೇ ಇಸವಿ ಕೆಲೆಂಡರು ಸಹಿತವಾದ ಪರಿಮಳದ ಕಾರ್ಡುಗಳು. ಡಜನ್ ಕಾರ್ಡು ಗಳಿಗೆ 0–12–0. ಗ್ರೋಸ್ ಕಾರ್ಡುಗಳಿಗೆ ರೂ. 6. ವಿ. ಪಿ ಬೇರೆ.

ಸ್ನೆಹಲತಾ ಮಸ್ತಕ ತಾಪಹಾರಿಣಿ ತೈಲ:—ಮೆದುಳು ರೋಗಗಳಿಗೆ ಅತ್ಯುಪಯೋಗವಾದ ತೈಲ. ಸೀಸೆ 1ಕ್ಕೆ 0–12–0. ಡಜನ್ ಸೀಸೆಗಳಿಗೆ ರೂ. 8. ವಿ ಪಿ. ಬೇರೆ.

ಫೊಟೊ ಎನ್‌ಲಾರ್ಜ್‌ಮೆಂಟುಗಳು, ರಬ್ಬರ್ ಮೊಹರುಗಳು ಅಗ್ಗ ದರದಲ್ಲಿ ತಯಾರಿಸಿ ಕೊಡೋಣಾದೀತು.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.

ಕಂಕನಾಡಿ ಪೋಸ್ಟು, ದ ಕ.

ವಾಚಕರೇ!

ಕಾಲಕ್ಕೆ ತಕ್ಕ ಜೀವನೋಪಾಯ ಇದಲ್ಲವೆ?

ಈ ನಮ್ಮ ಮೈಸೂರು ದೇಶದಲ್ಲಿ ಆಂಗ್ಲೇಯ ಪ್ರಭುಗಳಿಂದಲೂ ನಮ್ಮನ್ನಾಳುವ ಶ್ರೀಮನ್ಮಹಾರಾಜ ಸರಕಾರದವರಿಂದಲೂ ಸಹ ಪ್ರೋತ್ಸಾಹಿಸಿ ದ್ರವ್ಯಸಹಾಯಮಾಡು ತ್ತಿರುವ ವಿದ್ಯಾಭ್ಯಾಸಂಗಕ್ಕೆ ಅನುಕೂಲವಾಗಿ ಈಗಿನ ಕಾಲದಲ್ಲಿ ಗೌರವವು ಮತ್ತು ಪ್ರಸಿದ್ಧಿಯಂ ಪಡದಿರುವ ಕುಶಲ ವಿದ್ವಾಂಸರಿಂದ ನವೀನವಾಗಿ ರಚಿಸಲ್ಪಟ್ಟ ಕನ್ನಡ ಮತ್ತು ಇಂಗ್ಲಿಷ್ ಸ್ಕೂಲುಗಳ ಎಲ್ಲಾ ತರಗತಿಗಳ ಬಾಲಕರು ಮತ್ತು ಬಾಲಕಿಯರಿಗೆ ವಾರಕ್ಕೆ ಸಿದ್ಧವಾಗಿರುವ ಕನ್ನಡ ಇಂಗ್ಲಿಷ್ ಪುಸ್ತಕಗಳು ಮತ್ತು ಸಂಸ್ಕೃತ ತೆಲಗು ವೈದ್ಯ ವೇದಾಂತ ಜ್ಯೋತಿಷ್ಯ ಕನ್ನಡ ಗ್ರಂಥಗಳು ಅಲ್ಲದೆ ಉತ್ತಮ ಕಾದಂಬರಿಗಳು ಸ್ಟೇಶನರಿ ಸಾಮಾನುಗಳು ಅತ್ಯುತ್ತಮವಾದ ಕಾಗದ ಅಕ್ಷರಗಳಿಂದ ತಯಾರಿಸಲ್ಪಟ್ಟು ಸುಲಭ ಕ್ರಯಕ್ಕೆ ಸಿದ್ಧವಾಗಿಥುತ್ತೆ.

ಅಪೂರ್ವ ಪುಸ್ತಕಗಳು.

ಇದು ಸರ್ವರಲ್ಲಿಯೂ ಇರಬೇಕಾದ್ದು. ಜಮಾ ಖರ್ಚಿನ ಪದ್ಧತಿ 0–12–0. ಮಂಡಿ, ಚಿಲ್ಲರೆ ಅಂಗಡಿ, ಜವಳಿ ಅಂಗಡಿ, ಮನೆ ಮುಂತಾದ ಎಲ್ಲಾ ವಿಧವಾದ ಲೆಖ್ಖ ಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

ಆಂಗ್ಲಭಾಷ ಪ್ರಕಾಶಿಕೆ—(ಸ್ವತಃ ಇಂಗ್ಲಿಷ್ ಕಲಿಯುವ ದೊಡ್ಡ ಪುಸ್ತಕ. ಇದನ್ನು ಗುರುವಿನಂತೆ ಭಾವಿಸಿ. ಬೆಲೆ 1—8—0. ವೈದ್ಯಸಾರಸಂಗ್ರಹ (ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ಬೆಲೆ 3—0—0.

ಆರ್ಯಕೀರ್ತಿ ...	0-10—0	ಚಂದ್ರಕಳೆ	0—4—0
ಹನುಮದ್ವಿಲಾಸಂ ...	0—8—0	ಕಲಾನಾಥ	0—6—0
ಶಾಕುಂತಲ ನಾಟಕ	0—8—0	ಶಿವಾನಂದಲಹರಿ... ...	0—6—0
ಸ್ತ್ರೀಧರ್ಮನೀತಿ ...	0—8—0	ಪ್ರಶ್ನೋತ್ತರ ಲೇಖ್ಯಬೋಧಿನಿ	1—4—0
ಶೋಭನೆ	0—8—0	ಚಿತ್ರವಿಚಿತ್ರಾವಳಿ ...	0—8—0
		ವಿಷವೃಕ್ಷ	1—4—0

ವಿಳಾಸ:— ಬಿ. ನರಸಿಂಹ ಅಯ್ಯಂಗಾರ್.

ಮೆನೇಜರ್ ವಿದ್ಯಾಸಾಗರ ಬುಕ್ ಡಿಪೋ.

ಚಿಕ್ಕಪೇಟೆ ಬೆಂಗಳೂರು ಸಿಟಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 31ನೇ ಜುಲೈ 1914.

ಕೆನರಾ ಕೆಥೋಲಿಕ್ ಎಸೋಶಿಯೇಶನ್.

———o———

ಈ ಜಿಲ್ಲೆಯ ಕೆಥೋಲಿಕ್ ಕ್ರೈಸ್ತ ಸಮಾಜದ, ಮುಖ್ಯವಾಗಿ ಸಾಮಾನ್ಯರ ಅಬಿವೃದ್ಧಿಯನ್ನು ಸಾಧಿಸುವಗೋಸ್ಕರ ಮೇಲೆ ಹೆಸರು ಕಾಣಿಸಿದ ಸಭೆಯು ಏರ್ಪಡಿಸಲ್ಪಟ್ಟು ಕಳೆದ ಆದಿತ್ಯವಾರ ಸಭೆಗೆ ಬೇಕಾಗಿರುವ ಕಾರ್ಯ ನಿರ್ವಾಹಕ ಮಂಡಳಿಯು ಸಹ ಚುನಾಯಿಸಲ್ಪಟ್ಟಿತು. ಕಾರ್ಯನಿರ್ವಾಹಕ ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳಾಗಿ ಯಾರ್ಯಾರು ಆರಿಸಲ್ಪಟ್ಟಿರುವರೆಂಬುದು ನಮ್ಮ ವರ್ತಮಾನ ಸಂಗ್ರಹದಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಜಿಲ್ಲಾ ಕಲೆಕ್ಟರ್ ದೊರೆಗಳವರು ಕೆಥೋಲಿಕ ಜನ ಸಾಮಾನ್ಯರಲ್ಲಿರುವ ಕುಂದುಕಗಳನ್ನು ತೋರಿಸಿಕೊಟ್ಟ ಕೆಲವು ತಿಂಗಳುಗಳೊಳಗೆ ಇಂಥಾ ಕುಂದುಕಗಳೆಲ್ಲವನ್ನು ಹೋಗಗೊಳಿಸುವ ಬಗ್ಗೆ ಕೆಥೋಲಿಕ ವೈದಿಕ ಮತ್ತು ಲೌಕಿಕ ವರ್ಗದವರು ಒಟ್ಟುಕೂಡಿ ಇಂಥಾದೊಂದು ಸಂಸ್ಥೆಯನ್ನು ಸ್ಥಾಪಿಸಿರುವುದು ತುಂಬಾ ಶ್ಲಾಘನೀಯವಾಗಿರುವುದು. ಎಲಿಮೆಂಟರಿ ವಿದ್ಯಾಭ್ಯಾಸವು ಕೆಥೋಲಿಕ ಸಾಮಾನ್ಯರೆಲ್ಲರೊಳಗೆ ಸರಿಯಾಗಿ ಪ್ರಸರಿಸುವಂತೆಯೂ, ಜೀವನವೃತ್ತಿಯನ್ನು ಸಾಮಾನ್ಯರು ಸುಲಭದಲ್ಲಿ ಮಾಡಿಕೊಂಡಿರುವಂತೆಯೂ ಬೇಕಾಗಿರುವ ವೃತ್ತಿಶಿಕ್ಷಣವನ್ನು ಕೆಥೋಲಿಕ ಸಾಮಾನ್ಯರಿಗೆ ದೊರಕಿಸಿಕೊಡುವಂತೆಯೂ, ಕೆಥೋಲಿಕರ ಇತರ ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸುವಂತೆಯೂ ಸಹ ಈ ಎಸೋಶಿಯೇಶನ್ ಸ್ಥಾಪಿಸಲ್ಪಟ್ಟಿರುವುದೆಂಬುದನ್ನು ವಾಚಕರು ಈ ಮೊದಲೇ ತಿಳಿದಿರಬಹುದು. ಸಮಾಜದ ಅಭಿವೃದ್ಧಿ ಬಗ್ಗೆ [illegible] ನಡಿಸುವ ವಿಧಾನವನ್ನು ಇಲ್ಲಿಯ ಕ್ರೈಸ್ತರಲ್ಲದ ಇತರರು ಚೆನ್ನಾಗಿ ಲಕ್ಷ್ಯಕೊಟ್ಟು ತಿಳಕೊಳ್ಳುವುದು ಅಗತ್ಯವಾಗಿರುವುದು.

ಇಲ್ಲಿಯ ರೋಮನ್ ಕೆಥೋಲಿಕ ಕ್ರೈಸ್ತ ಸಮುದಾಯದ ಗುರು ಪದವಿಯನ್ನು ಇಟೆಲಿಯನ್ ಮಿಶನಿನ ಜೆಜುಯಿಟ ಪಾದರಿ ಸಾಹೇಬರವರು ವಹಿಸಿಕೊಂಡು ಇಂದಿಗೆ ಹಲವು ವರುಷಗಳಾದವು. ಇವರ ಮೂಲಕ ಕೊಲೇಜು ಮತ್ತು ಸೆಕೆಂಡರಿ ಶಾಲೆಗಳಲ್ಲಿ ದೊರೆಯುವ ವಿದ್ಯಾ ಪ್ರಸರಣೆಯು ಕೆಥೋಲಿಕರಲ್ಲಿ ಹೆಚ್ಚಲು ಅಸ್ಪದವಾಯಿತು. ಇಂಗ್ಲೀಷು ವಿದ್ಯಾ ಮಾಹಿತಿಯು ಜನರಲ್ಲಿ ಕಡಮೆಯಾಗಿದ್ದ ವೇಳೆಯಲ್ಲಿ ಕೆಥೋಲಿಕರು ಈ ವಿದ್ಯಾಭ್ಯಾಸವನ್ನು ಪಡೆದದ್ದರಿಂದ ಸರಕಾರದ ಹಲವು ದೊಡ್ಡ ಹುದ್ದೆಗಳು ವಿದ್ಯಾವಂತ ಕೆಥೋಲಿಕರಿಗೆ ದೊರಕಿದವು. ಇಂಥಾ ಹುದ್ದೆಗಳನ್ನು ದೊರಕಿಸಿಕೊಳ್ಳಬೇಕೆಂಬ ಅಭಿಲಾಷೆಯು ಇದರಿಂದ ಸರ್ವರಲ್ಲಿಯೂ ತಲೆದೋರಿತು. ಸೆಕೆಂಡರಿ ಮತ್ತು ಕೊಲೇಜು ಶಿಕ್ಷಣವನ್ನು ಪಡಿಯಬೇಕೆಂಬ ತೃಷ್ಣೆಯು ಹಲವರಲ್ಲಿ ಈ ರೀತಿ ಉಂಟಾಯಿತು. ಇಂಗ್ಲೀಷು ವಿದ್ಯಾ ಮಾಹಿತಿಯು ಯೂರೋಪಿಯ ಜೆಜುಯಿಟರ ಮೂಲಕ ಹೊಂದುತ್ತಿರುವಾಗ ಯೂರೋಪಿಯರ ಹಲವು ಅಭ್ಯಾಸಗಳೂ ಸ್ವಾಭಾವಿಕವಾಗಿ ಕೆಥೋಲಿಕರಲ್ಲಿ ಮೊಳೆತವು. ಕಾಲಕ್ರಮೇಣ ಈ ಅಭ್ಯಾಸಗಳೆಲ್ಲವು ಬೆಳೆದು ಹೋಗಿ, ಈ ಅಭ್ಯಾಸ ಸಾಧನಗಳಲ್ಲಿ ಇವರಷ್ಟು ಮುಂದುವರಿಯದ ಕ್ರೈಸ್ತರಲ್ಲದ ಇತರರನ್ನು ಇವರು ಅಭಾವದಿಂದ ಕಾಣುತ್ತ ಬಂದು ಪ್ರಕೃತ ಕೆಥೋಲಿಕ ಸಮಾಜವು ಜಿಲ್ಲೆಯ ಇತರ ಸಮಾಜಗಳಿಂದ ಪ್ರತ್ಯೇಕಿಸಲ್ಪಟ್ಟಂತೆ ಇರುವುದೆಂಬದಾಗಿ ಹಲವರ ಅಭಿಪ್ರಾಯವಿದೆ. ಇದಲ್ಲದೆ ಯೂರೋಪಿಯ ಅಭ್ಯಾಸಗಳಿಂದ ಖರ್ಚು ವಿಪರೀತವಾಗುತ್ತ ಬರುವಲ್ಲಿ ಸೆಕೆಂಡರಿ ಮತ್ತು ಕೊಲೇಜಿನಲ್ಲಿ ದೊರೆಯುವ ಶಿಕ್ಷಣದಿಂದ ದುಡಿಯುವ ತ್ರಾಣವು ಮೊದಲಿಗಿಂತ ಈಗ ಕಡಿಮೆಯಾಗುತ್ತ ಬಂದಿದೆ. ಕೊಲೋಜು ವಿದ್ಯಾಭ್ಯಾಸವನ್ನು ಪಡಿಯಬೇಕೆಂಬ ತೃಷ್ಣೆಯಿಂದ ಮೇಲೆ.ಹೇಳಿದ ರೀತಿಯು ಹಲವರಲ್ಲಿ ಉಂಟಾಗಿ, ಹಿಂದು ಮುಂದು ಯೋಚಿಸದೆ ಸರ್ವರೂ ಕೊಲೇಜಿಗೆ ಬಂದು ಬೀಳುವುದರಿಂದ ಕಷ್ಟಮಯವಾದ ವಿದ್ಯಾ ಸಾಧನವನ್ನು ಮಾಡಲಾರದೆ, ಕಲಿಯಲು ಸುಲಭಸಾಧ್ಯವಾದ ಯೂರೋಪಿಯ ಅಭ್ಯಾಸಗಳನ್ನಾರ್ಜಿಸುವರೆ ಹೆಚ್ಚಿನ ಅಸ್ಪದ ದೊರಕುವುದು. ಈ ರೀತಿ ಈ ಅಭ್ಯಾಸ ಲಾಭದಿಂದ ಕ್ರಮವಾಗಿ ಮೆಟ್ರಿಕ್ಯುಲೇಶನ್, ಇಂಟರಮೀಡಿಯೇಟ್ ಮತ್ತು ಬಿ. ಎ. ಕ್ಲಾಸುಗಳಲ್ಲಿ ಪಾಸಾಗುವ ಕೆಥೋಲಿಕ ಯುವಕರ ಸಂಖ್ಯೆಯು ಕಡಿಮೆಯಾಗುತ್ತ ಬಂದಿರುವುದು. ಈ ರೀತಿ ಕೆಥೋಲಿಕ ಹಿರಿಯರಲ್ಲಿ ಕೆಲವರು ಕೆಥೋಲಿಕ್ ಎಸೋಶಿಯೇಶನಿನ ಮುಂದೆ ತಮ್ಮ ಮೇಲಣ ಅಭಿಪ್ರಾಯಗಳನ್ನು ತರಬೇಕೆಂದು ವಿಜ್ಞಾಪಿಸಿದ ಪ್ರಕಾರ, ಅವನ್ನು ಎಸೋಶಿಯೇಶನಿನವರಿಗೆ ಮೂಲಕ ಸೂಚಿಸಿರುತ್ತೇವೆ. ಸೆಕೆಂಡರಿ ಮತ್ತು ಕೊಲೇಜು ಶಿಕ್ಷಣ ಪ್ರಸರಣೆಯ ಕಾರ್ಯನಿರ್ವಾಹವು ಪ್ರಕೃತ ಪೂರ್ಣವಾಗಿ ವೈದಿಕರ ಕೈ ವಶವಾಗಿ ಸದಾ ಇರುವುದು ಸಮಾಜಕ್ಕೆ ಹಿತಕರವಲ್ಲದ್ದರಿಂದ ಲೌಕಿಕರನ್ನೂ ವೈದಿಕರನ್ನೂ ಒಳಕೊಂಡಿರುವ ಕೆಥೋಲಿಕ್ ಎಸೋಶಿಯೇಶನು ಸೆಕೆಂಡರಿ ಮತ್ತು ಕೊಲೇಜು ಪ್ರಸರಣಾ ಕಾರ್ಯಗಳನ್ನು ಸಹ ಕೈಕೊಳ್ಳಲು ಪ್ರಯತ್ನಿಸಬೇಕೆಂದು ಕೆಲವು ಕೆಥೋಲಿಕ ಹಿರಿಯರು ಸೂಚಿಸಿರುವರು. ಆಗ್ಗೆ ಮೇಲೆ ತೋರಿಸೋಣಾದ ಸೆಕೆಂಡರಿ ವಿದ್ಯಾಭ್ಯಾಸದ ಹಲವು ನ್ಯೂನತೆಗಳು ಮಾಜಿ ಹೋಗುವವೆಂದು ಅವರು ಕೋರಿರುವರು.

ಪಟ್ಟಣದ ಸರಹದ್ದುಗಳಲ್ಲಿಯೂ, ಜಿಲ್ಲೆಯ ಆಯಾ ಗ್ರಾಮಗಳಲ್ಲಿಯೂ ಭೂವ್ಯವಸಾಯದಿಂದ ಜೀವಿಸುತ್ತಿರುವ ರೋಮನ್ ಕೆಥೋಲಿಕರು ಪ್ರಕೃತ ಈ ಜಿಲ್ಲೆಯ ಕೆಥೋಲಿಕ ಸಮಾಜಕ್ಕೆ ಪ್ರಾಣ ಪ್ರಾಯರಾಗಿರುವುದರಿಂದ, ಅವರನ್ನು ಶಿಕ್ಷಣ ಮೂಲಕ ಕದಡಿಸುವಾಗ್ಗೆ ಬಹಳ ಎಚ್ಚರವುಳ್ಳವರಾಗಬೇಕೆಂಬುದು ಕೆಥೋಲಿಕ ಎಸೋಶಿಯೇಶನಿನವರಿಗೆ ಕೆಥೋಲಿಕ ಸಭಾ ಹಿರಿಯರು ಹೇಳಿರುವ ಮತ್ತೊಂದು ಸೂಚನೆಯಾಗಿರುತ್ತದೆ. ಕೃಷಿ ವೃತ್ತಿಯನ್ನು ಮಾಡುವವರಿಗೆ ಎಲಿಮೆಂಟರಿ ವಿದ್ಯಾಭ್ಯಾಸವನ್ನು ಕೊಡುವುದು ಅಗತ್ಯವಾಗಿರುವುದು. ಆದರೆ ಈ ವಿದ್ಯಾಭ್ಯಾಸ ಬಲದಿಂದ ಕ್ರೈಸ್ತರಲ್ಲದ ಇತರರೊಂದಿಗೆ ತಾವು ಬೆರೆಯಕೂಡದೆಂಬ ಭಾವವು ಅವರಲ್ಲಿ ನೆಲೆಗೊಳ್ಳಲು ಅಸ್ಪದಕೊಡದಂತೆಯೂ, ಕೃಷಿ ವೃತ್ತಿಯು ತಮಗೆ ಸಲ್ಲದ ವೃತ್ತಿಯೆಂದು ಅವರು ತಿಳಕೊಳ್ಳದಂತೆಯೂ ಎಚ್ಚರಿಕೆಯುಳ್ಳವರಾಗಿರಬೇಕು. ಅಲ್ಲದೆ ಪ್ರೌಢ ವಿದ್ಯಾಭ್ಯಾಸವನ್ನು ಹೊಂದಿದವರನ್ನು ಪೀಡಿಸುವ ಯೂರೋಪಿಯ ಅಭ್ಯಾಸಗಳ ಪಿಶಾಚಿಯ ಸೋಂಕು ಇವರಿಗ್ಗೆ ತಟ್ಟದಂತೆ ಸಹ ನೋಡಿಕೊಳ್ಳುವುದು ಅಗತ್ಯವಾಗಿದೆ. ಕೃಷಿಕರು ಪಡೆಯುವ ವಿದ್ಯಾಭ್ಯಾಸವು ಅವರಿಗೆ ತಮ್ಮ ವೃತ್ತಿಯಲ್ಲಿ ಸಹಕಾರವನ್ನೀಯುವ ಸ್ವಭಾವದ್ದಾಗಿರಬೇಕಾಗಿದೆ. ಕೃಷಿ ಉದ್ಯೋಗವು ವರುಷದ ಎಲ್ಲಾ ಕಾಲಗಳಲ್ಲಿಯೂ ಇರದಾದ್ದರಿಂದ, ಹೀಗೆ ಉದ್ಯೋಗವಿಲ್ಲದ ಕಾಲದಲ್ಲಿ ಕೃಷಿಕನು ತನ್ನ ಸಮಯವನ್ನು ಕೃಷಿಗೆ ಸಂಬಂಧಪಟ್ಟ ಇತರ ಯಾವ ವೃತ್ತಿಯಲ್ಲಿ ವಿನಿಯೋಗಿಸಬಹುದೆಂಬುದನ್ನು ತಿಳಿಯುವಷ್ಟು ವಿದ್ಯಾಬಲವು ಕೃಷಿಕನಿಗೆ ಇರಬೇಕಾಗಿರುವುದು. ಇಷ್ಟಲ್ಲದೆ ಕೃಷಿ ವೃತ್ತಿಯ ನೂತನ ಲಾಭಕರ ವಿಧಾನಗಳನ್ನು ಸಹ ಕಲಿಸುವ ಏರ್ಪಾಡನ್ನು ಈ ಕೆಥೋಲಿಕ ಎಸೋಶಿಯೇಶನಿನವರು ಕೈಕೊಂಡರೆ ಉಪಕಾರವಾಗುವುದು. ಇಂಥಾ ಉದ್ದೇಶಗಳ ಸಾಧನಾರ್ಥವಾಗಿ ಈ ಎಸೋಶಿಯೇಶನಿನವರಿಂದ ಆಯಾ ಗ್ರಾಮಗಳಲ್ಲಿ ಸ್ಥಾಪಿಸೋಣಾಗುವ ಶಾಲೆಗಳು ವೈದಿಕರಿಗಿಂತ ಹೆಚ್ಚಾಗಿ ಲೌಕಿಕರ ಆಡಳಿತೆಯಲ್ಲಿರುವುದರಿಂದ ವಿಶೇಷ ಪ್ರಯೋಜನವಿರುವುದು. ಯಾಕೆಂದರೆ, ಲೌಕಿಕ ವ್ಯವಹಾರಗಳನ್ನು ಲೌಕಿಕರು ತಿಳಿಯುವಷ್ಟು ವೈದಿಕರು ತಿಳಿಯರು. ವೈದಿಕರ ವ್ಯವಸ್ಥಾರಕ್ಷೆಯು ಇಂಥಾ ಶಾಲೆಗಳಲ್ಲಿ ರಬೇಕಲ್ಲದೆ, ಶಾಲೆಯ ಆಡಳಿತೆಯನ್ನು ಇತರ ಯಾವ ವಿಧಾನಗಳಲ್ಲಾದರೂ ವೈದಿಕರು ಪೂರ್ಣವಾಗಿ ತಮ್ಮ ವಶದಲ್ಲಿಯೇ ಇಟ್ಟುಕೊಳ್ಳುವುದು ಯುಕ್ತವಲ್ಲ.

ಲೌಕಿಕರಿಂದ ಸ್ಥಾಪಿಸಲ್ಪಟ್ಟವುಗಳು ಅಥವಾ ಇಗರ್ಜಿ ಶಾಲೆಗಳೆಂಬ ಭೇದವನ್ನು ನೋಡದೆ, ಈ ಎರಡು ವಿಧಾನದ ಶಾಲೆಗಳಿಗೂ ಎಸೋಶಿಯೇಶನಿನವರು ಒಂದೇ ರೀತಿ ಸಹಾಯಮಾಡಬೇಕೆಂಬುದು ಈ ಕೆಥೋಲಿಕ ಹಿರಿಯರ ಇನ್ನೊಂದು ಸೂಚನೆಯಾಗಿದೆ.

ನಮ್ಮ ಇದಿರು ಬಂದ ಹಲವು ಸೂಚನೆಗಳಲ್ಲಿ ಮುಖ್ಯವಾದ ಕೆಲವನ್ನು ಈ ಮೂಲಕ ಎಸೋಶಿಯೇಶನಿನವರಿಗೆ ಸೂಚಿಸಿರುತ್ತೇವೆ. ಈ ಸೂಚನೆಗಳನ್ನು ಯಥಾಯುಕ್ತ ರೀತಿಯಲ್ಲಿ ಪರ್ಯಾಲೋಚಿಸಿಕೊಳ್ಳುವುದು ಅಗತ್ಯವೆಂತ ಅಭಿಪ್ರಾಯಪಡುತ್ತೇವೆ.

ರಿಮಂದಿರ.

(ಬಾಮಿನಿ).

ಇರುಳ ಹರಿಕಥೆ ಕೇಳಿ ಕಳೆದಾ ।
ಮರುದಿವಸ ಕ್ರಮದಂತೆ ಶಾಲೆಗೆ ।
ತೆರಳಿ, ಸೇರಿ ಸಭಾಸದನವನು ಕುಳಿತುಕೊಂಡೊಡನೆ ॥
ಅರಿಯಗೊಡದಾನಿದ್ದೆ ಕಣ್ಗಳು ।
ಹರಿವ್ರತವೆಗಳ ಮುಚ್ಚಿ ಮನವನು
ಮರೆಯಿಸುತನಭಕೆತ್ತಿ ತೋರಿತ ಪೂರ್ವದರ್ಶನವಂ ॥ ೧ ॥

ಎಣೆಯಿರದ ತೇಜಸ್ಸಮೂಹವು ।
ಗಣಿಸಲಾಗದ ಸುರರ ಸೇನೆಯು ।
ಮಣಿಖಚಿತಸ್ವರ್ಗೀಯ ರಥದಾವೋಲೆ ಮುಂದಿಸಿಹ ॥
ಎಣಿಸಲಾಗದ ಕಾಲನಭಗಳ

ಗಣಿತಕಾರಾ ಜೀವಕೋಟಿಯು |
ಅಣುಷೊಡಲುಗೊಂಡಖಿಲ ವಿಶ್ವದ ಜನಕಪರಮೇಶ || ೨ ||

ಒಡನೆ ಗಡಗಡನೊಡಲು ನಡುಗಿತು, |
ಕಡಲು ಗುಡುಗಗಳೊಡೆಯನೆನೆ ಸಂ |
ಗಡಲೆ ಮೂಡಿದುದರಿವು ಲೋಕದ ಜನಕ ಮಜ್ಜನಕ, ||
ಕಡಮೆಯಾದುದು ನಡುಕವಡಿಗಡಿ |
ಗಡಗೆ ಭಯವಿಮ್ಮಡಿಸೆ ಧೈರ್ಯವು |
ನುಡಿಯ ತೊಡಗಿದೆ ಜೋಡಿಸುತ ಕೈಗಳನು ವಿನಯದಲಿ || ೩ ||

ದೇವಬಿಜಯಂಗೈಯಲಿಲ್ಲಗಿ |
ದಾವ ಪುಣ್ಯಕ್ಷೇತ್ರವಾಹುದೈ ? |
ಕೋವಿದರು, ಯತಿವರ್ಯ, ಮೌನಿಗಳಿರುವ ರಾದಲ್ಲ ||
ಆವ ಫಲಪುಷ್ಪಾದಿಗಳನುಂ |
ನಾವು ತಂದಿಹುದಿಲ್ಲ ಕ್ಷಮಿಸೈ |
ದೀವಟಿಕೆ, ಧ್ವಜ, ಛತ್ರ, ಚಾಮರವುಪಚರಿಸಲಿಲ್ಲ. || ೪ ||

ನಾವು ವಿದ್ಯಾಭಿಕ್ಷುಕರು ಮುಂ |
ದಾವ ಕಜ್ಜವಮೊಳ್ವ ಮೊದಲೇ |
ಸಾವಧಾನದಿ ನಿನ್ನ ಪ್ರಾರ್ಥಿಸೆ ಸೇರಿದೆವುಮಿಲ್ಲಿ. ||
ಆವ ಜಪತಪ ಮಂತ್ರವಾದರು |
ನಾವು ತಿಳಿದಿಹುದಿಲ್ಲ ನಮ್ಮನು |
ಕಾವಪ್ರೀತಿಪ ಪಿತನು ನೀನೆಂಬುದನೆ ಅರಿತಿಹೆವು || ೫ ||

ಅರಿಯದೆನ್ನಯ ಬಾಲನುಡಿಗಳ |
ದರೆಚರಾಚರದೊಡೆಯ ಲಾಲಿಸಿ |
ಒರೆದನವ್ವೆಯು ಅಜ್ಞಬಾಲಕನೊಡನೆ ನುಡಿವಂತೆ ||
ಸಿರಿಯ ಮದದಿಂ ಭ್ರಾತೃಭಾವವು |
ಮರೆತುಹೋಗದನೂಯೆ ಮೊಳೆಯದ |
ಸರಳ ಮೃಗುಹೃದಯಗಳು ಸೇರುವ ಸ್ಥಳವೆ ಸುಕ್ಷೇತ್ರ || ೬ ||

ತರಳರೊಳು ಸುಪ್ರೇಮವೆನ್ನದು |
ತರಳ ಹೃದಯರೆ ವಂದೆ ಎನ್ನಾ |
ಮರಣ ದುಃಖಾದಿಗಳು ಸೇರದ ಪರದ ಪ್ರಜೆಯಹರು ||
ನಿರುತ ನಿಷ್ಕಾಪಟ್ಯ ಪ್ರೀತಿಯ |
ನಿರತರಕ್ಷಿಸಿ ಬೆಳಗೊಡಿಸುವುದೆ |
ಪರಮ ಜಪತಪ ಬಕ್ತಿಯೇ ಕಾಣಿಕೆಯು ಸರ್ವಸ್ವ || ೭ ||

ಸೃಷ್ಟಿಸುಂದರಿ ಪಿತನಿಗವರಾ |
ಶ್ರೇಷ್ಟ ಚಿನ್ನಾಭರಣವೇತಕ? |
ಕಷ್ಟಬಡುವರ ಒಡತನದ ಉರಿಯಿಂದ ಬೇವವರ ||
ದೃಷ್ಟಿಪುದೆ ಕರುಣಾಲಿ ಲೋಕದ |
ಬೀಷ್ಟಮನಸಾಬಯಸಿ ನಡೆವುದೆ |
ತುಷ್ಟಿಗೊಡುವುದುಪೆನಗೆ, ಲೋಕದ ಜನಕ, ಪಾಲಕಗೆ || ೮ ||

ಎಲ್ಲಿ ಸ್ವಾರ್ಥತ್ಯಾಗ ಮೆರೆವುದೊ, |
ಎಲ್ಲಿ ವಿದ್ಯಾದಾನ ನಡೆವುದೊ, |
ಎಲ್ಲಿ ಆಶೆಯು ನಿರ್ಧನರ ನಡೆಸುವುದೊ, ಬಾಲರೊಳು ||
ಎಲ್ಲಿ ಭ್ರಾತೃಪ್ರೇಮ ಮೊಳೆವುದೊ, |
ಅಲ್ಲಿಯೇ ನಾನಿರಲು ತೋಷಿಪೆ |
ನೆಲ್ಲ ನಿನಗುಸುರಿದೆನು ದೇಗುಲವೆಂದು ತಿಳಿಯಿದನು. || ೯ ||
ಆ ದಯಾನಿಧಿ ನುಡಿಯೆ ಸುರರೊಳು |
"ಸೋದರರು ಸೋದರರು ನಾವ್" ಎಂ |
ದಾದವರಗಾನದ ಮಹಾಧ್ವನಿ ಗಗನವನು ತುಂಬಿ ||
ಮೇದಿನಿಯ ಗಿರಿನದಿಗಳೆಲ್ಲವು |
"ಸೋದರರು ಸೋದರರು" ಎಂದುವು |
"ಸೋದರರು ಸೋದರರು" ಎಂದುದು ಪಕ್ಷಿಕುಲವು || ೧೦ ||

ಸ್ಥಿರಚರವು ಪ್ರಾರ್ಥಿಸಿದುದಾಗಲಿ: |
"ಪರನಿವಾಸಿಯೆ ತಂದೆ! ಜಯ! ಜಯ! |
ಬರಲಿ ನಿನ್ನಯ ರಾಜ್ಯ"ವೆನೆ, ಕ್ಷಣದೊಳಗೆ ಸಕಲವದು ||
ತೆರೆದ ಕಣ್ಣುಗಳೆದುರು ಕಾಣದು. |
ಬರಲಿ ನಿನ್ನಯ ರಾಜ್ಯವೆಂದೇ |
ಪರಿಚಯದ ಕಂಠರವ ಪೇಳ್ವದು ಎಚ್ಚರವು ಬಂತು. || ೧೧ ||

A. Student,
Xian. High School.

ನಿರಾಶ್ರಿತ ಜನಸಹಾಯಕ ಸಂಘಕ್ಕೆ ನಾನು ಏತಕ್ಕೆ ಸಹಾಯ ಮಾಡಬೇಕೆಂಬುದಕ್ಕೆ ನನಗೆ ತೋರುವ ೧೧ ಕಾರಣಗಳು.

೧ ಬಡತನದ ಸಂಬಂಧ ಅಥವಾ ಕುಲನೀಚವಾದ್ದೆಂಬ ಕಾರಣದಿಂದ ತುಚ್ಛೀಕರಿಸಲ್ಪಡುವ ಜನರ ಮೇಲೆ ದೇವರ ಪ್ರೀತಿ ವಿಶೇಷ ಉಂಟು ಆದುದರಿಂದ ಸ್ಪರ್ಶಿಸಕೂಡದವರೆಂದು ನರಿ ನಾಯಿಗಳಿಂತಲೂ ನೀಚ ಪ್ರಾಣಿಗಳೆಂದು ನಿಂದಿಸಲ್ಪಡುವ ಜನರನ್ನು ದಯಾಭಾವದಿಂದ ನಡಿಸುವುದು ದೇವರ ಚಿತ್ತಕ್ಕೆ ಅನುಗುಣವಾದ ಪುಣ್ಯಕಾರ್ಯವು ಅಂಥವರನ್ನು ನಿರ್ದಯೆಯಿಂದ ನಡಿಸುವುದು ಪಾಪ ಕೃತ್ಯವು

೨. ಮೇಲು ಸ್ಥಿತಿಯವರು ಕೀಳು ಸ್ಥಿತಿಯವರ ಕ್ಷೇಮ ಮತ್ತು ಉದ್ಧರಣೆ ಯತ್ನಿಸುವುದು ದೇಶೋನ್ನತಿಯನ್ನು ಸಂಪಾದಿಸುವ ಉಪಾಯವು—ನಮ್ಮ ದೇಶದ ಹೊಲೆಯರಿಗೆ ಸಮಾನರಾಗಿದ್ದ ಪಿತರೂ, ಹಿನ್ನಿನರೂ ಎಂಬ ಜನರನ್ನು ಜಪಾನಿಯರು ಉದ್ಧರಿಸಿದ್ದರಿಂದ ಜಪಾನೀ ಜನಾಂಗವು ಉದ್ಧಾರವಾಯಿತು

೩ ಆಹಾರದಲ್ಲಿ ತುಸಾಕುಳಿತನವಿಲ್ಲಗ, ಬಿಸಿಲಿನಲ್ಲಿಯೂ, ಮಳೆಯಲ್ಲಿಯೂ ಒಳಲಿ, ಜನಾಂಗದ ಕ್ಷೇಮ ಭದ್ರಪಡಿಸುವ ಕಾರ್ಯಗಳಲ್ಲಿ ವಿಶೇಷ ಕಷ್ಟ ತಾಳಲು ಸಮರ್ಥರಾದ ಜನರನ್ನು ಮುಟ್ಟ ಕೂಡದ ಜನರೆಂದು ನಮ್ಮ ಜನರು ದೂರ ಮಾಡಿ, ನಮ್ಮ ಕಾಲುಗಳನ್ನೇ ನಾವು ಕಳೆಕೊಂಡು ಮೋಂಟರಾದಂತೆ ಆಯಿತು —ಈ ಸ್ವಘಾತದ ನಡತೆಯು ಸಂಬಂದ ಈಗ ನಾವು ಪ್ರಾಯಶ್ಚಿತ [illegible]

೪ ದೇಶೀಯ ಬಂಧು ಜನರನ್ನು ಮುಟ್ಟಕೂಡದವರೆಂದು ಮಾಡಿ ನಮ್ಮ ದೇಶದಲ್ಲೇ ನಾವು ವಿದೇಶೀ ಮತಗಳ ಪ್ರಸರಣೆಗೆ ಉತ್ತೇಜನ ಕೊಟ್ಟೆವು—ನಾವು ದೂರ ಮಾಡುವ ನಮ್ಮ ಜನರನ್ನು ಇಸ್ಲಾಮಿಗಳೂ, ಕ್ರೈಸ್ತರೂ ಪ್ರೀತಿಯಿಂದ ಸಮಾಪಿಸಿಕೊಂಡ ಕಾರಣ ಇಸ್ಲಾಮಿಗಳ ಮತ್ತು ಕ್ರೈಸ್ತರ ಸಂಖ್ಯೆ ನಮ್ಮ ದೇಶದಲ್ಲಿ ಹೆಚ್ಚಿತು. ವಿದೇಶೀ ಜನರು ನಮ್ಮ ದೇಶದ ಅಂತ್ಯಜರನ್ನು ಪ್ರೀತಿಸುವಾಗ ನಾವು ಅವರಿಗಿಂತಲೂ ಹೆಚ್ಚಾಗಿ ಅಂತಹ ಜನರನ್ನು ಪ್ರೀತಿಸುವುದು ನಮ್ಮ ಕರ್ತವ್ಯವು.

೫ ನಮ್ಮ ಮತಗಳನ್ನು ನಂಬಿ, ನಮ್ಮ ದೇವತೆಗಳನ್ನು ಆರಾದಿಸಿ, ನಾವೇ ಆಧಾರವೆಂತ ನಮ್ಮನ್ನು ಹಿಂಬಾಲಿಸಿ ಬರುವ ನಮ್ಮ ಜನರನ್ನು ಅಶುದ್ಧರೆಂಬ ಭ್ರಾಂತಿಯಿಂದ ನಾವು ದೂರಮಾಡುವುದೂ, ಅವರು ವಿದೇಶೀ ಮತಗಳನ್ನು ಅವಲಂಬಿಸುತ್ತಲೇ ಅವರು ಶುದ್ಧರೆಂತ ಭಾವಿಸಿ, ಅವರನ್ನು ಸಮಾಪಿಸಿಕೊಳ್ಳುವುದೂ, ಇಂತಹ ಸ್ವಘಾತದ ಬುದ್ಧಿಯು ಹಿಂದುಗಳಾದ ನಮ್ಮ ಮಧ್ಯ ಹೊರತು ಹಿಂದೂಸ್ಥಾನದ ಹೊರಗೆ ಭೂಮಿಯಲ್ಲಿ ಯಾವ ಜನರ ಮಧ್ಯವೂ ನೋಡಸಿಕ್ಕದು.

೬ ಇತರ ನಾಗರಿಕ ಜನಾಂಗದವರಿಗಿಂತಲೂ ವಿಶೇಷ ಜ್ಞಾನ ಸಂಪತ್ತು ಇದ್ದಂಥವರಾಗಿದ್ದು ಪೂರ್ವಜನ ಮಹತ್ವದ ಪ್ರಯೋಜನವನ್ನು ಕಳಕೊಂಡು ನಮ್ಮಂತೆ ಸ್ಥಿತಿ ಕೆಡಿಸಿಕೊಂಡ ಇತರ ಯಾವ ಜನಾಂಗವೂ ಪ್ರಪಂಚದಲ್ಲಿ ಇರುವುದಿಲ್ಲ. ಈ ಅಧೋಗತಿಗೆ ಕಾರಣವಾದದ್ದು ಜಾತಿ ಮತ್ಸರವೇ. ಮುಟ್ಟಕೂಡದ ಜನರನ್ನು ನಾಯಿ ಹಂದಿಗಳಿಗಿಂತಲೂ ಉತ್ತಮರಾದ ಮನುಷ್ಯರೆಂತ ನಾವು ಭಾವಿಸಿ ಅವರನ್ನು ಮುಟ್ಟುವ ಸ್ಥಿತಿಗೆ ತಂದರೆ, ಜಾತಿ ಮತ್ಸರವನ್ನು ಸ್ವಲ್ಪ ಮಟ್ಟಿಗಾದರೂ ತಗ್ಗಿಸುವಂತೆ ಆಗುವುದು.

೭. ಸುಮಾರು ಒಂದು ಸಾವಿರ ವರುಷಗಳ ಹಿಂದೆ ಹಿಂದೂಸ್ಥಾನವನ್ನು ಸಂದರ್ಶಿಸಲಿಕ್ಕೆ ಬಂದ ಅಲ್ಬರೂನಿ ಎಂಬ ಇಸ್ಲಾಮಿ ವಿದ್ವಾಂಸನು ನಮ್ಮ ಜನರ ಈ ಸ್ವಘಾತದ ಬುದ್ಧಿಯನ್ನು ನಿಂದಿಸಿದನು. ಗೋರಾ ವಿದ್ವಾಂಸರೂ, ಜಪಾನೀ ವಿದ್ವಾಂಸರೂ, ಈಗಲೂ ದೂಷಿಸುತ್ತಾರೆ. ನಮ್ಮ ಕ್ಷೇಮಚಿಂತಕರಾದ ಗೋರಾ ವಿದ್ವಾಂಸರು ನಮ್ಮ ಜನಾಂಗದ ಉದ್ಧಾರಕೆಯು ನಮ್ಮ ದೇಶದ ಅಂತ್ಯಜರ ಉದ್ಧರಣೆಯ ಮೇಲೆ ಹೊಂದಿರುತ್ತದೆಂತ ಬೋಧಿಸುತ್ತಾರೆ. ಪ್ರತೀ ವರುಷವೂ ಡಿಸೆಂಬರ ತಿಂಗಳಲ್ಲಿ ಕಲ್ಕತ್ತಾ, ಮುಂಬಾಯಿ, ಲಾಹೋರ್, ಕರಾಚಿ, ಮದರಾಸು ಮೊದಲಾದ ಪಟ್ಟಣಗಳಲ್ಲಿ ಸೇರುವ [illegible] ಸಭೆಗಳಲ್ಲಿ [illegible]

ರಸ್ಥರೂ ಇತರ ಪ್ರಾಜ್ಞರೂ, ಅಂತ್ಯಜರನ್ನು ಉದ್ಧರಿಸುವುದು ದೇಶೋನ್ನತಿಗೆ ಅಗತ್ಯವಾದ ಕಾರ್ಯವೆಂತ ಭಾಷಣಗಳನ್ನು ಮಾಡಿ, ಅಂತಹ ಜನರ ಉದ್ಧರಣೆಯ ಬಗ್ಗೆ ಏರ್ಪಾಡು ಮಾಡಬೇಕೆಂತ ನಿರ್ಣಯಿಸುತ್ತಾರೆ ಸರಕಾರದವರಂತೂ ಅಂತ್ಯಜರ ಉದ್ಧರಣೆಗೆ ಪ್ರೋತ್ಸಾಹ ಕೊಡುತ್ತಲೇ ಬರುತ್ತಾರೆ. ಹೀಗಿರುತ್ತ ಇನ್ನು ಅಂತ್ಯಜರ ಕಡೆಗೆ ನಾವು ನಿರ್ದಯೆ ತೋರಿಸುವುದು ಅಯುಕ್ತವು

೮. ಮೇಲು ಜಾತಿಯವರ ಮೇಲುಪಂಕ್ತಿಯನ್ನು ಕೀಳು ಜಾತಿಯವರು ಅನುಸರಿಸುವುದರಿಂದ ಅಂತ್ಯಜರಲ್ಲಿ ಕೂಡಾ ಜಾತಿ ಭೇದವುಂಟು. ಈ ಕಾರಣದಿಂದ ಹಳ್ಳಿಹಳ್ಳಿಗಳಲ್ಲಿ ಒಬ್ಬರ ಬಾವಿಗೆ ಇನ್ನೊಬ್ಬರು ಮುಟ್ಟಕೂಡದ ವಿವಿಧ ಜಾತಿಯವರು ಇರುವುದರಿಂದ ಜನರ ಪ್ರಯೋಜನಕ್ಕೆ ಬಾವಿಗಳನ್ನೂ, ಕೆರೆಗಳನ್ನೂ ಒದಗಿಸಿಕೊಡುವುದು ಸರಕಾರದವರಿಗೆ ಸಹ ಪ್ರಯಾಸದ ಕಾರ್ಯವಾಗಿದೆ ನೀರಿನ ಅಗತ್ಯವಿರುವ ಮುಟ್ಟ ಕೂಡದ ಜಾತಿಯವರಿಗೆ ಸರಕಾರಿ ಬಾವಿಗಳ ಪ್ರಯೋಜನ ಸಿಕ್ಕುವುದಿಲ್ಲ. ಆದುದರಿಂದ ಮುಟ್ಟಕೂಡದ ಜನರೆಂಬ ಅಂತ್ಯಜರನ್ನು ಮುಟ್ಟುವ ಹಾಗೆ ಅವರನ್ನು ಮೇಲಕ್ಕೆ ಎತ್ತುವುದು ಅಗತ್ಯವು.

೯. ಅತೀ ನೀಚರೂ, ಹೊಲೆಯರೂ ಅನ್ನಿಸಿಕೊಳ್ಳುವ ಜನರನ್ನು ವಿದ್ಯಾ ಪ್ರಧಾನದಿಂದಲೂ, ಇತರ ಪ್ರಯೋಜನದಿಂದಲೂ ಸ್ವಲ್ಪವಾದರೂ ಊರ್ಧ್ವ ಸ್ಥಿತಿಗೆ ತರುವದಾದರೆ, ಮೇಲು ಜಾತಿಯವರಾಗಿದ್ದು ಶುಚಿತ್ವದ ಕಡೆಗೂ, ವಿದ್ಯೆಯ ಕಡೆಗೂ ಗಮನ ಕೊಡದೆ ಹೊಲೆಯರಂತೆ ನಡಕೊಂಡು ಕೀಳು ಸ್ಥಿತಿಗೆ ಬಂದ ಹೊಲೆಯರಲ್ಲದವರ ಸ್ಥಿತಿ ಸಹ ಸಹಜವಾಗಿಯೇ ಮೇಲಕ್ಕೆ ಬರುವುದು

೧೦. ಮದರಾಸು ಸಂಸ್ಥಾನದಲ್ಲಿ ಎಲ್ಲಾ ಜಿಲ್ಲೆಗಳಿಗಿಂತಲೂ ದಕ್ಷಿಣ ಕನ್ನಡ ಜಿಲ್ಲೆಯ ಹೊಲೆಯರ ಸ್ಥಿತಿಯು ಅತೀ ಕನಿಷ್ಠ. ಶಾಲೆಗೆ ಹೋಗುವ ಪ್ರಾಯದ ಹೊಲೆಯರ ಮಕ್ಕಳಲ್ಲಿ ಇತರ ಜಿಲ್ಲೆಗಳ ಸರಾಸರಿಯು ಸೇಕಡಾ ೧೧ ಆಗಿರುವಾಗ್ಗೆ ದಕ್ಷಿಣ ಕನ್ನಡ ಜಿಲ್ಲೆಯು ಸೇಕಡಾ ಒಂದರಂತೆ ಇರುವುದು. ಆದುದರಿಂದ ನಮ್ಮ ಜಿಲ್ಲೆಯ ಹೊಲೆಯರ ಸ್ಥಿತಿ ಉದ್ಧರಿಸುವ ಕಾರ್ಯವನ್ನು ನಾನು ಪ್ರೋತ್ಸಾಹಿಸುವುದು ನನ್ನ ಕರ್ತವ್ಯವಾಗಿರುತ್ತದೆ.

೧೧ ಮಹಾನುಭಾವರಾದ ಕುದ್ಮುಲ ರಂಗರಾಯರು ಮತ್ತು ಇತರ ಕೆಲವು ಗೃಹಸ್ಥರು ಅಂತ್ಯಜರ ಉದ್ಧರಣೆಯನ್ನು ಯತ್ನಿಸುವುದು ಸತ್ಕಾರ್ಯವೆಂದು ನನ್ನ ಅಂತರಾತ್ಮವು ನನಗೆ ಹೇಳುತ್ತದೆ. ನಾನು ಇದೇ ಜಿಲ್ಲೆಯಲ್ಲಿ ಹುಟ್ಟಿ ಬೆಳೆದವನಾಗಿರುವುದರಿಂದ ಇಂತಹ ಉದ್ಧರಣೆಯ ಕಾರ್ಯದಲ್ಲಿ ನಾನು ಸಹ ಭಾಗಿಯಾಗುವುದೂ, ದೇವರು ನನಗೆ ಕೊಡುವ ಹಣದಿಂದ ಸ್ವಲ್ಪವಾದರೂ ಇಂತಹ ಜನರ ಉದ್ಧರಣೆ ಕಾರ್ಯಕ್ಕೆ ಕೊಡುವುದೂ ನನ್ನ ಅಗತ್ಯವಾದ ಕೆಲಸವೆಂದು ನನಗೆ ತೋರುತ್ತದೆ.

ಮಂಗಳೂರು,
ತಾ 24 – 7 – 1914 ಸುಬ್ರಾಮಯ್ಯ.

ಪತ್ರವ್ಯವಹಾರ.

ಗಣೇಶ ಚತುರ್ಥಿ ನಿರ್ಣಯವು ಬೇಕಾಗಿರುವದು.

ಅಯ್ಯಾ,

ಹಿಂದೊಮ್ಮೆ ತಮ್ಮ ಪತ್ರದ ಕೆಲವು ಸಂಚಿಕೆಗಳಲ್ಲಿ ಪ್ರಕಟವಾದ ಸಾಮಾನ್ಯ ವೈದಿಕರ ಪತ್ರಗಳಲ್ಲಿ ಇದೇ ಸಂವತ್ಸರದಲ್ಲಿ ಕೆಲವು ವ್ರತಕಾಲಗಳು ಅಕಾಲದಲ್ಲಿ ಸೂಚಿಸೋಣಾಗಿವೆ ಎಂದು ಓದಿದ್ದು ನೆನಪಿಗೆ ಬರುವದು. ಇವರು ಸೂಚಿಸಿದಂತೆ ಅಕಾಲದಲ್ಲಿ ಸೂಚಿಸೋಣಾದ ವ್ರತಗಳು ಯಾವಾಗ ಇವರಿಂದ ತಮ್ಮ ಪತ್ರಮೂಲಕ ಸೂಚಿಸೋಣಾಗುವವೆಂತ ಹಾರೈಸಿಕೊಂಡಿದ್ದೆ. ಆದರೆ ಇವರ ಈ ಸೂಚನೆಯು ಇಷ್ಟರತನಕ ತಮ್ಮ ಪತ್ರದಲ್ಲಿ ಬಾರದಿದ್ದದ್ದನ್ನು ನೋಡಿ ಈ ಪತ್ರವನ್ನು ತಮಗೆ ಬರಕೊಂಡದ್ದಾಯಿತು.

ಋಗ್ವೇದಿ ಉಪಾಕರ್ಮವನ್ನು ಈ ವರುಷ ಯಾವಾಗ ಆಚರಿಸಬೇಕೆಂಬ ವಾದವು ತೋರಿಬಂದಿತ್ತು. ಹ್ಯಾಗೂ ಇದನ್ನು ಕೆಲವರು ನಾಗರಪಂಚಮಿ ದಿನ ಆಚರಿಸಿದ್ದರಿಂದಲೂ, ಬಾಕಿ ಇದ್ದವರು ಇದನ್ನು ಬರುವ ಗುರುವಾರ ಆಚರಿಸದೆ ಇರಲಾರದ್ದರಿಂದಲೂ ಈ ವಿಷಯ ಇನ್ನು ನಿರ್ಣಯ ಕೇಳ ಸಲವಿಲ್ಲ. ಹ್ಯಾಗೂ ಆದದ್ದು ಆಗಿಹೋಯಿತು.

ಗಣೇಶ ಚತುರ್ಥಿ ವಿಷಯ ನಿರ್ಣಯವು ಬೇಕಾಗಿರುತ್ತದೆ. ಯಾಕೆಂದರೆ ನಮ್ಮ ಜಿಲ್ಲೆಯಲ್ಲಿ ಪ್ರಚಾರದಲ್ಲಿರುವ ಮೂರು ಪಂಚಾಂಗಗಳಲ್ಲಿ ಅಂದರೆ ರಾ|| ವೇ|| ಉದ್ಯಾವರ ನಾರಾಯಣಾಚಾರ್ಯರದು, ರಾ|| ವೇ|| ಮಂಗಳೂರು ನಾರಾಯಣಾಚಾರ್ಯರದ್ದು ಮತ್ತು ರಾ|| ವೇ|| ಉಡುಪರದು—ಈ ಮೂರು ಪಂಚಾಂಗಗಳ ಪೈಕಿ ಮಂಗಳೂರು ನಾರಾಯಣಾಚಾರ್ಯರ ಮತ್ತು ಉಡುಪರ ಪಂಚಾಂಗಗಳಲ್ಲಿ ಗಣೇಶ ಚತುರ್ಥಿಯು ಸೋಮವಾರ ಆಚರಿಸಲ್ಪಡಬೇಕೆಂದಿರುವುದು. ಉದ್ಯಾವರ ನಾರಾಯಣಾಚಾರ್ಯರು ಚತುರ್ಥಿ ಮಂಗಳವಾರ ಆಚರಿಸಬೇಕೆಂದು ಸೂಚಿಸಿರುವರು. ಪಂಚಾಂಗಗಳ ಈ ಭೇದವನ್ನು ಕಂಡು ನಮ್ಮ ಪುರೋಹಿತರ ಕೂಡೆ ಈ ವರುಷ ಚೌತಿ ಹಬ್ಬವನ್ನು ಯಾವಾಗ ಆಚರಿಸಬೇಕೆಂದು ಕೇಳಿದಾಗ ಅವರು ಅದನ್ನು ಸೋಮವಾರವೇ ಆಚರಿಸಬೇಕೆಂದು ಹೇಳಿ, ತನ್ನ ನಿರ್ಣಯಕ್ಕೆ ಈ ಕೆಳಗಿನ ಕಾರಣಗಳನ್ನು ಕೊಟ್ಟಿರುವರು. ಅವು ಯಾವವೆಂದರೆ:—ಪ್ರಾತಃ ಶುಕ್ಲತಿಲೈಃ ಸ್ನಾತ್ವಾ ಮಧ್ಯಾಹ್ನೇ ಪೂಜಯೇತ್ ನೃಪ | ಎಂದು ಮಧ್ಯಾಹ್ನವು ಮುಖ್ಯ ಕಾಲವೆಂತಲೂ, ಚತುರ್ಥಿ ಗಣನಾಥಸ್ಯ ಮಾತೃವಿದ್ಧಾ ಪ್ರಶಸ್ಯತೇ | ಎಂದು ತೃತೀಯಾ ಯೋಗದ ಪ್ರಾಶಸ್ತ್ಯದಿಂದಲೂ ಸೋಮವಾರವೇ ಆಚರಿಸಬೇಕೆಂದು ಇರುವುದು. ನಮ್ಮ ಪುರೋಹಿತರು ಪಂಚಾಂಗ ಕರ್ತರಲ್ಲದ್ದರಿಂದ ಪುರೋಹಿತರು ಹೇಳಿದ ಈ ನಿರ್ಣಯವು ಸರಿಯೋ ಎಂದು ಮೇಲೆ ಹೆಸರು ಕಾಣಿಸಿದ ಪಂಚಾಂಗ ಕರ್ತರುಗಳು ಶೋಧಿಸಿ ಹೇಳಬೇಕು. ಮಂಗಳೂರು ನಾರಾಯಣಾಚಾರ್ಯರು ಮತ್ತು ಉಡಿಪಿ ಪಂಚಾಂಗಕರ್ತರು ನಮ್ಮ ಪುರೋಹಿತರ ನಿರ್ಣಯವನ್ನು ಆದರಿಸಬಹುದು. ಹೀಗೆ ಆದರಿಸಿದರೆ ಇವರ ಕಾರಣಗಳೇನೆಂಬದನ್ನು ಈ ಪಂಚಾಂಗ ಕರ್ತರು ತಮ್ಮ ಪತ್ರ ಮೂಲಕ ಸರ್ವರಿಗೂ ತಿಳಿಯಪಡಿಸಬೇಕಲ್ಲದೆ ಚತುರ್ಥಿಯನ್ನು ಮಂಗಳವಾರ ಆಚರಿಸಬೇಕೆಂದು ಬರೆದಿರುವ ಉದ್ಯಾವರ ನಾರಾಯಣಾಚಾರ್ಯರು ಸಹ ತಮ್ಮ ಕಾರಣಗಳನ್ನು ತಮ್ಮ ಪತ್ರಮೂಲಕವೇ ತಿಳಿಸಬೇಕೆಂತ ವಿಜ್ಞಾಪಿಸಿಕೊಳ್ಳುತ್ತೇನೆ.

ಗಣೇಶ ಚತುರ್ಥಿ ಹಬ್ಬವು ಜಾತಿಭೇದಗಳನ್ನು ಲೆಕ್ಕಿಸದೆ ಸರ್ವ ಹಿಂದೂಗಳಿಂದ ಭರತಖಂಡದ ಎಲ್ಲಾ ಪ್ರಾಂತ್ಯದಲ್ಲಿ ಆಚರಿಸಲ್ಪಡತಕ್ಕಂಥಾದಾದ್ದರಿಂದ ಈ ಹಬ್ಬವನ್ನು ಸರ್ವರೂ ಒಂದೇ ದಿನ ಆಚರಿಸುವುದು ಅಗತ್ಯವಾಗಿದೆ. ಆದ್ದರಿಂದ ಈ ಜಿಲ್ಲೆಯಲ್ಲಿ ಸಹ ಈ ಹಬ್ಬವು ಅನ್ಯಥಾ ಆಚರಿಸಲ್ಪಡದಂತೆ ಈಗಲೇ ಈ ಹಬ್ಬದ ನಿರ್ಣಯವನ್ನು ಕೇಳಿ ಈ ಲೇಖವನ್ನು ತಮಗೆ ಬರಕೊಂಡಿರುವೆನು. **ಗಣೇಶನ ಭಕ್ತ**

ಕಾಫಿ ಹೊಟೇಲುಗಳೂ ಶೇಂದಿ ಅಂಗಡಿಗಳೂ.

೨.

ಸ್ವಾಮಿ,

'ಮಾಜಿ ಗುಲಾಮನು' ಕಾಫಿ ಹೊಟೇಲುಗಳಲ್ಲಿ ತಾನು ಪಡದಿರುವ ಅನುಭವದ ಮಾತುಗಳನ್ನು ಕಳದ ಸಂಚಿಕೆಯಲ್ಲಿ ಓದಿನೋಡಿ ಬಹಳ ಸಂತೋಷಪಟ್ಟೆ. ಆದರೆ ಈ ಹೊಟೇಲುಗಳಿಂದುಂಟಾಗುವ ಕೇಡನ್ನು ನಿವಾರಿಸುವ ಬಗೆ ಹ್ಯಾಗೆ? ವಿದ್ಯಾರ್ಥಿಗಳು ಈ ಹೊಟೇಲುಗಳಿಂದ ಕೆಡುತ್ತಾರೆಂಬ ಮಾತು ನಿಶ್ಚಯವಾಗಿರುವದು. ಆದ್ದರಿಂದ ವಿದ್ಯಾರ್ಥಿಗಳು ಹೊಟೇಲುಗಳಿಗೆ ಹೋಗದಂತೆ ಅವರ ಹೆತ್ತವರಾಗಲಿ, ಶಾಲಾ ಉಪಾಧ್ಯಾಯರಾಗಲಿ ಯಾಕೆ ಪ್ರಯತ್ನಿಸಕೂಡದು? ಬಾಕಿ ಜನ ಸಮೂಹವು ಈ ಹೊಟೇಲುಗಳ ಮೂಲಕ ಉಂಟಾಗುವ ಕೇಡುಗಳಿಗೆ ಆಹುತಿಯಾಗದಂತೆ ಯಾವ ಸಾಧನೆ ಮಾಡಬೇಕು?

ಹೊಟೇಲುಗಳು ಇರಕೂಡದೆಂದೇ ಸಾಧಿಸಿದರೆ ಆ ಸಾಧನೆಯು ಉಚಿತವೋ ಅಥವಾ ನೆರವೇರುವದೋ? ನೆರವೇರಬೇಕಾದರೆ ಈ ಸಾಧನೆಯಲ್ಲಿ ಯಾರ್ಯಾರ ಸಹಾಯವು ಅಗತ್ಯವಾಗಿರುವುದು?

ಹೊಟೇಲುಗಳ ಇರವನ್ನು ಅಡಗಿಸುವದು ಸಾಧ್ಯವಲ್ಲವೆಂತಾದರೆ ಅವುಗಳು ಎಷ್ಟು ಆಕ್ಷೇಪಕರವಾದವುಗಳೆಂಬದನ್ನು ನೋಡಿಕೊಂಡು ಅಂಥಾ ಆಕ್ಷೇಪಗಳು ಆ ಹೊಟೇಲುಗಳಲ್ಲಿ ಇಲ್ಲದಂತೆ ಮಾಡಬೇಕಾದರೆ ಸಾಧನೆ ಯಾವದು? ಹ್ಯಾಗೆ ಪ್ರಯತ್ನಿಸಿದರೂ ಮಾಜಿ ಗುಲಾಮನು ತೋರಿಸಿಕೊಟ್ಟಿರುವ ಮತ್ತು ಯಥಾರ್ಥವಾಗಿರುವ ಕಾಫಿ ಹೊಟೇಲುಗಳಿಗೂ ಶೇಂದಿ ಅಂಗಡಿಗಳಿಗೂ ಇರುವ ಸಂಬಂಧವನ್ನು ತಪ್ಪಿಸಿಬಿಡುವದು ಸಾಧ್ಯವೋ? ಶೇಂದಿ ಅಂಗಡಿಗಳಿಗೆ ಸಮಾನವಾಗಿರುವ ಕಾಫಿ ಹೊಟೇಲುಗಳು ಊರಲ್ಲಿರುವದು ಉಚಿತವೋ?

ಕಾಫಿ, ಚಾ ಮೊದಲಾದ್ದನ್ನು ಖಜ್ಜಾಯಗಳೊಡನೆ ಎಮ್ಮೆ ಅಥವಾ ಕೋಣಗಳು ಹಿಂಡಿ ತಿಂದ ಓಪಾದಿಯಲ್ಲಿ ತಿನ್ನುವಂಥಾ ಅಭ್ಯಾಸವು ಇಲ್ಲಿ ಮೊದಲಿನಿಂದಿತ್ತೋ! ಇಲ್ಲದಿದ್ದರೆ ಈ ಅಭ್ಯಾಸವನ್ನು ನಾವು ಯಾರಿಂದ ಮತ್ತು ಯಾವ ಕಾರಣಗಳಿಂದ ಕಲಿತುಕೊಂಡೆವು? ಇಂತಹ ಅಭ್ಯಾಸವು ಮನೆಗಳಲ್ಲಿ ಸಹ ಬೆಳೆದುಹೋಗಿ ಈಗ ಎಂತಹ ಅನರ್ಥಗಳು ಉಂಟಾಗುತ್ತವೆ? ಇಂತಹ ಅನರ್ಥಗಳನ್ನು ಹ್ಯಾಗೆ ನಿಲ್ಲಿಸಿಬಿಡಬಹುದು ಮತ್ತು ಈ ಅಪಾಯದ/ವಿಪರೀತ ಗುಣವನ್ನು ಹ್ಯಾಗೆ ತಿಳಿಸಬಹುದು?

ಸ್ವಾಮೀ, ಮಾಜಿ ಗುಲಾಮನು ಈ ವಿಷಯಗಳಲ್ಲಿ ಬಹಳ ಅನುಭವವುಳ್ಳವನೆಂತ ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಆತನ ಪತ್ರದಿಂದ ತೋರಿಬರುವುದರಿಂದ ನಾನು ಮೇಲೆ ಬರೆದಿರುವ ಪ್ರಶ್ನೆಗಳನ್ನು ಒಂದೊಂದಾಗಿಯೇ ತಕ್ಕೊಂಡು ತಮ್ಮ ಪತ್ರಮೂಲಕ ಉತ್ತರಗಳನ್ನು ವಿವರಿಸಿ ಬರದರೆ ಲೋಕೋಪಕಾರವಾಗುತ್ತಿತ್ತು.

ಇತಿ

ಮಾಜಿ ಗುಲಾಮನ ಸ್ನೇಹಾಭಿಲಾಷಿ

———o———

ಶ್ರೀಮಂತ ಮದ್ರಾಸು ಗವರ್ನರ ಪ್ರಭುಗಳ ಆಗಮನ

ಶ್ರೀಮಂತರಾದ ಗವರ್ನರ ಪ್ರಭುಗಳ ಸವಾರಿಯು ಅಕ್ಟೋಬರ ತಿಂಗಳಲ್ಲಿ ನಮ್ಮ ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಿಗೆ ದಯಪಾಲಿಸುವುದೆಂದೂ, ಅವರಿಗೆ ಅವರ ದಿವ್ಯವಾದ ಪದವಿಗನುಸಾರವಾದ ಆತಿಥ್ಯ ಉಪಚಾರಗಳನ್ನು ಯಾವ ಪರಿಯಲ್ಲಿ ಮಾಡುವುದೆಂಬ ವಿಷಯದಲ್ಲಿ ಆಲೋಚಿಸುವ ಬಗ್ಗೆ ಗವರ್ನಮೆಂಟು ಕೊಲೇಜಿನಲ್ಲಿ ಒಂದು ಮಹಾಸಭೆಯು ಕೂಡಿತ್ತೆಂದೂ ಕೇಳಿ ರಾಜಭಕ್ತರಾದ ಸರ್ವ ಪ್ರಜಾಜನರಿಗೂ ಅತ್ಯಾನಂದವಾಯಿತು.

ಮಂಗಳೂರಿನಲ್ಲಿ ಒಂದು ಟೌನ್‌ಹೋಲು ಮಂದಿರವು ಇಲ್ಲದ್ದರಿಂದ ಗವರ್ನಮೆಂಟು ಕೊಲೇಜಿನಲ್ಲಿ ಯಾ ಇತರ ಕಟ್ಟೋಣಗಳಲ್ಲಿ ಸಾರ್ವಜನಿಕ ಮಹಾಸಭೆಗಳು ಕೂಡುವದು ಅವಶ್ಯಕವಾಗಿದೆ. ಇತ್ತಲಾಗೆ ಡಿಸ್ಟ್ರಿಕ್ಟು ಕೋಓಪರೇಟಿವ್ ಬ್ಯಾಂಕಿನ ಮಹಾಸಭೆಯು ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ನೆರೆದಿತ್ತು. ಡಿಲ್ಲಿ ದರ್ಬಾರು ಮಹೋತ್ಸವದ ಕಾಲದಲ್ಲಿ ಮಂಗಳೂರಿನಲ್ಲಿ ಮೈದಾನಿನಲ್ಲಿ ಒಂದು ಚಪ್ಪರ ಹಾಕುವ ಅಗತ್ಯ ಬಿತ್ತೆಂದೂ, ಅದರಲ್ಲಿ ಸ್ಥಳ ಸಾಕಾಗದೆ ಬಾಲಕರು ಬರೀ ಮೈದಾನಿನಲ್ಲಿ ನಿಲ್ಲುವ ಸಂದರ್ಭ ಒದಗಿತ್ತೆಂದೂ ನಾವು ಕೇಳಿದ್ದೇವೆ. ಆದರೆ ವಿಶಾಲವಾದ ಒಂದು ಟೌನ್ ಹೋಲ್ ಮಂದಿರವಿರುತ್ತಿದ್ದರೆ ಇಂಥಾ ಸ್ಥಳದ ಅಡಚಣೆಯಾಗುತ್ತಿದ್ದಿಲ್ಲ. ಯಾವ ಜಿಲ್ಲೆಯಲ್ಲಿಯಾದರೂ ಶ್ರೀಮಂತ ಗವರ್ನರ ದೊರೆಗಳು ಚಿತ್ತೈಸಿದಾಗ ಅವರುಗಳಿಗೆ ಆದರಪೂರ್ವಕವಾಗಿ ಮೆರವಣಿಗೆಯಿಂದ ಕರೆತಂದು ಟೌನ್ ಹೋಲ್ ಮಂದಿರದಲ್ಲಿ ಸತ್ಕರಿಸಿ, ಅಲ್ಲೇ ಸ್ವಾಗತ ಭಾಷಣವನ್ನು ಕೂಡಾ ಮಾಡುವ ಸಾಂಪ್ರದಾಯವಿರುವುದು. ಆದರೆ ನಮ್ಮ ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಿನಲ್ಲಿ ಗವರ್ನರ ಪ್ರಭುಗಳು ಇತ್ಯಾದಿ ದೊಡ್ಡ ಮನುಷ್ಯರ ಸತ್ಕಾರ, ಸಾರ್ವಜನಿಕ ಪ್ರದರ್ಶನ, ಮತ್ತು ಮಹಾಸಭೆಗಳ ಕೂಡುವಿಕೆ ಮೊದಲಾದ ಎಲ್ಲಾ ತರದ ಮಹಾಕಾರ್ಯಗಳ ಉಪಯೋಗಕ್ಕಾಗಿ ವಿಶಾಲವಾದೊಂದು ಟೌನ್ ಹೋಲ್ ಇಲ್ಲದೆಹೋಯಿತು! ಬಾಯಾರಿಕೆಯಾದಾಗ ಬಾವಿ ಅಗಿಯಲಿಕ್ಕೆ ಹೋದ ಹಾಗೆ ಅವಶ್ಯವಿದ್ದಾಗ ಹಂಗಾಮಿಯಾಗಿ ಚಪ್ಪರಗಳನ್ನು ಕಟ್ಟಿ, ಅಥವಾ ಬೇರೆ ಖಾಸಗಿ ಕಟ್ಟೋಣಗಳನ್ನು ಉಪಯೋಗಿಸಿ ತಾತ್ಕಾಲಿಕ ಉಪಶಮನಕ್ಕೆ ಮನಗೊಟ್ಟು ಕಾಲಹರಣೆ ಮಾಡುವ ಸ್ಥಿತಿ ಒದಗಿದೆ.

ಮಂಗಳೂರಿನಲ್ಲಿ ಒಂದು ಟೌನ್ ಹೋಲ್ ಮಂದಿರವನ್ನು ಕಟ್ಟಿಸುವ ಬಗ್ಗೆ ಹಿಂದೆ ವಂತಿಗೆ ಕೂಡಾ ವಸೂಲು ಆಗಿತ್ತೆಂದು ಕೇಳುವೆವು. ಇದು ನಿಜವಾದರೆ ಆ ಐವಜು ಎಲ್ಲಿ ಹೋಯಿತು? ಈ ಕುರಿತು ನಮ್ಮ ಕಲೆಕ್ಟರ್ ದೊರೆಗಳಾದರೂ ವಿಚಾರಿಸಿದರೇ? ಇನ್ನಾದರೂ ಸರ್ವಜನ ಹಿತೈಷಿಗಳಾದ ಕಲೆಕ್ಟರ್ ದೊರೆಗಳು ಈ ಟೌನ್ ಹೋಲ್ ಮಂದಿರವನ್ನು ಕಟ್ಟಿಸುವುದಕ್ಕೆ ಮನಸ್ಸು ಕೊಟ್ಟರೆ ಎಷ್ಟೋ ಶ್ರೇಯಸ್ಕರವಾದೀತು. ಅವರು ಈ ಜಿಲ್ಲೆಯಲ್ಲಿ ಆಡಳಿತೆ ನಡಿಸಿರುವಾಗಲೇ ಈ ಕಾರ್ಯವನ್ನು ಸಿದ್ಧಿಗೊಳಿಸುವ ಸಾಧನೆ ಮಾಡಿದರೆ ಅವರು ಮಾಡಿಸಿದ ಜನೋಪಕಾರವಾದ ಎಲ್ಲಾ ಸತ್ಕಾರ್ಯಗಳಿಗೂ ಈ ಟೌನ್ ಹೋಲ್ ಎಂಬುದು ಶಿರೋಭೂಷಣವಾಗಿ ಪ್ರಕಾಶಿಸಿ ಶಾಶ್ವತವಾದ ಸ್ಮಾರಕರೂಪವಾಗಿ ಮೆರೆದೀತೆಂಬುದಕ್ಕೆ ಸಂಶಯವಿಲ್ಲ.

ಆದ್ದರಿಂದ ಟೌನ್ ಹೋಲಿನ ಬಗ್ಗೆ ಹಣವನ್ನು ಹಿಂದೆ ಒಟ್ಟು ಕೂಡಿಸಿಟ್ಟಿದ್ದ ಪಕ್ಷಕ್ಕೆ ಅದನ್ನು ಸಾರ್ಥಕಗೊಳಿಸಿ, ಸರಕಾರದವರಿಂದಲೂ ಕೂಡಾ ದ್ರವ್ಯಸಹಾಯವನ್ನು ಪಡಕೊಂಡು, ಶ್ರೀಮಂತ ಗವರ್ನರ ಪ್ರಭುಗಳು ಮಂಗಳೂರಿಗೆ ದಯಪಾಲಿಸಿದ ಸಮಯದಲ್ಲೇ ಆ ಟೌನ್ ಹೋಲ್ ಮಂದಿರದ ಪಂಚಾಂಗದ ಅಡಿಗಲ್ಲನ್ನು (Foundation Stone) ಶ್ರೀಮಂತ ಗವರ್ನರ ಪ್ರಭುಗಳ ಸ್ವಹಸ್ತದಿಂದಲೇ ಹಾಕಿಸುವುದಕ್ಕೆ ಮನಃಪೂರ್ವಕವಾದ ಪ್ರಯತ್ನಗಳನ್ನು ಮಾಡಿದರೆ ಬಹಳ ಒಳ್ಳೆಯದಾದೀತು.

ಹರ್ಷರಾಜ.

~~~~~~

ಅಯ್ಯಾ ಸ್ವದೇಶಾಭಿಮಾನಿ ಪತ್ರಕರ್ತರೇ,

ಶ್ರೀ ಸರಸ್ವತೀ ವಿದ್ಯಾಲಯವೆಂಬ ಬಾಲಿಕಾ ಪಾಠಶಾಲೆಯು ನಮ್ಮ ಈ ಮಂಜೇಶ್ವರದಲ್ಲಿ ಕಳೆದ ೧೯೧೨ನೇ ಇಸವಿ ಆಗೋಸ್ತು ೧೭ರಲ್ಲು ಸ್ಥಾಪಿತವಾದ ಸಂಗತಿಯು ತಮ್ಮ ವಾಚಕ ಮಹಾಶಯರಿಗೆ ವಿದಿತವಾಗಿರುವುದಷ್ಟೆ! ಈ ಸಂಸ್ಥೆಗೆ ತಮ್ಮ ಸ್ವೇಚ್ಛೆಯಿಂದಲೇ ಈ ಊರಿನ ಮಾನ್ಯ ಗೃಹಸ್ಥರಲ್ಲೊಬ್ಬರು ಪ್ರತಿಫಲವಿಲ್ಲದೆ ಸ್ಥಳವನ್ನು ದಯಪಾಲಿಸಿದುದಲ್ಲದೆ ನವೀನವಾಗಿ ಶಾಲೆಯನ್ನು ಕಟ್ಟಿಸಿಕೊಡುತ್ತೇನೆಂದು ಸಹಾ ಬಹಿರಂಗವಾಗಿ ಶಾಲೆಯ ಪ್ರಥಮ ವಾರ್ಷಿಕ ವರ್ಧಂತಿಯ ದಿನ ಸಭೆಯಲ್ಲಿ ವಾಗ್ದತ್ತ ಮಾಡಿ ತಮ್ಮ ಔದಾರ್ಯವನ್ನು ವ್ಯಕ್ತಿಕರಿಸಿದುದು ಸಹ ವಾಚಕ ಮಹಾಶಯರ ಸ್ಮೃತಿಪಥಕ್ಕೆ ಬರಬಹುದೆಂದು ಊಹಿಸುತ್ತೇನೆ. ಅಂತಹ ಮಹನೀಯರ ಸಹಾಯದಿಂದಲೂ ಈ ಪುರನಿವಾಸಿಗಳ ವಾತ್ಸಲ್ಯದಿಂದಲೂ ಸದರಿ ಶಾಲೆಯು ಉತ್ತಮ ತರವಾಗಿ ಈ ಗತ ವರುಷದ ವರೇಗೆ ನಡೆದುದು ಸರ್ವರಿಗೂ ಸಂತೋಷಕರ ವಾರ್ತೆಯಾಗಿದೆ. ಸದರೀ ಗತವರುಷದಲ್ಲಿ ಒಮ್ಮಿಂದೊಮ್ಮೆಯೇ ಸದರೀ ಪೋಷಕ ಮಹಾಶಯರು ನವೀನ ಕಟ್ಟಡದ ವಾರ್ತೆಯನ್ನೇ ಹೇಗೋ ತ್ಯಜಿಸಿ, ಉಚಿತಾರ್ಥವಾಗಿ ಕೊಟ್ಟ ಪೂರ್ವಸ್ಥಳವನ್ನೇ ಬಿಟ್ಟುಕೊಡಬೇಕಾಗಿ ಒತ್ತಾಯ ಪಡಿಸಲು, ಶಾಲಾಧ್ಯಕ್ಷರು ತಮ್ಮ ಕಷ್ಟಗಳೆಲ್ಲಾ ನಿಷ್ಫಲವಾಗುವ ಕಾಲ ಬಂತೆಂದು ಹೆದರಿ, ತಾಲೂಕು ಬೋರ್ಡಿನವರಿಗೆ ಶಾಲೆಯನ್ನು ಸ್ವಾಧೀನಕ್ಕೆ ತಕ್ಕೊಳ್ಳಬಹುದಾಗಿ ಅರ್ಜಿ ನಿಶಿಂ ಕಳೆದ ೧೯೧೩ನೇ ಇಸವಿ ಜುಲೈ ೧೦ರಲ್ಲು ವಿಜ್ಞಾಪಿಸಿಕೊಂಡರು. ಅರ್ಜಿಯ ವಿಷಯವು ವಿದಿತವಾಗಿದ್ದರೂ, ಸದರಿ ಸ್ಥಳದ ಮಾಲೀಕರಾದ ಮಹನೀಯರು ಬೋರ್ಡಿನವರ ಉತ್ತರಕ್ಕೆ ಅವಕಾಶ ಕೊಡದೆ, ರಿಜಿಸ್ಟ್ರಿ ಪತ್ರ ಮುಖೇನ ತಮ್ಮ ಮುಷ್ಕರವನ್ನು ಪ್ರದರ್ಶಿಸಿದರು. ಇದಕ್ಕೆ ನಮ್ಮ ಉದಾರ ಮಹಾಶಯರಿಗೆ ಒಂದು ನೆವನವೂ ಸಿಕ್ಕಿತು. ವೈದ್ಯರ ಅಭಿಪ್ರಾಯಕ್ಕನುಸಾರವಾಗಿ ಸದರಿ ಶಾಲೆಯ ಕಟ್ಟೋಣವನ್ನು ಹಂಗಾಮಿಯಾಗಿ ಬಿಡಬೇಕಾಗಿ ಬಂತು. ವೈದ್ಯ ಹೇಳಿದ ಹಾಲೋಗರವು ರೋಗಿಯ ಬಯಕೆಗೆ ಸರಿಹೋಯಿತು. ಗತವರುಷದ ವರ್ಧಂತಿಯು ನಿಲ್ಲಲಿಕ್ಕೆ ಇದು ಕಾರಣವಾಯಿತು. ಬೋರ್ಡಿನವರಿಗೆ ಮಾಡಿದ ಅರ್ಜಿಗೆ ವರುಷಾವಧಿಯಾದರೂ ಉತ್ತರ ಬಾರದೆ ಇದ್ದುದರಿಂದ ನೂತನ ಉಚಿತಗಳ ಸಂಸ್ಥೆಯಿಂದ ಸಹಾಯ ಧನವನ್ನು ಕೊಡಿಸಲು ಶಾಲಾಚಾಲಕರು ಪ್ರಯತ್ನಿಸಿ ಕಲೆಕ್ಟರ್ ದೊರೆಗಳ ಅನುಮತಿಯನ್ನು ಅಪೇಕ್ಷಿಸಿದರು. ಕಲೆಕ್ಟರ್ ದೊರೆಗಳು ಇದನ್ನು ನಿರಾಕರಿಸಿದರು. ಬೋರ್ಡಿನವರು ದ್ರವ್ಯ ಅನಾನುಕೂಲತಾವ್ಯಾಜ್ಯದಿಂದ ವಿನಂತಿಯನ್ನು ಆದರಿಸಲಿಲ್ಲ. ಶಾಲಾಧಿಕಾರಿಗಳು ಎಂತಹ ಭಗೀರಥ ಪ್ರಯತ್ನಗಳನ್ನು ಮಾಡಿದರೂ ನಮ್ಮ ಪುರನಿವಾಸಿಕರ ದುರದೃಷ್ಟದಿಂದ ಸಾಫಲ್ಯವು ತೋರದೆ ನಾವೆಲ್ಲರೂ ಕೂಡಿ ಶ್ರೀ ಮದನಂತೇಶ್ವರ ದೇವಸ್ಥಾನಾಧಿಕಾರಿಗಳನ್ನು ವಿಜ್ಞಾಪಿಸಿಕೊಂಡಿರುತ್ತೇವೆ. ಸರ್ವ ಚಿಂತೆಗಳು ಅಂತೆಯೇ ಅಂತವಾಗಲು ದೇವ [illegible] ರುವೆವು.

ಶ್ರೀ ಮದನಂತೇಶ್ವರನೇ ನಮ್ಮ ಪುರದ ಸ್ತ್ರೀ ವಿದ್ಯಾಭ್ಯಾಸಕ್ಕೆ ಸಹಕಾರಿಯಾಗಲಿಯೆಂತ ಏಕಕಂಠರಾಗಿ ಪ್ರಾರ್ಥಿಸುತ್ತೇವೆ.

ಪುರವಾಸಿ.

~~~~~~

ಹೊಗೆಸೊಪ್ಪಿನಲ್ಲಿ ಉಸುಬನ್ನು ಹಾಕಿ ವಿಕ್ರಯಿಸುವದು ತಪ್ಪಾಗುವದಿಲ್ಲವೋ?

ಹೊಗೆಸೊಪ್ಪಿನ ಕಟ್ಟುಗಳಲ್ಲಿ ಹೊಯಿಗೆಯು ಹ್ಯಾಗೆ ತುಂಬಿರುವುದೆಂಬುದನ್ನು ಈ ಸೊಪ್ಪಿನ ವ್ಯಾಪಾರಸ್ಥರಿಂದ ಕೇಳಿದರೆ ತಿಳಿದುಬರುವದು. ಇತ್ತಲಾಗ್ಗೆ ಹೀಗೆ ಸೊಪ್ಪನ್ನು ಉಸುಬಿನಲ್ಲಿ ಪೂರ್ಣವಾಗಿ ಅದ್ದಿ ಮಾರುವ ಕ್ರಮವು ವಿಶೇಷವಾಗಿ ರೂಢಿಗೆ ಬಂದು ಈಗ ಹೊಗೆಸೊಪ್ಪಿನ ಕಟ್ಟುಗಳಲ್ಲಿ ಸಮ ಕಾಲುಪಾಲಿಗಿಂತ ಹೆಚ್ಚು ಹೊಯಿಗೆಯು ಕಾಣಬರುತ್ತದೆ. ಹೀಗೆ ಉಸುಬು ಹೊಗೆಸೊಪ್ಪಿನಲ್ಲಿ ಹೆಚ್ಚುತ್ತಿರುವದರಿಂದ ಅದನ್ನು ಸೇವಿಸುವವರಿಗೆ ವಿಶೇಷ ನಷ್ಟವು ದಿನೇ ದಿನೇ ಉಂಟಾಗುತ್ತಲಿರುವುದು. ಈ ಜಿಲ್ಲೆಯಲ್ಲಿ ಮುಖ್ಯವಾಗಿ ಕಾಸರಗೋಡು ತಾಲೂಕಿನಲ್ಲಿ ಪೈದಾಸ್ತು ಆಗುವ ಹೊಗೆಸೊಪ್ಪು ಜಿಲ್ಲೆಯ ಆಯಾ ಪ್ರಾಂತ್ಯಗಳಿಗೆ ವಯ್ಯೋಣಾಗುವದಲ್ಲದೆ, ಈ ಜಿಲ್ಲೆಯಿಂದ ದೇಶದ ಇತರ ಪ್ರಾಂತ್ಯಗಳಿಗೂ ವಯ್ಯೋಣಾಗುತ್ತದೆ. ಇತರ ಪ್ರಾಂತ್ಯಗಳಲ್ಲಿ ಹೊಗೆಸೊಪ್ಪಿನ ಮೇಲೆ ಸುಂಕ ತೆರುವದಿದೆ. ಹೀಗೆ ಇಲ್ಲಿಂದ ಮುಂಬಯಿಗೆ ವಯ್ಯೋಣಾಗುವ ಹೊಗೆಸೊಪ್ಪಿನ ಮೇಲೆ ಸುಂಕ ವಸೂಲುಮಾಡೋಣಾಗುವದು. ಸುಂಕದ ಬಗ್ಗೆ ಹೊಗೆಸೊಪ್ಪು ತೂಕಮಾಡಲ್ಪಡುವಾಗ ಅದರ ಸಂಗಡವಿರುವ ಉಸುಬೂ ಸಹ ತೂಕದಲ್ಲಿ ಸೇರುವದು. ಈ ರೀತಿ ಹೊಗೆಸೊಪ್ಪಿನ ಮೇಲೆ ಮಾತ್ರವಲ್ಲ ಉಸುಬಿನ ಮೇಲೆಯೂ ಸಹ ಸುಂಕವನ್ನು ತೆರುವ ವಿಶೇಷ ನಷ್ಟಕ್ಕೆ ಮುಂಬಯಿಯ ಹೊಗೆಸೊಪ್ಪಿನ ವ್ಯಾಪಾರಸ್ಥರು ಗುರಿಯಾಗುತ್ತಾರೆ. ಹೊಗೆಸೊಪ್ಪು ತಕ್ಕೊಳ್ಳುವವರು ಅದರ ಸಂಗಡ ಏನೂ ಪ್ರಯೋಜನವಿಲ್ಲದ ಉಸುಬಿಗೆ ಹೊಗೆಸೊಪ್ಪಿನ ಕ್ರಯ ಕೊಟ್ಟು ಹೊಂದುವ ನಷ್ಟವೆಂತೂ ಸರ್ವರಿಗೂ ಇರುವುದು. ಉಸುಬನ್ನು ಈ ರೀತಿ ಹೊಗೆಸೊಪ್ಪಿನಲ್ಲಿ ಹಾಕದಂತೆ ಯಾವ ಉಪಾಯವನ್ನು ಮಾಡಬಹುದೆಂಬದನ್ನು ಬಹಳ ಕಾಲ ಆಲೋಚಿಸಿದರೂ ಯತ್ನ ಕಾಣದಿರುವದರಿಂದ ಈ ಯತ್ನವನ್ನು ನಿಮ್ಮ ವಾಚಕರಲ್ಲ್ಯಾರಾದರೂ ತಿಳಿಸಬೇಕೆಂದು ಅಪೇಕ್ಷಿಸುತ್ತೇನೆ. ಅದಲ್ಲದೆ ಹೊಗೆಸೊಪ್ಪಿನಲ್ಲಿ ಉಸುಬನ್ನು ಬೆರಸಿ ಮಾರುವಂಥಾದ್ದು ಕಾನೂನು ಪ್ರಕಾರ ತಪ್ಪಾಗುವದಿಲ್ಲವೋ ಎಂಬುದನ್ನು ಯಾರಾದರೂ ಅಧಿಕಾರಿಗಳು ತಿಳಿಯಪಡಿಸಿದರೆ ಉಪಕಾರವಾಗುತ್ತಿತ್ತು.

R. K.

ವಿದೇಶ ವೃತ್ತಾಂತ.

ಐರ್ಲಾಂಡ್ ಸ್ವರಾಜ್ಯದ ಬಿಲ್ಲು ವಿಧಿಯಾಗುವ ವಿಷಯದಲ್ಲಿ ಅಲ್ಸ್ಟರ್ ನಿವಾಸಿಗಳು ಮಾಡುತ್ತಿರುವ ಪ್ರತಿಭಟನವು ಸಭಾ ಮುಖದಲ್ಲಿ ಪ್ರಯೋಜನಕರವಾಗದೆ ಹೋದುದರಿಂದ ಆಯುಧಗಳ ಮೂಲಕ ಪ್ರತಿಭಟಿಸಲು ಹೆಚ್ಚಾಗಿ ಹವಣಿಸುತ್ತಲೇ ಇರುವರು. ಅಲ್ಸ್ಟರ್ ಜಿಲ್ಲೆಯವರು ೮೫೦೦೦ ಮಂದಿಯ ವರೆಗೆ ವಾಲಂಟಿಯ ರನ್ನು ಅಣಿಮಾಡಿದ್ದರೆ, ಐರ್ಲಾಂಡಿನ ಇತರ ಭಾಗದ ಪ್ರಜೆಗಳು ಅಲಸ್ಟರಿನವರ ಮೇಲಣ ಪ್ರತಿಭಟನಕ್ಕೆ ೧೩೦,೦೦೦ ವಾಲಂಟಿಯರನ್ನು ಅಣಿಮಾಡಿರುವರು. ಇದರಿಂದ ತಮ್ಮಲ್ಲೇ ಪರಸ್ಪರ ಪ್ರಾಣಹಾನಿಗೆ ಸಾಧಕವಾಗಿ ಪರ್ಯಾವಸಾನಗೊಳ್ಳುವಂತೆ ಮಾಡಬಾರದೆಂದೂ, ಪಾರ್ಲಿಮೆಂಟಿನಲ್ಲಿ ಒಪ್ಪಿತವಾದುದನ್ನು ವಿಧಿಯಾಗಗೊಡದಂತೆ ಹೋಗಿಸುವುದು ರಾಜನೀತಿಗೆ ಭಂಗಕಾರಿಯೆಂದೂ ಯೋಚಿಸಿ, ಈ ಸಮಸ್ಯೆಯನ್ನು ಸರ್ವಸಮಾಧಾನ ರೀತಿಯಿಂದ ಸಾಗಿಸಬೇಕೆಂದು ಅಂಗ್ಲ ರಾಜಶಕ್ತಿಯೇ ಈಗ ಆಲೋಚಿಸುತ್ತಿರುವುದು. ಪ್ರಜಾಪ್ರತಿನಿಧಿಸಭೆಯವರು ಒಪ್ಪಿದುದಕ್ಕೆ ಚಕ್ರವರ್ತಿಯವರು ಒಪ್ಪೇ ತೀರಬೇಕಾದುದು ಅಲ್ಲಿನ ರಾಜನೀತಿಧರ್ಮವಾಗಿದೆ. ಆದರೂ, ಈ ಸಂದರ್ಭವನ್ನು ನೋಡಿ, ಅಪೂರ್ವವಾದ ಒಂದು ಏರ್ಪಾಟನ್ನು ಶ್ರೀಮನ್ ಚಕ್ರವರ್ತಿಯವರು ನಡೆಯಿಸಿರುವರು. ಅದೇನೆಂದರೆ:—ಬೇರೊಂದು ಸಂಘವನ್ನೇರ್ಪಡಿಸಿ ಅದಕ್ಕೆ ಎಲ್ಲಾ ಕಕ್ಷಿಗಳ ಪ್ರಮುಖರನ್ನು (ಒಟ್ಟು ೧೦ ಮಂದಿಗಳು) ಬಕಿಂಗ್‌ಹ್ಯಾಂ ಅರಮನೆಗೆ ಬರಮಾಡಿಕೊಂಡು ಇದನ್ನು ಸೌಹಾರ್ದದಿಂದ ಬಗೆ ಹರಿಸಿಕೊಳ್ಳುವುದಕ್ಕೆ ಏರ್ಪಡಿಸಿರುತ್ತಾರೆ. ಈ ಸಭೆಯು ಜುಲೈ ತಾ ೨೧ರಲ್ಲಿ ಕೂಡಿತು. ಚಕ್ರವರ್ತಿಯವರು ತಾವೇ ದಯಮಾಡಿಸಿ ಅರ್ಧ ಗಂಟೆಯ ಹೊತ್ತು ಸಭೆಯನ್ನಲಂಕರಿಸಿದ್ದರು. ಮತ್ತೂ ಸಭಿಕರನ್ನು ಕುರಿತು, ನನ್ನ ಕೋರಿಕೆಯ ಮೇರೆಗೆ ನೀವೆಲ್ಲರೂ ಬಂದು ಕೂಡಿದುದಕ್ಕಾಗಿ ನಿಮಗೆ ವಂದಿಸುತ್ತೇನೆಂದು ಹೇಳಿ, ಕಾಮನ್ಸ್ ಸಭೆಯ ಅಧ್ಯಕ್ಷರೇ ಈ ಸಭೆಗೂ ಅಧ್ಯಕ್ಷರಾಗುವುದು ತಮಗೆ ಸಂತೋಷವೆಂದು ತಿಳಿಯಿಸಿ, ನಾನು ಈ ತೆರದ ವ್ಯವಹಾರದಲ್ಲಿ ಈ ರೂಪದಿಂದ ಸಂಬಂಧಿಸುವುದು ನಿಮಗೆ ಹೊಸದಾಗಿ ತೋರಿದರೂ, ಈಗಿನ ಸ್ಥಿತಿಗತಿಗಳನ್ನು [illegible] ಐರ್ಲಾಂಡಿನ ಸಮಸ್ಯೆಯು ಚೆನ್ನಾಗಿ ಪರಿಷ್ಕಾರಗೊಳ್ಳುವುದೋ ಇಲ್ಲವೋ ಎಂದು ಎಲ್ಲರಿಗೂ ಭಯವನ್ನು ಹುಟ್ಟಿಸುತ್ತಿದೆ. ಬರಬರುತ್ತಾ ಯುದ್ಧವನ್ನು ತಂದೇ ತೀರುವುದೆಂಬ ಸೂಚನೆಗಳು ಕಾಣುತ್ತಿವೆ. ಬಾಧ್ಯತೆಯುಳ್ಳವರೂ, ಶಾಂತ ಸ್ವಭಾವದವರೂ ಆದ ನನ್ನ ಪ್ರಜೆಗಳನೇಕರು ಯುದ್ಧ-ಯುದ್ಧವೆಂದು ಉಚ್ಚರಿಸುತ್ತಿದ್ದಾರೆ. ಎರಡು ಪಕ್ಷದವರೂ ಸ್ನೇಹಭಾವದಿಂದ ಪರಿಷ್ಕರಿಸಿಕೊಳ್ಳಬಹುದಾದ ಈ ವಿಷಯದಲ್ಲಿ ಸಹೋದರರುಗಳಾದ ನಾವು ನಾವೇ ಯುದ್ಧಕ್ಕೆ ಸಿದ್ಧರಾಗುವುದು ಅವಿವೇಕವು. ಐರ್ಲಾಂಡ್ ಪ್ರಜೆಗಳ ಮೇಲೆ ನನಗೆ ಪ್ರೇಮವುಂಟು. ಅವರು ಯಾವಾಗಲೂ ನನಗೆ ಮನಃಪೂರ್ವಕವಾದ ಸ್ವಾಗತವನ್ನು ಮಾಡಿದ್ದಾರೆ. ಯುದ್ಧದ ವಿಪತ್ತು ನನ್ನ ಪ್ರಜೆಗಳಲ್ಲಿ ಉಂಟಾಗುವುದೋ ಏನೋ ಎಂಬ ಭೀತಿಯು ನನಗುಂಟಾಗಿದೆ. ಐರ್ಲಾಂಡು ಪ್ರಜೆಗಳು ಯುದ್ಧಾಭಿನಿವೇಶವುಳ್ಳವರಾಗಿದ್ದಾರೆಂಬ ಸುದ್ಧಿಯು ಆ ಭಯವನ್ನು ದ್ವಿಗುಣಪಡಿಸಿದೆ ಈ ದಿನ ಈ ಸಭೆಯಲ್ಲಿರುವವರು ಬ್ರಿಟಿಷ್ ದ್ವೀಪಗಳಲ್ಲಿರುವ ನನ್ನ ಪ್ರಜೆಗಳೆಲ್ಲರಿಗೂ ಯಾವದಾದರೊಂದು ವಿಧವಾದ ಪ್ರತಿನಿಧಿಗಳಾಗಿಯೇ ಇದ್ದಾರೆ. ನಿಮಗೆ ನಮ್ಮ ಸ್ವಾಸ್ಥ್ಯಗಳ ಯೋಗಕ್ಷೇಮದ ವಿಷಯದಲ್ಲಿ ಶ್ರದ್ಧೆಯಿರುವುದು. ಆ ಸ್ವಾಸ್ಥ್ಯಗಳವರು ಕೂಡ ಪ್ರಕೃತದ ಸಮಸ್ಯೆಯು ಶಾಂತರೀತಿಯಿಂದ ಪರಿಷ್ಕಾರಗೊಳ್ಳಬೇಕೆಂದು ಕೋರುತ್ತಿರುವರು. ನೀವು ಮಾಡಬೇಕಾದ ಕಾರ್ಯವು ಘನತರವಾದ ಬಾಧ್ಯತೆಯುಳ್ಳದಾಗಿದೆ. ಆದುದರಿಂದ ಇದನ್ನು ಶಾಂತತನದಿಂದಲೂ, ಗೌರವವಾಗಿಯೂ ಪರಿಷ್ಕರಿಸಿಕೊಳ್ಳುವಿರೆಂದು ನಂಬುತ್ತೇನೆ. ಹಾಗೆ ಬಗೆ ಹರಿಯುವ ವಿಷಯದಲ್ಲಿ ಭಗವಂತನು ಅನುಗ್ರಹಿಸಲಿ ಎಂದು ಅಪ್ಪಣೆಕೊಡಿಸಿದರು.

ಈ ಸಭೆಯ ನಡವಡಿಕೆಯೆಲ್ಲಾ ರಹಸ್ಯವಾಗಿರಬೇಕೆಂದು ಏರ್ಪಾಟಾಗಿದ್ದಿತು. ಸಭಿಕರು ಶಾಂತ ರೀತಿಯಿಂಧ ಆ ದಿನ ಚರ್ಚೆ ನಡೆಯಿಸಿದರು. ತಾ. ೨೨ರಲ್ಲೂ ೨೩ರಲ್ಲೂ ಸಹ ಸಭೆಯು ಸೇರಿದು ಚರ್ಚೆಯಾಗಿರುವುದು. ಹೀಗೆ ಕಾನ್‌ಫರೆನ್ಸಿನ ಮೂಲಕ ರಾಜಕೀಯ ವ್ಯವಹಾರವನ್ನು ಬಗೆಹರಿಸುವ ಆಚಾರವು ೪ನೆ ವಿಲಿಯಂರವರ ಕಾಲದಿಂದೀಚೆಗೆ ಯಾವಾಗಲೂ ನಡೆದಿರಲಿಲ್ಲವಂತೆ. ಆದರೆ ಕೂಡಿದ ಕಾನ್ಫರೆನ್ಸಿನಿಂದ ಪ್ರಯೋಜನ ಬಾರದೆ ಹೋಯಿತು.

ತಾ. ೨೬ರಲ್ಲು ನೇಶನಲಿಸ್ಟ ವಲಂಟಿಯರರಿಗೂ ಸೇನೆಯವರಿಗೂ ಕಾಳಗದಿಂದು ಉಭಯ ಪಕ್ಷದಲ್ಲಿ ಕೆಲವರು ಗಾಯ ಒಡೆದಿರುವರು. ಒಟ್ಟಿಗೆ ಇಬ್ಬರು ಮೃತಪಟ್ಟರು. ೧೫ ಮಂದಿ ಗಾಯ ಪೊಡೆದರು.

ಈಚೆಗೆ ಆಸ್ಟ್ರೀಯ ರಾಜ್ಯದ ಯುವರಾಜರವರನ್ನೂ ಯುವ ರಾಜ್ಞಿಯವರನ್ನೂ ಸರಜೊವದಲ್ಲಿ ಸರ್ವಿಯಾನನೊಬ್ಬನು ಕೊಂದು ಬಿಟ್ಟುದ್ದರಿಂದ ಈಗ ಆಸ್ಟ್ರೀಯದವನು ಸರ್ವಿಯ ಸರಕಾರದವರಿಗೆ ಖಂಡನ ಪತ್ರ ಬರೆದು ಸರ್ವಿಯ ಸರಕಾರದವರು ಆಸ್ಟ್ರೀಯ ಯುವರಾಜರ ಕೊಲೆ ಸಂಬಂಧವಾದ ವಿಷಾದವನ್ನು ಪ್ರಕಟಿಸಿ, ಸರ್ವಿಯದ ಶಾಲೆಗಳಲ್ಲಿ ಆಸ್ಟ್ರೀಯರಿಗೆ ವಿರೋಧವಾಗಿ ಕೊಡುವ ಶಿಕ್ಷಣೆಯನ್ನು ನಿಲ್ಲಿಸಿ, ಆಸ್ಟ್ರೀಯ ಸರಕಾರದವರು ಹೇಳುವ ಸರ್ವಿಯಾನರ ಕೆಲವು ಆಫೀಸರರನ್ನು ಕೆಲಸದಿಂದ ತೆಗೆದು, ಸರಜೋವೊ ಕೃತ್ಯದಲ್ಲಿ ಸೇರಿದವರನ್ನು ದಂಡಿಸಬೇಕೆಂಬಿತ್ಯಾದಿ ಸಂಗತಿಗಳನ್ನು ತಿಳಿಸಿ, ಶನಿವಾರ ಸಂಜೆ ೬ ಗಂಟೆಯೊಳಗೆ ಉತ್ತರ ಕೊಡಬೇಕೆಂದು ಕೇಳಿರುವರು ಈ ಪತ್ರದಿಂದ ಈಗ ಯೂರೋಪ ರಾಜದಲ್ಲೆಲ್ಲಾ ಭಯಾಸ್ಪದಕ್ಕೆ ಕಾರಣವುಂಟಾಗಿದೆ ಆಸ್ಟ್ರೀಯದವರು ತಮ್ಮ ಸೈನ್ಯವನ್ನು ಕೂಡಿಸಿದ್ದಾರೆ ಸರ್ವಿಯರಿಗೆ ಉತ್ತರ ಕೊಡುವರೆ ಸಮಯ ಕೊಡಬೇಕೆಂದು ರುಷ್ಯ ಮತ್ತು ಫ್ರೆಂಚ ಸರಕಾರದವರು ಆಸ್ಟ್ರೀಯರಿಗೆ ತಿಳಿಸಿದ್ದಾರೆ ಆದರೆ ಅವರು ಇದಕ್ಕೆ ಒಪ್ಪದರಿಂದ ರುಷ್ಯಾ ಮತ್ತು ಫ್ರೆಂಚ ಸರಕಾರದವರೂ ತಮ್ಮ ಸೇನೆಯನ್ನು ಕರೆಯಿಸಿರುವರು ಜರ್ಮನಿ ಮತ್ತು ಇಟಾಲಿ ಒಂದಾಗಿ ಆಸ್ಟ್ರೀಯದವರಿಗೆ ಸಹಾಯಮಾಡುವ ಹಾಗೆ ಇದೆ ಹೀಗೆ ಇಂದೋ, ನಾಳೆಯೋ ಎಂಬಂತೆ ಒಂದು ದೊಡ್ಡ ಯುದ್ಧ ಸಂಭವಿಸುವ ಸಂದರ್ಭ ಇದೆ ಆಸ್ಟ್ರೀಯದಲ್ಲಿದ್ದ ಸರ್ವಿಯ ಮಂತ್ರಿಯೂ ಸರ್ವಿಯ ಆಸ್ಟ್ರೀಯ ಮಂತ್ರಿಯೂ ಹಿಂದಕ್ಕೆ ಕರೆಯಲ್ಪಟ್ಟಿರುವರು.

ಸರ್ವಿಯದವರು ಆಸ್ಟ್ರೀಯದವರಿಗೆ ಪ್ರತ್ಯುತ್ತರ ಕೊಟ್ಟಿರುವರು ಈ ಪ್ರತ್ಯುತ್ತರದಲ್ಲಿ ಶರ್ತಗಳನ್ನು ಕೊಟ್ಟಿರುತ್ತಾರೆ. ತನ್ಮಧ್ಯೆ ಡೆನ್ಯೂಬು ಎಂಬಲ್ಲಿದ್ದ ಸರ್ವಿಯ ಸೇನೆಯು ಆಸ್ಟ್ರೀಯ ಸೇನೆಗೆ ಗುಂಡುಗಳನ್ನು ಹಾರಿಸಿದ್ದರಿಂದ ಉಭಯತರೊಳಗೆ ಕದನವಾಗಿದೆ ಎಂಬ ವಾರ್ತೆ ಇದೆ.

ಶ್ರೇಷ್ಠ ರಾಜ್ಯಗಳವರ ಸಂಧಾನ ಉಂಟಾಗುವ ಹಾಗೆ ಪ್ರಯತ್ನ ಪಡುತ್ತಲಿದ್ದಾರೆ

ಬ್ರಿಟಿಷ್ ಸರಕಾರದವರು ತಮ್ಮ ಯುದ್ಧ ಹಡಗಗಳನ್ನು ಕರೆಯಿಸಿರುವರು.

ಬ್ರಿಟಿಷ್ ಮಂತ್ರಿಯಾದ ಸರ್ ಎಡ್‌ವರ್ಡ್ ಗ್ರೇಯವರು ಈ ಯುದ್ಧವುಂಟಾಗದ ಹಾಗೆ ಪ್ರಯತ್ನಪಟ್ಟು ತಮ್ಮ ಆಲೋಚನೆಯನ್ನು ಇತರ ರಾಜ್ಯಗಳಿಗೆ ತಿಳಿಸಿದರು ಇವರ ಆಲೋಚನೆಯನ್ನು ಫ್ರಾನ್ಸ್, ಇಟಾಲಿಯವರು ಮಾನ್ಯಮಾಡಿದರು ತನ್ಮಧ್ಯೆ ತಾ. ೨೮ನೇ ಬೆಳಿಗ್ಗೆ ಯುದ್ಧ ಪ್ರಾರಂಭವಾಯಿತೆಂದು ಪ್ರಕಟವಾಗಿದೆ

ಉತ್ತರ ಹಿಂದೂಸ್ಥಾನ.

ಮುಂಬಾಯಿ ಸಂಸ್ಥಾನದಲ್ಲಿ ೩ ವಿಧವಾ ವಿವಾಹಗಳಾದವು. ಸತಾರಾ ಜಿಲ್ಲೆಯ ಶೀತಾರಾಮಲಕ್ಷ್ಮಣ ಸಸ್ಥಾದಕಾರರು ಸೋನುಬಾಯಿ ಎಂಬಾಕೆಯನ್ನು ವಿವಾಹಮಾಡಿಕೊಂಡರು. ಉಭಯತರೂ ದೇಶಸ್ಥ ಬ್ರಾಹ್ಮಣ ಜಾತಿಯವರು ವಾಮನದಾಜಿಪೋಕಾ ಎಂಬವರ ಮಗ ಗೋಪಾಲವಾಮನಪೋಕಾ ಎಂಬ ಗೃಹಸ್ಥರು ಪೂಣೆ ಶಹರಿನ ಬಾನುಬಾಯಿ ಎಂಬಾಕೆಯನ್ನು ವಿವಾಹಮಾಡಿಕೊಂಡರು. ಉಭಯತರೂತರೂ ಚಿತ್ಪಾವನ ಬ್ರಾಹ್ಮಣ ಜಾತಿಯವರು. ಸಬ್‌ಜಡ್ಜರಾದ ಪಿ. ಕೇಶವರಾವ ಬಿ. ಎ. ಎಲ್. ಎಲ್. ಬಿ. ಎಂಬವರು ರಾಮಚಂದ್ರ ವಾಮನ[illegible] ಬಿ. ಎ. ಎಂಬವರ ಮಗಳು ಸುಮತಿಬಾಯಿ ಎಂಬಾಕೆಯನ್ನು ನಾಗಪುರ ಶಹರಿನಲ್ಲಿ ವಿವಾಹ ಮಾಡಿಕೊಂಡರು ಇವರಿಬ್ಬರೂ ಕರಾಡಿಬ್ರಾಹ್ಮಣ ಜಾತಿಯವರು.

ಇದೇ ತಾ. ೧೮ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೪೦೦ ಮಂದಿಗೆ ಪ್ಲೇಗಬೇನೆಯು ಸೋಂಕಿ ೩೪೧ ಮರಣಗಳಾದವು. ಈ ಪೈಕಿ ಮುಂಬಾಯಿ. ೧೦೪; ಮದ್ರಾಸ್ ೧೩; ಬಂಗಾಳ ೭; ಮಧ್ಯಹಿಂದೂಸ್ಥಾನ ೬; ಪಂಜಾಬು ೬೦; ಬರ್ಮ ೧೧೨; ಮೈಸೂರು ೨೯ ಮರಣಗಳಾದವು.

ವೈಸರಾಯ ಪ್ರಭುಗಳು ತಾ. ೨೩ರಲ್ಲು ಸಿಮ್ಲದಿಂದ ಹೊರಟು ಪರಿವಾರ ಸಹಿತ ಢೇರಡನಿಗೆ ಹೋಗಿರುವರು. ಆಗೋಸ್ತು ತಿಂಗಳ ಪ್ರಾರಂಭ [illegible] ಬಂದಿದೆ.

ಪಂಜಾಬು ಸರಕಾರದವರು ಪಂಜಾಬಿನ ಡಾನ್‌ಡೋಟ್ ಎಂಬಲ್ಲಿ ಸೀಮೆಂಟನ್ನು ತಯಾರಿಸುವ ಪೂರ್ಣ ಸ್ವತಂತ್ರವನ್ನು ಕಾಶ್ಮೀರ ಮೈನ್ಸ್ ಎಂಡ್ ಪವರ್ ಸಿಂಡಿಕೇಟ್ ಎಂಬ ಕಂಪೆನಿಯವರಿಗೆ ವಹಿಸಿಕೊಟ್ಟರು. ಈ ವಿಷಯಕ್ಕೆ ಪಂಜಾಬಿನ ಇತರ ಸಾಹುಕಾರರು ವಿರೋಧಮಾಡಿದ್ದರಿಂದ ಈಗ ಈ ಹೊಸ ಕಂಪೆನಿಯವರು ಇಂಡಿಯಾ ಸರಕಾರದವರ ಮಂಜೂರಾತಿಯನ್ನು ಕಾಯಬೇಕಾಗಿದೆ.

ಸಿಂಧೂ ದೇಶದ ಉತ್ತರ ಭಾಗದಲ್ಲಿ ಕಠಿಣ ಸೆಕೆಯುಂಟಾಗಿ ಅನೇಕರು ಶೆಕೆ ತಡೆಯಲಾರದೆ ಮರಣ ಹೊಂದುತ್ತಿರುವರು. ಕುದುರೆಗಳು ಕೂಡಾ ಶೆಕೆಯನ್ನು ತಡೆಯಲಾರದೆ ಗಾಡಿ ಎಳೆಯುತ್ತಿರುವಾಗಲೇ ಬಿದ್ದು ಸಾಯುತ್ತಿರುವವು

ಮುಂಬಾಯಿಯ ಲಿನೊವ್ಲ ಎಂಬಲ್ಲಿ ೫ ಯುರೋಶಿಯನ ಹುಡುಗರು ದಕಾಯಿತಿ ಮಾಡಲಿಕ್ಕೆ ಹೋಗಿ ತೋಟದ ಮಾಲಿಯನ್ನು ಕೊಂದರೆಂಬದಾಗಿ ಅಪಾದಿಸಲ್ಪಟ್ಟಿದ್ದರು. ಇವರು ಯೂರೇಶಿಯನ್ ಹುಡುಗರಾದುದರಿಂದ ಇವರ ಮೊಕದಮೆಯು ಹೈಕೋರ್ಟಿನಲ್ಲಿ ತನಖಿಯಾಯಿತು ಅಪಾದಿತರು ಜಾಮೀನಿನ ಮೇಲೆ ಬಿಡಲ್ಪಟ್ಟಿದ್ದರು ಈ ಮೊಕದಮೆ ತನಖಿಯು ಇದೇ ತಾ. ೨೩ರಲ್ಲು ನಡೆದು, ಹುಡುಗರಿಗೆ ದಕಾಯಿತಿ ನಡಿಸುವಾಗ ಮಾಲಿಯನ್ನು ಕಠಿಣ ಘಾಯಪಡಿಸಬೇಕೆಂಬ ಇರಾದೆ ಇರಲಿಲ್ಲ ಎಂಬದಾಗಿ ಜಜ್ಜರು ಅಭಿಪ್ರಾಯಪಟ್ಟು ಹುಡುಗರ ಮೇಲೆ ಸಾಧಾರಣ ಘಾಯಪಡಿಸಿದ ತಕ್ಸೀರನ್ನ ಏರ್ಪಡಿಸಿ ಮೊಕದಮೆಯ ತನಖಿಯನ್ನು ಮುಂದಕ್ಕೆ ಇಟ್ಟಿರುವರು

ಇದೇ ಕಳದ ಫೆಬ್ರುವರಿ ತಿಂಗಳಲ್ಲಿ ಮುಂಬಾಯಿಯ ಮಿ| ಮಹಮ್ಮದ್ ಯುಸೆಫ್ ಎಂಬವರು ವಿದ್ಯಾಭ್ಯಾಸ ಸಂಬಂಧವಾಗಿ ಸರಕಾರದವರಿಗೆ ೮ ಲಕ್ಷ ರೂಪಾಯಿ ದಾನಮಾಡಿದರು. ಹಣ ಕೊಡುವಾಗ ಶರ್ತಗಳನ್ನೇನೂ ಇಡದಿದ್ದರೂ ಈ ಹಣವು ಮಹಮ್ಮದೀಯರ ಪ್ರೌಢ ವಿದ್ಯಾಭ್ಯಾಸದ ಬಗ್ಗೆ ಪ್ರಯೋಗಿಸಲ್ಪಡಬೇಕೆಂಬದು ದಾತರ ಉದ್ದೇಶವಾಗಿತ್ತು. ಆದರೆ ಮುಂಬಾಯಿಯಲ್ಲಾಗಲೀ ಪೂನೆಯಲ್ಲಾಗಲೀ ಈ ಉದ್ದೇಶವನ್ನು ನೆರವೇರಿಸುವರೆ ಅಸಾಧ್ಯವೆಂಬದಾಗಿ ಸರಕಾರದವರು ಕಂಡು ಈಗ ಪೂನೆಯಲ್ಲಿರುವ ಡೆಕ್ಕಾನ್ ಕಾಲೇಜಿಗೆ ಸಾರಿಸಿ ಮಹಮ್ಮದೀಯರಿಗೆ ಪ್ರತ್ಯೇಕ ಒಂದು ಹೊಸ್ಟೆಲ್ ಇತ್ಯಾದಿಗಳನ್ನು ಸ್ಥಾಪಿಸಬೇಕೆಂಬ ಆಲೋಚನೆಯನ್ನು ಮಹಮ್ಮದೀಯರ ಮುಂದಾಳುಗಳ ಮುಂದೆ ತಂದಿರುವರು ಈ ತನಕ ಎಲ್ಲಾ ಸರಕಾರಿ ಶಾಲೆಗಳು ಜಾತಿಭೇದವಿಲ್ಲದೆ ಪ್ರತ್ಯೇಕವಾಗಿ ನಡೆಸಲ್ಪಡದೆ ಇದ್ದರೂ ಈಗ ಈ ಆಲೋಚನೆಯು ಜಾರಿಗೆ ಬಂದರೆ ಒಂದೇ ಜಾತಿಯ ಬಗ್ಗೆ ಪ್ರತ್ಯೇಕ ಈ ಕಾಲೇಜು ಇರುವ ಹಾಗೆ ಆಗುವದು. ಈ ಕಾರಣ ಮುಂಬಾಯಿಯ ಜನರು ಸರಕಾರದವರ ಈ ಆಲೋಚನೆಗೆ ಸಮ್ಮತಿಪಡುವುದಿಲ್ಲ.

ಕರಾಚಿಯ ಬುದ್ಧಾಪುರ ಎಂಬಲ್ಲಿ ಮೂರು ಮಂದಿ ಅಗ್ಗಾಡಿ ಕಳ್ಳರು ಓಡುವ ಅಗ್ಗಾಡಿಗೆ ಹಾರಿ ಕಳವು ಮಾಡಲಿಕ್ಕಿದ್ದರು. ಪೋಲಿಸರು ಇವರನ್ನು ಕಂಡು ಗುಂಡು ಹೊಡೆದು ಒಬ್ಬನನ್ನು ಕೊಂದರು. ಒಬ್ಬನು ಘಾಯ ಪಡೆದನು. ಮತ್ತೊಬ್ಬನು ತಪ್ಪಿಸಿಕೊಂಡನು

ಮುಂಬಾಯಿ ಸರಕಾರದವರು ಮಹಮ್ಮದೀ ವಿದ್ಯಾರ್ಥಿಗಳಲ್ಲಿ ಒಬ್ಬೊಬ್ಬನಿಗೆ ರೂ. ೧೨—೮—೦ರ ೨೩೩ ವೇತನಗಳನ್ನು ಕೊಡುವರೆ ಆಲೋಚಿಸಿರುವರು. ಈ ವೇತನವು ೪ ತರಗತಿಯಿಂದ ೭ನೇ ತರಗತಿಯ ವರೆಗಿನ ವಿದ್ಯಾರ್ಥಿಗಳಲ್ಲಿ ಬುದ್ಧಿವಂತರಾದವರಿಗೆ ೪ ವರ್ಷಗಳ ವರೆಗೆ ಕೊಡಲ್ಪಡುವುದು. ೪ ವರ್ಷಗಳ ನಂತರ ಈ ವೇತನವು ೫೩೨ಕ್ಕೆ ಹೆಚ್ಚಿಸಲ್ಪಡುವುದು. ಹೀಗೆ ಸರಕಾರದವರಿಗೆ ಈ ಉದ್ದೇಶಕ್ಕಾಗಿ ೮೦,೦೦೦ ರೂಪಾಯಿಗಳ ಖರ್ಚು ತಗಲುವುದು.

೧೯೦೭ನೇ ಇಸವಿಯಲ್ಲಿ ಮುಂಬಾಯಿ ನಗರದಲ್ಲಿ ಮಲೇರಿಯ ಜ್ವರವು ಪ್ರಬಲಗೊಂಡಿದ್ದಾಗ ಸರಕಾರದವರು ಇದರ ಕಾರಣವನ್ನು ಕಂಡುಹಿಡಿಯುವರೆ ಒಬ್ಬ ದಾಕ್ತಾರರನ್ನು ನೇಮಕರೂರು ಮಾಡಿದ್ದರು. ದಾಕ್ತಾರರು ಈಗ ತಾನೇ ಈ ವಿಷಯವಾದ ವರದಿ ಮಾಡಿರುವರು:—ಮುಂಬಾಯಿ ಪಟ್ಟದ ಕೆಲವು ಕಡೆಯ ಬಾವಿಗಳಲ್ಲಿ ಒಂದು ತರದ ನುಸಿ ಇರುತ್ತದೆ. ಈ ನುಸಿಯಿಂದ ಸದಾ ಮಲೇರಿಯ ಜ್ವರವು ಉಂಟಾಗುತ್ತದೆ. ಈ ನುಸಿಗಳನ್ನು ನಾಶಪಡಿಸದೆ ಇದ್ದರೆ ಬೇಗನೇ ಮುಂಬಾಯಿ ಪಟ್ಟದಲ್ಲೆಲ್ಲಾ ಈ ಮಲೇರಿಯ ಜ್ವರವು ಹಬ್ಬಿಕೊಳ್ಳುವದರಲ್ಲಿ ಅನುಮಾನವಿಲ್ಲ ಸರಕಾರದವ

ಹುಕುಂ ಪ್ರಕಾರ ಈ ಡಾಕ್ಟರರು ಬಾವಿಗಳನ್ನು ಶೋಧನೆಮಾಡಿ ಕೆಲವು ಬಾವಿಗಳನ್ನು ಪೂರ್ಣವಾಗಿ ಮುಚ್ಚಿಸಿ, ಕೆಲವನ್ನು ಔಷಧಿ ಪ್ರಯೋಗದಿಂದ ಶುಚಿಮಾಡಿಸಿರುವರು.

~~~~~

ಲಾಹೋರಿನ ಪರಸ್ಪರ ಸಹಾಯಕ ಸಂಘಗಳನ್ನು ಉಚ್ಛ್ರಸ್ಥಿತಿಗೆ ತರುವ ಬಗ್ಗೆ ಮಿ॥ ಇ. ಬಿ. ಫ್ರಾನ್ಸಿಸ್ ಐ ಸಿ ಎಸ್ (ರಿಟಾಯರ್ಡ್)ರವರು ೮೦೦೦ ರೂಪಾಯಿಗಳನ್ನು ದಾನಮಾಡಿರುವರು. ಇವರು ಹಿಂದೆ ಆ ಡಿಸ್ಟ್ರಿಕ್ಟ್‌ನಲ್ಲಿ ಕಲೆಕ್ಟರರಾಗಿದ್ದು ಅದನ್ನು ಇನ್ನೂ ಮರೆತು ಬಿಡದೆ ಇದ್ದು, ಇಂತಹ ದಾನವನ್ನು ಮಾಡಿದ್ದರಿಂದ ಅಲ್ಲಿನ ಜಮೀನ್ದಾರರ ಪರವಾಗಿ ಲೆಫ್ಟಿನೆಂಟ ಗವರ್ನರವರು ಮಿ॥ ಫ್ರಾನ್ಸಿಸರವರಿಗೆ ಕೃತಜ್ಞತಾ ಪತ್ರವನ್ನು ಬರೆದಿರುವರು.

~~~~~

ಹಿಂದೂಸ್ಥಾನದಲ್ಲಿ ೨ ೩ನೇ ಕ್ಲಾಸ್ ಮೆಜಿಸ್ಟ್ರೇಟರ ತೀರ್ಮಾನದ ಮೇಲೆ ಕಕ್ಷಿಗಾರರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಕೋರ್ಟಿಗೆ ಅಪೀಲಿಗೆ ಹೋಗಬೇಕಾಗಿದೆ. ಇದರಲ್ಲಿ ನ್ಯಾಯವು ಸರಿಯಾಗಿ ದೊರಕುವುದಿಲ್ಲವೆಂಬದಾಗಿ ದೇಶೀಯ ಮಹನೀಯರು ಆಕ್ಷೇಪ ಮಾಡುತ್ತಾ ಬಂದಿದ್ದಾರೆ ಇಂಡಿಯಾ ಸರಕಾರದವರು ಈ ವಿಚಾರವನ್ನು ಪರ್ಯಾಲೋಚಿಸಿ ಇನ್ನು ಮುಂದೆ ಇಂತಹ ಅಪೀಲುಗಳನ್ನು ಸೆಶ್ಶನ್ಸ್ ಕೋರ್ಟಿನಲ್ಲಿ ನಡೆಯುವಂತೆ ಹುಕುಂ ಮಾಡಲು ಬಹುದೇ ಎಂದು ಬೇರೆ ಬೇರೆ ಅಧಿಪತ್ಯಗಳ ಅಭಿಮತವನ್ನು ಕೇಳಿರುವರು

~~~~~

ಹಿಂದೂಸ್ಥಾನದಲ್ಲಿ ಸಾಹುಕಾರರೂ ವರ್ತಕರೂ ಲೇವಾದೇವಿಮಾಡುವಲ್ಲಿ ದುಬಾರಿ ಬಡ್ಡಿ ಸೇರಿಸಿ ಸಾಲಗಾರರನ್ನು ಬಹಳವಾಗಿ ಕಷ್ಟನಷ್ಟಗಳಿಗೆ ಗುರಿಮಾಡುತ್ತಾರೆಂಬ ಸಂಗತಿಯು ಇಂಡಿಯಾ ಸರಕಾರದವರಿಗೆ ತಿಳಿದುಬಂದುದರಿಂದ ಸಾಹುಕಾರರು ಇನ್ನು ಮುಂದಕ್ಕೆ ಬಡ್ಡಿ ದರವನ್ನು ಹೆಚ್ಚು ಮಾಡದಂತೆ ತಡೆಯಬೇಕೆಂದು ಯೋಚಿಸಿ ಈ ವಿಷಯದಲ್ಲಿ ಬೇರೆ ಬೇರೆ ಅಧಿಪತ್ಯಗಳ ಅಭಿಮತವನ್ನು ಕೇಳಿದ್ದಾರೆ

~~~~~

ಕಲ್ಕತ್ತೆಯ ಕರೀಮ್ ಗಜಾ ಎಂಬಲ್ಲಿ ಡಲುಗ್ರಾಮ್ ಚಾ ತೋಟದ ಹಸ್ಸನ್ ಎಂಬವನು ಒಬ್ಬ ಕೂಲಿಯವನಿಗೆ ಹೊಡೆದ ಪೆಟ್ಟಿನಿಂದ ಕೂಲಿಯವನು ಕೂಡಲೇ ಮೃತಪಟ್ಟನು ಡೆಪ್ಯುಟಿ ಕಮಿಷನರು ಅಪಾದಿತನಿಗೆ ತಾ ೧೩ರಲ್ಲಿ ೫೦೦ ರೂಪಾಯಿಗಳ ಜುಲ್ಮಾನೆ ವಿಧಿಸಿದರು

~~~~~

ಇದೇ ತಿಂಗಳ ತಾ ೪ರಲ್ಲಿ ಡಕ್ಕಾಪಟ್ಟದಲ್ಲಿರುವ ಬಾಬು ರಜನಿಕಾಂತ ಸರ್ಕಾರ್ ಎಂಬವರ ಮನೆಯಲ್ಲಿ ಒಂದು ಅದ್ಭುತವಾದ ಸಂಗತಿಯು ನಡೆಯಿತು ಬಾಬುರವರ ಇಬ್ಬರ ಮಕ್ಕಳೂ ಇನ್ನಿಬ್ಬ ಸ್ನೇಹಿತರೂ ಫೋಟೋ ತೆಗಸಿಕೊಂಡರು. ಆಗ ಅವರುಗಳು ವಿನಾ ಮತ್ತಾರೂ ಇರಲಿಲ್ಲ. ಆದರೆ ಛಾಯಾಚಿತ್ರದಲ್ಲಿ ಹದಿನಾರು ವರ್ಷದ ಸುಂದರಿಯೊಬ್ಬಳು ಇವರ ಮುಂದೆ ಬಂದು ನಿಂತಿರುವಂತೆ ಛಾಯೆಯು ಮಾತ್ರ ಕಂಡುಬಂದಿದೆ

~~~~~

ತಾ. ೨೪ರಲ್ಲಿ ಢಕ್ಕದಲ್ಲಿ ಇಬ್ಬರು ವಕೀಲರ, ಒಬ್ಬ ಮುನಸೀಫರ, ಮತ್ತು ಒಬ್ಬ ಕಂಟ್ರಿಕ್ಟರರ ಮನೆಗಳು ಪೋಲಿಸಿನವರಿಂದ ಜಪ್ತಿಮಾಡಲ್ಪಟ್ಟಿರುವವು.

~~~~~

ಚಿತಗೊಂಗಿನ ವಕೀಲರೊಬ್ಬರು ಊಟಕ್ಕೆ ಕುಳಿತಿರುವಾಗ ಅವರನ್ನು ಗುಂಡು ಹೊಡೆದು ಕೊಂದರೆಂಬದಾಗಿ ಆಪಾದಿಸಲ್ಪಟ್ಟಿದ್ದ ನಂದಕುಮಾರ ಘೋಷ್ ಮತ್ತು ಶಾರದ ಚರಣ ಆಚಾರಿ ಎಂಬವರಿಗೆ ತಾ ೨೪ರಲ್ಲು ಜೀವಾಂತ ಬಂಕೋಲಿ ಸಜೆಯು ವಿಧಿಸಲ್ಪಟ್ಟಿತು.

~~~~~

ಸಿಂಧೂ ನದಿಯಲ್ಲಿ ನೆರೆ ಬಂದು ಅನೇಕ ಸ್ಥಳಗಳಲ್ಲಿ ವಿಪರೀತ ನಷ್ಟವುಂಟಾಗಿರುವುದು. ವಿಸ್ತಾರವಾದ ಪ್ರದೇಶವು ನೀರಿನ ಅಡಿಯಲ್ಲಿದೆ. ಕೆಲವು ಗ್ರಾಮಗಳಲ್ಲಿ ಪ್ರಾಣನಷ್ಟವೂ ಉಂಟಾಗಿದೆ.

~~~~~

ಬೆಳ್ಗಾವಿಗೆ ಸೇರಿದ ಗೋಕಕ್ ಡಿಸ್ಟ್ರಿಕ್ಟಿನಲ್ಲಿ ಕಳೆದ ಬೃಹಸ್ಪತಿವಾರ ತುಂಬಾ ಪ್ರಯಾಣಿಕರಿದ್ದ ಒಂದು ದೋಣಿಯು ಮುಣುಗಿ ೮೦ ಮಂದಿ ಮೃತರಾದರು. ೩೦ ಮಂದಿ ರಕ್ಷಿಸಲ್ಪಟ್ಟರು ಎಂಬ ವಾರ್ತೆ ಬಂದಿದೆ. ಆ ದಿನದ ಕಠಿಣ ಮಳೆಯೇ ಈ ಅನಾಹುತಕ್ಕೆ ಕಾರಣ. ಪಟ್ಟವು ನೀರಿನ ಅಡಿಯಲ್ಲಿದೆ. ಅನೇಕರು. ಮನೆಮಾರಿಲ್ಲದೆ ನಿರ್ಗತಿಕರಾಗಿದ್ದಾರೆ.

~~~~~

ಉತ್ತರಹಿಂದೂಸ್ಥಾನದಿಂದ ಮುಂಬಾಯಿಗೆ ಬಂದಿದ್ದ ಒಂದು ಪಾರ್ಸೆಲ್ ಜನರಲ್ ಪೋಸ್ಟಾಫೀಸಿನಲ್ಲಿ ಫಕ್ಕನೇ ಸಿಡಿದು ಬೆಂಕಿ ಹಿಡಕೊಂಡಿತು ಈ ಪಾರ್ಸೆಲನ್ನು ಪ್ರತ್ಯೇಕ ಇಟ್ಟಿದ್ದರಿಂದ ಇತರ ಪಾರ್ಸೆಲುಗಳಿಗೆ ಬೆಂಕಿ ತಗಲಲಿಲ್ಲ.

~~~~~

ಈಚೆಗೆ ಗರೆದ ಕಠಿಣ ಮಳೆಯ ದೆಸೆಯಿಂದ ಲಾಹೋರಿನಲ್ಲಿ ವಿಶೇಷ ಅನಾಹುತಗಳು ಸಂಭವಿಸಿರುವವು ಅಲ್ಲಿಯ ಸೇತುವೆಯೊಂದರ ಬಳಿಯಲ್ಲಿದ್ದ ಸರಕಾರದ ರೆಸಿನ್ ಕಾರ್ಖಾನೆಯು ಈ ಮಳೆಯಿಂದ ಹಾಳಾಗಿರುವುದು. ಪರಂತು, ಫೋರೆಸ್ಟ್ ಆಫೀಸರರು ಬಹಳ ಪ್ರಯತ್ನದಿಂದ ಕಾರ್ಖಾನೆಯಲ್ಲಿದ್ದ ಸಾಮಾನುಗಳನ್ನು ನೆರೆಯಿಂದ ತಪ್ಪಿಸಿದರು ಅನೇಕ ಮನೆಗಳು ಬಿದ್ದು ಹೋಗಿರುವವು

~~~~~

ಮುಂಬಾಯಿ:—ಮೊಗೇರರ ಶ್ರೀ ಭಾರತ ಮಂಡಲಿಯವರು ಎಂದಿನಂತೆ ಈ ವರ್ಷದಲ್ಲಿ ಶ್ರೀ ಮಹಾಭಾರತ ಎಂಬ ಪುಣ್ಯ ಪುರಾಣವನ್ನು ಶ್ರವಣ ಮಾಡಿಸುತ್ತಲಿದ್ದಾರೆ

ಮೊಗೇರರ ವ್ಯವಸ್ಥಾಪಕ ಮಂಡಳಿಯವರಿಂದ ವಿನಂತಿಸೋಣಾದ ಮೇರೆಗೆ ಈ ಕುಲದ ಮೂಲ ಸಭೆ (ಹೊಂಬಳಿ)ಯವರಿಂದ ಈ ತಿಂಗಳ ತಾ ೧೨ನೇಯ ದಿವಸ ರೂ. ೨೫೦ನ್ನು ಸಹಾಯ ಧನವಾಗಿ ಕೊಡೋಣಾಗಿದೆ ಇವರ ಈ ಮಹದುಪಕಾರಕ್ಕೆ ಮಂಡಲಿಯ ಸರ್ವರು ಕೃತಜ್ಞರಾಗಿರುತ್ತಾರೆ

ಮೊಗೇರ ವ್ಯವಸ್ಥಾಪಕ ಮಂಡಲಿಯವರಿಂದ ಸ್ಥಾಪಿಸೋಣಾದ ಏಳನೇ ಎಡ್‌ವರ್ಡರವರ ಕೊರೊನೇಶನ್ ಫಂಡಿನ ಹನ್ನೆರಡನೇ ಸಾಮಾನ್ಯ ಕೂಟವು ಈ ತಿಂಗಳ ತಾ ೧೯ನೇ ರವಿವಾರ ದಿವಸ ರಾ॥ ಕೆ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಕರೆಯಲ್ಪಟ್ಟಿತು ಪ್ರಾರಂಭದಲ್ಲಿ ಸಭಿಕರಿಗೆ ಸ್ವಾಗತವಚನಾನಂತರ ರಾ॥ ಎಚ್ ಎಲ್ ಲಿಂಗಪ್ಪನವರು ವಾರ್ಷಿಕ ವರದಿಯನ್ನು ಓದಿಕೇಳಿದ ಮೇಲೆ ಅಧ್ಯಕ್ಷರು ಕಾಲೋಚಿತ ಭಾಷಣಕೊಟ್ಟು, ಕಳೆದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಈ ಮಂಡಲಿಯ ರಾತ್ರಿಶಾಲೆಯ ವಿದ್ಯಾರ್ಥಿಗಳಿಗೆ ಇನಾಂ ಕೊಡುವುದಕ್ಕಾಗಿ ರಾ॥ ಮುಲ್ಕಿ ಬಪ್ಪನಾಡ ವಾಮನರಾಯರಿಂದ ಕೊಡಲ್ಪಟ್ಟ ಆರು ರೂಪಾಯಿಯ [illegible] ಗಳನ್ನು ಪುಸ್ತಕಗಳನ್ನು ಅಧ್ಯಕ್ಷರು ಹಂಚಿಕೊಟ್ಟರು. ರಾ॥ ವೈ ಕೊರಗಪ್ಪನವರು ಸಮಾಜದೊಳಗಣ ಸುಧಾರಣ ವಿಷಯದಲ್ಲಿ ಒಂದು ಉಪನ್ಯಾಸವಿತ್ತನಂತರ ಶಾಲೆಯ ಹೆಡ್‌ಮಾಸ್ಟರ್ ರಾ॥ ಬಿ ವಾಮನ್‌ರಾಯರು ಸದುಪದೇಶಯುಕ್ತವಾದ ಒಂದು ಚೆಲೋ ಭಾಷಣಕೊಟ್ಟು ಕೂಡಿದ ಸಭಿಕರ ಮನವನ್ನು ವಿದ್ಯೆಯ ಕಡೆಗೆ ಆಕರ್ಷಿಸಿದರು ಅಂದು ಕೂಡಿದ ಉದಾರಹೃದಯರಿಂದ ಫಂಡಿನ ಅಭಿವೃದ್ಧಿ ಬಗ್ಗೆ ದೊರೆತ ಸಹಾಯಧನವು ಈ ಕೆಳಗಿನ ವಿವರದಂತೆ ಆಗಿರುತ್ತೆ — ರಾ॥ ಮಂಗಳೂರು ರಾಮಚಂದ್ರ ನ್ಯಾಕರಿಂದ ರೂ ೫, ರಾ॥ ಮುಲ್ಕಿ ಅಪ್ಪಣ್ಣ ಪೂಜಾರಿಗಳವರಿಂದ ರೂ. ೧; ಬೋಳೂರು ಶಾಂತಮ್ಮ ತ್ಯಾಂಪ ಇವರಿಂದ ರೂ ೫, ರಾ॥ ಸಣ್ಣಯಮ್ಮಾಳ ತುಕ್ರಪ್ಪನವರೂ ರಾ॥ ಐತಪ್ಪನವರೂ ಸ್ವಜಾತಿ ಮತ್ತು ಇತರ ಸದ್‌ಗೃಹಸ್ಥರಿಂದ ಜಮೆ ಮಾಡಿತಂದು ಏಕಗಂಟಿಗೆ ಕೊಟ್ಟ ರೂ ೩೫, ಮಂಡಲಿಯ ರಾತ್ರಿ ಶಾಲೆಯ ವಿದ್ಯಾರ್ಥಿಗಳಿಂದ ರೂ. ೨೦, ದಿ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಹವಲ್ದಾರ್ ರಾ॥ ಕೆ. ವೆಂಕಪ್ಪ ಬಂಗೇರರವರು ತಮ್ಮ ಜೊತೆಗಾರರಿಂದ ವಸೂಲು ಮಾಡಿಕೊಟ್ಟ ರೂ ೧೪ ರಾ॥ ಬೋಳೂರು ಅಮಣ್ಣ ಕರ್ಕೇಡರಿಂ[illegible] ಯಮ್ಮಾಳ ಪರಸ್ಪರ ಸಹಾಯಕ ಸಂಘದವರಿಂದ ರೂ. [illegible]ಕ ಫಂಡಿನವರಿಂದ ರೂ. ೫; ರಾ॥ ಕಾಡಿಪಟ್ಣ [illegible] ೫; ರಾ॥ ಸುರತ್ಕಲ್ಲು ಸೋಮಪ್ಪನವರಿಂದ ರೂ. ೫; [illegible]ಡ್ಡೆಕೊಪ್ಪಲ ಐತುನವರಿಂದ ರೂ ೩, ರಾ॥ ಕಾಡಿಪಟ್ಣ ಕೊರಗನವರಿಂದ ರೂ. ೨, ರಾ॥ ಸುರತ್ಕಲ್ಲು ತನಿಯಪ್ಪನವರಿಂದ ರೂ. ೧, ಧರ್ಮದ ಪೆಟ್ಟಿಗೆಯಲ್ಲಿ ವಸೂಲಾದ ರೂ. ೧೮-೩-೦ ಕೂಡ ಜುಮ್ಲಾ ರೂ. ೧೧೭-೩-೦ ಇವರುಗಳೆಲ್ಲರ ಉದಾರತೆಗೆ ಮಂಡಲಿಯ ಸರ್ವರು ಬಹು ಕೃತಜ್ಞರಾಗಿರುತ್ತಾರೆ. ಸಭಾಂತ್ಯದಲ್ಲಿ ಸಭಿಕರನ್ನು ಗಾಯನ, ನರ್ತನ, ಪುಷ್ಪ, ಬಾಳೆಹಣ್ಣು, ಸಕ್ಕರೆ, ತಾಂಬೂಲಾದಿಗಳಿಂದ ಸತ್ಕರಿಸಿ ಸಭೆ ಅಂತ್ಯವಾಯಿತು

~~~~~

ದಕ್ಷಿಣ ಹಿಂದೂಸ್ಥಾನ.

~~~~~

ವಿಜಯನ[illegible]ರಾಣಿಯವರು ಧಿವಂಗತರಾದ ಲೇಡಿ ಹಾರ್ಡಿಂಜರ ಜ್ಞಾಪಕಾರ್ಥವಾಗಿ ಒಂದು ಶಾಶ್ವತವಾದ ಕೆಲಸವನ್ನುಮಾಡಬೇಕೆಂದಿರುವರು.

~~~~~

ಥಿಯಾಸಫಿಕಲ್ ಸೊಸೈಟಿಯ ಅಧ್ಯಕ್ಷರಾದ ಮಿಸೆಸ್ ಅನ್ನಿ ಬಿಸೆಂಟರವರ ಅಧಿಕಾರದ ಅವಧಿಯು ಮುಗಿದುದರಿಂದ ಈಚೆಗೆ ಪುನಃ ಅವರನ್ನೇ ಅಧ್ಯಕ್ಷರನ್ನಾಗಿ ಆರಿಸಿರುವರು.

~~~~~

ಮದ್ರಾಸ್ ಸ್ಟೇಂಡಾರ್ಡ್ ಎಂಬ ಪತ್ರಿಕೆಯ ಸ್ವತಂತ್ರಾಧಿಕಾರವನ್ನು ಮಿಸೆಸ್ ಬಿಸೆಂಟರವರು ತೆಗೆದುಕೊಂಡರೆಂಬ ವಾರ್ತೆ ಇದೆ.

~~~~~

ಕೊಚ್ಚಿ ಸಂಸ್ಥಾನದ ಮಹಾರಾಜರು ಪೂರ್ವಕಾಲದ ಧಾರ್ಮಿಕ ಪರಾಯಣರಾದ ರಾಜರುಗಳಂತೆ ರಾಜ್ಯಭಾರವನ್ನು ತಮ್ಮ ಮಂತ್ರಿವರ್ಯರಿಗೆ ವಹಿಸಿ ವಾನಪ್ರಸ್ಥಾಶ್ರಮವನ್ನು ತಗೆದುಕೊಳ್ಳುವರೆಂದು ಪ್ರಕಟಿಸಿತ್ತಷ್ಟೆ. ಇವರು ಬರುವ ಆಗೋಸ್ಟು ತಿಂಗಳಲ್ಲಿ ರಾಜ್ಯಭಾರವನ್ನು ಬಿಟ್ಟುಬಿಡುವರೆಂದು ತಿಳಿಯಬರುತ್ತದೆ

~~~~~

ತಿರುವನಂತಪುರ (ತ್ರಾವಣಕೂರ್) ಸಂಸ್ಥಾನದಲ್ಲಿ ಮಹಮ್ಮದ್ ಸುಲೇಮಾನ್ ಸಾಹೆಬ್ ಎಂಬ ತರುಣನು ಬಿ. ಎ ಪರೀಕ್ಷೆ ಪಾಸಾದನು. ಇಸ್ಲಾಮಿ ಮತದವರಲ್ಲಿ ಬಿ ಎ ಪಾಸಾದವರಲ್ಲಿ ಈತನೇ ಪ್ರಥಮ ವಿದ್ಯಾರ್ಥಿಯಾದುದರಿಂದ ತ್ರಾವಣಕೂರ ಸರಕಾರದವರ ಕಡೆಯಿಂದ ದಿವಾನರವರು ಸಭೆ ಕೂಡಿಸಿ ಈ ವಿದ್ಯಾರ್ಥಿಗೆ ಚಿನ್ನದ ಪದಕನ್ನು ಬಹುಮಾನವಾಗಿ ಕೊಟ್ಟರು

~~~~~

ದಕ್ಷಿಣ ಕನ್ನಡ.

WANTED.

A Supervisor for Co-operative Societies in the Uppinangady Taluk, with head quarters at Puttur. Pay Rs 20 per mensem (inclusive of travelling charges) A fair knowledge of English and a thorough grasp of Co-operative principles, especially the practical working there of and of accounting and auditing is essential.

Applications to reach the undersigned by the end of August 1914.

M. Ananta Rao,

Secretary.

The South Canara

Central Co-operative Bank, Ltd.

Puttur, South Canara.

ಸುಳ್ಯ:—ಈ ಊರಲ್ಲಿ ಪುತ್ತೂರು ತಾಲೂಕು ಬೋರ್ಡಿನವರು ಒಂದು ಚೆಲೋ ಶಾಲಾ ಕಟ್ಟೋಣವನ್ನು ಕಟ್ಟಿಸಿರುತ್ತಾರೆ. ಹುಡುಗರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಾ ಇದೆ. ಈಗಲೇ ೯೦ಕ್ಕೆ ಮಿಕ್ಕಿವುಂಟು ಇನ್ನು ಸ್ವಲ್ಪ ದಿವಸಗಳಲ್ಲಿ ಕಟ್ಟೋಣವು ಹುಡುಗರಿಂದ ತುಂಬಿ ಹೋಗುವದು ಎಂಬದಕ್ಕೆ ಸಂದೇಹವಿಲ್ಲ ಪ್ರಕೃತ ೨ ಉಪಾಧ್ಯಾಯರು ಇದ್ದಾರೆ. ಇವರಿಬ್ಬರಿಂದ ಇಷ್ಟು ಮಕ್ಕಳಿಗೆ ಕಲಿಸಲಿಕ್ಕೆ ಸಾಧ್ಯವೇ ಇಲ್ಲ. ಇನ್ನೊಬ್ಬ ಶಾಲಾ ಕಟ್ಟೋಣಕ್ಕೆ ತಕ್ಕದಾದ ಉಪಾಧ್ಯಾಯನನ್ನು ನೇಮಿಸದಿದ್ದರೆ ಕಟ್ಟೋಣದ ಅಲಂಕಾರವೇ ಅಲ್ಲದೆ ಮಕ್ಕಳ ತಲೆಯು ಕ್ರಮವಾಗಿ ಅಲಂಕರಿಸದು. ಯಾವದೊಂದು ಕಟ್ಟಡಕ್ಕೂ ಅಸ್ತಿವಾರವೇ ಮುಖ್ಯವಾದದ್ದು. ಮಕ್ಕಳ ಸೇರುವಿಕೆಯ ಒತ್ತಾಟವನ್ನೂ ಪ್ರಕೃತದ ಹಾಜರಿಯನ್ನೂ ನೋಡಿ ಮಾ॥ ರಾ॥ ರಾ॥ ಬೆಳ್ಳಾರೆ ಕಮಿಟಿ ಚೆಯರ್ಮನರು ಇನ್ನೊಬ್ಬ ಉಪಾಧ್ಯಾಯನನ್ನು ಹೆಚ್ಚಿಗೆ ಕೊಡಿಸಬೇಕಾಗಿ ತಾಲೂಕು ಬೋರ್ಡಿಗೆ ಬರದರೂ ಈ ವರಗೆ ವಿಲೆವಾರಿಯಾಗದೆ ಇದ್ದದ್ದು ನೋಡಿದರೆ ಶಾಲೆಯ ದುರದೃಷ್ಟವೇ ಎನ್ನಬೇಕು. ಆದ್ದರಿಂದ ಇನ್ನಾದರೂ ಬೇಗನೇ ಒಬ್ಬ ಬುದ್ಧಿವಂತ ಉಪಾಧ್ಯಾಯನನ್ನು ನೇಮಿಸೋಣಾಗಬೇಕಾಗಿ ಗ್ರಾಮಸ್ಥರಾದ ನಾವು ತಾಲೂಕು ಬೋರ್ಡಿನವರಿಗೆ ಪ್ರಾರ್ಥಿಸುತ್ತೇವೆ.
~~~~~

ಇಲ್ಲಿ ಗಾಳಿಮಳೆ ಜೋರಾದ್ದರಿಂದ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವರೆ ಹೊಳೆಗಳಲ್ಲಿ ನೀರು ತುಂಬಿದ ದೆಶೆಯಿಂದ ಬಹಳ ಕಷ್ಟವಾಗಿಯದೆ.

ನೆರೆಗ್ರಾಮದ ಅರಂತೋಡು ಮತ್ತು ಮರ್ಕಂಜ ಗ್ರಾಮಗಳಲ್ಲಿ ಮಾಮೂಲು ಪ್ರಕಾರ ಕಾಡಾನೆಗಳು ಬಂದು ವರ್ಗಸ್ಥಳಗಳಲ್ಲಿ ಬೆಳೆಸಿದ ಭತ್ತದಪೈರು ಅಡಿಕೆ ತೆಂಗು ಮರಗಳನ್ನು ನಾಶ ಮಾಡುವರೆ ತೊಡಗಿದ್ದಾವೆ. ಇವುಗಳ ಹಾವಳಿಯು ಇನ್ನೂ ಜೋರಾಗಲಿಕ್ಕಿದೆ.

——o——

ಕಾಪು:—ವಿದ್ಯಾರ್ಥಿಗಳು ಹಬ್ಬದ ದಿನಗಳಲ್ಲಿ ಸುಖ ಸಂತೋಷದಲ್ಲಿರಬೇಕೆಂದು ಎಲ್ಲಾ ಶಾಲೆಗಳಲ್ಲೂ ರಜೆ ಇರುತ್ತದಷ್ಟೆ. ನಾಗರ ಪಂಚಮಿ ಹಬ್ಬವು ನಮಗೆ ವರ್ಷದ ಪ್ರಥಮ ಹಬ್ಬವಾಗಿರುತ್ತದೆ. ಈ ದಿನವನ್ನು 'ರಜಾ ದಿನವಾಗಿ ನಮ್ಮ ರೇಂಜಿನ ಶಾಲೆಗಳಲ್ಲಿ ಉಪಯೋಗಿಸಲು ಹುಕುಂ ಇಲ್ಲ. ಆದರೆ, ಮಂಗಳೂರು ರೇಂಜಿನ ಶಾಲೆಗಳ ವಿದ್ಯಾರ್ಥಿಗಳಿಗೆಲ್ಲಾ ಈ ದಿನ ರಜೆ ಇತ್ತಂತೆ. ದಯಾಳುವಾದ ನಮ್ಮ ಇಲಾಖೆಯ ಮೇಲು ಉದ್ಯೋಗಸ್ಥರು ಈ ವಿಷಯ ತಕ್ಕ ನಿಗಾ ಕೊಟ್ಟಲ್ಲಿ ಈ ಮಕ್ಕಳು ಸಹಾ ಅವರ ಮಿತ್ರರು ಪಡುವ ಸುಖಕ್ಕೆ ಪಾಲುಗಾರರಾಗಬಹುದು.

ಕಳೆದ ವಾರದ ಗಾಳಿಮಳೆಯ ಉಪಟಳವನ್ನು ಬರೆದು ಪೂರೈಸದು. ಅನೇಕ ಬಡವ, ಶ್ರೀಮಂತರ ಮನೆಮಾರುಗಳನ್ನೂ ಗಿಡಮರಗಳನ್ನೂ ನೆಲಸಮ ಮಾಡಿಯದೆ ಈ ಸಂದರ್ಭ ಯರ್ಮಾಳ ಬೋರ್ಡುಶಾಲೆಯ ಹಂಚಿನ ಮಾಡಿನ ಒಂದು ಪಾರ್ಶ್ವವೇ ಪೂರ್ಣ ಬಿದ್ದು ಹೋಗಿದೆ ಈ ತನಕ ಮಳೆಯು ಪುಷ್ಕಳವಾಗಿ ಬಂದಿರುತ್ತದೆ.

ಜನಪ್ರೀತರಾಗಿ ಒಳ್ಳೇ ರೀತಿಯಿಂದ ಕೆಲಸ ಮಾಡುತ್ತಿದ್ದ ನಮ್ಮ ಫಿರ್ಕಾ ರೆವಿನ್ಯು ಇನ್ಸಪೆಕ್ಟರರಾದ ರಾ। ಬಿ ಆನಂದ ಬಾಳಿಗರವರಿಗೆ ಮಂಗಳೂರಿಗೆ ವರ್ಗವಾಗಿರುವುದು.

~~~~~

ಕ್ಯೊಲಗ್ರಾಮ:—ಕ್ಯೊಲಗ್ರಾಮಕ್ಕೆ ಸೆಂಕ್ಷನ್ ಆದ ಬೋರ್ಡುಶಾಲೆಯು ... ತನಕ ತಾತ್ಕಾಲಿಕವಾಗಿ ಮವಂತೂರು ಗಣಪತಿ ದೇವಸ್ಥಾನದ ಗೋಪುರದಲ್ಲಿ ನಡೆಯುತ್ತಿತ್ತು ಸದರಿ ಶಾಲೆಯ ಬಾಬ್ತು ರಾ। ಮವಂತೂರು ಐತಪ್ಪ ಮೇಲಾಂಟರ ಮೊಪ್ಪಿಗ ಕೋಟಿ ಶೆಟ್ರುಗಳವರು ಪರೋಪಕಾರಾರ್ಥವಾಗಿಯೂ ಬಡ ಮಕ್ಕಳ ಮೇಲಿನ ಪ್ರೀತ್ಯಾರ್ಥದಿಂದಲೂ ಸುಮಾರು ೨೦೦—೩೦೦ ರೂಪಾಯಿ ಖರ್ಚುಮಾಡಿ ಹೊಸತಾಗಿ ಒಂದು ಶಾಲಾ ಕಟ್ಟೋಣವನ್ನು ಬಹಳ ಅಚ್ಚುಕಟ್ಟಾಗಿ ಕಟ್ಟಿಸಿ ಇದೇ ತಿಂಗಳ ಕಳೆದ ತಾ. ೯ನೇ ಗುರುವಾರ ಹಗಲು ೧೨ ಘಂಟೆ ಸಮಯದಲ್ಲಿ ದಕ್ಷಿಣ ಕನ್ನಡಾ ಜಿಲ್ಲಾ ಶಾಲೆಗಳ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾದ ಮ। ರಾ। ರಾ। ಯು ರಘುನಾಥಯ್ಯನವರ ಅಧ್ಯಕ್ಷಸ್ಥಾನದಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾದ ಮ। ರಾ। ರಾ। ಕೆ. ಕೃಷ್ಣರಾಯರೂ ಗ್ರಾಮಸ್ತರೂ ಇನ್ನೂ ಇತರ ಅನೇಕ ಮಾನ್ಯ ಗೃಹಸ್ಥರೂ ಕೂಡಿ, ಶಾಲಾ ಪ್ರವೇಶವನ್ನು ಮಾಡಿಸಿದರು ಇವರ ಮೇಹನತು ಅಲ್ಲದೆ ರಾ। ಕ್ಯೊಲಗ್ರಾಮದ ಪಟೇಲ ಶಾಂತಾಳ್ವರೂ, ಬೆಳ್ಳೂರು ತಿರಳೆ ದೂಮಣ್ಣ ಶೆಟ್ರೂ ಕೂಡಿ ಶಾಲಾ ಮಕ್ಕಳಿಗೆಲ್ಲಾ ಕೋಪಿ ಪುಸ್ತಕಗಳನ್ನೂ ರಾ। ಮವಂತೂರು ಕೇತವಾಳ್ವರು ಪೆನ್ಸೀಲುಗಳನ್ನೂ ರಾಯಿ ಗ್ರಾಮದ ಮುಡ್ರಾಯಿ ಬೀಡುಗುತ್ತಿನ ಪೂವಕ್ಕೆ ಶೆಡ್ತಿಯವರು ಶಾಯಿ ದವತಿಗಳನ್ನೂ ಬಡ ಮಕ್ಕಳಿಗೆ ಕೊಟ್ಟರು

ಶಾಲಾ ಕಟ್ಟೋಣದ ಕೆಲಸವನ್ನು ಪೂರೈಸಿ ಕೊಟ್ಟ ಆಳುಗಳಿಗೂ ಮೇಸ್ತ್ರಿಗಳಿಗೂ ಉಪಾಧ್ಯಾಯರುಗಳಿಗೂ ಸುಮಾರು ೪೦—೫೦ ರೂಪಾಯಿ ಕ್ರಯಬಾಳುವ ವಸ್ತ್ರ ಉಡುಗಿರೆಗಳನ್ನು ಸಹ ಕೋಟಿ ಶೆಟ್ರುಗಳವರು ಕೊಟ್ಟು ಸಂತೋಷ ಪಡಿಸಿರುವರು.

ಆ ದಿನದ ಜ್ಞಾಪಕಾರ್ಥವಾಗಿ ಸರ್ವ ಜನರು ನೆರದ ಸಭಿಕರೂ ಕೂಡಿ ವಾಲಗದೊಡನೆ ಶಾಲೆಯ ಎದುರುಗಡೆಯಲ್ಲಿ ಒಂದು ತೆಂಗಿನ ಸಸಿಯನ್ನೂ, ಹಲಸಿನ ಸಸಿಯನ್ನೂ, ಮಾವಿನ ಸಸಿಯನ್ನೂ, ಶೇಂಜಿಯ ಹೂವಿನ ಸಸಿಯನ್ನೂ ನೆಟ್ಟು ಆ ದಿನದ ಸಭೆಯು ಅಗಲಿತು.

~~~~~

ಮೂಡ್ನೂರು:—ಇಲ್ಲಿ ಹುಲಿಗಳ ಕಾಟವು ಹೆಚ್ಚಿದೆ. ಮೊನ್ನೆ ತಾನೇ ಹಗಲು ೫ ಗಂಟೆ ಸಮಯಕ್ಕೇನೇ ಎರಡು ಹುಲಿಗಳು ಮಾರ್ಗದಲ್ಲೇ ನಿರ್ಭಯವಾಗಿ ಸಂಚರಿಸುತ್ತಿದ್ದುವು. ಹೀಗೆ ಹುಲಿಗಳು ನಿರ್ಭಯವಾಗಿ ಸಂಚರಿಸುವುದಾದರೆ ಇನ್ನು ಮುಂದೆ ದನಕರುಗಳು ಹೊರಗೆ ಬರುವುದೇ ಕಷ್ಟವಾಗಿದೆ. ಈ ದುಷ್ಟ ಪ್ರಾಣಿ ರಾಜರುಗಳನ್ನು ನಾಶ ಮಾಡಲು ಸರಕಾರದವರಾಗಲೀ ಗ್ರಾಮಸ್ಥರಾಗಲೀ ನಿಗಾ ಕೊಡುವದಿಲ್ಲವಾದರೆ ಬಡಜನರ ಪಾಡನ್ನು ಹೇಳಿತೀರದು.

~~~~~

ಕೊಯಿಕುಡಗ್ರಾಮ:—ಮಂಗಳೂರು ತಾಲೂಕಿಗೆ ಸೇರಿದ ಈ ಗ್ರಾಮದಲ್ಲಿ ಜುಗಾರಿ ಆಟವೂ ಕಳ್ಳರ ಉಪದ್ರವೂ ದಿನೇ ದಿನೇ ಹೆಚ್ಚಾಗುತ್ತಾ ಬರುವುದರಿಂದ ಗ್ರಾಮ ಉದ್ಯೋಗಸ್ತರಾಗಲೀ ಇತರ ಪೋಲಾಫೀಸರರಾಗಲೀ ಈ ವಿಷಯ ನಿಗಾ ಕೊಡಬೇಕಾಗಿದೆ.

~~~~~

ಮಂಗಳೂರು.

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ತಾ ೨೫ನೇ ಶನಿವಾರ ಇಲ್ಲಿಯ ಗವರ್ನಮೆಂಟ ಕಾಲೇಜಿಯಲ್ಲಿ ಒಕ್ಟೋಬರ ತಿಂಗಳಲ್ಲಿ ಇಲ್ಲಿಗೆ ಚಿತ್ತೈಸುವ ಗವರ್ನರ ಪ್ರಭುಗಳವರಿಗೆ ಆದರ ಸತ್ಕಾರಗಳನ್ನು ಮಾಡುವುದು ಹೇಗೆಂಬದರ ಕುರಿತು ಆಲೋಚಿಸುವರೆ ಪಟ್ಟದ ನಿವಾಸಿಕರ ಸಭೆಯು ಕೂಡಿತು 'ಈ ಸಭೆಗೆ ಜಿಲ್ಲಾ ಕಲೆಕ್ಟರ ದೊರೆಗಳವರು ಅಧ್ಯಕ್ಷರಾಗಿದ್ದರು ಸಭೆಗೆ ಪಟ್ಣದ ಮಾನ್ಯ ಗ್ರಹಸ್ಥರೂ ರಿಟಾಯರ್ಡ್ ಆಫೀಸರರುಗಳೂ, ವಕೀಲರೂ, ಬಿಷೋಪ ದೊರೆಗಳವರೂ, ಜರ್ಮನ್ ಮಿಶ್ಯನೆರಿಗಳೂ ಹಾಜರಿದ್ದು, ಗವರ್ನರ ಪ್ರಭುಗಳವರನ್ನು ಸತ್ಕರಿಸುವ ಬಗೆ ಹೇಗೆಂಬದನ್ನು ಆಲೋಚಿಸುವ ಒಂದು ಕಮಿಟಿಯು ಏರ್ಪಟ್ಟಿತು ಕೂಡಿದ ಫಂಡು ಮಂತಿಗೆ ಪಟ್ಟಿಯಲ್ಲಿ ಒಟ್ಟಿಗೆ ಸುಮಾರು ೮೩೭ ರೂಪಾಯಿ ಮಂತಿಗೆ ಹಾಕಿದರು. ನಂತರ ಅಧ್ಯಕ್ಷರಿಗೆ ಧನ್ಯವಾದವನ್ನಿತ್ತು ಸಭೆಯು ಅಗಲಿತು

ಮೈಸೂರು ಆರಸಿಕೆರೆ ರೈಲ್ವೆ ಕೆಲಸವು ನಡಿಯುತ್ತಿದೆ ಹಾಸನದಿಂದ ಮಂಗಳೂರಿಗೆ ಹಾಕಬೇಕೆಂದಿರುವ ಲೈನಿನ ವಿಚಾರವು ಇಂಡಿಯಾ ಸರಕಾರದೊಡನೆ ಪತ್ರವ್ಯವಹಾರದಲ್ಲಿದೆಂದು ತಿಳಿದು ಬರುತ್ತದೆ

ಇಲ್ಲಿಯ ಪ್ಲೇಗು ಸಿಬಂದಿಯ ಸಂಬಂಧ ನೇಮಿಸಲ್ಪಟ್ಟ ೧೪ ಮಂದಿ ಪೋಲಿಸಿನವರ ಪೈಕಿ ೧೦ ಮಂದಿ ಅವಶ್ಯವಿಲ್ಲವೆಂಬದಾಗಿ ಈಚೆಗೆ ಕೆಲಸದಿಂದ ತೆಗೆದುಹಾಕಲ್ಪಟ್ಟಿದ್ದರು ಉಳಿದವರ ... ಅವಶ್ಯಕತೆಯೂ ಇಲ್ಲದಿರುವುದರಿಂದ ಬರುವ ತಾ ೨೭ರಿಂದ ಈ ನಾಲ್ಕು ಮಂದಿಗೂ ಕೆಲಸವಿರದು

ವೈಸರಾಯ ಹಾರ್ಡಿಂಜ ಪ್ರಭುಗಳವರ ಪತ್ನಿಯವರಾದ ಲೇಡಿ ಹಾರ್ಡಿಂಜರು ವಿಧಿವಶರಾದ ಸಹಸಂತಾಪವನ್ನು ಸೂಚಿಸುವ ತಂತೀಯು ಇಲ್ಲಿಯ ನಿರಾಶ್ರಿತ ಜನಸಹಾಯಕ ಸಂಘದ ಪರವಾಗಿಯೂ ವೈಸರಾಯ ಪ್ರಭುಗಳವರಿಗೆ ಕಳುಹಿಸಲ್ಪಟ್ಟಿರುವುದು

ಇಲ್ಲಿಯ ಸಿಟಿ ಪೋಸ್ಟಾಫೀಸಿನಲ್ಲಿ ಇಲ್ಲಿಯ ಭಾಷೆ ವ ಜನರ ಪರಿಚಿತಿ ಇಲ್ಲದ ಪೋಸ್ಟು ಮಾಸ್ತರರು ನೇಮಿಸಲ್ಪಟ್ಟಿದ್ದರಿಂದ ಸಿಟಿ ಪೋಸ್ಟಾಫೀಸಿನ ಸೇವಿಂಗ್ ಬೇಂಕಿನಲ್ಲಿಟ್ಟ ಹಣವನ್ನು ಹಿಂದಕ್ಕೆ ಪಡೆಯಬೇಕಾದರೆ ಗುರುತು ಸಾಕ್ಷಿ ಕೇಳುವುದೂ, ಸಾಧಾರಣ ಜನರನ್ನು ಗುರುತು ಸಾಕ್ಷಿಯಾಗಿ ತಂದರೆ ತನಗೆ ಪರಿಚಿತಿ ಇರುವ ದೊಡ್ಡ ಸಾಹುಕಾರರ ಸಾಕ್ಷಿಯಾಗಬೇಕೆಂತ ಹೇಳುವುದೂ ವಾಡಿಕೆ ಇದೆ, ದೊಡ್ಡ ಮನುಷ್ಯರು ತಮ್ಮ ಕೆಲಸಗಳನ್ನು ಬಿಟ್ಟು ಬರಲಾರದ್ದರಿಂದ ಸೇವಿಂಗ್ಸ್ ಬೇಂಕಿನ ಹಣವನ್ನು ಹಿಂದೆ ಪಡೆಯುವುದು ಕಷ್ಟವಾಗಿದೆ ಇನ್ನು ಪಾರ್ಸೆಲುಗಳನ್ನು ಹುಡುಗರ ಕೈಯಲ್ಲಿ ೩ ಗಂಟೆಗೆ ಕಳುಹಿಸಿಕೊಟ್ಟರೂ ೪ ಗಂಟೆಯ ವರೆಗೆ ಪಾರ್ಸೆಲುಗಳನ್ನು ತೆಗೆದುಕೊಳ್ಳದೆ ಕೆಲಸದಲ್ಲೇ ನಿರತರಾಗಿದ್ದು ಅನಂತರ ಪಾರ್ಸೆಲುಗಳನ್ನು ಹಿಂದಕ್ಕೆ ಕಳುಹಿಸುವುದೂ ಪದ್ಧತಿ ಇದೆ ಎಂಬದಾಗಿ ಒಬ್ಬ ಮಾನ್ಯ ಬಾತ್ಮಿದಾರರು ತಿಳಿಸಿರುವರು. ಸಿಟಿ ಪೋಸ್ಟಾಫೀಸಿಗೆ ವ್ಯವಹಾರ ನಡಿಸಲು ಬರುವ ಜನರಲ್ಲಿ ಹೆಚ್ಚಿನವರು ಕನ್ನಡ, ತುಳು, ಕೊಂಕಣಿ ಭಾಷೆಯ ಮಾಹಿತಿಯವರಾಗಿದ್ದು ಮಲಯಾಳಿ ಭಾಷೆಯ ಅರುಹು ಇಲ್ಲದವರಾಗಿರುವದರಿಂದಲೂ ಪೋಸ್ಟು ಮಾಸ್ತರರಿಗೆ ಈ ಕನ್ನಡಭಾಷೆಯ ತಿಳುವಳಿಕೆ ಇಲ್ಲದ್ದರಿಂದಲೂ ಅವರು ಹೇಳುವುದೊಂದು, ಜನರು ಭಾವಿಸುವದೊಂದು ಎಂಬಂತಾಗಿ ಮೇಲೆ ಹೇಳಿದ ದೂರಾಟಕ್ಕೆ ಕಾರಣವಾಗಿರಬಹುದು. ಆದುದರಿಂದ ಇಲಾಖೆಯವರು ಈ ಪೋಸ್ಟಾಫೀಸಿನಲ್ಲಿ ಕನ್ನಡ ಬಲ್ಲವ ಈ ಪ್ರಾಂತ್ಯದ ಜನರ ಪರಿಚಿತಿಯುಳ್ಳ ಪೋಸ್ಟು ಮಾಸ್ತರರನ್ನು ಇಟ್ಟು, ಇಂತಹ ಮಾತುಗಳಿಗೆ ಎಡೆಯಾಗದಂತೆ ಮಾಡಬೇಕಾಗಿ ಪುನಃ ಹೇಳದಿರಲಾರೆವು.

ಬಿಲ್ಲದ ರಾ। ಜಯವರ್ಮ ಸೆಟ್ರರವರನ್ನು ಇಲ್ಲಿಯ ತಾಲೂಕು ಮೇಜಿಸ್ಟ್ರೇಟರು ಇ. ಪಿ. ಕೋಡಿನ ೪೫೭—೩೮೦ ಪ್ರಕರಣದ ಮೇಲೆ ಮೇ. ತಾ. ೩೧ರಲ್ಲು ಚಾರ್ಜು ಮಾಡಿದ್ದರೆಂದು ತಿಳಿಸಿತ್ತಷ್ಟೆ. ಈ ಮೊಕದ್ದಮೆಯು ತನಿಖೆಯಾಗಿ ಇದೇ ಕಳೆದ ತಾ. ೧೫ರಲು ರಾ। ಜಯವರ್ಮ ಸೆಟ್ರರವರನ್ನು ಮೇಜಿಸ್ಟ್ರೇಟರು ಖುಲಾಸು ಪಡಿಸಿದರು.

ಕಾಫಿ ಕಳವು ಮೊಕದ್ದಮೆಯಲ್ಲಿ ಆಪಾದಿಸಲ್ಪಟ್ಟ ಶಾಂತಪ್ಪ, ಮೈಂದಪ್ಪ ಎಂಬ ಇಬ್ಬರನ್ನು ರಾತ್ರಿಕಾಲ ಮನೆ ಒಡೆದು ಕಳವು ಮಾಡಿದ್ದಾರೆಂಬ ತಕ್ಷೀರಿನ ಮೇಲೆ ತಾ. ೨೮ರಲ್ಲು ಟೌನ್ ಮೇಜಿಸ್ಟ್ರೇಟರು ಚಾರ್ಜು ಮಾಡಿರುತ್ತಾರೆ. ಆಪಾದಿತರು ಡಿಫೆನ್ಸ್ ಸಾಕ್ಷಿಗಳನ್ನು ಹಾಜರು ಪಡಿಸುತ್ತೇವೆಂದು ಹೇಳಿದ ಕಾರಣ ಬರುವ ತಾ. ೧೦ಕ್ಕೆ ಈ ಮೊಕದ್ದಮೆಯ ತನಿಖೆ ಪುನಃ ಪ್ರಾರಂಭವಾಗುವುದು

ಮದ್ರಾಸ್ ಮೆಡಿಕಲ್ ಕಾಲೇಜಿಯಲ್ಲಿ ಸುಮಾರು ೨೭ ವರ್ಷಗಳಿಂದ ಅಸಿಸ್ಟಾಂಟ ಪ್ರೊಫೆಸರರಾಗಿರುವ ರಾ। ಗುಲ್ವಾಡಿ ರಾಮರಾವ್ ಎಮ್. ಬಿ. ಎಂಡ್ ಸಿ. ಎಮ್‌ರವರಿಗೆ ಈಚೆಗೆ ಸರಕಾರದವರು ರಾಯಿ ಸಾಹೇಬ್ ಎಂಬ ಬಿರುದನ್ನು ದಯಪಾಲಿಸಿದ ಬಹುಮಾನಾರ್ಥವಾಗಿ ಮದ್ರಾಸಿನ ಸಂಯುಕ್ತ ಗೌಡಸಾರಸ್ವತ ಸಭೆಯವರು ಇದೇ ತಾ. ೨೭ರಲ್ಲು ರಾಯಿಸಾಹೇಬ್ ಗುಲ್ವಾಡಿ ರಾಮರಾಯರನ್ನು ಆಮಂತ್ರಿಸಿ ಸತ್ಕರಿಸಿದರು ಕಳೆದ ವರ್ಷದ ಎಲ್. ಎಮ್. ಎಸ್ ಪರೀಕ್ಷೆಯಲ್ಲಿ ಒಂದನೇ ತರಗತಿಯಲ್ಲಿ ತೇರ್ಗಡೆ ಹೊಂದಿದ ರಾ। ಬಂಟ್ವಾಳ ಗಣಪತಿ ಮಲ್ಯರವರಿಗೆ ಇದೇ ಸಭೆಯಿಂದ ಆ ದಿನ ಒಂದು ಚಿನ್ನದ ಪದಕವು ಬಹುಮಾನವಾಗಿ ಕೊಡಲ್ಪಟ್ಟಿತು

ರಾ। ಬಂಟ್ವಾಳ ಗಣಪತಿ ಮಲ್ಯ ಎಲ್ ಎಮ್ ಎಸ್‌ರವರಿಗೆ ಗವರ್ನಮೆಂಟ್ ಆಫೀಸರ್ಸ್ ಎಸೋಸಿಯೇಶನಿನಿಂದ ೩೫೦೦ ರೂಪಾಯಿಯ ವೇತನವು ಕೊಡಲ್ಪಟ್ಟಿದ್ದರಿಂದ ಇವರು ಐ ಎಮ್ ಎಸ್ ಪರೀಕ್ಷೆಗೆ ಅಭ್ಯಾಸಿಸುವ ಉದ್ದೇಶ ಇಂಗ್ಲಾಂಡಿಗೆ ಹೋಗುವರ ರಾ। ಮಲ್ಯರವರು ಇದೇ ತಾ ೨೯ರಲ್ಲು ಮದ್ರಾಸಿನಿಂದ ಹೊರಟು ಮುಂಬಾಯಿಗೆ ಹೋಗಿ ಆಗೋಸ್ತು ತಾ ೧ರಲ್ಲು ಇಂಗ್ಲಾಂಡಿಗೆ ಹಡಗ ಹತ್ತುವರು ಗೌಡ ಸಾರಸ್ವತ ವೃಂದದ ಪೈಕಿ ವಿದ್ಯಾಭ್ಯಾಸಕ್ಕಾಗಿ ಇಂಗ್ಲಾಂಡಿಗೆ ಹೋದವರಲ್ಲಿ ರಾ। ಮಲ್ಯರವರೇ ಪ್ರಥಮರಾಗಿರುವರು ರಾ। ಮಲ್ಯರವರಿಗೆ ಕಾರ್ಯಸಿದ್ಧಿಯನ್ನೂ ಕ್ಷೇಮಾಭಿವೃದ್ಧಿಯನ್ನೂ ಈ ಮೂಲಕ ಬಯಸುವೆವು

ಇಲ್ಲಿಯ ಗೌಡಸಾರಸ್ವತ ವೈಷ್ಣವ ಬ್ರಾಹ್ಮಣ ಪ್ರಮುಖರು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಕಳೆದ ವರ್ಷ ಸ್ಥಾಪಿಸಿದ ವೇದಪಾಠಶಾಲೆಯು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಲಿರುವುದು.

ಈ ಪಾಠಶಾಲೆಯ ೨ನೇ ವರ್ಷದ ಪ್ರಥಮ ದಿನವಾದ ಕಳೆದ ಶ್ರಾವಣ ಶುದ್ಧ ೨ರಲ್ಲು ಪಾಠಶಾಲೆಯ ಅಧ್ಯಾಪಕರಾದ ವೇ॥ ಮಂಜೇಶ್ವರ ಕೇಶವ ಗೋವಿಂದ ಭಟ್ಟರು ಮತ್ತು ಎಲ್ಲಾ ವಿದ್ಯಾರ್ಥಿಗಳು ವಿಶೇಷ ಸಂಭ್ರಮದಿಂದ ಶಾರದಾ ಪೂಜೆಯನ್ನು ಆಚರಿಸಿದರು ಶ್ರಾವ್ಯವಾದ ಗಾಯನವೂ, ವಿದ್ಯಾರ್ಥಿಗಳಿಗೆ ಬೋಧಕರವಾದ ಉಪನ್ಯಾಸವೂ ವಾದ್ಯಾದಿ ಮಂಗಲಘೋಷ ಪೂರ್ವಕವಾಗಿ ಶಾರದಾ ಪೂಜನವೂ ಆದ ತರುವಾಯ ಮಿಳಿತರಾದ ಜನರಿಗೆ ಆದರ ಸತ್ಕಾರವನ್ನು ಪಾಠಶಾಲೆಯ ವಿದ್ಯಾರ್ಥಿಗಳು ನಡಸಿದರು, ಮತ್ತು ಸಕಲ ಮಹಾ ಜನರಿಗೆ ಶ್ರೇಯಸ್ಸನ್ನು ಪ್ರಾರ್ಥಿಸಿ ಶಾರದಾ ಪೂಜೆಯನ್ನು ಚಂದಗೊಳಿಸಿದರು.

ಈ ಪಾಠಶಾಲೆಯಲ್ಲಿ ಸದ್ಯಕ್ಕೆ ಊರಿನ ವಿದ್ಯಾರ್ಥಿಗಳು ೧೧ ಜನರು, ಪರಊರಿನವರು ೩ ಜನರು, ಪರಊರಿನ ಸಾರಸ್ವತ ವಿದ್ಯಾರ್ಥಿ ಒಬ್ಬರು ಹೀಗೆ ೧೫ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿರುವರು. ಋಗ್ವೇದವೂ ಅದರ ಅಂಗಗಳೂ ಆಶ್ವಲಾಯನ ಪ್ರಯೋಗಗಳೂ ಇತರ ಸ್ತೋತ್ರಾದಿಗಳೂ ಈ ಪಾಠಶಾಲೆಯಲ್ಲಿ ಸೊಗಸಾಗಿ ಕಲಿಸಲ್ಪಡುತ್ತವೆ.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕಲೆಕ್ಟರ ಆಫೀಸು:— ಜಿಲ್ಲಾ ಕಲೆಕ್ಟರ ದೊರೆಗಳವರ ಸರ್ಕೀಟು—ಜುಲ್ಯಾ ತಾ. ೨೮ ಗುರುಪುರ; ತಾ. ೨೯ ಗುರುಪುರ; ತಾ. ೩೦ ಬಜಪೆ; ತಾ. ೩೧ ಸುರತಕಲ್; ಅಗೋಸ್ತು ತಾ. ೧ ಸುರತಕಲ್; ತಾ. ೨ ಮಂಗಳೂರು.

ಕಲೆಕ್ಟರ ಆಫೀಸಿನ ಕರಸ್ಪೋಂಡೆಂಟ ಸೆಕ್ಷನಿನ ೪ನೇ ಕ್ಲಾರ್ಕರಾದ ರಾ। ಎಮ್. ಕೃಷ್ಣಪಾಂಡುರಂಗ ಕಿಣಿಯವರಿಗೆ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ತಾ. ೩೦—೭—೧೪ರಿಂದ ಒಂದು ತಿಂಗಳ ರಜೆ ಕೊಡಲ್ಪಟ್ಟಿರುವುದು.

ಹೊಸದುರ್ಗದ ಆಕ್ಟಿಂಗ್ ಡೆಪ್ಯುಟಿ ತಹಸೀಲದಾರ ರಾ। ಎಮ್. ರಾಘವೇಂದ್ರರಾವ್‌ರವರಿಗೆ ರಾ। ಎಮ್. ಅನಂತನ್ ನಾಯರ್‌ರವರ ಚಾರ್ಜು ತಕ್ಷಣದ ತಾರೀಕಿನಿಂದ ಒಂದು ತಿಂಗಳ ರಜೆ ಕೊಡಲ್ಪಟ್ಟಿರುವುದು.

ಕಾಸರಗೋಡ IIIನೇ ಕ್ಲಾಸ ಆಕ್ಟಿಂಗ್ [illegible] ರಾದ ರಾ। ಕೆ. ರಾಮವರ್ಮರಾಜರವರು ರಾ। [illegible]

ಸು ಚಾರ್ಜು ತಕ್ಕೊಂಡ ನಂತರ ರೂ ೧೭೫ರ IV ಗ್ರೇಡ ಮಂಗಳೂರು ಆಕ್ಟಿಂಗ್ ತಹಸೀಲದಾರರಾಗಿ ನೇಮಿಸಲ್ಪಟ್ಟಿದ್ದಾರೆ. ಮಂಗಳೂರು ತಹಸೀಲದಾರರಾದ ಮ॥ ಬಿ. ಎಸ್. ಅಲ್ಬುಕರ್ಕರವರು ರಜೆ ತಕ್ಕೊಂಡಿರುವರು

ರಾ॥ ಡಿ. ಆನಂದರಾವ್ ಬಿ ಎ. ರವರು ಉಪ್ಪಿನಂಗಡಿ ಆಕ್ಟಿಂಗ್ ತಹಸೀಲದಾರರಾಗಿಯೇ ಕೆಲಸವನ್ನು ನೋಡಬೇಕಾಗಿರುವುದು. ಆದರೆ ಕಡೇ ಗ್ರೇಡಾದ ರೂ ೧೫೦ರಲ್ಲೇ ಇರಬೇಕಾಗುವುದು

ಮಂಗಳೂರಿನ V ನೇ ಗ್ರೇಡ ಆಕ್ಟಿಂಗ್ ತಹಸೀಲದಾರ ರಾ॥ ಎಮ್ ಅಚ್ಯುತಯ್ಯರವರು ರೂ ೧೫೦ರ ಕಲೆಕ್ಟರ ಆಫೀಸ್ ಇಂಗ್ಲಿಷ್ ಹೆಡ್ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು

ಆಕ್ಟಿಂಗ್ ಇಂಗ್ಲಿಷ್ ಹೆಡ್ ಕ್ಲಾರ್ಕರಾದ ಮ॥ ಎಮ್ ಎಸ್ ಪ್ಯಾಸ್ ಬಿ. ಎರವರು ರೂ. ೧೨೫ರ ಮಂಗಳೂರು ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ

ಮಂಗಳೂರು ಆಕ್ಟಿಂಗ್ ಸ್ಟೇಶನರಿ ಸಬ್ ಮೆಜಿಸ್ಟ್ರೇಟರಾಗಿರುವ ರಾ॥ ಕೆ ಶಿವರಾಯರವರು ಕಲೆಕ್ಟರ ಆಫೀಸಿನ ರೂ ೭೦ರ ತನ್ನ ಖಾಯಂ ಕೆಲಸಕ್ಕೆ ಹಾಜರಾಗಬೇಕಾಗಿದೆ

ಕಲೆಕ್ಟರ ಆಫೀಸಿನ I ಅಕೌಂಟಾಂಟರಾದ ರಾ॥ ಎಮ್ ಗಣೇಶರಾವ್‌ರವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜೆ ಕೊಡೋಣಾಗಿದೆ

ಪೆರ್ಮನ್ನೂರು ಗ್ರಾಮ:—ನೇತ್ರಾವತಿಯ ತೆಂಕು ಪಾರ್ಶ್ವದಲ್ಲಿ ಪೆರ್ಮನ್ನೂರು ಎಂಬ ಗ್ರಾಮ ಉಂಟು ಈ ಗ್ರಾಮದಲ್ಲಿ ಶುಮಾರು ನೂರು ವರುಷಗಳಿಂದ "ಜಪ್ಪಿನ ಕಡವಿನ ರಸ್ತೆ" ಎಂದು ಕರೆಯುವ ಒಂದು ಸರಕಾರಿ ರಸ್ತೆ ಇತ್ತು ಲೋಕಲ್ ಫಂಡುಗಳು ಶುರು ಆಗುವ ಮುಂಚೆಯೇ ಸರಕಾರದವರು ಮಾಡಿಸಿದ ರಸ್ತೆಗಳಲ್ಲಿ ಇದು ಒಂದು ಆಗಿರುವುದು ಈ ರಸ್ತೆಯ ಕಡಾವಳ ರಸ್ತೆಯಲ್ಲಿ ಶುಮಾರು ೫॥ ಮೈಲಿನ ಕಲ್ಲಿನ ಹತ್ತರ ಪ್ರಾರಂಭವಾಗಿ ನೇತ್ರಾವತಿ ಹೊಳೆಯ ವರೇಗೆ 'ಜಪ್ಪಿನ ಕಡವು" ಎಂಬಲ್ಲಿಗೆ ಅಂತ್ಯವಾಗುತ್ತಿತ್ತು ಸರಕಾರದವರು ಮಾಡಿಸಿದ ಈ ರಸ್ತೆಯ ನಿಗಾವಾನಿಯನ್ನು ಲೋಕಲ್ ಫಂಡಿನವರ ನೋಡದೆ ಹಾಳುಸ್ಥಿತಿಗೆ ಬಂತು ಮಾರ್ಗದ ಸ್ಥಿತಿ ಕೆಟ್ಟುಹೋದಾಗ್ಯೂ ಹಳ್ಳಿಯವರಿಗೆ ಈ ಮಾರ್ಗವು ಏಳ ವರುಷಗಳ ಮುಂಚಿನ ವರೇಗೆ ಜನರ ಓಡಾಡುವದಕ್ಕೂ, ಗಾಡಿಗಳು ಕೊಂಡುಹೋಗುವುದಕ್ಕೂ ಉಪಯೋಗವಾಗುತ್ತಿತ್ತು ರೈಲ್ ರಸ್ತೆ ಮಂಗಳೂರಿಗೆ ಹಾದುಹೋಗುವಾಗ್ಯೆ ರಸ್ತೆಯನ್ನು ಎರಡು ತುಂಡುಗಳಾಗಿ ಮಾಡಿದ್ದರಿಂದ ರಸ್ತೆಯ ಪ್ರಯೋಜನ ಪೂರಾ ತಪ್ಪಿಹೋಯಿತು ಪೆರ್ಮನ್ನೂರ ಗ್ರಾಮದವರಾಗಲೀ ಇತರ ಆಜುಬಾಜಿನ ಹಳ್ಳಿಯವರಾಗಲೀ ಈಗ ಉಳ್ಳಾಲ ರೈಲ್ ಸ್ಟೇಶನಿಗೆ ರೈಲ್ ಹತ್ತಲಿಕ್ಕೆ ಹೋಗುವರೆ ಸರಿಯಾದ ಮಾರ್ಗವಿಲ್ಲ ರೈಲ್ ರಸ್ತೆಯ ಆಜುಬಾಜು ಇರುವ ಬೇಲಿಯ ಹತ್ತರವಿರುವ ಸರಕಾರ ಸ್ಥಳದಿಂದ ಹೊಂಡಗಳನ್ನು ದಾಟಿ ಕಲ್ಲು ಮುಳ್ಳುಗಳನ್ನು ಮೆಟ್ಟಿ ಹೋಗಬೇಕಾಗುತ್ತದೆ ಹೊಳೆಯ ಬದಿಯ ವರೇಗೆ ಹೋಗಲಿಕ್ಕೆ ಇರುತ್ತಿದ್ದ ಮಾರ್ಗದ ಅಂಶವು ದುರುಸ್ತು ಇಲ್ಲದೆ ಇರುವದರಿಂದ ಅದು ಸಹಾ ಜನರಿಗೆ ಉಪಯೋಗಕ್ಕೆ ಈಗ ಬೀಳುವ ಹಾಗಿಲ್ಲ ಹೀಗಾಗಿ ಒಂದು ಕಾಲದಲ್ಲಿ ಸರಕಾರದವರು ಹೇರಳ ಖರ್ಚಿನಿಂದ ಮಾಡಿಸಿದ ಮಾರ್ಗದ ಉಪಯೋಗವು ಜನರಿಗೆ ತಪ್ಪಿ ಹೋಯಿತು ಲೋಕಲ್ ಫಂಡಿನವರು ಈ ಮಾರ್ಗದ ಗೊಡವೆಯನ್ನೇ ಬಿಟ್ಟಿರುತ್ತಾರೆ ಗವರ್ನಮೆಂಟಿನವರು ಗ್ರಾಮ ರಸ್ತೆಗಳಿಗೆಂತ ಸ್ಪೆಶಲ್ ಗ್ರೇಂಟ್ ಕೊಟ್ಟಾಗ್ಯೂ ಈ ಮಾರ್ಗದ ಕಡೆಗೆ ಯಾರೂ ಕಣ್ಣೆತ್ತಿ ನೋಡುವವರಿಲ್ಲ ಈ ಮಾರ್ಗದ ಅಂತ್ಯವು ನೇತ್ರಾವತಿ ಹೊಳೆ. ಈ ಮಾರ್ಗ ಅಂತ್ಯವಾಗುವಲ್ಲಿ ಇರುವ ಶುಮಾರು ೭೫ ಎಕ್ರೆ ಸ್ಥಳವು ಸರಕಾರದವರಿಂದ ಇತ್ತಲಾಗ್ಗೆ ಬೇರೇಜಿಗೆ ಕೊಟ್ಟಿರುತ್ತದೆ ಮಾರ್ಗವು ದುರುಸ್ತಿಯಾದರೆ ಹೊಸ ಪಟ್ಟಾದಾರರಿಗೂ ಹಳ್ಳಿಯ ಜನರಿಗೂ ಉಪಯೋಗವಾಗುವುದು. ರೈಲ್ ರಸ್ತೆಯ ಪಶ್ಚಿಮದಲ್ಲಿ ಈ ರಸ್ತೆಯು ಹೊಳೆಯ ಕಿನಾರೆಯಿಂದ ಪ್ರಾರಂಭಿಸಿ "ಉಳ್ಳಾಲ ಸ್ಟೇಶನಿನ ವರೇಗೆ" ಸರಿಯಾಗಿ ಮಾಡಿಸಿದರೆ ಪೆರ್ಮನ್ನೂರ ಗ್ರಾಮದವರಿಗೆ ತಪ್ಪಿ ಹೋದ ಮಾರ್ಗದ ಪ್ರಯೋಜನವು ಪುನಹಾ ಶಿಕ್ಕುವದು ಸರಕಾರದವರು ಈಗ ಸ್ವಲ್ಪ ಹಣ ಖರ್ಚು ಮಾಡಿದರೆ ಹೆಚ್ಚು ಖರ್ಚಿನಿಂದ ಮೊದಲು ಸರಕಾರದವರು ಮಾಡಿದ ಮಾರ್ಗವು ತಿರಿಗಿ ಜನರ ಉಪಯೋಗಕ್ಕೆ ಬೀಳುವದು.

ಚರ್ವತ್ತೂರು:—ಚರ್ವತ್ತೂರು ಗ್ರಾಮದ ಚೆಂದಾರೆಯಲ್ಲಿ ಗ್ರಾಮಸ್ಥರು ಬೋರ್ಡುಸ್ಕೂಲಿನ ಬಗ್ಗೆ ೧೨೦೦ ರೂಪಾಯಿ ಮುಟ್ಟಿಸಿ ಹಂಚುಹಾಕಿಸಿ ಕಟ್ಟಿಸಿದ ಮನೆಗೆ ಈ ಜುಲೈ ತಾ. ೨೨ರಲ್ಲಿ ಒಕ್ಕಲಾಯಿತು ಬಹು ಮಂದಿ ಮಾತಬಾರ ಜವಾನರೂ ಇತರರೂ ಸೇರಿದರು. ಮ॥ ರಾ॥ ಕೆಮ್ಮಾರನ್ನಾಯರ್‌ರವರು ಕೊಟ್ಟ ಸೂಚನೆಯನ್ನನುಸರಿಸಿ ಗೃಹಪ್ರವೇಶದ ಸಮಾರಂಭಕ್ಕೆ ಸ್ಕೂಲ್‌ಗಳ ಅಸಿಸ್ಟಾಂಟ್ ಇನ್ಸ್‌ಪೆಕ್ಟರ್ ರಾಯ ಬಹದ್ದೂರ್ ಮ॥ ರಘುನಾಥರಾಯರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಇವರು ಆಗ್ರಾಸನವನ್ನು ಸ್ವೀಕರಿಸಿದೊಡನೆ ಮ॥ ರಾ॥ ಕೃಷ್ಣ ಅಡಿಯೋಡಿಗಳು— "ಈ ಗ್ರಾಮದಲ್ಲಿ ಒಂದು ಕೈ ಸಂಬಳದ ಶಾಲೆಯಿದ್ದರೂ ಅದು ಸರಿಯಾಗಿ ನಡೆಯುವುದಿಲ್ಲ ಆದುದರಿಂದ ಗ್ರಾಮಸ್ಥರೆಲ್ಲರೂ ಕೂಡಿ ಬೋರ್ಡು ಸ್ಕೂಲನ್ನಪೇಕ್ಷಿಸಿ ಚಂದಾಯೆತ್ತಿ ಈ ಕಟ್ಟಡವನ್ನು ಕಟ್ಟಿಸಿದೆವು ಇದಕ್ಕೆ ಮ॥ ರಾ॥ ಕಮ್ಮಾರನ್ನಾಯರೂ ಮ॥ ರಾ॥ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಕೆ ಸುಂದರರಾಯರೂ ಇನ್ನೂ ಕೆಲವು ವಿದ್ಯಾಭಿಮಾನಿಗಳೂ ಅನೇಕ ವಿಧದಲ್ಲಿ ತುಂಬಾ ಸಾಹಸಪಟ್ಟಿರುತ್ತಾರೆ. ಅವರ ಉಪಕಾರವು ಚಿರಸ್ಮರಣೀಯವಾದುದು. ಈ ಕಟ್ಟಡವನ್ನು ಧರ್ಮಾರ್ಥವಾಗಿ ತಾಲೂಕು ಬೋರ್ಡಿನವರಿಗೆ ಬಿಟ್ಟು ಕೊಡಲಿಕ್ಕೆ ಗ್ರಾಮಸ್ಥರೆಲ್ಲರೂ ನಿಶ್ಚೈಸಿರುವರು ಅದನ್ನು ಬೋರ್ಡಿನವರು ವಹಿಸಿಕೊಂಡು ನಮ್ಮ ಮಕ್ಕಳಿಗೆ ವಿದ್ಯಾದಾನವನ್ನು ದಯಪಾಲಿಸಬೇಕಾಗಿ ಗ್ರಾಮಸ್ಥರೆಲ್ಲರೂ ಪ್ರಾರ್ಥಿಸುತ್ತೇವೆ" ಎಂದು ಗ್ರಾಮಸ್ಥರ ಕಡೆಯಿಂದ ಮಲಿಯಾಳ ಮಾತಿನಲ್ಲಿ ಹೇಳಿದರು ಆ ಮೇಲೆ ಅಧ್ಯಕ್ಷರು ಮಲಿಯಾಳದಲ್ಲಿ ಹೀಗೆಂದು ಭಾಷಣ ಮಾಡಿದರು— "ನೀವಿಲ್ಲಿ ನನಗೆ ಅಧ್ಯಕ್ಷಸ್ಥಾನವನ್ನು ಕೊಟ್ಟು ಇಷ್ಟು ಮರಿಯಾದೆ ಮಾಡಿದುದಕ್ಕೆ ನಿಮಗೆ ಕೃತಜ್ಞನಾಗಿರುತ್ತೇನೆ, ನೀವು ವಿದ್ಯಾಪಕ್ಷಪಾತಿಗಳೆಂಬುವದಕ್ಕೆ ಈ ಸೊಗಸಾದ ಕಟ್ಟಡವೇ ಸಾಕ್ಷಿ. ಸಾಧಾರಣವಾಗಿ ಕೂಲಿ ಮಟಗಳು ಸರಿಯಾಗಿ ನಡೆಯುವುದಿಲ್ಲವೆಂಬುವದರಿಂದಲೋ, ಮೊದಲ ನಾಲ್ಕು ದರ್ಜೆಗಳಿರುವ ಬೋರ್ಡು ಸ್ಕೂಲ್‌ಗಳಲ್ಲಿ ಮಕ್ಕಳು ಸ್ಕೂಲ್‌ಫೀಸ ಕೊಡಬೇಕಾಗಿಲ್ಲವೆಂಬುವದರಿಂದಲೋ, ಬೋರ್ಡುಸ್ಕೂಲ್‌ಗಳಲ್ಲಿ ಬಡವರ ಮಕ್ಕಳಿಗೆ ಸ್ಲೇಟು ಪುಸ್ತಕಗಳು ಅಂತೆಯೇ ದೊರಕುತ್ತಿವೆ ಎಂಬುವದರಿಂದಲೋ, ಅಥವಾ ಈ ಶಾಲೆಗಳು ಕ್ರಮವಾಗಿ ನಡೆಯುವಂತೆ ಬೋರ್ಡಿನವರೂ ವಿದ್ಯಾ ಇಲಾಖೆ ಅಧಿಕಾರಿಗಳೂ ಯಾವಾಗಲೂ ನೋಡಿಕೊಳ್ಳುತ್ತಾರೆಂಬುವದರಿಂದಲೋ ಏನೋ ಜನಗಳಿಗೆಲ್ಲಾ ಬೋರ್ಡು ಸ್ಕೂಲ್‌ಗಳಲ್ಲಿ ಹೆಚ್ಚು ವಿಶ್ವಾಸವಿದೆ ಎಂದು ತಿಳಿದುಕೊಳ್ಳಬೇಕಾಗಿದೆ ನಮ್ಮ ದಯಾಳುಗಳಾದ ಚಕ್ರವರ್ತಿಗಳು ನಮ್ಮ ಮಕ್ಕಳಿಗೆ ಯೋಗ್ಯವಾದ ವಿದ್ಯಾದಾನವನ್ನು ಮಾಡುವುದಕ್ಕೋಸ್ಕರ ಲಕ್ಷಗಟ್ಟಲೆ ಹಣ ಸೆಂಕ್ಷನ್ ಮಾಡಿರುವುದನ್ನು ನೀವೆಲ್ಲರೂ ಬಲ್ಲಿರಿ ಅವರು ಒಂದು ಕೈಯೆತ್ತಿ ಕೊಡುವುದನ್ನು ನಾವು ಎರಡು ಕೈಗಳನ್ನು ನೀಡಿ ಹಿಡಿಯುವುದು ನಮ್ಮ ಕರ್ತವ್ಯವು. ಗಂಗಾನದಿಯು ಲೋಕೋಪಕಾರಗೋಸ್ಕರ ಸದಾ ಪ್ರವಹಿಸುತ್ತಲಿದ್ದರೂ ಆದರ ತೀರ್ಥವನ್ನಪೇಕ್ಷಿಸುವವರು ಯಥಾಶಕ್ತಿ ಖರ್ಚು ವೆಚ್ಚ ಮಾಡಿ ಶ್ರಮಪಟ್ಟು ಅಲ್ಲಿ ವರೆಗೆ ಹೋಗಬೇಕು ಭಾಗೀರತಿಯನ್ನು ತರಲಿಕ್ಕೂ ಅದನ್ನು ತುಂಬಿಸಿ ಕೊಂಡಿಡಲಿಕ್ಕೂ ಬೇಕಾದ ಪಾತ್ರೆಗಳನ್ನು ಒದಗಿಸಿಕೊಳ್ಳಬೇಕು. ಇದ್ದಲ್ಲೇ ಇದ್ದುಕೊಂಡು ನನಗೂ ತೀರ್ಥಬೇಕು, ತನಗೂ ತೀರ್ಥಬೇಕು, ತೀರ್ಥಬೇಕೇ ಬೇಕು, ಎಂದು ಎಷ್ಟು ಬಗೆಯಾಗಿ ಹಂಬಲಿಸಿದರೂ ಕೂಗಿದರೂ ಅದು ಲಭಿಸಲಾರದು ಹಾಗೆಯೇ ಸರಕಾರಿ ಸ್ಕೂಲ್‌ಗಳನ್ನಪೇಕ್ಷಿಸುವವರು ಸುಮ್ಮನೆ ಅರ್ಜಿಸರ್ಜಿಗಳನ್ನು ಮಾಡುವುದರಿಂದ ಅಷ್ಟು ಪ್ರಯೋಜನವಾಗಲಾರದು ಎಲ್ಲಿ ಗ್ರಾಮಸ್ಥರು ಸ್ಕೂಲ್ ಮನೆಗಳನ್ನು ಕಟ್ಟಿಸಿ ಸ್ಕೂಲ್‌ಗಳನ್ನು ಅಪೇಕ್ಷಿಸುತ್ತಾರೋ ಅಲ್ಲಿ ಬೋರ್ಡುಸ್ಕೂಲ್‌ಗಳು ಮೊದಲು ಸ್ಥಾಪಿಸಲ್ಪಡುವುವು. ಇಂತಹ ಶಾಲೆ ಬೇಕಾದವರು ಇದನ್ನು ತಿಳಿದುಕೊಂಡು ಈ ಗ್ರಾಮಸ್ಥರ ಮೇಲುಪಂಕ್ತಿಯನ್ನನುಸರಿಸಿ ನಡೆದುಕೊಳ್ಳುವುದು ಒಳ್ಳೇಯದು ಎಂಬಿತ್ಯಾದಿ ಮಾತುಗಳಿಂದ ಕಾಲೋಚಿತ ಭಾಷಣಕೊಟ್ಟರು ಅನಂತರ ರಾಜಗೀತವು ಹಾಡಲ್ಪಟ್ಟಿತು, ಆ ಮೇಲೆ ಮ॥ ರಾ॥ ಸುಂದರರಾಯರು ನೂರಾರು ಮಂದಿ ಸ್ಕೂಲ್ ಮಕ್ಕಳಿಗೆಲ್ಲಾ ಪುಸ್ತಕಗಳನ್ನೂ ಸೀಸದ ಮತ್ತು ಬಳಪಿನ ಕಡ್ಡಿಗಳನ್ನೂ ಪಾರಿತೋಷಕವಾಗಿ ಕೊಟ್ಟರು. ಕೊನೆಗೆ ಎಲ್ಲರಿಗೂ ಸಕ್ಕರೆ, ಎಲೆಅಡಕೆ, ಹೂ, ಮುಂತಾದುವನ್ನು ಹಂಚಿ ಆ ದಿನದ ಸಮಾರಂಭವನ್ನು ಮುಕ್ತಾಯ ಮಾಡಲಾಯಿತು.

ಬಂಟವಾಳ:—ಕಳೆದ ಸಾರಿ ಇಲ್ಲಿಯ ಪರಸ್ಪರ ಸಹಾಯಕ ಸಂಘದ ಕುರಿತು ಪ್ರಶಂಸಿಸಿದುದರಲ್ಲಿ, ಒಂದು ಮಾತು ತಪ್ಪಾಗಿ ಪ್ರಕಾಶಿಸಲ್ಪಟ್ಟಿದೆ. ಎಲ್ಲರೂ ತಮ್ಮ ತಮ್ಮ ಸಾಲವನ್ನು ಕ್ಲಪ್ತಕಾಲದಲ್ಲಿ ತಂದು ಪಾವತಿಮಾಡಿದರೆಂಬುದು ಸಂತೋಷಕರವಾದುದಾಗಿದೆ.

ದಿನಕ್ಕೆ ಒಂದು ಚಕ್ರ ಮೊಬಲಿಗಿನ ಕಂತಿನ ಪ್ರಕಾರ ಸಾಲಗಳನ್ನು ಸಲ್ಲಿಸುವ ಹಾಗೆ ವ್ಯವಸ್ಥೆಮಾಡಿದರೆ ಅದರಿಂದ ಜನರಲ್ಲಿ ದುಂದುಗಾರಿಕೆಯನು ಚೆನ್ನಾಗಿ ಬೋಧಿಸಿದಂತಾಗುತಿತು. ಈ ತೆರದಲ್ಲಿ ಪೆತ್ತೂರಲೂ ಮಾಡುತ್ತಾರಾಗಿ ತಿಳಿಯುತ್ತೇವೆ.

ಈಗ ಇಲ್ಲಿಯ ಎಲ್ಲಾ ಮಾರ್ಗಗಳೂ ಚೆನ್ನಾಗಿ ದುರುಸ್ತಿ ಮಾಡಲ್ಪಟ್ಟಿವೆ. ಅಲ್ಲಲ್ಲಿಯ ಕಾಮಗಾರಿಯು ನಡಿಯುತ್ತಲೇ ಇರುವುದು

ಮದ್ರಾಸಿನ ಜನರಲ್ ಆಸ್ಪತ್ರೆಯಲ್ಲಿ ವೇ॥ ತೀರ್ಥಹಳ್ಳಿಯ ದೇವೇಂದ್ರ ಭಟ್ಟರೆಂಬ ವಿದ್ಯಾರ್ಥಿ ಯುವಕರು ರವಿವಾರ ಮೃತರಾದರೆಂದು ಅವರ ವಿನಯಾದಿ ಸದ್ಗುಣಗಳನ್ನೂ ವಿಚಾರ(ಸ್ವಾರ್ಥತ್ಯಾಗ ಮುಂತಾದ ವರ್ತನೆಯನ್ನೂ ಪ್ರತ್ಯಕ್ಷವಾಗಿ ಅರಿತುಕೊಂಡ ಇಲ್ಲಿಯ ಯುವಕರನೇಕರು ವಿಷಾದಗೊಂಡಿರುವರು. ಅವರ ಬಂಧುಬಾಂಧವರಿಗೆ ನಮ್ಮ ವಿಶೇಷ ಸಹಾನುಭೂತಿಯು ಸಮರ್ಪಿತವಾಗಿದೆ.

ನೋಟೀಸು.

ಉಡುಪಿ ಶ್ರೀ ಕೃಷ್ಣದೇವರ ಪರ್ಯಾಯ ಪೂಜಕರಾದ ಶ್ರೀ ಸೀರೂರು ಶ್ರೀ ಪಾದಂಗಳವರು ಉಡುಪಿ ಅಷ್ಟಮಠದ ಯಾವತ್ತು ಶಿಷ್ಯರಿಗೂ ವ ಇತರ ಶ್ರೌತ ಸ್ಮಾರ್ತಕರ್ಮಾನುಷ್ಠಾನಾಧಿಕಾರಿಗಳಿಗೂ ಈ ಮೂಲಕವಾಗಿ ತಿಳಿಯಪಡಿಸುವದೇನಂದರೆ — ಇದೇ ಆನಂದ ಸಂ॥ ಆಷಾಢ ಬ॥ ೫ಯು ಭಾನುವಾರ ತಾ 12—7—14ರಲ್ಲು ಉಡುಪಿ ಶ್ರೀ ಅನಂತಾಸನ ದೇವರ ಸನ್ನಿಧಿಯಲ್ಲಿ ನೆರೆದ ಶ್ರೀ ಮನ್ಮಧ್ವಸಿದ್ಧಾಂತ ಸಂವರ್ಧಿನೀ ಸಭೆಯಲ್ಲಿ ಪರ್ಯಾಯ ಶ್ರೀ ಸೀರೂರು ಶ್ರೀ ಪಾದಂಗಳವರು, ಶ್ರೀ ಅದಮಾರು ಶ್ರೀ ಪಾದಂಗಳವರು, ಶ್ರೀ ಪುತ್ತಿಗೆ ಶ್ರೀ ಪಾದಂಗಳವರು, ಶ್ರೀ ಕೃಷ್ಣಾಪುರ ಶ್ರೀ ಪಾದಂಗಳವರು, ಶ್ರೀ ಕಾಣೂರು ಶ್ರೀ ಪಾದಂಗಳವರು, ಮತ್ತು ಬಹು ಮಂದಿ ವೈದಿಕ ಲೌಕಿಕ ಗೃಹಸ್ಥರು ಕೂಡ ಇದ್ದು ಇತ್ಯರ್ಥಿಸಿದ ಪ್ರಕಾರ, ಒಬ್ಬ ಸಪಿಂಡನ ಮರಣದ ದಿನದಿಂದ ಹತ್ತು ದಿವಸಗಳ ವರೆಗೆ ತನ್ನ ಮಿತ್ರಕಾಶೌಚವನ್ನು ಆಚರಿಸಿ ಉದಕದಾನವನ್ನು ಮಾಡಿದ ಮುಖ್ಯಕರ್ತೃಪುತ್ರ ಹೊರತಾದ ಸಪಿಂಡರಿಗೆ ಹತ್ತು ದಿನಗಳ ಮೇಲೂ ಏಕಾಹವಾಗುವ ವರೆಗೂ ಆಶೌಚವಿದೆ ಎಂಬದರ ಕುರಿತು ನಿರವಕಾಶ ಯೋಗ್ಯಪ್ರಮಾಣವಿದ್ದರೆ ಅದನ್ನು ಮೂಲಪುಸ್ತಕ ಸಹಿತವಾಗಿ ತಂದು ಇದೇ ಸಂ॥ದ ಬರುವ ಆಶ್ವೀಜ ಬ॥ ೩೦ರ ಒಳಗೆ ನಮ್ಮಲ್ಲಿ ತಂದುಕೊಟ್ಟು ಆಶೌಚವಿಚಾರ ಮುಗಿದ ನಂತರ ವಾಪಾಸು ಪಡಕೊಳ್ಳತಕ್ಕದ್ದು

ಮೇಲ್ಕಂಡ ಮ್ಯಾದೆನಂತರ ಮೇಲೆ ವಿವರಿಸಿದ ಸಂಗತಿಯಲ್ಲಿ ಯಾರಾದರೂ ಧರ್ಮಶಾಸ್ತ್ರ ಪುಸ್ತಕಗಳನ್ನು ತಂದರೆ ಅವುಗಳು ಅಂಗೀಕರಿಸಲ್ಪಡಲಾರವು ಈ ಸಂಗತಿಯನ್ನು ಸರ್ವರೂ ತಿಳಿದಿರುವದು

ಉಡುಪಿ ಪರ್ಯಾಯ ಮಠ
ತಾ 20—7—14

ಆಜ್ಞಪ್ತನಾದ
ವಿಠಲದಾಸಾಚಾರ್ಯ
ಏಜಂಟ್, ಶ್ರೀ ಸೀರೂರು ಮಠ.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಅವ್ವಲ್ ಮಸ್ಕತಿ ಅಕ್ಕಿ		5—10—0—5—11—0
ದುಯಂ	,, ,,	5— 4—0—5— 5—0
ಸುಗ್ಗಿ	,,	5— 3—0—5— 4—6
ಗಾಡಿ ಸುಗ್ಗಿ	,,	5— 1—0—5— 1—6
ಗುಡ್ಡ	,,	5— 3—0—5— 6—0
ದುಯಂ ಗುಡ್ಡ	,,	4—15—0—5— 0—0
ಅವ್ವಲ್ ಬೆಳ್ತಿಗೆ	,,	5—13—0—5—14—0
ಗುಡ್ಡ ಬೆಳ್ತಿಗೆ	,,	5— 6—0—5— 8—0
ರಂಗೂನು ಬೆಳ್ತಿಗೆ	,,	9— 6—0
ಗೋದಿ ಗೋಣಿ ೧ರ		11—12—0
ಹುರುಳಿ ಗೋಣಿ ೧ರ		8— 0—0
ಕಡಲೆ ಗೋಣಿ ೧ರ		10— 4—0
ತೊಗರಿ ಗೋಣಿ ೧ರ		13— 0—0
ತೊಗರಿ ಬೆಳೆ ಗೋಣಿ ೧ರ		11—8—0—15— 0—0
ಉದ್ದು ಗೋಣಿ ೧ರ		10— 8—0
ಊರು ಬೆಲ್ಲ ಖಂಡಿ ೧ರ		55— 0—0
ಉಪ್ಪು ಗೋಣಿ ೧ರ		4— 0—0
ಕೊಬ್ರಿ ಹಿಂಡಿ ಖಂಡಿ ೧ರ		29— 0—0
ಎಳ್ಹಿಂಡಿ ಖಂಡಿ ೧ರ		30—0—0—35— 0—0
ಕೊಬ್ರಿ ಎಣ್ಣೆ ಮಣ ೧ರ		6—12—0
ಎಳ್ಳೆಣ್ಣೆ ಮಣ ೧ರ		7— 0—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ		4—15—6
ಕಾಫಿ ಖಂಡಿ ೧ರ		225—0—0 —230— 0—0
ಬೆಳೇಗೋಟು ಖಂಡಿ ೧ರ		110— 0—0
ತಾಂಬ್ರ ತಗಡು ಮಣ ೧ರ		16—0—0—16— 8—0
,, ಪಾತ್ರೆಗಳು	,,	20—8—0—21— 0—0
ಚೀನಿ ಬೆಳ್ಳಿ ಸೇರು ೧ರ		20— 0—0
ಕಬ್ಬಿಣ		26—8—0—27— 0—0

ಮುಳಿಯಿಲ್‌ರವರ ದಿವ್ಯೌಷಧಗಳು.

ಮಸ್ತಕಾಮೃತ ತೈಲ—ಕುಡ್ತೆ 1ಕ್ಕೆ ಕ್ರಯ 10 ಆಣೆ. ಇದು ಎಲ್ಲಾ ತರದ ಶಿರೋರೋಗ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಬಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ.

..................ಮಸ್ತಕಾಮೃತ ತೈಲವನ್ನು ಕಳೆದ ಐದು ವರುಷಗಳಿಂದ ಉಪಯೋಗಿಸಿಕೊಳ್ಳುತ್ತಿರುವುದರಿಂದ ನನ್ನ ಮುದಿ ಮೆದುಳು ಯೌವನ ಸ್ಥಿತಿಯಲ್ಲಿರುವದು. ಈ ದಿವ್ಯ ತೈಲವಿಲ್ಲದೆ ವಿನಹಾ ನಾನು ಕೆಲಸಮಾಡಲಾರೆನು, ನನ್ನ ನೇತ್ರೇಂದ್ರಿಯಗಳು ಚುರುಕಾಗಿವೆ.

ರೆವರೆಂಡ್ ಇ. ಸೋನ್ಸ್,
ವೈಲ್ಸ್

ತಾ. 15—4—13

ತಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಇನ್ನೊಂದು ಕುಪ್ಪಿ ವಿ. ಪಿ. ಮೂಲಕ ರವಾನಿಸಿರಿ.

ಮಿಸೆಸ್. ವೈ. ಕುರಿಯಾನ್,
ಗ್ರೀನ್‌ವಿಲ್ಲಾ, ಕಲ್ಲಿಕೋಟೆ.

ತಾ. 23—5—13.

..................ಮುಳಿಯಿಲ್ಸ್ ಹೇರ್ ಓಯಿಲ್ ಉಪಯೋಗಿಸಿದಂದಿನಿಂದ ನನ್ನ ತಲೆನೋವು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ನಿಬಿಡವಾಗಿ ಬೆಳೆದಿರುವವು. ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ. ಇನ್ನೊಂದು ಡಜನ್ ಕುಪ್ಪಿಗಳನ್ನು ಅವಶ್ಯ ತ್ವರ್ಯದಲ್ಲಿ ರವಾನಿಸಿರಿ.

ಮಿಸ್. ಎಸ್ ಸೋನ್ಸ್,
ಸ್ಕೂಲು ಮಿಸ್ಟ್ರೆಸ್, ಮಂಗಳೂರು.

21ನೇ ಒಕ್ಟೋಬರ 1913.

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ. ಎಲ್ಲಾ ತರದ ಛಳಿ ಜ್ವರಕ್ಕೆ ರಾಮಬಾಣದಂತಿದೆ.

ಚತುರ್ಥಿ ಮಾತ್ರೆಯನ್ನು ತಕ್ಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ. ಇದು ಒಳ್ಳೇ ಗುಣಕರವೆಂಬವಾಗಿ ಹೇಳುವರಿ ಅನುಮಾನವಿಲ್ಲ.

ಎ. ಪೊಕ್ರ ಹೆಗ್ಗಡೆ,
ಕುಕ್ಕಛೆ, ಕಾರ್ಕಳ.

ತಾ. 13—6—13.

ವಯೊಲೆಟ್ ಹೇರ್ ಓಯಿಲ್—ಸುವಾಸನೆಯುಳ್ಳ ಈ ತೈಲದ ಪ್ರಯೋಗದಿಂದ ತಲೆನೋವು ನೆಯು ಗುಣಪಡುವದು. ಕಾಯಂ ವ ಕಠಿಣ ತರದ ತಲೆನೋವಿನಿಂದ ಪೀಡಿತರಾಗಿರುವವರಿಗೆ ನಿಮ್ಮ ವಯೊಲೆಟ್ ಹೇರ್ ಓಯಿಲ್ಲಿಗಿಂತ ಅತ್ಯುತ್ತಮ ತೈಲವು ಬೇರೆಯಿಲ್ಲ ಎಂದೆಣಿಸುತ್ತೇನೆ. ಅತಿ ಘೋರವಾದ ತಲೆನೋವಿನಿಂದ ಶ್ರಮಪಡುತ್ತಿದ್ದ ನನ್ನ ಮೊಮ್ಮಗಳಿಗೆ ತಮ್ಮಿಂದ ತರಿಸಿದ 2 ಕುಪ್ಪಿ ಎಣ್ಣೆಯು ಅತಿರೇಕ ಸೌಖ್ಯವನ್ನುಂಟುಮಾಡಿರುತ್ತದೆ. ಅದಿಲ್ಲದೆ ಅವಳು ಇರಲಾರಳು. ಕಷ್ಟಿನ ರೋಗಿಗಳ ಪ್ರಯೋಜನಕ್ಕಾಗಿ ದೇವರು ತಮ್ಮ ಈ ಲೋಕೋಪಕಾರಿಯಾದ ಕೆಲಸವನ್ನು ಆಶೀರ್ವದಿಸಲಿಬಹು ನನ್ನ ಪ್ರಾರ್ಥನೆಯಾಗಿದೆ.

M. JACOBI,
Hd. Clerk, CALICUT.

4—7—13

ವಿಳಾಸ:— ಮುಳಿಯಿಲ್ ಎಂಡ್ ಸನ್ಸ್, ಕಾಸರಗೋಡು, ದ. ಕ.

150 ಪುಟಗಳ ಪುಸ್ತಕವು

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ತಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ಬ್ರಿಟೊಬಿಲ್ಡಿಂಗ್
2. ಜುಬಿಲಿ ಕೇಕ್ ಬಜಾರ್, ಬೆಂಗಳೂರು. ಮಂಗಳೂರು.

MUSICAL MART
Kavi & Sons,
MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರ್ಮೊನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. ಹೇಂಡ್ ಹಾರಮೊನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೇಗೂ, ಫೋಲ್ಡಿಂಗ್ ರೂ. 70, 75, 105.

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ್. ಮಂಗಳೂರು ದ. ಕ.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವುದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವದು ಮತ್ತಾವದೂ ಇಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕೆ" ಎಂಬ ಸಂಸ್ಕೃತ ವ್ಯಾಖ್ಯಾನವೂ ಜಯ...ಕ್ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಆಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರೆಯಿಸಿ ದಪ್ಪ ಕಾಗದದಲ್ಲಿ ಸುರೇಖ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪುಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ ಸೂರ್ಯ ಚಂದ್ರ ಗ್ರಹಣನಿರ್ಣಯ, ಅಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರ, ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೨೬೧ ವಿಷಯಗಳು ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು. ಇದರ ಕ್ರಯ ೧ಕ್ಕೆ ೧—೮—೦. ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾ ಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು.

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳಿವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರ್ಣಾನುಗುಣವಾಗಿ ಚಕ್ರ, ಕೋಷ್ಟಕ. ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೨೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಆಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರಿಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ:—
ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ಣಾಟಕ ಬುಕ್ ಡಿಪೊ ಏಜಂಟ್, ಬಳ್ಳಾರಿ.

ವಿವಾಹ ಮಂಟಪ.

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡದಿದೆ. ಕನ್ನಾನೂರ, ಮೈಸೂರು, ನಾಗಪುರ, ವಿಶಾಖಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಲಾರಿರಾ!

ಸ್ಟೀವನ್ಸ್ ಎಂಡ್ ಸನ್ಸ್
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ,
ಹಂಪನಕಟ್ಟಾ. ಮಂಗಳೂರು.

Madeena Watch Co., Madras

ಡಿ. ನ್ಯೂ ಪೆಂಡುಲಂ ವಾಚ್. **Rs, 3—15—0**

ಇದು ಒಂದು ಆಶ್ಚರ್ಯಕರವಾದ ಘಡಿಯಾರ.

Rs. 3-15-0

ಇದು ಬಹು ಚಂದವಾಗಿಯೂ ಇರುತ್ತೆ. ಇದನ್ನು ಟೈಮ್‌ಪೀಸಿನಂತೆ ಮೇಜಿನ ಮೇಲೂ ನಿಂದಿರಿಸಬಹುದು ಜೇಬಿನಲ್ಲಿಯೂ ಉಪಯೋಗಿಸಿಕೊಳ್ಳ ಬಹುದು.

ಬಾಂಬೆ ಮೇಲ್ ವಾಚ್ ಕ್ರಯ	ರೂ.	2—7—0
ರಾಸ್ಕೋಪ್ ವಾಚು ಕ್ರಯ	,,	1 12—0
ಬೆಸ್ಟ್ ಲೀವರ್ ವಾಚು ಕ್ರಯ	,,	3—8—0
ರೈಲ್ವೆ ರೆಗ್ಯುಲೇಟರ್ ಕ್ರಯ	,,	2- 12—0
ಸೆಲ್ಫ್ ಕ್ಲೋಸಿಕ್		[illegible]
ಟೈಂಪೀಸು—ಸಾದಾ	,,	1—5—0
ಅಲಾರಾಂ ಟೈಂಪೀಸು		1--13—0
ಚಿಕ್ಕ ಸೈಜು ಲೇಡಿವಾಚ್		2-15—0

ಕಾರೇಜ್ ಹಾರ್ಮೋನಿಯಂ ರೂ 20=0—0, ಮ್ಯೂಜಿಕ್ ಕ್ಲಾಕ್ ರೂ. 5—2—0, ಪಿಡಲು ರೂ. 8—0—0.

ಅಡ್ರೆಸ್:—ಮೆಡಿನಾವಾಚ್ ಕಂಪೆನಿ,

ನಂ. ೫೧ ಆನೆಕಾರಕೋರ್ಣ ಬೀದಿ, ಜಿ. ಟಿ ಮದ್ರಾಸು.

THE BOMBAY LIFE ASSURANCE CO. LTD.

(Established 1908).

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

„There can be no doubt that the Policy Contracts are well secured".

Chairman:-The Hon'able Mr. Lalubhai Samaldas, Justice of the Peace, Director of the Bank of India Ltd, The Tata Hydro Electric Co Ltd., The Tata Mills Co. Ltd, Managing Agent of Messrs. Marsland Price & Co. Ltd, and fellow of the Bombay University.

Actuary.—George King F. F. A. F. I. A., London)

Medical Refer—Dr R. Row, M. D. D. Sc. London)

Managing Director—Framrose R. Joshi, Justice of the Peace, The Honorary Presidency Magistrate & etc.

Wanted Agents on very liberal commission.

Apply for full particulars to—**Kochikar Bros.**; Udipi, Chief Agents for South Canara, Malabar, Travancore and Cochin

ಮುಂಬಯಿ ಲ್ಯಾಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು)

ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ರೇವಣಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು.

"ವಿಮೆದಾರರ ಬಾಧ್ಯತೆಗಳ ಒಗ್ಯೆ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು:— ಹುಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೊಲಿಕ್ ಮಾರ್ಸ್‌ಲೆಂಡ್ ಪ್ರೈಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೊಗಳವರು.

ಎಕ್ಚುಯುಯರಿ:—ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ ಎ. (ಲಂಡನ್)

ಮೆಡಿಕಲ್ ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ ಡಿ. ಎಸ್. ಸಿ. (ಲಂಡನ್).

ಮೆನೇಜಿಂಗ್ ಡ್ಯಾರೆಕ್ಟರ್:—ರಾ| ಫ್ರೆಮ್‌ರೋಜ್ ಆರ್ ಜೋಶಿ ಒನರೆರಿ-ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು.

ಏಜಂಟರು ಬೇಕಾಗಿರುವರು. ಧಾರಾಳವಾದ ಕಮಿಶನ್ ಕೊಡೋಣಾಗುವದು. ವಿಶೇಷ ಮಾಹಿತಿಗೆ ಈ ಕೆಳಗಿನವರಿಗೆ ಬರೆಯಿರಿ:—

ಕೊಚಿಕಾರ್ ಬ್ರದರ್ಸ್,

ಪ್ರಾಮುಖ್ಯ ಏಜಂಟರು, ಉಡುಪಿ.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬುದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಆ ರಕ್ತಮಿತಿ ಸ್ಥಿತಿಯೆಂದೂ ನಿರ್ಧರಿಸಿರುವರು. ರಕ್ತದಾತೃತ್ವಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಶ್ವಾಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಎಂಬ [illegible] ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಚೆನ್ನಾಗಿ ಇರುತ್ತದೋ ಅವನು ಸರ್ವ ಪುರುಷಾರ್ಥಕ್ಕೆ ಪಾತ್ರನು ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರ್ವಿಘ್ನವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ಕಲೆದೋರುವವು ಅಜ್ಞಾನ, ಮೋಹ, ಭಯ, ಆಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕಡ್ಡಾಯಿಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0 ವಿ. ಪಿ ಚಾರ್ಜು ಪ್ರತ್ಯೇಕ ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ—

ಯಮ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು.

ಮೈಸೂರು ಊದುಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದುಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0 0; 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0-4-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,

ಸುಗಂಧಕಾರಿ, ಮೈಸೂರು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ದಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ೮ ೦

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ

೪ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲಿಗೆ ೧೦ ಆಣೆ.

೭. ಸರಳಭೇದಿ ಮಾತ್ರೆ ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲಿಗೆ ೨ ರೂ

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ.

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟ ನೋವು ಮುಂತಾದ ವಾತ ಬಾಧೆಗಳನ್ನು ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲಿಗೆ ೧ ರೂ.

೧೪ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲಿಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

ನಮ್ಮ ವಿಳಾಸ—ಬಿ ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co, *Ayurvedic Chemists.*
Vepery Post, MADRAS

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತ ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹುತು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೇಗೆ ಪೋಸ್ಟೇಜು 4 ಆಣೆ.

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನ ಬೇರು. ಕೈಮೀರಿಕೊಂಡು ತೋರಿದಾಗಲೂ ಆಶ್ಚರ್ಯಕಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಬೇಚಾರಾಬೇಡ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಅಂಚೆ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ
ಮೈಸೂರು

ಡೋಂಗರೆ ಇವರ ಬಾಲಾಮೃತ

ತಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದು ಒಂದಿರುವದು.

ಕರೀಮ ಮುಹಮ್ಮದ ಎಮ್. ಎ ಎಲ್, ಎಲ್. ಬಿ. ಹೆಡ್ ಮಾಸ್ತರ ಹ್ಯಾಸ್ಕೂಲು ಜುನಾಗಡ ಇವರು ಬರೆದದ್ದು.

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದ

ಬಾಟ್ಲಿ ಒಂದರ ಕಿಮ್ಮತು 0—12—0; ಟಪ್ಪಾಲ ಖರ್ಚು 0—4—0

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ
Girgaon Bombay.

ಕ್ಷಯ ಸಂಹಾರಿ

೧೦ಬ ಕ್ಷಯರೋಗದ ಔಷಧಿಯು

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಆರಾಗಿ ಹೋಗುವದು. ಕ್ಷಯ-ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದಶ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್ ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ: ಯು. ಬಿ. ದಶ್ತ್ ಮತ್ತು ಕಂಪೆನಿ,

ವನೌಷಧಿ ಕಾರಕರು, ಕಲ್ಲಿಕೋಟೆ

Estd. 1888 ಸ್ಥಾಪನೆ 1888.

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರಿ ಮತ್ತು ಹಟವಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೧ಲ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು

ಸಾರ್ಸಾಪರಿಲ್ಲಾಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ: ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ **ಸಾರ್ಸಾಪರಿಲ್ಲೆಯು**. ಕ್ರಯ ಬಾಟ್ಲಿ ಗಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಒಂದೇ ತಿಂಗಳು! ಮಿಂಚಿ ಹೋದ ಮೇಲೆ ಚಿಂತಿಸ ಬೇಡಿ!!

ಅಲ್ಪ ಬೆಲೆ!!!

ಬೇರೆ ಬೇರೆ ಪುಸ್ತಕಗಳಿಗೆ ವೃಥಾ ಹೆಚ್ಚು ಹಣವನ್ನು ವೆಚ್ಚ ಮಾಡಬೇಡಿ!!

ಸುಳ್ಳಿಗೆ ನೂರಾರು ದಾರಿ! ನಿಜಕ್ಕೆ ಒಂದೇ ದಾರಿ!!

ನಿಮ್ಮ ಪರೀಕ್ಷೆಗಾಗಿ ಮೊದಲು ಒಂದು ಪ್ರತಿ ಮಾತ್ರ ೧-೮-೧ ಗೆ ಟಪ್ಪಾಲು ಖರ್ಚು ಇಲ್ಲದೆ ದೊರೆಯುತ್ತೆ.

೩ ಪುಸ್ತಕಗಳೂ ಒಟ್ಟಾಗಿ ಒಂದರಲ್ಲೇ ಬೈಂಡಾಗಿವೆ.

ಈ ದಿನವೇ ಒಂದು ಕಾರ್ಡು ಬರಿಯಿರಿ! ಬೇಗ ಬೇಗ ಬರಿಯಿರಿ!!

ಬಹುಮಾನ—ಒಟ್ಟಾಗಿ ತರಿಸಿಕೊಳ್ಳುವವರಿಗೆ, ೩ ಪ್ರತಿಗೆ ಒಂದು ಉತ್ತಮವಾದ ಭಗವದ್ಗೀತ [ಟೀಕು, ತಾತ್ಪರ್ಯ ಸಹ ಉಳ್ಳದ್ದು] ೫ ಪ್ರತಿಗೆ ೧ ಪ್ರತಿ ಉಚಿತ. ಅಂಚೆ ವೆಚ್ಚ ಮಾಫಿ

೬೦ ಭಾಗಗಳೂ ಒಂದರಲ್ಲೇ ಅಡಗಿವೆ

ಆಂಗ್ಲಭಾಷಾ ಪ್ರಕಾಶಕ

ಒಂದೇ ತಿಂಗಳು ಟಪ್ಪಾಲ್ ಖರ್ಚಿಲ್ಲ.

(ಸ್ವತಃ ಇಂಗ್ಲೀಷು ಕಲಿಯುವುದಕ್ಕೆ ಅತ್ಯುಪಯೋಗವಾದದ್ದು)

ಇದರಲ್ಲಿ ಇಂಗ್ಲೀಷು ವರ್ಣಮಾಲೆ, ಬರಿಯುವ ಸಾಧನೆಗಳು, ಶಬ್ದಸಂಯೋಜನ, ಸ್ವರಾಕ್ಷರಗಳ ವಿಧ ವಿಧ ಶಬ್ದಾಭ್ಯಾಸ, ಉಚ್ಚಾರಣೆ—ಅರ್ಥ, ವಾಕ್ಯಗಳನ್ನು ಜೋಡಿಸುವ ಕ್ರಮ, ಸೂಚನೆಗಳು, ವಾರಶಾಲೆಯಲ್ಲಿ ೫ ವರ್ಷ ಕಲಿಯುವಷ್ಟು ವ್ಯಾಕರಣ ವಿಧಿ, ವಿಧಾನಗಳು, ಇವುಗಳಿಗೆ ನೂರಾರು ಸಾಧನೆಗಳು, ನಾನಾ ವಿಧ ವಾಕ್ಯಗಳನ್ನು ಮಾಡುವ ಸುಲಭ ಅಭ್ಯಾಸಗಳು, ಇಂಗ್ಲೀಷು ಸಂಪ್ರದಾಯ ಮತ್ತು ಭಾಷಾ ಶೈಲಿ, ಮತ್ತು ಭಾಷಾಂತರ ಮಾಡುವ ವಿಧಾನಗಳು, ಇವುಗಳಿಗೆ ನೂರಾರು ಸಾಧನೆಗಳು, ಭಾಷಾ ಜ್ಞಾನಕ್ಕೆ ಬೇಕಾದ ಅನೇಕ ಚಿಕ್ಕ ಕಥೆಗಳು; ಸಂಭಾಷಣಾ ಕ್ರಮಗಳು; ಸಂಭಾಷಣೆಯಲ್ಲಿ ಪ್ರತಿಯೊಂದು ವಿಷಯಕ್ಕೂ ಬೇಕಾಗುವ ಕನ್ನಡ—ಇಂಗ್ಲೀಷ್, ಇಂಗ್ಲೀಷ್—ಕನ್ನಡ ಶಬ್ದಕೋಶ (ನಾಣ್ಣುಡಿಯ ನಿಘಂಟು) ೭೪ ಪುರಗಳು; ಪ್ರಶ್ನೋತ್ತರ ರೂಪವಾದ ಸಂಭಾಷಣಾ ವಾಕ್ಯಗಳು ೮೦೦, ಕನ್ನಡ—ಇಂಗ್ಲೀಷು ಗಾದೆಗಳು. ಸಾಂಕೇತಿಕ ಲೇಖನ ಚಿಹ್ನೆಗಳು. ತಂತೀ ವರ್ತಮಾನ, ಕ್ಷೇಮಸಮಾಚಾರ, ಲೇವಾದೇವಿ ಕಾಗದಗಳು, ಅರ್ಜಿಗಳು ಮುಂತಾದುವು ಬರಿಯುವ ಅಭ್ಯಾಸಗಳು, ಇವುಗಳಿಗೆ ನೂರಾರು ಮಾದರಿಗಳು ಅಡಿಗಿವೆ. ಹೆಚ್ಚು ಪ್ರತಿಗಳಿಲ್ಲ. ತ್ವರೆ ಮಾಡಿರಿ. ಕ್ರಯ **1-8-0.**

☞ ನಮ್ಮ ವಿಳಾಸ—

ಎ. ವಿ. ರಾಯಲು,

...ರೋಡು,

ಬೆಂಗಳೂರು ಸಿಟಿ.

ಕಳವು, ದರೋಡೆ.

ದಗಾಖಯಿತಿ, ಅಕ್ರಮ ಸ್ತ್ರೀಸಂಗಮ, ಅಸಾಮಿಚೋರಿ, ಮಾನಭಂಗ, ಮಾನನಷ್ಟ, ಮುಂತಾದವುಗಳಿಗೆ ಶಿಕ್ಷೆ ವಿಧಿಸಿರುವ ದಂಡ ನೀತಿಶಾಸ್ತ್ರವು ಪೂರ್ವದಲ್ಲಿ ಶುಕ್ರಾಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟೀಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮಂಜೂರಾಗಿ ಕಲ್ಕತ್ತಾ, ಮುಂಬೈ, ಮದ್ರಾಸು, ಮೈಸೂರು ಜಿಲ್ಲಾಗಳಲ್ಲಿ "ಇಂಡಿಯನ್ ಪೀನಲ್‌ಕೋಡ್" ಎಂಬ ಅಭಿದಾನದಿಂದ ಜಾರೀಲಿ ತಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಟಿಪ್ಪಣಿಗಳನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವವು. ಕ್ರಯ: ದಪ್ಪ ಕಾಗದದ್ದು ರೂ ೨—೦—೦. ಹಸನು ಕಾಗದದ್ದು ರೂ. ೨—೮—೦.

ಕೆಟಲಾಗು ಬೇಕಾದವರು ಈ ವಿಳಾಸಕ್ಕೆ ಬರೆಯಿರಿ.

ವಿಳಾಸ—ಬಿ ನರಸಿಂಗರಾವ್,

ಎಡಿಟರ್ ಲಾ ಗಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕಣ್ಣು ಇಲ್ಲದಿದ್ದರೆ ಕಲಿಯುಗವೇ ಇಲ್ಲ.

ಭಾರೀ ಕ್ರಯದ ಕನ್ನಡಕಗಳು ಕ್ರಯ ರೂಪಾಯಿ **2—8—0**

ಸ್ಪಟಿಕದ ಕನ್ನಡಕವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ ಅಲ್ಪ ಕ್ರಯದ ಕನ್ನಡಕಗಳು ದೃಷ್ಟಿಯನ್ನು ಹೋಗಲಾಡಿಸಿ ಕ್ರಮೇಣ ವ್ಯಾಧಿಯನ್ನುಂಟುಮಾಡುತ್ತೆ. ಆದಕಾರಣ ಅವುಗಳನ್ನು ಉಪಯೋಗಿಸಬೇಡಿರಿ. ನಮ್ಮಲ್ಲಿ ಸ್ಪಟಿಕದ ಕನ್ನಡಕಗಳು ಕ್ರಯಕ್ಕೆ ದೊರೆಯುತ್ತೆ. ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಕನ್ನಡಕಗಳಿರುವ ಭಾರೀ ಕ್ರಯದ ಪೆಟ್ಟಿಗೆ ಒಂದನ್ನು ಉಚಿತವಾಗಿ ಕಳುಹಿಸುತ್ತೇವೆ. ಬಾಕೀ ವಿಷಯಗಳು ನಿಮ್ಮ ದರಕಾಸ್ತು ಬಂದನಂತರ ಬರದು ತಿಳಿಸುತ್ತೇವೆ.

ವಿಳಾಸ:—ನಿಲಕರ್ ಅಂಡ್ ಬ್ರದರ್ಸ್, ತಿರುವಲ್ಲಕ್ಕೇಣಿ, ಮದರಾಸು

ಆನಂದನಾಮ ಸಂವತ್ಸರದ ಕೈಘಡಿಯಾರ ಅರ್ಧಕ್ರಯ 1—13—0.



ಇದು ಆನಂದನಾಮ ಸಂವತ್ಸರದ ಮಹೋತ್ಸವಕ್ಕಾಗಿ ಈ ಭಾರೀಕ್ರಯದ ಗಡಿಯಾರವನ್ನು ಈ ತಿಂಗಳು ಆಖೈರು ಒಳಕಾಗಿ ತರಿಸಿಕೊಳ್ಳುವವರಿಗೆ ಸುಂದರವಾದ ಪೆಟ್ಟಿಗೆ ಸಹಿತ 1—13—0ಗೆ ಕೊಡಲ್ಪಡುತ್ತೆ.

ವಿಳಾಸ:—ರಾಮರಾವ್,

ಜನರಲ್ ಮರ್ಚಂಟ್,

18 ಯಸ್. ಯಂ ಕೋಯಿಲ್ ಸ್ಟ್ರೀಟ್, ತಿರುವಲಕ್ಕೇಣಿ, ಮದರಾಸು.

ಮದುರೆ ಜುನ್ನಡಿ ಅಂಚಿನ ಸೀರೆ

ಸುಂದರವಾದ ಸಿಂಗಪೂರ್ ಚೀಟಿ ರವಿಕೆ ಇನಾಂ ಸಹಿತ ಕ್ರಯ ರೂ **2-4-0**

ಇದು ಉಡುವದಕ್ಕೆ ದಡೂತಿಯಾಗಿಯೂ, ನೋಡುವದಕ್ಕೆ ನಯವಾಗಿಯೂ, ಕೊಳ್ಳಲು ಬೆಲೆ ಸುಲಭವಾಗಿಯೂ, ಇದೆ. ಬಣ್ಣ ಹೋಗದು. ಉದ್ದ 18 ಮೊಳ ಧಾರಾಳವಾಗಿದೆ.

ವಿಳಾಸ:—ಯಸ್. ಯಂ. ಮೂರ್ತಿ ಕಂಪೆನಿ,

ತಿರುವಲ್ಲಕ್ಕೇಣಿ ಮದರಾಸು.

ಸ್ವಲ್ಪ ಹೊತ್ತು ನಿಂತುಕೊಳ್ಳಿ!

ಅಗರಬತ್ತಿ ಅಥವಾ ಸುಗಂಧದ ಬತ್ತಿ

ಪ್ರಸಿದ್ಧವಾದ ಅಂಬರು, ಪುನಗು, ಕಸ್ತೂರಿ, ಪನ್ನೀರು, ಜಂತುವಿನಾಸಿ ಬತ್ತಿಗಳು, ಅರಗಜ ಅಥವ ಹಸೀಗಂಧ ಬಿಲ್ಲೆಗಳು, ಪನ್ನೀರು ಅಥವಾ ರೋಸ್ ವಾಟರು, ಹಿಂದೂ ಸೆಂಟುಗಳು, ಸುವ್ವಾಸನೇ ದ್ರವ್ಯಗಳು, ಇವುಗಳೆಲ್ಲಾ ಉತ್ತಮವಾದ ಪದಾರ್ಥಗಳಿಂದ ಮಾಡಲ್ಪಟ್ಟಿವೆ. ಬಹಳ ಸುಲಭ ಕ್ರಯಕ್ಕೆ ದೊರೆಯುತ್ತೆ. ವ್ಯಾಪಾರಗಾರರಿಗೆ ಕಮಿಷನ್ ಕೊಡಲ್ಪಡುತ್ತೆ. ಯಾವ ವಿಷಯಕ್ಕೂ ಈ ಕೆಳ ಬರದಿರುವ ಅಡ್ರೆಸಿಗೆ ಬರದರೆ ಕಳಿಸಲ್ಪಡುತ್ತೆ.

ಮೆನೇಜರ್.

—ಸೇಠ ಫರದ್ದೂನ್‌ಜೀ ವರ್ಕ್ಸ್, ಬೆಂಗಳೂರು ಸಿಟಿ

ಹೊಸ ಪುಸ್ತಕ! ಸೊಗಸಾದ ಸರಣಿ!!

ಬೆಲೆ ಕಡಿಮೆ! ಓದುವದಕ್ಕೆ ಆನಂದ!!

ಸಚಿತ್ರ ಝಾನ್ಸಿ ರಾಣಿ ಚರಿತ್ರೆ.

ಇದರಲ್ಲಿ ರಾಣಿಯಾದ ಲಕ್ಷ್ಮೀಬಾಯಿಯು ಹುಟ್ಟಿದಾರಭ್ಯ ಬಾಲ್ಯದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿ, ರಾಣಿಯಾದ ಮೇಲೆ ಪ್ರಜಾಹಿತಕರವಾದ ಅನೇಕ ಕಾರ್ಯಗಳನ್ನು ಮಾಡಿ, ಲೋಕಪ್ರಸಿದ್ಧವಾದ ತನ್ನ ಕೀರ್ತಿಯನ್ನು ಪ್ರಸ್ಥಾಪಿಸಿದ ಕಥೆಯು ಬಹು ಸ್ವಾರಸ್ಯವಾದ ಕನ್ನಡ ಮಾತುಗಳಿಂದ ಬರೆಯಲ್ಪಟ್ಟಿದೆ. ಮಕ್ಕಳಿಗೂ ಅರ್ಥವಾಗುವಂಥ ಸುಲಭವಾದ ಶೈಲಿ, ರಸಭರಿತವಾದ ಕಾವಂಬರಿಯಂತೆ ಮಧುರವಾದ ಮಾತುಗಳನ್ನುಂಟಾಗಿದೆ. ಹಿಂದೂ ನಾರಿಯರ ಪಾತಿವೃತ್ಯ, ಸದ್ಗುಣ ಮೊದಲಾದವುಗಳನ್ನು ಪ್ರತ್ಯಕ್ಷವಾಗಿ ತಿಳಿಸುವ ಈ ಪುಸ್ತಕದಲ್ಲಿ ೩೩೬ ಪುಟಗಳೂ, ೧೬ ಅಧ್ಯಾಯಗಳೂ ಅಡಕವಾಗಿವೆ. ಓದಿ ನೋಡಿದವರಿಗೆ ಇದರ ಯೋಗ್ಯತೆಯು ಸ್ವತಃ ತಿಳಿಯಬರುವಲ್ಲಿ ಹೆಚ್ಚಿಗೆ ಬರೆಯಬೇಕಾದುದೇನೂ ಇಲ್ಲ. ರಿಗೂ ಅನುಕೂಲಿಸಬೇಕೆಂಬ ಕೋರಿಕೆಯಿಂದ ಬೆಲೆಯನ್ನು ಕಡಿಮೆ ಮಾಡಿದೆ. ಅನೇಕಾನೇಕ ಚಿತ್ರಪಟಗಳಿವೆ.

ಕ್ರಯ ೧ ರೂಪಾಯಿ ಮಾತ್ರ. ವಿ. ಪಿ. ಚಾರ್ಜು ೪ ಆಣೆ.

ಹಾರ್ಮೋನಿಯಂ ಸ್ವಯಂ ಬೋಧಿನೀ.

ಕನ್ನಡದಲ್ಲಿ ಇಂತಹ ಪುಸ್ತಕವು ಇದುವರೆಗೆ ಬಂದಾದರೂ ಪ್ರಚುರವಾಗಿಲ್ಲ. ಉತ್ತರ ಕರ್ನಾಟ, ಮಧ್ಯ ಕರ್ನಾಟ, ಮತ್ತು ದಕ್ಷಿಣ ಕರ್ನಾಟ ಈ ಮೂರು ರಾಜ್ಯಗಳಲ್ಲಿರುವ ಕನ್ನಡಿಗರಿಗೂ ಅನುಕೂಲಿಸುವಂತೆ ಪುರಂದರ ದಾಸರ ಕೀರ್ತನೆಗಳೇ ಮುಂತಾದ ಕನ್ನಡ ಕೀರ್ತನೆಗಳನ್ನು ಮಾತ್ರವೇ ಆರಿಸಿ ಎಲ್ಲರೂ ತಿಳಿದುಕೊಳ್ಳುವಂತೆ ಸುಲಭ ಮಾರ್ಗದಲ್ಲಿ ಬರೆದಿದೆ. ಇದರಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಸ್ವರಸ್ಥಾಯಿಗಳೂ ವಿವರವಾಗಿ ಕೊಟ್ಟಿರುವುದರಿಂದ ಯಾವ ವಿಚಾರದಲ್ಲಿಯೂ ಸಂದೇಹಕ್ಕೆ ಆಸ್ಪದವೇ ಇರುವುದಿಲ್ಲ. ಹಾರ್ಮೋನಿಯಮ್ ಬೋಧಕರಿಗೂ ಇದರಿಂದ ಅನೇಕ ವಿಷಯಗಳು ತಿಳಿಯಬರುವವು.

ಬೆಲೆ 0-4-0. ಅಂಚೆ ವೆಚ್ಚ ಬೇರೆ.

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಪುಸ್ತಕ ವ್ಯಾಪಾರಸ್ಥರು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಲಾರ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಕೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಬೆಬ್ಲ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಒಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರ

ಬರ್ಮೀಸ್ ಬ್ಯುಟಿ ಓಯಿಲ್

ಎಂಬ

ಬರ್ಮಾದೇಶದ ಸೌಂದರ್ಯ.

ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳ ತಲೆ, ತಲೆಪಾಶಿ, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿಕೊಡುವವಸ್ತು ಚಲೋದಾಗಿರುವುದು. ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು. ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ. ೩. ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರುಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾಯವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡುಬಂದದೆ. ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ. ಚಾರ್ಜು ಬೇರೆ.

ಒಟ್ಟೊ ಪೆರೆಡ್ಯಾಸ್.

ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟು ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ಬಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೊ ಪೆರೆಡ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಜಿನದಕ್ಕೆ	0—8—0.
ನಡುತರದ್ದಕ್ಕೆ	0-12—0.
ದೊಡ್ಡ ಸ್ಯಾಜಿಗೆ	1-14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೋರಲ್ ಪರ್ಫ್ಯುಮರಿ ಕಂಪೆನಿ,
ಮುಂಬಯಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಹು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	A ಅರಗಜ	ತೊಲೆ 1ಕ್ಕೆ		2-0-0
ಅಂಬರ್ ಬತ್ತಿ	,,	,, 6-0-0	B ಅರಗಜ	,,	,,	1-0-0
ಕಸ್ತೂರಿ ಬತ್ತಿ	,,	,, 3-0-0	ಕಸ್ತೂರಿ ಬಿಲ್ಲೆ	,,	,,	2-0-0
ಜವಾಜಿ ಬತ್ತಿ	,,	,, 2-0-0	ಜವಾಜಿ ಬಿಲ್ಲೆ	,,	,,	1-0-0
ಪುಣಗಿನ ಬತ್ತಿ	,,	,, 1-8-0	ಕೇಸರಿ ಬಿಲ್ಲೆ	,,	,,	0-8-0
ಪನ್ನೀರ್ ಬತ್ತಿ	,,	,, 0-12 0	ತಾಂಬೂಲ ರತ್ನ ಸೀಸೆ 1ಕ್ಕೆ			0-4-0
ಮಸಾಲಾ ಬತ್ತಿ	,,	,, 0-6-0	ದಶಾಂಗ ಡಬ್ಬಿ 1ಕ್ಕೆ			0-4-0

ಮೇನೇಜರ್, "ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

ಅಚ್ಚಾಗುತ್ತಲಿದೆ! ಅಚ್ಚಾಗುತ್ತಲಿದೆ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ಪಂಚಾಂಕೀ ಮರಾಠಿನಾಟಕವು ಈಗ ಅಚ್ಚಿನಲ್ಲಿದ್ದು, ಬರುವ ಆಗೋಸ್ತು ತಿಂಗಳ ಆಖೈರ ಒಳಗೆ ಪ್ರಕಾಶಿತವಾಗುವದು. ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕ ಜನರು ಈ ಸಂದರ್ಭವನ್ನು ಬಿಡಲಾಗದು. ಬೆಲೆ 10 ಆಣೆ. ಟ. ಹಾ. ಬೇರೆ

ಜುಲೈ ಆಖೈರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡು, ಓರ್ಡರುಗಳನ್ನು ರಿಜಿಸ್ಟರ್ ಮಾಡುವ ಗ್ರಾಹಕರಿಗೆ 8 ಆಣೆ. ಟ. ಹಾ. ಬೇರೆ ಹಣವನ್ನು ಮುಂಗಡವಾಗಿ ಪೋಸ್ಟೇಜು ಸ್ಟಾಂಪುಗಳ ದ್ವಾರಾ ಅಥವಾ ಮನಿಆರ್ಡರು ದ್ವಾರಾ ಕಳುಹಿಸಬೇಕು.

ತ್ವರೆಮಾಡಿರಿ!!!

ಕಲ್ಯಾಣಪುರ ಮಂಗೇಶರಾವ್,

ಕಲ್ಯಾಣಪುರ, ದ. ಕನ್ನಡ.

ಕೃಷ್ಣವಿಲಾಸ ಟ್ರೇಡಿಂಗ್ ಕಂಪೆನಿ,

ಗಿರಗಾಂ, ಮುಂಬಯಿ.

ಮಾನ್ಯ ಗೃಹಸ್ಥರೇ,

ತಮ್ಮ ಕಡೆಯ ಹಲವು ಮಂದಿ ಗೃಹಸ್ಥರು ವರ್ತಮಾನ ಪತ್ರಗಳಲ್ಲಿ ಕೊಟ್ಟಿರುವ "ಪ್ರಸಿದ್ಧ ಪತ್ರಿಕೆ"ಗಳು ಹೊಗಳಿ ವಿವರಿಸುವ ಸಾಮಾನುಗಳನ್ನು ಇಲ್ಲಿಗೆ ಬರೆದು ತರಿಸಿಕೊಳ್ಳುತ್ತಿರುವಲ್ಲಿ ಆ ವಸ್ತುಗಳು ಪ್ರಸಿದ್ಧ ಪತ್ರಿಕೆಗಳಲ್ಲಿ ಬರೆದಿರುವಂತೆ ಚನ್ನಾಗಿರುವುದರ ಬದಲಿಗೆ ಬಹಳ ಹಲಕೀ ಸಾಮಾನುಗಳಿದ್ದು ಅವುಗಳಿಗೆ ಕೊಟ್ಟ ಹಣ ದುರ್ವ್ಯಯ ಮಾಡಿದಂತೆ ಆಯಿತಲ್ಲಾ ಎಂದು ವ್ಯಸನಪಡುತ್ತಿರುವದು ನಮ್ಮ ತಿಳುವಳಿಕೆಗೆ ಬಂದದೆ. ನಾವು ಹಲವು ವರ್ಷಗಳಿಂದ ಪರವೂರ ಗೃಹಸ್ಥರಿಗೆ ಇಲ್ಲಿಂದ ಅತ್ಯುತ್ಕೃಷ್ಟವಾದ ವಸ್ತುಗಳನ್ನು ಪೇಟೆಯಿಂದ ಬಹಳ ಚೌಕಸೀಯಿಂದ ಕಡಿಮೆ ಖರೀದಿಗೆ ಕೊಂಡುಕೊಂಡು ರವಾನಿಸುತ್ತಿರುವುದು ಸಮಸ್ತರಿಗೂ ಗೊತ್ತೇ ಇದ್ದ ವಿಷಯವಾಗಿದೆ. ಆದುದರಿಂದ ಎಲ್ಲಾ ಗೃಹಸ್ಥರು ತಮಗೆ ಮುಂಬಯಿಯಿಂದ ಏನೇ ವಸ್ತುಗಳು ಬೇಕಿದ್ದರೂ ನಮಗೆ ಬರೆದಲ್ಲಿ ನಾವು ಅವುಗಳನ್ನು ಪೇಟೆಯಿಂದ ಕಡಿಮೆ ಕಿಮ್ಮತ್ತಿಗೆ ತಕ್ಕೊಂಡು ವಿ. ಪಿ. ಟಪ್ಪಾಲು ಮೂಲಕ ಕಳುಹುವೆವು. ಈ ಸಂಗತಿಯನ್ನು ತಮ್ಮ ಮಿತ್ರಬಾಂಧವರೊಡನೆ ಪ್ರಚಾರಪಡಿಸಬೇಕಾಗಿ ನಾವು ನಮ್ಮ ಎಲ್ಲಾ ಗೃಹಸ್ಥರನ್ನು ಬೇಡುವೆವು.

ವಾಚುಗಳು ನಮ್ಮಲ್ಲಿ ವೆಸ್ಟೆಂಡ್, ಸೇವರ್ ಲೂಬಾ, ಬರ್ನ್ ಮೊದಲಾದ ಕಂಪನಿಯ ವಾಚು ಮತ್ತು ಗಡಿಯಾರಗಳು ಆಯಾಯ ಕಂಪನಿಯಲ್ಲಿ ಮಾರಾಟ ಮಾಡುವದಕ್ಕಿಂತ ಕಡಿಮೆ ಬೆಲೆಗೆ ದೊರೆಯುತ್ತವೆ.

ರೂಪಾಯಿ ಹತ್ತು ಯಾ ಹೆಚ್ಚಿನ ಬೆಲೆಯ ಸಾಮಾನುಗಳಿಗೆ ಬರೆಯುವವರು ರೂಪಾಯಿ ಒಂದನ್ನು ಮುಂಗಡವಾಗಿ ಕಳುಹಿಸಬೇಕು. ಇದನ್ನು ಜುಮಲಾ ಹಣದಿಂದ ಕಳೆಯುವೆವು.

Krishnavilasa Trading Company,
Girgaum, Bombay.

500 ರೂಪಾಯಿಗಳ ಬಹುಮಾನ!!

ಲೋಕ ಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಪಂಜಾಬು ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನ ಕೊಡಲ್ಪಡುವುದು.

ಪ್ರಿಯ ಸಹೋದರರೇ, ನಿಮ್ಮ ರಕ್ತವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯ ಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬು ಸಾಲಾಮಿಸ್ರೀ ಮುರಬ್ಬಾ"ವಿನ ಸೇವನೆಯಿಂದ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ, ತಲೆಯ ನೋವೂ ಇವುಗಳೆಲ್ಲವೂ ಪಂಜಾಬು ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಶೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಕೆಲಸಮಾಡುವುದರಲ್ಲಿ ಉತ್ಸಾಹವೂ, ಧೈರ್ಯವೂ, ಬುದ್ಧಿ ಕುಶಲತೆಯೂ, ಶರೀರ ಕಾಂತಿಯೂ ಉಂಟಾಗುತ್ತದೆ. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ಕಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು. ಶ್ವಾಸಕೆಮ್ಮುಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಒಂದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಹೇರಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾಬ್ ಸಾಲಾಮಿಸ್ರೀಯೋ ಅಥವಾ ಬೇರೆ ತರದಾದ್ದೋ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರೀಯಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು. 15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 0-0. ಟಪ್ಪಾಲ್ ಖರ್ಚು ಅಲಾಯಿದ ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ಈಗ ಸಾಲಾಮಿಸ್ರಿ ಧಾರಣೆಯು ಜಾಸ್ತಿ ಆಗಿರುವದರಿಂದ 1—8—0 ಕ್ರಯವಿರುವುದನ್ನು 2—0—0 ಮಾಡಿರುತ್ತೇವೆ.

1. ಧಾತುಪುಷ್ಟಿ ಚೂರ್ಣ:—ಬೆಲೆಯು ಡಬ್ಬಿ 1ಕ್ಕೆ 0—5—0.
2. ರೋಮನಾಶಕ ಮತ್ತು ವೃಶ್ಚಿಕದಂಷ್ಟ್ರ ತೈಲವು:—ಸೀಸಾಯಿ 1ಕ್ಕೆ 0-2-0.
3. ವಾತ ನಿವಾರಣೆ ತೈಲವು:—ಕ್ರಯ ಸೀಸಾಯಿ 1ಕ್ಕೆ 0—4—0.
4. ಹೊಟ್ಟೆ ನೋವಿಗೆ ಔಷಧ:—ಸೀಸಾಯಿ 1ಕ್ಕೆ 0—4—0.
5. ಕೆಮ್ಮಲು ರೋಗಕ್ಕೆ ಔಷಧ:—ಕ್ರಯ ಸೀಸಾಯಿ 1ಕ್ಕೆ 0—4—0.
6. ವ್ರಣಕ್ಕೆ ಔಷಧ:—ಕ್ರಯ ಡಬ್ಬಿ 1ಕ್ಕೆ 0—4—0.
7. ಆಶ್ಚರ್ಯಕರವಾದ ಭೇದಿ ಮಾತ್ರೆಗಳು:—ಕ್ರಯ 0—4—0.
8. ತಲೆನೋವಿಗೆ ತೈಲವು:—ಕ್ರಯ ಸೀಸಾಯಿ 1ಕ್ಕೆ 0—2—6.
9. ಉಷ್ಣಕಾರಕಕ್ಕೆ ಮಾತ್ರೆಗಳು:—ಉಷ್ಣ ಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, ಗಾಯುಗಳಿದ್ದರೂ ಗುಣವಾಗುವದು. ಕ್ರಯ ಸೀಸಾಯಿ 1ಕ್ಕೆ 1—0—0.
10. ಮೂಲವ್ಯಾಧಿಗೆ ಔಷಧ:—ಮಲದ್ವಾರದಲ್ಲಿ ರಕ್ತ ಸ್ರಾವವೂ, ಮತ್ತು ಮೊಳಕೆಯ ಬಾಧೆಯು ಸಹಾ ಸಂಪೂರ್ಣವಾಗಿ ಗುಣಮಾಡುವದು. ಕ್ರಯ ಸೀಸಾಯಿ 1ಕ್ಕೆ 0—8—0.

ಕಣ್ಣಿಗೆ ಸುರ್ಮಾ:—ಕ್ರಯ ಸೀಸಾಯಿ 1ಕ್ಕೆ 0—4—0.

12. ದಂತ ಚೂರ್ಣವು:—ಕ್ರಯ ಡಬ್ಬಿಗೆ 0—1—3.
13. ಕೂದಲು ಬೆಳೆಯುವ ಎಣ್ಣೆ —ಕ್ರಯ ಸೀಸಾಯಿ 1ಕ್ಕೆ 0—4—0.
14. ಆಶ್ಚರ್ಯಕರವಾದ ದ್ರಾವಕ:—ಇದನ್ನು ಸ್ವಲ್ಪ ಮೂಸಿನೋಡುವುದರಿಂದ 1 ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ. ಕ್ರಯ ಸೀಸಾಯಿ 1ಕ್ಕೆ 0—4—0.
15. ಕಜ್ಜಿ ಮತ್ತು ಹುಳಕಡ್ಡಿ ಔಷಧ:—ಕ್ರಯ ಸೀಸಾಯಿ 1ಕ್ಕೆ 0—4—0.
16. ಆಶ್ಚರ್ಯಕರವಾದ ಪೆನ್‌ಸಲ್:—ಈ ಪೆನ್ಸಲಿನಿಂದ ಕಾಗದದ ಮೇಲೆ ಬರೆಯುವಾಗ ಏನೂ ಕಾಣುವದಿಲ್ಲ. ನಂತರ ನೀರನ್ನು ಬರೆದ ಕಾಗದದ ಮೇಲೆ ಸವರಿದರೆ ಎಲ್ಲಾ ಅಕ್ಷರಗಳು ಚನ್ನಾಗಿ ಕಾಣುವವು. ನೋಡುವವರಿಗೆ ಬಹಳ ಆಶ್ಚರ್ಯಕರವಾಗಿ ಕಾಣುತ್ತೆ. ಕ್ರಯ 0-4-0.
17. ಬಿಳೇ ಕೂದಲನ್ನು ಕರೇ ಕೂದಲನ್ನಾಗಿ ಮಾಡುವ ದ್ರಾವಕ:—ಈ ಕೇಶವನ್ನು ಒಂದಾವರ್ತಿ ಕೂದಲಿಗೆ ಸವರುವದರಿಂದ ಬಹಳ ದಿವಸ[illegible] ಇರುತ್ತೆ. ಕ್ರಯ 1—0—0.

1—0—0 ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ.

ನಮ್ಮ ಏಜಂಟರು:— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ.

ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು

5 ಹಾಜಿಸಾಹೇಬ್ ಮಕಾನ್ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಕರ್ಣಾಟಕ ವನೌಷಧಾಲಯ ಶಿರಸಿ.

ಔಷಧಗಳ ಗುಣದ ಬಗ್ಗೆ ಡಾಕ್ತಾರ ಮುಂತಾದವರ ಕಡೆಯಿಂದ ಸರ್ಟಿಫಿಕೇಟುಗಳು ಶಿಕ್ಕಿರುತ್ತವೆ

೧. ರೋಗನಾಶಕ. ರಕ್ತ, ಧಾತು ಶುದ್ಧಿ ವ ವೃದ್ಧಿಕರ ಲೋಹ ಮಿಶ್ರಿತ ಗುಳಿಗೆ ೪೨ ಟ ೩. ಸಹ ಕ್ರಯ ರೂ ... ೨—೪—೦
೨. ಪ್ರವಾಳ ಕೇಶರ ಅಮರಸತ್ವ ಶಿಲಾಜಿತು ವ ವನಸ್ಪತಿ ಮಿಶ್ರಿತ ಧಾತುಪೌಷ್ಟಿಕ ಶಕ್ತಿವರ್ಧಕ ಗುಳಿಗೆ ೪೨ ಕ್ರಯ ರೂ ೨—೪—೦
೩. ಗರ್ಮಿ ರೋಗನಾಶಕ ಗುಳಿಗೆ. ೭ ದಿವಸದಲ್ಲಿ ಖಚಿತ ಗುಣ ೪೨ ಗುಳಿಗೆ ಡಬ್ಬಿ ೧ಕ್ಕೆ ಕ್ರಯ ರೂ .. ... ೩—೪—೦
೪. ಟಾಕಿಚಟ್ಟಿನಾಶಕ ಮಲಮು. ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೫. ವಾತನಾಶಕ ತೈಲ. ಯಾವದೇ ತರದ ವಾತವಿದ್ದರೂ ಗುಣ ಕುಪ್ಪಿ ೧ಕ್ಕೆ ಕ್ರಯ ರೂ. . ... ೧—೪—೦
೬. ಭೃಂಗಾಮಲಕಾದ್ಯ ತೈಲ. ಶಿರೋರೋಗ ನೇತ್ರರೋಗ ನಿವಾರಣ ಅಕಾಲದಲ್ಲಿ ಆದ ಹಣ್ಣುಕೂದಲು ಕಪ್ಪಾಗುತ್ತವೆ ಕುಪ್ಪಿ ೧ಕ್ಕೆ ಕ್ರಯ ರೂ ... ... ೧—೪—೦
೭. ಜಂಬೀರ ತೈಲ ಮೇಲಿನಂತೆ ಗುಣ ಕುಪ್ಪಿ ೧ಕ್ಕೆ ಕ್ರ. ರೂ ೧—೨—೦
೮. ಮೂಲವ್ಯಾಧಿ ಹರಚೂರ್ಣ ಡಬ್ಬಿ ೧ಕ್ಕೆ ಕ್ರಯ ರೂ. ೧—೪—೦
೯. ಕಫದಮ್ಮುಹರ ಚೂರ್ಣ ಡಬ್ಬಿ ೧ಕ್ಕೆ ಕ್ರಯ ರೂ. ೧—೪—೦
೧೦. ಇಸುಬುರುತ್ತಿ ಮಲಮು ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೧೧. ಅಸಾಧ್ಯಕೆಟ್ಟ ಹುಣ್ಣುಗಳಿಗೆ ಮಲಮು.... ... ೧—೪—೦
೧೨. ಮದನೋದ್ಭವ ಚೂರ್ಣ ಡಬ್ಬಿ ೧ಕ್ಕೆ ರೂ ೧-೧೨—೦
೧೩. ಅಮೃತಪಾಕ (ವೃದ್ಧನಾದರೂ ಸಶಕ್ತನಾಗುತ್ತಾನೆ) ಅತ್ಯಂತ ಪೌಷ್ಟಿಕ ಶಕ್ತಿವರ್ಧಕ ೪೦ ತೊಲೆ ಡಬ್ಬಿ ೧ಕ್ಕೆ .. ೩—೮—೦
೧೪. ಅಮೃತಗುಟಿ ಅಗ್ನಿವೃದ್ಧಿಕರ ಪಿತ್ತಕಫನಾಶಕ ಜ್ವರಗಡ್ಡೆ ಅಸ್ಥಿಗತಜ್ವರ ನಾಶವಾಗಿ ಶಕ್ತಿ ಬರುತ್ತದೆ ದಮ್ಮು ಕೆಮ್ಮು ಗುಣವಾಗುತ್ತದೆ ಗುಳಿಗೆ ೪೨೦ ಕ್ರಯ ರೂ .. ೨—೦—೦

ಈ ಶಿವಾಯ ಇನ್ನೂ ಅನೇಕ ಔಷಧಗಳು ಶಿಕ್ಕುತ್ತವೆ ರೋಗದ ಲಕ್ಷಣ ಪೂರ್ಣವಾಗಿ ತಿಳಿಸಿದರೆ ಯೋಗ್ಯ ಕಿಮ್ಮತಿಗೆ ಉತ್ತಮ ಔಷಧಗಳು ಕಳುಹಿಸಲಾಗುವದು.

ಪತ್ತೆ:—ಆರ್. ಯಸ್. ವಝೆ ಕಸಬೆ, ವೈದ್ಯಭೂಷಣ,
ಪೋಸ್ಟು ಶಿರಸಿ, ಜಿಲ್ಲಾ ಉತ್ತರ ಕಾನಡಾ.

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್ ಎ ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆಸ್ಸನ್, ರೊಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ ಎಸ್. ಎ ಬ್ರಿಂಪ್ಟನ್, ಬ್ರೂಕ್ಸ್, ಲೂಕಸ್, ಪೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

K. K. Shanbhog, *Proprietor*
THE CANARA CYCLE MART,
Udipi, S. Canara.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು.

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

ಧಾತುಪೌಷ್ಟಿಕ ವಜ್ರಾಂಗಪಾಕ.

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು ರಕ್ತದೂಷಿತರೋಗ, ಮೆಂದುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ. ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ. ೪೦ ತೊಲೆಗೆ ಕ್ರಯ ರೂ ೩—೮—೦, ಒಮ್ಮೇಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ ೬—೦—೦. ಟಪ್ಪಾಲು ಖರ್ಚು ಬೇರೆ.

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗ ನಾಶಕ ಗುಳಿಗೆ ೪೨ಕ್ಕೆ ಉತ್ತಮ ಗುಣ ಕ್ರಯ ರೂ ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೨೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೇಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ. ೧ ಟಪ್ಪಾಲು ಖರ್ಚು ಬೇರೆ.

ಇನ್ನು ಅನೇಕ ಔಷಧಗಳು ನಮ್ಮ ಕಂಪೆನಿಯಲ್ಲಿ ಶಿಗುತ್ತವೆ. ಅನುಪಾನ ಪತ್ರಿಕೆ ಒಂಗಿಯ ಸಂಗಡ ಕಳುಹಿಸುವೆವು.

ನಮ್ಮ ವಿಳಾಸ:— ವಿ. ಎಸ್ ಮೋಡಕ,
ಕರ್ಣಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ್ ಶಿರ್ಶಿ, ಜಿಲ್ಲಾ ಕಾನಡಾ

ಯುನಿವರ್ಸಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬಾ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಶೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬದನ್ನು ನೀವು ಅರಿತಿರುವಿರೋ?

ಇನ್ಶೂರೆನ್ಸ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ. ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ

			ಮೊದಲನೇ ವರ್ಷ.	2ನೇ ವರ್ಷ.
ಹೊಸಕೇಸ್ (ಜೀವ)	..	ರೂ.	13,329—0—0	22,549—0—0
,, (ವಿವಾಹ)	...	,,	25,670—0—0	38,933—0—0
ಜುಮ್ಲಾ ಕೇಸುಗಳು	..	,,	38,999—0—0	61,482—0—0
ವಸೂಲಾದ ಪ್ರೀಮಿಯಮ್	..	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	..	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	...	,,	10,000—0—0	50,000—0—0
(ಜನರಲ್) ರಕ್ಷಿತ ಧನ	...	,,	37,220—0—0	23,778—3—2

ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ. ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. ಅದು 1912ನೇ ಲ್ಯಾಪ್ ಎಸ್ಯೂರೆನ್ಸ್ ಅಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿಯನ್ನಿಟ್ಟಿರುವುದು 2. ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು, 3. ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4. ರೂ. 3,00,000ಗಿಂತಲೂ ಹೆಚ್ಚಿಗೆ ಭಾದ್ಯತೆಗಳನ್ನು ಕೊಟ್ಟಿದೆ. 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,900 ರೂಪಾಯಿ ಇದೆ. 7. ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ. 9. ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ.

"ಬಂಗಾಲೀ"—14ನೇ ಜನವರಿ 1914—ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕಡೆ ಇದೆ. ನಾವು ಅದನ್ನು ಓದಿನೋಡಿ ಅದು 61,482 ಪ್ರಾವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು. ಸಮಾರು 3 ಲಕ್ಷ ಭಾದ್ಯತ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟರುಗಳು ಬೇಕಾಗಿವೆ. ಎಲ್ಲಾ ವಿಧದ ಏಜಂಸ್ಸಿ ಶರ್ತಗಳಿಗೆ—

ವಿಳಾಸ:— ಲಕ್ಷ್ಮಣರಾವ್ ಬ್ರದರ್ಸ್,
ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು; ಪೋಸ್ಟು ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಸ್ತ್ರೀಯರ ಭೂಷಣವು!!!

ಸ್ವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.



ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಿಗುಟಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು. ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲಿ, ಬೆಳಗಾಂವ—ತಾವು ನಮಗೆ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು.

ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7 0 ಬೇರೆ.

ಸೂಚನೆ — ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ವಿಕ್ರಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮಹರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವಾಭಾವಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೋ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ

ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತುದೌರ್ಬಲ್ಯವನ್ನೂ ನಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ. ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಾಂತವೂ, ಅಕಾಲಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವ್ಯಸನದಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಆವಶ್ಯಕವಾಗಿರುತ್ತವೆ.

ವಾತಕಾಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಒಣಗಿ ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1 4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ಪಾಠಕ, ರಾ. ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟೀಲ್, ಪನವೇಲ್—"ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ಪುನಃ ರವಾನಿಸಿರಿ."

4 ವಿ. ಆರ್. ಬಾಳೆತ್ತಿ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟಯಮ್, ತ್ರಾವಣಕೋರ್ ರಾಜ್ಯ.—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನಷ್ಟೇ. ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮಾನಾಜೀ ನರಸಿಂಗರಾವ್, ಸಂಸ್ಥಾನ ಪಲುಸ.—ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ಹೆಚ್ಚಾದ ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ. ಊಲನ್ ಮಾರ್ಟ್, ಮಂಗಳೂರು ದ. ಕನ್ನಡಾ.**

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	214,150—0—0
Paid up Capital	189,150—0—0
Deposits	478,430—11—6
Reserve Fund	27,590—12—0

Besides the uncalled capital of Rs. 25,000/ 25%. of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6%. paid during the past years and a bonus of 1%. to 2%. paid in addition during the last three years.

Fixed Deposits of Rs. 50/ and above in multiples of Rs. 5/ received for 3, 6, 12 and 24 months @ 4, 4½, 5 and 5½%. respectively. Terms on application.

Short-notice Deposits requiring one weeks notice of withdrawal after one month received @ 2½%. per annum.

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges.

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,,	225,000—0—0
ಪ್ರತಿಜ್ಞಾತ ಮೂಲ ಧನವು ,,	214,150—0—0
ಆಗತ ಮೂಲ ಧನವು ,,	189,150—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	478,430—11—6
ರಕ್ಷಿತ ಧನವು	27,590—12—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು. ಈ ವಿಷಯ ಇತರ ವಿಶೇಷಮಾಹಿತಿ ಬಗ್ಗೆ ಬೇಂಕಿನ ಸೆಕ್ರೆಟರಿಗಳಿಗೆ ಬರಕೊಳ್ಳಬಹುದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾವೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. July 1914.

P. Gopal Naik.
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ-ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುತ್ಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಗೆಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ನಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ.
ಕರ್ನಾಟಕ ಬುಕ್-ಡಿಪೋ, ಬಳ್ಳಾ

Canarese Novels Etc.
ಕನ್ನಡ ಪುಸ್ತಕಗಳು.

ಮ॥ ರಾ॥ ರಾ॥ ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು

	ರೂ. ಆ.		ರೂ. ಆ.
ವಂಗವಿಜೇತ ಹೊಸ ನಾವಿಲ್	1—4	ಕಮಲಾ ಕಾಂತ ದ್ವಿ. ಮು.	0—2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1—4	ಲೀಲೆ [ಸಮಾಜ ಚಿತ್ರ]	0—4
ನವಾಬನಂದಿನಿ ಡಿಟೊ 2ನೇ ಭಾಗ	1—8	ಮಾಲತಿ [ಅತಿ ಮನೋಹರ] ದ್ವಿ. ಮು.	0—3
ಸೀತಾರಾಮ (ಇತಿಹಾಸ)	1—8	ರಾಧಾರಾಣಿ [ಕಾದಂಬರಿ] ತೃ. ಮು.	0—3
..ಸ್ಯಕ್ಷ ದ್ವಿ. ಮು.	1—4	ಯುಗುಳಾಂಗುರೀಯ ,,	0—3
ದೇವೀ ಚೌಧುರಾಣಿ-ಡಿಟೊ	1—4	ಭ್ರಾಂತಿವಿಲಾಸ ,	0—8
ರಾಜಸಿಂಹ-(ಇತಿಹಾಸ)	1—5	ನೊಂದಸುಡಿ [ಸ್ತ್ರೀನೀತಿ]	0—2
ಕಪಾಲಕುಂಡಲ	0.13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0—2
ಮೃಣ್ಮಯಿ-ಡಿಟೊ 2ನೇ ಭಾಗ	1—1	ವೈಜ್ಞಾನಿಕ ಪ್ರಹಸನ [ನಕಲಿ]	0—4
ಕೃಷ್ಣಕಾಂತನ ಉಯಿಲು	1—0	ಚಿರತ್ನನಾಟಕರತ್ನ ಡಿಟೊ	0—7
ಮನೋರಮ [ಪತ್ತೇದಾರಿ ಕಥೆ]	1—0	ಚಿತ್ರವಿಚಿತ್ರಾವಳಿ [Tit-Bits]	0—8
ಪರಿಮಳ-ಡಿಟೊ-ದ್ವಿ. ಮು	0.10	ನೀರದೆ [ಹೊಸ ಕಾದಂಬರಿ]	0—8
ಸಾಧನೆ. ಡಿಟೊ	0—8	ಭಾರತಮಹಿಳಾ [ಸ್ತ್ರೀನೀತಿ]	0—8
ಕೊಹಿನೂರು [ಇತಿಹಾಸ]	0.12	ಅಮೃತಪುಳಿನ [ನಾವಿಲ್]	0.11
ಅತ್ತಿಗೆ [ಸಂಸಾರ ಚಿತ್ರ] ತೃ. ಮು.	0—3	ಇತ್ಯಾದಿ.	

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ. ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ1ಕ್ಕೆ 3 ಆಣೆ 12ಕ್ಕೆ 1 ಉಚಿತ. ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು.

	ರೂ. ಆ.		ರೂ. ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ. ಮು.	0—8	ಸೌಭಾಗ್ಯಚಾಣಕ್ಯ [ಹೊಸಕಾದಂಬರಿ]	0—6
ಕ. ಕವಿಚರಿತೆ [ಪೂರ್ವಭಾಗ]	3—2	ಅನಂಗಸುಂದರಿ ಡಿಟೊ	0—8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0.10	ತಾರಾ ಸುಂದರಿ ಡಿಟೊ	0—8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0—6	ರಾಧಾಮಾಧವ ಡಿಟೊ	0—8
ಕಲಾನಾಥ ಡಿಟೊ	0—8	ಸ್ತ್ರೀಧರ್ಮನೀತಿ [ಆತ್ಮುಪಯುಕ್ತ]	0—9
ಶೋಧನೆ [ಬಂಗಾಳಿ ನಾವಿಲ್]	0.12	ಪಶುವೈದ್ಯಸಂಗ್ರಹ ಡಿಟೊ ದ್ವಿ. ಮು	0—9
ಯಾಮಿನಿ [ಬಂಗಾಳೀ ನಾವಿಲ್]	0—3	ಧರ್ಮಪದವೆಂಬ ಬುದ್ಧಗೀತೆ	0.12
ಪ್ರಿಯಂವದೆ [ಪತಿವ್ರತಾ ಕಥೆ]	0—8	ಜೈಮಿನಿಭಾರತ [ಸಟೀಕಾತಾತ್ಪರ್ಯ]	4—0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0—8	ಹರಿಕಥಾಮೃತಸಾರ ಡಿಟೊ	1—6
ಸನ್ಯಾಸಿ [ಹೊಸ ಕಾದಂಬರಿ]	0—6	ಚದುರಂಗಬೋಧಿನಿ	0—3
ಮೃತ್ಯು ಪರೀಕ್ಷೆ ಡಿಟೊ	0—2	ಸರ್ವೇಮ್ಯಾನ್ಯುಯಲ್	0—5
ಬೃಂದಾವನ ಡಿಟೊ	0—2	ನ್ಯಾಯದರ್ಪಣ [ಲಾ]	1—0
ಸುಮನೋರಮ ಡಿಟೊ	0—2	ವ್ಯವಹಾರ ದೀಪಿಕೆ [ಲಾ]	3—0
ಮಾಲಿನಿ ಡಿಟೊ	0—2	ಶಾಕುಂತಲ ನಾಟಕ ದ್ವಿ. ಮು.	0—9
ಪ್ರೇಮಪಿಪಾಸ ಡಿಟೊ	0—2	ಶೂರಸೇನಚರಿತ್ರೆ ನಾಟಕ ಡಿಟೊ	1—(
ವಿರಕ್ತಳಾದ ಸೌದಾಮಿನಿ ಡಿಟೊ	0—5	ಚಂಡಕಾಶಿಕ ನಾಟಕ ಡಿಟೊ	0.12
ಚಿತ್ರಕಳಾವತಿ ಡಿಟೊ	0—2	ರಾಮವರ್ಮ ಲೀಲಾವತೀ ನಾಟಕ	0—8
ಚಾತುರ್ಯವತಿ ಡಿಟೊ	0—2	ಪಾಂಚಾಲೀ ಪರಿಣಯ ನಾಟಕ	0.10
ವಸುಮತಿ ಡಿಟೊ	0—2	ಚಂಡೀಮದಮರ್ದನ ನಾಟಕ	0—5
ವಿಲಕ್ಷಣಶಿಕ್ಷಣ ಡಿಟೊ	0—2	ಪ್ರಬೋಧ ಚಂದ್ರೋದಯ ನಾಟಕ	0.10
ಪದ್ಮಿನಿ ಡಿಟೊ	0—2	ಭರ್ತೃಹರಿ ನಿರ್ವೇದ ನಾಟಕ	0—8
ಭಾನುಮತಿ ಡಿಟೊ	0—2	ನಿಯಮವಾ [ನಾಟಕ]	0.12
ಸತೀರೋಹಿಣಿ ಡಿಟೊ	0—2	ಧ್ರುವವಿಜಯ [ನಾಟಕ]	0—4
ಸಂತಾಪಕ ಡಿಟೊ	0—4	ಸೀತಾಪರಿಣಯ [ನಾಟಕ]	0—4
ಚಂದ್ರಮತಿ [ಸ್ತ್ರೀನೀತಿ]	0—6	ಸೀತಾಸುವರ್ಣಮೃಗ [ನಾಟಕ]	0—12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರಂ ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:-

ಎಸ್. ಟಿ. ಎ. ಬೆಂಗಳೂರು ಸಿಟಿ.

ಪ್ರಸಿದ್ಧ ಕನ್ನಡ ಗ್ರಂಥಗಳು

1. ಜಪಾನವರುನ್ನತಿಗೆ ಮೂಲಾಧಾರ:—ನವನಾಗರೀಕ ಜನಾಂಗದವರಂತೆ ಸ್ವಗೌರವವನ್ನಾರ್ಜಿಸಿ ಸುಖಸಂತೋಷಗಳಿಂದ ಬಾಳಬೇಕಾದರೆ ಪ್ರತಿಯೊಬ್ಬನೂ ಅತ್ಯಾಶ್ಚರ್ಯಕರವಾದೀ ಕಥೆಯನ್ನು ಓದಬೇಕು. ಇಂತಹ ಸುಬೋಧಕವಾದ ಕಣ್ಣಿನಗಾನಂದವನ್ನುಂಟುಮಾಡುವ ಗ್ರಂಥವನ್ನು ಹಿಂದೆ ನೀವು ಯಾವಾಗಲೂ ನೋಡಿಲ್ಲ. ಮೈಸೂರು ಮಹಾರಾಜರಿಗೆ "ಡೆಡಿಕೇಟ್" ಮಾಡಲ್ಪಟ್ಟಿದೆ. ಮೈಸೂರು ಮಹಾರಾಜರ ಯುವರಾಜರ ಮತ್ತು ಕಥೆಯ ಸಂದರ್ಭಗಳಿಗನುಕೂಲಿಸುವಂತೆ, ನೇತ್ರಾನಂದಕರವಾದ 12 "ಹಾಫ್‌ಟೋನ್" ಚಿತ್ರಗಳೂ ಇದರಲ್ಲಿವೆ. ಮೈಸೂರು ಚೀಫ್ ಇಂಜಿನಿಯರ್ ಕರ್ಪೂರ ಶ್ರೀನಿವಾಸರಾಯರು ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು. ಸ್ವಧರ್ಮ ರಕ್ಷಣೆಗಾಗಿ ರಾಜನೂ, ರಾಣಿಯೂ, ಸೇನಾಪತಿಯೂ, ಸತ್ಯಜಿಯೂ, ಕುರುಬನೂ, ಪುರೋಹಿತನೇ ಮುಂತಾದವರು ಪ್ರಾಣಾರ್ಪಣವಂ ಮಾಡುವ ಸಂದರ್ಭಗಳನ್ನೂ ಮತ್ತು ಅವರುಗಳೆಲ್ಲರೂ ದೇವರುಗಳಿಂದ ಬದುಕಿಸಲ್ಪಟ್ಟ ಬಳಿಕ ರಾಣಿಗೂ, ಕನ್ಯೆಗೂ ವಿವಾಹ ಪಟ್ಟಾಭಿಷೇಕಗಳು ನಡೆವುದನ್ನೂ, ಅವುಗಳ ಕಣ್ಣೆದುರಿಗೆ ನಡೆದಂತೆ ತೋರಿಸುವ ಫೋಟೋಗ್ರಾಫಿನ ಮೇಲೆ ನಿರ್ಮಿಸಿದ ಸಹಜ ಚಿತ್ರಗಳನು ನೋಡಿ ಯಾರ ಹೃದಯವು ತಾನೇ ಕರಗದೇ ಇರವುದು? ಕ್ರಯ ವಿ. ಪಿ. ಪ್ಯಾಕಿಂಗ ಸಹಿತ —ಚಿನ್ನದ ಗಿಲ್ಟಿನದು ರೂ. 2—4—0; ಅವ್ವಲ್ ಗ್ಲೇಜ್ ರೂ. 1—8—0 ದುಯ್ಯಂ 1—4—0.

2 ಧರ್ಮಪದ:—17 ಕೋಟಿ ಮುಸಲ್ಮಾನರಿಗೆ "ಖೊರಾನೂ" 32 ಕೋಟಿ ಹಿಂದೂಗಳಿಗೆ "ಭಗವದ್ಗೀತೆಯೂ" 40 ಕೋಟಿ ಕ್ರಿಸ್ತರಿಗೆ "ಬೈಬಲೂ" ಹೇಗೆ ಪೂಜ್ಯವಾದ ಗ್ರಂಥಗಳೋ, 55 ಕೋಟಿ ಬೌದ್ಧರಿಗೆ ಈ ಗ್ರಂಥವು ಹಾಗಿದೆ. ಸಾವಿರಾರ ಗ್ರಂಥಗಳಿಂದ ಪಡವ ಜ್ಞಾನವನ್ನು ಇದೊಂದರಿಂದ ಪಡೆಯಬಹುದು. ಮೈಸೂರು ಮಹಾರಾಜರ; ಗ್ರಂಥಕರ್ತರ, ಲೋಕದಲ್ಲಿ ಅತ್ಯಂತ ದೊಡ್ಡದಾದ ಜಪಾನ್‌ನಲ್ಲಿರುವ ಬುದ್ಧವಿಗ್ರಹದ ನೇತ್ರಾನಂದಕರವಾದ ಛಾಯಚಿತ್ರಗಳಿವೆ. ಕ್ರಯ ವಿ. ಪಿ. ಸಹಿತ ರೂ. 1.

2. ಬೌದ್ಧಾವತಾರ:—ಲೋಕೋದ್ಧಾರಕನಾದ "ಶ್ರೀ ಗೌತಮಬುದ್ಧ ಭಗವಂತನ" ಅತ್ಯಾಶ್ಚರ್ಯಕರವಾದ ಜನ್ಮ ಚರಿತ್ರೆ. ಕ್ರಯ ವಿ. ಪಿ. ಸಹಿತ 0-6-0.

ವಿಳಾಸ:— 1. ಬಿದರೆ ಅಶ್ವತ್ಥನಾರಾಯಣ ಶಾಸ್ತ್ರಿಗಳು,
ಚಾಮರಾಜ ಪೇಟೆ, ಮೈಸೂರು.
2. ಶ್ರೀವಾಣೀವಿಲಾಸ ಬುಕ್ ಡಿಪೋ, ಮೈಸೂರು.
3. ದಿ. ಜನರಲ್ ಏಜನ್ಸಿ, ಮೈಸೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವಸ್ತ್ರಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ಬೆಂಕಟಗಿರಿ, ಪುಲ್ಲಂಪೇಟೆ, ಬನಾರೀಸ್, ಪೂನಾ ಮತ್ತು ಪ್ರಾಂತ್ಯಗಳಲ್ಲಿ ತಯಾರಿಸಲ್ಪಟ್ಟಿರುವ ರೇಷ್ಮೆ ಜರಿ ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ಡ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ಸ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗ
ವಿಳಾಸ:—ನರಸಿಂಹ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು

ಡಬ್ಬಿ 1ಕ್ಕೆ 0—6—0
3 ಡಬ್ಬಿಗಳಿಗೆ 1—0—0

ದಂತಮಂಜನ.

ಹಲ್ಲುಗಳಿಂದ ಒರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ

ಪೆಕೆಟ್ 1ಕ್ಕೆ 0—2—0.
ಡಜನ್ 1ಕ್ಕೆ 1—2—0

ಮೋಹಿನೀ ತೈಲ.

ಕೂದಲುಗಳು ಕಪ್ಪಾಗಿಯೂ, ನಯವಾಗಿಯೂ, ಉದ್ದವಾಗಿಯೂ ಬೆಳೆಯುವವು. ಇದರಲ್ಲಿ ಸ್ಪಿರಿಟು ವಗೈರೆ ಇಲ್ಲಾ.

ಬಾಟ್ಲಿ 1ಕ್ಕೆ 0—12—0.
ಮೂರು ಬಾಟ್ಲಿಗಳಿಗೆ 2—2—0.

ಅಮೃತಾಂಜನ

ತಲೆನೋವು, ವಾತ,
ಸಂಧಿ ವಾತ, ಶಿರೋಭಾರ,
ಅರ್ಧಾಂಗವಾಯು,
ಶೀತ, ಕೆಮ್ಮು

ಎದೆ ನೋವು,
ಸೊಂಟದ ನೋವು, ಕಫ,
ಹಲ್ಲು ನೋವು, ಘಾಯ,
ಉರಿ, ಮೊದಲಾದ

ಎಲ್ಲಾ ತರದ ನೋವುಗಳ ಮೇಲೆ ದಿವ್ಯೌಷಧಿ

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಟ್ಟವು

ಹಿಂದುಸ್ಥಾನದ ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವುದು.

ಬಾಟ್ಲಿ ಒಂದರ ಕಿಮ್ಮತ್ತು 0-8-0 ಡಜನ್ ಒಂದಕ್ಕೆ 5-4-0 ವಿ. ಪಿ. ಪ್ರತ್ಯೇಕ

ಮಂಗಳೂರಲ್ಲಿ

ಮರ್ಕೆಂಟಾಯಿಲ್ ಮಿಶನ್ ಬ್ರೆಂಚ್
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.
ಪರ್ಲ್ಸ ಎಂಡ್ ಸನ್ಸ್.

ಉಡುಪಿ ಮತ್ತು ಕುಂದಾಪುರದಲ್ಲಿ.

ಕೊಚ್ಚಿಕಾರ್ ಬ್ರದರ್ಸ್.
ಕುಮಟೆ ಆರ್. ಪಿ. ಪೈ ಎಂಡ್ ಕಂಪನ್ನಿ.

ಅಮೃತಾಂಜನದ ಸೆಂಪಲ್ ಕರಡಿಗೆ ಒಂದಾಣೆಗೆ ಊಲನ್ ಮಾರ್ಕೆಟನಲ್ಲಿ ದೊರೆಯುವದು

ಅಮೃತಾಂಜನ ಡಿಪೋ,

109 ಫ್ರೇಯರ್ ರೋಡ,

ಮುಂಬಯಿ.

Printed & Published by V. S. Kamath at the Mangalore Trading Association's Sharada Press, Mangalore.

Registered No. 498 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ VIII | ಮಂಗಳೂರು ತಾ. 8ನೇ ಅಗೋಸ್ತು ಶುಕ್ರವಾರ 1914. | ಸಂಚಿಕೆ --

ಆಬಾಲವೃದ್ಧರು ಓದುವುದಕ್ಕೆ ತಕ್ಕವಾಗಿಯೂ ಬಹು ಮನೋಹರಗಳಾಗಿಯೂ ಇರುವ ಕನ್ನಡ ಗ್ರಂಥಗಳು.

(ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ| ರಾ| ಬಿ. ರಾಮರಾವ್ ಎಂ. ಎ. ಎಲ್. ಎಲ್. ಬಿ. ಯವರಿಂದ ಕನ್ನಡಿಸಲ್ಪಟ್ಟವು)

೧. ಸತ್ಯರಾಜಾ ಪೂರ್ವದೇಶ ಯಾತ್ರೆಗಳು—ಭಾಗ ೧— ಸ್ತ್ರೀಮಲೆಯಾಳವೆಂಬ ಸಂಪೂರ್ಣ ಕಥೆ. ರಾವ್ ಬಹದ್ದೂರ್ ವಿರೇಶ ಲಿಂಗಂಪಂತಲೆಂಬ ಆಂಧ್ರ ಲೇಖಕ ಶಿರೋಮಣಿಗಳಿಂದ ತೆಲುಗಿನಲ್ಲಿ ಬರೆಯಲ್ಪಟ್ಟ ಬಹು ರಸಭರಿತವಾದ ಕಲ್ಪನಾಕಥೆ ಶುದ್ಧವೂ ಲಲಿತವೂ ಆದ ಕನ್ನಡದಲ್ಲಿ ಪರಿವರ್ತಿತವಾಗಿದೆ. ಮೈಸೂರು ಗವರ್ನಮೆಂಟಿನವರಿಂದಲೂ ಕರ್ಣಾಟ ಮಹಾಜನರುಗಳಿಂದಲೂ ವಿಶೇಷವಾದ ಪ್ರೋತ್ಸಾಹವನ್ನು ಹೊಂದಿದೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ. **ಬೆಲೆ ೮ ಆಣೆ.**

೨. ಕೃಷ್ಣಾಕುಮಾರಿ—ಈ ಅದ್ಭುತವಾದ ವಚನ ನಾಟಕವು ಮೂಲ ಬಂಗಾಳಾ ಭಾಷೆಯಲ್ಲಿ ಕವಿಶ್ರೇಷ್ಠ ಮಧುಸೂದನ ದತ್ತರಿಂದ ಬರೆಯಲ್ಪಟ್ಟು ನೂತನವಾಗಿ ಕನ್ನಡಿಸಲ್ಪಟ್ಟದೆ ಆರ್ಯ ಕುಲಾಂಗನೆಯರಿಗೆ ಆದರ್ಶ ಸ್ವರೂಪಳಾದ ಈ ರಜಪೂತ ಕುಮಾರಿಯ ಜಾಜ್ವಲ್ಯವಾದ ಸ್ವದೇಶ ಭಕ್ತಿಯು ವಾಚಕರನ್ನು ಕ್ಷಣಮಾತ್ರದಲ್ಲಿ ತಲ್ಲೀನರನ್ನಾಗಿ ಮಾಡುತ್ತಿದೆ. ಇಂಥ ಉತ್ಕೃಷ್ಟವಾದ ನಾಟಕವು ಕನ್ನಡದಲ್ಲಿ ಬೇರೊಂದು ಇರುವುದು ಸಂದೇಹವು. ಉತ್ತಮವಾದ "ಗ್ಲೇಜ್" ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಅಚ್ಚಾಗಿದೆ. **ಬೆಲೆ ೧೦ ಆಣೆ.**

೩. ಸದಾಹಾರ ವಿವೇಚನೆ—ಚಿರಸ್ಮರಣೀಯರೂ ಪರಮ ಪೂಜ್ಯರೂ ಆದ ಬ್ರಹ್ಮೀಭೂತ ಶ್ರೀಮದ್ವಿವೇಕಾನಂದ ಸ್ವಾಮಿಯವರ "ಪೂರ್ವ ಮತ್ತು ಪಶ್ಚಿಮ"ವೆಂಬ ದಿವ್ಯವಾದ ಲೇಖನದಿಂದ ಆಹಾರ ವಿಷಯಕವಾದ ಭಾಗಗಳನ್ನು ಮಾತ್ರ ಸಂಗ್ರಹಿಸಿ ಕನ್ನಡಿಸಲಾದ ಈ ಚಿಕ್ಕ ಪುಸ್ತಕದೊಳಗೆ ಅಂತರ್ಗತವಾದ ದಿವ್ಯಾಭಿಪ್ರಾಯಗಳನ್ನು ಆರ್ಯಧರ್ಮಾಭಿಮಾನಿಗಳಾದ ಸಮಸ್ತರೂ ಅಗತ್ಯವಾಗಿ ತಿಳಿದುಕೊಳ್ಳಬೇಕೆಂದು ಸೂಚಿಸುವೆವು. **ಬೆಲೆ ೨ ಆಣೆ**

ನಿತ್ಯ ಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯೋಗವಾದ ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನಂ 0—3—0, ದೇವಪೂಜಾ ಪದ್ಧತಿ 0—3—0, ಋಗ್ವೇದಿ ಬ್ರಹ್ಮಯಜ್ಞವೈಶ್ವದೇವ 0—3—0, ವಾಯುಸ್ತುತಿ 0—2—0, ದ್ವಾದಶಸ್ತೋತ್ರ 0—2—0, ವಿಷ್ಣುಸಹಸ್ರನಾಮಸ್ತೋತ್ರ 0—2—0, ಪ್ರಾತರಾಹ್ನಿಕ ಪದ್ಧತಿ 0—3—0, ಶ್ರೀಸೂಕ್ತ ಪುರುಷಸೂಕ್ತ 0—1—0, ಗೋಪಿಕಾಗೀತೆ 0—1—0, ಪುರಂದರ ದಾಸರ ಕೀರ್ತನೆಗಳು 0—6—0, ಉದಯ ರಾಗ 0—4—0, ಲಕ್ಷ್ಮೀ ಶೋಭಾನೆ ಹಾಡು 0—2—0, ಹರಿಭಕ್ತಿಸಾರ 0—1—0, ಸ್ವಪ್ನ ಪದ ಮಧ್ವನಾಮ 0—1—6, ತುಲಸೀ ಸಂಕೀರ್ತನೆಗಳು 0—2—0, ಕುಮುದಾ 0—8—0, ಈಗ 0—6—0, ಮಹಾರಾಣಿ ಗೃಹಶೀಲೆ 0—3—0, ಪೇಶ್ವೆನಾರಾಯಣರಾವ್ 0—3—0, ಬಾಲಿಕಾನೀತಿಮಾಲಿಕೆ 0—2—0, ರಾಜಭಕ್ತಿಸ್ಸಾರ 0—2—0. ಹನುಮದ್ರಾಮಾಯಣ ರೂ. 2—1—0, ಚಂದ್ರಾವಲೀ ವಿಲಾಸ 8 ಆಣೆ, ಆಚಾರ ದರ್ಪಣ 4 ಆಣೆ. ಚಂದ್ರಹಾಸಾಭ್ಯುದಯ 4 ಆಣೆ.

ಈಗಲೇ ಬಂದಿವೆ!

ಗೃಹಕೃತ್ಯದ ಉಪಯೋಗಕ್ಕೂ ವೈದ್ಯರಿಗೂ ಅಗತ್ಯವಾಗಿರುವಂಥಾ ಮತ್ತು ಜ್ವರವನ್ನು ನಿಧಾನಿಸಿಕೊಳ್ಳಲು ಅತ್ಯುಪಯುಕ್ತಗಳಾದಂಥಾ

ಥರ್ಮೋಮಿಟರ್‌ಗಳು.

ಅರ್ಧ ಮಿನಿಟಿನಲ್ಲಿ ಜ್ವರ ಎಷ್ಟುಂಟೆಂದು ತಿಳಿಸುವವುಗಳಿಗೆ ಒಂದಕ್ಕೆ ಕ್ರಯ ರೂಪಾಯಿ 2-12-0. ಯೋಗ್ಯವಾದವುಗಳೆಂತ ಪರೀಕ್ಷಿಸಲ್ಪಟ್ಟು ಸರ್ಟಿಫಿಕೇಟು ಉಳ್ಳವುಗಳಿಗೆ ರೂ. 3, ಗಡಿಯಾರಿನ ಸರಪಣಿಯಂತೆ ಸರಪಣಿ ಇದ್ದು ಅಂಗಿ ಕಿಸೆಯಲ್ಲಿ ಭದ್ರವಾಗಿಡಲಿಕ್ಕೆ ಆಗುವಂಥವುಗಳಿಗೆ ರೂ. 3—4—0.

ಸೆಂಟರೊಡ್ಸ್‌ಗಳು: ಕ್ರಯ 3 ಆಣೆ.

ಪರಿಮಳ ದ್ರವಗಳಂತೆ ದ್ರವಿಸಿ ಹೋಗುವಂಥವುಗಳಲ್ಲ ಮತ್ತು ಸೆಂಟೆಡ್ ಕಾರ್ಡುಗಳಂತೆ ಬೇಗನೆ ಚಿಂದಿಯಾಗಿ ಹೋಗುವಂಥವುಗಳಲ್ಲ. ಪರಿಮಳ ಸಾರವನ್ನು ಘನಪದಾರ್ಥರೂಪದಲ್ಲಿ ಸಂಗ್ರಹಿಸಿರುವ ಕಡ್ಡಿಗಳು.

ಡೂಪಾನ್!

ಮಳೆಗಾಲದಲ್ಲಿ ಸ್ಯಾಕಲುಗಳಿಗೆ ನೀರು ತಾಗಿ ಮಣ್ಣು ಹಿಡಿಯುವುದರಿಂದ ಸ್ಯಾಕಲುಗಳನ್ನು ಉಪಯೋಗಿಸುವುದು ಸಾಧ್ಯವಲ್ಲ. ಆದರೆ ಸ್ಯಾಕಲುಗಳಿಗೆ 'ಡೂಪಾನ'ನ್ನು ಹಚ್ಚಿಬಿಟ್ಟರೆ ಇವುಗಳನ್ನು ನೀರಿನಲ್ಲಿ ಅದ್ದಿದರೂ ಮಣ್ಣು ಹಿಡಿಯದು. ಇವರ ಬಾಟ್ಲಿ ಒಂದಕ್ಕೆ ರೂ. 1—12—0.

ಶಿಖೆ ಕಾಲದ ರಜೆಯು ತೀರಿ ಶಾಲೆಗಳು ತೆರಿಯೋಣಾಗಿವೆ.

ವಿದ್ಯಾರ್ಥಿಗಳೆಲ್ಲವರಿಗೆ ಅನುಕೂಲವಾದ ದರದ ಫೌಂಟೆನ್ ಪೇನುಗಳು ಈಗಲೇ ಬಂದಿವೆ. ಕ್ರಯ-1ಕ್ಕೆ ರೂ. 1—14—0ರಿಂದ ರೂ. 7—14—0ರವರೆಗಿರುವುದು. ನೆಪ್ಚುನ್, ಬ್ಲೆಕ್‌ಬರ್ಡ್, ಅಲೆಕ್ಸಾಂದ್ರಾ, ವೊಟರ್‌ಮೇನ್, ಸ್ವಾನ್, ಸೀತಾ, ಕಾಂತಾ, ಆನಂದ ಈ ಎಲ್ಲಾ ಜಾತಿ ಪೇನುಗಳಿರುವವು.

ವಿಳಾಸ:—

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ರಥಬೀದಿ ಮಂಗಳೂರು.

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು.

ಡಬ್ಬಿ 1ಕ್ಕೆ 0—6—0.
3 ಡಬ್ಬಿಗಳಿಗೆ 1—0—0.

ದಂತಮಂಜನ.

ಹಲ್ಲುಗಳಿಂದ ಒರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ.

ಪೆಕೆಟ್ 1ಕ್ಕೆ 0—2—0.
ಡಜನ್ 1ಕ್ಕೆ 1—2—0.

ಮೋಹಿನೀ ತೈಲ.

ಕೂದಲುಗಳು ಕಪ್ಪಾಗಿಯೂ, ನಯವಾಗಿಯೂ, ಉದ್ದವಾಗಿಯೂ ಬೆಳೆಯುವವು. ಇದರಲ್ಲಿ ಸ್ಪಿರಿಟು ವಗೈರೆ ಇಲ್ಲಾ.

ಬಾಟ್ಲಿ 1ಕ್ಕೆ 0—12—0.
ಮೂರು ಬಾಟ್ಲಿಗಳಿಗೆ 2—2—0.

ಅಮೃತಾಂಜನ

ತಲೆನೋವು, ವಾತ,
ಸಂಧಿ ವಾತ, ಶಿರೋಭಾರ,
ಅರ್ಧಾಂಗವಾಯು,
ಶೀತ, ಕೆಮ್ಮು

ಎದೆ ನೋವು,
ಸೊಂಟದ ನೋವು, ಕಫ,
ಹಲ್ಲು ನೋವು, ಘಾಯ,
ಉರಿ, ಮೊದಲಾದ

ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧಿ

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಟ್ಟವು.

ಹಿಂದುಸ್ಥಾನದ ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವುದು.

ಬಾಟ್ಲಿ ಒಂದರ ಕಿಮ್ಮತ್ತು 0-8-0 ಡಜನ್ ಒಂದಕ್ಕೆ 5-4-0 ವಿ. ಪಿ. ಪ್ರತ್ಯೇಕ

ಮಂಗಳೂರಲ್ಲಿ

ಮರ್ಕೆಂಟಾಯಿಲ್ ಮಿಶನ್ ಬ್ರೆಂಚ್.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.

ಪರ್ಲ್ಸ ಎಂಡ್ ಸನ್ಸ್.

ಉಡುಪಿ ಮತ್ತು ಕುಂದಾಪುರದಲ್ಲಿ.

ಕೊಚ್ಚಿಕಾರ್ ಬ್ರದರ್ಸ್.

ಕುಮಟೆ ಆರ್. ಪಿ. ಪೈ ಎಂಡ್ ಕಂಪನಿ.

ಅಮೃತಾಂಜನದ ಸೆಂಪಲ್ ಕರಡಿಗೆ ಒಂದಾಣೆಗೆ ಊಲನ್ ಮಾರ್ಕೆಟನಲ್ಲಿ ದೊರೆಯುವದು.

ಅಮೃತಾಂಜನ ಡಿಪೋ,

109 ಫ್ರೇಯರ್ ರೋಡ,

ಮುಂಬಯಿ.

Printed & Published by V. S. Kamath at the Mangalore Trading Association's Sharada Press, Mangalore.